# ॥ SRI HAYAVADANA RANGAVITTALA GOPINATHAYA NAMAHA ॥

*Blessed by Lord and with His divine grace, we are pleased to publish this Magnanimous Work of Sri Acharya Madhwa. It is a humble effort to make available this Great work to Sadhakas who are interested in the noble path of propagating Acharya Madhwa's Philosophy.*

*With great humility, we solicit the readers to bring to our notice any inadvertant typographical mistakes that could have crept in, despite great care. We would be pleased to incorporate such corrections in the next versions. Users can contact us, for editable version, to facilitate any value additions.*

*Contact: H K SRINIVASA RAO, N0 26, 2ND FLOOR, 15TH CROSS, NEAR VIDHYAPEETA CIRCLE, ASHOKANAGAR, BANGALORE 560050. PH NO. 26615951, 9901971176, 8095551774, Email :*
**srkarc@gmail.com**

## ಕೃತಜ್ಞತೆಗಳು



ಜನ್ಮಾಂತರದ ಸುಕೃತದ ಫಲವಾಗಿ ಮಧ್ವಮತದಲ್ಲಿ ಜನಿಸಲು, ಪ್ರೇಮಮೂರ್ತಿಗಳಾಗಿ ನನ್ನ ಅಸ್ತಿತ್ವಕ್ಕೆ ಕಾರಣರಾದ, ಈ ಸಾಧನೆಗೆ ಅವಕಾಶಮಾಡಿದ, ನನ್ನ ಪೂಜ್ಯ ಮಾತಾ ಪಿತೃಗಳಾದ, ದಿವಂಗತರಾದ, ಲಲಿತಮ್ಮ ಮತ್ತು ಕೃಷ್ಣರಾವ್ ಹೆಚ್ ಆರ್ ಅವರ ಸವಿ ನೆನಪಿನಲ್ಲಿ ''ಈ ಸರ್ವಮೂಲ ಯಜ್ಞ''

"ಮಾತೃದೇವೋ ಭವ - ಪಿತೃದೇವೋಭವ - ಆಚಾರ್ಯದೇವೋಭವ"

**Editing history**

| Sr | Date | Nature | Remarks |
|---|---|---|---|
| 1 | 21/03/2021 | Completion | H K Srinivasa Rao |
| 2 | 20/03/2022 | Proof Correction | MS Venugopal and H K Srinivasa rao |

ಕೃತಜ್ಞತೆಗಳು ........ 1

ಶ್ರೀಮದ್ವಾದಿರಾಜಋಜುತ್ವ ಸಿದ್ಧಾಂತ ........ 3

ಗ್ರಂಥ ಕರ್ತರು ಹೆಚ್ ಸುಬ್ಬರಾವ್, ಎಂ ಎ ........ 3

ವಿಷಯಾನುಕ್ರಮಣಿಕೆ : ........ 3

ಶ್ರೀ ಶ್ರೀಗಳವರ ಶುಭಾಶಂಸನ ........ 3

ಶ್ರೀಮದ್ವಾದಿರಾಜ ಋಜುತ್ವ ಸಿದ್ಧಾಂತ ಭಾಗ-1 ........ 3

ಭಾಗ 2-ಮುನ್ಸೂಚನೆ ........ 3

शुभाशंसनम् ........ 4

ಶ್ರೀಮದ್ವಾದಿರಾಜಋಜುತ್ವ ಸಿದ್ಧಾಂತ ........ 19

ಅಧ್ಯಾಯ 1 ........ 19

ಅಧ್ಯಾಯ 2 ........ 28

ಅಧ್ಯಾಯ 4 ........ 50

ಅಧ್ಯಾಯ 5 ........ 57

ಅಧ್ಯಾಯ 6 ........ 63

ಅಧ್ಯಾಯ 7 ........ 72

ಅಧ್ಯಾಯ 8 ........ 90

ಅಧ್ಯಾಯ 9 ........ 94

ಅಧ್ಯಾಯ 10 ........ 96

ಅಧ್ಯಾಯ 11 ........ 103

ಅಧ್ಯಾಯ 12 ........ 113

ಭಾಗ 2 ಕಂಟಕೋದ್ಧಾರ ........ 117

ಅಧ್ಯಾಯ 13 ........ 118

ಅಧ್ಯಾಯ 14 ........ 134

॥ ಶ್ರೀವಾದಿರಾಜಗುರ್ವಂತರ್ಗತಲಕ್ಷ್ಮೀಹಯಗ್ರೀವಾರ್ಪಣಮಸ್ತು ॥

॥ ಶ್ರೀಕೃಷ್ಣಾರ್ಪಣಮಸ್ತು ॥

ಶ್ರೀಮದ್ಭಾವಿಸಮೀರ ವಾದಿರಾಜ ಗುರುಸಾರ್ವಭೌಮೋ ವಿಜಯತೇ

# ಶ್ರೀಮದ್ವಾದಿರಾಜಋಜುತ್ವ ಸಿದ್ಧಾಂತ

## ಗ್ರಂಥ ಕರ್ತರು ಹೆಚ್ ಸುಬ್ಬರಾವ್, ಎಂ ಎ

ಪ್ರಕಾಶಕರು: ಶ್ರೀ ಶೀರೂರು ಮಠ, ಉಡುಪಿ

## ವಿಷಯಾನುಕ್ರಮಣಿಕೆ :

ಶ್ರೀ ಶ್ರೀಗಳವರ ಶುಭಾಶಂಸನ

ಅವತಾರಿಕೆ - ಒಪ್ಪೋಲೆ

ಶ್ರೀಮದ್ವಾದಿರಾಜ ಋಜುತ್ವ ಸಿದ್ಧಾಂತ ಭಾಗ-1

1 ಅಧ್ಯಾಯ 1 - ಋಜುತ್ವ ವಿಚಾರದ ಅವಶ್ಯಕತೆ

2 ಅಧ್ಯಾಯ 2 - ಪ್ರಮಾಣ ವಿಚಾರ

3 ಅಧ್ಯಾಯ 3 - ಆಗಮ ಸ್ವರೂಪ ನಿರೂಪಣ

4 ಅಧ್ಯಾಯ 4 - ಅನೃಜುತ್ವವಾದದ ಪರೀಕ್ಷೆ

5 ಅಧ್ಯಾಯ 5 - ಪ್ರಥಮ ಪ್ರಮಾಣ - ಐತಿಹ್ಯ

6 ಅಧ್ಯಾಯ 6 - ದ್ವಿತೀಯ ಪ್ರಮಾಣ - ಕರ್ಣಾಟಕ ಹಾಡುಗಳು

7 ಅಧ್ಯಾಯ 7 - ತೃತೀಯ ಪ್ರಮಾಣಾ ಸ್ವಾಪ್ನವೃನ್ದಾವನಾಖ್ಯಾನ

8 ಅಧ್ಯಾಯ 8 - ಚತುರ್ಥ ಪ್ರಮಾಣ - ವಾದಿರಾಜ ಗುರುವರ ಚರಿತಾಮೃತ

9 ಅಧ್ಯಾಯ 9 - ಪಂಚಮ ಪ್ರಮಾಣ ವಾ.ಗು.ಚರಿತಾಮೃತಸ್ಥ ಮೂಲ ಪ್ರಮಾಣಗಳು

10 ಅಧ್ಯಾಯ 10 - ಷಷ್ಠ ಪ್ರಮಾಣ - ಶ್ರೀ ವಿಶ್ವಪ್ರಿಯತೀರ್ಥರ ಜೀವನ ಚರಿತೆಗಳು

11 ಅಧ್ಯಾಯ 11 - ಸಪ್ತಮ ಪ್ರಮಾಣ ಉತ್ತರ ಕಾಲೀನ ಚರಿತ್ರೆ

12 ಅಧ್ಯಾಯ 12 - ಅಷ್ಟಮ ಪ್ರಮಾಣ - ಅನುಮಾನಗಳು

ಭಾಗ 2-ಮುನ್ಸೂಚನೆ

13 ಅಧ್ಯಾಯ 13 – ಪೂರ್ವಪಕ್ಷ ಗ್ರಂಥದ ಸಾಮಾನ್ಯ ದೋಷಗಳು

14 ಅಧ್ಯಾಯ 14 – ಪ್ರತಿ ಪ್ರಕರಣಸ್ತ ದೂಷಣೆಗಳು

## शुभाशंसनम्

व्यासाय भवनाशाय श्रीशाय गुणराशये ।
हृद्याय शुद्धविद्याय मध्वाय च नमो नमः ॥

तपोविद्याविरक्त्यादिसद्गुणौघाकरानहम् ।
वादिराजगुरून्वन्दे हयग्रीवदयाश्रयान् ॥

इदमिह सुधीभिर्विभावनीयम् - गुरुभक्तिजन्या हरिभक्तिरेव विमुक्तिहेतुरिति । गुरवस्तु नराणां स्वोत्तमनरादारभ्य ब्रह्मान्ताः सन्ति । तेषु यथायथं स्वनियतगुरूपदेशं प्राप्तवानेव मुमुक्षुर्ज्ञान मर्हेत् । विशिष्य ब्रह्मवाय्वोर्वायुपदार्हाणां चोपदेशः सर्वमुक्ति योग्याधिकारिसाधारण एव । 'न तादृशी प्रीतिरीड्यस्य विष्णोः गुणोत्कर्षज्ञातरि यादृशी स्यात्' इत्यादि प्रमाणैर्भगवान् यथा स्वस्वरूपभूतगुणोत्कर्षज्ञानवति प्रसीदति, तथा तदेकान्ताः परम भागवता अपि स्वस्वरूपभूतगुणज्ञेष्वेव प्रसीदेयुः । न पुनरितर देवता इव विविधोपयाचितकेन वा, तीव्रया तपस्यया वा, संराधनेन वा प्रसीदेयुः । अतो भाविसमीराणां श्रीवादिराज गुरूणां प्रसादस्तत्स्वरूपभूतगुणोत्कर्षज्ञानेनैवाभ्यर्थनीयः । यथा चन्दनमिन्धनसाम्येन जानन् तैरितरेन्धनैः सह केवलं ज्वलनोज्ज्वलनादावुपयुञ्जानस्तस्मादाप्यं वरिष्ठं फलं न विन्देत् । रत्नं वा कुप्यकमणिसादृश्येन पश्यन् तदुपेयमिष्टार्थं न लभेत । तथा गुरुवरान् अतन्महिमज्ञोऽयथायथमपकृष्टतया वा विदन् न कामित मश्नुवीत ॥

प्रकृते च, भाविसमीर श्रीवादिराजगुरवो ब्रह्मवायुवत् ममुक्षुभिरुत्कृष्टोपदेष्टृदृष्ट्या पर्युपास्याः । तत्र तावत् मध्वावतारो वायुदेवो वेदोदितं वेदव्यासाभिमतं यत्तत्वशास्त्रं प्रचारयाञ्चकार तदेव शास्त्रं "अतो मायावादमतान्नाम्नैवातिजुगुप्सितात् । भीतोऽहमभजं तत्ववादिनामेव पद्धतिम्। तत्पूर्वं सर्वराद्धान्त सिद्धार्थानां निषेद्धरि। परे च तत्ववादेऽस्मिन् गरीयसि भरो मम । तत्परत्वान्निषेद्धृत्वादन्ते सिद्धेः प्रभुस्तुतेः"। इत्यदिस्वोक्त्या समादृत्य सालङ्कारया गिरा, सुललितया च युक्त्या पुनरस्य प्रचारकस्तत्समानो वादिराजावतारो लातव्याख्य: ऋजुदेव: इति तत्वम् ॥

सत्यप्येवं केषाञ्चिदविदुषां, विदुषामप्येकेषां वादिराजीये ऋजुत्वविषये विप्रतिपत्तिर्जागर्ति । सा प्रथमानां (अविदुषां) प्रख्यात वृन्दावनाख्यानावलोकनसामर्थ्याभावात्, उत्तरेषु केषाञ्चित्तदेवलोकनसामर्थ्ये सत्यप्युदासीनतया तदनभिमर्शनात्, इतरेषां केवलं परोत्कर्षासहिष्णुत्वादिदोषाकरत्वाद्भवेत् । तत्रान्तिमानामनादिदुर्योग्यतारूपहठोद्वलिता सा विप्रतिपत्तिर्दुर्निरासा । मध्यमानां वृन्दावनाख्यानप्रामाण्यप्रसाधनद्वारा तत्रास्था जननेन सुशको विप्रतिपत्तिनिरास इति बहुधा तत्प्रामाण्यसाधन युक्तयोऽभियुकक्तौस्तत्र तत्र प्रकाशिताः । तासां विशदीकरणं, कासाञ्चिदपूर्वाणां प्रकाशनं, विक्षिप्तानां चैकत्र संयोजनं हेच्. सुब्बरायमहाशयाः स्वकृते संस्कृतमये स्वरूपतोऽर्थतश्च महत्तरे ग्रन्थे व्यधुः । विद्वन्मात्रगोचरेण तेन पर्याप्तं परितोषमनासाध्य तत्प्रकाशनात्पूर्वं पुरो निर्दिष्टानां प्रथमानामविदुषां, सद्विदुषां च

विप्रतिपत्तिनिरासकं कर्णाटकभाषामयं सर्वसाधारणमेतद्ग्रन्थान्तरं सम्प्रति विरच्य प्रकाशयन्तः प्रवयसोऽपि सुकृते परार्थेच सोत्सारा इत्याश्चर्यम् ॥

अत्र आगमैकशरणे विषयेऽप्रामाण्यशङ्का बाधकाभावे नोदियादेव । अन्यथा पुत्रः स्वमातरं न संमन्येत । तत्र तस्या बाधितागममात्रं हि प्रमाणम् । आस्तिकाश्चेश्वरं वेदैकसमधिगम्यं कथं संमन्येरन्, इत्यादि साधु विचारितम् । किञ्च बहूनामपरोक्षज्ञानिन इति देवांशा इति वा प्रथितानां जगन्नाथदास-विजयदास प्रभृतीनां हरिदासानां श्रीमद्वादिराजीयऋजुत्वे संमतस्तदुक्ति ग्रहणेनात्र समसूचि । यदि ते महात्मानो वादिराजगुरुवरेण्यानां भाविभारतीपतित्वविषये समशयिष्यन्त तदा ते तत्र माध्यस्थ्यमवालम्बिष्यन्त । निकृष्टेषु भाविभारतीपतित्वावगतिः स्वाधोगति हेतुर्महापराध इति किमभिज्ञास्ते नाज्ञासिषुः । परन्तु ते तत्र स्वीयां दृडां संप्रतिपत्ति, तत्र श्रद्धामेव स्वोद्धतिहेतु मन्यमानाः कण्ठतः सोत्कण्ठं तथा प्रागायन् । यैर्गीतं देवतायतनादिषु सुकृतिनोऽद्यापि पुण्यावहमिति धिया सतालमुच्चैर्गायन्ति॥

किञ्च पिपासुः प्राक् पीतलवणोदकोऽमृते इव, विवेकी विषयभोगाज्जुगुप्सामापन्नो वैराग्य इव जन्मप्राप्तादद्वैतमताद्धेयता धिया विरम्य माध्वे राद्धान्ते दृढनिष्णाता इमे सुब्बरायमहोदया अभिमानि जना इव न निजानुरक्ताः किन्तु सारग्राहिण इव गुणानुरक्ता इति हेतोरेषां श्रीवादिराजगुरुवर्येषु दृढा भक्तिर्नाभिमानोत्था, परन्तु तन्महामहिमावगतिमूलैव । अत एषां सूक्तिः सर्वाऽप्यनौपचारिकी॥

एषामस्याः कृतेः श्रीशीरूरुमठाधीशास्तन्मठाधिकृताश्च मुद्राप्य प्रकाशनेन श्रीगुरुराजानां विशिष्टसेवां विधाय तेषां परमानुग्रहपात्रभूता भवन्तीति मन्यामहे ।।

श्रीमद्वादिराजगुरुवर्यैः विशिष्य परिगृह्यानुगृहीतानां कोटीश्वरवासिनां कुले प्रसूताः तुमकूरु पद्मनाभरायसुपुत्रप्रमुखाः विनयसदाचारगुरुभक्त्यदिशालिनः एषां सुव्वरायमहाशयानां विनेयाः सन्तः सन्ततं प्रोत्साहयन्तोऽमून् नवनवान्वेषणे जरसा संभावितालस्येऽप्युत्सुकापयन्ति॥

एषामेष सार्थकः परार्थः प्रयासः श्रीवादिराजगुरुवरेण्यैरेव समीहितफलदानेन परिहरणीय इति मन्वाना वयं स्वकर्तव्यतया तेषामेतादृशलोकोपकारिकार्यकरणे इतोऽप्यतिशयितोत्साश्चिरायुरारोग्यं श्रेयोभिवृद्धिश्चास्मदाराध्यभूवराहयग्रीववेदव्यासपरमानुग्रहेण बोभूयतामित्याशासानास्तमेव भाविभारतीशान्तर्गतं भगन्तमनारतं संप्रार्थयामहे ॥

उडुपि, १७-१२-१९७१ श्री विश्वोत्तमतीर्थ श्रीपादङ्गळवरु श्री सौदे वादिराज मठ

॥श्री॥ ಅವತಾರಿಕೆ

1. ಈ ಶ್ರೀಮದ್ವಾದಿರಾಜ ಋಜುತ್ವ ಸಿದ್ಧಾಂತ ಗ್ರಂಥವು "ವಾದಿರಾಜ ಋಜುತ್ವ ವಿಚಾರ" ಎಂಬ ಗ್ರಂಥಕ್ಕೆ ಉತ್ತರ ರೂಪವಾಗಿದೆ. ಇದನ್ನು ಪ್ರಿಂಟು ಮಾಡಿಸಬೇಕೆಂಬ ಉದ್ದೇಶ್ಯದಿಂದ ಬರೆಯಲಿಲ್ಲ. ಏಕೆಂದರೆ ಪ್ರಿಂಟು ಮಾಡಿಸಿ ಪ್ರಚಾರ ಮಾಡುವುದರಿಂದ ಅತ್ಯಲ್ಪ ಪ್ರಯೋಜನ. ಸಮಾಜದ ವಾತಾವರಣ ನಿರ್ಮಲವಾಗುವುದೆಂಬ ನಿಶ್ಚಯವೂ ಇಲ್ಲ. ಜನತೆಯು ತಮ್ಮ ತಮ್ಮ ಪಕ್ಷದಲ್ಲಿ ಬಿಗಿಯಾಗಿ ನಿಂತು ಆ ತಮ್ಮ ಪಕ್ಷವು ತಪ್ಪೆಂದು ಪ್ರತಿಪಕ್ಷವು ಎಷ್ಟು

ಗುಡುಗಿನ ಧ್ವನಿಯಿಂದ ಗರ್ಜಿಸಿದರೂ, ಸ್ವಲ್ಪವೂ ಚಲಿಸದೆ ತುಂಬ ಅಪ್ರಾಮಾಣಿಕವೂ ದುರ್ಬಲವೂ ಆಗಿದ್ದರೂ ಸ್ವಪಕ್ಷದಲ್ಲಿ ಆಗ್ರಹಾಧಿಕ್ಯವನ್ನೇ ತಾಳುತ್ತಿರುವುದು, ಚರಿತ್ರೆಯಲ್ಲಿ ಅನೇಕಶಃ ಕಂಡಿದೆ. ನನ್ನ ಅನುಭವದಿಂದಲೇ ನಡೆದ ಒಂದು ಘಟನೆಯು ಇದಕ್ಕೆ ಸಾಕ್ಷಿ. ಒಮ್ಮೆ ನಾನು ಶ್ರೀ ಮಂತ್ರಾಲಯ ಕ್ಷೇತ್ರಕ್ಕೆ ಬಳ್ಳಾರಿಯಲ್ಲಿ ಆಗ ಸಂಚಾರದಲ್ಲಿದ್ದ ಶ್ರೀರಾಘವೇಂದ್ರ ಸ್ವಾಮಿಗಳ ಮಠಾಧೀಶರಾದ ಶ್ರೀ ಸುಯಮೀಂದ್ರತೀರ್ಥ ಶ್ರೀಪಾದಂಗಳವರ ಅಪ್ಪಣೆಯಿಂದ ಹೋಗಿದ್ದೆ. ನಾನು ತುಂಬಾ ಶ್ರಾಂತನಾಗಿದ್ದೆ. ಸೇವೆಮಾಡಲೂ ಕೂಡ ಅಶಕ್ತನಾಗಿ ಸ್ನಾನಮಾಡಿ ಶ್ರೀ ರಾಯರ ವೃನ್ದಾವನಕ್ಕೂ ಎದುರಿಗಿರುವ ಮಾರುತಿಗೂ ಮಧ್ಯೆ ಒಂದು ಕಂಬವನ್ನು ಒರಗಿಕೊಂಡು ಪ್ರದಕ್ಷಿಣೆ ಮಾಡುತ್ತಿರುವ ಭಕ್ತ ಜನರನ್ನು ನೋಡುತ್ತಾ ಕುಳಿತಿದ್ದೆ. ಯಾರೋ ಗುರುತಿನವರು ಮಾತಾಡಿಸಿದರು. ಅವರಿಗೆ ಉತ್ತರ ಕೊಡುತ್ತಿರುವಾಗ ದ್ವೈತ ತತ್ವದ ಮಹತ್ವವನ್ನು ವರ್ಣಿಸಿ ಎರಡು ಮೂರು ವಾಕ್ಯಗಳನ್ನು ಹೇಳಿದೆನು. ಅದನ್ನು ಶ್ರವಣಮಾಡಿದ ಅಲ್ಲೇ ಸಮೀಪದಲ್ಲಿದ್ದ ಅದ್ವೈತ ತತ್ವಜ್ಞರಾಗಿದ್ದ ಒಬ್ಬರು ಎಕ್ಸೈಜ್ ಇಲಾಖೆ ಇನ್ಸ್ಪೆಕ್ಟರು "ಅದು ಹೇಗೆ? ಪ್ರಮಾಣಗಳು ಬೇಕಾದಂತೆ ಆದ್ವೈತವನ್ನು ಬೋಧಿಸುತ್ತಿವೆಯಲ್ಲಾ?" ಎಂದು ಪ್ರಶ್ನಿಸಿ ನನ್ನ ಮುಂದೆ ಕುಳಿತು ಮೂರು ನಾಲ್ಕು ಗಂಟೆ ಕಾಲ ಮಂಜುಳ ಧ್ವನಿಯಲ್ಲಿ ನಿಧಾನವಾಗಿ ಚರ್ಚಿಸಿದರು. ನಾನೂ ಮೃದು ಧ್ವನಿಯಲ್ಲಿ "ಅಸಂಭಾವಿತವಾದ ಅರ್ಥಗಳನ್ನು ಪ್ರಮಾಣಗಳಿಗೆ ಹೇಳಬಾರದು. ನಿರ್ಗುಣವಸ್ತುವು ಇರಲಿಕ್ಕೇ ಶಕ್ಯವಿಲ್ಲ, ನಿರ್ವಿಶೇಷ ವಸ್ತುವು ಅಧಿಷ್ಠಾನವಾಗಲು ಸಾಧ್ಯವಿಲ್ಲ. ಸಾದೃಶ್ಯವಿಲ್ಲದೆ ಆರೋಪ ಸಾಧ್ಯವಿಲ್ಲ. ಜಗದಾರೋಪಕ್ಕೆ ಕಾರಣ ಸಾಮಗ್ರಿ ಇಲ್ಲ. ಮಿಥ್ಯ ಜಗತ್ತು ನಿರ್ಗುಣ ಬ್ರಹ್ಮನ ಅಧಿಷ್ಠಾನದಲ್ಲಿ ಕಾಣಿಸಿಕೊಳ್ಳುವುದು ಅಸಂಭಾವಿತವು. ಸದಾಭಾವ ಪ್ರತಿಯೋಗಿ ಪದಾರ್ಥವು ನಿಯತ ಅರ್ಥಕ್ರಿಯಾಕಾರಿಯಾಗಿ ಸುಖ ದುಃಖಗಳನ್ನುಂಟುಮಾಡುವುದೂ ಅಸಂಭಾವಿತವು. ಯಾವುದು ಸುಳ್ಳಾದರೂ ಸುಖ ದುಃಖಗಳನ್ನು ಸುಳ್ಳೆಂದು ಹೇಳಲು ಯುಕ್ತವಲ್ಲ. ವೇದಗಳು ಸುಳ್ಳಾಗಿ ತತ್ವಜ್ಞಾನಕರಣಗಳೆಂದು ಒಪ್ಪುವುದು ಬಹು ಅನುಭವ ವಿರುದ್ಧ. ಜೀವಬ್ರಹ್ಮರ ಐಕ್ಯವಂತೂ ಘಟತದ್ಭಟಾಭಾವಗಳ ಏಕತ್ವದಂತೆ ಅತ್ಯಂತ ಅಸಂಭಾವಿತ ಪ್ರಕ್ರಿಯೆ" ಎಂದು ಮುಂತಾಗಿ ನಿಧಾನವಾಗಿ ಆಂಗ್ಲ ವಿಮರ್ಶಕರ ವಚನಾದಿಗಳನ್ನು ಹೇಳಿ ವಿಶ್ವಾಸ ಸೌಹಾರ್ದಗಳಿಂದ ಸ್ವಲ್ಪವೂ ಕೋಪ ತಾಳದೆ ಉಪಪಪಾದಿಸಿದೆನು. ಆ ಬ್ರಾಹ್ಮಣರು ಹೇಳಿದ ಶಿವಕವಚದ ಮಂತ್ರಗಳು, ಉಪನಿಷದ್ವಾಕ್ಯಗಳು ಮುಂತಾದವುಗಳಿಗೆಲ್ಲಾ ಯೋಗ್ಯ ಅರ್ಥವನ್ನು ವಿವರಿಸಿದೆನು. ಕೊನೆಗೆ ಅವರು ಹೇಳಿದರು: **"I cannot answer your arguments. But I am not convinced."** (ನಾನು ನಿಮ್ಮ ವಾದಗಳಿಗೆ ಉತ್ತರ ಕೊಡಲಾರೆ. ಆದರೆ ನನಗೆ ಒಪ್ಪಿಗೆ ಆಗಲಿಲ್ಲ) ನಾನು ಈ ಉತ್ತರವನ್ನು ಕೇಳಿ ಸುಮ್ಮನಾದೆನು. ಆಗ ಮಾರುತೀದೇವರ ಮುಂದಿನ ಜಗುಲಿಯ ಮೇಲೆ ಕುಳಿತಿದ್ದ ಒಬ್ಬ ಬ್ರಾಹ್ಮಣರು ಇಳಿದು ಬಂದು ನನಗೆ ನಮಸ್ಕರಿಸಿ ಹೇಳಿದರು : "ಈಗ ನನ್ನ ಸಂಶಯ ಹೋಯಿತು, ನನ್ನ ಹೆಸರು ಕೃಷ್ಣಪ್ಪ, ನಾನೂ ನನ್ನ ಸೌಭಾಗ್ಯವತಿ ಸಹ ಇಲ್ಲಿ ಸೇವೆ ಮಾಡಿದೆವು. "ನೀವು ಸ್ವಾಮಿಗಳ ಬಳಿ ಹೋಗಿ ಮುದ್ರಾಧಾರಣೆ ಮಾಡಿಸಿಕೊಂಡು ದ್ವೈತ ತತ್ವವನ್ನು ಕಲಿಯಿರಿ' ಎಂದು ನನಗೆ ಸ್ವಪ್ನವಾಯಿತು. ಇದು ಹೇಗೆ ಯುಕ್ತ ಎಂದು ಅನೇಕ ಸಂಶಯಗಳಿಂದ ಸಂಕಟಪಡುತ್ತಿದ್ದೆ. ಈಗ ನಿಮ್ಮ ಮಾತುಗಳಿಂದ ನಮ್ಮ ಸಂಶಯವೆಲ್ಲಾ

ಹೋಯಿತು. ನಾವು ಪಂಚಮುಖಿ ಪ್ರಾಣ ದೇವರ ಸೇವೆ ಮಾಡಿಕೊಂಡು ಬೆಂಗಳೂರಿಗೆ ಹೋಗುತ್ತೇವೆ. ಮುದ್ರಾಧಾರಣೆ ಮಾಡಿಸಿಕೊಳ್ಳುತ್ತೇವೆ," ಎಂದು ಹೇಳಿ ಹೊರಟು ಹೋದರು. ಇದರಿಂದ ನಮ್ಮ ಪುಸ್ತಕ ಪ್ರಚಾರಾದಿಗಳ ವೈಫಲ್ಯ, ದೊಡ್ಡವರ ಉಪದೇಶ ಇವುಗಳೆರಡಕ್ಕೂ ಇರುವ ವ್ಯತ್ಯಾಸವೂ ಗೊತ್ತಾಗುತ್ತೆ. ಅಂತೂ ಧಾರ್ಮಿಕ ವಿಷಯಗಳಲ್ಲಿ, ಜನರು ತಾವು ಹಿಡಿದ ಪಕ್ಷವನ್ನು ವಿರುದ್ಧ ಪಕ್ಷದವರು ಪ್ರಿಂಟುಮಾಡಿಸಿದ ಗ್ರಂಥಗಳನ್ನೋದಿ ತ್ಯಜಿಸುತ್ತಾರೆಂದು ನಂಬುವುದು ಲೋಕದ ಅನುಭವವುಳ್ಳವರಿಗೆ ಸಾಧ್ಯವಿಲ್ಲ.

ಈ ವಿಷಯದಲ್ಲಿ ಹೆಚ್ಚು ನಿದರ್ಶನಗಳೇಕೆ? ಐನೂರು ವರ್ಷಗಳಿಂದ ಜನರು ಶಾಂಕರ ಭಾಷ್ಯವನ್ನೇ ಅವಲಂಬಿಸಿ ಬ್ರಹ್ಮನು ನಿರ್ಗುಣನು, ಆತನೇ, ಅನಾದಿ ಅವಿದ್ಯೆಯಿಂದ ಸಗುಣ, ಕಂಡದ್ದೆಲ್ಲಾ ಆರೋಪಿತ, ಇತ್ಯಾದಿ ರೀತಿಯಾಗಿ ತಿಳಿದಿದ್ದನ್ನು ಸರ್ವಜ್ಞಾಚಾರ್ಯರು ಅಚಾಲ್ಯ ಯುಕ್ತಿ ಮತ್ತು ಆಗಮ ಪ್ರಮಾಣಗಳಿ೦ದ ಖಂಡಿಸಿ ತಮ್ಮ ಸರ್ವಜ್ಞತ್ವವನ್ನೂ, ಸ್ವರೂಪವನ್ನೂ ಪ್ರಕಟಿಸಿ ಅದರ ನಿದರ್ಶನವಾಗಿ ಅನೇಕ ಸ್ಪಷ್ಟ ಗ್ರಂಥಗಳನ್ನು ರಚಿಸಿದ್ದರೂ, ಅದ್ವೈತಿ ಜನರು ಬ್ರಹ್ಮನು ಜ್ಞಾನಸ್ವರೂಪನು, ಆದರೂ ಜ್ಞಾನವೆಂಬ ಧರ್ಮಹೀನನು, ಸುಖಸ್ವರೂಪನು ಸುಖವೆಂಬ ಧರ್ಮಹೀನನು, ಪ್ರಕಾಶಸ್ವರೂಪನು ಕಾಂತಿ ಗುಣಹೀನನು, ಸದ್ರೂಪನು ಸತ್ಯತ್ವವೆಂಬ ಧರ್ಮವಿಲ್ಲದವನು, ನಿಷ್ಕ್ರಿಯನಾದರೂ ಜಗತ್ಸರ್ಜಕನು, ಅವಾಚ್ಯನು, ಅಜ್ಞೇಯನು ಎಂದು ಮುಂತಾಗಿ ಹೇಳುತ್ತಿರುವರೇ ಹೊರತು ಅನುಭವಾನುಸಾರ ಮಾತಾಡುವ ರೀತಿಯನ್ನೂ, ಧರ್ಮ ಧರ್ಮಿಭಾವ ನಿರೂಪಣೆಯ ಪ್ರಕಾರವನ್ನೂ, ಮಾಧ್ವಗ್ರಂಥಗಳನ್ನು ನೋಡಿ ಕಲಿತಿಲ್ಲ, ತಿದ್ದಿ ಕೊಂಡಿಲ್ಲ. ಅವಿದ್ಯೆಯು ಸತ್ಯವೂ ಅಲ್ಲ ಅಸತ್ಯವೂ ಅಲ್ಲ ಎಂದು ವಿರುದ್ಧ ಸಮುಚ್ಚಯವಾದಿಗಳು ಮೌನದಿಂದ ಇರುತ್ತಾ ಕೀರ್ತಿಗಳಿಸಿದ್ದಾರೆ. ಅವಾಚ್ಯನು ಮತ್ತು ಅವೇದ್ಯನು ಬ್ರಹ್ಮನು ಎಂದೊಪ್ಪಿ ಅವನ ವಿಷಯಕವಾಗಿಯೇ ಚರ್ಚಿಸುತ್ತಿರುತ್ತಾರೆ. ಲಕ್ಷ್ಯತ್ವವು ಗುಣವೆಂದು ತಿಳಿದಿದ್ದರೂ ತಿಳಿಯದವರಂತೆ ಮತ್ತೆ ಮತ್ತೆ ವಾದಿಸುತ್ತಾರೆ. ಒಬ್ಬೊಬ್ಬರನ್ನು 'ಬಿಟ್ಟರೆ ಸಾಮೂಹಿಕವಾಗಿ ಯಾರೂ ಆ ಅಸಂಭಾವಿತ ಪ್ರಕ್ರಿಯೆಗಳನ್ನು ಕೂಡ ತ್ಯಜಿಸಿಲ್ಲ. ಮಾಧ್ವಗ್ರಂಥಗಳ ಮುದ್ರಿತ ಪ್ರಚಾರದಿಂದ ನಿಷ್ಫಲಾಧ್ಯಯನವು ಮಾಧ್ವರಲ್ಲಿ ಹೆಚ್ಚಾಯಿತು. ಗುರುಸೇವೆ ಕಮ್ಮಿಯಾಯಿತು. ಇತರರಿಗೆ ಅವರವರ ಮತರಕ್ಷಿಸಿಕೊಳ್ಳಬೇಕೆಂಬ ಅಭಿನಿವೇಶ ಹೆಚ್ಚಾಯಿತು. ಮಾಧ್ವಗ್ರಂಥಗಳಿಂದ ಆದ್ವೈತಿಗಳು ಸರಿಯಾದ ಉಪಪಾದನೆಯ ರೀತಿಯನ್ನು ಕಲಿಯಲೇ ಇಲ್ಲ. ಆದ್ದರಿಂದ ಪುಸ್ತಕಗಳನ್ನು ಬರೆಯುವುದು ಪುಣ್ಯಕರವಾದರೂ ಮುದ್ರಣ ಮಾಡಿಸಿ ಲೋಕೋಪಕಾರ ಮಾಡಿಬಿಡುತ್ತೇನೆಂದು ಪ್ರಚಾರ ಮಾಡುವವನು ಲೋಕಾನುಭವ ರಹಿತನೆಂದೇ ಕಂಡುಬರುತ್ತಿದೆ. ಧಾರ್ಮಿಕ ಮತ್ತು ಆಧ್ಯಾತ್ಮಿಕ ವಿಷಯಗಳಲ್ಲಿ (Religious and spiritual matters) ಪ್ರಾಯಶಃ ಜನರು ಹಿಡಿದ ಪಕ್ಷವನ್ನು ತ್ಯಜಿಸುವುದಿಲ್ಲ. ಯೋಚಿಸಿ ತಪ್ಪನ್ನು ಬಿಡುವವರು ತುಂಬ ಅಪರೂಪ. ಅಲ್ಲಿಯವರೆಗೇತಕ್ಕೆ ಹೋಗಬೇಕು? ಈ ಪೂರ್ವಪಕ್ಷದ "ವಾದಿರಾಜ ಋಜುತ್ವ ವಿಚಾರ" ಗ್ರಂಥ ಬರೆದವರು, ನಾನು ಖಂಡನೆಯನ್ನು ಬರೆಯಲು ಆರಂಭಿಸಿದ ಸ್ವಲ್ಪ ದಿನಗಳಲ್ಲಿ, ನಮ್ಮಲ್ಲಿ ಎರಡು ವರ್ಷ ಓದಿದ್ದ ವಿ.ಗುಂಡೂರಾಯರೇ ವಿ.ಪ್ರಭಂಜನ ಎಂಬ ಬೇರೆ ಹೆಸರಿಟ್ಟುಕೊಂಡವರೆಂದು ಗೊತ್ತಾಗಿ ಹೋಯಿತು. ಆದ್ದರಿಂದ ಖಂಡನೆಯ ಗ್ರಂಥವನ್ನು ಶಿಷ್ಯರಾದ

ಅವರೂ ಮೆಚ್ಚುವಂತೆ ನಿಷ್ಪಕ್ಷಪಾತ ರೀತಿಯಲ್ಲಿ ಬರೆಯಬೇಕೆಂದು ಸಂಕಲ್ಪಿಸಿ ಕನ್ನಡದಲ್ಲಿ 'ಋಜುತ್ವ ವಿಚಾರ ವಿಮರ್ಶೆ' ಎಂಬ ಪುಸ್ತಕ ಬರೆದು ಅವರಿಗೆ ಆಹ್ವಾನ ಕಳುಹಿಸಿದೆ. ಒಳ್ಳೆಯ ಮನಸ್ಸಿನಿಂದಲೇ ಬಂದರು. ವಾದವಾಯಿತು. ಪೂರ್ತಿ ಕೇಳಿ ಒಪ್ಪಿ ಆನಂದದಿಂದ ಪೂಜೆಮಾಡಿ ಸಂಶಯ ಬಂದರೆ ಬರೆಯುತ್ತೇನೆಂದೂ, ನನ್ನ ನಿಲುವು ಸರಿಯೆಂದೂ ಹೇಳಿ ಹೋದರು. ಸ್ವಲ್ಪ ದಿನದಲ್ಲಿ 13 ವಿಷಯಗಳಿಗೆ ಉತ್ತರ ಬರೆಯಬೇಕೆಂಬ ಪಟ್ಟಿ ಕಳಿಸಿದರು. ಅವರು ಮಿತ್ರರಲ್ಲಿ ಮಾತಾಡಿದ್ದರ ರೀತಿಯಲ್ಲಿ ಉತ್ತರ ಕನ್ನಡದಲ್ಲಿ ಬಂತೆಂದು ಸೂಚಿಸಿದ ಹಾಗಾಯಿತು. ನಾನು ಆಗ ಶ್ರೀ ವೇದವೇದ್ಯರನ್ನು ಪ್ರಾರ್ಥಿಸಿ ಈ ಋಜುತ್ವ ಸಿದ್ಧಾಂತ ಗ್ರಂಥ ಭಾಗವನ್ನು ಸಂಸ್ಕೃತದಲ್ಲಿ ಬರೆದ, ಅವರ ಹದಿಮೂರು ಪ್ರಶ್ನೆಗಳಿಗೂ ಉತ್ತರ ಸಿದ್ಧ ಮಾಡಿಕೊಂಡು ಪುನಃ ಕರೆಯಲು ಮತ್ತೆ ಸಂಸ್ಕೃತ ಗ್ರಂಥ 9-10 ಅಧ್ಯಾಯ ಶ್ರವಣಮಾಡಿ ತೃಪ್ತರಾಗಿ ಹೋದರು. ಅವರ ಹದಿಮೂರು ಪ್ರಶ್ನೆಗಳಿಗೂ ಉತ್ತರ ಬಂತೆಂದೂ ಹೇಳಿಹೋದರು. ಅವರೇ ಒಂದು ಸಂವಾದ ಬರೆದು ನಮ್ಮ ಗ್ರಂಥವನ್ನು ಅವರೇ ಪ್ರಕಟಿಸಲೆಂದು ನಮ್ಮ ಆಶಯವಿತ್ತು. ಕೆಲವು ಕಾಲದ ಮೇಲೆ ತಮಗೆ ಗುರುರಾಜರ ಋಜುತ್ವದಲ್ಲಿ ನಿಃಸಂಶಯ ನಿಶ್ಚಯವಾಯಿತೆಂದೂ ಬರೆದರು. ಇಷ್ಟಾದರೂ ಪುನಃ ಸಂಗ ಪ್ರಭಾವದಿಂದ "ಪಕ್ಷ" ಬುದ್ಧಿಯನ್ನು ಮತ್ತೆ ಹೊಂದಿ “ನನ್ನ ಸಂವಾದದಿಂದೇನು? ತಮ್ಮ ಗ್ರಂಥವನ್ನು ತಾವೇ ಪ್ರಕಟಿಸುವುದನ್ನು ನಿರೀಕ್ಷಿಸುತ್ತೇನೆ” ಎಂದು ನನಗೆ ಗೌರವದಿಂದ ಬರೆದು ಉಪರತರಾಗಿ ಹೋದರು. ಇತರ ಮಿತ್ರರಿಗೆ ಬರೆಯುವಾಗ “ಸುಳ್ಳಿನ ಕಂತೆ ಗೋವಿಂದರಾಯರ ಪುಸ್ತಕ, ಅದರಿಂದ ಉದಾಹರಿಸಿದ್ದಾರೆ. ನನಗೆ ಸಂಶಯ ಹೋಗಲೇ ಇಲ್ಲ” ಎಂದು ಬರೆದಿದ್ದರಂತೆ. ಇಂಥದು ಮತ ಪಕ್ಷಪಾತದ ರೀತಿ, ಪ್ರಮಾಣಗಳನ್ನು ತುಂಬಿ ಗ್ರಂಥಗಳನ್ನು ಪ್ರಚಾರಮಾಡಿ ಪ್ರತಿಪಕ್ಷಿಗಳನ್ನು ಸಮಾಧಾನ ಪಡಿಸಿ ನಮ್ಮ ವಶಪಡಿಸಿಕೊಳ್ಳಬಹುದೆಂದು ತಿಳಿದರೆ ಹಾಗೆ ತಿಳಿಯುವ ಗ್ರಂಥಕರ್ತರು ಹಾಸ್ಯಾಸ್ಪದರಾಗಿ ತಮ್ಮ ಸೋಲನ್ನು ಒಪ್ಪಿಕೊಳ್ಳಬೇಕಾಗುತ್ತೆ.

2. ಹಾಗೆ ತಿಳಿದಿದ್ದರೂ ಪ್ರಕೃತ ಗ್ರಂಥವನ್ನು ಬರೆದ ಕಾರಣವೇನು, ಪ್ರಕಟನೆ ಮಾಡಿದ ನಿಮಿತ್ತವೇನೆಂದರೆ ಹೇಳುತ್ತೇನೆ. ಈ ದ್ವೈತ ಮತದ ತತ್ವಗಳು ನನಗೆ ತಿಳಿದ ಮೊದಲಿನ ಕಾಲದಿಂದಲೂ ವಾದಿರಾಜ ಗುರುಗಳು ಋಜುಗಳೆಂಬ ನಿಶ್ಚಯವು ಸತ್ಸಂಗ ಪ್ರಭಾವದಿಂದ ನನಗೆ ಹುಟ್ಟಿ ಹೋಗಿತ್ತು. ಈಗ ಕುಂದಾಪುರ ವ್ಯಾಸರಾಜ ಮಠದ ಅಧೀಶ್ವರರಾದ ಶ್ರೀ 108 ಶ್ರೀ ಲಕ್ಷ್ಮೀಶತೀರ್ಥರವರು ಪೂರ್ವಾಶ್ರಮದಲ್ಲಿ ನನ್ನ ಮಿತ್ರರು. ಅವರು “ಕಂಡೇ ಕಂಡೇ ರಾಜರ ಕಂಡೇ” ಎಂಬ ಪದವನ್ನು ಹಾಡುತ್ತಿದ್ದರು. ಶ್ರೀ 108 ಶ್ರೀ ಪ್ರದ್ಯುಮ್ನತೀರ್ಥರವರು ನಿರೂಢ ನಿಶ್ಚಲ ಋಜುತ್ವ ನಿಶ್ಚಯವುಳ್ಳವರು. ಧ್ಯಾನಯೋಗಿ ಶ್ರೀ ಲಕ್ಷ್ಮೀನರಸಿಂಹಯ್ಯನವರು ಗುರುರಾಜರನ್ನು ಸೇವಿಸಿ ಪ್ರಜ್ಞಾವಿಶೇಷವನ್ನು ಸಂಪಾದಿಸಿದ್ದ ಪರಮ ಋಜುತ್ವ ಜ್ಞಾನಿಗಳು. ಭಾಗವತ ಪುರಾಣಪ್ರವಕ್ತೃಗಳಾದ ಶ್ರೀ ರಾಘವೇಂದ್ರಾಚಾರ್ಯರು ಜಂಖಂಡಿವಾದಿರಾಜಾಚಾರ್ಯರ ಜೊತೆಯಲ್ಲಿ ಬದರೀ ಯಾತ್ರೆಯನ್ನು ಮಾಡಿ, ಅವರ ಮುಖದಿಂದ ವಿಜಯದಾಸರ ಸುಳಾದಿ ಶ್ರವಣಮಾಡಿ, ತಾವೂ ವಿಜಯದಾಸರ ಸುಳಾದಿ ಭಾಗಗಳನ್ನು ಹೇಳುತ್ತಿದ್ದ ಪರಮಭಾಗವತರು. ಪೂಜ್ಯ ಪೆರಿಕೊಳೆ ರಾಮಚಂದ್ರಾಚಾರ್ಯರು ಜಂಖಂಡಿ ಆಚಾರ್ಯರಿಂದಲೂ ಸತ್ಕೃತರಾದವರು; ತಮ್ಮ ಬಾಲ್ಯದ

ವಿದ್ಯಾಭ್ಯಾಸ ಕಾಲದಲ್ಲೇ ವೃನ್ದಾವನಾಚಾರ್ಯರ ಪ್ರವಚನಶಕ್ತಿ ತಪಃಶಕ್ತಿಗಳನ್ನು ಕೇಳಿ ತಿಳಿದುಕೊಂಡಿದ್ದು, ಯಾರಿಗೋ ಸ್ವಪ್ನವಾಗಿ ಅವರಿಗೆ ಪ್ರಾಪ್ತವಾಗಿದ್ದ ವಾದಿರಾಜಗುರು ವೃನ್ದಾವನವನ್ನು ಪೂಜಿಸುತ್ತಿದ್ದರು. ಅಂಥವರ ಸಂಗದಿಂದ ಈ ವಿಷಯದಲ್ಲಿ ವಿರೋಧಿವಾದವಿದೆ ಎಂದೂ ನಾನು ತಿಳಿಯದೆ ಆ ನಿಶ್ಚಯದಲ್ಲೆ ಉಪಾಸನಾ ನಿರತನಾಗಿ ತದನುಸಾರಿ ಫಲಾನುಭವದಿಂದಲೂ ದಾರ್ಢ್ಯ ಉಳ್ಳವನಾಗಿದ್ದೆನಾದಪ್ರಯುಕ್ತ, ವಾದಿರಾಜ ಋಜುತ್ವ ವಿಷಯದಲ್ಲಿ ಶಂಕೆ ಬಂದರೆ ಸಮಾಧಾನವೇನು ಎಂಬ ವಿಚಾರಕ್ಕೆ ನನ್ನ ಮನಸ್ಸು ಪ್ರವೃತ್ತವಾಗಿರಲಿಲ್ಲ. ಅನಂತರದಲ್ಲಿ ಈ ವಿಷಯದಲ್ಲಿ ಪಕ್ಷದ್ವಯಗಳಿವೆ ಎಂದು ಶ್ರೀ ಶ್ರೀಮತ್ಸತ್ಯಧ್ಯಾನತೀರ್ಥ ಶ್ರೀಪಾದಂಗಳವರ ಸನ್ನಿಧಿಯಲ್ಲಿದ್ದಾಗ ಗೊತ್ತಾಯಿತಾದರೂ, ಅಲ್ಪ ಸ್ವಲ್ಪ ಗ್ರಂಥ ವಿಮರ್ಶೆ ಮಾಡಿಯೂ ಕೂಡ ನನ್ನ ನಿಶ್ಚಯದಲ್ಲೇ ನಿರತನಾಗಿ ಈ ವಾದ ಗೊಂದಲದ ವಿಷಯದಲ್ಲಿ ಅಲಿಪ್ತ ನೀತಿಯನ್ನೇ ಅನುಸರಿಸಿದ್ದೆ. ಪೂಜ್ಯ ಗುರುಗಳಾದ ಶ್ರೀಸೋದೆ ಮಠದ ಶ್ರೀ ಮದ್ವಿಶ್ವೇಂದ್ರ ತೀರ್ಥ ಶ್ರೀಪಾದಂಗಳವರು ನಾನು ಸೋದೆಗೆ ಹೋಗಿದ್ದಾಗ ಪರಮಾನುಗ್ರಹಮಾಡಿ ಒಂದು ಪ್ರಿಂಟಾದ ಆಖ್ಯಾನ ಗ್ರಂಥವನ್ನೂ, ಋಜುತ್ವ ಚಂದ್ರೋದಯ ಗ್ರಂಥವನ್ನೂ ಕೊಟ್ಟಿದ್ದರು. ಆಖ್ಯಾನವನ್ನು ಆಗ ಓದಿದರೂ ಪ್ರಕರಣ ಸಂಬಂಧ ಗೊತ್ತಾಗದೆ ಅರ್ಥವಾಗಲಿಲ್ಲವಾದ್ದರಿಂದ, ಹಾಗೇ ಬೀರುವಿನಲ್ಲಿ ಇಟ್ಟಿದ್ದೆ. ಜನರು ಏತಕ್ಕೆ ಈ ವಿಷಯದಲ್ಲಿ ಸಂದೇಹ ಹೊಂದುತ್ತಾರೆಂಬುದೇ ನನಗೆ ಸೋಜಿಗದ ವಿಷಯವಾಗಿತ್ತು. ಅಷ್ಟು ಸುದೃಢ ನಿಶ್ಚಯ ಸಜ್ಜನ ಸಂಗತಿಯಿಂದ ಬಂದು ಹೋಗಿತ್ತು. ಆದರೆ ಏಳೆಂಟು ವರ್ಷಗಳ ಹಿಂದೆ ಒಂದು ದಿನ ಮಿತ್ರರಾದ ಶ್ರೀ ಬಿ. ಎನ್. ರಾಮಶೇಷರಾವ್, ಎಂ.ಎ.ಎಂ.ಇಡಿ. ಇವರು ಪ್ರಾಮಾಣ್ಯ ಬೋಧಿನೀ ಗ್ರಂಥವನ್ನು ಓರಿಯಂಟಲ್ ಲೈಬ್ರರಿಯಿಂದ ತಂದುಕೊಟ್ಟು, ನಾಳೆ ಬರುತ್ತೇನೆ, ಇದಕ್ಕೆ ಅರ್ಥ ಹೇಳಿ ಎಂದು ತಿಳಿಸಿ ಹೊರಟು ಹೋದರು. ಆ ಗ್ರಂಥವನ್ನು ಓದಿದ ಮೇಲೆ ಸ್ವಾಪ್ನವೃನ್ದಾವನಾಖ್ಯಾನವು ಪರಮಾದ್ಭುತ ಗ್ರಂಥವೆಂದು ವಿದಿತವಾಯಿತು. ಕೂಡಲೇ ಗ್ರಂಥವನ್ನು ಬರೆದುಕೊಂಡು ತತ್ಪ್ರದರ್ಶಿತ ಮಾರ್ಗದಲ್ಲಿ ಆಖ್ಯಾನವನ್ನು ಅಭ್ಯಾಸ ಮಾಡಿ ಮಧ್ವಶಾಸ್ತ್ರದಲ್ಲಿ ತೋರಿಸಿದ ರೀತಿಯಿಂದ ಈ ವಿಷಯವನ್ನು ಕೂಲಂಕಷ ಶೋಧನೆಮಾಡಿ ವಿಮರ್ಶಿಸಿ ವೈಷ್ಣವ ನಿಷ್ಪಕ್ಷಪಾತಿ ಸಜ್ಜನರಿಗೆ ಸಮ್ಮತವಾಗುವಂತೆ ನಿರ್ಣಯ ಸಾಧ್ಯವೇ ಎಂದು ನೋಡಿಬಿಡಬೇಕೆಂಬ ಮನಸ್ಸುಂಟಾಯಿತು. ಆ ಮಿತ್ರವರ್ಯರೇ ತಮಗೆ ಶ್ರೀಯುತ ಜಿ. ಜಿ. ಪುರಾಣಿಕರಿಂದ ಪ್ರಾಪ್ತವಾಗಿದ್ದ ಶ್ರೀಮುಷ್ಣಾಚಾರ್ಯ ವ್ಯಾಖ್ಯಾನದ ಪ್ರತಿಯನ್ನು ತಂದು ಕೊಟ್ಟರು. ಅದನ್ನು ನೋಡಿ ಅದರಲ್ಲಿ ವ್ಯಾಖ್ಯಾನವಾಗದೇ ಬಿಟ್ಟ ಶ್ಲೋಕಗಳಿಗೆ ಅರ್ಥ ಬರೆದು ಒಂದು ಆಖ್ಯಾನ ವ್ಯಾಖ್ಯಾನ ಪ್ರತಿ ಸಿದ್ಧ ಮಾಡಿಟ್ಟಿದ್ದೇನೆ. ಆ ಕಾಲದಿಂದಲೂ ಶೋಧನೆಯ ಕಾರ್ಯದಲ್ಲಿಯೇ ಇದ್ದಾಗ 1967ರಲ್ಲಿ ಮೈಸೂರನ್ನು ಬಿಟ್ಟು ಹೊರಟುಹೋಗಿದ್ದ ಶ್ರೀಯುತ ವಿ. ಗುಂಡೂರಾಯರು 1969 ಕೃಷ್ಣ ಜಯಂತೀದಿನ, ಧಾರವಾಡದಲ್ಲಿ ಮುಗಿಸಿದ್ದ ತಮ್ಮ 'ವಾದಿರಾಜ ಋಜುತ್ವ ವಿಚಾರ' ಗ್ರಂಥವನ್ನು ನನಗೆ ಸಾಕ್ಷಾತ್ ಕಳಿಸದೆ (ಯಾರಿಗೋ ಎರಡು ಪ್ರತಿ ಕೊಟ್ಟಿದ್ದರೆಂದು ಕಾಣುತ್ತೆ. ಅವೆರಡೂ) ಅನ್ಯರ ಮೂಲಕ ಶ್ರೀ ಶ್ರೀ ಸಾಗರಕಟ್ಟೆ ಸ್ವಾಮಿಗಳವರಿಗೆ ಗ್ರಂಥಕರ್ತರ ಹೆಸರು ಗೊತ್ತಾಗದಂತೆ ಆ ಭಾಗಗಳಿಗೆಲ್ಲಾ ಕಪ್ಪುಶಾಯಿಹಚ್ಚಿದ ಎರಡು ಪ್ರತಿಗಳು ಬಂದು ಸೇರಿದ್ದವು. ಆ ಶ್ರೀ ಶ್ರೀಗಳವರು ಒಂದುಪುಸ್ತಕ ನನ್ನ ಕೈಯ್ಯಲ್ಲಿಟ್ಟು

ವಿಮರ್ಶೆ ಮಾಡಲು ಆಜ್ಞಾಪಿಸಿದರು. ಅದು “ಕೆಟ್ಟ ಪುಸ್ತಕ" ಖಂಡನೆ ಬರೆಯುತ್ತೇನೆಂದು ನಾನು ಹೇಳಿ ಹೆಚ್ಚು ವಿಮರ್ಶೆ ಮಾಡಲಾರಂಭಿಸಿದೆನು. ಈ ವಿಷಯದಲ್ಲಿ 'ಮನನ'ಕ್ಕೆ ಸಹಾಯವಾಗುವ ಒಂದು ಗ್ರಂಥರಚನೆ ಮಾಡಿಬಿಡಬೇಕೆಂದು ನನಗೆ ಆಸೆಯಾಯಿತು. ಪೂರ್ವಪಕ್ಷ ಗ್ರಂಥವೂ ವೈಷ್ಣವರಿಂದಲೇ ರಚಿತವಾದ್ದರಿಂದ ಈ ವಿಚಾರದಲ್ಲಿ ಲಾಯರುಗಳಂತೆ ಏಕಪಕ್ಷೀಯ ಉಪನ್ಯಾಸ ವಿನ್ಯಾಸವು ನಿಷಿದ್ಧವಾಗಿದೆ. ಶಾಸ್ತ್ರೀಯ ಮನನಕ್ಕೂ ಸ್ವಪಕ್ಷಸಾಧನ ಪರಪಕ್ಷ ಉಪಾಲಂಬವೆಂಬ ಎರಡು ಕಾರ್ಯವೂ ನಡೆಯಬೇಕು. ಆದ್ದರಿಂದ ನನಗೆ ಗುರುರಾಜರ ವಿಷಯದಲ್ಲಿ ಏನೂ ತಿಳಿಯದೇ ಶುದ್ಧ ಮನಸ್ಸಿನಿಂದ ಇದ್ದ ಸ್ಥಿತಿಯನ್ನು ತಂದು ಕೊಂಡು, ಉಭಯಪಕ್ಷಗಳ ಪ್ರಮಾಣಾಭಿಮತ ಸರ್ವವಿಷಯಗಳನ್ನು ಕ್ರೋಡಿಕರಿಸಿ ಅನಂತರ ಶ್ರೀಮನ್ಮಧ್ವಾಚಾರ್ಯರು ತೋರಿಸಿರುವ ವಾದರೀತಿಯನ್ನು ಉಲ್ಲೇಖಿಸಿ ಆ ವಾದರೀತಿಯಲ್ಲೇ ಪೂರ್ವಪಕ್ಷದ ದುರ್ಬಲತೆಯನ್ನೂ ಋಜುತ್ವ ಪಕ್ಷದ ಪ್ರಾಬಲ್ಯವನ್ನೂ ಯಾವಚ್ಛಕ್ತಿ ಪ್ರಯತ್ನದಿಂದ ಉಪಲಭ್ಯ ವಾದಗಳ ಮತ್ತು ಗ್ರಂಥಗಳ ವಿಮರ್ಶೆಮಾಡಿ ನಿರ್ಣಯಿಸಬೇಕೆಂದು ನಿಶ್ಚಯಿಸಿ, ಶ್ರೀ ವೇದವೇದ್ಯರ ಕೃಪೆಯಿಂದ ಸಂಸ್ಕೃತದಲ್ಲಿ “ಋಜುತ್ವಸಿದ್ಧಾಂತ” ವೆಂಬ ಗ್ರಂಥವನ್ನು ಆರಂಭಿಸಿ ಶ್ರೀಹರಿಗುರುಗಳ ಪರಮಾನುಗ್ರಹದಿಂದ ಮುಗಿಸಿರುತ್ತೇನೆ. 1970ನೇ (ಕಳೆದ) ನವರಾತ್ರಿಯಲ್ಲಿ ಪೂಜ್ಯ ಗುರುವರ್ಯರಾದ ಶ್ರೀ 108 ಶ್ರೀ ವಿಶ್ವೋತ್ತಮತೀರ್ಥ ಶ್ರೀಪಾದಂಗಳವರಲ್ಲಿ ಓದಲಾಗಿ ಅವರು ಸಂತೋಷಪಟ್ಟು “ಸ್ವಜನರಿಗೆ ಉಪಕಾರವಾಗಲಿ, ಮುದ್ರಿಸಬೇಕು, ಮಠದಿಂದಲಾದರೂ ಪ್ರಕಾಶಪಡಿಸುತೇವೆ” ಎಂದು ಅನುಗ್ರಹ ವಚನವನ್ನು ಹೇಳಿದ್ದರಿಂದ ಸದರೀ ಗ್ರಂಥವನ್ನು ಕನ್ನಡ ಭಾಷಾಂತರಮಾಡಿ 14-8-1971 ಅದೇ ಕೃಷ್ಣಾಷ್ಟಮೀ ಎರಡು ವರ್ಷದಮೇಲೆ ಮುಗಿಸಿ ಎರಡು ದಿವಸಗಳಲ್ಲಿ ಉಪಕಾರಿ ಗ್ರಂಥಗಳ ಪಟ್ಟಿ ತಯಾರಿಸಿ ಏಕಾದಶೀ ದಿವಸ ಶ್ರೀ ಕೃಷ್ಣದೇವರಿಗೆ ಅರ್ಪಿಸಿರುತ್ತೇನೆ. ಹೀಗೆ ಲೋಕೋಪಕಾರಕ ಸಾಧು ಗುರುಗಳ ಮಹದಾಜ್ಞೆಯಿಂದ ಮುದ್ರಣಕ್ಕೆ ಕೊಡಲ್ಪಟ್ಟಿರುವುದೇ ಹೊರತು ಪ್ರತಿಪಕ್ಷದವರನ್ನು ಉದ್ಧಾರ ಮಾಡಿಬಿಡಬೇಕು ಸರ್ವ ವೈಷ್ಣವರಿಗೂ ಬ್ರಹ್ಮಲೋಕ ಕೊಡಿಸಿಬಿಡುತ್ತೇನೆ, ಇದೇ ಮುಂತಾದ ಯಾವ ದೊಡ್ಡ ಧ್ಯೇಯಗಳೂ ನನ್ನನ್ನು ಪ್ರೇರಿಸಿಲ್ಲ. ಅಂಥ ಆತ್ಮಮಾನ, ನನ್ನ ಕೋಳಿಯಿಂದಲೇ ಬೆಳಗಾಗುವುದೆಂಬ ಭ್ರಾಂತಿಯನ್ನು ನಾನು “ಸಾಂಬಗಳ ಹಸ್ತಿಕಾ' ಗ್ರಂಥವನ್ನು ರಚಿಸಿದಾಗಲೇ ತ್ಯಜಿಸಿದ್ದೆ. ಈಗ ನನ್ನನ್ನು ಆ ದೊಡ್ಡ ಧ್ಯೇಯಗಳು ಪ್ರೇರಿಸಲಾರವು. ಏಕೆಂದರೆ ಲೋಕ ಸ್ವಭಾವದ ಜ್ಞಾನಬಂದು ಸ್ಥಿರವಾಗಿದೆ. ನಾಲ್ಕಾರು ಜನ ಗುರುರಾಜಭಕ್ತರು ಸಂಸ್ಕೃತ ಪೂರ್ವಪಕ್ಷ ಗ್ರಂಥದ ಮೋಹಕ ವಂಚಕ ಮಾತುಗಳಿಂದ ಕಂಗೆಟ್ಟು, ಇದಕ್ಕೆ ಹೇಗೆ ಪ್ರತಿ ಮಾತಾಡಬೇಕೆಂದು ಚಿಂತಾಕ್ರಾಂತರಾಗಿದ್ದವರು ಇದನ್ನು ಓದಿ, 'ಸರಿ ಹೋಯಿತು' ಎಂದು ನುಡಿದುಬಿಟ್ಟರೆ ಅದೇ ಪರಮಭಾಗ್ಯ.. ಮುಕುಂದನ ಪೂಜೆಗಾಗಿ ಬಳಸಿದ ಹೂವು ಮಂಗಳಗೌರಿಗೂ ಆಗಿ ಮಗಳ ಮುಡಿಯನ್ನು ಸೇರಿ "ನೋಡಪ್ಪ ಹೇಗಿದೆ?” ಎಂದು ಆ ಹುಡುಗಿ ಕೇಳಿದರೆ, ಮನಸ್ಸಿಗೆ ಉಲ್ಲಾಸವಾಗುವುದಿಲ್ಲವೇ? ಇಷ್ಟೇಕೆ ಬರೆದೆನೆಂದರೆ ಈ ಗ್ರಂಥವು ಸ್ವಂತ ಮನನಕ್ಕಾಗಿ ತಯಾರಿಸಲ್ಪಟ್ಟದ್ದಾದ್ದರಿಂದ ಇದರಲ್ಲಿ ಯಾವ ವಿಷಯವನ್ನೂ ನಾನು ನಂಬದೆ, ಹತ್ತಾರು ಸಲ ಯೋಚಿಸದೆ ಬರೆದಿಲ್ಲ. ಇಲ್ಲಿರುವ ನಿರ್ಣಯಗಳೆಲ್ಲಾ ಪರಮ

ಪ್ರಾಮಾಣಿಕವೆಂದು ನಾನು ಹೃತೂರ್ವಕವಾಗಿ ನಿಶ್ಚಯಿಸಿ ಕೊಂಡು ಲೇಖಿಸಿರುತ್ತೇನೆ. ಯಾವ ಸುಳ್ಳನ್ನೂ ಸೇರಿಸಿಲ್ಲ. ಯಾವ ಗ್ರಂಥದಿಂದ ಯಾವ ವಿಷಯವನ್ನು ಆರಿಸಿದ್ದರೂ ಅದು ಪ್ರಮಾಣಗಳಿಗೆ ಅವಿರುದ್ಧವೆಂದು ನಿಶ್ಚಯಮಾಡಿಯೇ ಉದಾಹರಿಸಿರುತ್ತೇನೆ. ಶೋಧಕ ವಾಚಕರು ತಾವೂ ವಿಮರ್ಶಿಸಿ ನೋಡಲಿ. ವಾದಮಾರ್ಗದಿಂದ ಬರೆದಿರುವುದರಿಂದ "ನಿಂದ್ಯೋ ದಂಡ್ಯೋ ಅನ್ಯಥಾ ಭವೇತ್" ಎಂಬ ಶ್ರೀ ಸರ್ವಜ್ಞಾಚಾರ್ಯರ ಉಕ್ತಿಯಂತೆ ಇತರರು ಪ್ರಮಾಣ ವಿರೋಧ ತೋರಿಸಿದರೆ ಆ ಪಕ್ಷವೇ ನನ್ನದು; ಹಾಗಿಲ್ಲದ ಮೇಲೆ ಈ ಪಕ್ಷವನ್ನೇ ಅವರೂ ಒಪ್ಪಬೇಕು. ಒಂದು ಮನೆಯಲ್ಲಿ ಎರಡು ಆಡಳಿತಗಳು ಇಲ್ಲ. ಶಾಸ್ತ್ರ ಸಮ್ಮತಿ ಒಂದೇ ಪಕ್ಷಕ್ಕಿದೆ, ಎಂದು ಅನ್ಯ ಪಕ್ಷ ವಿಮರ್ಶಾನಂತರ ತೋರಿಸಲಾಗಿದೆ. ಇನ್ನೊಂದು ವಿಜ್ಞಾಪ್ಯ ವಿಶೇಷವೇನೆಂದರೆ ಆ ವಿಚಾರಪ್ರಣಾಡಿಯೂ ಮೊದಲು ಮೂರು ನಾಲ್ಕು ಅಧ್ಯಾಯಗಳಲ್ಲಿ ಸುವಿಸ್ತಾರವಾಗಿ ತೋರಿಸಲ್ಪಟ್ಟಿದೆ. ಅದು ಆಂಗ್ಲರ ರೀತಿಯಲ್ಲ; ನ್ಯಾಯ ವೈಶೇಷಿಕ ರೀತಿಯಲ್ಲ; ಲೋಕಾನುಭವದಲ್ಲೂ ಕೋರ್ಟು ಕಛೇರಿಗಳಲ್ಲೂ ಇರುವ ರೀತಿ; ಶ್ರೀಮದಾಚಾರ್ಯರಿಂದಲೇ ಉಪವಾದಿತವಾದದ್ದು[1] ತುಂಬ ಕಾಲದಿಂದ ಪಂಡಿತರು ಅದನ್ನು ಉಲ್ಲಂಘಿಸಿ ಗ್ರಂಥ ಬರೆದಿದ್ದಾರೆ ಅಷ್ಟೆ, ಮುದ್ರಣಕ್ಕೆ ಸಿದ್ಧ ಮಾಡಬೇಕೆಂದು ಯೋಚಿಸುತ್ತಿರುವಾಗಲೇ ಗುರುರಾಜ ಭಕ್ತರೂ ಶಿಷ್ಯರೂ ಆದ ಶ್ರೀ ಶೀರೂರು ಮಠದ ಶ್ರೀಯುತ ಪಿ. ವ್ಯಾಸಾಚಾರ್ಯರು ಇದರ ಪ್ರಕಟನೆಯ ಭಾರವನ್ನು ತಮ್ಮ ಮಠದವರು ವಹಿಸುವರೆಂದು ಒಪ್ಪಿದ್ದಾರೆ. ಶ್ರೀ ಸೋದೆಮಠಕ್ಕೆ ದ್ವಂದ್ವವೂ 'ಋಜುತ್ವ ಮಂಡನೆ' ಯನ್ನು ಬರೆದು ತಮ್ಮ ವಾದಿರಾಜ ಗುರು ಋಜುತ್ವ ನಿಶ್ಚಯವನ್ನು ಲೋಕೋದ್ಧಾರಾರ್ಥವಾಗಿ ಪ್ರಕಟಿಸಿದ ಶ್ರೀ ಲಕ್ಷ್ಮೀಂದ್ರತೀರ್ಥ ಶ್ರೀಪಾದರಿಂದ ಅಧಿಷ್ಠಿತವಾದುದೂ ಆದ ಶ್ರೀ ಶೀರೂರು ಮಠದ ದೆಸೆಯಿಂದ ಪ್ರಕಾಶವಾದರೆ ಉಭಯ ಮಠಗಳೂ ಸೇರಿ ಋಜುತ್ವೋತ್ಕೀರ್ತನೆ ಮಾಡಿದಂತೆಯೇ ಆಯಿತು. ಇನ್ನು ಗೃಹಸ್ಥವರ್ಯರೂ, ಗುರುರಾಜರಲ್ಲಿ ಸಾತ್ವಿಕ ಭಕ್ತಿ ಸಂಪನ್ನರುಗಳೂ ಆದ ಶ್ರೀ ಬಿ.ಪಿ. ನಾಗಭೂಷಣರಾಯರು, ಶ್ರೀ ಬಿ. ಸಿ. ನಾರಾಯಣಮೂರ್ತಿ ಮತ್ತು ಧಾರ್ವಾಡದಲ್ಲಿರುವ ಛಾರ್ಟರ್ಡ್ ಅಕೌಂಟೆಂಟ್ ನಿವೃತ್ತ ಮಾರಾಟದ ತೆರಿಗೆ ಡೆಪ್ಯೂಟಿಕಮಿಷನರ್ ಶ್ರೀ ಜಿ. ಜಿ. ಪೌರಾಣಿಕ್, ಬಿ.ಎ., ಜೆ.ಡಿ.ಎ, ಎಫ್.ಸಿ.ಎ. ಇವರು ಸಹ ಇದರ ಪ್ರಕಾಶನಕ್ಕೆ ಪ್ರೀತಿಯಿಂದ ಸಹಾಯ ಮಾಡಿದ್ದಾರೆ. ಮೇಲಾಗಿ ಶ್ರೀ ಸೋದೆ ಮಠಾಧೀಶ್ವರರೂ, ಪರಮ ಪೂಜ್ಯ ಗುರುಗಳೂ ಆದ ಶ್ರೀ ಶ್ರೀ 108 ವಿಶ್ವೋತ್ತಮ ತೀರ್ಥ ಶ್ರೀಪಾದಂಗಳವರು ಚಂದ್ರಮಂಡಲಸ್ಥ ಶ್ರೀ ಧನ್ವಂತರಿ ಸ್ವಾಮಿಯು ತನ್ನ ಕೈಯಲ್ಲಿನ ದಿವ್ಯ ಕಲಶದಿಂದ ಅಮೃತವನ್ನು ಚುಮಕಿಸಿ ಜಗತ್ತನ್ನು ಸಂಜೀವನಮಾಡುವಂತೆ ತಮ್ಮ ಅಮೃತ ಹಸ್ತದಿಂದ ಉದಾರ ಸಂಭಾವನೆ ಕೊಟ್ಟು, ಅಭಯ ಪ್ರದರಾಗಿ ಗ್ರಂಥ ಪ್ರಕಾಶನ ಕಾರ್ಯವನ್ನು ಹರಸಿದ್ದಾರೆ. ಶುಭಾಶಂಸನವನ್ನೂ ಅನುಗ್ರಹಿಸಿದ್ದಾರೆ. ಇವರೆಲ್ಲರೂ ವೃನ್ದಾವನಾಖ್ಯಾನದಲ್ಲಿ ಪ್ರಾಮಾಣ್ಯ ನಿಶ್ಚಯವನ್ನು ಹೊಂದಿ, ಶ್ರೀ ವಾದಿರಾಜಗುರು ಋಜುತ್ವ ವಿಷಯದಲ್ಲೂ ಅನುಭವ ವಿಶೇಷಗಳಿಂದ ನಿಃಸಂಧಿಗ್ಧ ನಿರ್ಣಯವನ್ನು ಪಡೆದು, ಗುರುರಾಜರ ಕೃಪೆಗೆ ಪಾತ್ರರಾಗಿರುವ ಮಹಾತ್ಮರು. ಅವರೆಲ್ಲರಿಗೂ ಭಕ್ತಿಪೂರ್ತಿಯನ್ನು ಹೃದಯದಲ್ಲಿ ತುಂಬಿ ಜ್ಞಾನಾಮೃತಪ್ರಾಶನ ಮಾಡಿಸಲಿ. ಪೂಜ್ಯ ಗುರುಗಳಾದ ಶ್ರೀಶ್ರೀಗಳವರಿಗೆ ಪ್ರಥಮಾಪರೋಕ್ಷ ದರ್ಶನ ಕೊಟ್ಟು ನಮ್ಮೆಲ್ಲರಿಗೂ

ಮಾರ್ಗದರ್ಶಿಗಳನ್ನಾಗಿ ಮಾಡಿ, ಹಾಗೆ ನಮ್ಮೆಲ್ಲರನ್ನೂ ಉತ್ಕೃಷ್ಟ ಭಕ್ತರನ್ನಾಗಿ ಮಾಡಲೆಂದು ಶ್ರೀ ವಾದಿರಾಜ ಗುರ್ವಂತರ್ಗತ ಮಧ್ವಪ್ರಿಯ ಶ್ರೀ ಲಕ್ಷ್ಮೀ ಹಯಗ್ರೀವಸ್ವಾಮಿಗಳನ್ನು ಪ್ರಾರ್ಥಿಸುತ್ತೇನೆ. ಅಂದವಾಗಿ ಪರಮೋತ್ಸಾಹದಿಂದ ಗ್ರಂಥವನ್ನು ಮುದ್ರಣ ಮಾಡಿಕೊಟ್ಟ ಜನರಲ್ ಏಜೆನ್ಸಿ ಮುದ್ರಣಾಲಯದ ಮಾಲೀಕರಾದ ಶ್ರೀ ಜಿ. ಪ್ರಹ್ಲಾದರಾವ್ ಮತ್ತು ಸಹೋದರರರಿಗೂ, ಕರಡು ಪ್ರತಿಗಳನ್ನು ತಯಾರು ಮಾಡುವ ಮತ್ತು ಶುದ್ಧಿ ಮಾಡುವ ಕೆಲಸದಲ್ಲೂ ಸೂಚಿಪತ್ರ ಮತ್ತು ಟಿಪ್ಪಣಿಗಳನ್ನು ಬರೆಯುವ ಕೆಲಸದಲ್ಲೂ ಸಹಾಯ ಮಾಡಿರುವ ಶ್ರೀ ಕೆ.ವಾಸುದೇವಾಚಾರ್ಯರಿಗೂ ಮತ್ತು ಪ್ರಿಯ ಅಳಿಯಂದಿರಾದ ಶ್ರೀ ಕೆ.ಎಸ್. ರಾಮರಾಯರಿಗೂ ಮತ್ತು ಶ್ರೀ ಹನುಮಂತರಾಯರಿಗೂ ತುಂಬಾ ಕೃತಜ್ಞನಾಗಿದ್ದೇನೆ. ಮತ್ತು ಪೂರ್ವಪಕ್ಷ ಗ್ರಂಥ ಬರೆದ ಮತ್ತು ತಮ್ಮ ಮುಂದೆ ಓದಿದ ನನ್ನ ಗ್ರಂಥಗಳಲ್ಲಿನ ಪ್ರಾಮಾಣ್ಯ ಸ್ವತಸ್ತ್ವ ವಿಷಯದಲ್ಲಿ ಶಂಕೆಮಾಡಿ ಹೆಚ್ಚಿನ ಸಂಶೋಧನೆಗೂ, ಸಂಸ್ಕೃತ ಉಪಪಾದನೆಗೂ ಪ್ರಚೋದಕರಾದ ಶ್ರೀ ವಿ. ಪ್ರಭಂಜನರನ್ನು ನನ್ನ ಮನಸ್ಸು ವಿಶ್ವಾಸದಿಂದ ಸ್ಮರಿಸುತೇನೆ.

1.ಸಾತ್ವಿಕ ಆಧಾರಹೀನ ನಿರ್ಮೂಲ ಶಂಕೆಗಳಿಂದ ಪ್ರಾಚೀನ ಪ್ರಮಾಣಗಳನ್ನೂ ಪದ್ಧತಿಗಳನ್ನೂ ಅಲ್ಲಗಳೆಯುವುದೆಂಬ ಈ ಕಷ್ಟವು ಈಗ ಮಾಧ್ವ ಧರ್ಮಶಾಸ್ತ್ರ ಪ್ರಪಂಚದಲ್ಲಿಯೂ ಹರಡುತ್ತಿದೆ. ಮಾಧ್ವ ಧರ್ಮಶಾಸ್ತ್ರವೆಂದರೆ ಸದಾಚಾರ ಸ್ಮೃತ್ಯುಕ್ತ ರೀತಿಯಿಂದ ವೇದೇತಿಹಾಸ ಸಾತ್ವಿಕ ಪುರಾಣ ಸ್ಮೃತಿಗಳನ್ನು (ವಾಸಿಷ್ಠ ಹಾರೀತ ವ್ಯಾಸ ಪಾರಾಶರ ಭಾರದ್ವಾಜ ಕಶ್ಯಪ) ಮಥನ ಮಾಡಿ ಪ್ರಾಪ್ತವಾಗಿರುವ ಸಿದ್ಧಾಂತ. ಸರಿಯಾದ ಧರ್ಮಾನುಷ್ಟಾನ ಯಾವುದೆಂದರೆ "ಸ್ಮರ್ತವ್ಯ: ಸತತಂ ವಿಷ್ಣುಃ ವಿಸ್ಮರ್ತವ್ಯೋ ನಜಾತುಚಿತ್ | ಸರ್ವವಿಧಿ ನಿಷೇಧಾಃಸ್ಯುರೇತಯೋರೇವ ಕಿಂಕರಾಃ ‖ ಧರ್ಮೋಭವತ್ಯ ಧರ್ಮೋಪಿಕೃತೋ ಭಕ್ತ್ಯೈಸ್ತವಾಚ್ಯುತ | ಪಾಪಂ ಭವತಿ ಧರ್ಮೋಪಿ ಯೋನ ಭಕ್ತ್ಯಾ ಕೃತೋಹರೇಃ‖ ಎಂಬ 29-30 ಸದಾಚಾರ ಸ್ಮೃತಿಯಲ್ಲಿ ಉಕ್ತನಿರ್ಣಯ. ಭಕ್ತಿಪೂರ್ವಕ ಹರಿಸ್ಮೃತಿ ಮಾಡುವುದೇ ಪ್ರಧಾನ ಧರ್ಮ. ಇದಕ್ಕೆ ಅವಿರುದ್ಧವಾಗಿ ವಿಧ್ಯುಕ್ತಕರ್ಮಾನುಷ್ಠಾನ ಮಾಡುವುದು ಎಂದರೆ ಯಾವ ರೀತಿ ವೇದೋಕ್ತ ಕರ್ಮಾನುಷ್ಠಾನ ಮಾಡಿದರೆ ಅದು ಹರಿಗೆ ಸಂತೋಷಕರವಾಗುತ್ತೋ ಹಾಗೆ ಆಚರಿಸುವುದು ಧರ್ಮ. ಹೀಗೆ ಎರಡನ್ನೂ ಸೇರಿಸಿ ಮಾಡಿದರೆ ಪರಮಧರ್ಮ ಸಾತ್ವಿಕವಾಗುತ್ತೆ. ಪರಸ್ಪರ ವಿರೋಧ ಬಂದರೆ ಗುಣಧರ್ಮದಲ್ಲಿ ಸಂಕೋಚ, ನ್ಯೂನತಾದಿಗಳು ಆಗಬಹುದೇ ಹೊರತು, ಪ್ರಧಾನ ಧರ್ಮದಲ್ಲಿ ಸಂಕೋಚ ಕೂಡದು. "ಅಭಕ್ತೋನಿರಯಂ ಯಾತಿ ಸುಕರ್ಮಾಪಿ ನ ಸಂಶಯಃ" ಇತಿ ವಾಮನೇ; "ವಿಪ್ರಾದ್ವಿಷಡ್ಗುಣಯುತಾದರವಿಂದನಾಭ ಪಾದಾರವಿಂದ ವಿಮುಖಾಛ್ವಪಚಂವರಿಷ್ಠಂ"; "ಯೇತು ತದ್ಭಕ್ತಿ ವರ್ಜಿತಾಃ.....ತದ್ಭಕ್ತನಿಂದ ಕೆಶ್ಚೈವ ಯಾಂತ್ಯೇವ ನಿರಯಂ ಧ್ರುವಂ | ಅಪಿಧರ್ಮೈಕನಿಲಯಾಃ ನಾತ್ರ ಕಾರ್ಯಾ ವಿಚಾರಣಾ‖"; "ಪಾರೊಕ್ಷೇಣೈವ ತತ್ವಂತು" (ಪುಟ 123) ‖ "ನಾಹಂ ಕರ್ತಾತು, ಸರ್ವಸ್ಯ ಕರ್ತೈಕೊ ವಿಷ್ಣುರವ್ಯಯಃ ಇತಿ ವಿಶ್ವಾತು ಸನ್ಯಾಸೀ ನಾನ್ಯಥಾತು ಕಥಂಚನ‖"; "ಮಯಿ ಸರ್ವಾಣಿ ಕರ್ಮಾಣಿ ಸನ್ಯಾಸ್ಯಾಧ್ಯಾತ್ಮ ಚೇತಸಾ। ನಿರಾಶೀರ್ನಿರ್ಮಮೋಭೂತ್ವಾ ಯುಧ್ಯಸ್ವಿವಿಗತಜ್ವರಃ", "ಗುಣ ದೋಷಭಿದಾನಾಸ್ತಿ ಭಗವತ್ಪ್ರಿಯಮಂತರಾ | ಗುಣದೋಷ ದೃಶೇರ್ದೋಷೋಹ್ಯನತ್ರ ಭಗವತ್ಪ್ರಿಯಾತ್। ಗುಣಾಯದ್ದೋಷತಾಮೀಯುರ್ದೋಷಾಶ್ಚ ಗುಣತಾಂ ಕ್ವಚಿತ್ | ಅತೋ ದೋಷೋ ನದೋಷಃಸ್ಯಾದ ಗುಣೋಪಿ ಗುಣೋ ಭವೇತ್ | ದೋಷೋಥಗುಣ ಏವಸ್ಯಾದ್ಭಗವತ್ಪ್ರತೀತೋ" "ಸ್ವೇಸ್ವೇ ಅಧಿಕಾರೇ ಯಾನಿಷ್ಟಾ "ಸಗುಣಃ ಪರಿಕೀರ್ತಿತಃ" (ಕರ್ಮಯೋಗಿಗೆ, ಜ್ಞಾನಯೋಗಿಗೆ, ಭಕ್ತಿಯೋಗಿಗೆ ತತ್ತದ್ಯೋಗತಾನುಸಾರನಿಷ್ಠೆ) "ಯೇ ಸ್ಥೇಯಾನೃತದಂಭೇರ್ಷಾ ಹಿಂಸಾಮಾನ ವಿವರ್ಜಿತಾಃ | ನ ತೇಷಾಂ ಸತ್ಯ ಶೀಲಾನಾಂ ಆಶಿಷೋ ವಿಫಲಾಃ ಕ್ವಚಿತ್ ‖" ; "ತತೋಭೂಯ ಇವತೇ ಯ ಉ ವಿದ್ಯಾಯಾಯಾಂರತಾಃ" ; "ನಾವಿಶೇಷಾತ್"" ; "ಅಧ್ಯಯನ ಮಾತ್ರವತಃ" ; "ಬ್ರಹ್ಮಾರ್ಪಣಂ ಬ್ರಹ್ಮಹವಿಃ" ; "ಶೃಣ್ವ ನ್ ಗೃಣನ್ ಸಂಸ್ಮರಯಂಶ್ಚ ಚಿಂತಯನ್ ನಾಮಾನಿ...." ಇತ್ಯಾದಿ ಬಹು ಪ್ರಮಾಣಾನುಸಾರ ವಿಷ್ಣು ಸರ್ವೋತ್ತಮತ್ವ ಜ್ಞಾನ, ಸಂತತ ಭಕ್ತಿಪೂರ್ವಕಸ್ಮೃತಿ, ಫಲಾನಪೇಕ್ಷೆ, ರಾಗದ್ವೇಷರಾಹಿತ್ಯ, ಅವೈಷ್ಣವದ್ವೇಷ, ವೈಷ್ಣವದ್ವೇಷಾಭಾವ, ಗುರುಬ್ರಾಹ್ಮಣಾದಿ ಭಕ್ತಿ, ಶಮಾದಿ ಸಂಪತ್ತಿ, ಭಗವದರ್ಪಣ ಬುದ್ಧಿ, ಹರಿಸ್ವಾತಂತ್ರ್ಯಜ್ಞಾನಗಳೆಂಬ ಅಂತರಂಗ ಧರ್ಮವು ಕರ್ಮಸಿದ್ಧಿಗೆ ಪ್ರಧಾನ ಕಾರಣ. ದೊಡ್ಡವರ ಆಜ್ಞಾನುಸಾರೇಣ ಯಥಾಶಕ್ತಿ ಸಾತ್ವಿಕ ಪ್ರಮಾಣ ತಾತ್ಪರ್ಯಸಿದ್ಧ ಕರ್ಮಾನುಷ್ಠಾನವು ಬಾಹ್ಯ ಕಾರಣ. ಇವೆರಡಕ್ಕೂ ವಿರೋಧವಿಲ್ಲ. ದೇಶ ಕಾಲಕರ್ಮ ಪ್ರಭಾವದಿಂದ ಅಥವಾ ಅಶಕ್ತಿಯಿಂದ ವಿರೋಧ ಒದಗಿದರೆ, ಗುರ್ವಾದಿ ಭಕ್ತರ ಆಜ್ಞೆಯಿಂದ ಕರ್ಮವನ್ನಾದರೂ ನ್ಯೂನಾಂಗಗಳಿಂದ ಮಾಡಿ ಭಗವತಪ್ರೀತಿಯುಂತಂಟಾಗುವಂತೆ ಅರ್ಪಿಸಬೇಕು. ಪ್ರಧಾನ ಅಂತರಂಗ ಗುಣಗಳನ್ನೇ ತ್ಯಾಗಮಾಡಿ ಕರ್ಮವನ್ನು ವಿಸ್ತಾರವಾಗಿ ಮಾಡಿದರೆ ಆ ಕರ್ಮ ತಾಮಸವಾಗುತ್ತೆ. ಅಂತರಂಗ ಧರ್ಮ ಸರಿಯಾಗಿದ್ದರೆ ಸ್ವಕರ್ಮವನ್ನು ಸ್ವಲ್ಪ ದೋಷಯುಕ್ತವಾಗಿ ಮಾಡಿದ್ದರೂ "ಸಹಜಂ ಕರ್ಮಕೌಂತೇಯ ಸದೋಷಮಪಿನತ್ಯಜೇತ್ | ಸರ್ವಾರಂಭಾಹಿ ದೋಷೇಣ ಧೂಮೇನಾಗ್ನಿ ರಿವಾವೃತಾಃ" ಇದರ ಟೀಕಾ ವಿವೃತ್ಯಾದಿಗಳಲ್ಲಿ ಹೇಳಿದಂತೆ ಪ್ರಾಪ್ತವಾದ ದೋಷಪರಿಹಾರಕ್ಕಾಗಿ "ನ್ಯೂನಂ ಸಂಪೂರ್ಣತಾಂ ಯಾತಿ" ಇತ್ಯಾದಿ ಮಂತ್ರೋಕ್ತ ರೀತಿಯಲ್ಲಿ ಶ್ರೀಹರಿ ಸ್ಮೃತಿ ಮಾಡಬೇಕು. ಇದೇ ಮಧ್ವಸಿದ್ಧಾಂತ. ಭಕ್ತಿಯಿಲ್ಲದೆ ಅಜ್ಞಾನಿ ವಿಧಿಮೀರಿ ನಡೆದರೆ ನರಕವೇ ಆಗುತ್ತೆ. ಪರೋಕ್ಷಜ್ಞಾನಿ, ಭಕ್ತಪಂಡಿತ ವಿಧಿವೀರಿ ನಡೆದರೆ ನರಕವಿಲ್ಲದಿದ್ದರೂ ಭಕ್ತಿವೃದ್ಧಿಗೆ ವಿಘ್ನವಾಗುತ್ತೆ.

ತುಂಬ ಭಕ್ತಿಯಿಂದ ಕರ್ಮ ಮಾಡುತ್ತಾ ಅಶಕ್ತಿ ನಿಮಿತ್ತದಿಂದ ವಿಧಿಲೋಪ ಆದರೆ ಹರಿಸ್ಮೃತಿಯಿಂದ ಲೋಪ ಸಂಪೂರ್ತಿ ತಿಳಿಬೇಕು. ತತ್ರಾಪಿ ಶ್ರೀಕೃಷ್ಣ, ವ್ಯಾಸಮುಷ್ಟಿ ಗುರುರಾಜಾದಿಗಳ ಸನ್ನಿಧಿಯಲ್ಲಿ ಹಾಗೆಯೇ ಸರಿ. “ಅಜ್ಞಸ್ತದರ್ಥಂ ಜಾತೋಪಿ ಬಧ್ಯತೇದೈತ್ಯವುದ್ಧ್ರುವಂ। ಪರೋಕ್ಷಜ್ಞಃ ಕಿಂಚಿದ್ದೋಷೇಣಲಿಪ್ಯತೇ॥”; “ಯೈರ್ನಿಶ್ಚಿತಂ ಪರತ್ವಂತು....ಅಪಿ ಬ್ರಹ್ಮಹತ್ಯಾದಿಭಿಃ” ಹೀಗೆ ಪ್ರಮಾಣಗಳಿವೆ. ಆದರೆ ಈಚೆಗೆ ಮತ ವಿರೋಧಿಗಳನ್ನೇ ಕರೆದು ಕರ್ಮವನ್ನು ಅವರ ಮಧ್ಯದಲ್ಲಿ ಮಾಡಿ ಸಾರ್ವಜನಿಕ ಪ್ರೇಮಪಾತ್ರವಾಗಿ ಮಾಡಲು ಆಚಾರ ಭೇದ ಕಾಣುತ್ತಿದೆ. XI-2 ಮೂಲಧರ್ಮ ವಿರುದ್ಧಾತು ಸಾನಗ್ರಾಹ್ಯಾ ಎಂದಿದ್ದರೂ ಅವೈಷ್ಣವ ಸ್ನೇಹ, ತಾಮಸಸ್ಮೃತ್ಯನುಸರಣ, ವಿಶಿಷ್ಟ ಕಾರಣವನ್ನು ಸಾಮಾನ್ಯವೆಂದು ತಿಳಿದು ಉದಾಸೀನಮಾಡಿ ಬಾಹ್ಯವಿಧಿಗೆ ಪ್ರಾಶಸ್ತ್ಯೋಪಪಾದನೆ ಇವೆಲ್ಲಾ ಹುಟ್ಟಿಕೊಂಡು ಈ ರೀತಿ ಕರ್ಮಾನುಷ್ಠಾನವೇ ಮಧ್ವಾಚಾರ್ಯರಿಗೆ ಸಮ್ಮತವೆಂದು ಭ್ರಮೆ ಉಂಟಾಗುತ್ತಿದೆ. ಹಾಗೆ ಸರ್ವಥಾ ಭ್ರಾಂತಿ ಹೊಂದಬಾರದು. ಉಡುಪಿ ಕೃಷ್ಣ, ವೇಂಕಟೇಶ, ವಿಠಲಾದಿ ದೇವರು ಮತ್ತು ವಾದಿರಾಜ ಸ್ವಾಮಿಗಳು ಮತ್ತು ರಾಘವೇಂದ್ರ ಸ್ವಾಮಿಗಳೇ ಮುಂತಾದ ಮಹಾತ್ಮರ ಸನ್ನಿಧಾನದಲ್ಲಿ ದೊಡ್ಡ ಭಕ್ತರ ಜೊತೆಯಲ್ಲಿ ಸ್ವಲ್ಪ ಅವರ್ಜನೀಯ ದೋಷ ಬಂದರೂ ಸಹ ನಿಃಶಂಕವಾಗಿ ಉತ್ತಮ ಹರಿವಾಯು ಭಕ್ತಿಪೂರ್ವಕ ವಿವಾಹ ಚೌಲೋಪನಯನ ಶ್ರಾದ್ಧಾದಿ ಕರ್ಮಗಳನ್ನು ಮಾಡಿ ಸಮರ್ಪಿಸಿದರೆ ಅನಂತವಾಗುತ್ತೆ. ಕೃಷ್ಣಸ್ತುತಿ ಕರ್ತರ ಕರ್ಮ “ಕೋಟಿಕೋಟಿ ಫಲಂಭವೇತ್” ಎಂದಿದೆ. ದೋಷವೂ ಹೋಗುತ್ತೆ. ಪ್ರಧಾನಾಂಗವನ್ನು ತ್ಯಜಿಸಿ ವಿಧ್ಯನುಷ್ಠಾನಕ್ಕೆ ಸಂಪೂರ್ತಿ ಉಂಟು ಮಾಡಲು ಯತ್ನಿಸಬಾರದು. “ಏವಂ ಸರ್ವಮಪಿ ಭಗವದ್ಭಕ್ತಿಯುಕ್ತಮೇವ ಸಾತ್ವಿಕಂ" ಎಂದೂ, “ಶಾಸ್ತ್ರವಿಹಿತಮಪಿ ಭಗವಚ್ಛ್ರದ್ಧಾದಿ ಹೀನಮಸದೇವೇತಿ ವಕ್ಷ್ಯತಿ”; “ತ್ಯಕ್ತ್ವಾ ವಿ ಶಾಸ್ತ್ರವಿಹಿತಂ ಮಿಥ್ಯಾಜ್ಞಾನವಿವರ್ಜಿತಾಃ। ಭಕ್ತ್ಯಾ ವಿಷ್ಣುಂ ಯಜಂತೊಯೇ ನಿಷಿದ್ಧಾಚರಣೋಜ್ಜಿತಾಃ। ತೇಪಿ ಯಾಂತಿ ಹರಿಂ ಶಾಸ್ತ್ರ ವಿಧಾನಸ್ಥಾಃ ಕಿಂ ಪುನಃ” ಎಂದೂ ಗೀತಾಭಾಷ್ಯ ವಚನಗಳಿವೆ.

ಕೆಲವರು ಅಪಕ್ವರೂ, ಅಜ್ಞರೂ ಅತಿಪ್ರಸಂಗ ಹೇಳುತ್ತಾರೆ: “ಹಾಗಾದರೆ ಸ್ನಾನವೇ ಬೇಡ, ಭಕ್ತಿಯಿಂದ ದೇವರ ಪೂಜೆ ಮಾಡಿಬಿಡು” ಎನ್ನುತ್ತಾರೆ. ಕಾಪಟ್ಯಾದಿ ಮನೋದೋಷಾಭಾವ, ಭಕ್ತ್ಯಾದಿ ವಿಶಿಷ್ಟ ಸಹಕಾರಿ ಸದ್ಭಾವ, ಪರೋಪದ್ರವಾಭಾವಾದಿಗಳಿಂದ ಅತಿ ಪ್ರಸಂಗಾಭಾವ ತಿಳಿಯಬೇಕು. ಅವಗಾಹನ ಸ್ನಾನವಾಗದಿದ್ದರೂ ಬಿಸಿ ನೀರು ಸ್ನಾನಮಾಡಿ ದೇವರಪೂಜೆ ಮಾಡುತ್ತಾನೆ. ("ಅದೂ ಬೇಡ" ಎಂದು ಅತಿಪ್ರಸಂಗ ಹೇಳಲಾಗುವುದಿಲ್ಲ. ಘಟಕೀ ಭೂತ ಮೂಲ "ಭಕ್ತತ್ವ ಧರ್ಮಸ್ಯೈವ ವಿಘಾತಪ್ರಸಂಗಾತ್" ಎನ್ನಬೇಕು. ಭಕ್ತಿಯಿಂದ ಭಜನೀಯ ಸ್ವಾಮಿಯನ್ನೇ ಸಗಣಿಯಿಂದ ಹೊಡೆಯುವುದಕ್ಕೆ ಆಗುತ್ತದೆಯೇ? ಅಂಥ ಕರ್ಮ ಅಸಂಭಾವಿತ. ಆದ್ದರಿಂದಲೇ ಬಚ್ಚಾಲೋ ಬಚ್ಚಲೋ ಬಚ್ಚೇ' ಎಂದು ನಿಷ್ಕಪಟಿ ಪಾರಾಯಣ ಮಾಡಿ ಫಲಹೊಂದಿದ್ದಾನೆ. ಸ್ನಾನಕ್ಕೆ ಮುಂಚೆ ವಿದ್ಯಾರ್ಥಿಗಳು ಸುಧಾ ಓದಿ ನಂತರ ಸ್ನಾನಮಾಡಿ ಭಕ್ತರಾಗಿದ್ದಾರೆ. ಮಾಧವ ಮರಳಿನ ಪಿಂಡ ಹಾಕಿ ಭಕ್ತಿಯಿಂದ ಶ್ರಾದ್ಧ ಮಾಡಿ ಪುಣ್ಯ ಹೊಂದಿದ್ದಾನೆ. "ವೇಂಕಟಾದ್ರೌ ಶುಚಿಕ್ಷೇತ್ರೇಽಶುಚಿ ದೋಷೋ ನ ವಿದ್ಯತೇ" ಎಂದಿದೆ. ಎಂಜಲು ಹಣ್ಣು ಕೊಟ್ಟು ಶಬರೀ ಪುಣ್ಯಗಳಿಸಿದ್ದಾಳೆ. ವಿವಸ್ತ್ರ ಸ್ನಾನಮಾಡಿ ಗೋಪಕನ್ಯೆಯರು ಕಾತ್ಯಾಯಿನಿ ವ್ರತಮಾಡಿ ಫಲಹೊಂದಿದ್ದಾರೆ. ಆಷಾಢ ಹುಣ್ಣಿಮೆಯ ದಿನ ಶಾಕಪೂರ್ಣ ಅಡಿಗೆ ಮಾಡಿ ವಾದಿರಾಜ ಗುರುಗಳಿಂದ ಪತಿವ್ರತೆ ಗರ್ಭಿಣಿಯು ವರ ಪಡೆದುಕೊಂಡಿದ್ದಾಳೆ. ಏಕೆಂದರೆ ಇವೆಲ್ಲಾ ಪರೋಪದ್ರವಕಾರಿಯಲ್ಲದ ಸಾಮಾನ್ಯ ವಿಧಿಲೋಪಗಳು. ಭಕ್ತರು ಚಿಂತಿಸುವುದಕ್ಕೂ ಹೇಸುವಂಥ ಮಹಾಪರಾಧಗಳಲ್ಲ. XI3-46 ತದೇವಾರ್ಪಯತೋ ವಿಷ್ಣೋರ್ನೈವಪಾಪಾಯತದ್ಭವೇತ್। ಮನೋದೋಷವಿಹೀನಸ್ಯ॥ ಎಂದಿದೆ.

ಪರ್ವತಸನ್ಯಾಸಕ್ಕಿಂತ ಕರ್ಮವೇ ಮೇಲು ಎಂದು ಗೀತಾ ವಚನವಿದೆ. ಆದರೂ ಭಕ್ತಿರಹಿತ ಕರ್ಮಜ್ಞಾನಾದಿಗಳ ದೆಸೆಯಿಂದ ಅಚ್ಯುತ ಭಾವವೆಂಬ ಭಕ್ತಿಯೇ ಸರ್ವೋತ್ತಮವೆಂದು “ನೈಷ್ಕರ್ಮ್ಯಮಪ್ಯಚ್ಯುತಭಾವ ವರ್ಜಿತಂ ನಶೋಭತೇ।” ಎಂಬ ಭಾ. ಶ್ಲೋಕದಿಂದ ವ್ಯಕ್ತವಾಗುತ್ತೆ. ಭಕ್ತಿಯುಕ್ತ ಕರ್ಮ ಜ್ಞಾನಗಳು ಅನಂತ ಫಲಪ್ರದವೆಂದೇ ಮಧ್ವಸಿದ್ಧಾಂತ.

ವಿಶಿಷ್ಟ ಗುರು ಭಕ್ತ್ಯಾದಿ ಜನಿತ ಹರಿಸ್ಮೃತಿ ಇದ್ದರೆ ಅವರ್ಜನೀಯ ವಿಧಿಲೋಪವು ಗುಣವಾಗುತ್ತೆ. ಆದ್ದರಿಂದ ಶುದ್ಧ ಹರಿಗುರು ಸ್ಮೃತಿ ಸಂಪಾದಿಸಬೇಕು. ಸ್ವಲ್ಪಮಪ್ಯಸ್ಯ ಧರ್ಮಸ್ಯ ತ್ರಾಯತೇ ಮಹತೋಭಯಾತ್" ಆದ್ದರಿಂದ ಸಂಪ್ರದಾಯ ಬಿಟ್ಟು ಅಗಮ್ಯಾಗಮ್ಯ ವಿವೇಕ ನೋಡದೆ ಸರ್ವ ಪ್ರದೇಶದಲ್ಲಿ ವಾಸಾರ್ಥ ಹೋಗುವುದು, ಐಕಮತ್ಯ ಕೋರಿ ವರ್ಣಾಶ್ರಮ ನಾಶಕ್ಕೆ ಪ್ರವರ್ತಿಸುವುದು, ಜೀವವಿತ್ತ್ವೈವಿಧ್ಯ ವಿವೇಕಮಾಡದೆ ಸರ್ವಜನ ಸೇವೆ ಮಾಡಿ ಧರ್ಮವಾಯಿತೆನ್ನುವುದು, ಅಧಿಕಾರಿ, ಅನಧಿಕಾರಿ ವಿವೇಕಮಾಡದೆ ಶಾಸ್ತ್ರ ಪ್ರವಚನಮಾಡಿ ತಪಸ್ಸಾಯಿತೆನ್ನುವುದು ['ನಾನಾಜನಸ್ಯ ಶುಷ್ರೂಷಾ ಕರ್ಮಾಖ್ಯಾ ಕರವನ್ಮಿತೇಃ" ಎಂಬ ಶ್ರೀಮದಾಚಾರ್ಯರ ಗೀತಾ ತಾತ್ಪರ್ಯದ ವಾಕ್ಯಕ್ಕೆ ನಾನಾಜನ = ತ್ರಿವಿಧ ಜೀವರ ಸೇವೆಯೂ ವಿಷ್ಣು ಸೇವೆಯಾಗುತ್ತೆ ಎಂದು ಕೆಲವರು ಅಪಾರ್ಥ ಮಾಡಿದ್ದಾರೆ. ಆ ಅರ್ಥ ಉಗ್ರಂ ದಮಾಯನ್, ಚೋಷ್ಪೂಯತೇ ವಿಶಃ ಇತ್ಯಾದಿ ಶ್ರುತಿ ವಿರುದ್ಧ. ದೈತ್ಯಾರಿಯಾದ ದೇವರು ದುರ್ಜನ ಸೇವೆಯಿಂದ ಪುಣ್ಯ ಕೊಡೋದಿಲ್ಲ. ಸ್ವರೂಪೋತ್ತಮರಲ್ಲಿ ಭಕ್ತಿ, ಸಮಾನರಲ್ಲಿ ಮೈತ್ರಿ, ಸ್ವಾಧಮಮುಕ್ತಿ ಯೋಗ್ಯರಲ್ಲಿ ಕೃಪೆ. ಹೀಗೆ ತ್ರಿವಿಧ ಭಾವಯುಕ್ತ ಸೇವೆಯಿಂದ ಹರಿ ಸಂತುಷ್ಟನಾಗುತ್ತಾನೆಂದು ಹೇಳುವ ಭಾಗವತ ಶ್ಲೋಕಾನುಸಾರ ಅರ್ಥ ತಿಳಿಯಬೇಕು. "ಸಂತಸ್ತು ತ್ರಿವಿಧಾಃ ಪ್ರೊಕ್ತಾಉತ್ತಮಾಮಧ್ಯಮಾಧಮಾಃ" ಎಂದೂ XI 3 ಭಾಗ.ತಾ, ಭವಿಷ್ಯತ್ಪರ್ವ ವಚನವಿದೆ], ಜ್ಞಾನಯೋಗಿ ಕರ್ಮನಿಷ್ಠೆ ಬೆಳೆಯಿಸಿಕೊಳ್ಳುವುದು ಇತ್ಯಾದಿ ಅವೈಷ್ಣವ ಪಕ್ಷಪಾತವೆಲ್ಲಾ ಅಂತರಂಗ ದೋಷವಾದ್ದರಿಂದ ಮಧ್ವ ಶಾಸ್ತ್ರಕ್ಕೆ ವಿರುದ್ಧ. ಬಾಹ್ಯ ಕರ್ಮನೂನ್ಯತೆ ದೆಸೆಯಿಂದ ಈ ಅಸಾಧು ಆ0ತರ ಆಗ್ರಹವು ಅನಂತಮಡಿ ಪ್ರತ್ಯವಾಯಜನಕ ಅಥವಾ ಅಪರೋಕ್ಷ ಜ್ಞಾನಕ್ಕೆ ವಿಳಂಬಜನಕ. ಮಹಾಮೋಹದಿಂದ ಅದನ್ನೂ ತಪ್ಪಿಲ್ಲವೆಂದು ಅಸಾಧು ಪಂಡಿತರು ಉಪಪಾದಿಸುತ್ತಾರೆಂದು ಶ್ರೀ ಮಧ್ವಾಚಾರ್ಯರು ನಿರೂಪಿಸಿದ್ದಾರೆ: ಭಾಗ. ತಾ.XI “ಯದ್ಯದಾತ್ಮನೋ ಹಿಂಸಿತುಮಿಷ್ಟಂ ತತ್ತದ್ವಿಹಿತಮಿತಿ ಪ್ರಾಪಯ0ತಿ ಕುತರ್ಕೈ” ಅಂಥ ಭಯಂಕರ ಪಂಡಿತರ ದೆಸೆಯಿಂದ ದೂರ ಇರಬೇಕು. ಜ್ಞಾನವಿಲ್ಲದೆ ಶಾಸ್ತ್ರ

ವಿಧಿಮೀರಿ ಹರಿಭಕ್ತಿಯಿಂದ ಕರ್ಮಮಾಡಿದರೆ ಹರಿ ಕ್ಷಮಿಸಿ ಸ್ವಲ್ಪ ಪುಣ್ಯವೇ ಕೊಡುತ್ತಾನೆ. ಜ್ಞಾನವಿಲ್ಲದೆ ಹರಿಭಕ್ತಿ ತ್ಯಾಗಮಾಡಿ ಅನತ್ಪ್ರೀತಿ, ಸಾಧುದ್ವೇಷ ಇಟ್ಟುಕೊಂಡು ದಿವ್ಯಮಂತ್ರ ಜಪಮಾಡಿದರೂ ತಮಸ್ಸೇ ಆಗುತ್ತೆ. ದೃಷ್ಟಾಂತ ಪ್ರಮಾಣ ಉದಾಹರಿಸಿಯಾಗಿದೆ.

ಹರಿಸ್ಮೃತಿ, ಗುರುಭಕ್ತಿ, ದೊಡ್ಡ ಮಾಧ್ವ ಸನ್ನಿಧಾನಾದಿ ಪ್ರಧಾನ ಸಹಕಾರಿ ಕಾರಣ ಇದ್ದರೆ ನಿಷಿದ್ಧ ತಿಥ್ಯಾದಿಗಳನ್ನು ನೋಡದೆ ಕರ್ಮಾನುಷ್ಠಾನ ಮಾಡಿದರೂ ದೋಷವಾಗುವುದಿಲ್ಲ, ಮಹಾಫಲವೂ ತಪ್ಪುವುದಿಲ್ಲ ಎಂಬುದು ಒಂದು ಅನುಭವದಿಂದ ನನಗೆ ದೃಢವಾಗಿದೆ. ನಾನು ಉತ್ತರಾದಿಮಠದಲ್ಲಿದ್ದಾಗ ಶ್ರೀಮತ್ಸತ್ಯಧ್ಯಾನತೀರ್ಥರು ತಮ್ಮ ಪೂರ್ವಾಶ್ರಮದ ವೃದ್ಧ ಬಂಧುವಿನ ಸಂಗಡ ಒಂದು ದಿನ ಸಂಧ್ಯಾಕಾಲದಲ್ಲಿ ಮಾತಾಡುತ್ತಿದ್ದರು. ಆ ಬಂಧು ತನ್ನ ಮಗಳ ಮದುವೆಗೆ ಮುಹೂರ್ತವನ್ನು ಜೋಯಿಸರ ಕಡೆಯಿಂದ ಇಡಿಸ ಬೇಕೆಂದು ಅಲ್ಲೇ ಯಾರಾದರೂ ಜೋಯಿಸರಿದ್ದಾರೆಯೇ ? ಎಂದು ವಿಚಾರಿಸಿದರು. 'ಜೋಯಿಸರು ಈಗಲೇ ಏತಕ್ಕೆ? ನೀನು ಮದುವೆ ಎಲ್ಲಿ ಮಾಡುತ್ತಿ ?' ಎಂದರು ಶ್ರೀ ಶ್ರೀಗಳವರ., 'ಮದುವೆ ಮಠದಲ್ಲೆ?, ಇಲ್ಲೇ ಸನ್ನಿಧಾನದಲ್ಲೇ' ಎಂದರು ಬಂಧುಗಳು. 'ಮದುವೆ ಮಠದಲ್ಲಾದರೆ ನೀವು ಕನ್ಯಾವರರನ್ನು ಗೊತ್ತಾದಾಗ ಕರೆದುಕೊಂಡುಬಾ. ನಾನು ಅಮಾವಾಸ್ಯೆ ರಾಮದೇವರ ಮುಂದೆ ಮಾಡಿಸುತ್ತೇನೆ. ನಿನಗೆ ನಂಬಿಕೆ ಇದೆಯೋ ಇಲ್ಲವೋ?" ಎಂದರು ಶ್ರೀ ಶ್ರೀಗಳವರು. 'ಎಲ್ಲಾ ಸರಿಹೋಯಿತು. ನನಗೆ ನಂಬಿಕೆ ಇದೆ" ಎಂದು ಹೇಳಿ ಆ ಬಂಧು ನಮಸ್ಕರಿಸಿ ಹೊರಟುಹೋದರು. "ಅರ್ಥವಾದ ವಾಕ್ಯಾನಾಂ ಅಬಾಧಿತೇ ಸ್ವಾರ್ಥೇ ತಾತ್ಪರ್ಯಮಸ್ತಿ' ಎಂದು ಸಿದ್ಧಾಂತವಿದೆ. ಇದರಿಂದ ಏನು ಸಿದ್ಧವಾಗುತ್ತೆ ಎಂದರೆ ಹರಿಸ್ಮೃತ್ಯಾದಿ ಅಂತರಂಗ ಧರ್ಮಗಳು ಇರಲಿಕ್ಕೆ, ದೊಡ್ಡದೇವರ, ದೊಡ್ಡ ಗುರುಗಳ, ಸನ್ನಿಧಾನದಲ್ಲಿ ಕ್ಷುದ್ರವಾದ ಮುಹೂರ್ತ ದೋಷಾದಿಗಳು ಕಾರ್ಯಕಾರಿಯಲ್ಲ. ಮಾಧ್ವ ಧರ್ಮಶಾಸ್ತ್ರ ಎಂದರೆ - ಗೀತೋಕ್ತ ಸಾಂಖ್ಯ, ಸನ್ಯಾಸ, ಭಗವತಸ್ಮೃತಿ, ಭಗವದರ್ಪಣ, ವಿಶಿಷ್ಟ ಸನ್ನಿಧಿ, ಗುರುಭಕ್ತಿ, ಬ್ರಾಹ್ಮಣರ ಆಶೀರ್ವಾದ ಮುಂತಾದ ಪ್ರಧಾನ ಧರ್ಮ ಸಂಪಾದಿಸಿ, ತತ್ಪೂರ್ವಕವಾಗಿ ಸಾತ್ವಿಕ ಸ್ಮೃತ್ಯುಕ್ತ ವಿಧಿಪ್ರಕಾರ ಶಕ್ಯವಾದಷ್ಟು ಅಂಗಸಂಪಾದಿಸಿ, ಅವರ್ಜನೀಯವಾಗಿ ಅಂಗಲೋಪವಿದ್ದರೂ ಕರ್ಮಾನುಷ್ಠಾನ ನಿರ್ಭಯವಾಗಿ ಮಾಡಬೇಕು. ಪೂರ್ಣಶುಭ ಫಲವೇ ಬರುತ್ತೆ, ಅನಿಷ್ಟವಾಗುವುದಿಲ್ಲ. ಇಂಥ ಮಧ್ವ ಸಂಪ್ರದಾಯಕ್ಕೆ ರಾಜಸ, ತಾಮಸ ಸ್ಮೃತಿಗಳೂ, ಅವೈಷ್ಣವ ಧರ್ಮಶಾಸ್ತ್ರ ವ್ಯಾಖ್ಯಾನಗಳೂ, ಬಹುದೂರ. ಕಪಟದಿಂದ ಬುದ್ಧಿಪೂರ್ವಕವಾಗಿ ವಿಧಿಮೀರಿದರೆ ಅನಿಷ್ಟವೇ ಆಗುತ್ತ. 'ಸಂಶಯಾತ್ಮಾ ವಿನಶ್ಯತಿ' ಪ್ರಬಲ ಪ್ರಾರಬ್ಧಾದಿಗಳಿದ್ದರೆ ಉತ್ತರಾ ದೇವಿಗೆ ಮದುವೆ ಆದ ವರ್ಷದಲ್ಲೇ ವೈಧವ್ಯ ಬಂದಂತೆ ಸತ್ಕರ್ಮಕ್ಕೆ ದುಃಖ ಫಲವಾದರೂ, ಆ ದುಃಖವು ಸನ್ನಿಧಾನ ಮೋಘತ್ವ ಪ್ರಯುಕ್ತ ಅಥವಾ ಕರ್ಮದ ಮುಹೂರ್ತ ದೋಷಾದಿಗಳಿಂದ ಆಯಿತೆಂದು ತಿಳಿಯಬಾರದು. ಇನ್ನೂ ಹೆಚ್ಚು ಕೆಡಕಾಗದೆ ಸ್ವಾಮಿ ದಯದಿಂದ ಇಷ್ಟೇ ಆಯಿತೆಂದು ತಿಳಿಯಬೇಕು. ಪ್ರಕೃತ ಈ ವಿಚಾರೋಕ್ತ ನ್ಯಾಯವನ್ನು ಗುರುರಾಜರ ಉಪಾಸನೆಗೆ ಅನ್ವಯಿಸಿಕೊಂಡರೆ ಶ್ರೀ ವಾದಿರಾಜ ಋಜುತ್ವಾದಿ ಜ್ಞಾನ ಪ್ರಯೋಜ್ಯ ಭಕ್ತಿ ಎಂಬ ಪ್ರಧಾನ ಧರ್ಮವಿಲ್ಲದೆ ಅವರಿಗೆ ಯಾವ ಸೇವೆ ಯನ್ನಾಗಲೀ ಪಂಡಿತಾಧಿಕಾರಿ ಮಾಡಿದರೆ ಅದೊಂದು ಅವಹೇಳನವೇ ಆಗುವುದಿಲ್ಲವೇ? ಪ್ರಮಾಣಗಳಿದ್ದರೂ, ಸಜ್ಜನೋಪದೇಶಕರು ಸಿಕ್ಕಿದರೂ, ಉದಾಸೀನಮಾಡಿ ಅವರ ಮಹತ್ವ ತಿಳಿಯದಿರುವುದು 'ಬುದ್ಧಿ ಶಾಠ್ಯ' ವಾಗುವುದಿಲ್ಲವೇ? ವಾಚಕರೇ ನಿಶ್ಚಯಿಸಲಿ. XI 2-46 ಭಾಗ.ತಾ. ನೋಡಲಿ.

ವೈಷ್ಣವ ಪುರೋಹಿತರ "ತದೇವ ಲಗ್ನ ಸುದಿನಂ ತದೇವ" ಇತ್ಯಾದಿ ಮಂತ್ರದಲ್ಲೂ, "ಸಕಲ ಗ್ರಹಬಲವು ನೀನೆ ಸರಿಸಿಜಾಕ್ಷ" ಎಂಬ ಪುರಂದರದಾಸರ ಕೀರ್ತನೆಯಲ್ಲೂ (ಪುಟ 12 ಪು.ದಾ.ಕೀ. ಭಾ2) ಈ ವೈಷ್ಣವ ಧರ್ಮದ ಪ್ರಾಶಸ್ತ್ಯ ಹೊಗಳಲ್ಪಟ್ಟಿದೆ. ನಿಷ್ಕಾಮ ಹರಿಭಕ್ತರ ಉದ್ಧಾರಕ್ಕಾಗಿಯಲ್ಲವೇ ಶ್ರೀಮದಾಚಾರ್ಯರು ಸ್ವಕರಾರ್ಚಿತಾನೇಕ ಪ್ರತಿಮೆಗಳನ್ನೂ, ಸ್ವಪ್ರಾರ್ಥನಾ ಪ್ರಾಪ್ತವಾದ ವ್ಯಾಸಮೂರ್ತಿಗಳನ್ನೂ ಸಾಧನ ಭೂಮಂಡಲದಲ್ಲಿ ಬಿಟ್ಟು ಹೋಗಿರುವುದು? ಅಂಥ ಭಕ್ತರ ತೊಂದರೆಗಳನ್ನೂ ಶಕ್ಯವಾದಷ್ಟು ಪರಿಹರಿಸಿ, ಸಾಧನ ಸೌಲಭ್ಯ ಮಾಡಿಕೊಟ್ಟು, ಪುಣ್ಯಸ್ವಲ್ಪವನ್ನೂ ಅಧಿಕವನ್ನಾಗಿಮಾಡಿ, ದೋಷ ಇದ್ದರೂ ಇಲ್ಲದಂತೆ ಅನುಗ್ರಹಿಸಿ, ಆಶ್ರಿತ ಕಲ್ಪವೃಕ್ಷರಾಗುವುದಕ್ಕೆ ಅಲ್ಲವೇ ವಾದಿರಾಜ ಸ್ವಾಮಿಗಳು, ರಾಘವೇಂದ್ರ ಸ್ವಾಮಿಗಳು ಮುಂತಾದ ಮಹನೀಯರು ಇನ್ನೂ ವೃನ್ದಾವನಗಳಲ್ಲಿ ವಾಸಮಾಡುತ್ತಿರುವುದು? ಆದ್ದರಿಂದ ಹರಿಗುರು ಕಾರುಣ್ಯ ರೀತಿ ತಿಳಿಯದ ಜನರ ಅತಿಪ್ರಸಂಗೋಕ್ತಿಗಳಿಗೆ ಭೀತರಾಗದೆ, ಮೇಲ್ಕಂಡ ದೊಡ್ಡವರು ಮತ್ತು ಶ್ರೀಹರಿಯ ದೊಡ್ಡ ಸನ್ನಿಧಾನಗಳೂ ಅಲ್ಪ ಅಪರಾಧಗಳನ್ನು ಭಕ್ತ್ಯನುಸಾರವಾಗಿ ಮಹಾಪರಾಧಗಳನ್ನೂ ಮನ್ನಿಸಿ, ಪುಣ್ಯ ಕರ್ಮವನ್ನು ಅನಂತಮಡಿ ಕ್ಷಿಪ್ರಫಲಜನಕವನ್ನಾಗಿ ಮಾಡಿಸಿ, ನಿವೃತ್ತ ಧರ್ಮನಿಷ್ಠರಾದ ನಮ್ಮನ್ನು ಉದ್ಧಾರಿಸುತ್ತಾರೆಂದು ನಂಬಿ, ನಮ್ಮ ಅಂತರಂಗ ಯಾವತ್ಪ್ರಯತ್ನದಿಂದ ಇಂಥ ಮಹದಾಶ್ರಯವನ್ನು ಸಂಪಾದಿಸಬೇಕು. ಸನ್ಯಾಸ ಪದ್ಧತಿಯ ಕೊನೆಯಲ್ಲಿ ಶ್ರೀ ವಿಷ್ಣುತೀರ್ಥರೇ, "ಕರ್ಮವಿಧಿಗಳು ಅನಂತವಾಗಿವೆ ಎಲ್ಲವನ್ನೂ ಆಚರಿಸುವುದು ಕಷ್ಟ, ಅವರವರ ಗುರುಗಳಿಂದ ಆಜ್ಞೆ ಹೊಂದಿ ಯಥಾಯೋಗ್ಯವಾದಷ್ಟು ಆಚರಿಸಬೇಕು, ನಾವೂ ನಮ್ಮ ಗುರುಗಳನ್ನು ಹೀಗೆ ಆಶ್ರಯಿಸಿದ್ದೇವಿ" ಎಂದು ಬರೆದಿದ್ದಾರೆ. ಇನ್ನು ನಮ್ಮ ಪಾಡೇನು? ನಾವೂ ಅದ್ವೈತಾದಿ ದೀಕ್ಷವುಳ್ಳವರನ್ನು ಕೇಳದೆ, ಕೇವಲ ಮಾಧ್ವ ಸಂಪ್ರದಾಯ ನಿರತ ಗುರುಗಳಲ್ಲಿ ಚರ್ಚಿಸಿ ನಮ್ಮ ಯೋಗ್ಯತೆಗೆ ತಕ್ಕಂತೆ ವಿಧಾನ ತಿಳಿದು, ಭಕ್ತಿಯಿಂದ ಅನುಷ್ಠಿಸಿದರೆ ಸಾಕು, ಶ್ರೀಹರಿ ಗುರುಗಳು ನಮ್ಮನ್ನು ಸಂಸಾರದಿಂದ ದಾಟಿಸುತ್ತಾರೆಂದು ಚೆನ್ನಾಗಿ ನಂಬಬಹುದು. ಪ್ರಮಾಣಗಳಿವೆ. ಅಷ್ಟಲ್ಲದೆ ದಾಸರು ಹೇಳಿದರೇ, "ಮತಗಳೆಲ್ಲವೂ ಮಧ್ವಮತ ಸುಸಾರದ ಹಿಂದೆ" ಎಂದು? ಎಂದಾದರೊಂದು ದಿನ ಅವರೂ ಈ ನಮ್ಮ ನಿರ್ಣಯಕ್ಕೆ ಬರುವವರೇ ಎಂದು ನನಗನ್ನಿಸುತ್ತೆ.

ಮುದ್ರಣ ದೋಷ ತುಂಬ ಇದೆಯಲ್ಲವೇ ಎಂದರೆ ಹಾಗಿಲ್ಲ. ಇಷ್ಟು ಕಠಿಣ ವಿಷಯಗಳನ್ನು ಎರಡೇ ತಿಂಗಳಲ್ಲಿ ಪ್ರಿಂಟುಮಾಡಿ ಇಷ್ಟು ಕಮ್ಮಿ ತಪ್ಪಿರುವುದು ಭಾಗ್ಯವೇ ಸರಿ. ಇನ್ನೆಲ್ಲಿ ಮಾಡಿಸಿದ್ದರೂ ಇನ್ನೂ ಹೆಚ್ಚು ತಪ್ಪಾಗುತ್ತಿತ್ತು. ಆದ್ದರಿಂದ ತುಂಬ ಉತ್ಸಾಹ ಪ್ರೀತಿಗಳಿಂದ ಗ್ರಂಥವನ್ನು ತಯಾರು ಮಾಡಿಕೊಟ್ಟ ಶ್ರೀಯುತ ಪ್ರಹ್ಲಾದರಾಯರಿಗೆ ಶ್ರೀ ಗುರುರಾಜರ ಅನುಗ್ರಹವಾಗಲೆಂದು ಆಶಿಸಿ ಪ್ರಾರ್ಥಿಸಿದ್ದೇನೆ. ಅನೇಕ ಪ್ರಾಚೀನ ಗ್ರಂಥಗಳನ್ನು ತೋರಿಸಿ ಸಹಾಯ ಮಾಡಿದ ಶ್ರೀ ಎಂ.

ಆರ್. ಗೋವಿಂದರಾಯರು ಮತ್ತು ಶ್ರೀ ಸಿ. ಕೃಷ್ಣಸ್ವಾಮಿರಾಯರಿಗೆ ನನ್ನ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಕೆಲವು ಕರಡು ಪ್ರತಿಬರೆದು ಸಹಕರಿಸಿದ ಸೌ॥ವಿಜಯಾಮಣಿ, ಸೌ॥ರಮಾಮಣಿ ಎಂಬ ನನ್ನ ಪುತ್ರಿಯರಿಬ್ಬರಿಗೂ ಶ್ರೀಹರಿಗುರುಗಳು ಸೌಭಾಗ್ಯ ವೃದ್ಧಿ ಮಾಡಲಿ.

4. ವಾದಿರಾಜ ಗುರುಗಳ ಋಜುತ್ವ ವಿಷಯದಲ್ಲಿ ಆಧಾರವಾಗಿ ಬ್ರಹ್ಮಾಂಡ ಪುರಾಣಾದಿಗಳಲ್ಲಿ ವಚನಗಳೇನೋ ಇವೆ. ಆದರೆ ಈ ನಮ್ಮ ಗ್ರಂಥದಲ್ಲಿ ಅವುಗಳ ಅಧ್ಯಾಯ, ಪುಟ ಮುಂತಾದ ವಿವರವನ್ನು ನಾವು ಹುಡುಕಿಕೊಟ್ಟಿಲ್ಲ. ಇದಕ್ಕೆ ಕಾರಣವಾಗಿ ಹಿಂದಿನ ಕಥೆಯನ್ನು ಜ್ಞಾಪಿಸಿಕೊಡಬೇಕಾಗಿದೆ. ಶ್ರೀ ಮದಾಚಾರ್ಯರು ತಮ್ಮ ಅನೇಕ ಗ್ರಂಥಗಳಲ್ಲಿ ತಮ್ಮ ತತ್ವಗಳ ನಿರೂಪಣೆಗೆ ಆಧಾರವಾಗಿ ಅನೇಕ ಅಪ್ರಸಿದ್ಧ ಶ್ರುತಿಗಳನ್ನೂ ಸ್ಮೃತಿಗಳನ್ನೂ ಅಭಿದಾನಾದಿ ಕೋಶಗಳನ್ನೂ ಉದಾಹರಿಸಿದ್ದಾರೆ. ಅವರು ಪ್ರತ್ಯಕ್ಷವಾಗಿದ್ದಾಗಲೇ ಜನರಿಗೆ ಇದು ತಿಳಿದಿತ್ತು. ಆದರೆ ಯಾರೂ ಆ ವಚನಗಳು ಕಲ್ಪಿತವೆಂದು ಶಂಕಿಸಲಿಲ್ಲ. ಅವರ ಕಾಲದಿಂದ ಮುಂದೆ ಸುಮಾರು 300 ವರ್ಷಗಳವರೆಗೆ ಅನೇಕ ಅದ್ವೈತ ಪಂಡಿತರೂ ಇತರ ಮತಸ್ಥ ಪ್ರವೀಣರೂ ಹುಟ್ಟಿದ್ದರೂ, ಅವರೆಲ್ಲರೂ ದ್ವೈತ ಮತದ ಸಂಗಡ ಒಪ್ಪಿಗೆ ಕೊಡದೆ ಹೋರಾಡುತ್ತಿದ್ದರೂ, ಶ್ರೀಮದಾಚಾರ್ಯರು ಶೃತಿಸ್ಮೃತಿ ಕಲ್ಪಕರೆಂಬ ಸುಳ್ಳು ಆಪಾದನೆಯನ್ನು ಯಾರೂ ಮಾಡಲಿಲ್ಲ. ಹದಿನೇಳನೆಯ ಶತಮಾನದಲ್ಲಿ ಅದ್ವೈತ ಸಾಧನೆಗೆ ತೊಡಗಿದ ಅಪ್ಪಯ್ಯದೀಕ್ಷಿತರು “ಇದಂ ಪ್ರಥಮ” ವಾಗಿ ಆ ಕೆಟ್ಟ ಆಪಾದನೆಯನ್ನು ಮಾಡಿ, ಆಚಾರ್ಯರು ತಾನೇ ವಾಯುದೇವರೆಂದು ಸುಳ್ಳು ಪ್ರಮಾಣಗಳನ್ನು ಕಲ್ಪಿಸಿ ಹೇಳಿರುವರೆಂದು ಕೂಡ ನಿಂದಿಸಿ ಗ್ರಂಥಗಳನ್ನು ಬರೆದಿದ್ದಾರೆ. ಅವರ ಹಿಂದಿನ ಅದ್ವೈತಿಗಳಿಗೆ ಇಲ್ಲದ ಬುದ್ಧಿ ಅವರಿಗೇಕೆ ಬಂತೆಂಬ ಪ್ರಶ್ನೆಗೆ ಸಮಾಧಾನವೇ ಸಿಕ್ಕುವುದಿಲ್ಲ. ಅಪ್ಪಯ್ಯದೀಕ್ಷಿತರಂತೂ ತಪಸ್ಸಿದ್ಧಿಯನ್ನು ಹೊಂದಿ ಆ ಶ್ರುತಿ ಸ್ಮೃತಿ ವಚನಗಳು ಮೂಲಕೋಶದಲ್ಲಿಲ್ಲವೆಂದು ತಿಳಿದಿರುತ್ತೇನೆಂದು ಬರೆದಿಲ್ಲ. ಅವರು ಅಂಥ ಪ್ರಜ್ಞೆಯನ್ನು ಹೊಂದಿದವರೂ ಅಲ್ಲ. ಸುಮ್ಮನೆ “ಪ್ರಾಮಾಣ್ಯಪರತನ್ತ್ರ” ರೀತಿಯಿಂದ ಕೆಟ್ಟ ಆಪಾದನೆ ಮಾಡಿ ಸಮಾಜದಲ್ಲಿ ತತ್ವ ವಿಚಾರ ವಾತಾವರಣವನ್ನು ಕಲ್ಮಷ ಯುಕ್ತವನ್ನಾಗಿ ಮಾಡಿದರು. ಅದರ ಪರಿಣಾಮ ರೂಪವಾಗಿ ಅನೇಕರಿಗೆ ಶ್ರೀಮದಾಚಾರ್ಯರ ಗ್ರಂಥಗಳಲ್ಲಿ ನಂಬಿಕೆಯೇ ಹೋಯಿತು. ಆ ಗ್ರಂಥಗಳಲ್ಲಿನ ಅಮೌಲ್ಯ ಪ್ರಮೇಯ ರತ್ನಗಳು ಕೋಳಿಯ ಮುಂದೆ ಚೆಲ್ಲಿದ ವಜ್ರಗಳಂತೆ ನಿರರ್ಥಕವಾದವು. ತಮ್ಮ ಮತದ ಬ್ರಹ್ಮನಿರ್ವಿಶೇಷತ್ವವಾದ, ವಿಶ್ವಮಿಥ್ಯಾತ್ವವಾದ, ಅವಾಚ್ಯತ್ವವಾದ ಮುಂತಾದ ಪ್ರಕ್ರಿಯೆಗಳನ್ನು ಉಪಪಾದಿಸುವುದು ಎಷ್ಟೇ ದುರ್ಘಟವಾದರೂ ಈಚೆಗೆ ಶ್ರೀ ಡಾ ಎಸ್. ರಾಧಾಕೃಷ್ಣರನ್ನು ಬಿಟ್ಟರೆ ಯಾವ ಅದ್ವಿತಿಯ ದ್ವೈತ ಮತದಿಂದ ವಾದೋಪಯೋಗಿ ವಿಶೇಷ, ಸತ್ವಾಭಾವ ಅಸತ್ವಾಭಾವಗಳ ವಿರುದ್ಧತೆ, ಮುಂತಾದ ಅವಶ್ಯಕ ನ್ಯಾಯಗಳನ್ನು ಕಲಿಯಲೂ ಇಲ್ಲ, ತಮ್ಮ ಗ್ರಂಥಗಳಲ್ಲಿ ಬಳಸಲೂ ಇಲ್ಲ. ದ್ವೈತ ಮತದಲ್ಲೂ ಎಷ್ಟೋ ಜನಕ್ಕೆ ಅವರ ಗಾಳಿ ಬೀಸಿದಂತೆ ಕಾಣುತ್ತೆ. ಏಕೆಂದರೆ ವಾದಿರಾಜಸ್ವಾಮಿಗಳು ಋಜುಗಳೆಂಬಲ್ಲಿ ಬ್ರಹ್ಮಾಂಡ ಪುರಾಣವುಂಟೆಂದು ವಿಜಯದಾಸರು ಹೇಳಿದರು. ವಾಮನ, ಪಾದ್ಮ, ಬ್ರಹ್ಮ ವೈವರ್ತ, ಬೃಹನ್ನಾರದೀಯ, ಸ್ಕಾಂದ, ಋಕ್ಸಂಹಿತೆಗಳ ವಚನಗಳೂ ಉಂಟೆಂದು 1645 ರಲ್ಲಿಯೇ ಶ್ರೀ ವೇದನಿಧಿಗಳ ಆಜ್ಞೆಯಿಂದ ರಚಿತವಾದ ವಾ.ಗು.ಚ. ಗ್ರಂಥದಲ್ಲೇ ಕಂಡಿದೆ. ಗುರುರಾಜರು ಋಜುಗಳೆಂದು ಶ್ರೀವೇದವೇದ್ಯರೇ 1600 ರಲ್ಲೇ ತಿಳಿಸಿ ಹಾಗೆ ಪೂಜಿಸಿದರು. ಗುರುರಾಜರೇ ಆಖ್ಯಾನವನ್ನು ಪ್ರಕಾಶಪಡಿಸಿ ಕಲ್ಲಿನಲ್ಲಿಯೂ ಕೆಲವು ಶ್ಲೋಕಗಳನ್ನು ಕೊರಿಸಿ ವೇದನಿಧಿಗಳ ಮೂಲಕ 1640 ರಲ್ಲೇ ಸ್ಥಾಪನೆ ಮಾಡಿಸಿದ್ದಾರೆ. ಆಗ ಯಾವ ಪಂಡಿತರೂ ಏನೂ ಹೇಳಲಿಲ್ಲ. ಅನೇಕರು ಅನುಮೋದಿಸಿಯೂ ಬಿಟ್ಟರು. ಹಾಗೆ 250 ವರ್ಷಗಳಾದವು. ವಿವಾದ ಹುಟ್ಟಿದಾಗಲೂ ಶ್ರೀ ಸತ್ಯಪರಾಕ್ರಮರಂಥ ದೊಡ್ಡ ಪಂಡಿತರು ಆ ವಿಷಯದಲ್ಲಿ ವಿವಾದ ಕೂಡದೆಂದು ನಿಷೇಧಿಸಿದರು. ಆದರೂ ಶ್ರೀ ಸತ್ಯ ವೀರತೀರ್ಥ ಸ್ವಾಮಿಗಳು ("ಇದಂ ಪ್ರಥಮ" ವಾಗಿ ಈ ವಿಷಯದಲ್ಲಿ ವಾದವನ್ನೆಬ್ಬಿಸಿದರು. ಎಂದರೆ ತಮ್ಮ ಸಂಬಂಧಿ ಉಪನ್ಯಾಸ ಪತ್ರಿಕಾ ಪುಸ್ತಕ ಪ್ರಕಟನೆ, ಋಜುತ್ವವಾದಿ ಆಚಾರ್ಯರ ಬಹಿಷ್ಕಾರಾದಿಗಳಿಂದ, ಕೇವಲ ಆಗ್ರಹೀ ಜನರ ಮಧ್ಯದಲ್ಲಿ ಅಲ್ಲಲ್ಲಿ ಕ್ಷೌದ್ರ ಕಲಹಗಳಲ್ಲಿ ಕೆಲ ವರ್ಷಗಳ ಹಿಂದೇನೇ ತಲೆತೋರಿಸಿದ್ದ ಅನೃಜುತ್ವಾ ಚರ್ಚೆಗೆ ಮಹತ್ವ ಕೊಟ್ಟು ಅದನ್ನು ಒಂದು ವಿಚಾರಾರ್ಹ ವಾದವನ್ನಾಗಿ ಮಾಡಿಬಿಟ್ಟರು. ತಮ್ಮ ಸ್ಥಾನ ಮಹತ್ವವನ್ನು ಆ ವಾದಕ್ಕೆ ಬೆಂಬಲ ಮಾಡಿದ್ದರಿಂದ ಅದು ಸಾಮಾನ್ಯ ಸಾಧು ಜನತೆಗೆ ಉದ್ವೇಗಕರವಾದ ಭೂತವಾಯಿತು. ಈ ಏಳು ಪುರಾಣ ವಾಕ್ಯಗಳೊಂದೂ ಎಲ್ಲಿಯೂ ಇಲ್ಲವೆಂದು “ಮಾರ್ತಿಕ ಗರ್ವ ನಿರ್ವಾಪಣ” ದಲ್ಲಿ ಶ್ರೀ ಶ್ರೀಗಳವರು ಹೇಳಿ ಪ್ರಸಿದ್ಧ ಪಡಿಸಿದರು. ಜಾಂಖಂಡೀ ವಾದಿರಾಜಚಾರ್ಯರು ಬ್ರಹ್ಮಾಂಡ ಪುರಾಣದ ಮಧ್ಯಭಾಗದ ದ್ವಿತೀಯಾಧ್ಯಾಯದ ವಾಕ್ಯವನ್ನು ನಿರ್ದೇಶಮಾಡಿ "ಚಕ್ಷುಷೀ ಉನ್ಮೀಲ ಪಶ್ಯ' ಎಂದು ಗರ್ಜಿಸಿ ಉತ್ತರವನ್ನು ಕೊಟ್ಟರು. ಇನ್ನೊಬ್ಬರು ಪಂಡಿತರು ಹತ್ತೊಂಭತ್ತು ಪ್ರಶೋತ್ತರ ರೂಪ ಸಂವಾದಾತ್ಮಕ 'ಸಮ್ಮೃತಿಕಾರಿ ಮತ್ತಗಜಾಂಕುಶ' ಗ್ರಂಥ ಒಂದನ್ನು ಬರೆದು ಪ್ರಿಂಟು ಮಾಡಿಸಿ ಶ್ರೀಸತ್ಯ ವೀರ ಸ್ವಾಮಿಗಳವರ ಪ್ರವೃತ್ತಿಯು ತನ್ನ ಪೂರ್ವಸ್ವಾಮಿಗಳ ಆಜ್ಞೆಗೆ ವಿರುದ್ಧವೆಂದೂ ತೋರಿಸಿದರು. ಆದರೂ ಏನೂ ಕಲಹ ಶಾಂತ ವಾಗಲಿಲ್ಲ. 'ಮಾರ್ತಿಕ ಗರ್ವ ನಿರ್ವಾಪಣ' ಎಂಬ ಅವರ ಸಣ್ಣ ಹೊತ್ತಿಗೆ ಯಲ್ಲಿ ಆ ಶ್ರೀ ಶ್ರೀಗಳವರು ಪ್ರಶ್ನೆ ಒಂದಕ್ಕೆ ಉತ್ತರ ಕೊಡುವ ಸಂದರ್ಭದಲ್ಲಿ “ಒಂದು ಗ್ರಂಥದಲ್ಲಿ ಸಿಕ್ಕಿದರೇನಾಯಿತು? ಎಲ್ಲಾ ಗ್ರಂಥಗಳಲ್ಲೂ ಆ ವಾಕ್ಯವಿರಬೇಕು. ನಾವು ಎಲ್ಲಾ ಗ್ರಂಥಗಳನ್ನೂ ತರಿಸಿ ನೋಡಿ ಬಿಟ್ಟಿದ್ದೇವೆ". ಇವರು ಉದಾಹರಿಸುವ ಪ್ರಮಾಣಗಳು ಒಂದೂ ಕಾಣುವುದಿಲ್ಲ” ಎಂದು ಬರೆಯಿಸಿಬಿಟ್ಟರು. ಆಗಿನ ಜನರ ಮನಸ್ಸಿಗೆ ತುಂಬ ಸಂತಾಪವಾಗಿರಬೇಕೆಂದು ಕಾಣುತ್ತೆ. ಏಕೆಂದರೆ ಶ್ರೀ ಸತ್ಯವೀರರ ನಿಲುವನ್ನು ಖಂಡಿಸಲು ಏಳೆಂಟು ಪುಟ್ಟ ಗ್ರಂಥಗಳು ಆ ಕಾಲದಲ್ಲಿಯೇ ಹುಟ್ಟು ತಾಳಿದವು. ಕೆಲವು ಪುಸ್ತಕಗಳ ಹೆಸರನ್ನಾದರೂ ಹೇಳಬೇಕೆನಿಸುತ್ತೆ. ಅವುಗಳು ಮೀಮಾಂಸಾ ಶಾಸ್ತ್ರ ರೀತಿಯನ್ನು ಅವಲಂಬಿಸಿ ವಾದ ರೀತಿಯಾಗಿ ಪ್ರವೃತ್ತವಾಗಿ ಹಿಂದಿನಕಾಲದವರು ಸಂಗ್ರಹಿಸಿಟ್ಟಿದ್ದ ಪ್ರಮಾಣಗಳನ್ನೆಲ್ಲಾ ಪುನಃ ಉದಾಹರಿಸಿ ಬರೆದು ಪ್ರಾಮಾಣ್ಯ ಸಮರ್ಥನೆ ಮಾಡಿರುತ್ತವೆ! ಆದರೂ ಏಕಪಾತ್ರೆಯಲ್ಲಿ ಸಮ ಪೂಜೆ ವಿಷಯದಲ್ಲಿ ವಿವಾದಯುಕ್ತವಾಗಿವೆ. ಶ್ರೀ ರಘುವೀರತೀರ್ಥರ ಅನುಗ್ರಹ ಪಾತ್ರರೂ ಅವರ ಆಜ್ಞಾನುವರ್ತಿಗಳೂ ಆದ ಎಳತ್ತೂರು ಸೇತು ಮಾಧವಾಚಾರ್ಯರೆಂಬುವರು ಬರೆದ “ಶ್ರೀಮದ್ವಾದಿರಾಜಗುರೂಣಾಂ ಋಜುತ್ವ ಪ್ರಮಾಣ ಸಂಗ್ರಹಃ” ಎಂಬುದು ಒಂದು. ಸುಮಾರು 1885 ರಲ್ಲಿ ಬರೆಯಲ್ಪಟ್ಟಿದೆ. ಸಂಸ್ಕೃತದಲ್ಲಿದೆ. ಇನ್ನೂ ಅಮುದ್ರಿತ. ಒಂದಾದರೂ ಮರ್ಯಾದೆ ಮೀರಿದ ಮಾತಿಲ್ಲ. ಶ್ರೀಮದಾಚಾರ್ಯರು

ಬದರಿಯಲ್ಲಿ ಶ್ರೀ ನಾರಾಯಣ ದೇವರು ಮಾಡಿದ ಆಜ್ಞೆಯಿಂದ "ಭಾರತ ತಾತ್ಪರ್ಯ ನಿರ್ಣಯ" ಬರೆದಿರುವಂತೆ ಶ್ರೀವಾದಿರಾಜಗುರುಗಳು ಶ್ರೀವೇದವ್ಯಾಸರ ಆಜ್ಞೆಯಿಂದ "ಲಕ್ಷಾಲಂಕಾರ" ಬರೆದಿದ್ದಾರೆ. "ಕುಲವೃದ್ಧೋ ಗುರುರ್ಮಮ" ಎಂದು "ಸರಸ ಭಾರತೀ ವಿಲಾಸ" ದಲ್ಲಿ ಚತುರ್ಮುಖ ದೇವರನ್ನು ಸ್ತುತಿಸಿ, ಸ್ವರೂಪ ಸೂಚಿಸಿದ್ದಾರೆ. ಆದರೂ "ಪ್ರಜಾಪತೇ ಹಿ ಯತ್ಕುಲೇ ಮನುಷ್ಯವತ್ಪ್ರವರ್ತಂತೇ" ಇತ್ಯಾದಿ ಪ್ರಮಾಣಾನುಸಾರ ಶಿಷ್ಟಾಚಾರ ಪರಿಪಾಲಿಸಿ ವೃನ್ದಾವನಸ್ಥರಾದ ಮೇಲೆಯೇ ಆಖ್ಯಾನಾದಿಗಳಿಂದ ಪ್ರಕಾಶ ಮಾಡಿಕೊಂಡಿದ್ದಾರೆಂದು ಹೇಳಿ ಎಲ್ಲಾ ಪ್ರಮಾಣವಾಕ್ಯಗಳ ಸಂಗ್ರಹವನ್ನೂ ಕೊಟ್ಟಿದ್ದಾರೆ. ಎರಡನೆಯ ಪುಸ್ತಕ ನಾನು ನೋಡಿದ್ದು "ಶ್ರೀಮದ್ವೃಂದಾವನಾಖ್ಯಾನ ಪ್ರಾಮಾಣ್ಯ ಸುದರ್ಶಣ ಪ್ರಾರಂಭಃ" ಎಂಬ ಹೆಸರಿನದು. "ಶ್ರೀ ನರಸಿಂಹಾಚಾರ್ಯ ಸೂನು ಸೇತುಮಾಧವ ಕೃತಂ" ಎಂದಿದೆ. ಶ್ರೀ ವೃನ್ದಾವನಾಚಾರ್ಯರು ಬದುಕಿರುವಾಗಲೇ ಆ ಗ್ರಂಥ ಬರೆಯಲ್ಪಟ್ಟಿದೆ. ವೃನ್ದಾವನಾಖ್ಯಾನದಲ್ಲಿ ಹೇಳಿದ ಭವಿಷ್ಯಗಳು ಈಗ ಸತ್ಯವಾಗಿವೆ ಎಂದು ಉಪಪಾದಿಸಿ ಸಾಧಿಸಿದ್ದಾರೆ. 1850ರ ಸುಮಾರಿನಲ್ಲಿ ಬರೆಯಲ್ಪಟ್ಟಿದೆ ಎನ್ನಬಹುದು. ಸಂಸ್ಕೃತದಲ್ಲಿ ಬರೆದದ್ದು. ಅಮುದ್ರಿತ. ಯಾರನ್ನೂ ನಿರ್ದೇಶಮಾಡಿ ನಿಂದೆಮಾಡಿಲ್ಲ. ಪ್ರಾಮಾಣಿಕ ವಿವರಣೆಯಿಂದ ಚರ್ಚೆಮಾಡಿ ತಮ್ಮ ಗುರುಗಳಿಗೆ ಆಖ್ಯಾನೋಕ್ತ ಇಂದ್ರಪದ ಯೋಗ್ಯತೆಯು ವಿಶ್ವಾಸಾರ್ಹವೆಂದು ಹೇಳಿ ಮುಗಿಸಿದ್ದಾರೆ. ಮೂರನೆಯ ಪುಸ್ತಕವು ಕೋವೆತ್ತೂರು ಮಧ್ವಾರಾಯಾಚಾರ್ಯಕೃತ 'ಋಜುತ್ವ ಸುದರ್ಶಣ' ನಾಮಕವು, "ಶ್ರೀಮದ್ವೃನ್ದಾವನಾಚಾರ್ಯಸ್ತಿಷ್ಠತಾತ್ಸರ್ವದಾಹೃದಿ" ಎಂದು ಸ್ತುತಿಸಿ ಗ್ರಂಥಾರಂಭವಾಗಿದೆ. ಆದ್ದರಿಂದ ಸುಮಾರು 1880 ರಲ್ಲಿ ಬರೆಯಲ್ಪಟ್ಟಿರಬಹುದು. ಅಮುದ್ರಿತ. "ಹಯಾನನ ಹರಕ್ಲೇಶಂ ಲೇಶಂ ದರ್ಶಯ ನಃಪ್ರಭೋ ॥ ಭವನ್ಮುಖಾಮ್ಬುಜೇ ನೃತ್ಯಚ್ಛ್ಯ ತ್ಯಂತಾಖ್ಯ ವಧೂಹೃದಮ್" ॥ ಎಂದು ಸಾಕ್ಷಾತ್ ಹಯಗ್ರೀವ ದೇವರನ್ನು ಉಪದೇಶಿಸು ಎಂದು ಗುರುರಾಜರು ಪ್ರಾರ್ಥಿಸಿರುವುದರಿಂದಲೂ "ವ್ಯಾಸಂ ಶುಭ ಗುಣವಾಸಂ ಶ್ರೀಶಂ ನೌಮಿ ಸತಾಂ ವಶಂ ॥ ಯೋಽಶಂಕೊಮಾಂ ಸ್ವಹೃಲ್ಲೇಶಂ ದಾಸಂ ದರ್ಶಯತಿದೃಶಂ" | ಎಂಬ 'ವಿವರಣವ್ರಣದ' ಆದ್ಯಶ್ಲೋಕದಲ್ಲಿ ವೇದವ್ಯಾಸರನ್ನು ಸೋಪದೇಶಕರೆಂದು ಹೇಳಿರುವುದರಿಂದಲೂ, ಸ್ವಕೃತ ಲಕ್ಷಾಧಿಕ ಸಂಸ್ಕೃತ ಗ್ರಂಥಗಳಲ್ಲಿ ಎಲ್ಲೂ ಟೀಕಾಚಾರ್ಯರಿಗೆ 'ನಮಾಮಿ' ಎಂದು ನಮಸ್ಕಾರ ಹೇಳದೇ, 'ಗುರ್ವರ್ಥದೀಪಿಕೆ' ಗಳಲ್ಲಿ 'ವಸ್ತುತಸ್ತು' ಎಂದು ಅನೇಕ ಕಡೆ ಪೃಥಭಾಷ್ಯಭಾವ ಹೇಳಿರುವುದರಿಂದಲೂ, ಲಕ್ಷಾಲಂಕಾರವನ್ನು 'ಕುರು' ಎಂದ ವೇದವ್ಯಾಸರ ಆಜ್ಞೆಯಾಗಿ ರಚಿಸಿರುವುದರಿಂದಲೂ, ಅವರು ಋಜುಗಳೆಂದು ಸೂಚಿತವಾಗುತ್ತೆ; ಆಖ್ಯಾನದಿಂದ ಮತ್ತು ಪುರಾಣಗಳಿಂದ ಸ್ಪಷ್ಟವಾಗಿಯೇ ತಿಳಿಯುತ್ತೆಂದು ಹೇಳಿ ಆ ಪುರಾಣವಾಕ್ಯಗಳನ್ನೂ ಉದಾಹರಿಸಿದ್ದಾರೆ. ಅನೇಕ ಸಮಾಖ್ಯೆಗಳಿಂದ ಋಜುತ್ವ ನಿಶ್ಚಯವಾಗುವಂತೆ ವಾದಿಸಿದ್ದಾರೆ. ನಾಲ್ಕನೆಯ ಗ್ರಂಥವು ವ್ಯಯ ಸಂವತ್ಸರದಲ್ಲಿ ಬರೆದಿರುವುದು ಎಂದಿರುವುದರಿಂದ 1886ನೆಯ ಇಸವಿಗೆ ಸೇರಿದ್ದು. ಅದರ ಹೆಸರು "ಸಮಪೂಜಾ ವಿಕಲ್ಪ ಪಂಚಕ ಖಂಡನ ದೂಷಣಂ", ಕಾಣಿಯೂರು ಮಠದ ನಾರಾಯಣಾಚಾರ್ಯಕೃತಂ' ಎಂದಿದೆ. ಅದೇ 1886 ನೇ ವರ್ಷದಲ್ಲಿ ಬರೆಯಲಾದ 'ಸಮ ಪೂಜಾ ವಿಕಲ್ಪ ಪಂಚಕ ಖಂಡನೆ' ಎಂಬ ಹೆಸರಿನಿಂದ ಇಕ್ಷುವಳ್ಳಿ ಗ್ರಾಮಸ್ಥ ಪದ್ಮನಾಭ ಉಪಾಧ್ಯಾಯರಿಂದ ಬರೆಯಲ್ಪಟ್ಟ ಕ್ಷುದ್ರ ಗ್ರಂಥಕ್ಕೆ ಖಂಡನೆಯಾಗಿ ರಚಿತವಾದದ್ದು. ಖಂಡ್ಯ ಗ್ರಂಥವು ಕ್ಷುದ್ರವೆಂದು ಏಕೆ ಹೇಳಬೇಕಾಯಿತೆಂದರೆ ನ್ಯಾಯಶಾಸ್ತ್ರದ ವಿಕಲ್ಪರೀತಿಯನ್ನು ಅವಲಂಬಿಸಿ ಅದರಲ್ಲಿ ಅಧಿಕ ವಾಗಾಡಂಬರ ತೋರಿಸಲಾಗಿದೆ. ಪಂಡಿತ ನಾರಾಯಣಾಚಾರ್ಯರ ದೂಷಣ ಗ್ರಂಥವು ವೇದಾಂತ ಪರಿಭಾಷೆಗೆ ಅನುಗುಣವಾಗಿ ಪೂರ್ವಪಕ್ಷ ಗ್ರಂಥದಲ್ಲಿನ ಅನುಮಾನವನ್ನು ಖಂಡನೆ ಮಾಡಿದೆ. ಖಂಡ್ಯ ಗ್ರಂಥದಲ್ಲಿ ಮುಖ್ಯ ಅನುಮಾನವು ನಾಲ್ಕನೆಯದು. "ಭಿನ್ನ ಚೇತನಯೋರೇಕ ಸಾಮಾಗ್ರೀಸಾಧ್ಯ ಪೂಜಯೋಃ ಪರಸ್ಪರೋಚ್ಛಿಷ್ಟಾದಿ ಸಂಬಂಧೇನ ತಾಮಸತ್ವಾಪಾತಾತ್ "ಎಂದಿದೆ. "ತತ್ಸಮತ್ವ ಜ್ಞಾನ ಪೂರ್ವಿಕೇತಿ ಪಂಚಮಸ್ತು ಸ್ಯಾತ್" ಎಂದು ಪಂಚಮ ಪ್ರಕಾರವನ್ನು ಪದ್ಮನಾಭ ಉಪಾಧ್ಯಾಯರು ಒಪ್ಪಿದ್ದಾರೆ. ನಾಲ್ಕನೆಯ ಪ್ರಕಾರದ ಅನುಮಾನವು ಪದ್ಮನಾಭ ಪಂಡಿತರಿಗೆ ದೇವತೆಗಳ ಪ್ರಭಾವವೇ ಗೊತ್ತಿಲ್ಲವೆಂದು ತೋರಿಸುತ್ತೆ. ಆವಾಹಿತ ಒಂದು ಅಗ್ನಿಯಲ್ಲಿ ಅನೇಕ ತರತಮ ಭಾವ ಯುಕ್ತ ದೇವತೆಗಳಿಗೆ ಆಹುತಿ ಕೊಡುವ ಪದ್ಧತಿ ಇದೆ. ಪವಮಾನ ಪದವಾಚ್ಯರಾದ ಆ ದೇವತೆಗಳು ಮುಟ್ಟಿದ್ದೆಲ್ಲಾ ಶುದ್ಧ, ಆದ್ದರಿಂದ ಸಾಮ್ಯ ಒಪ್ಪಿ ಒಂದೇ ಪಾತ್ರೆಯಲ್ಲಿ ಇಬ್ಬರನ್ನು ಕೂಡಿಸಿ ಪೂಜೆ ಮಾಡಬಾರದೆಂಬುದು ಮೌಢ್ಯ ಮೂಲವೆಂದು ನಾರಾಯಣಾಚಾರ್ಯರು ತೋರಿಸಿದ್ದಾರೆ. "ವಾದಿರಾಜ ಪೂಜ್ಯ ಚರಣಾಃ ವಾಣಿಜೇನ ಸಹೈಕಾಸನಾದೌ ನ ಪೂಜ್ಯಾಃ ಅಪ್ರಾಪ್ತ ತತ್ವದತ್ವಾದಿತ್ಯನುಮಾನಸ್ಯ ಶ್ರುತಿ ಸಾಹಾಯ್ಯ ರಹಿತತ್ವಾದಪ್ರಯೋಜಕತ್ವ0| ಶ್ರುತಿ ಸಾಹಾಯ್ಯರಹಿತಂ ಅನುಮಾನಂ ನ ಕುತ್ರಚಿತ್ (ಅದೃಷ್ಟಾರ್ಥೇ) ನಿಶ್ಚಯಾತ್ಸಾಧಯೇದರ್ಥಂ" ಎಂದು ಪ್ರಮಾಣ ಕೊಟ್ಟು ಖಂಡಿಸಿದ್ದಾರೆ. ಅತ್ತೂರು ವೆಂಕಟರಮಣಾಚಾರ್ಯರೆಂಬ ಇನ್ನೂ ಪ್ರೌಢ ವಿದ್ವಾಂಸರು ಪೂರ್ವೋಕ್ತ "ವಿಕಲ್ಪಪಂಚಕ ಖಂಡನೆ"ಯನ್ನು ಇನ್ನೂ ಸೂಕ್ಷ್ಮ ವಾಗಿ ಪರಿಶೀಲಿಸಿ ಸಮಪೂಜೆಯನ್ನು ಮಾಡಬಹುದೆಂದೇ ಸ್ಥಾಪಿಸಿದ್ದಾರೆ. ಅತ್ತೂರಿನವರ ಗ್ರಂಥದ ಹೆಸರು "ಸಮಪೂಜಾ ವಿಕಲ್ಪ ಖಂಡನ ಖಂಡನಂ" ಎಂದಿದೆ. ಬರೆದ ವರ್ಷ ಕೊಟ್ಟಿಲ್ಲ. ಅದೂ 1886-87ರಲ್ಲಿ ಬರೆದಿದ್ದೆ ಎಂದು ಹೇಳಬಹುದು. ಈ ಗ್ರಂಥದಲ್ಲೂ "ಭಿನ್ನ ಚೇತಯೋರೇವ ಸಾಮಾಗ್ರೀಸಾಧ್ಯ ಪೂಜಯೋಃ ಪರಸ್ಪರೋಚ್ಛಿಷ್ಟಾದಿ ಸಂಬಂಧೇನ ತಾಮಸತ್ವಾಪಾತಾತ್"ಎಂಬ ಪದ್ಮನಾಭ ಪಂಡಿತರ ಕ್ಷುದ್ರಾನುಮಾನಕ್ಕೆ ಪ್ರತಿದೂಷಣೆ ಸರಿಯಾಗಿ ಹೇಳಿದ್ದಾರೆ. "ರಮಾಬ್ರಹ್ಮಾದಯೋ ದೇವಾಃ ಸನಕಾದ್ಯಾಃ ಶುಕಾದಯಃ ಶ್ರೀನೃಸಿಂಹ ಪ್ರಸಾದೋಽಯಂ ಸರ್ವೆ ಗೃಹ್ಣಂತು ವೈಷ್ಣವಾಃ" ಇತ್ಯುಕ್ತ್ವಾ ಕೃತತೀರ್ಥ ಸಮರ್ಪಣಸ್ಯಾಪಿ ತಾಮಸತ್ವಾಪತ್ತೇಶ್ಚ ಎಂದಿದ್ದಾರೆ. ವೆಂಕಟರಮಣಾಚಾರ್ಯರು ಲಾತವ್ಯ ಪದದ ವಿಚಾರದಲ್ಲೂ ಸಾಧುವಾಕ್ಯಾರ್ಥಮಾಡಿ ಬ್ರಹ್ಮ ದೇವರಿಂದ ಹಿಂದಿನ 101ನೇ ಋಜುವು ಸಿದ್ಧವಾಗಿ ಕಲ್ಕಿ ಎಂಬ ಹೆಸರಿನಿಂದ ಹುಟ್ಟಿ ಯೌಗಿಕವಾದ ಲಾತವ್ಯ ನಾಮವನ್ನು ಪಡೆಯುತ್ತಾರೆ; ಬ್ರಹ್ಮದೇವರಿಂದ ಹಿಂದಿನ ವಾಯುದೇವರ ಹಿಂದಿನವರು ಲಾತವ್ಯ ನಾಮಕ ರೂಢನಾಮ ಉಳ್ಳವರಾಗಿ ವಾಯುಪದಕ್ಕೆ ಸಾಧನೆ ಮಾಡುತ್ತಾರೆಂದು ನಿಶ್ಚಯ ನಿರೂಪಿಸಿ ಎಲ್ಲಾ ಪ್ರಮಾಣಗಳಿಗೂ ಸುಧಾ ಸನ್ಯಾಯರತ್ನಾವಳಿಗಳಿಗೂ ಸಮನ್ವಿತ ತಾತ್ಪರ್ಯ ತೋರಿಸಿದ್ದಾರೆ. ಈ ಸಂದರ್ಭದಲ್ಲಿ ಇವರು ಗಾರುಡ, ಬ್ರಹ್ಮ ವೈವರ್ತ, ಸ್ಕಾಂದ, ಪಾದ್ಮ , ವಾಮನ, ಋಕ್ಸಂಹಿತಾದಿ ಎಲ್ಲಾ ಪೂರ್ವ ಪ್ರದರ್ಶಿತ ಪ್ರಮಾಣಗಳನ್ನೂ ಬಳಸಿದ್ದಾರೆ. ಇವರು ಭಿನ್ನ ಭಿನ್ನ ಪಾತ್ರೆಯಲ್ಲೂ ಇಟ್ಟು ಪೂಜಿಸಬಹುದೆಂದು ಒಪ್ಪಿದರೂ,

ಋಜುತ್ವವೆಂಬ ಪ್ರಧಾನ ತತ್ವದಲ್ಲಿ ನಿಶ್ಚಲತಾತ್ಪರ್ಯವುಳ್ಳವರು. ಕಾಣಿಯೂರು ಮಠದ ನಾರಾಯಣಾಚಾರ್ಯರೂ ಹಾಗೇ ನಂಬಿಕೆ ತೋರಿಸಿ ಆ ಪುರಾಣ ಸಂಹಿತಾ ವಾಕ್ಯಗಳನ್ನು ಉದಾಹರಿಸಿದ್ದಾರೆ. ಹೀಗೆ ಐದು ಸಾಮ್ಯ ಪಕ್ಷ ಗ್ರಂಥಗಳಾದವು. ಪದ್ಮನಾಭ ಪಂಡಿತರೂ ವಾದಿರಾಜ ಋಜುತ್ವವನ್ನು ಒಪ್ಪಿದ್ದಾರೆ. ವಾಯು ಸಾಮ್ಯತೆಯಿಂದ ಪೂಜಿಸಬಾರದೆನ್ನುತ್ತಾರೆ. ಅಂತೂ ಆರು ಪುಸ್ತಕಗಳೂ ಗುರುರಾಜ ಋಜುತ್ವ ವಿಶ್ವಾಸ ಪಕ್ಷಕ್ಕೆ ಸೇರಿದವು. ಇನ್ನು ಎಷ್ಟೋ ಗ್ರಂಥಗಳಲ್ಲಿ ಗುರುರಾಜರ ಭಕ್ತರಿಗೆ ಹೊಟ್ಟೆ ತುಂಬುವಷ್ಟು ಸಾತ್ವಿಕ ಚರ್ಚೆ ಮತ್ತು ಸಾಧು ನಿಶ್ಚಯಗಳಿವೆ[1 ಆನಂದತೀರ್ಥಾಚಾರ್ಯರೆಂಬುವರು ಸುಮಾರು 1886 ರಲ್ಲಿ ರಚಿಸಿದ "ವಾದಿರಾಜ ಋಜುತ್ವ ಮಲ್ಲಿಕಾ" ಜ್ಞಾಪಕಕ್ಕೆ ಬರುತ್ತೆ]. ಎಷ್ಟಿದ್ದರೂ ಕೆಲವು ಜನ ಗುರುರಾಜರು ಋಜುಗಳೆಂದು ಒಪ್ಪುವುದಿಲ್ಲ. ಕೆಲವರು ಆ ವಿಚಾರಕ್ಕೆ ಹೋಗಬಾರದು. ಎನ್ನುತ್ತಾರೆ. ಅಷ್ಟೇಕೆ! ಸಾಮಾನ್ಯವಾಗಿ ಚರ್ಚಾಯೋಗ್ಯವಾಗಿರುವ ವಿಷಯಗಳಲ್ಲೂ ವೃದ್ಧ ಜನರಾದರೂ ಮಧ್ವಶಾಸ್ತ್ರೋಕ್ತ ವಿಚಾರ ರೀತಿಯನ್ನನುಸರಿಸಿ ಕಾಲ ಮುಹೂರ್ತಗಳನ್ನು ನಿರ್ಣಯಿಸಿ ಕರ್ಮಾನುಷ್ಠಾನ ಮಾಡಬೇಕೆಂಬ ಉತ್ಸಾಹವನ್ನು ತೋರಿಸುತ್ತಿಲ್ಲ. ಆರ್ಯಮಾನ ಪಂಚಾಂಗ ಸಿಕ್ಕದ ಕಾಲದಲ್ಲಿ ಅದಕ್ಕೆ ಸರಿಯಾಗಿ ಘಳಿಗೆ ಲಭಿಸುವಂತೆ, ವೃದ್ಧ್ಯಾದಿ ಪಕ್ಷದಲ್ಲಿ ಸೇರಿಸಬೇಕಾದ ಘಳಿಗೆಗಳನ್ನು ತಿಳಿಸುವ, ಮುನ್ನೂರು ವರ್ಷದ ಹಿಂದೆ ಮಾಡಿಟ್ಟ ಪದಕಗಳನ್ನು, ಎಲ್ಲಾ ಪಂಚಾಂಗಗಳೂ ಎಲ್ಲೆಲ್ಲೂ ಸಿಕ್ಕುವ ಈ ಕಾಲದಲ್ಲಿ, ಇನ್ನೂ ಅನೇಕರು ಬಿಟ್ಟಿಲ್ಲ. ಅದರ ಪರಿಣಾಮವಾಗಿ ಅತಿವೃದ್ಧಿ ಪಕ್ಷದಲ್ಲಿ ಹಿಂದಿನ ದಿನ ಏಕಾದಶೀ ಆಗಿ ಅನಿಷ್ಟ ಬಂತೋ ಏನೋ ಎಂಬ ಭೀತಿ ಮಾಧ್ವರಿಗೆ ತಪ್ಪಿಲ್ಲ. ಕೊನೆಗೆ ಅನಂತ ಪೂಜೆಗೆ ಎರಡು ಕಲಶವಿಡಬೇಕೇ, ಯಮುನೆಯ ಕಲಶದಲ್ಲೇ ಶೇಷನನ್ನಿಟ್ಟು ಅವನ ಮೇಲೆ ಅನಂತನನ್ನು ಕೂರಿಸಿ ಒಂದೇ ಕಲಶದಲ್ಲಿ ಪೂಜಿಸಬೇಕೇ ಎಂಬ ವಿಷಯದಲ್ಲಿ ಕೂಡ ವೈಷ್ಣವರಲ್ಲಿ ಐಕಮತ್ಯವಿಲ್ಲ. "ಸಂಕಟವಾದರೂ ಪಡುತ್ತೇವೆ, ಹೆಚ್ಚು ವಿಚಾರ ಬೇಡ, ಅಂಥ ನಿರ್ಣಯ ಮಾಡುವುದಕ್ಕೆ ನಾವೇನು ಸರ್ವಜ್ಞರೇ? ಹೆಚ್ಚು ವಿಚಾರಮಾಡಿ ಒಂದು ಪಕ್ಷಕ್ಕೆ ಗದಾಪ್ರಹಾರ ಕೊಟ್ಟಂತೆ ವ್ಯಥೆಯನ್ನೇಕೆ ಉಂಟುಮಾಡಬೇಕು?" ಇತ್ಯಾದಿ ರೀತಿಯಾಗಿ ತಾಮಸ ಉದಾಸೀನತೆಯನ್ನು ಹೊಂದಿರುವ ಜನರ ಮಧ್ಯದಲ್ಲಿ ಒಂದು ಪಕ್ಷಕ್ಕೆ ಸಂಬಂಧಪಟ್ಟ ಎಲ್ಲಾ ಪುರಾಣ ವಾಕ್ಯಗಳನ್ನೂ ಹುಡುಕಿ ಕಂಡುಹಿಡಿದು ಪ್ರಮಾಣ ಬಾಹುಳ್ಯತೆಯನ್ನು ಸಾಧಿಸಬೇಕೆಂಬ ಪರಮೋತ್ಸಹವು ಅಂಕುರಿಸುವುದಿಲ್ಲ. ಅಂಕುರಿಸಿದರೂ ಅದುಮಿಹೋಗಿ ಬೆಳೆಯಲಾರದು. ವಾದಿರಾಜ ಗುರುಗಳೇ ತಮ್ಮ ಸ್ವರೂಪವನ್ನು ತಿಳಿಸಿಬಿಟ್ಟಿದ್ದರೆ ವಿವಾದ ಬರುತ್ತಿರಲಿಲ್ಲವೆಂದು ಪ್ರಭಂಜನರು ಹೇಳಿದ್ದಾರೆ. ಅದಕ್ಕೂ ನಾನು ಒಪ್ಪುವುದಿಲ್ಲ. ಏಕಾದಶೀ ವಿಷಯವಲ್ಲಿ ಮಧ್ವಗುರುಗಳೇ ಪಂಡಿತಾಚಾರ್ಯರಿಗೆ "ದ್ವೇಕಲಿತ್ತೀ" ಮುಂತಾದ ಪ್ರಮಾಣ ನಿರೂಪಿಸಿದ್ದಾರೆಂದು ಹೇಳಿ ಆ ಶ್ಲೋಕದ ವಿವಕ್ಷಿತಾರ್ಥವನ್ನು ವಾದಿರಾಜ ಗುರುಗಳು ತಿಳಿಸಿಲ್ಲವೇ? ಅದೆಷ್ಟು ಜನ ಅವರ ಸ್ಪಷ್ಟ ಹೇಳಿಕೆಯಿಂದ ಲಾಭ ಪಡೆದಿದ್ದಾರೆ? ಆಗ್ರಹಯುಕ್ತ ಜನರಿಗೆ ಮಧ್ವಾಚಾರ್ಯರ ಸಾಕ್ಷಾತ್ ಸ್ಪಷ್ಟ ವಚನವು ಅಲಂಕಾರಿಕವಲ್ಲದ ಭಾಷೆಯಲ್ಲಿದ್ದರೆ ನಂಬಿಕೆಗೆ ಅರ್ಹವೇ ಹೊರತು, ತದ್ಭಿನ್ನ ಸರ್ವ ವಿಷಯದಲ್ಲೂ ತಮಗೆ ತೋರಿದ್ದೇ ಒಂದು ದಾರಿಯಾಗಿ ಏತಕ್ಕಾಗಬಾರದು ಎಂಬ ಭಾವವು ಜಾಗರೂಕವಾಗಿರುತ್ತೆ. ಅಂಥ ಕಾಲದಲ್ಲಿ ಅವರ ವಿರೋಧಿಗಳು ಕಟುಭಾಷೆಯನ್ನು ಉಪಯೋಗಿಸಿ ಖಂಡಿತ ಭಾಷೆಯಲ್ಲಿ ಖಂಡನ ಗ್ರಂಥವನ್ನೇನಾದರೂ ಬರೆದರೆ ಆ ಪೂರ್ವಪಕ್ಷದವರ ಆಗ್ರಹವು ಶತಾಧಿಕವಾಗಿ ಪ್ರಜ್ವಲಿಸಿ ಅವರ ವಾಕ್ಯಾರ್ಥಗಳ ಗುಂಪು ಒಂದು ಪ್ರತ್ಯೇಕ ಮತವಾಗಿಯೇ ಉಳಿದುಹೋಗುತ್ತೆ. ಖಂಡನ ಗ್ರಂಥಕಾರರ ಯತ್ನ ತತ್ಕಾಲದಲ್ಲಿ ನಿಷ್ಫಲವೇ. ಪ್ರಕೃತ ಶ್ರೀ ಸತ್ಯವೀರರ ವೈಯುಕ್ತಿಕ ದ್ವೇಷ ಶೈಲಿಯು ಹೆಚ್ಚಿ ವಿಜೃಂಭಿಸಿದ್ದಕ್ಕೆ ಅವರ ಪ್ರತಿಪಕ್ಷಿಗಳಾದ ಜಂಖಂಡಿ ಆಚಾರ್ಯರ ಮೆಣಸಿನಕಾಯಿ ಶುಂಠಿಗಳಿಂದ ತುಂಬಿದ ಚೇಲದಂಥ ಅವರ ದಿವ್ಯ ಗ್ರಂಥಗಳ ಶೈಲಿಯೂ ಒಂದು ಕಾರಣವೆಂದು ನಾನು ಊಹಿಸಿದ್ದೇನೆ. ಉಭಯ ಪಕ್ಷಗಳಿಗೂ ಮನಸ್ತಾಪವು ವೈಯುಕ್ತಿಕವಾಗಿಯೇ ಹಚ್ಚಿಹೋದದ್ದರಿಂದ ಜನತೆಯ ದುರ್ದೈವದಿಂದ ಸದ್ಧರೀಚೀನವಾಗಿ "ವಾದಿರಾಜ ಗುರುಗಳು ಋಜುಗಳಲ್ಲವೇ ಅಲ್ಲ" ವೆಂಬ ವಾದವೂ, "ಋಜುಗಳೋ ಅಲ್ಲವೂ ಆ ವಿಚಾರ ಹಾಗಿರಲಿ" ಎಂಬ ವಾದವು, ನಿರವಕಾಶ ನಿರ್ಣಾಯಕವಿದ್ದರೂ ಹಾಗೇ ಉಳಿದೇ ಉಳಿಯಲು ಕಾರಣವಾಯಿತು. ತಥಾಚ ಈಗ ಒಂದೆರಡು ಪುರಾಣ ವಾಕ್ಯಗಳನ್ನು ನಾನು ನಿರ್ದಿಷ್ಟ ಸ್ಥಳದಲ್ಲಿರುವುದನ್ನು ತೆಗೆದು ಬರೆದರೂ, ಈ ಆಗ್ರಹಯುಕ್ತ ಪಕ್ಷವು ಸಾಯುವುದೇ ಇಲ್ಲ. ಎಲ್ಲಾ ಊರಿನ ಎಲ್ಲಾ ಗ್ರಂಥಗಳಲ್ಲೂ ತೋರಿಸಬೇಕೆಂಬ ಬೇಡಿಕೆಯು ಅವಶಿಷ್ಟವಾಗಿಯೇ ಉಳಿಯುತ್ತೆ. ಅಥವಾ ಇನ್ನಾವುದಾದರೂ ಅನವಶ್ಯಕ ಬೇಡಿಕೆ ತಲೆಎತ್ತುತ್ತೆ. "ಋಜುತ್ವ ಮಂಡನ"ಕಾರರಾದ ಶ್ರೀ ಲಕ್ಷ್ಮೀಂದ್ರತೀರ್ಥರು ತಾವು ಕೆಲವು ವಾಕ್ಯಗಳನ್ನು ಮೈಸೂರಿನ ಲೈಬ್ರರಿಯ ಗ್ರಂಥಗಳಲ್ಲಿ ನೋಡಿದುದಾಗಿಯೂ ಅಷ್ಟು ಮಾತ್ರವನ್ನು ಪ್ರಚಾರ ಮಾಡಿದರೆ ಅವುಗಳ ಸ್ವರೂಪ ಹಾನಿಯೇ ಆಗಬಹುದೆಂದು ಪ್ರಕೃತಾತ್ಯಂತಾನವಶ್ಯಕವಾದ ಪುರಾಣವಾಕ್ಯ ಶೋಧನೆಗೆ ಮನಸ್ಸು ಮಾಡಲಿಲ್ಲವೆಂದೂ ಅಪ್ಪಣೆ ಕೊಟ್ಟರು. ಆ ಅಭಿಪ್ರಾಯಾನುಸಾರ ಈಗ, ದುರಾಗ್ರಹಿಗಳನ್ನು ಪರಿವರ್ತಿಸಲಾಗದಿದ್ದರೂ ದಬಾಯಿಸುವಂಥ, ಸಮಗ್ರ ಶೋಧನೆ ಮಾಡಬೇಕಾದರೆ ಪ್ರಪಂಚದಲ್ಲಿ ಈ ಏಳು ಪುರಾಣ ಪ್ರತಿಗಳು – ಬೃಹನ್ನಾರದೀಯ, ಋಕ್ಸಂಹಿತಾ, ಸ್ಕಾಂದ, ಪಾದ್ಮ, ವಾಮನ, ಬ್ರಹ್ಮ ವೈವರ್ತ, ಬ್ರಹ್ಮಾಂಡ - ಎಷ್ಟು ಉಳಿದಿವೆ? 1640 A.D. ಯಲ್ಲಿ ಎಷ್ಟಿದ್ದವು? 1640ರಲ್ಲಿ ಇದ್ದ ಗ್ರಂಥಗಳೆಲ್ಲಾ ಈಗ ಇರುತ್ತವೆಯೇ? ಎಲ್ಲೆಲ್ಲಿ ಅವು ಇವೆ? ಕೆಲವು ನಷ್ಟವಾಗಿದ್ದರೆ ಹೇಗೆ ಏತಕ್ಕೆ ನಷ್ಟವಾದವು? ಈಗಿರುವ ಅವೆಷ್ಟರಲ್ಲಿ ಈ ವಾಕ್ಯಗಳು ಸಿಕ್ಕುತ್ತವೆ? ಇತರ ಪುಸ್ತಕಗಳಲ್ಲಿ ಸಿಕ್ಕದಿರಲು ಕಾರಣವೇನು? ಕೊನೆಗೆ ಸದಾಚಾರಸ್ಮೃತಿ ವ್ಯಾಖ್ಯಾನದಲ್ಲಿ ಶ್ರೀನಿವಾಸತೀರ್ಥರು ಉದಾಹರಿಸಿರುವ ಪಂಚರಾತ್ರಾಗಮ ವಾಕ್ಯಗಳೆಲ್ಲಿ ಹೋದವು? ಇತ್ಯಾದಿ ಎಲ್ಲಾ ವಿವರಗಳು ತಿಳಿಯುವಂತೆ ಕೂಲಂಕುಷವಾದ ತನಿಖೆಯನ್ನು ಸರ್ವ ಕೋಶಗಳನ್ನೂ, ನೋಡಿ ನಡೆಯಿಸಬೇಕು. ಅಂತೂ ವೇದನಿಧಿಗಳು, ರಾಮಚಂದ್ರಪಂಡಿತರು, ಋಜುತ್ವ ಚಂದ್ರೋದಯಕಾರರೇ ಮುಂತಾದವರೆಲ್ಲರೂ ವಂಚಕರೆಂದಾಗಲೀ, ಅಂಥ ಪರಂಪರೆಯಿಂದ ಯಾವುದೋ ಹಿಂದಿನ ಸುಳ್ಳು ಸಂಗ್ರಹವನ್ನು ನೋಡಿ, ಈ ವಾಕ್ಯಗಳನ್ನು ಉದಾಹರಿಸಿದ್ದಾರೆಂದಾಗಲೀ ಊಹೆಯಿಂದಲೇ ನಿಶ್ಚಯಿಸಿ, ಅವೆಲ್ಲವೂ ಕಲ್ಪಿತವು, ಅಪ್ರಮಾಣಗಳು ಎಂದು ನಿರ್ಣಯ ಮಾಡಿಬಿಡಬಾರದು. ಅವರು ತಾಮಸ ಜನರಲ್ಲ. ಅಂಥ ನಿರ್ಣಯವು ಮಧ್ವ ಸಿದ್ಧಾಂತಕ್ಕೆ ವಿರುದ್ಧ. ಕೇವಲ ಪರತಸ್ತ್ವ ರೀತಿಯನ್ನನುಸರಿಸುವ ಬೌದ್ಧ ತತ್ವದ ರೀತಿಯಾಗುತ್ತೆ. ಹೇಗಾದರೂ ಕಷ್ಟಪಟ್ಟು ಆ ಕೂಲಂಕುಷ ವಿಮರ್ಶೆಯನ್ನು ಮಾಡಿ ಉದಾಹೃತ ವಾಕ್ಯಗಳ ಮೂಲನೆಲೆಯನ್ನು ಗೊತ್ತುಹಚ್ಚಲು ನನಗೆ ಸಾಕಷ್ಟು

ಓಡಾಡುವ ಶಕ್ತಿಯಿಲ್ಲ. ವಯಸ್ಸೇ ಮುಂತಾದ ಔಪಾಧಿಕ ಕಾರಣಗಳಿಂದ ಬಹುವಿಧ ಜನರಿಂದ ಕೂಡಿಕೊಂಡು ಪರಮೋತ್ಸಾಹದಿಂದ ಅಸಂಖ್ಯಾತ ಕೋಶಗಳಲ್ಲಿ ಶೋಧನೆ ಮಾಡಲು ಅಸಾಧ್ಯವಾಗಿದೆ. ಇನ್ನು ಅನೇಕ ತರುಣ ಗುರುರಾಜ ಭಕ್ತರು ಒಂದು ಸಂಘ ಮಾಡಿಕೊಂಡು, ಈ ಕಾರ್ಯವನ್ನು ಮಾಡಿ ಗುರು ಕೃಪೆಗೆ ಪಾತ್ರರಾಗಲಿ, ನನ್ನ ಒಬ್ಬನ ಯತ್ನದಿಂದಲೇ ಎಲ್ಲಾ ಪ್ರಮೇಯ ಹೊರಬೀಳಬೇಕಾದ್ದೇನಿದೆ ಎಂದೂ ಸಹ ಚಿಂತಿಸಿ ಶಕ್ಯವಾದಷ್ಟು ಮಾತ್ರ ನೆರವೇರಿಸಿ ಗ್ರಂಥವನ್ನು ಮುಗಿಸಲು ಸಜ್ಜನರ ಅಪ್ಪಣೆ ಬೇಡಿದ್ದೆನೆ. ಹಾಗಾದರೆ ಋಜುತ್ವ ವಿಷಯದಲ್ಲಿ ಪ್ರಾಮಾಣ್ಯ ನಿಶ್ಚಯ ಹೇಗೆ ಎನ್ನುವ ಹಾಗಿಲ್ಲ. ಒಂದು ಶಾಖೆಯಲ್ಲಿ ಹರಿಸರ್ವೋತ್ತಮನೆಂದು ಹೇಳಿ ಇನ್ನೊಂದು ಶಾಖೆಯಲ್ಲಿ ಹರಸರ್ವೋತ್ತಮನೆಂದು ವೇದವೂ ಹೇಳುವುದಿಲ್ಲ. "ಗತಿಸಾಮಾನ್ಯಾತ್" ಎಂದು ಸಿದ್ಧಾಂತ. ಅತೀಂದ್ರಿಯ ವಿಷಯದಲ್ಲಿ ಪ್ರವೃತ್ತವಾದ ಯಾವ ಒಂದು ಪ್ರಮಾಣವೂ ಇನ್ನೊಂದಕ್ಕೆ ವಿರುದ್ಧವಾಗಿ ಹೇಳುವುದಿಲ್ಲ. ಒಂದು ನಿರ್ದೋಷ ಕಣ್ಣಿಂದ ತಿಳಿಯಲ್ಪಟ್ಟ ಘಟವು ಅನೇಕಟ್ಟ ಸಮೀಚೀನ ಕಣ್ಣುಗಳಿಂದ ನೋಡಲ್ಪಟ್ಟರೂ ಘಟವೇ. ಒಂದೂ ಶುದ್ಧವಾದ ಪ್ರಮಾಣವೇ ಸಿಕ್ಕದೆ ಇರುವ ಸಂದರ್ಭದಲ್ಲಿ ಅವುಗಳಿಂದ ತಿಳಿಯಲ್ಪಡತಕ್ಕ ವಿಷಯಗಳಲ್ಲಿ ಕ್ವಚಿತ್ ಪ್ರಮಾಣ ಬಾಹುಳ್ಯವು ಅವಶ್ಯವಾಗಿ ಕಂಡು ಬಂದರೂ, ಜ್ಞಾನ ಮಾರ್ಗದಲ್ಲಿ ಜ್ಞಾತವ್ಯ ಪ್ರಮೇಯಗಳನ್ನು ಶುದ್ಧ ಮನಸ್ಕನು ಒಂದು ನಿರ್ದಿಷ್ಟ ಪ್ರಮಾಣದಿಂದ ತಿಳಿದರೂ ಸುದೃಢ ನಿಶ್ಚಯವನ್ನು ಹೊಂದಲು ಶಕ್ಯವೇ ಆಗುತ್ತೆಂಬುದು ಸರ್ವರಿಗೂ ಅನುಭವ ಸಿದ್ಧವಾಗಿದೆ. ಮತ್ತು ಅದೇ ಮಧ್ವಶಾಸ್ತ್ರ ಸಮ್ಮತವೂ ಆಗಿದೆ. ಹೀಗಿರುವಲ್ಲಿ ನಮಗೆ ಎಂಟು ವಿಧವಾದ ಪ್ರಮಾಣ ರಾಶಿಗಳು ಶ್ರೀ ಗುರುರಾಜರ ಋಜುತ್ವವನ್ನು ಒಂದೊಂದೂ ನಿಃಶ0ಕವಾಗುವಂತೆ ಪ್ರದರ್ಶಿಸುತ್ತಿರುವಾಗ ಪೂರ್ವೋಕ್ತ "ನಿರ್ಣಯ ಸದ್ಭಾವೇಪಿ ದುರಾಗ್ರಹಃ; ಗುರು ಸಂಪ್ರದಾಯ ವಿರುದ್ಧ "ತ್ವಾದುದಾಸೀನತಾ" ಎಂಬ ಎರಡು ಕಾರಣಗಳಿಂದ ಮನಸ್ಸು ಕಲುಷಿತವಾಗಿ ಕೆಡದಿದ್ದ ಪಕ್ಷದಲ್ಲಿ ಯಾವ ವಿಚಾರಶೀಲ ಮಾಧ್ವನಿಗೆ ನಿಃಸಂಶಯ ನಿಶ್ಚಯವು ಹುಟ್ಟುವುದಿಲ್ಲ? ಆದ್ದರಿಂದ ಸುಹೃದ್ಭಾವ ಯುಕ್ತರಾದ ಗುರುರಾಜ ಭಕ್ತರಿಗೆ ಇಷ್ಟು ಪ್ರಮಾಣಗಳು ಬೇಕಾದಷ್ಟು. ಅದರಲ್ಲೂ ಈ ಪ್ರಮಾಣ ವಿಚಾರ ರೀತಿಯು ಹೀಗೇ ಇರಬೇಕು ಎಂದು ಮೊದಲಿನ ಐದಾರು ಅಧ್ಯಾಯಗಳಲ್ಲಿ ದಿಕ್ದರ್ಶನ ಮಾಡಲಾಗಿದೆ. ಆದ್ದರಿಂದ ಈ ಅಲ್ಪ ಸೇವೆಯಿಂದ ಉಪಕಾರವೇ ಆದಂತೆ ಭಾವಿಸಿ ಸಾಸುವೆ ಅರ್ಪಿಸಿದ ಭಕ್ತನನ್ನು ಗುರು ರಾಘವೇಂದ್ರಸ್ವಾಮಿಗಳು ಸರ್ವಸ್ವದಾನ ಕೊಟ್ಟಂತೆ ತಿಳಿದು ಅನುಗ್ರಹಿಸಿದಂತೆ ಸಜ್ಜನ ವೈಷ್ಣವರು ನನ್ನನ್ನು ಅನುಗ್ರಹಿಸಬೇಕೆಂದು ಪ್ರಾರ್ಥಿಸಿ ಈ ಅವತಾರಿಕೆಯನ್ನು ಅವರ ಚಿತ್ತಸ್ಥ ಶ್ರೀಹರಿಗೆ ಸಮರ್ಪಿಸಿರುತ್ತೇನೆ. ಗುರುರಾಜ ಸೇವಿತರಾದ ಜ್ಞಾನರಾಶಿ ಶ್ರೀವೇದವ್ಯಾಸರು ಇದನ್ನು ಪೂಜೆ ಎಂದು ಭಾವಿಸಿ ಪ್ರಸನ್ನರಾಗಿ ನನ್ನನ್ನು ಉದ್ಧರಿಸಲೆಂದು ಪುನಃ ಪುನಃ ಪ್ರಾರ್ಥಿಸುವ ಸದ್ವೈಷ್ಣವ ಸೇವಕ.

**ಹೆಚ್. ಸುಬ್ಬರಾವ್**

**36. ಕೃಷ್ಣರಾಜೇಂದ್ರ ವನಂ, 4 ನೇ ಕ್ರಾಸ್, ಮೈಸೂರು-4,**

**20-1-1972**

ಶ್ರೀಃ॥ ನರಸಿಂಹೋऽಖಿಲಾಜ್ಞಾನಮತಧ್ವಾಂತದಿವಾಕರಃ।

ಜಯತ್ಯಮಿತ ಸಜ್ಞಾನ ಸುಖಶಕ್ತಿ ಪಯೋನಿಧಿಃ॥

# ಶ್ರೀಮದ್ವಾದಿರಾಜಋಜುತ್ವ ಸಿದ್ಧಾಂತ

1ಶ್ರೀಮದ್ವಾದಿರಾಜತೀರ್ಥ ಋಜುತ್ವ ಸಿದ್ಧಾಂತ ಬರೆಯಲಿಕ್ಕೆ ನಿರ್ವಿಘ್ನಮಸ್ತು।

1 ಶ್ರೀ ಗುರುಭ್ಯನಮಃ। ಹರಿಃ ಓಂ।

## ಅಧ್ಯಾಯ 1

### ಋಜುತ್ವ ವಿಚಾರದ ಅವಶ್ಯಕತೆ

1. ಅಥಾತೋ ವಾದಿರಾಜಗುರು ಋಜುಸ್ತತ್ವ ವಿಚಾರಃ ಕರ್ತವ್ಯಃ। ಎಂದರೆ ಸಾಧನ ಭೂಮಿಯಲ್ಲಿ ವೈಷ್ಣವ ದ್ವಿಜದೇಹ ಪ್ರಾಪ್ತಿಯಾಗಿರಲಾಗಿ ವಿಷ್ಣು ಭಕ್ತಿ, ಶಮದಮಾದಿ ಸಂಪತ್ತು, ಮುಮುಕ್ಷಾ, ಮುಂತಾದ ಸಾಧನ ಉಪಯೋಗಿ ಗುಣಗಳು ಯಥಾಯೋಗ್ಯ ಬಂದಿರಲಾಗಿ, ತತ್ರಾಪಿ ವೃನ್ದಾವನಾಚಾರ್ಯಸಂಪ್ರದಾಯಸ್ಥ ಸಜ್ಜನ ಸಂಗತಿಯಿಂದ ಅದೃಷ್ಟನಾಮಕ ಪರಮಾತ್ಮನ ಅನುಗ್ರಹದಿಂದ ಸ್ವಾಪ್ನವೃನ್ದಾವನಾಖ್ಯಾನಾದಿಗಳಲ್ಲಿ ಹೇಳಲ್ಪಟ್ಟ ವಾದಿರಾಜಗುರುಗಳ ಮಹಿಮೆಯು ಕಿವಿಗೆ ಬಿದ್ದಾಗ, ಅತಃ-ಪ್ರಾಪ್ತ ಪರಿತ್ಯಾಗಾದಿಗಳಿಂದ ಆಗುವ ಪ್ರತ್ಯವಾಯವು ತಪ್ಪೋಣವೆಂಬ ಪ್ರಯೋಜನವಿರುವುದರಿಂದ, ನಿರ್ವಿಘ್ನ ಮಧ್ವಶಾಸ್ತ್ರಾಭ್ಯಾಸ, ಭಕ್ತಿವೃದ್ಧಿ ಮುಂತಾದ ಸಾಧನ ಸಂಪೂರ್ತಿ, ಬಂದ ಪುಣ್ಯ ದೈತ್ಯಾಪಹಾರವಾಗದೇ ಇರೋಣ, ಸರ್ವಾಭೀಷ್ಟ ಪ್ರಾಪ್ತಿ, ವಿಶೇಷ ಫಲ, ಅಪರೋಕ್ಷಸಿದ್ಧಿಗಳೆಂಬ ಪ್ರಯೋಜನವಿರುವುದರಿಂದ ವಾದಿರಾಜಗುರುಗಳು ಲಾತವ್ಯ ಋಜುದೇವತೆಯ ಅವತಾರವೆಂದು ತಿಳಿದು ಯಥಾಶಕ್ತಿ ಸೇವೆ ಮಾಡಲೇಬೇಕು, ಅವರ ಋಜುತ್ವವನ್ನು ತಿಳಿಯಲೇ ಬೇಕು, ಅಧಿಕಾರಾನುಸಾರ ಸೇವೆಮಾಡಲೇಬೇಕೆಂದು ವೈಷ್ಣವ ಸಿದ್ಧಾಂತವಿದೆ. ಇದರಲ್ಲಿ ಪ್ರಮಾಣಗಳು: ಬಳಿತ್ಥಾ ಸೂಕ್ತ, ಪಾದ್ಮ, ಬ್ರಹ್ಮಾಂಡ, ಬ್ರಹ್ಮವೈವರ್ತಾದಿ ಪುರಾಣ ವಾಕ್ಯಗಳು, ವಾದಿರಾಜಗುರುವರಚರಿತಾಮೃತ, ಸೋದೆ ವಾದಿರಾಜ ಮಠದ 370 ವರ್ಷದ ಸಂಪ್ರದಾಯ; ಕನ್ನಡದಲ್ಲಿ ಅಪರೋಕ್ಷಜ್ಞಾನಿ ರಚಿತ ಪದ್ಯಗಳು, ಸ್ವಾಪ್ನವೃನ್ದಾವನಾಖ್ಯಾನ, ವಿಶ್ವಪ್ರಿಯವಿಲಾಸ, ವಿಶ್ವಪ್ರಿಯಲೀಲಾವಿಲಾಸ, ಪ್ರಾಮಾಣ್ಯಬೋಧಿನೀ, ವಾದಿರಾಜ ಗುಣರತ್ನಮಾಲಾ, ಋಜುತ್ವ ಚಂದ್ರೋದಯ, ಜಂಖಂಡಿ ವಾದಿರಾಜಾಚಾರ್ಯಕೃತ ಗ್ರಂಥಗಳು, ಸುಧಾಕರ ಗುರುಗುಣರತ್ನಮಾಲಾ ಎಂಬ ಅವರ ಜೀವನ ಚರಿತ್ರೆ, ಋಜುತ್ವ ಮಂಡನ, ಋಜುತ್ವ ಪ್ರಕಾಶಿಕಾ ಇತ್ಯಾದಿಗಳು.

2. ಈ ವಿಷಯದಲ್ಲಿ ಪೂರ್ವಪಕ್ಷಿಗಳು ಹೇಳುತ್ತಾರೆ: ಏನೆಂದರೆ "ಈ ವಿಚಾರವೇ ಅನವಶ್ಯಕ, ಮೋಕ್ಷಸಾಧನವಾದುದು ಶ್ರವಣ ಮನನ ಧ್ಯಾನವೆಂಬ ಉಪಾಸನೆ. ಅಂಥ ಉಪಾಸನೆಗೆ ವಾದಿರಾಜರ ವಿಚಾರ ಬೇಕಿಲ್ಲ. ಹರಿವಾಯುಗಳ ಪ್ರಸಾದದಿಂದಲೂ ಶ್ರವಣಾದಿ ಸಾಧನಗಳಿಂದಲೂ ಮೋಕ್ಷವಾಗುತ್ತದೆಂದು

ಪ್ರಮಿತವಾಗಿದೆ. ಅನವಶ್ಯ ಕಾರಣ ಕಲ್ಪನೆ ಮಾಡಿದರೆ ಅತಿಪ್ರಸಂಗವುಂಟು" ಎನ್ನುತ್ತಾರೆ. ಇದು ಸರಿಯಲ್ಲ. ಬ್ರ.ಸೂ.ಭಾ. III 3-45 "ಗುರುಪ್ರಸಾದೋ ಬಲವಾನ್" ಎಂದಿದೆ III 3-51 ನ " ನ ಕೇವಲಂ ಶ್ರವಣಾದಿಭಿರ್ಗುರುಪ್ರಸಾದೇನ ಚ ಬ್ರಹ್ಮದರ್ಶನಂ ॥ ಕಿಂತು ಭಕ್ತ್ಯಾದಿಭಿಶ್ಚ" ಎಂದಿದ, III 3-44 ರಲ್ಲೂ ಹಾಗೆಯೇ ಹೇಳಿದೆ. ಇಲ್ಲಿ 'ಆದಿ' ಪದದಿಂದ ಸರ್ವಲಕ್ಷಣ ಸಂಪನ್ನ ಗುರುಪ್ರಸಾದ, ಶಮಾದಿಪೂರ್ತಿ, ಸದಾಚಾರ, ಅನಾದಿ ಸತ್ಸಂಪ್ರದಾಯಾಭಿಜ್ಞತೆ, ಉತ್ತಮ ದ್ರೋಹಾಭಾವಾದಿ ಬಹು ಗುಣಗಳೂ ಉಪಲಕ್ಷಿತವಾಗಿವೆ. ಆದ್ದರಿಂದಲೇ ನವಮ ಗೀತಾ ಭಾಷ್ಯದಲ್ಲಿ ಹೀಗೆ ಹೇಳಲ್ಪಟ್ಟಿದೆ :

ವೇದಾಸ್ತ್ವಧೀತಾ ಮಮ ಲೋಕನಾಥ ತಪ್ತಂ ತಪೋ ನಾನೃತ ಮುಕ್ತ ಪೂರ್ವಮ್।

ಪೂಜಾಂ ಗುರೂಣಾಂ ಸತತಂ ಕರೋಮಿ ಪರಸ್ಯ ಗುಹ್ಯಂ ನ ಚ ಭಿನ್ನ ಪೂರ್ವಮ್।

ಗುಪ್ತಾನಿ ಚತ್ವಾರಿ ಯಥಾಗಮಂ ಮೇ ಶತ್ರೌ ಚ ಮಿತ್ರೇ ಚ ಸಮೋಽಸ್ಮಿ ನಿತ್ಯಮ್।
ತಂ ಚಾಪಿ ದೇವಂ ಶರಣಂ ಪ್ರಪನ್ನಃ ಏಕಾಂತಭಾವೇನ ಭಜಾಮ್ಯಜಸ್ರಮ್।

ಏತ್ತೈರ್ವಿಶೇಷೈಃ ಪರಿಶುದ್ಧ ಸತ್ವಃ ಕಸ್ಮಾನ್ನಪಶ್ಯೇಯಮನಂತಮೇನಂ" ॥

ಹೀಗೆ ಮೋಕ್ಷ ಧರ್ಮದಲ್ಲಿ ಆಚಾರವೂ ಮೋಕ್ಷ ಸಾಧನವೆಂದು ಉಕ್ತವಾಗಿದೆ ಎಂದು ಆಚಾರ್ಯರು ಹೇಳಿದ್ದಾರೆ.

ಅನುವ್ಯಾಖ್ಯಾನ III 3-31. ಅನುಬಂಧಾಧಿ ಕರಣದಲ್ಲೂ

ಅತೋ ವಿಷ್ಣೌಪರಾಭಕ್ತಿಃ ತದ್ಭಕ್ತೇಷು ರಮಾದಿಷು ತಾರತಮ್ಯೇನ ಕರ್ತವ್ಯಾ ಪುರುಷಾರ್ಥಮಭೀಪ್ಸತಾ। ಸ್ವಾದರಃ ಸರ್ವ ಜಂತೂನಾಂ ಸಂಸಿಸಿದ್ಧೋಹಿ ಸ್ವಭಾವತಃ। ತತೋಧಿಕಃ ಸ್ವೋತ್ತಮೇಷು ತದಾಧಿಕ್ಯಾನುಸಾರತಃ। ಕರ್ತವ್ಯೋ ವಾಸುದೇವಾಂತಂ ಸರ್ವಥಾ ಶುಭಮಿಚ್ಛತಾ"। ಎಂದು ಉಕ್ತವಾಗಿದೆ. ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ I 104 ಯಸ್ಯ ದೇವೇ ಪರಾಭಕ್ತಿಃ ಯಥಾ ದೇವೇ ತಥಾ ಗುರೌ। ತಸ್ಯೈತೇ ಕಥಿತಾಹ್ಯರ್ಥಾಃ ಪ್ರಕಾಶಂತೇ ಮಹಾತ್ಮನಃ"

ಎಂದು ವಚನವಿರುವುದರಿಂದ "ಭಕ್ತಿರ್ಹ್ರಾಸೋ ಭವೇತ್ ತೇಷಾಮುತ್ತಮಾನಾಂ ಪ್ರಕೋಪತಃ" ಎಂದೂ ವಚನವಿರುವುದರಿಂದ ಸರ್ವ ಸ್ವೋತ್ತಮ ಗುರುಗಳ ಪ್ರಸಾದವೂ ಅವಶ್ಯಕವೇ. ಆದ್ದರಿಂದ ರುದ್ರಾದಿ ದೇವತೆಗಳ ಹಾಗೂ ಸನಕಾದಿ ಗುರುಗಳ ಮತ್ತು ತನಗೆ ವಿದ್ಯೋಪದೇಶ ಮಾಡಿ ಉಪಕಾರಮಾಡಿದ ಇತರ ಗುರುಗಳ ಪ್ರಸಾದವಾಗದಿದ್ದರೆ, ಹರಿವಾಯುಗಳ ಪ್ರಸಾದವೇ ವ್ಯಕ್ತವಾಗುವುದಿಲ್ಲವೆಂದು ತಿಳಿಯಬೇಕು. III 3-51 ಭಾಷ್ಯೋಕ್ತರೀತಿಯಿಂದ ಹರಿವಾಯುಗಳ ಪ್ರಸಾದ ಸಿದ್ಧಿಗಾಗಿಯೂ ಇತರ ಗುರುಗಳೂ ಸಹ ಆದರಣೀಯರೇ [ಮ.ಭಾತಾ.ನಿ III 4-8 ಶ್ಲೋಕ ವ್ಯಾಖ್ಯಾನ ಮಾಡುವಾಗ ಭಾವಪ್ರಕಾಶಿಕೆಯಲ್ಲಿ "ಭಾರತಕರ್ತೃ ಕರುಣೆ ಇಲ್ಲದಿದ್ದರೆ ಮತ್ತು ಅದನ್ನು ತಿಳಿದವರಲ್ಲಿ ಉತ್ತಮರಾದ್ದರಿಂದ ನರೋತ್ತಮನ ಕರುಣೆಯಾಗದಿದ್ದರೆ, ಇನ್ನೊಬ್ಬನಿಗೆ ಅರ್ಥಜ್ಞಾನವಾಗುವುದಿಲ್ಲವಾದ್ದರಿಂದ ಅವರೂ ನಮ್ಯರೆಂದಿದೆ... ಭಾಗ್ಯಲಾಭಕ್ಕೋಸ್ಕರ ಲಕ್ಷ್ಮೀದೇವಿಗೂ

ನಮಸ್ಕಾರ ಬೇಕು" ಇತ್ಯಾದಿ ಪ್ರಮೇಯಗಳಿವೆ.] ಅವರುಗಳ ಅನ್ಯಥೋಪಾಸನೆ ಮಾಡಿ ಬರಬಹುದಾದ ಅಪ್ರಸಾದ, ಪ್ರತ್ಯವಾಯಗಳನ್ನು ಅವು ಅನಿಷ್ಟವಾದ್ದರಿಂದ ತಪ್ಪಿಸಿಕೊಳ್ಳಲೂ ಕೂಡ ಯಥಾಶಕ್ತಿ ಪರಿಹಾರೋಪಾಯವು ಮಾಡಲ್ಪಡಬೇಕಾದ್ದೆ.

ಹಾಗೆ ಉಪಕಾರಿಗಳಾಗಿ ಪ್ರಾಪ್ತರಾದ ಗುರುಗಳು ವೇದವ್ಯಾಸಾದಿ ಗಳಂತೆ ಹರಿಸದೃಶರಾಗಿದ್ದರೆ, ಅಥವಾ ಹನುಮದಾದಿಗಳಂತೆ ಪ್ರಧಾನವಾಯು ಸಮರಾಗಿದ್ದರೆ ಅವರು ಸುತರಾಂ ಆದರಣೀಯರು ಮತ್ತು ನಮ್ಯರೇ.

"ಸರ್ವ ಲಕ್ಷಣ ಸಂಪನ್ನಃ ಸರ್ವಜ್ಞೋ ವಿಷ್ಣು ತತ್ಪರಃ ।
ಯದ್ಗುರುಃ ಸುಪ್ರಸನ್ನಃ ಸನ್ ದದ್ಯಾತ್ತನ್ನಾನ್ಯಥಾ ಭವೇತ್"

ಎಂದು III 3-51 ಭಾಷ್ಯೋಕ್ತವಾಗಿದೆಯಾದ್ದರಿಂದ ಅವರೂ ನಮ್ಮ ಸ್ವರೂಪೋದ್ಧಾರ ಕಾರ್ಯದಲ್ಲಿ ಸಮರ್ಥರೇ ಆಗಿದ್ದಾರೆ. ಪ್ರಣಾಮವು ಅಭಿಮತ ಸಿದ್ಧಿಗೆ ಅಂಗವು; ಅಂಥ ಪ್ರಣಾಮವು ಭಕ್ತಿ ಸಾಪೇಕ್ಷವು; ಸ್ವರೂಪ ನಿರ್ಧಾರಣೆಯಾಗದಿದ್ದರೆ ಭಕ್ತಿಪೂರ್ವಕ ಪ್ರಣಾಮವು ಸಾಧ್ಯವಾಗವುದಿಲ್ಲವೆಂದು ಸುಧಾ ವಚನ ಇರುವ ಪ್ರಯುಕ್ತ, ಭಕ್ತಿಯುಕ್ತ ನಮನಕ್ಕೆ ನಮ್ಯ ಗುರುಗಳ ಮಹಾತ್ಮ್ಯಜ್ಞಾನವು ಅವಶ್ಯಕವೆಂಬ ಕಾರಣದಿಂದಲೂ, ನಮ್ಮ ಬಳಿ ಪ್ರಾಪ್ತರಾದ ಮಹಾತ್ಮರ ಸ್ವರೂಪ ನಿರ್ಧಾರಣೆಯನ್ನು ಅವಶ್ಯವಾಗಿ ಮಾಡಲೇಬೇಕು. ಸ್ವರೂಪ ನಿರ್ಣಯವು ಅವರುಗಳ ವಿಷಯದಲ್ಲಿರುವ ಪ್ರಮಾಣಗಳ ವಿಚಾರದಿಂದ ಆಗಬೇಕಾದ್ದರಿಂದ ವಿಚಾರವೂ ಅವಶ್ಯಕವೇ. ಆದ್ದರಿಂದ ಉತ್ತಮರ ಸ್ವರೂಪ ನಿರ್ಣಯವು ಶಕ್ಯವಾಗಲೆಂದು ಒಂದೊಂದು ಗ್ರಂಥ [ ಬೃ.ಭಾ. V-9 ಪುಟ 310; ಛಾಂ.ಭಾ. III-1, IV 22-26, VI 9 ಇತ್ಯಾದಿ ಸ್ಥಳಗಳಲ್ಲಿ ತರತಮಭಾವವ್ಯಂಜಕ ಗುಣವರ್ಣನೆಗಳಿವೆ.] ದಲ್ಲೂ ಶ್ರೀಮದಾಚಾರ್ಯರು ಗುರು ಲಕ್ಷಣಗಳನ್ನು ಹೇಳುತ್ತಾರೆ. ಮ.ಭಾ.ತಾ.ನಿ 1-122 ರಲ್ಲಿ

"ಷಣ್ಣವತ್ಯಙ್ಗುಲೋಯಸ್ತುನ್ಯಗ್ರೋಧಪರಿಮಂಡಲಃ। ಸಪ್ತಪಾದಶ್ಚತುರ್ಹಸ್ತೋದ್ವಾತ್ರಿಂಶಲ್ಲಕ್ಷಣೈರ್ಯುತಃ।
ಅಸಂಶಯಃ ಸಂಶಯಛಿತ್ ಗುರುರುಕ್ತೋ ಮನೀಷಿಭಿಃ ।"

ಇತ್ಯಾದಿ ವಚನಗಳಿವೆ.

"ಸಮಾನಾಂ ವಿಷಮಾ ಪೂಜಾ ವಿಷಮಾಣಾಂ ಸಮಾ ತಥಾ।
ಕ್ರಿಯತೇ ಯೇನ ದೇವೋಽಪಿ ಸ್ವಪದಾತ್ ಭ್ರಶ್ಯತೇ ಪುಮಾನ್।

"ಗುಣಾನುಸಾರಿಣೀಂ ಪೂಜಾಂ" ಇತ್ಯಾದಿ (ಗೀ.ಭಾ. VI ; ಕೃ.ಮ, 254-256)

ವಚನಗಳೂ ಕೂಡ ತಾರತಮ್ಯ ನಿರ್ಧಾರಣ ಕಾರ್ಯದಲ್ಲಿ ಪ್ರಚೋದಕಗಳೇ.

"ಅಪೂಜ್ಯಃ ಪೂಜಿತೋ ಯತ್ರ ಪೂಜ್ಯೋಯತ್ರಾವಮಾನಿತಃ ।
ತ್ರೀಣಿ ತತ್ರ ಭವಿಷ್ಯನ್ತಿ ದುರ್ಭಿಕ್ಷಂ ಮರಣಂ ಭಯಂ"

ಎಂದೂ ಸ್ಮೃತಿ ಇದೆ.

| |
|---|
| 3. ಅಲ್ಲದೆ ವಾದಿರಾಜ ಗುರುಗಳು ಸಾಮಾನ್ಯರಲ್ಲ. ಅವರು ಋಜು ದೇವತೆ ಎಂದು ಅತಿಶಯವಾಗಿ ಪ್ರಖ್ಯಾತಿ ಹೊಂದಿದವರು. ಹೀಗೆ ಪ್ರಸಕ್ತಿ ಇರುವಾಗ ಪ್ರಾಪ್ತ ಪರಿತ್ಯಾಗ ರೂಪ ದೋಷ ನಿವಾರಣೆಗೊಸ್ಕರವಾಗಿಯಾದರೂ ಸ್ವರೂಪ ನಿರ್ಧಾರಣೋಪಯೋಗಿ ವಿಚಾರವು ಅವಶ್ಯಕವೇ. ನಾಲ್ಕು ನೂರು ವರ್ಷಗಳಿಂದ ಬಂದಿರುವ ಪ್ರಖ್ಯಾತಿಯು ಪ್ರಮಾಣ ಜನ್ಯವೇ ಅಲ್ಲವೇ ಎಂಬ ವಿಚಾರವು ಅನ್ವರ್ಥವೂ ಸ್ವಾರಸಿಕವೂ ಆಗಿದೆ. |
| 4. ಮೋಕ್ಷಕ್ಕೊಸ್ಕರ ತಾರತಮ್ಯದಿಂದ ಗುರುಪೂಜೆಯೂ ಸಹ ಕರ್ತವ್ಯವೇ. ಅದರಲ್ಲಿ ಜಯತೀರ್ಥಾರ್ಯರೂ, ವಾದಿರಾಜ ಗುರುಗಳೂ, ರಾಘವೇಂದ್ರ ತೀರ್ಥಾದಿಗಳ ಸಾಮ್ಯದಿಂದ ಧ್ಯಾನಿಸಲ್ಪಡಬೇಕೇ ಅಥವಾ ಉತ್ತಮತ್ವಭಾವದಿಂದ ಪೂಜಿಸಲ್ಪಡಬೇಕೇ ಎಂದು ಸಂಶಯ ಬಂದರೆ ಸಂಶಯ ಪರಿಹಾರಕ ವಿಚಾರವು ಅವಶ್ಯಕವೇ. ಇದರ ಮೇಲೆ, ಪ್ರತೀತಿ ಇರುವಂತೆ ವಾದಿರಾಜಗುರುಗಳು ಋಜುಗಳೇ ಆಗಿದ್ದಲ್ಲಿ ಅವರ ಪೂಜೆಯು ಮಧ್ವ ಗುರುಗಳ ಪೂಜೆಯಂತೆ ಮೋಕ್ಷಪ್ರಾಪಕವೇ. ಹಾಗಿದ್ದ ಮೇಲೆ ಅವರ ಸ್ವರೂಪ ನಿರ್ಧಾರಕ ವಿಚಾರವು ಹೇಗೆ ಅನವಶ್ಯಕವಾಗುವುದು? ಆದ್ದರಿಂದ ಸುಧಾ III 3-29 ಪುಟ 560 ರಲ್ಲಿ "ವಿಫಲತ್ವಾದಸ್ಯಾಶ್ಶಿಂತಾಯಾಃ " ಎಂದು ಅನ್ಯ ವಿಷಯದಲ್ಲಿ ಉಕ್ತವಾದ ದೋಷವು ಈ ವಿಚಾರಕ್ಕಿಲ್ಲ. |
| 5. ಈ ವಿಷಯಗಳಲ್ಲಿ ಪ್ರಮಾಣಗಳು: "ಸಂಗೋ ಭಾಗವತೈರ್ಭೂಯಾ ನಪುನರ್ಭವ ಮಾತ್ರತಃ" ಭಾಗ IV 24-58; "ತಸ್ಮಾತ್ಪಾತ್ರಂ ಹಿ ಪುರುಷೋ ಯಾವಾನಾತ್ಮಾಯಥೇಯತೇ" ಭಾಗ VII 17-39; |
| ಯೋಽಪಿ ವೇದ ಸಮತ್ವೇನ ಸರ್ವಾನ್ ನೀಚೋಚ್ಚತಃ ಸ್ಥಿತಾನ್ ।<br>ಸೋಽಪಿಯಾತಿ ತಮೋ ಘೋರಂ ಯಶ್ಚ ಸಾಮ್ಯಮುದೀರಯೇತ್ ॥ ಭೃ.ಭಾ. ಪುಟ 70; |
| ವಿಷ್ಣುಭಕ್ತಿರ್ದೇವಭಕ್ತಿರ್ಗುರೌರ್ಭಕ್ತಿಸ್ತಥೈವ ಚ ।<br>ತತ್ತಚ್ಛ್ರೈಷ್ಠ್ಯಾ ನುಸಾರೇಣ ಮುಕ್ತೌ ನಿಯತಸಾಧನಮ್" ॥ಬೃ.ಭಾ. ಪುಟ 71; |
| ಸಮ್ಯಗಾಚಾರ್ಯ ವಚನಮವಜ್ಞಾಯ ವಿರೋಧಿನಿ ।<br>ಸತ್ವಬುದ್ಧಿಂ ಯತಃ ಕುರ್ಯುಸ್ತತಸ್ತೇಽಧಿಕ ಪಾಸಿನಃ । |
| ಅಪ್ರಾಪ್ತ ತ್ಯಾಗಿನಃ ಪ್ರಾಪ್ತ ನಿಷ್ಠಾಹೀನೋ ಹಿ ದೋಷವಾನ್ । ಬೃ.ಭಾ. ಪುಟ 413 ; |
| ಏಕಸ್ಮಾತ್ತು ಗುರೋರ್ಜ್ಞಾನಂ ಜಾಯತೇ ನೈವ ಕಸ್ಯಚಿತ್ ।<br>ಏಕಸ್ಮಾದೇವ ಜಾಯೇತ ಯೋಗ್ಯಾದ್ಬ್ರಹ್ಮ ಪದಸ್ಯತು ।<br>ಇತ್ಯಾದಿ ಗುರು ವಿವೇಕೇ. ಭಾಗ.ತಾ. XI 9-31. |
| 6. ಅಲ್ಲದೇ |
| "ಏಕಂಚ ತತ್ವತೋ ಜ್ಞಾತುಂ ವಿನಾ ಸರ್ವಜ್ಞತಾಂ ನರಃ ।<br>ನ ಸಮರ್ಥೋ ಮಹೇಂದ್ರೋಽಪಿ ತಸ್ಮಾತ್ಸರ್ವತ್ರ ಜಿಜ್ಞಸೇತ್ । ಇತಿ ಸ್ಕಾಂದೇ" |

ಎಂಬ IV ಗೀ.ಭಾ. ಪ್ರಮಾಣ ಸೂಚಿತ ವಿವಕ್ಷೆಯಿಂದಲೂ ಜಿಜ್ಞಾಸೆಯು ಕರ್ತವ್ಯವೇ.

ಭಾಗವತ ಸಾರೋದ್ಧಾರದಲ್ಲಿರುವ ಮಹತ್ಸಮಾಗಮ ಪ್ರಕರಣ, ಮಹತ್ಸೇವಾ ಪ್ರಶಂಸಾ ಪ್ರಕರಣ, ಮಹನ್ನಿಂದಾವರ್ಜನ ಪ್ರಕರಣಗಳಲ್ಲಿ ಉದಾಹೃತ ಶ್ಲೋಕ ತಾತ್ಪರ್ಯ ಪರಿಶೀಲನೆ ಮಾಡಲಾಗಿಯೂ ವಾದಿರಾಜಗುರು ಸ್ವರೂಪವು ವಿಚಾರ್ಯವೇ, ಉಪೇಕ್ಷಣೀಯವಲ್ಲವೆಂದು ಸಿದ್ಧಿಸುತ್ತದೆ. **[ವಿಷ್ಣುರಹಸ್ಯದಲ್ಲೂ (ಅ 34-2) ಅಗಸ್ತ್ಯರು ಬಂದಿದ್ದಾಗ ಧ್ಯಾನಸ್ಥ ಇಂದ್ರದ್ಯುಮ್ನ ರಾಜನು ಮಾನ ಮಾಡಲು ವಿಳಂಬಮಾಡಿದ್ದಕ್ಕೆ ಶಾಪವನ್ನೇ ಹೊಂದಿದನೆಂದಿದೆ]**

7.ಅಪ್ರಸಕ್ತ ವಿಷಯ ಚರ್ಚೆಯಿಂದ ಏತಕ್ಕೋಸ್ಕರ ಕಾಲಹರಣಮಾಡಬೇಕೆಂದು ಶಂಕಿಸಕೂಡದು. ಪ್ರಸಕ್ತವಾಗಿಯೇ ಇದೆ. ಜಂಖಂಡಿ ವಾದಿರಾಜಾಚಾರ್ಯರ ಕಾಲ (1827-1896) ಮೊದಲುಗೊಂಡು, "ಶ್ರೀ ಬೋಧರಾಯಾಚಾರ್ಯ (ಶ್ರೀ ಸತ್ಯವೀರತೀರ್ಥರ ಪೂರ್ವಾಶ್ರಮದ ನಾಮ), ಶ್ರೀ ವಾದಿರಾಜಾಚಾರ್ಯರೂ ಇವರಿಬ್ಬರು ವಾದಿರಾಜ ಋಜುತ್ವ ದೀಕ್ಷಾಯುಕ್ತರಾದ ಶ್ರೀ ಸತ್ಯಪರಾಕ್ರಮತೀರ್ಥರ (1872-1879) ಶಿಷ್ಯರು. ವಿದ್ಯಾ ವ್ಯಾಸಂಗ ಕಾಲದಲ್ಲಿ ಪರಸ್ಪರ ಸ್ನೇಹಯುಕ್ತರು. ಅನಂತರದಲ್ಲಿ ಸ್ಪರ್ಧೆಯಿಂದಲೂ, ಮಾತ್ಸರ್ಯದಿಂದಲೂ ಹುಟ್ಟಿದ ವೈಯುಕ್ತಿಕ ದ್ವೇಷ ಪ್ರಭಾವದಿಂದ ವಾದಿರಾಜ ಋಜುತ್ವ ವಿಷಯದಲ್ಲಿ ನಿರರ್ಥಕ ಕಲಹವನ್ನು ಮಾಡಿಬಿಟ್ಟರು. ನಿರಪರಾಧಿ ಅಜ್ಞ ಮಾಧ್ವರ ಪ್ರಾಚೀನ ದುರದೃಷ್ಟವೂ ಒಂದು ಕಲಹ ಕಾರಣವೆಂದು ಊಹಿಸಲ್ಪಡಬೇಕೆಂದು" ಶ್ರೀ ಸಾಗರಕಟ್ಟೆ ಶ್ರೀ ಶ್ರೀ 108 ಪ್ರದ್ಯುಮ್ನತೀರ್ಥ ಶ್ರೀಪಾದಂಗಳವರು (1970 ಮಾಘ ಬಹುಳ ಪಂಚಮಿಗೆ 80 ವರ್ಷದವರು) ಹೇಳುತ್ತಾರೆ. ಹರಿಭಕ್ತ ವಿಜಯ ನವಮ ಪುಷ್ಪ ಭಾಗ 1, ಪುಟ 166, 179, 191 ಗಳಲ್ಲೂ ಹೀಗೆಯೇ ಶೋಧಿತ ಕಥೆಯು ಪ್ರಖ್ಯಾತವಾಗಿದೆ.

ತಥಾಚ ಆ ಕಾಲದ ಮೊದಲುಗೊಂಡು (1870 AD) ಈ ವಿಚಾರವು ಎರಡು ಪಕ್ಷಗಳಲ್ಲೂ ಪ್ರಸಕ್ತವಾಗಿದೆ. ಇನ್ನೂ ನಡೆಯುತ್ತಲೇ ಇದೆ. ಮತ್ತು XXX-138 "ಅಲಂವಿವಾದೇ ಪರಸ್ಪರೋತ್ಥೇ", XXI-254 "ಅವಿವಾದೇ ಪ್ರಸಿದ್ಧಿಶ್ಚ ನೈವಾಸ್ಯ ಭವಿತಾಕ್ವಚಿತ್", XXXII-4 "ಮಿಥೋ ವಿವಾದ್ಯುತರ ಭೂಸುರಾಣಾಂ" ಇತ್ಯಾದಿ ಮ.ಭಾ. ನಿರ್ಣಯೋಕ್ತ ರೀತಿಯಿಂದ ವಾದಕ್ಕೆ ಪ್ರಯೋಜನವು ಇದ್ದೇ ಇದೆ. ಈಗಲೂ 3-9-1969 ಕೃಷ್ಣ ಜಯಂತಿಯಲ್ಲಿ ಪೂರ್ವಪಕ್ಷ ಗ್ರಂಥವು ಪ್ರಕಾಶಿತವಾಗಿದೆ. ಆದ್ದರಿಂದ ಗೊತ್ತಿಲ್ಲದ ವಿಚಾರ ಎಂದು ಉಪೇಕ್ಷಿಸುವುದು ಯುಕ್ತವಲ್ಲ ಮತ್ತು ನಿರರ್ಥಕವೂ ಅಲ್ಲ. ಏಕೆಂದರೆ ಉಪೇಕ್ಷೆ ಮಾಡಿದರೆ ಪ್ರತ್ಯವಾಯ ಉಂಟೆಂದೂ ಪ್ರಮಿತವಾಗಿದೆ.

"ಯಃ ಪ್ರಶಂಸ್ಯಾನ್ನ ಪ್ರಶಂಸೇನಿನ್ದ್ಯೋಯೇನ ನ ನಿಂದ್ಯತೇ ।
ಸೋಪಿತದ್ವದಧೋಯಾತಿ ಯತೋಽರಿವದುದಾಸಕಃ" ಇತಿ ಸತ್ಕಾರೇ

ಎಂದು ಭಾಗ.ತಾ. XI 28-1 ರಲ್ಲಿದೆ.

"ತಾರತಮ್ಯಂಚ ತದ್ಭಕ್ತೇಃ ನಜಾನಾತಿ ಕಥಂಚನ ।
ಅವಜಾನಂಶ್ಚ ತದ್ಭಕ್ತಾನಾತ್ಮನೋ ಭಕ್ತಿದರ್ಪಿತಃ ।
ಉಪೇಕ್ಷಕೋ ವಾಽಪಿ ತೇಷು ನಸ್ಮರೇದತವಾಽಪಿತಾನ್.........ತೇತುತದ್ಭಕ್ತಾಧಮಾಃ ಪ್ರೋಕ್ತಾಃ"

ಎಂದು XI 2-4 ಭಾಗ.ತಾ. ದಲ್ಲಿ ಹೇಳಿ ಆ ಭಕ್ತಾಧಮರಿಗೆ ನರಕಾದ್ಯನರ್ಥಗಳು ಹೇಳಲ್ಪಟ್ಟಿವೆ. ಛಾಂ.ಭಾ. IX 14 ಪುಟ 391:

ಉಷಾದಿ ಮಾರುತಾಂತೇಷು ಸಮಃ ಸಮಗುಣೋಪಿ ಸನ್ ।
ಧ್ಯಾತಃ ಪ್ರೀತಿಂ ಹರಿರ್ಯಾಯಾದಧಿಕಾಮುತ್ತರೋತ್ತರೇ ।
ಉತ್ತಮೇಷೂತ್ತಮಾ ಪ್ರೀತಿಸ್ತಸ್ಯ ತತ್ರ ಸ್ಮೃತಸ್ತತಃ ।
ಧ್ಯಾತುರಪ್ಯುತ್ತಮಾಂಪ್ರೀತಿಂ ಯಾಯಾನ್ನಾಸ್ತ್ಯತ್ರ ಸಂಶಯಃ ।
ತಾರತಮ್ಯ ಪರಿಜ್ಞಾನಾತ್ತೇಷುಧ್ಯಾತೋಽವಿಮುಕ್ತಿದಃ ।
ಪ್ರೀತಿಂ ನಚಾನ್ಯಥಾ ಯಾಯಾದಿತಿ ಶಾಸ್ತ್ರಸ್ಯ ನಿರ್ಣಯಃ। ಇತಿ ತತ್ವ ವಿವೇಕೇ

ಎಂದು ಪ್ರಮಾಣವಿದೆ. ಮತ್ತು

"ಅಚೇತನಮಯೋಗ್ಯಂ ಚ ತಥೈವಾತಾತ್ವಿಕಂ ಕ್ವಚಿತ್ ।
ನೋಪಾಸೀತಪರೋಽನರ್ಥಸ್ಯಾತ್ತಥೋಪಾಸನಾಕೃತಃ" ।

ಎಂದು ಛಾಂ.ಭಾ. IX 14 ಪುಟ 393 ರಲ್ಲಿಯೂ ಹರಿಪ್ರೀತಿಯಾಗುವುದಿಲ್ಲ, ಅನರ್ಥವಾಗುತ್ತದೆಂದು ಹೇಳಿದೆ. ಯದ್ಯಪಿ ಆ ಪ್ರಮಾಣದಲ್ಲಿ ಹರಿವಿಷಯದಲ್ಲಿ ಅಯೋಗ್ಯೋಪಾಸನೆ ನಿಷೇಧಿತವಾಗಿದೆ. ಆ ನಿಷೇಧವು ಗುರು ವಿಷಯದಲ್ಲೂ ದೇವತಾ ವಿಷಯದಲ್ಲೂ ಸಮವು. ಹೀಗೆ ಪ್ರತ್ಯವಾಯ ಪರಿಹಾರ, ಹರಿಪ್ರೀತ್ಯಾದಿ ರೂಪ ಫಲವಿರುವುದರಿಂದ ಇದು ವ್ಯರ್ಥ ಕಾಲಹರಣವಾಗುವ ವಿಚಾರವಲ್ಲ.

8. ಕಿಂಚ, ಶ್ರೀಹರಿಯ ಉಪಾಸನಾ ವಿಷಯದಲ್ಲಿ ಹೇಗೆ ವಾಯದೇವರ ದ್ವಾರಾ ಮಾಡಿದ ಉಪಾಸನೆಯು ನಿಯಮದಿಂದ ಸಫಲವೋ ಹಾಗೆಯೇ ಇತರ ಋಜುಗಳ ದ್ವಾರಾ ಮಾಡಲ್ಪಟ್ಟ ಉಪಾಸನೆಯೂ ನಿಯಮದಿಂದ ಸಾರ್ಥಕವಾಗಿ ಮೋಕ್ಷ ಸಾಧನ ರೂಪವೇ ಆಗುತ್ತದೆ. ಇತರ ದೇವತೆಗಳ ಅಥವಾ ಗುರುಗಳ ಮೂಲಕ ಮಾಡಲ್ಪಟ್ಟ ಉಪಾಸನೆಯು ಹಾಗಲ್ಲ.

ಛಾಂ. ಭಾ. III-2 "ಉದ್ಗೀತಾಖ್ಯಸ್ಯ ವಿಷ್ಣೋಃ ವಿಶಿಷ್ಟ ಪ್ರತಿಮಾ ವಾಯುರೇವ ।

ಅತಸ್ತಸ್ಯ ಸರ್ವೋತ್ತಮತ್ವ ಜ್ಞಾನಪೂರ್ವಕಂ ತಸ್ಮಿನ್ ತತೋಽಪ್ಯುತ್ತಮತ್ವೇ ನೋಪಾಸಿತ ಏವ ಭಗವಾನ್ ಸಮ್ಯಕ್ ಫಲಂ ದದಾತೀತಿ ದರ್ಶಯತಿ" ।

"ವಾಯೌ ಮುಖ್ಯಧಿಯೇತಿ ಭಗವದ್ವಚನಂ........ಉಪಾಸಿತೋ ದೈತ್ಯ ಜಯ ಕಾರಣಾತ್ಪಾಪ ವರ್ಜಿತೇ" .

ಇತ್ಯಾದಿ ಪ್ರಮಾಣಗಳಿವೆ. [XI-1142 ಭಾಗ.ತಾ: ಸರ್ವದೇವೋತ್ತಮೋ ವಾಯುರಿತಿ ಜ್ಞಾನಾನ್ನ ಚಾಪರಂ । ಪ್ರಿಯಮಸ್ತಿ ಹರೇಃ ಕಿಂಚಿತ್ತಥಾ ವಾಯೋರ್ಹರೇರ್ವಿದಃ । ಇತಿ ಮಾಹಾತ್ಮ್ಯೇ ಪುಟ 56 ಪಂಚಭೂತ ಮನೋಬುದ್ಧಿ ರುದ್ರಾಣಾಂ ಪ್ರತಿದೇಹಕಂ । ಬಾಹ್ಯತಶ್ಚಾಪಿ ನೇತೃತ್ವಾದ್ವಾಯುರ್ವ್ಯಷ್ಟಿ ಸಮಷ್ಟಿಕಃ । ಇತಿ ಪ್ರಭಂಜನೇ]

ಇಲ್ಲಿ ವಾಯುರೇವ (ವಾಯುದೇವರೇ) ಎಂದು ಅವಧಾರಣ ಪೂರ್ವಕವಾಗಿ ಹೇಳಿದ್ದರಿಂದ ಅನ್ಯಋಜುದೇವತೆಗಳು ವ್ಯಾವರ್ತಿತರಾಗಿದ್ದಾರೆಂದು ತಿಳಿಯಬೇಕು. ಎಲ್ಲ ಋಜುಗಳೂ ವಿಶಿಷ್ಟ ಪ್ರತಿಮೆಗಳೇ. ಅವರಿಗೂ ಆ ಪೂರ್ವೋಕ್ತ ಮಹಿಮೆಯು ಇದ್ದೇ ಇದೆ.

“ಅನಾದಿಕಾಲತಃ ಸರ್ವದೋಷ ಹೀನಾ ಗುಣಾಧಿಕಾಃ |
ಸರ್ವಜೀವಗಣೇಭ್ಯೋಽಯೇ ತೇಹಿ ವಾಯುತ್ತ ಮಾಪ್ನು ಯುಃ |
ಋಜವೋನಾಮ ಯೇ ದೇವಾಃ ದೇವಾನಾಮಪಿ ದೇವತಾಃ" |

ಎಂದು ಮ.ಭಾ.ತಾ.ನಿ. XXXII-80ರಲ್ಲಿ ವಾಕ್ಯವಿದೆ.

“ದೇವಾ ಅಪಿ ಸುಯೋಗಾಢ್ಯಾಃ ಯತಂತಃ ಸರ್ವ ಸಾಧನೈಃ | ಪುತ್ರದಾರಾದಿಭಿಃ ಸಾರ್ಧಂ ನೋಚ್ಛ್ವ ಸಂತೀಹಸಂಸ್ಕೃತೌ । ಗುರೋರನುಗ್ರಹಮೃತೇ ಸಾಧನಂ ನ ಹರೇಃ ಪ್ರಿಯಂ | ಗುರೂಪದೇಶಾತ್ತು ಪರಂ ಪ್ರಾಪ್ನೋತ್ಯೇವ ನ ಸಂಶಯಃ | ಷಣ್ಣ ವತ್ಯಂಗುಲೋಽಯಸ್ತು ತಾಲಾಸ್ಯೋಽ ದಶತಾಲಕಃ | ದಶಪ್ರಾದೇಶಕಃ ಸಪ್ತ ಪಾದೋಽ ಹಸ್ತ ಚತುಷ್ಟಯಃ | ಕಲಮಾತ್ರಾಯಾಂಗುಲಶ್ಚೈವವಾಗ್ನಿ ಸಂದೇಹ ವರ್ಜಿತಃ | ವಾಸುದೇವೈಕ ಶರಣೋ ಗುರುರಿತ್ಯುಚ್ಯತೇ ಬುಧೈ: | ಗುರು ಲಕ್ಷಣ ಸಂಪೂರ್ಣಃ [III 3, ಪುಟ 34 ಬೃಹದ್ಭಾಷ್ಯದಲ್ಲಿ ಲಕ್ಷಣಾಂತರವೂ ಹೇಳಲ್ಪಟ್ಟಿದೆ.] ಸಾಕ್ಷದೇವ ಚತುರ್ಮುಖಃ | ತತಃ ಶೇಷೇಂದ್ರ ವೀಂದ್ರಾದ್ಯಾಃ ಕ್ರಮೇಣೈವ ಪ್ರಕೀರ್ತಿತಾಃ | ಇತಿ ಗುರುವಿವೇಕೇ” ಎಂದು ಭಾಗ. ತಾ. X 94-34 ರಲ್ಲಿ ಪ್ರಮಾಣವಿದೆ. ಇಲ್ಲೂ ಚತುರ್ಮುಖ ಪದದಿಂದ ವಾಯ್ವಾದಿ ಸರ್ವ ಋಜುಗಳೂ ಗ್ರಾಹ್ಯರೇ. ಅವರುಗಳಿಗೂ ಕೂಡ ಪೂರ್ವೋಕ್ತ ಷಣ್ಣವತ್ಯಂಗುಲತ್ವಾದಿ ಲಕ್ಷಣಗಳಿವೆ.

“ಗುಣಾತ್ಮಿಕಾ ಚ ಸಾ ದೇವೀ ನಿರ್ಗುಣ ಪುರುಷೋತ್ತಮಃ |
ನೈವ ವಿಷ್ಣುಂ ವಿಜಾನಾತಿ ಜ್ಞೇಯೋಽ ಜ್ಞಾತಾ ಚ ಕೇಶವಃ |
ನ ತಾವನ್ಯೇ ವಿಜಾನಂತಿ ವಿನಾ ಹಂಸ ಪರಂಪರಾಂ ............
ಅತೋಽ ಬ್ರಹ್ಮಪದೇ ಯೋಗ್ಯಾ ಜೀವಾ ಹಂಸಾಃ ಪ್ರಕೀರ್ತಿತಾಃ |
ತೇಷಾಂ ಪರಂಪರಾಪ್ರಾಪ್ತಂ ಹ್ಯೈಜ್ಞಾನಂ ನಿಯಮೇನತು |
ತೇ ಮುಚ್ಯಂತೇ ನೈವ ಚಾನ್ಯೇ ಗುರುಬ್ರಹ್ಮಾಯತೋಽನ್ಯಣಾಂ |” ಇತಿ ಗಾರುಡೇ

ಎಂಬ ಭಾಗ.ತಾ. X 94-41 ಪ್ರಮಾಣದಲ್ಲಿ 'ಹಂಸ' ಪದವಾಚ್ಯರಾದ ಎಲ್ಲಾ ಋಜುಗಳೇ ಲಕ್ಷ್ಮೀನಾರಾಯಣರನ್ನು ಚೆನ್ನಾಗಿ ತಿಳಿಯಬಲ್ಲರು. ಇತರರಲ್ಲವೆಂದು ವಿಶೇಷ ಹೇಳಲ್ಪಟ್ಟಿದೆ.

9. ಕಿಂಚ, ಬ್ರ.ಸೂ.ಭಾ. III 3-57 ತತ್ವಪ್ರಕಾಶಿಕಾದಲ್ಲಿ ಅಂಗ ದೇವತಾದ್ಯುಪಾಸನಂ ಕಾರ್ಯಮ್ |
ಯಾವದ್ಬ್ರಹ್ಮಾದೀನಾಂ ಗುಣಜಾತಂ ತತ್ಸರ್ವಂ ರುದ್ರಾದಿಷು ನೋಪಸಂಹಾರ್ಯ೦ |
ಕುತಃ। ಭವೇತ್ಸಾಮ್ಯೇ ನೋಽಪಾಸನಂ ಯುಕ್ತಂ ಯದಿತೇಷಾಂ ಸಾಮ್ಯಮೇವಸ್ಯಾತ್”

ಎಂದು ಹೇಳಿದ್ದಾರೆ. ಬ್ರಹ್ಮಾದಿ ದೇವತೆಗಳ ಗುಣ ಸಮುದಾಯವನ್ನು ರುದ್ರಾದಿಗಳಲ್ಲಿ ಉಪಾಸನೆ ಮಾಡಕೂಡದು. ಏತಕ್ಕೆಂದರೆ ಅವರೆಲ್ಲರೂ ಸಮರಲ್ಲ. ಬ್ರಹ್ಮಾದಿಗಳಿಗೂ ರುದ್ರಾದಿಗಳಿಗೂ ಸಾಮ್ಯವಿದ್ದರೆ ಸಾಮ್ಯೋಪಾಸನೆಯು ಯುಕ್ತವೇ ಆಗುತ್ತಿತ್ತು. ಹಾಗಿಲ್ಲ ಎಂದರ್ಥ, "ಓಂ ಮಂತ್ರಾದಿವದ್ವಾ ಅವಿರೋಧಃ" **(III 3-58)** ಎಂಬ ಬ್ರಹ್ಮಸೂತ್ರ ವ್ಯಾಖ್ಯಾನದಲ್ಲಿ ಹೇಳುತ್ತಾರೆ.

"ಏವಮಧಮ ಗುಣಾನಾಂ ಉತ್ತಮೇಷೂಪಸಂಹಾರೇ ನಕಶ್ಚಿತ್ ವಿರೋಧಃ | ತೇಷುತ್ತುಣಿತ್ವಾದಿತಿಭಾವಃ |"

ಹಾಗೆಯೇ ಅಧಮರಲ್ಲಿರುವ ಗುಣಸಮುದಾಯವನ್ನು ಉತ್ತಮರಲ್ಲಿ ಉಪಸಂಹಾರ ಮಾಡಿದರೆ ಯಾವ ವಿರೋಧವೂ ಇರುವುದಿಲ್ಲ. ಏಕೆಂದರೆ ಆ ಉತ್ತಮರು ಆಧಮರಲ್ಲಿರುವ ಗುಣ ಸಮುದಾಯವನ್ನು ಹೊಂದಿಯೇ ಇದ್ದಾರೆ ಎಂದರ್ಥ. "ಉಕ್ತಂ ಚೈತತ್" ಮೇಲ್ಕಂಡ ವಿಷಯದಲ್ಲಿ ಪ್ರಮಾಣ ಎಂದು ಹೇಳಿ ಋಗ್ಭಾಷ್ಯದ ಶ್ಲೋಕಗಳನ್ನು ಟೀಕಾಚಾರರು ಉದಾಹರಿಸಿದ್ದಾರೆ –

"ದೇವತಾ ಸರ್ವವಿದ್ಯಾನಾಂ ಸ್ವಯಂ ನಾರಾಯಣಃ ಪ್ರಭುಃ |
ಋತೇತತ್ರ ಪ್ರಸಿದ್ಧಾಶ್ಚ ದೇವತಾ ಶ್ರೀಸ್ತಥಾತ್ರಚ |
ಋತೇ ಪ್ರಸಿದ್ಧಾ ಬ್ರಹ್ಮೈವ ತತಸ್ತೇನ ಕ್ರಮೇಣಚ |
ಪೂರ್ವಪ್ರಸಿದ್ಧ ವರ್ಜಂತು ಶಕ್ರಾಂತಾ ದೇವತಾ ಮತಾಃ |
ಇಂದ್ರಾವರಾವಿಶೇಷೇಣ ಲಿಂಗೇನೈವ ಪ್ಪೃಥಕ್ ಪೃಥಗಿತಿ'|

ಈ ಪ್ರಮಾಣದಲ್ಲಿ ಹೇಳಲ್ಪಟ್ಟ ಬ್ರಹ್ಮ ರುದ್ರ ಮುಂತಾದ ಪದಗಳು ಸ್ವಸಮಾನರಿಗೂ ಉಪಲಕ್ಷಕಗಳು. "ಅವರಲ್ಲೂ ಆ ಗುಣಗಳಿವೆ" ಎಂಬ ಪೂರ್ವೋಕ್ತ ಯುಕ್ತಿಯು ಸಮಂಜಸವಾಗುತ್ತೆ. ಆದ್ದರಿಂದ ಸರ್ವಋಜುಗಳಿಗೂ ಸಾಮ್ಯವಿದೆ. ಕೇವಲ ಲಕ್ಷ್ಮಿನಾರಾಯಣ ಪ್ರತಿಪಾದಕ ವೇದ ಭಿನ್ನ ನಿಖಿಲವೇದ ಪ್ರತಿಪಾದ್ಯತ್ವವೂ ಇದೆ.

ತಂತ್ರಸಾರದಲ್ಲೂ ಹೀಗೆಯೇ ಗುರು ಲಕ್ಷಣಗಳು ಸರ್ವ ಋಜು ಸಾಧಾರಣ ರೀತಿಯಿಂದಲೇ ಹೇಳಲ್ಪಟ್ಟಿವೆ. ಕೇವಲ ವಾಯು ಮಾತ್ರ ನಿಷ್ಠ ಲಕ್ಷಣಗಳು ಅವು ಎಂದು ತಿಳಿಯಕೂಡದು.

"ಪ್ರತಿಮೋಕ್ತ ಲಕ್ಷಣೈರ್ಯಾವದ್ಯುಕ್ತ ಆಚಾರ್ಯಉತ್ತಮಃ |
ಸರ್ವವಿತ್ತಪಸಾಯುಕ್ತಃ ಆಜ್ಞಾ ಶಕ್ತಿಯುತೋ ಹರೇಃ | ತಂ.ಸಾ. IV. 130.

ಹೀಗಿರುವುದರಿಂದ ಹೇಗೆ ವಾಯುದೇವರು ಶ್ರೀಹರಿಗೆ ವಿಶಿಷ್ಟ ಪ್ರತಿಮೆಯೋ, ಹೇಗೆ ವಾಯುದೇವರು ಜಗತ್ತಿಗೆ ಮುಖ್ಯ ಗುರುಗಳೋ, ಹಾಗೆಯೇ ಸರ್ವ ಋಜುಗಳೂ ಮುಖ್ಯ ಪ್ರತಿಮಾರೂಪರೇ, ದೇವತೆಗಳಿಗೂ ಮುಖ್ಯ ಗುರುಗಳೇ ಎಂದು ಸಿದ್ಧವಾಗುತ್ತದೆ. ಏಕೆಂದರೆ ಅವರೆಲ್ಲರಿಗೂ ಆ ವಾಯ ದೇವರ ಲಕ್ಷಣಗಳೆಲ್ಲಾ ಇವೆ.

**10.** ಕಿಂಚ ಧರ್ಮಿಗ್ರಾಹಕ ಪ್ರಮಾಣ ವಿಮರ್ಶೆ ಮಾಡಿ ನೋಡಿದರೆ ವಾದಿರಾಜ ಗುರುಗಳ ವಿಷಯದಲ್ಲಿ ರಹಸ್ಯವೂ ಇದೆ. ಮೋಹಿನೀದೇವಿಯಂತೆ, ಮಧ್ವಗುರುಗಳಂತೆ ಅಥವಾ ಜಯತೀರ್ಥರಂತೆ ಅವರು ದೇವಕಾರ್ಯ ವಿಶೇಷ

ಸಾಧನಾರ್ಥವಾಗಿ ಮುಕ್ತಿಯೋಗ್ಯ ಜನರ ಉಪಕಾರಕ್ಕೋಸ್ಕರ ಅವತರಿಸಿದ ಋಜುಗುಣಸ್ಥರಲ್ಲಿ ಒಬ್ಬರೆಂದು ಸ್ವಾಪ್ನವೃನ್ದಾವನಾಖ್ಯಾನದಲ್ಲಿ ಅನೇಕಾವರ್ತಿ ಶ್ರುತವಾಗಿದೆ.

"ಶತಾನಂದ ಮುಕುಂದಾವಸಿತಂಚಯತ್ III 97;

ಮಮೈವಂ ದೈವಿಕಗ್ರಂಥಂ ಹೃದಯಗ್ರಂಥಿ ಸಂಯುತಾಃ |

ಯೇ ನ ಗೃಹ್ಣನ್ತಿ ತಾನ್ ಸರ್ವಾನ್ ಗೃಹ್ಣನ್ತಿ ಯಮಕಿಙ್ಕರಾಃ XIX 15;

ಇದಂ ಸರ್ವಂ ಶರ್ವ ಗುರ್ವಿಂದ್ರ ಪೂರ್ವೈರ್ಗೀರ್ವಾಣೇಂದ್ರೈಗರ್ವರಾಹಿತ್ಯವದ್ಭಿಃ |

ಸರ್ವೋತ್ತಮಃ ಪರ್ವಣಿ ಪಾರ್ವತೀಯೈಮೌರ್ವ್ಯಾದವ್ಯಾರಾಧಿತಸ್ತತ್ಕೃತಂಮೇ XVIII

ಹಾಗೆಯೇ VI 86. V 25, 26:

ತಸ್ಮಾದ್ವೃನ್ದಾವನಾಖ್ಯಾನಂ ಮುಕುಂದಾನಂದ ಕಾರಣಂ |

ಮನ್ದಾನಾಂ ಬೋಧನಾರ್ಥಾಯ ಕಂದಾಶನ ಕೃತಂ ತ್ವಭೂತ್ |

ಹೀಗೆಯೇ V 28, 29, 72-81, 92/VI 28-29, 54 ಚತುರ್ಣಾಮಪಿ ವಿಶ್ವಾಸೇ ಸ್ವರ್ಣಲಾಭಂ ಯಥಾತಥಾ / VII 9, 94-95 / VIII 36,40 / IX 29-30 / X69-70, 73-74,115, 116, 121-123, 126-129, 140, 144, 152 / XI 41-48, ಮದ್ವಾಕ್ಯಂ ಮಾನಸಂಸಿದ್ಧ0/ XI 52-53 / XII 54-57, 82-84, 84-87 / XIII-9, 16-17, 27-28, 31, 42, 50-57, 63 / XIV 89-93 / XVI 36-37, 70-74 / XII-107 ರಲ್ಲಿ ಸೂಕ್ಷ್ಮ ರಹಸ್ಯ ಹೇಳದೇ ಇರಲು ಕಾರಣ ಹೇಳಿದ್ದಾರೆ: "ವಕ್ತವ್ಯಮೇವ ವಕ್ತವ್ಯಂ ನಾವಕ್ತವ್ಯಂ ಕದಾಚನ" (ಹೇಳಲಿಕ್ಕೆ ಯೋಗ್ಯವಾದದ್ದೇ ಹೇಳಲ್ಪಡಬೇಕು, ಹೇಳಲಿಕ್ಕೆ ಅನರ್ಹವಾದದ್ದು ಯಾವಾಗಲೂ ಹೇಳಲ್ಪಡಕೂಡದು.) ಇವೇ ಮೊದಲಾದ ಬಹು ಸ್ಥಳಗಳಲ್ಲಿ ಶ್ಲೋಕಾರ್ಥ ಪರ್ಯಾಲೋಚಿಸಿದರೆ ಆ ಗ್ರಂಥವು ದೇವರ ಆಜ್ಞೆಯಿಂದ ದೇವ ಕಾರ್ಯದ ನಿರ್ವಾಹಾರ್ಥವಾಗಿ ರಚಿತವಾಗಿದೆ ಎಂದು ತಿಳಿಯಲ್ಪಡುತ್ತದೆ. "ಮಯಿ ಬ್ರಹ್ಮಾಚ ವಾಯುಶ್ಚ ವರ್ತತೇ ಸರ್ವದಾಽಪಿ ಹಿ" - ಎಂದರೆ ನನ್ನಲ್ಲಿ ಬ್ರಹ್ಮವಾಯುಗಳು ಸರ್ವದಾ ವಾಸವಾಗಿರುತ್ತಾರೆ. ನನಗೆ ವಿಮುಕ್ತಿಯಾಗುವ ವರೆಗೂ ಈ ದೇಹದಲ್ಲಿರುತ್ತಾರೆ. ಆದ್ದರಿಂದ ನನ್ನಿಂದ ಹೇಳಲ್ಪಟ್ಟಿದ್ದೆಲ್ಲಾ ಎಷ್ಟು ಅದ್ಭುತವಾಗಿ ಕಂಡರೂ ನನ್ನಿಂದ ನಡೆಯಲ್ಪಡತಕ್ಕದ್ದೆ. ಅಧಿಕಾರಿಗಳಲ್ಲೆಲ್ಲಾ ನಾನು ಉತ್ತಮನು, ಸಂಶಯವಿಲ್ಲ ಎಂದು VII 96-97 ಶ್ಲೋಕಗಳಲ್ಲಿ ಗುರುರಾಜರಲ್ಲಿ ಈ ದೇಹಾವಸಾನ ಪರ್ಯಂತ ಅವೇಶ ವಿಶೇಷವೂ ಉಕ್ತವಾಗಿದೆ. ಈ ವೃತ್ತಾಂತವು ವಾದಿರಾಜ ಗುಣರತ್ನಮಾಲಾ ತೃತೀಯಾಧ್ಯಾಯದಲ್ಲಿ ವಿಸ್ತಾರವಾಗಿ ನಿರೂಪಿತವಾಗಿದೆ. ಕಲಿಯುಗದಲ್ಲಿ ಶ್ರೀ ವೃನ್ದಾವನಾಚಾರ್ಯರ ದೆಸೆಯಿಂದ ಗುರುರಾಜರ ಮಹತ್ವದ ಉಪದೇಶವಾದ ಮೇಲೆ ಗುರುರಾಜರ ಉಪಾಸನೆಯಿಂದಲೇ [ಆಖ್ಯಾನಾರ್ಥವು ಶ್ರೀ ವೃನ್ದಾವನಾಚಾರ್ಯರಿಗೇ ಸ್ಪಷ್ಟವಾಗಿ ತಿಳಿಯಿತು, ಅವರ ಉಪದೇಶವಾದ ಮೇಲೆಯೇ ಶ್ರೀರಘುವೀರತೀರ್ಥರ ಪ್ರಾಮಾಣ್ಯ ಬೋಧಿನಿಯು 1834 ರಲ್ಲಿ ಸಿದ್ಧವಾಯಿತು ಎಂದು ಹಳೇ ಲಿಖಿತ ಪ್ರತಿಯಲ್ಲಿದೆ.] ಅಧಿಕಾರಿಗಳಿಗೆ ಅಚಲ ಹರಿಭಕ್ತಿ ಸಿದ್ಧಿಸುತ್ತದೆ. ನಿರ್ವಿಘ್ನ ಸಾಧನೆಯು ಆಗುತ್ತದೆ. ಪ್ರಾಪ್ತ ಪುಣ್ಯವೂ ದೈತ್ಯೋಪದ್ರವ, ಅಯೋಗ್ಯಬಂಧು,

ದೇಶ, ಮಿತ್ರ, ಜನತೆ, ಕೀರ್ತ್ಯಾದಿ ವ್ಯಾಮೋಹಗಳಿಂದ ಸೋರಿ ಹೋಗುವುದಿಲ್ಲ. ಕ್ಲೇಶವಿಲ್ಲದೆ ಸಾಧನೆಯಿಂದ ಯೋಗ್ಯರಿಗೆ ಮೋಕ್ಷ ಉಂಟಾಗುತ್ತೆಂಬ ರಹಸ್ಯ ತತ್ತ್ವವು ಆಖ್ಯಾನಾದಿ ಗ್ರಂಥಗಳಲ್ಲೂ ಐತಿಹ್ಯಗಳಲ್ಲೂ ಪ್ರಸಿದ್ಧವಾಗಿದೆ. ಆದ್ದರಿಂದ ವಿಚಾರಮಾಡದೆ ಇದ್ದರೆ ವಾದಿರಾಜಗುರುಗಳ ಸ್ವರೂಪ ನಿರ್ಧಾರಣೆಯು ಆಗುವುದಿಲ್ಲ. ಅದಾಗದೇ ಯೋಗ್ಯ ರೀತಿಯಾಗಿ ಅವರ ಪೂಜಾದಿಗಳನ್ನು ಮಾಡಲು ಸಾಧ್ಯವಾಗದೇ, ತನ್ನ ಪಾನಾರ್ಥವಾಗಿಯೇ ಅಮೃತವು ಕಳಿಸಲ್ಪಟ್ಟಿದ್ದರೂ ಅದನ್ನು ತಿಳಿಯದೆ ತಿರಸ್ಕರಿಸಿದ ಉದಂಕ ಮುನಿಯಂತೆ ಈ ಪೂರ್ವಪಕ್ಷಿ ಮತ್ತು ಅವರ ಅನುಯಾಯಿಗಳಿಂದ ಆತ್ಮಘಾತಕ ಯತ್ನವೇ ಮಾಡಲ್ಪಟ್ಟಂತೆ ಆಗುತ್ತದೆಂಬುದೇ ಸಿದ್ಧಾಂತ. ಆದ್ದರಿಂದ ಈ ವಿಚಾರವು ಕರ್ತವ್ಯವೇ. ಸ್ತೋತ್ತಮರ ಮಹತ್ವವನ್ನು ತಿಳಿಯದೇ ಅವರಲ್ಲಿ ಅಲ್ಪತ್ವ ಜ್ಞಾನ ಹೊಂದಿದರೆ ದೊಡ್ಡ ಹಾನಿಯೂ ಹುಟ್ಟುತ್ತದೆ ಎಂಬುದನ್ನು ಮರೆಯಕೂಡದು. ಆದ್ದರಿಂದ ವಿಚಾರವು ವ್ಯರ್ಥವೆಂಬ ವಾದವು ಅಸಾಧುವೇ.

**ಮೊದಲನೇ ಅಧ್ಯಾಯವು ಮುಗಿಯಿತು.**

## ಅಧ್ಯಾಯ 2

### ಪ್ರಮಾಣ ವಿಚಾರ

1. ಮುಕ್ತಿಯೋಗ್ಯ ಅಧಿಕಾರಿಗಳಿಗೆ ವಿಚಾರದಿಂದ ಮಹತ್ಪ್ರಯೋಜನ ಉಂಟೆಂಬುದು ನಿಜವಾಗಲಿ; ಇತರ ವೃನ್ದಾವನ ವಿಲಕ್ಷಣತನದಿಂದ ಅಭೀಷ್ಟಾವಾಪ್ತಿಯಾಗುತ್ತದೆಂಬುದೂ ನಿಜವಾಗಲಿ; ಅನ್ಯಥಾಪ್ರತ್ಯವಾಯವಾಗಲಿ; ಹಾಗಿದ್ದರೂ 'ಮಾನಾಧೀನಾಮೇಯಸಿದ್ಧಿಃ' ಎಂದಿದೆ. ಪ್ರಮಾಣಗಳಿಂದ ಪ್ರಮೇಯ ನಿರ್ಣಯಮಾಡಬೇಕು. ಜಿಜ್ಞಾಸೆಗೆ ಕರಣಗಳಾವುವು? ವಾದಿರಾಜರು ಋಜುಗಣಕ್ಕೆ ಸೇರಿದವರೆಂಬಲ್ಲಿ ಪ್ರಮಾಣವೇನು? ಎಂದರೆ ಹೇಳಲ್ಪಡುತ್ತದೆ.

ಮೊದಲು ಉಪೋದ್ಘಾತ ಪ್ರಕ್ರಿಯೆಯಿಂದ ಅನೃಜುತ್ವವಾದವು ಪರೀಕ್ಷಿಸಲ್ಪಡುವುದು. ವಾದಿರಾಜ ಮುನಿಗಳು ಋಜುಗಳಲ್ಲ ಎಂಬಲ್ಲಿ ಪ್ರಮಾಣವು ಇಲ್ಲವೇ ಇಲ್ಲ. ಅದು ಹೇಗೆಂದರೆ ಅನು II 1-2 "ವಾದ ಜಲ್ಪ ಯೋಃ | ಸದ್ಭರಾಗಮ ಏವೈಕಃ ಪ್ರಯೋಜ್ಯೋಽಭೀಷ್ಟದಾಯಕಃ" ಎಂದಿದೆ. ಅನು III 4-4 ರಲ್ಲೂ

"ತತ್ಪ್ರತ್ಯಕ್ಷವಿರುದ್ಧಾರ್ಥೇ ನಾಗಮಸ್ಯಾಪಿ ಮಾನತಾ |
ಉಪಜೀವ್ಯಮಕ್ಷಜಂ ಯತ್ತದನ್ಯತ್ರ ವಿಪರ್ಯಯಃ ||165||
ಲೌಕಿಕ ವ್ಯವಹಾರೇಽತ್ರ ಪ್ರತ್ಯಕ್ಷಸ್ಯೋಪೋಜೀವ್ಯತಾ |
ಅವತಾರಾದಿ ದೃಷ್ಟೌ ಸ್ಯಾದಾಗಮಸ್ಯೋಽಪಜೀವ್ಯತಾ |"

ಎಂದಿರುವುದರಿಂದ ಆಗಮೋಪಜೀವಕ ಋಜುತ್ವಾನೃಜತ್ವ ವಿಷಯದಲ್ಲಿ ಆಗಮವೇ ಪ್ರಥಮತಃ ಪ್ರಮಾಣವೆಂದು ಉಪನ್ಯಾಸ ಮಾಡಲ್ಪಡಬೇಕು.

ಬೃ.ಭಾ. III 5, ಪುಟ 91:

"ಅನುಮಾಯಾ ವಿರೋಧಶ್ಚೇತ್ಪ್ರತ್ಯಕ್ಷೇಣಾಗಮೇನವಾ | ಸೈವಾಪ್ರಮಾಣತಾಂಗಚ್ಛೇದಾಗಮದ್ರಿಟ್ಟಥಾऽಕ್ಷಜಂ |

ತಸ್ಮಾದಾಗಮ ಏವೈಕೋ ಮಾನಾನಾಮುತ್ತಮೋತ್ತಮಃ |

ಧರ್ಮಾರ್ಥಕಾಮ ಮೊಕ್ಷಾಣಾಂ ಸಾಕ್ಷಾದೇವ ಪ್ರದಾಯಕಃ | ಇತಿ ವಾಯು ಪ್ರೋಕ್ತೇ"

ಎಂದೂ; ಪುನಃ (ಪುಟ 92):

"ನಿರ್ಣಯಸ್ತ್ವಾಗಮೇನೈವ ನಾನುಮಾ ಆಗಮ ವರ್ಜಿತಾ |

ಕ್ವಚಿನ್ನಿರ್ಣಿತಿ ಹೇತುಃ ಸ್ಯಾದತಃ ಶಾಸ್ತ್ರಾದ್ವಿನಿರ್ಣಯಃ | ಇತಿ ಭಾರತೇ,

"ನಚವೇದಾತ್ಮಿಕೇತಿಹಾಸ ಪುರೋಣೋಕ್ತ ನ್ಯಾಯಂ ಪರಿತ್ಯಜ್ಯ

ಯೇನ ಕೇನಚಿತ್ಕ್ಲೃಪ್ತ ನ್ಯಾಯೋ ಯುಜ್ಯತೇ"

ಎಂದೂ, ಮತ್ತು ಪುನಃ ಪುಟ 262 ರಲ್ಲಿ

"ಪೃಷ್ಟೇನ ಪ್ರಥಮಂ ಮಾನಂ ವಕ್ತವ್ಯಂ ವಾದಿನಾ ಶುಭಂ |

ವೇದಾಃ ಸರ್ವೇ ಶುಭಂ ಮಾನಂಸೇತಿಹಾಸ ಪುರಾಣಕಾಃ |

ಸ ಪಂಚರಾತ್ರಮೀಮಾಂಸಾಃ ಸ್ಮೃತಯಶ್ಚಾಪ್ಯನಂತರಂ |

ತದನ್ಯದಶುಭಂ ಪ್ರೋಕ್ತಂ ನ ಪ್ರಯೋಜ್ಯಂ ಕಥಾಸುಚ"

ಎಂದೂ ಪ್ರಮಾಣಗಳಿವೆ. ಕಥಾ ಲಕ್ಷಣದಲ್ಲೂ. "ಪೃಷ್ಟೇನಾಗಮಏವಾದೌವಕ್ತವ್ಯಃ ಸಾಧ್ಯಸಿದ್ಧಯೇ"| ಎಂದಿದೆ. ಹೀಗೆ ಪೂರ್ವೋಕ್ತ ಪ್ರಮಾಣಗಳಿರುವುದರಿಂದ ಅತೀಂದ್ರಿಯಾರ್ಥ ಸ್ವರೂಪ ನಿರ್ಣಯ ಕಾರ್ಯದಲ್ಲಿ ಆಗಮವೇ ಮುಖ್ಯ ಪ್ರಮಾಣವು; ಅದನ್ನೇ ಮೊದಲು ಹೇಳಬೇಕೆಂದು ಸಿದ್ಧಿಸುತ್ತದೆ.

ತತ್ವ ಪ್ರಕಾಶಿಕಾ II 2-6 "ನಾಪಿಧರ್ಮಾದಿಭ್ರಾಂತಿನಿರಾಸಾಯ ತದಭಾವಃ | ತದುಪಾಯಾಭಾವಾತ್| ನಹಿಪ್ರತ್ಯಕ್ಷಂ ಧರ್ಮಾದ್ಯಭಾವಂ ಗೃಹ್ಣಾತಿ" । ಎಂದಿದೆ. ಈ ನ್ಯಾಯದಿಂದ ಪ್ರತ್ಯಕ್ಷವು ಅನೃಜುತ್ವವನ್ನು ಗ್ರಹಿಸುವುದಿಲ್ಲ. ಪ್ರತ್ಯಕ್ಷ ಸಹಾಯವಿಲ್ಲದುದರಿಂದಲೇ ಪ್ರತ್ಯಕ್ಷನುಸಾರಿ ಅನುಮಾನವೂ ಪ್ರಮಾಣವಾಗುವುದಿಲ್ಲ. ತ.ಪ್ರ. II 2-7 "ಪುರುಷೋಪಸರ್ಜನ ಪ್ರಧಾನಸ್ಯ ಜಗತ್ಕಾರಣತ್ವೇ ಆಗಮ ಪ್ರಮಾಣಾಭಾವಾತ್ | ನಚೋಕ್ತಮನುಮಾನಂ ಪ್ರಮಾಣಂ | "ನ ಋತೇತ್ವತ್ಕ್ರಿಯತೇ ಕಿಂಚ ನಾರೇ" ಇತಿ ಶ್ರುತೇಃ ಶರೀರ ಪ್ರವೃತ್ತಾವಪಿ ಪರಮಾತ್ಮಾಧೀನತ್ವೇ ಸಿದ್ಧೇಸತಿ | ಪುರುಷೋಪಸರ್ಜನ ಪ್ರಧಾನಾಧೀನತ್ವಾತ್ ಸಾಧನೆ ದೃಷ್ಟಾಂತಾಭಾವಾದಿತಿ ಭಾವಃ" ಎಂದಿದೆ. II 1-26 ಬ್ರ.ಸೂ. ಭಾಷ್ಯದಲ್ಲಿಯೇ "ನ ಯುಕ್ತಿ ಯೋಗಾದ್ವಾಕ್ಯಾನಿ ನಿರಾಕಾರ್ಯಾಣಿ ಕ್ವಚಿದಿತಿ ಬೃಹತ್ಸಂಹಿತಾಯಾಂ" ಎಂದಿದೆ. ಪುನಃ II 1-28 ತ.ಪ್ರ. ದಲ್ಲಿ "ನಹಿಶಬ್ದೈಕ ಸಮಧಿಗಮ್ಯೇ ವಸ್ತುನಿ ಯುಕ್ತಿವಿರೋಧಃ | ಸ್ಮೃತಿಂಚಾಹ | ಯದ್ವಾಕ್ಯೋಕ್ತಂ ನತದ್ಯುಕ್ತಿರ್ವಿರೋದ್ಧುಂ ಶಕ್ನುಯಾತ್ಕ್ವಚಿದಿತಿ ಪುರುಷೋತ್ತಮತಂತ್ರೇ" ಎಂದಿದೆ. II 2-26 ತ.ಪ್ರ. "ನ ಶೂನ್ಯಸ್ಯ ಜಗತ್ಕಾರಣತ್ವಂ ಯುಕ್ತಂ | ತತ್ಪ್ರಮಾಣಾಭಾವಾತ್ | ನತಾವತ್ಪ್ರತ್ಯಕ್ಷ ಮತ್ರಾಸ್ತಿ |

ನಾಪ್ಯನುಮಾನಂ । ಆಗಮಸ್ತು ನೇಷ್ಟೋದೃಷ್ಟೋವಾ" । ಇವೇ ಮುಂತಾದ ಪ್ರಮಾಣಗಳ ವಿಮರ್ಶೆಯಿಂದ ಅನೃಜುತ್ವ ವಿಷಯದಲ್ಲಿ ಅನುಮಾನವು ಅಸಾಧಕವು. ಶುಭ ಆಗಮ ಪ್ರಮಾಣವನ್ನೇ ವಾದದಲ್ಲಿ ಪೂರ್ವಪಕ್ಷಿಗಳು ಕೊಡಬೇಕೆಂದು ಸಿದ್ಧವಾಗುತ್ತದೆ. ಆಗಮ ಸಹಾಯವಿಲ್ಲದ ಅನುಮಾನವು ಅಪ್ರಾಮಾಣಿಕ ಕಲ್ಪನೆ ಎನಿಸುತ್ತದೆ. III 2-38 ತ.ಪ್ರ. ದಲ್ಲಿ "ಅಪ್ರಾಮಾಣಿಕ ಕಲ್ಪನಸ್ಯ ಕ್ವಾಪ್ಯನುಪ ಯೋಗಿತ್ವಾತ್" | ಎಂದು ಅಂತಹ ಶುಷ್ಕಾನುಮಾನ ಪ್ರಯೋಗವು ನಿಂದಿತವಾಗಿದೆ. ಪ್ರಸಕ್ತ ಗುರುಗಳ ವಿಷಯದಲ್ಲಿ ನಿತ್ಯಾತೀಂದ್ರಿಯ ಋಜುತ್ವ ತದಭಾವ ನಿರ್ಣಯ ಕಾರ್ಯದಲ್ಲಿ ಪ್ರತ್ಯಕ್ಷನುಮಾನಗಳು ಪ್ರವರ್ತಿಸುವುದಿಲ್ಲವೆಂದು ಪೂರ್ವಪಕ್ಷ ಗ್ರಂಥದಲ್ಲೂ ಮೂರು ಕಡೆ ಅಂಗೀಕೃತವಾಗಿದೆ. ವಾ.ಋ.ವಿ. ಪುಟ 1-2 "ವರ್ತಮಾನ ಕತಿಪಯ ಇಂದ್ರಿಯ ಯೋಗ್ಯ ವಿಷಯ ಗೋಚರ ಮಾತ್ರ ಕ್ಷಮಸ್ಯಾಸ್ಮತ್ಪ್ರತ್ಯಕ್ಷಸ್ಯ ನಿತ್ಯಾತೀಂದ್ರಿಯ ಋಜುತ್ವವಿಷಯೇ ಅಪ್ರವರ್ತನೇಽಪಿ" ಎಂದಿದೆ. ಪುಟ 19: "ಯದ್ಯಪ್ಯಸ್ಮತ್ಪ್ರತ್ಯಕ್ಷಸ್ಯ ಋಜುತ್ವ ನಿಷೇಧನೇ ಅಪ್ರವರ್ತನೇಽಪಿ ಅಸ್ತ್ಯೆವ ವ್ಯಾಸರಾಜ ವಿಜಯೀಂದ್ರಾದಿ ವಾದಿರಾಜ ಸಮಕಾಲಿಕಾನಾಂ ಪ್ರತ್ಯಕ್ಷಾಭಾವಸ್ತದ್ವಿಷಯೇ| ........ ನನು ಋಜುತ್ವಸ್ಯಾಪಿ ನಿತ್ಯಾತೀಂದ್ರಿಯತ್ವೇ ತನ್ನೈವ ಭವಿತವ್ಯಂ ಸ್ವರೂಪತ್ವಾ ವಿಶೇಷಾದಿತಿ ಚೇತ್ಸತ್ಯಂ ಎಂದೂ ಇದೆ." ಪುಟ ಏಳರಲ್ಲೂ ಒಪ್ಪಿದ್ದಾರೆ. [ಇಲ್ಲಿ ಗ್ರಂಥಕಾರರು ಪೂರ್ವೋತ್ತರ ವಿರೋಧವನ್ನು ನೋಡದೆ ಗ್ರಂಥದಲ್ಲಿ ತಪ್ಪು ಬರದಿದಾರೆ. ಪುಟ 5-6ರ ವಾಕ್ಯಗಳಲ್ಲಿ "ಪುರಂದರ, ವಿಜಯದಾಸಾದಿಗಳಿಗೆ ಯೋಗಿತ್ವಾಂಗೀಕಾರವು ಅಸಾಧ್ಯ. ಯೋಗಿಗಳಾದರೂ ಅವರಿಗೆ ಪ್ರಮಾಣ ವಿರುದ್ಧ ಸರ್ವದರ್ಶಿತ್ವ ಕಲ್ಪನೆ ಸರಿಯಲ್ಲ. ಅವರಿಗೂ ಅಜ್ಞಾನ ಭ್ರಾಂತ್ಯಾದಿಗಳುಂಟು. ದೃಷ್ಟಾಂತ ಅಶ್ವತ್ಥಾಮ" - ಹೀಗೆ ವಾದಿಸಿದ್ದಾರೆ. ಇಲ್ಲಿ ಸುಮ್ಮನೆ ಪ್ರಮಾಣವಿಲ್ಲದೆ ವ್ಯಾಸರಾಜ ವಿಜಯೀಂದ್ರರಿಗೂ ಆದಿ ಶಬ್ದದಿಂದ ಹಲವು ಜನರಿಗೂ ಯೋಗಿತ್ವ ಕಲ್ಪನೆ, ಅವರಿಗೆ ಭ್ರಾಂತ್ಯಾದಿ ದೋಷಾಭಾವ ಕಲ್ಪನೆ ಸಹ ಮಾಡಿದ್ದಾರೆ. ಈ ಪೂರ್ವಪಕ್ಷ ಗ್ರಂಥವು ಛಲ, ಪ್ರತಾರಣಾ, ಅನೃತ, ವ್ಯಾಹತ್ಯಾದಿ ಬಹು ದೋಷಭರಿತವಾಗಿದೆ. ಅವು ತೋರಿಸಲ್ಪಡುತ್ತವೆ. ಪ್ರಕೃತ ವ್ಯಾಹತೋಕ್ತಿಯಲ್ಲೂ ಅವರು ಋಜುತ್ವಾನೃಜುತ್ವಗಳು ನಿತ್ಯಾತೀಂದ್ರಿಯವೆಂದು ಒಪ್ಪಿದ್ದಾರೆಂದು ತೋರಿಸಲಾಗಿದೆ. ಪುಟ 7ರಲ್ಲಿ ಋಜುತ್ವಸ್ಯ ಚ ನಿತ್ಯಾತೀಂದ್ರಿಯತ್ವಾತ್" ಎಂದಿದೆ.]

2. ಹೀಗೆ ನಿತ್ಯಾತೀಂದ್ರಿಯವೆಂದು ಒಪ್ಪಿದರೂ ಇನ್ನೊಂದು ದುಷ್ಟಪೂರ್ವ ಪಕ್ಷವನ್ನು ಅವರೇ ಮಾಡಿದ್ದಾರೆ. ಅದೇನೆಂದರೆ ಪುಟ 19: "ತಥಾಪಿ ಋಜುತ್ವ ಗಮಕ ಲಿಂಗಗಳು ಪ್ರತ್ಯಕ್ಷ ವಿಷಯಗಳಾದ್ದರಿಂದ ಋಜುತ್ವಕ್ಕೆ ಅಯೋಗಿಗಮ್ಯತ್ವವೂ ಸಿದ್ಧಿಸುತ್ತದೆ. ಮೂವತ್ತೆರಡು ಲಕ್ಷಣ ಉಳ್ಳತನ, ಅನನ್ಯ ಸಾಧಾರಣ ಕಾರ್ಯಕಾರಿತ್ವ, ಇತ್ಯಾದಿಗಳು ಋಜುತ್ವ ಲಕ್ಷಣಗಳೆಂದು ಶಾಸ್ತ್ರಗಳಲ್ಲಿ ಉಕ್ತವಾಗಿದೆ. ಅವುಗಳು ಹನುಮಂತ, ಭೀಮ, ಮಧ್ವರೆಂಬ ವಾಯ್ವಾವತಾರಗಳಲ್ಲಿ ದೃಷ್ಟಗಳಾಗಿವೆ ಎಂದು ರಾಮಾಯಣ ಭಾರತಾದಿಗಳಿಂದ ತಿಳಿಯಲ್ಪಡುತ್ತದೆ. ಹನುಮಂತನಿಗೇ ರಾಮಭಿನ್ನ ಸಮಕಾಲಿಕರ ದೆಸೆಯಿಂದ ಆಧಿಕ್ಯವು ವಾಲ್ಮೀಕಿ ರಾಮಾಯಣದಲ್ಲೇ ಹೇಳಲ್ಪಟ್ಟಿದೆ. ಭೀಮಾಧಿಕ್ಯವು ಯುಧಿಷ್ಠಿರಾದಿ ಸಾತ್ವಿಕರಿಂದಲೂ, ದುರ್ಯೋಧನಾದಿ ತಮೋ ಯೋಗ್ಯರಿಂದಲೂ ಕೂಡ ಅನುಭೂತವೆಂದು ಭಗವತ್ಪಾದರಿಂದಲೇ ಉಪಪಾದಿತವಾಗಿ. ಅವತಾರಗಳಲ್ಲೂ ಋಜುಗಳು ಮೂವತ್ತೆರಡು

ಲಕ್ಷಣವುಳ್ಳವರೆಂದು "ದ್ವಾತ್ರಿಂಶಲಕ್ಷಣೋಪೇತಮಗ್ರ್ಯಂ " ಇತ್ಯಾದಿ ಪ್ರಮಾಣಗಳಿಂದ ಗೊತ್ತಾಗುತ್ತದೆ. ಅಂಥ ತೇಜೋರೂಪದ ಗೂಹನವಾಗಲೀ, ಅನ್ಯರಿಂದ ಅದೃಷ್ಟತ್ವವಾಗಲೀ ಯುಕ್ತವಾಗುವುದಿಲ್ಲ. ಮೋಡ ಪಂಕ್ತಿಗಳಲ್ಲಿ ಅಡಗಿದ್ದರೂ ಸೂರ್ಯಪ್ರಕಾಶವು ಇತರ ಸಕಲ ಜ್ಯೋತಿಷ್ಯುಗಳ ದೆಸೆಯಿಂದ ಶ್ರೇಷ್ಟವೇ. ಹಾಗೆ ಪಂಡಿತಾಚಾರ್ಯರಿಂದಲೂ ಹೇಳಲ್ಪಟ್ಟಿದೆ. "ಪ್ರತ್ಯಕ್ಷ ಮೇವ ಚೈತಲ್ಲಕ್ಷಣಂ ದೃಶ್ಯತೇ ಭಗವತಿ ಭಾಷ್ಯಕಾರೇ ಇತಿ", (ಪ್ರತ್ಯಕ್ಷವಾಗಿಯೇ ಈ ಲಕ್ಷಣಗಳು ಭಗವಂತರಾದ ಭಾಷ್ಯಕಾರರಲ್ಲಿ ಕಾಣುತ್ತದೆ.) ಎಂದು ಬರೆದಿದ್ದಾರೆ. ಹೀಗೆ ಅವತಾರದಲ್ಲಿ ಮೂವತ್ತೆರಡು ಲಕ್ಷಣದ ಶರೀರವುಳ್ಳತನವು ಋಜುತ್ವವು. ಅದು ಪ್ರತ್ಯಕ್ಷ ಯೋಗ್ಯವು; ನಿತ್ಯಾತೀಂದ್ರಿಯವಲ್ಲ" ಎಂದು ಅವರ ಭಾವ.

ಹಾಗೆಯೇ ಇನ್ನೊಂದು ಅವರ ಪೂರ್ವಪಕ್ಷವೇನೆಂದರೆ: ಪುಟ 2 "ನಮ್ಮ ಪ್ರತ್ಯಕ್ಷವು ನಿತ್ಯಾತೀಂದ್ರಿಯ ಋಜುತ್ವ ವಿಷಯದಲ್ಲಿ ಪ್ರವರ್ತಿಸುವುದಿಲ್ಲವಾದರೂ....ಯೋಗಿಗಳಿಗೆ ಪ್ರತ್ಯಕ್ಷ ವಿಷಯವಾಗುತ್ತದೆ." ಪುಟ 19 "ಯದ್ಯಪಿ ನಮ್ಮ ಪ್ರತ್ಯಕ್ಷವು ಋಜುತ್ವ ನಿಷೇಧನೆಯಲ್ಲಿ ಅಪ್ರವರ್ತವಾದರೂ ವ್ಯಾಸರಾಜ, ವಿಜಯೀಂದ್ರಾದಿ ವಾದಿರಾಜ ಸಮಕಾಲಿಕರ ಪ್ರತ್ಯಕ್ಷಾಭಾವವು ಆ ವಿಷಯದಲ್ಲಿದೆ." ಎಂದು ಬರೆದಿದ್ದಾರೆ. ಹೀಗೆ ಉಭಯವಿಧ ಪ್ರತ್ಯಕ್ಷ ಗಮ್ಯತ್ವವೂ ಬಂದಿದ್ದರಿಂದ ಋಜುತ್ವ, ತದಭಾವಗಳು ಆಗಮೈಕ ವೇದ್ಯಗಳಲ್ಲ ಎಂದು ಅವರ ಮತ.

ಎರಡು ಪೂರ್ವಪಕ್ಷಗಳೂ ಸರಿಯಲ್ಲ. ಅನಂತ ಲಕ್ಷಣ ಸಂಪನ್ನ ರಾಮಕೃಷ್ಣಾದಿ ಶ್ರೀಹರಿರೂಪಗಳು, ಅನೇಕ ಲಕ್ಷಣ ಸಂಪನ್ನ ಸೀತಾ ರುಕ್ಮಿಣ್ಯಾದಿ ಲಕ್ಷ್ಮೀರೂಪಗಳು, ಮೂವತ್ತೆರಡು ಲಕ್ಷಣಯುಕ್ತ ಹನುಮದಾದಿ ವಾಯುರೂಪಗಳು, ಹಾಗೆಯೇ ಮಹಾತ್ಮರಾದ ಶೇಷಾದಿ ದೇವಾವತಾರಗಳು ಭೂಲೋಕದಲ್ಲಿ ಕಂಡಕಾಲದಲ್ಲಿ ಅವರುಗಳ ತತ್ತದ್ಯೋಗ್ಯ ಲಕ್ಷಣಗಳು ಅವರಲ್ಲಿ ಇದ್ದೇ ಇರುತ್ತವೆ. ಭಾಗ.ತಾ III 7-21 ರಲ್ಲಿ ಈ ವಿಷಯ ಹೇಳಿದೆ.

(ಅಧಿಕಾರೇ ಚ ಮುಕ್ತ್ಯಾಚ ಬ್ರಹ್ಮವಾಯೊ ತಯೋಃ |
ಶೇಷವೀಂದ್ರ ಹರಾಣಾಂ ಚತಸ್ತ್ರೀಣಾಂ ವಾಸವಾದಿನಾಂ|
ಯಥಾಕ್ರಮಂತು ವಿಜ್ಞೇಯಾ ಭೂಮೌ ಕಾರಣತೋ ಅನ್ಯಥಾ |
ದೇಹಸ್ಯಲಕ್ಷಣಂ ಚೈವ ಭೂಮಾವಪ್ಯನ್ಯಥಾ ಭವೇತ್ |
ಬ್ರಹ್ಮಾದಿಷು ಕ್ರಮೇಣೈವನಿತ್ಯಂ ಸ್ಯಾದ್ದೆಹಲಕ್ಷಣಂ ಇತಿ | ತತ್ವ ನಿರ್ಣಯೇ" |

ಹೀಗೆ ಇದ್ದರೂ ದೇವತೆಗಳ ಅಥವಾ ದೇವಸ್ತ್ರೀಯರ ಅವತಾರಗಳನ್ನು ಸಾಮಾನ್ಯ ಜನರು ನೋಡಿದಾಗಲೂ ತನ್ನಿಷ್ಟ ಲಕ್ಷಣಗಳನ್ನು ಲಕ್ಷಣ ಶಾಸ್ತ್ರಜ್ಞಾನ ಸಹಕೃತ ಪರೀಕ್ಷಾ ವಿಶೇಷದಿಂದ ಯುಕ್ತವಾದ ಪ್ರತ್ಯಕ್ಷದಿಂದ ಅಯೋಗಿ ಜನರು ವಿಷಯೀಕರಿಸಬಹುದೆಂದು ಶಾಸ್ತ್ರಕಾರರು ಒಪ್ಪಿರುತ್ತಾರೆ. ಅಪರೀಕ್ಷಕರ ದರ್ಶನಕ್ಕೆ ಆ ಲಕ್ಷಣಗಳು ಅವೇದ್ಯಗಳೇ.

ಮ.ತಾ.ನಿ. XXX 124-5: "ಸಮಸ್ತ ಲಕ್ಷಣಾಭಿಜ್ಞಾಃ ಕೃಷ್ಣಃ ಸತ್ಯಾ ವೃಕೋದರಃ |
ಕೃಷ್ಣಾ ಚ ಪಂಚಮೋ ನಾಸ್ತಿ ವಿದ್ಯಾ ಶುದ್ಧೇಯಮಂಜಸಾ |"

ಇತ್ಯಾದಿ ಶ್ಲೋಕಗಳಲ್ಲಿ ಲಕ್ಷಣ ಶಾಸ್ತ್ರಜ್ಞಾನವು ಪರಶುಕ್ಲ ತ್ರಯ ಮಾತ್ರ ನಿಷ್ಠವೆಂದು ಪ್ರತಿಪಾದಿತವಾಗಿದೆ. ವಜ್ರ ಅಥವಾ ಬಲಮುರಿ ಶಂಖವು ಪ್ರತ್ಯಕ್ಷವಾದರೂ ವಜ್ರದ ಅನರ್ಘತೆಯು, ಶಂಖದ ಮಹಿಮೆಯೂ ತತ್ತಚ್ಛಾಸ್ತ್ರಜ್ಞಾನ ಸಹಕೃತ ಪರೀಕ್ಷಾ ವಿಶೇಷಯುಕ್ತ ಪ್ರತ್ಯಕ್ಷವೇದ್ಯತ್ವವಿರುವಂತೆ ತಿಳಿಯಬೇಕು. ಲಕ್ಷಣಗಳು ಯಾವ ಕಾಲದಲ್ಲೂ ಸಾಧಾರಣ ಪ್ರತ್ಯಕ್ಷದಿಂದ ತಿಳಿಯಲ್ಪಟ್ಟಿಲ್ಲ. "ಅಂಥ ತೇಜೋರೂಪವನ್ನು ಮುಚ್ಚಿಡುವುದು ಶಕ್ಯವಲ್ಲ" ಎಂದು ಮುಂತಾಗಿ ಪೂರ್ವಪಕ್ಷಿಯು ಉಪಪಾದಿಸಿಸಿದ್ದು ಪ್ರಮಾಣ ವಿರುದ್ಧವೇ. ಅವರು ಕೊಟ್ಟ ದೃಷ್ಟಾಂತವೂ ಆಭಾಸವೇ. ಲಕ್ಷಣಗಳು ಸೂಕ್ಷ್ಮಗಳು, ವ್ಯಕ್ತವಾಗಿ ಸಾಮಾನ್ಯ ಜನರಿಗೆ ಕಾಣುವುದಿಲ್ಲ. ವಾಲ್ಮೀಕಿ ರಾಮಾಯಣದಲ್ಲಿ ರಾಮ ಲಕ್ಷಣಗಳಾಗಲೀ, ಹನುಮಂತಾದಿಗಳ ಲಕ್ಷಣಗಳಾಗಲೀ ಸಾಮಾನ್ಯ ಜನರಿಂದ ದೃಷ್ಟವಾದವೆಂದು ಎಲ್ಲಿಯೂ ಹೇಳಿಲ್ಲ. ಮಹಾಭಾರತದಲ್ಲಿ ಕೃಷ್ಣ ಲಕ್ಷಣಗಳಾಗಲೀ, ಭೀಮ ಲಕ್ಷಣಗಳಾಗಲೀ, ಯುಧಿಷ್ಠಿರಾದಿಗಳಿಂದ ದೃಷ್ಟವಾದವೆಂದು ಹೇಳಲ್ಪಟ್ಟೇ ಇಲ್ಲ. ದುರ್ಯೋಧನಾದಿಗಳಿಂದ ಲಕ್ಷಣಗಳು ನೋಡಲ್ಪಡಲಿಲ್ಲವೆಂದು ಇನ್ನು ಹೇಳ ತಕ್ಕದ್ದೇನು? ಪುಟ 19 ರಲ್ಲಿ ಪೂರ್ವಪಕ್ಷ್ಯುದಾಹೃತ ನಿರ್ಣಯ ಶ್ಲೋಕಗಳು **(II 166-168)** ಈ ವಿಷಯದಲ್ಲಿ ಅವರಿಗೆ ಸಾಧಕವಲ್ಲ. ಪ್ರತ್ಯುತ ಅಸಂಗತವೇ. ಆ ಶ್ಲೋಕಗಳು ಯುಧಿಷ್ಠಿರ ದುರ್ಯೋಧನಾದಿಗಳಿಂದ ಭೀಮನ ಶಾರೀರಿಕ ಬಲವು ಹೇಗೆ ತಿಳಿಯಲ್ಪಟ್ಟಿತ್ತೆಂಬಲ್ಲಿ ಪ್ರಮಾಣವು. ಲಕ್ಷಣ ಪ್ರತ್ಯಕ್ಷವಾಗಿ ಋಜುತ್ವ ಜ್ಞಾನವಾಯಿತೆಂಬಲ್ಲಿ ಅವು ಸಾಧಕವಲ್ಲ. "ದ್ವಾತ್ರಿಂಶಲ್ಲಕಣೋಪೇತಮಗ್ರ್ಯಂ" ಎಂಬುದು ಯಾವ ನಿರ್ಣಯ ಶ್ಲೋಕದಲ್ಲಿ ಬಂದಿದೆಯೋ, ಅಲ್ಲಿಯೇ

"ಅಪ್ರಾಕೃತಾನಾಂತು ಮನೋಹರಂ ಯದ್ರೂಪಂ ದ್ವಾತ್ರಿಂಶಲ್ಲಕ್ಷಣೋಪೇತಮಗ್ರ್ಯಮ್ | ತನ್ಮಾರುತೋ ನಕುಲೇ ಕೋಮಲಾಭಃ......"

ಎಂದು ಆನುಪೂರ್ವಿ ಇದೆ. ಅಲ್ಲಿ ವಾದಿರಾಜೀಯ ವ್ಯಾಖ್ಯಾನವು "ಅಪ್ರಾಕೃತಾನಾಂ=ಅಲೌಕಿಕಾನಾಂ, ತು=ವಿಶೇಷೇಣ ಮನೋಹರಂ, ದ್ವಾತ್ರಿಂಶಲ್ಲಕಣೋಪೇತಂ ಅಗ್ರ್ಯಮ್,=ವಜ್ರಸಾರಾಂಗಂ, ಯನ್ನಿಜರೂಪಂ ತತ್ ರೂಪಂ ಮಾರುತಃ" ಎಂದಿದೆ. ಲಕ್ಷಣಗಳು ಅವ್ಯಕ್ತಗಳು, ಲೌಕಿಕರಿಗೆ ಅಜ್ಞೇಯವೆಂದು ಆ ವ್ಯಾಖ್ಯಾನವು ಸೂಚಿಸುತ್ತದೆ. ಆದ್ದರಿಂದಲೇ ಮಧ್ವಾವತಾರ ಕಾಲದಲ್ಲೂ ಯಾವ ಸಾಮಾನ್ಯ ಪುರುಷನಿಂದಲೂ ಅವರ ಲಕ್ಷಣಗಳು ಪ್ರತ್ಯಕ್ಷೀಕೃತವಾದವೆಂದು ಎಲ್ಲೂ ಹೇಳಿಲ್ಲ. ಆದರೆ ಮಧ್ವಗುರುಗಳಿಂದಲೇ ತಮ್ಮ ಲಕ್ಷಣಗಳು ಪ್ರತಿಪಾದಿಸಲ್ಪಟ್ಟಿವೆ. ಅವರ ಅನುಗ್ರಹ ಪಾತ್ರರಾಗಿದ್ದರೂ ತ್ರಿವಿಕ್ರಮ ಪಂಡಿತಾಚಾರ್ಯರು ಲಕ್ಷಣ ದರ್ಶನದಿಂದ ತಮ್ಮ ಆಚಾರ್ಯರ ಋಜುತ್ವವನ್ನು ನಿರ್ಣಯಿಸಲಿಲ್ಲ. ಮತ್ತೆ ಹೇಗೆಂದರೆ ಗುರೂಪದೇಶಾದಿ ಆಗಮದಿಂದಲೇ ತಿಳಿದರು. ಶ್ರೀಹರಿವಾಯುಸ್ತುತಿಯನ್ನೂ ಮಾಡಿದರು.

ಈ ಸಂದರ್ಭದಲ್ಲಿ ಪುಟ 20 ರಲ್ಲಿ "ಉಕ್ತಂ ಚ ಪಂಡಿತಾಚಾರ್ಯೈಃ ಪ್ರತ್ಯಕ್ಷಮೇವ ಚೈತಲ್ಲಕ್ಷಣಂ ದೃಶ್ಯತೇ ಭಗವತಿ ಭಾಷ್ಯಕಾರೇ" ಎಂಬ ಪೂರ್ವಪಕ್ಷಿಗಳ ವಾಕ್ಯವು ವಂಚನೆಯೇ. ಅವರು ಉದಾಹರಿಸಿರುವ ಪಂಡಿತಾಚಾರ್ಯರ ವಾಕ್ಯವು ತತ್ವ ಪ್ರದೀಪಿಕಾ ಪುಟ 17 ರಲ್ಲಿದೆ. ಅದು ಹೀಗಿದೆ:

"ಅಶ್ರುತಾ ಪ್ರತಿಭಾಯಸ್ಯ ಶ್ರುತಿಸ್ಮೃತ್ಯವಿರೋಧಿನೀ ।

ವಿಶ್ರುತಾನ್ನೃಷು ಜಾತಂ ಚ ತಂ ವಿದ್ಯಾದ್ದೇವ ಸತ್ತಮಂ ಇತಿ ನಾರಾಯಣ ಶ್ರುತಿಃ ॥

ಪ್ರತ್ಯಕ್ಷ ಮೇವ ಚೈತಲ್ಲಕ್ಷಣಂ ದೃಶ್ಯತೇ ಭಗವತಿ ಭಾಷ್ಯಕಾರೇ" ಎಂದಿದೆ. ಇಲ್ಲಿ ಏತಲ್ಲಕ್ಷಣಂ ಎಂದರೆ ಅಶ್ರುತ ಪ್ರತಿಭಾತ್ವವು, ಋಜುತ್ವವಲ್ಲ. ಅಶ್ರುತ ಪ್ರತಿಭಾತ್ವವು ದೇವಶ್ರೇಷ್ಠತ್ವ ಜ್ಞಾಪಕ ಲಕ್ಷಣ, ಋಜುತ್ವ ಜ್ಞಾಪಕ ಲಕ್ಷಣವಲ್ಲ. ದ್ವಾತ್ರಿಂಶಲಕ್ಷಣ ಜ್ಞಾಪಕವೂ ಅಲ್ಲ. ಆದ್ದರಿಂದ ಲಕ್ಷಣಗಳು ಸಾಮಾನ್ಯ ಪ್ರತ್ಯಕ್ಷ ಯೋಗ್ಯಗಳೆಂದು ಹೇಳಲು ಸಾಧ್ಯವಿಲ್ಲ. ಲಕ್ಷಣಗಳು ಸಾಮಾನ್ಯ ಪ್ರತ್ಯಕ್ಷದಿಂದ ಜ್ಞೇಯವೆಂದು ಪ್ರತಿಜ್ಞೆ ಮಾಡಿ ಪೂರ್ವಪಕ್ಷಿಯು ಮೇಲ್ಕಂಡ ಶ್ಲೋಕಗಳನ್ನು ಉದಾಹರಿಸಿದ್ದು ಅಸಂಗತವೇ. ಆ ಶ್ಲೋಕಗಳು ಮೂವತ್ತೆರಡು ಲಕ್ಷಣಗಳು ಸಾಮಾನ್ಯ ಪ್ರತ್ಯಕ್ಷಜ್ಞೇಯವೆಂದು ಹೇಳುವುದೇ ಇಲ್ಲ. ಆದ್ದರಿಂದ ಋಜುತ್ವವು ಆಗಮೈಕವೇದ್ಯವು, ವಿಷ್ಣು ಪರಬ್ರಹ್ಮತ್ವದಂತೆ. ತತ್ವನಿರ್ಣಯ ಟೀಕೆಯಲ್ಲಿ ಪರಬ್ರಹ್ಮ ವಿಷಯದಲ್ಲಿ ಪ್ರತ್ಯಕಾನುಮಾನಗಳು ಪ್ರವರ್ತಿಸುವುದಿಲ್ಲವೆಂದು ಹೇಳಿದ್ದಾರೆ. ಪುಟ 1: "ಪ್ರತ್ಯಕ್ಷಾನುಮಾನಾಭ್ಯಾಂ ಅನ್ಯಥಾಪಿ ಜ್ಞಾಯತೇ ಇತ್ಯತ ಉಕ್ತಂ । ಏಕೇತಿ । ಆಗಮಾನಪೇಕ್ಷಸ್ಯ ಪ್ರತ್ಯಕ್ಷಾದೇರ್ನಾರಾಯಣಸ್ಯ ಸದೋಷತ್ವಾದೌ ಪ್ರವೃತ್ತ್ಯನುಪಪತ್ತೇಃ । ತದಪೇಕ್ಷಾಯಾಂ ಚ ಉಪಜೀವ್ಯ ವಿರೋಧೇನ ನತಸ್ಯ ತತ್ರ ಪ್ರಾಮಾಣ್ಯಮಿತಿಭಾವಃ ।' ಎಂದಿದೆ.

ಯೋಗಿ ಪ್ರತ್ಯಕ್ಷದಿಂದ ಲಕ್ಷಣಗಳು ತಿಳಿಯಲ್ಪಡುತ್ತವೆಂಬ ದ್ವಿತೀಯ ಪೂರ್ವಪಕ್ಷವೂ ಸಮೀಚೀನವಲ್ಲ. ಯದ್ಯಪಿ ಶ್ರೀಹರಿಯ ಪರಬ್ರಹ್ಮತ್ವದಂತೆ ಅವನ ಲಕ್ಷಣಗಳೂ ಯೋಗಿ ಪ್ರತ್ಯಕ್ಷಗಮ್ಯವೇ. ಹಾಗೆ ಹನುಮಂತ, ಭೀಮ, ಮಧ್ವರ ಲಕ್ಷಣಗಳೂ ಯೋಗಿ ಪ್ರತ್ಯಕ್ಷಗಮ್ಯಗಳೇ. ಹಾಗಿದ್ದರೂ ಯೋಗಿ ಜ್ಞಾನಕ್ಕೆ ಶಾಸ್ತ್ರಜ್ಞಾನವೇ ಉಪಜೀವ್ಯವು. (ಉತ್ಪತ್ತ್ಯಾದಿ ಮೂಲಕಾರಣ ಮತ್ತು ಆಶ್ರಯವು.) ಯೋಗಿಜ್ಞಾನವು ಶಾಸ್ತ್ರಜ್ಞಾನಕ್ಕೆ ಫಲರೂಪವಾದದ್ದು, ಕ್ವಚಿಚ್ಛಾಸ್ತ್ರ ಜ್ಞಾನಸಹಕೃತವೂ ಆದ್ದರಿಂದ ಶ್ರೀಹರಿಯು ಯೋಗಿ ಪ್ರತ್ಯಕ್ಷಗಮ್ಯನಾದರೂ ವೇದೈಕ ಸಮಧಿಗಮ್ಯನೆಂದು । 1-3 ಪ್ರಮಾಣವಿದೆ. ಬ್ರ.ಸೂ.ಭಾ.ದಲ್ಲಿ "ನಾವೇದವಿನ್ಮನುತೇದಂ ಬೃಹನ್ತ" ಇತ್ಯಾದಿ ಪ್ರಮಾಣಗಳಿಂದ ನಿರ್ಣಯಿಸಲ್ಪಟ್ಟಿದ್ದಾನೆ. ತಥಾಚ ವೇದಾನುಗ್ರಹವಿಲ್ಲದಿದ್ದರೆ ಅನುಮಾನದಿಂದಾಗಲೀ, ಯೋಗಜ ಶಕ್ತಿಯಿಂದಾಗಲಿ, ಯಶೋದಾದಿ ಉತ್ತಮ ಜನ ಪ್ರತ್ಯಕ್ಷದಿಂದಾಗಲೀ ಪರಬ್ರಹ್ಮನನ್ನು ತಿಳಿಯಲಾಗುವುದೇ ಇಲ್ಲ. ಇದಲ್ಲದೆ ಯೋಗಿತ್ವವೂ ಅತೀಂದ್ರಿಯವಾದ್ದರಿಂದ ಆಗಮಸಿದ್ಧವು. ಆದ್ದರಿಂದ ಅದೃಷ್ಟವೂ, ನಿತ್ಯಾತೀಂದ್ರಿಯವೂ ಆದ ಧರ್ಮ, ಧರ್ಮಾಭಾವ, ಋಜುತ್ವ, ತದಭಾವಾದಿ ವಿಷಯಗಳಲ್ಲಿ ವೇದವೇ ಪ್ರಮಾಣವು. "ಔಪನಿಷದತ್ವಾನ್ನಾವಚನೇ ನೇಕ್ಷಣಂ । ಶ್ರುತಿ ಸಾಹಾಯ್ಯರಹಿತಮನುಮಾನಂ ನ ಕುತ್ರಚಿತ್। ನಿಶ್ಚಯಾತ್ಸಾಧಯೇದರ್ಥಂ ಪ್ರಮಾಣಾಂತರಮೇವ ಚ ।" ಎಂದು ಬ್ರ.ಸೂ.ಭಾ । 1:3 ಪ್ರಮಾಣವಿದೆ.

["ಶ್ರುತಿಸ್ಮೃತಿಸಹಾಯ" ಯತ್ಪ್ರಮಾಣಾಂತರಮುತ್ತಮಮ್ । ಪ್ರಮಾಣ ಪದವೀಮ್ ಗಚ್ಛೇತ್" ಎಂದಿದೆ. 'ಯಥಾ ಯಶೋದಾಯಾಃ ಪ್ರತ್ಯಕ್ಷಂ' ಎಂದು ತ.ಪ್ರ.ಟೀಕಾ ಇದೆ. ಆಗಮ ಸಹಾಯವುಳ್ಳ ಯೋಗಿ ಪ್ರತ್ಯಕ್ಷವು ಪ್ರಮಾಣವೆಂದು

ಭಾವ. I 1-3 ಬ್ರ.ಸೂ.ಭಾ. ಯಶೋದೆಯ ವಿಶ್ವಗ್ರಾಹಿಪ್ರತ್ಯಕ್ಷವು "ಯ ಉತ್ರಿಧಾತು ಪೃಥಿವೀಂ ಏಕೋದಾಧಾರ ಭುವನಾನಿ" ಎಂಬ ಆಗಮ ಸಹಾಯ ಉಳ್ಳದ್ದು - ಹೀಗೆ ಭಾವದೀಪಿಕಾದಲ್ಲಿದೆ.]

3. ಇದರ ಮೇಲೆ ಪೂರ್ವಪಕ್ಷವಿದೆ. "ಪ್ರತ್ಯಕ್ಷವೂ, ಯೋಗಿ ಪ್ರತ್ಯಕ್ಷವೂ ಋಜುತ್ವ ವಿಷಯದಲ್ಲಿ ಪ್ರಮಾಣವಾಗದಿದ್ದರೂ ಋಜುತ್ವ ತದಭಾವಗಳು ಪರಬ್ರಹ್ಮತ್ವದಂತೆ ಅತೀಂದ್ರಿಯವಾದರೂ ತದವ್ಯಾಪ್ಯ ಲಿಂಗಗಳು ಕ್ವಚಿತ್ಪ್ರತ್ಯಕ್ಷ ವಿಷಯವಾಗುವುದರಿಂದ ಹೇಗೆ ಅವುಗಳ ವಿಷಯದಲ್ಲಿ ಅನುಮಿತಿ ಹುಟ್ಟುವುದಿಲ್ಲ? ಅನಿತರ ಸಾಧಾರಣ ಕಾರ್ಯಕಾರಿತ್ವಲಿಂಗದಿಂದ ಅದರಲ್ಲೂ ಋಜು ಮಾತ್ರ ನಿಷ್ಠವಾದ ನಿತ್ಯಧ್ಯಾನಶೀಲತ್ವ, ಅಸ್ಖಲನ ಮುಂತಾದ ಲಿಂಗ ಪ್ರತ್ಯಕ್ಷದಿಂದ ಋಜುತ್ವ ನಿರ್ಣಯವು ಮಾಡಲ್ಪಡಲಿ. ಜ್ವರಾನುಭವ, ಸ್ಖಲನ, ಬುದ್ಧಿಮಾಂದ್ಯ, ವಿಪರೀತಜ್ಞಾನಾದಿ ಲಿಂಗದಿಂದ ಋಜುತ್ವಾಭಾವವು ಅನುಮಿತವಾಗಲಿ, ಋಜುತ್ವಾದಿಗಳು ಆಗಮೈಕವೇದ್ಯವೆಂದು ಏತಕ್ಕೆ ಒಪ್ಪಬೇಕು? ಧೂಮದರ್ಶನದಿಂದ ಮನೆಯೊಳಗಿರುವ ಅಗ್ನಿಯ ನಿರ್ಣಯವಾಗುವುದಿಲ್ಲವೇ ?"

ಈ ಪ್ರಶ್ನೆ ಅಜ್ಞಾನಮೂಲಕವಾದದು. ಅಗ್ನಿಯು ಸ್ವಭಾವತಃ ಪ್ರತ್ಯಕ್ಷ ಯೋಗ್ಯವು. ನಿತ್ಯಾತೀಂದ್ರಿಯವಲ್ಲ. ಋಜುತ್ವ, ಪುಣ್ಯ, ಪಾಪ ಮುಂತಾದುವು ನಿತ್ಯಾತೀಂದ್ರಿಯಗಳು. ನಿತ್ಯಾತೀಂದ್ರಿಯ ವಿಷಯದಲ್ಲಿ ಆಗಮವೇ ಉಪಜೀವ್ಯ ಪ್ರಮಾಣವೆಂದು ಸಿದ್ಧಾಂತವಾಗಿದೆ. ಅಂಥವುಗಳ ವಿಷಯದಲ್ಲಿ ನಿರವಕಾಶಾಗಮವನ್ನು ಬಿಟ್ಟು ಬೇರೆ ವ್ಯಾಪ್ತಿಗ್ರಾಹಕ ಪ್ರಮಾಣವಿಲ್ಲ. (ಯತ್ರಧೂಮಃ ತತ್ರ ಸಮೀಪೇ ಅಗ್ನಿಃ ಎಂದು ಪ್ರತ್ಯಕ್ಷದಿಂದ ವ್ಯಾಪ್ತಿ ಜ್ಞಾನ ಹುಟ್ಟುತ್ತದೆ. ಹಾಗೆಯೇ "ಯೋಽಚ್ಛಿನ್ನ ಭಕ್ತಃ ಸ ಋಜುಃ" ಎಂದು ಪ್ರತ್ಯಕ್ಷದಿಂದ ಜ್ಞಾತವಾಗುವುದಿಲ್ಲ. ಆದ್ದರಿಂದ ಸಾಧ್ಯವನ್ನು ಸಾಧನೆ ಮಾಡಿ ಕೊಡುವ ಸಂಪ್ರತಿಪನ್ನ ಲಿಂಗವು ದೊರೆಯುವುದಿಲ್ಲ. ದೃಷ್ಟಾಂತ: ಗೋವರ್ಧನೋದ್ಧಾರವನ್ನು ಕಂಡರೂ ಸಂಜೀವನ ಪರ್ವತೋದ್ಧಾರಿ ಹನುಮಂತನ ಅಪರಾವತಾರವೇ ಶ್ರೀಕೃಷ್ಣನು ಎಂದೂ ಊಹಿಸಬಹುದು. ಮಲೋತ್ಸರ್ಗ, ಮೂತ್ರೋತ್ಸರ್ಗ ಮುಂತಾದ ಪ್ರತ್ಯಕ್ಷದಿಂದ ಬ್ರಹ್ಮತ್ವಾಭಾವವೂ ಶ್ರೀಕೃಷ್ಣನಲ್ಲಿ ತಿಳಿಯಲ್ಪಡಬೇಕಾಗುತ್ತದೆ. ದೈತ್ಯವಂಚನಾರ್ಥವಾಗಿ ಕೃತವಾದ ನಾರಾಯಣ ಕರ್ಮಗಳಲ್ಲಿ ಸರ್ವತ್ರ ಅಬ್ರಹ್ಮತ್ವ ನಿಶ್ಚಯವನ್ನೇ ಮಾಡಬೇಕಾಗುತ್ತದೆ. ಮ.ತಾ.ನಿ. XX 102: ಆದರ್ಶಯಚ್ಛಾ೦ತವತ್ಸ್ವ೦; XXII 262: ಕ್ರೀಡಾರ್ಥಮಲ್ಪಜನೇಶ್ವಪಿ ಪ್ರಭುಃ ಕಥಂಚಿದೇವ ವ್ಯಜ ಯದ್ವ್ಯಥಾಂ ವಿನಾ । ಇತ್ಯಾದಿ ಮೋಹಾಯ ಸಂದರ್ಶಯತ್ಯಜಃ। 294: ಆಸೇದಿವಾಂಸ್ತತ್ರ ಹನೂಮದಾಖ್ಯಂ ನಿಜಂ ರೂಪಂ ಪ್ರೋದ್ಯದಾದಿತ್ಯ ಭಾಸಂ । ಜಾನನ್ನಪ್ಯೇನಂ ಸ್ವೀಯರೂಪಂ ಸ ಭೀಮಶ್ಚಿಕ್ರೀಡ ಏತೇನ ಯಥಾ ಪರೇಣ| ಧರ್ಮೋ ದೇವಾನಾಂ ಪರಮೋ ಮಾನುಷತ್ವೇ ಸ್ವೀಯೇರೂಪೇಪ್ಯನ್ಯವದೇವವೃತ್ತಿ: । ಅನಾದಾನಂ ದಿವ್ಯಶಕ್ತೇರ್ವಿಶೇಷಾನ್ನರಸ್ವಭಾವೇ ಸರ್ವದಾಚೈವವೃತ್ತಿಃ । ತಸ್ಮಾದ್ಭೀಮೋಹನುಮಾಂಶ್ಚೈಕ ಏವ ಜ್ಯಾಯಃ ಕನೀಯೋ ವೃತ್ತಿಮತ್ರಾಭಿಪೇದೇ॥ ಸರ್ವೆಗುಣಾ ಆವೃತಾಮಾನುಷತ್ವೇ ಯುಗಾನುಸಾರಾನ್ಮೂಲರೂಪಾನುಸಾರಾತ್ ॥ XXXII 38: ಚಿದಾನಂದೈಕದೇಹೇಪಿದ್ವಿರೂಪೇ ಇವ ತೇ ಯತಃ । ಏಕ್ಯೈವಾತಃ ಕೃಷ್ಣವತ್ತೇ ದುಷ್ಟಾನ್ಮೊಹಯತಸ್ತಥಾ । XXVI 42: ವರೇಣ ರುದ್ರಸ್ಯ ನಿರುದ್ಧ್ಯಮಾನೋ ಜಯದ್ರಥೇನಾತ್ರ ವೃಕೋದರಸ್ತು । ವಿಷ್ಣೋರಭೀಷ್ಟಂ ವಧನಾರ್ಜುನೇಸ್ತದಾ

ವಿಜ್ಞಾಯ ಶಕ್ತೋಪಿ ನ ಚಾತ್ಯವರ್ತತ ॥ 155: ಏವಂ ಸ್ಮೃತ್ವಾತೇನರಂಧ್ರೇಪ್ರದತ್ತೆ ಕರ್ಣೋಸ್ತ್ರವೀರ್ಯೇಣಧನುರ್ನ್ಯಕೃಂತತ್। ಇತ್ಯಾದಿ ಪ್ರಮಾಣಗಳಿವೆ. ಅಲ್ಲದೆ ಯೋಗಿಯಾದ ಯುಧಿಷ್ಠಿರನೂ ಕೂಡ ಕೊನೆಯಲ್ಲಿ ಭೀಮಾದಿಗಳ ದೇಹಪಾತನವು ಪಾಪದಿಂದಲೇ ಆಯಿತೆಂದು ಹೇಳಿಬಿಟ್ಟನು. ಶ್ರುತಿಸ್ಮೃತಿ ವಿರುದ್ಧವಾದ್ದರಿಂದ ಆತನ ವಾಕ್ಯವು ಅಪ್ರಮಾಣ ಎಂದು ಶ್ರೀಮದಾಚಾರ್ಯರು XXXII 71-73 ಇತ್ಯಾದಿ ಶ್ಲೋಕಗಳಿಂದ ತೋರಿಸಿದ್ದಾರೆ. ಅತೀಂದ್ರಿಯ ವಿಷಯದಲ್ಲಿ ಆಗಮವನ್ನೇ ಪ್ರಮಾಣವಾಗಿ ಹೇಳಬೇಕಾದ್ದರಿಂದ ಶ್ರೀಮದಾಚಾರ್ಯರು ಆಗಮವನ್ನೇ ಉದಾಹರಿಸಿ ಭೀಮಾದಿಗಳ ದೇಹ ಪಾತನವು ಯೋಗಜ ಪುಣ್ಯದಿಂದಲೇ ಆಯಿತು, ಪಾಪದಿಂದಲ್ಲವೆಂದು ಸಮರ್ಥಿಸಿದ್ದಾರೆ. XVIII 79: ಭೀಮನು ಸ್ವಾಪೇಕ್ಷಯಾ ಆಧಿಕ್ಯವು ಅರ್ಜುನನಲ್ಲಿದೆ ಎಂಬಂತೆ ಪ್ರಕಟ ಮಾಡಿದ್ದಾನೆ. ಆದ್ದರಿಂದ ಯಥಾರ್ಥ ತಾರತಮ್ಯವನ್ನು ಆಗಮದಿಂದಲೇ ತಿಳಿಯಬೇಕು. ಅನ್ಯಥಾ ಉಪಜೀವ್ಯಾಗಮವನ್ನು ನೋಡದಿದ್ದರೆ ಕೃಷ್ಣಾದಿಗಳಿಗೆ ಅಬ್ರಹ್ಮತ್ವವೂ ಭೀಮಾದಿಗಳಿಗೆ ಅನೃಜುತ್ವವೂ ದುರ್ವಾರವಾಗಿ ತತ್ವವಿಪ್ಲವವೇ ಆಗುತ್ತದೆ. ಹೀಗೆ "ಭೀಮನು ಅನೃಜುವು - ಅಜಗರಗ್ರಸ್ತನಾದ್ದರಿಂದ, ಯಕ್ಷಮಂತ್ರದಿಂದ ಮೂರ್ಛಿತನಾದ್ದರಿಂದ, ಸೈಂಧವ ನಿರಾಕರಣೆಯಲ್ಲಿ ಅಶಕ್ತನಾದ್ದರಿಂದ" ಇತ್ಯಾದಿ ಅನುಮಾನಗಳಿಗೆ ಪ್ರಾಮಾಣ್ಯ ಒಪ್ಪಬೇಕಾಗುತ್ತದೆ. ಹಾಗೆಯೇ ವಾದಿರಾಜರು ಋಜುಗಳಲ್ಲ – ಜ್ವರಗ್ರಸ್ತತ್ವಾತ್, ಸ್ವಾಧಮರಿಂದ ಪಾಠ ಹೇಳಿಸಿಕೊಂಡಿದ್ದರಿಂದ ಇತ್ಯಾದಿ ಅನುಮಾನಗಳಲ್ಲಿ ಹೇತುಗಳು ಅಪ್ರಯೋಜಕಗಳು ಎಂದು ಹೇಳಿದರೆ ಆ ದೋಷಪರಿಹಾರ ಮಾಡಿಕೊಡುವ ಅನುಕೂಲ ತರ್ಕವಿಲ್ಲ. ಅದರೆ ಅನುಮಾನಗಳು ಉಪಜೀವ್ಯಾಗಮಬಾಧಿತಗಳಾಗಿಯೇ ಆಗಿವೆ. [ಆನು II 1-4 ಆಗಮಾನುಗ್ರಹಾಭಾವೇ ನ ತರ್ಕಃ ಸ್ಯಾತ್ಪ್ರತಿಷ್ಠಿತಃ" | ಎಂದಿದೆ, ಬ್ರ.ಸ.ಭಾ. I 1-3

"ಶ್ರುತಿಸಾಹಾಯ್ಯರಹಿತಂ ಅನುಮಾನಂ ನಕುತ್ರಚಿತ್ ನಿಶ್ಚಯಾತ್ಸಾಧಯೇ ದರ್ಥಂ' - ಇತ್ಯಾದಿ. ಬೃ.ಭಾ. ಪುಟ 486:

"ನೀಚಾದಪ್ಯುತ್ತಮಾ ಜ್ಞಾನಂ ಶೃಣುಯುರ್ಲೀಲಯಾಕ್ವಚಿತ್ |
ಶ್ರೋತೃ ವಕ್ತೃವಿಭೇದೋಯಂ ನಾಧಿಕ್ಯ ಜ್ಞಾಪಕಸ್ತತಃ |
ಯಸ್ಯಾಧಿಕ್ಯಂತುವೇದೋಕ್ತಂ ಪಂಚರಾತ್ರೇಽಥವಾ ಭವೇತ್ |
ಇತಿಹಾಸೇ ಪುರಾಣೇವಾ ಸೋಽಧಿಕೋನೇತರಃ ಕ್ವಚಿತ್" ಇತಿ ಬ್ರಹ್ಮತರ್ಕ

ಎಂದೂ ಪ್ರಮಾಣವಿದೆ. ತತ್ವ.ನಿ. ಟೀಕಾವಾಕ್ಯವು ಹಿಂದೆಯೇ ಉದಾಹೃತವಾಗಿದೆ. ಕಿಂಚ "ನ ಧರ್ಮೋದೇವತಾನಾಂ ಜ್ಞಾತವಾಸಶ್ಚಿರಂ ನೃಷು" – ಇತ್ಯಾದಿ ಪ್ರಮಾಣಗಳಿಂದ ಸ್ವರೂಪಾಚ್ಛಾದನೆಯೇ ಅವರಿಗೆ ಧರ್ಮ; ಆವಿಷ್ಕಾರ ಅಧರ್ಮ, ಸ್ವರೂಪ ಗೊತ್ತಾದರೆ ಲೋಕಾಂತರಕ್ಕೆ ಹೋಗುತ್ತಾರೆ ಎಂದು ಇದೆ. ಆದ್ದರಿಂದ ಪ್ರತ್ಯಕ್ಷ ಮೋಹಕವೇ, "ಟೀಕಾಚಾರ್ಯರಿಗೆ ನಮಿಸಿ, ವ್ಯಾಸತೀರ್ಥರಿಗೆ ನಮಿಸಿ" ಎಂದು ವಾದಿರಾಜರು ಕೀರ್ತನೆ

ಮಾಡಿದ್ದರೂ ಶ್ರೀಪಾದರಾಜರಿಗೆ ಅಷ್ಟಕ ರಚಿಸಿದ್ದರೂ ಮೋಹಕವೇ, ಅಜ್ಞನ ಶಿಕ್ಷಣಾರ್ಥ] ಆದ್ದರಿಂದ ಕೇವಲಾನುಮಾನಗಳು ಋಜುತ್ವ, ತದಭಾವ ವಿಷಯದಲ್ಲಿ ಅಸಾಧಕಗಳೇ, ಸಾಧ್ಯಸಿದ್ಧಿಗಾಗಿ ಆಗಮವನ್ನೇ ಉದಾಹರಿಸ ಬೇಕು. ಹಾಗಿದ್ದರೆ ಉದಾಹರಿಸಲ್ಪಡುವ ಆಗಮವು ಯಾವುದು ಎಂದರೆ ಮುಂದೆ ಹೇಳಲ್ಪಡುತ್ತದೆ.

ಇಲ್ಲಿಗೆ ಎರಡನೆ ಅಧ್ಯಾಯ ಮುಗಿಯಿತು. .

## ಆಗಮಸ್ವರೂಪ ನಿರೂಪಣಂ

“ಮ.ಭಾ.ತಾ.ನಿ. I 30-33: ಋಗಾದಯಶ್ಚ ಚತ್ವಾರಃ ಪಂಚ ರಾತ್ರಂ ಚ ಭಾರತಂ | ಮೂಲರಾಮಾಯಣಂ ಬ್ರಹ್ಮಸೂತ್ರಂ ಮಾನಂ ಸ್ವತಃ ಸ್ಮೃತಂ

॥ ಅವಿರುದ್ಧಂತು ಯತ್ವಸ್ಯ ಪ್ರಮಾಣಂ ತಚ್ಚನಾನ್ಯಥಾ ॥
ವೈಷ್ಣವಾನಿ ಪುರಾಣಾನಿ ಪಂಚರಾತ್ರಾತ್ಮಕತ್ವತಃ |
ಪ್ರಮಾಣಾನ್ಯೇವ ಮನ್ವಾದ್ಯಾಃ ಸ್ಮೃತಯೋಽಪ್ಯನುಕೂಲತ:|
ಏತೇಷು ವಿಷ್ಣೋರಾಧಿಕ್ಯ ಮುಚ್ಯತೇಽನ್ಯಸ್ಯ ನ ಕ್ವಚಿತ್ |
ಆತಸ್ತದೇವಮಂತವ್ಯಂ ನಾನ್ಯಥಾ ತು ಕಥಂಚನ”

ಎಂದು ಪ್ರಮಾಣವಿದೆ. ಇದರಿಂದ ನಾಲ್ಕು ವೇದಗಳು, ಇತಿಹಾಸ ನಾಮಕ ವ್ಯಾಸಾದಿ 6, ಪಂಚರಾತ್ರ, ಮೂಲರಾಮಾಯಣ, ಭಾರತಗಳೆಂಬ ಮೂರು; ಬ್ರಹ್ಮಸೂತ್ರಗಳು; ವಿಷ್ಣೂತ್ಕರ್ಷಬೋಧಕ ಆರು ಸಾತ್ವಿಕ ಪುರಾಣಗಳು; ಹಾಗೆಯೇ ವೇದಾನುಸಾರಿಯಾದ ಮನ್ವಾದಿ ಆರು ಸಾತ್ವಿಕ ಸ್ಮೃತಿಗಳು ಸ್ವತಃ ಪ್ರಮಾಣ ಗ್ರಂಥಗಳು. ಇವುಗಳಲ್ಲಿ ವಿಷ್ಣುಸರ್ವೋತ್ತಮತ್ವವೇ ಹೇಳಲ್ಪಟ್ಟಿದೆ. ಈ ಪೂರ್ವೋಕ್ತ ಹತ್ತು ಮೂಲ ಪ್ರಮಾಣಗಳಿಗೆ ಅವಿರುದ್ಧವಾದುದೆಲ್ಲಾ ಪ್ರಮಾಣವೇ. ಅನ್ಯಥಾ ಇಲ್ಲ ಎಂದಿದೆ. ಈ ಹತ್ತು ಸ್ವತಃ ಪ್ರಮಾಣ, ಮೂಲಪ್ರಮಾಣ, ಸದಾಗಮ, ಶುಭಾಗಮ ಶಬ್ದ ವಾಚ್ಯಗಳು. ಈ ಹತ್ತರಲ್ಲಿ ದೋಷಶಂಕೆಯನ್ನಾಗಲೀ ಅಪ್ರಾಮಾಣ್ಯಶಂಕೆಯನ್ನಾಗಲೀ ಮಾಡಬಾರದು.

2. ಹಾಗಿದ್ದರೂ ಇವುಗಳಲ್ಲಿ ಆಪಾತ ಪ್ರತೀಯಮಾನವೇ ಸರ್ವದಾ ಅರ್ಥವೆಂದು ತಿಳಿಯಬಾರದು. ವಿಚಾರಮಾಡಲ್ಪಟ್ಟ ತಾತ್ಪರ್ಯಾರ್ಥವೇ ಗ್ರಾಹ್ಯವು. ಗೀ.ಭಾ ॥ ಅತಃ ಪ್ರಾತೀತಿಕೇ ಅರ್ಥೇ ಭ್ರಾಂತಿಂ ಮಾಕುರ್ವಿತ್ಯರ್ಥಃ ಎಂದು ಶ್ರೀಕೃಷ್ಣ ಹೇಳಿದ್ದಾನೆ. ಪರಸ್ಪರ ವಿರೋಧಗಳು ಶ್ರುತಿಯಲ್ಲಿ ಪ್ರಸಕ್ತವಾದರೆ “ಉಪಕ್ರಮೋಪ ಸಂಹಾರೌ ಅಭ್ಯಾಸೋಽಪೂರ್ವತಾ ಫಲಂ | ಅರ್ಥವಾದೋಪಪತಿ ಚ ಲಿಂಗಂ ತಾತ್ಪರ್ಯ ನಿರ್ಣಯೇ” ಎಂದು ಬ್ರ.ಸೂ.ಭಾ. I1-4 ರಲ್ಲಿ ಹೇಳಲ್ಪಟ್ಟ ಏಳು ನಿರ್ಣಾಯಕ ಲಿಂಗಗಳಿಂದ ವಿಮರ್ಶೆಮಾಡಿ ಶಾಸ್ತ್ರತಾತ್ಪರ್ಯವು ತಿಳಿಯಲ್ಪಡಬೇಕು. ಆ ತಾತ್ಪರ್ಯವೇ ಗ್ರಾಹ್ಯವು. “ಪೂರ್ವೋತ್ತರಾವಿರೋಧೇನ ಕೋತ್ರಾರ್ಥೋಽಭಿಮತೋ ಭವೇತ್ | ಇತ್ಯಾದ್ಯಮೂಹನಂ ತರ್ಕಃ ಶುಷ್ಕ ತರ್ಕಂ ತು ವರ್ಜಯೇತ್ |” ಎಂದೂ I 1-3 ಬ್ರ.ಸೂ.ಭಾ. ಇಲ್ಲಿ ಹೇಳಲ್ಪಟ್ಟಿದೆ. ಈ ಹತ್ತು ಶಾಸ್ತ್ರಗಳ ಮಹಾತಾತ್ಪರ್ಯವು ವಿಷ್ಣು ಸರ್ವೋತ್ತಮತ್ವಾದಿ

ಪ್ರಮೇಯವು ಎಂದು "ವೇದೇ ರಾಮಾಯಣೇಚೈವ" ಮುಂತಾದ ಪ್ರಮಾಣ ಸಿದ್ಧವು. ಆ ಮಹಾ ತಾತ್ಪರ್ಯಾನುಸಾರವಾಗಿ ಶಾಸ್ತ್ರವಾಕ್ಯಗಳಿಗೆ ಉಪಕ್ರಮಾದಿ ಲಿಂಗಗಳಿಂದ ["ಶ್ರುತಿಲಿಂಗ ವಾಕ್ಯ ಪ್ರಕರಣ ಸ್ಥಾನ ಸಮಾಖ್ಯಾನಾಂ ಪರದೌರ್ಬಲ್ಯಂ ಅರ್ಥ ವಿಪ್ರಕರ್ಷಾತ್" | ಎಂಬ ಕ್ರಮವಾಗಿ ದುರ್ಬಲಗಳಾದ ಆರು ಸಾಧನಗಳು ಶಬ್ದಾರ್ಥ ನಿರ್ಣಾಯಕ ಲಿಂಗಗಳು, ಅವೂ ಬೇಕಾದಾಗ ಗ್ರಾಹ್ಯವೇ.] ವಿಮರ್ಷಿಸಿ ನಿರ್ಣಿತವಾದ ಅರ್ಥವು ಗ್ರಾಹ್ಯವೆಂದು ಸಿದ್ಧಾಂತ.

3. ಯದ್ಯಪಿ ಮೇಲ್ಕಂಡ ಹತ್ತು ಶಾಸ್ತ್ರಗಳಲ್ಲಿ ಪರಸ್ಪರ ವಿರೋಧ, ಪ್ರಮಾಣಾಂತರ ವಿರೋಧವಾಗಲೀ ಕಾಣದಿದ್ದರೆ ಪ್ರಥಮತಃ ಪ್ರತೀತವಾದ ಪ್ರಸಿದ್ಧಾರ್ಥವು ಅಪರಿತ್ಯಾಜ್ಯವೇ. ಆದರೆ ವೇದಾದಿ ದಶಕದಲ್ಲಿ ಪರಸ್ಪರ ವಿರೋಧ ಕಂಡರೆ ಹೇಗೆ ವಿರೋಧ ಪರಿಹಾರವಾಗುತ್ತದೆಯೋ ಹಾಗೆ ಯೋಜನೆಯನ್ನು ಮಾಡಬೇಕು, ಎಂದರೆ ಯಾವ ವಾಕ್ಯಕ್ಕೂ ಅಪ್ರಾಮಾಣ್ಯ ಹೇಳಬಾರದು. ಆ ಕಾರ್ಯ ಮಾಡುವಾಗ ವೇದವು ಇತಿಹಾಸಾದಿಗಳಿಗೆ ಅವಿರುದ್ಧವಾಗಿ ವ್ಯಾಖ್ಯಾನಿಸಲ್ಪಡಬೇಕು ಎಂದು ಗೀ.ಭಾ II ರಲ್ಲಿದೆ. ಮತ್ತು ನಿರ್ಣಯದಲ್ಲಿ I 36 ರಲ್ಲಿ ವಿಷ್ಣೋತ್ಕರ್ಷಕ್ಕೆ ವಿರೋಧಿಯಾಗಿ ಯಾವುದಾದರೂ ವೇದವಾಕ್ಯಗಳು ಕಂಡರೆ ಅವೆಲ್ಲಾ ವಿಷ್ಣು ಸರ್ವೋತ್ತಮತ್ವಕ್ಕೆ ಅನುಕೂಲಿಸುವಂತೆ ವ್ಯಾಖ್ಯಾನ ಮಾಡಲ್ಪಡಬೇಕು ಎಂದು ಉಕ್ತವಾಗಿದೆ. ಹಾಗೆ ಪುಟ 20 ಭಾವಪ್ರಕಾಶಿಕೆಯಲ್ಲಿ "ಜನಿತೋತ ವಿಷ್ಣೋಃ ಇತ್ಯಾದಿ ವಾಕ್ಯಗಳಿಗೆ ಗುರುರಾಜರು ಯೋಗ್ಯಾರ್ಥ ಮಾಡಿ ತೋರಿಸಿಕೊಟ್ಟಿದ್ದಾರೆ. ಭಾಗ. 1-21 ರಲ್ಲ ದೃಷ್ಟಾಂತ ಇದೆ. ಅಲ್ಲಿ "ಶುಶ್ರಾವ ಸುಹೃದ್ವಿನಷ್ಟಿಮ್" ಎಂದು ವಾಕ್ಯವಿದೆ. ಬಂಧುಗಳಾದ ಯಾದವರ ನಾಶವನ್ನು ವಿದುರನು ಕೇಳಿದನು ಎಂದರ್ಥ. ಯಾದವರು ಇನ್ನೂ ಬದುಕಿದ್ದಾರೆ, ಪ್ರತ್ಯಕ್ಷ ವಿರೋಧ ಬಂತು; ಭಾರತ ಗ್ರಂಥದಲ್ಲೂ "ವಿದುರನು ಪ್ರಭಾಸಕ್ಕೆ ಬಂದಾಗ ಸಂಕ್ಷೇಪತಃ ಶಾಪ ವೃತ್ತಾಂತವನ್ನು ಶ್ರವಣ ಮಾಡಿದನು ಎಂದು ಇದೆ. ಆ ಭಾರತ ವಾಕ್ಯ ವಿರೋಧವೂ ಭಾಗವತ ವಾಕ್ಯಕ್ಕೆ ಬಂತು. ಆಗ ಭಾಗವತ ತಾತ್ಪರ್ಯ III 1-21 ರಲ್ಲಿ ಆಚಾರ್ಯರು ವಿರೋಧ ಪರಿಹಾರ ಆಗುವಂತೆ ಯೋಜನಾಕ್ರಮವನ್ನು ತೋರಿಸಿದ್ದಾರೆ. "ಸುಹೃದ್ವಿನಷ್ಟಿಂ ಯದು ಕುಲ ವಿನಷ್ಟಿಮೇಷ್ಯಾಮ್ '- ಮುಂದೆ ಯದುಕುಲ ನಾಶವಾಗುತ್ತದೆಂದು ಸಂಕ್ಷೇಪತಃ ಮೈತ್ರೇಯರಿಂದ ಶ್ರವಣ ಮಾಡಿದನು ಎಂದರ್ಥ. ಇದರಿಂದ ಭಾರತ ವಾಕ್ಯಕ್ಕೂ, ಭಾಗವತ ವಾಕ್ಯಕ್ಕೂ ಪ್ರಾಮಾಣ್ಯವು ತಪ್ಪಲಿಲ್ಲ. ಆಚಾರ್ಯರು ತಮ್ಮ ಊಹೆಯಿಂದ ಕಲ್ಪನೆ ಮಾಡಿಲ್ಲ. ಪ್ರಮಾಣಾಂತರ ಕೊಟ್ಟಿದ್ದಾರೆ. "ವಿದರಸ್ತು ಪ್ರಭಾಸಸ್ತಃ ಶಾಪಂ ಸಂಕ್ಷೇಪತೋಽಶೃಣೋತ್ | ಯದೂನಾಂ ವಿಸ್ತರಾತ್ವಶ್ಚಾದುದ್ಧವಾದ್ಯಮುನಾಮನು॥ ಇತಿಸ್ಕಾಂದೇ" - ಭಾಗವತ ವಾಕ್ಯಕ್ಕೇ ಅಪ್ರಾಮಾಣ್ಯ ಹೇಳಲ್ಲಿಲ್ಲ. ಅದು ಸಾತ್ವಿಕ ಪುರಾಣಸ್ಥ ವಾಕ್ಯ.

4 ಪೂರ್ವೋಕ್ತ ದಶಕವು ಸ್ವತಃ ಪ್ರಮಾಣವು. ಶಂಕಾನರ್ಹವು ಎಂದು ಹೇಳಿದ ಮೇಲೆ ಇತರ ರಾಜಸ ತಾಮಸ ಪುರಾಣಗಳ ಗತಿ ಏನು? ಶಿವಾದಿಗಳು ಮಾಡಿರುವ ಕೋಟಿಶ: ಸಂಖ್ಯೆಯುಳ್ಳ ಪಾಶುಪತ ಮುಂತಾದ ಆಗಮಗಳ ಗತಿ ಏನು? ಬೌದ್ಧ, ಚಾರ್ವಾಕ, ಸಾಂಖ್ಯಾದಿ ಶಾಸ್ತ್ರಗಳ ಗತಿ ಏನು? ಇತರ ಮತಸ್ಥರ ಅನೇಕ ಗ್ರಂಥಗಳ ಗತಿ ಏನು? ಎಂದರೆ ಹೇಳುತ್ತಾರೆ: ಮ.ತಾ.ನಿ. 1 48 "ಏಷ ಮೋಹಂ ಸೃಜಾಮ್ಯಾಷು ಯೋ ಜನಾನ್ ಮೋಹಯಿಷ್ಯತಿ ........

ಇತಿ ವಾರಾಹವಚನಾತ್"| [ಭಾವಪ್ರಕಾಶಿಕಾ I- 48 "ಮೋಹಯತೀತಿ ಮೋಹೂ ಬೌದ್ಧಶಾಸ್ತ್ರಂ | ಯಗ್ವಾ ಕೈಲಾಸ ಯಾತ್ರಾದಿ | ಎಂದಿದೆ] "ಮೋಹಾರ್ಥಾನ್ಯನ್ಯ ಶಾಸ್ತ್ರಾಣಿ ಕೃತಾನ್ಯೇವಾಜ್ಞಯಾ ಹರೇಃ | ಅತಸ್ತೇಶೂಕ್ತಮಗ್ರಾಹ್ಯಮಸುರಾಣಾಂ ತಮೋಗತೇಃ | ಯಸ್ಮಾತ್ಕೃತಾನಿತಾನೀಹ ವಿಷ್ಣೋನೋಕ್ತೈ ಶಿವಾದಿಭಿಃ| ಮ.ತಾ.ನಿ. I 34-35." ಮತ್ತು "ಅಯೋಗ್ಯ ಜನ ವ್ಯಾಮೋಹನಾಯ ಪ್ರಣೀತಾನಾಂತೇಷಾಂ ದುರಾಗಮತ್ವಾನ್ನ ತದುಕ್ತ ಪ್ರಕಾರೇಣ ಜ್ಞೇಯಃ" - ವಿ.ತ.ನಿ. ಟೀಕಾ ಪುಟ 2. "ಭ್ರಾಂತಿ ಮೂಲತಯಾ ಸರ್ವ ಸಮಯಾನಾಮಯುಕ್ತಿತಃ | ನತದ್ವಿರೋಧಾದ್ವಚನಂ ವೈದಿಕಂ ಶಂಕ್ಯತಾಂವ್ರಜೇತ್" | ಅಣುಭಾಷ್ಯ, "ಪುರಾಣಾನ್ಯಥ ಚಾಕರೋತ್ | ಶೈವಾನ್ ಪಾಶುಪತಾನ್ಚಕ್ರೇ ಸಂಶಯಾರ್ಥಂ ಸುರದ್ವಿಷಾ0 | ವೈಷ್ಣವಾನ್ ಪಾಂಚರಾತ್ರಾಂಶ್ಚ ಯಥಾರ್ಥ ಜ್ಞಾನಸಿದ್ಧಯೇ| ಬ್ರಾಹ್ಮಾಂಶ್ಚ ವೇದತಶ್ಚಕ್ರೇ ಪುರಾಣ ಗ್ರಂಥ ಸಂಗ್ರಹಾನ್ - ಮ.ತಾನಿ X 84. ಇಲ್ಲಿ ವಾದಿರಾಜರ ಭಾವಪ್ರಕಾಶಿಕಾ: "ವೇದಾನಾಂ ಆಪಾತಾರ್ಥಾಚ್ಚಕ್ರೇ| ಯಥಾವೇದಮಧ್ಯಸ್ಥಿತ ಹಿರಣ್ಯಗರ್ಭ ಅಗ್ನೀಂದ್ರಾದಿ ಸೂಕ್ತಷ್ವಾಪಾತತಃ ತಸ್ಯತಸ್ಯೋತ್ಕರ್ಷಃ ಪ್ರತೀಯತೇ | ತಥಾಕ್ವಚಿದ್ಭಾಗೇ ಬ್ರಹ್ಮಣಃ, ಕ್ವಚಿದಗ್ನೇಃ, ಕ್ವಚಿದಿಂದ್ರಾದೇಃ, ಕ್ಲಚಿಲ್ಲಕ್ಷ್ಮೀಸರಸ್ವತ್ಯಾದೇಶ್ಚ ಪರತ್ವಂ ಪ್ರತಿಪಾದಯತಃ ಪುರಾಣ ಗ್ರಂಥ ಸಂಗ್ರಹಾಂಶ್ಚಕ್ರೇ........ಇತಿಭಾವಃ – ಪುಟ 198, ಮತ್ತು ಗೀ.ಭಾ. II "ನಚತಚ್ಛಾಸ್ತ್ರಂ ಪ್ರಮಾಣಂ | ಅಕ್ಷಪಾದ ಕಣಾದಾನಾಂ ಸಾಂಖ್ಯ ಯೋಗ ಜಟಾದ್ಭೃತಾಂ । ಮತಮಾಲಂಬ್ಯಯೇ ವೇದಂ ದೂಷಯಂತ್ಯಲ್ಪ ಚೇತಸಃ |" ಎಂದು ವಚನವಿದೆ. ಪುನಃ ಅಲ್ಲೇ "ಕುತ್ಸಿತಾನಿ ಚ ಮಿಶ್ರಾಣಿ ರುದ್ರೋ ವಿಷ್ಣು ಪ್ರಚೋದಿತಃ | ಚಕಾರ ಶಾಸ್ತ್ರಾಣಿ ವಿಭುಃ ಋಷಯಸ್ತತ್ಪ್ರಚೋದಿತಾಃ | ದಧೀಚ್ಯಾದ್ಯಾಃ ಪುರಾಣಾನಿ ತಚ್ಛಾಸ್ತ್ರ ಸಮಯೇನತು | ಚಕ್ರುರ್ವೇದೈಶ್ಚ ಬ್ರಾಹ್ಮಾಣಿ ವೈಷ್ಣವಾನ್ ವಿಷ್ಣು ದೇವತಃ | ಪಂಚರಾತ್ರಂ ಭಾರತಂ ಚ ಮೂಲರಾಮಾಯಣಂ ತಥಾ | ತಥಾ ಪುರಾಣಂ ಭಾಗವತಂ ವಿಷ್ಣು ವೇದ ಇತೀರಿತಾಃ | ಅತಃ ಶೈವ ಪುರಾಣಾನಿ ಯೋಜ್ಯನ್ಯನ್ಯಾವಿರೋಧತಃ[ ಏನು ಹೇಳಿದಂತಾಯಿತೆಂದರೆ - ಬುದ್ಧ ಮತ್ತು ವ್ಯಾಸಾದಿ ರೂಪದಿಂದ ಮಾಡಿದ್ದರೂ ದೈತ್ಯ ಮೋಹನಕ್ಕಾಗಿ ಮಾಡಿದ್ದನ್ನು ವೇದಾನುಸಾರ ಅರ್ಥ ಮಾಡಬೇಕು. ಇತಿಹಾಸ ಪುರಾಣದಲ್ಲಿದ್ದರೆ ವೇದ ಪಂಚರಾತ್ರಾನುಸಾರ ಅರ್ಥ ಮಾಡಬೇಕು. ತಾಮಸ ರಾಜಸ ಪುರಾಣದಲ್ಲಿ ಅನ್ಯೋತ್ಕರ್ಷ ವಾಕ್ಯವಿದ್ದರೆ ವೇದ ವಿರುದ್ಧವಾದದ್ದಕ್ಕೆಲ್ಲಾ ಅಪ್ರಾಮಾಣವನ್ನೇ ಹೇಳಬೇಕು. ಅವಿರುದ್ಧಕ್ಕೆ ಪ್ರಾಮಾಣ್ಯ ಒಪ್ಪಬೇಕು. ಪಾಶುಪತಾದಿ ಆಗಮಗಳಲ್ಲೂ, ಇತರ ಮತಗ್ರಂಥಗಳಲ್ಲೂ ಹೀಗೆಯೇ ಯೋಜನೆ; ಎಂದರೆ ವೇದಾದ್ಯವಿರುದ್ಧವಾದರೆ ಪ್ರಮಾಣ, ವಿರುದ್ಧವಾದರೆ ಅಪ್ರಮಾಣ ಎಂದು. ಸಾತ್ವಿಕ ಪುರಾಣ, ವೇದಗಳಲ್ಲಿ ಪರಸ್ಪರ ವಿರೋಧ ಬಂದರೆ ಉಭಯ ವಾಕ್ಯಗಳಿಗೂ ಪ್ರಾಮಾಣ್ಯ ಬರುವಂತೆ ಉಪಕ್ರಮಾದಿಗಳಿಂದ ವಿಮರ್ಶಿಸಿ ನಿರ್ಣಯಿಸಬೇಕು.] ಎಂದಿದೆ. ಇವೇ ಮುಂತಾದ ಬಹು ಪ್ರಮಾಣಗಳಿಂದ ವೇದ ಮತ್ತು ವಿಷ್ಣುವೇದ ರೂಪವಾದ ಒಟ್ಟು ಹತ್ತು ಶಾಸ್ತ್ರಭಿನ್ನವಾದ ಎಂದರೆ ವಿರುದ್ಧವಾದ ಸರ್ವವೂ ಅಪ್ರಮಾಣವೆಂದು ಹೇಳಿದ್ದಾರೆ , ಮ.ತಾ.ನಿ, I 31 : "ಏತದ್ವಿರುದ್ಧಂ ಯತ್ತು ಸ್ಯಾನ್ನ ತನ್ಮಾನಂ ಕಥಂಚನ;" ದಶಶಾಸ್ತ್ರ ವಿರುದ್ಧವಾದ್ದೆಲ್ಲಾ ಅಪ್ರಮಾಣವೇ? ಎಂದರೆ ಹೌದು. ಆದರೆ ಒಂದು ನಿಯಮವಿದೆ. ಮ.ತಾ.ನಿ. I 35 "ಏಷಾಂ ಯನ್ನ ವಿರೋಧಿ ಸ್ಯಾತ್ತತ್ರೋಕ್ತಂ ತನ್ನ

ವಾರ್ಯತೇ" ಎಂದಿದ್ದಾರೆ. ರಾಜಸ ತಾಮಸ ಶಾಸ್ತ್ರ ಗ್ರಂಥಗಳಲ್ಲೂ, ಇತರ ಮತ ಗ್ರಂಥಗಳಲ್ಲೂ, ಇತರರು ರಚಿಸಿದ ಆಗಮ ಗ್ರಂಥಗಳಲ್ಲೂ ಕೂಡ ಪೂರ್ವೋಕ್ತ ಹತ್ತು ಸ್ವತಃ ಪ್ರಮಾಣಾವಿರುದ್ಧ ವಾದುದೆಲ್ಲಾ ಪ್ರಮಾಣವೇ. ಸ್ವತಃ ಪ್ರಮಾಣ ದಶ ಶಾಸ್ತ್ರಕ್ಕೆ ವಿರುದ್ಧವಾದುದೆಲ್ಲಾ ಅಪ್ರಮಾಣವೇ, ಅಗ್ರಾಹ್ಯವೇ ಎಂದು ಅನ್ಯಗ್ರಂಥಗಳಲ್ಲಿ ಅಪ್ರಾಮಾಣ್ಯ, ಪ್ರಾಮಾಣ್ಯ ವ್ಯವಸ್ಥಾಪಕವಾದ ಒಂದು ಅಳತೆಯ ಕೋಲು ತೋರಿಸಲ್ಪಟ್ಟಿದೆ.

5. ಸ್ವತಃ ಪ್ರಮಾಣವಾದ ಹತ್ತು ಶಾಸ್ತ್ರಗಳಲ್ಲಿ ಕೂಡ ಒಂದು ವಿಶೇಷ ತೋರಿಸಲ್ಪಟ್ಟಿದೆ. ಏನೆಂದರೆ ಅವುಗಳಲ್ಲಿ ವೇದಗಳು ನಿತ್ಯವಾದ್ದರಿಂದ ವಾಕ್ಯ ದೋಷ ಪ್ರಸಕ್ತಿಯೇ ಅವುಗಳಲ್ಲಿ ಇಲ್ಲವಾದ್ದರಿಂದ ಇತರ ಗ್ರಂಥಗಳಲ್ಲಿ ಉದ್ಭವಿಸುವ ಅಪ್ರಾಮಾಣ್ಯ ಶಂಕಾ ಪರಿಹಾರ ಮಾಡಿ ಪ್ರಾಮಾಣ್ಯ ನಿರ್ಣಯ ಮಾಡುವ ಕಾರ್ಯದಲ್ಲಿ ನಿರ್ವಿವಾದವಾಗುವಂತೆ ಸಹಾಯವನ್ನು ಮಾಡುವುವರಿಂದ ವೇದವು ಪ್ರಧಾನ ಪ್ರಮಾಣವು. "ಇತಿಹಾಸ ಪುರಾಣಃ ಪಂಚಮೋ ವೇದಾನಾಂ ವೇದಃ" ಎಂದು ವೇದದಲ್ಲಿಯೇ ಪಂಚಮ ವೇದವೆಂದು ಅಂಗೀ ಕರಿಸಲ್ಪಟ್ಟಿದ್ದರಿಂದ ಭಾರತವೂ ತದನುಸಾರಿ ಸಾತ್ವಿಕ ಪುರಾಣಷ್ಟ್ಕವೂ ಅಪ್ರಮಾಣ್ಯ ಶಂಕೆಯಿಂದ ಅಕಳಂಕಿತವಾದ ಪ್ರಮಾಣ ಗ್ರಂಥವೆನ್ನಿಸುತ್ತದೆ. ಹಾಗೆಯೇ ಬ್ರಹ್ಮಸೂತ್ರಗಳ ಸಮುದಾಯವೂ ವೇದಾನುಗ್ರಹೀತವಾದ್ದರಿಂದ ಶಂಕಾನರ್ಹ ಪ್ರಮಾಣ ಗ್ರಂಥವೆನ್ನಿಸುತ್ತದೆ. ಹೀಗೆ ತನ್ನ ಪ್ರಾಮಾಣ್ಯ ವ್ಯವಸ್ಥೆ ಮಾಡಿ ಕೊಡುವ ಕಾರ್ಯದಲ್ಲಿ ಬ್ರಹ್ಮಸೂತ್ರಜಾತವು ವೇದಾಧೀನವಾಗಿ ಅಪ್ರಧಾನವೆನ್ನಿಸಿದರೂ ವಾಕ್ಯಾರ್ಥ ಬೋಧನವೆಂಬ ಶಾಸ್ತ್ರಕಾರ್ಯ ವಿವಕ್ಷೆಯಿಂದ ವಿಚಾರ ರೂಪವಾದ ನಿರ್ಣಾಯಕ ಯುಕ್ತಿಭರಿತವಾದ್ದರಿಂದ ಅದೇ ಸರ್ವೋತ್ತಮ ಶಾಸ್ತ್ರವೆಂದು ಖ್ಯಾತಿ ಹೊಂದಿದೆ. ಗೀ.ಭಾ. ॥ ರಲ್ಲ ಹೇಳಿದೆ. "ಬಲವಾಂಶ್ಚ ಸವಿಚಾರೋ ನಿರ್ಣಯೊವಾಕ್ಯ ಮಾತ್ರಾತ್" (ವಿಚಾರ ಮಾಡಿ ನಿರ್ಣಯ ಬೋಧಿಸುವ ವಾಕ್ಯವು ಕೇವಲ ವಾಕ್ಯಕ್ಕಿಂತ ಪ್ರಬಲವು.) ಬ್ರಹ್ಮ ಸೂತ್ರವು ವೇದಕ್ಕೆ ವ್ಯಾಖ್ಯಾನ ರೂಪವಾಗಿಯೂ, ಸಂದಿಗ್ಧ ವಾಕ್ಯಾರ್ಥನಿರ್ಣಾಯಕವಾಗಿಯೂ ಇರುವುದರಿಂದ ಸರ್ವಶಬ್ದ ರಾಶಿಗಳ ದೆಸೆಯಿಂದ ಉತ್ತಮವಾಗಿದೆ. ವಾಕ್ಯಗಳಲ್ಲಿ ಪರಸ್ಪರ ವಿರೋಧ ಬಂದರೆ ಯುಕ್ತಿ ಹೊಂದಿದ ವಾಕ್ಯವೇ ಪ್ರಬಲವೆಂದು ॥ ಗೀತಾಭಾಷ್ಯದಲ್ಲಿದೆ. ಅದೇ ॥ ಗೀತಾಭಾಷ್ಯದಲ್ಲಿ "ವೇದಾದಪಿಪರಂ ಚಕ್ರೇ ಭಾರತಂ" ಎಂದು ಪ್ರಮಾಣ ಕೊಟ್ಟು ಶ್ರೀಮದಾಚಾರ್ಯರು ತೋರಿಸಿರುವುದರಿಂದ ವೇದಗಳಿಗಿಂತಲೂ ಭಾರತವು ಉತ್ತಮ ಶಾಸ್ತ್ರವೆನಿಸುತ್ತದೆ. ಇತರ ಪ್ರಮಾಣಗಳು ವೇದತುಲ್ಯ ಅಥವಾ ಸ್ವಲ್ಪ ಅಧಮವಾದ ಶಾಸ್ತ್ರವೆನಿಸುತ್ತದೆ. ಈ ವೇದೇತಿಹಾಸಾದಿ ಸರ್ವವೂ ಉಪಕ್ರಮಾದಿ ಲಿಂಗಗಳಿಂದ ನಿರ್ಣೇಯವಾದ ಶಾಸ್ತ್ರಗಳು. ಆದ್ದರಿಂದ ಇವೆಲ್ಲಕ್ಕೂ ವ್ಯಾಖ್ಯಾನ ರೂಪವಾದ ನಿರ್ಣಾಯಕ ಬ್ರಹ್ಮಸೂತ್ರ ಶಾಸ್ತ್ರವು ನಿರ್ಣೇಯಾಪೇಕ್ಷಯಾ ಇನ್ನೂ ಅಧಿಕ ಶ್ರೇಷ್ಠ ವಾದುದೇ. ಈ ವಿಷಯ ಮ.ತಾ.ನಿ. । 42-44 ರಲ್ಲಿ ಹೇಳಲ್ಪಟ್ಟಿದೆ. "ನಿರ್ಣಯಾಯೈವಯತ್ಪ್ರೋಕ್ತಂ ಬ್ರಹ್ಮಸೂತ್ರಂ ಚ ವಿಷ್ಣುನಾ। ವ್ಯಾಸರೂಪೇಣ ತದ್ಗ್ರಾಹ್ಯಂ ತತ್ಪ್ರೋಕ್ತಾಃ ಸರ್ವ ನಿರ್ಣಯಾಃ । ಯಥಾರ್ಥ ವಚನಾನಾಂ ಚ ಮೋಹಾರ್ಥಾನಾಂ ಚ ಸಂಶಯಂ । ಅಪನೇತುಂ ಹಿ ಭಗವಾನ್ ಬ್ರಹ್ಮಸೂತ್ರಮಚೀಕ್ಲೃಪತ್ । ತಸ್ಮಾತ್ಸೂತ್ರಾರ್ಥವಾಗೃಹ್ಯ ಕರ್ತವ್ಯ ಸರ್ವ ನಿರ್ಣಯಃ ।" ಎಂದಿದೆ. ಬ್ರಹ್ಮಸೂತ್ರಾನುಸಾರೇಣ ವೇದಾದ್ಯಂ ಸರ್ವಮೇವಚ । ಯೋಜ್ಯಂ ನ ಬ್ರಹ್ಮಸೂತ್ರಾಣಿ ದೃಶ್ಯಮಾನಾರ್ಥ

| |
|---|
| ತೋಽನ್ಯಥಾ ॥ ಇತಿ ಬ್ರಹ್ಮವೈವರ್ತೇ" ॥ ಮತ್ತು "ವೇದಾನುಜ್ಜಹಾರ ಹರಿಃ ಸ್ವಯಂ । ಪುನಸ್ತಸ್ಯಾರ್ಥ ವಿತ್ತಯೇ ಚಕಾರ ಬ್ರಹ್ಮಸೂತ್ರಾಣಿ । ಶಬ್ದ ಜಾತಸ್ಯ ಸರ್ವಸ್ಯ ಯತ್ಪ್ರಮಾಣಶ್ಚ ನಿರ್ಣಯಃ । ಇತಿ ಸ್ಕಾಂದೇ ಚ" ॥ ಎಂದು ಬ್ರ.ಸ.ಭಾ. 1 1-1 ರಲ್ಲಿದೆ. |
| ಗೀ.ಭಾ ॥ ಭಾರತ ಮಹಿಮಾವರ್ಣನ ಪ್ರಸಂಗದಲ್ಲಿ "ವೇದಾದಪ್ಯುತ್ತಮಂ ಯದಿತಿಸ್ಕಾಂದೇ" ಎಂದು ಆಚಾರ್ಯರು ಭಾರತವು ವೇದೋತ್ತಮ ಎಂದು ತೋರಿಸಿದ್ದಾರೆ. ನಿರ್ಣಯ X 59 ರಲ್ಲಿ "ವೇದೋತ್ತಮಂ" ಎಂದು ಮಹಾಭಾರತವನ್ನು ಹೊಗಳಿದ್ದಾರೆ. ಇತಿಹಾಸ ಪುರಾಣಾನುಸಾರವಾಗಿ ವೇದಾರ್ಥವನ್ನು ಮಾಡಬೇಕೆಂದು ಪ್ರಮಾಣ ಕೊಟ್ಟಿದ್ದಾರೆ. ಗೀ.ಭಾ ॥ "ಯದಿ ವಿದ್ಯಾಚ್ಚತುರ್ವೇದಾನ್ ಸಾಂಗೊಪನಿಷದಾನ್ ದ್ವಿಜಃ । ನ ಚೇತ್ಪುರಾಣಂ ಸಂವಿದ್ಯಾನ್ನೈವಸಸ್ಯಾದ್ವಿಚಕ್ಷಣಃ ॥ ಇತಿಹಾಸ ಪುರಾಣಾಭ್ಯಾಂ ವೇದಂ ಸಪುಪಬೃಂಹಯೇತ್ । ಬಿಭೇತ್ಯಲ್ಪ ಶ್ರುತಾದ್ವೇದೋ ಮಾಮಯಂ ಪ್ರಚಲಿಷ್ಯತಿ। ........ವೇದಶ್ಚೇತಿಹಾಸಾದ್ಯವಿರೊಧೇನಯೋಜ್ಯ । ಯದಿ ವಿದ್ಯಾದಿತಿ ವಚನಾತ್ -ದುರಾಗಮಾದಿಗಳನ್ನೂ, ಆಗಮ ಸಹಾಯವಿಲ್ಲದ ಕೇವಲ ಯುಕ್ತಿಯನ್ನೂ ಉಪಯೋಗಿಸಬಾರದೆಂದು XIII ಗೀ.ಭಾ. ದಲ್ಲಿ "ಅತೋ ಯುಕ್ತಿಭಿರಪ್ಯೇತದಪಲಾಪೋನ ಯುಕ್ತಃ । ಯುಕ್ತಂ ಚ ಪುರುಷಮತಿ ಕಲ್ಪಿತಯುಕ್ತ್ಯಾದೇರಾಭಾಸತ್ವಂ । ಅಜ್ಞಾನ ಸಂಭವಾತ್ ।" ಎಂದು ಹೇಳಿದ್ದಾರೆ. |
| ಮ.ತಾ.ನಿ. I 30-32: ವಾದಿರಾಜೀಯ ಭಾವಪ್ರಕಾಶಿಕೆಯಲ್ಲಿ ಪ್ರಾಮಾಣ್ಯ ವಿಷಯದಲ್ಲಿ ಹೇಳಿದ್ದಾರೆ: "ಏವಂಚಾಪೌರುಷೇಯತ್ವೇನ ವಕ್ತೃದೋಷರಹಿತೇ ವೇದೇದೋಷಶಂಕಾಗರ್ಭಸ್ರಾವಣೈವಗತಾ । ವೇದಾನುಕೂಲ ಗ್ರಂಥೇಷುತನನುಕೂಲತ್ವಾದೇವ ನ ದೋಷಶಂಕಾವಕಾಶಃ।........ ಪುರಾಣಾನಾಂ ಸ್ಮೃತೀನಾಂ ಚ ಸರ್ವತ್ರ ಪ್ರಾಮಾಣ್ಯಾಭಾವಾನ್ನ ಪಂಚರಾತ್ರಾದಿಭಿಃ ಸಹಪಾಠ ಇತಿಭಾವಃ । ಪಂಚರಾತ್ರಾತ್ಮಕತ್ವತಃ । ....ವೈಷ್ಣವ ಪುರಾಣಸ್ಮೃತೀನಾಂ ಸಂಗೃಹೀತತ್ವಾತ್ । ಅವಿರುದ್ಧಂತು ಯತ್ತಸ್ಯೇತ್ಯನೇನ ಕಿಂ ಸಂಗೃಹೀತ ಮಿತಿ ನ ಶಂಕನೀಯಂ । ಅವೈಷ್ಣವ ಪುರಾಣಾದಿಷು ವಿದ್ಯಮಾನ ವೇದಾನುಕೂಲವಾಕ್ಯಾನಾಂ ಏತದನುಕೂಲ ಭಾಷ್ಯಾನುವ್ಯಾಖ್ಯಾನಾದಿ ಶಿಷ್ಟ ಕೃತ ಗ್ರಂಥಾನಾಂ ಚ ಸಂಗ್ರಾಹ್ಯಾತ್ಯ ಸೂಚನಾಯ ಸಾರ್ಥಕ್ಯಾತ್ ।" ಇತ್ಯಾದಿ - ಪುಟ 30 ॥ |
| ಈ ವ್ಯವಸ್ಥೆಯಿಂದ ದ್ವಾದಶಸ್ತೋತ್ರಾದಿ ಆಚಾರ್ಯರ ಗ್ರಂಥಗಳೂ, ವಾದಾವಳ್ಯಾದಿ ಟೀಕಾಚಾರ್ಯರ ಗ್ರಂಥಗಳೂ, ತರ್ಕತಾಂಡವಾದಿ ವ್ಯಾಸತೀರ್ಥರ ಗ್ರಂಥಗಳೂ, ಪ್ರಮಾಣಗಳೇ, ವೇದಾದಿ ಮೂಲ ಪ್ರಮಾಣಾಽವಿರುದ್ಧವಾದುದರಿಂದ ಎಂದು ಸ್ಪಷ್ಟವಾಯಿತು. ವೇದದಲ್ಲಿ ನಿತ್ಯತ್ವವಿದೆ. ಇತಿಹಾಸ ಸಾತ್ವಿಕ ಪುರಾಣಗಳಲ್ಲಿ ವೇದ ಪರಿಗೃಹೀತತ್ವವಿದೆ. ಸಾತ್ವಿಕ ಸ್ಮೃತಿಗಳಲ್ಲಿ ವೇದಾನುಸಾರಿತ್ವವಿದೆ. [ಅನುಸಾರಿತ್ವವೆಂದರೆ ಅನುಕೂಲತ್ವ – ಅನುಕೂಲತ್ವವೆಂದರೆ ಅವಿರುದ್ಧತ್ವವೇ - ಎಂದೂ ಅರ್ಥವಿವಕ್ಷೆ ಇದೆ. ಅದೂ ಮುಂದೆ ಹೇಳಲ್ಪಡುತ್ತದೆ. ] |

("ಸ್ಫುಟಂ ಅಭಿಮತಾರ್ಥಾಭಿದಾಯಕತ್ವಂ ಎಂದು III 2-9 ತತ್ವಪ್ರಕಾಶಿಕೆಯಲ್ಲಿದೆ)" ಹೀಗೆ ವೇದಾದಿಗಳಲ್ಲಿ ಅಪ್ರಾಮಾಣ್ಯ ಶಂಕಾನಿವಾರಕ ಮಾರ್ಗವಿದೆ. ಬ್ರಹ್ಮಸೂತ್ರಗಳೂ "ವೇದಾಃ ಸರ್ವಾಂಗಾನಿ ಸತ್ಯಮಾಯತನಂ" ಇತ್ಯಾದಿ ತಲವಕಾರೋಪನಿಷತ್ತೆಂಬ ವೇದಭಾಗದಲ್ಲಿ ಪರಿ ಗೃಹೀತವೇ. 'ಸತ್ಯ' ಪದದಿಂದ ಅವು ಹೇಳಲ್ಪಟ್ಟಿಲ್ಲವೆಂದರೆ, ಹೋಗಲಿ; ಸೂತ್ರಗಳು ಮೂಲ ಪ್ರಮಾಣಾವಿರುದ್ಧವಾದ್ದರಿಂದಲೇ ಪ್ರಮಾಣಗಳು ಎಂದು ಹೇಳಬಹುದು. ತಥಾ ಚ ಬ್ರಹ್ಮಸೂತ್ರ, ಅನುವ್ಯಾಖ್ಯಾನ, ದ್ವಾದಶಸ್ತೋತ್ರಗಳು, ಸುಧಾ, ಪ್ರಮಾಣಪದ್ಧತಿ, ಚಂದ್ರಿಕಾ, ಪ್ರಾಚೀನ ನಮ್ಮ ದೇಶದ ಮುಳುಗಿ ಹೋದ ಭಾಗದ ಚರಿತ್ರೆಗಳು, ನಷ್ಟ ದ್ವೀಪಗಳ ಪ್ರಾಚೀನ ಭೂಗೋಳಗಳು ಇವೇ ಮುಂತಾದುವೆಲ್ಲಾ "ಅವಿರುದ್ಧಂತು ಯತ್ವಸ್ಯ" ಎಂಬಲ್ಲಿ ಹೇಳಲ್ಪಟ್ಟ ಪ್ರಮಾಣವಿರುದ್ಧತ್ವ ಯುಕ್ತಿಯಿಂದಲೇ ಅಪ್ರಾಮಾಣ್ಯ ಶಂಕಾನರ್ಹಗಳು ಎಂದು ಸಿದ್ಧವಾಗುತ್ತದೆ. ಇದೇ ವಾದಿರಾಜ ಗುರುಗಳ ಭಾವ.

6. ನಿರ್ಣಾಯಕ ಬ್ರಹ್ಮಸೂತ್ರಗಳಲ್ಲೂ ಕೂಡ II 1.4 "ಓಂ ನವಿಲಕ್ಷಣತ್ವಾದಸ್ಯ ತಥಾತ್ವಂಚ ಶಬ್ದಾತ್" ಎಂಬ ಅಧಿಕರಣ ಭಾಷ್ಯದಲ್ಲಿ ಆಚಾರ್ಯರು ಅಪ್ಪಣೆ ಕೊಟ್ಟಿದ್ದಾರೆ: "ನೈವಂ ಶ್ರುತೇಸ್ತದನುಸಾರಿಸ್ಮೃತೇಶ್ಚ ತದುಕ್ತಾನುಪಲಬ್ದೇರಪ್ರಾಮಾಣ್ಯಂ| ವಿಲಕ್ಷಣತ್ವಾತ್। ನಿತ್ಯತ್ವಾತ್ತದನುಸಾರಿತ್ವಾಚ | ನಹಿ ನಿತ್ಯೇ ದೋಷಾಃ ಕಲ್ಪ್ಯಾಃ| ಸ್ವತಶ್ಚ ಪ್ರಾಮಾಣ್ಯಂ | ಅನ್ಯಥಾ ಅನವಸ್ಥಿತೇಃ | ............" ಇತ್ಯಾದ್ಯುಕ್ತ್ವಾ ಸ್ವತಃ ಪ್ರಮಾಣ ಗ್ರಂಥಾನಾಹ "ಭವಿಷ್ಯತ್ಪುರಾಣೇಚ" ಋಗ್ಯಜಃಸಾಮಾಥರ್ವಾಶ್ಚ ಮೂಲರಾಮಾಯಣಂ ತಥಾ | ಭಾರತಂ ಪಂಚರಾತ್ರಂ ಚ ವೇದಾ ಇತ್ಯೇವ ಶಬ್ದಿತಾಃ| ಪುರಾಣಾನಿಚಯಾನೀಹ ವೈಷ್ಣವಾನಿ ವಿದೋವಿದು| ಸ್ವತಃ ಪ್ರಾಮಾಣ್ಯಮೇತೇಷಾಂ ನಾತ್ರ ಕಿಂಚಿದ್ವಿಚಾರ್ಯತೇ | ಯದ್ಯೇಷೂಕ್ತಂ ನ ದೃಶೇತ ಪೂರ್ವಕರ್ಮಾತ್ರ ಕಾರಣಂ| ನಾ ಪ್ರಾಮಾಣ್ಯಂ ಭವೇದೇಷಾಂ ದೃಶ್ಯತೇಹ್ಯಧಿಕಾರತಃ| ಇತಃ ಪ್ರಾಮಾಣ್ಯ ಮನ್ಯೇಷಾಂ ನಸ್ವತಸ್ತು ಕಥಂಚನ| ಅದೃಶ್ಯೋಕ್ತ ತತಸ್ತೇಷಾಮಪ್ರಾಮಾಣ್ಯಂ ನ ಸಂಶಯಃ|" ಎಂದು ಹೇಳಲ್ಪಟ್ಟಿದೆ. ಇದರ ಪ್ರಕಾರ ಸ್ವತಃ ಪ್ರಮಾಣವಾದ ಪೂರ್ವೋಕ್ತ ಗ್ರಂಥಗಳಲ್ಲಿ ಉಕ್ತ ಫಲವಾಗದಿದ್ದರೂ ಅದೃಷ್ಟ ಕಾರಣವೆಂದು ತಿಳಿಯಬೇಕು. ಗ್ರಂಥವು ಅಪ್ರಮಾಣವೆಂದು ನಿಂದಿಸಬಾರದು. ಪೂರ್ವೋಕ್ತ ಗುಂಪಿಗೆ ಸೇರದಿರುವ ಗ್ರಂಥಗಳಲ್ಲಿ ಹೇಳಿದಂತೆ ನಡೆದು ಫಲ ಪ್ರಾಪ್ತಿಯಾಗದಿದ್ದರೆ ಗ್ರಂಥವೇ ಅಪ್ರಮಾಣವೆಂದು ನಿಶ್ಚಯಿಸಬೇಕೆಂದಿದ್ದಾರೆ.

7. ಅನುವ್ಯಾಖ್ಯಾನ II 1-4 ರಲ್ಲಿ ಸರ್ವ ವಾಕ್ಯಕ್ಕೂ ಪ್ರಾಮಾಣ್ಯಸ್ವತಸ್ತ್ವವನ್ನು ಇನ್ನೂ ವಿಸ್ತಾರವಾಗಿ ವಿವರಿಸಿದ್ದಾರೆ: "ಪಿಪೀಲಿಕಾ ಲಿಪಿಶ್ಚಾಪಿ ಪ್ರಮಾಣಮವಿರೊಧತಃ | ಯಥಾ ದ್ರೌಣೇರುಲೂಕೇನ ಕೃತಮಪ್ಯಾಸಬೋಧಕಂ | ಅವಿರುದ್ಧಂ ವಿರುದ್ಧಂತು ವಿರೋಧಾದೇವ ಬಾಧಿತಂ| ವಿರೋಧಾ ದರ್ಶನಾತ್ತಸ್ಮಾದ್ವೇದ ಪ್ರಾಮಾಣ್ಯವಿಷ್ಯತೇ| ತನ್ಮೂಲತ್ವಾತ್ಪ್ರತೀನಾಂತು ವಿರೋಧೋ ಯತ್ರ ನ ಕ್ವಚಿತ್ II ಇತಿ॥

ಅದರ ಸನ್ಯಾಯ ರತ್ನಾವಳೀ: "ಪಿಪೀಲಿಕೇ | ಯಥಾ ರಾತ್ರೌ ಉಲೂಕೇನೈಕೇನ ಕೃತನ್ಯಗ್ರೋಧ ಶಾಖೋಪಶಾಖಾನಿವಿಷ್ಟ ಬಹುತರ ಕಾಕ ವಿನಾಶವತ್ | ಮಯ್ಯೆಕೇನ ಬಹುತರ ಪಾಂಡವ ಸೈನ್ಯಂ ಹಂತುಂ ಶಕ್ಯಮಿತ್ಯಶ್ವತ್ಥಾಮ್ನೋ ನಿಶ್ಚಯೋ ಭಾರತೋಕ್ತಃ। ಸಮರ್ಥಶ್ಚ ಜಾತಃ ಏವಮಾಪ್ತಾ ಪ್ರಣೀತಾದಪಿ ಘುಣಾದಿ

ಲಿಖಿತಾ "ಚ್ಛಬ್ದದ್ಯಥಾರ್ಥಪ್ರತಿಪತಿರ್ಯುಕ್ತಾ। ಯಸ್ತು ತತ್ರಾನನ್ವಿತಃ ಪ್ರಮಾಣ ವಿರುದ್ಧಾಕ್ಷರ ಸಮೂಹೋ ದೃಶ್ಯತೇ ಸೋಪ್ರಮಾಣಂ ಭವತು। ಏವಂ ವೇದ ತನ್ಮೂಲ ಸ್ಮೃತ್ಯೋರಪ್ಯ ವಿರುದ್ಧಾರ್ಥೇ ಪ್ರಾಮಾಣ್ಯಂ। ಆಗಮೇನ ಚ ವಿರೋದ್ಧು ಪ್ರತ್ಯಕ್ಷಂ ಆಗಮಾಂತರಂ ಶಕ್ನೋತಿ ನಾನ್ಯದಿತ್ಯಾಹ। ವಿರೋಧೋಪಿ। ....ತತ್ಯಥಾ "ಅಂಧೋ ವಣಿಮವಿಂದತೇತ್ಯಾದಿ ಶ್ರುತೇ"॥

---

ಸುಧಾ ॥ 1-4 (ಪುಟ 19): ಪ್ರಾಮಾಣ್ಯಸ್ಯ ಸ್ವತಸ್ತ್ವೇನ । ಅಪೌರುಷೇಯತ್ವೇಪಿ ಪ್ರಾಮಾಣ್ಯ ಕಾರಣಾಭಾವಾತ್ಪ್ರಾಮಾಣ್ಯಂ ನ ಸ್ಯಾದಿತಿ ಪ್ರಸಂಗಸ್ಯಾಭಾಸತ್ವಾತ್। ಪುಟ 21: ಪಿಪಿಲಿಕೇತಿ ನ ಕೇವಲಂ ಶ್ರುತಿಃ ಕಿಂತು ಪೀಪಿಲಿಕಾ ಲಿಪಿರಪಿ ಇತ್ಯಪೇರರ್ಥ:। ಅಪ್ರಮಾಣ್ಯಂ ಖಲು ಪಿಪೀಲಿಕಾಲಿಪೇರ ಬೋಧಕತ್ವೇನ ವಾಸ್ಯಾತ್। ವಿಪರೀತ ಬೋಧಕತ್ವೇನವಾ। ನಾದ್ಯಃ ಅನುಭವ ವಿರುದ್ಧತಾತ್। ಅನ್ಯಥಾ ಪುರುಷ ಲಿಪೇರಪ್ಯಬೋಧಕತ್ವಂ ಸ್ಯಾತ್। ನ ದ್ವಿತೀಯಃ। ತದ್ಧಿ ಬಲವತ್ಪ್ರಮಾಣ ವಿರೋಧತಃ ಕಲ್ಪನೀಯಂ। ಅನ್ಯಥಾಅಪಿ ಪ್ರಸಂಗಾತ್। ನ ಚ ಪಿಪೀಲಿಕಾಲಿಪಿ ಬೊಧಿತೇಽರ್ಥೇ ಪ್ರಮಾಣ ವಿರೋಧೋಽಸ್ತಿ। ಅತಃ ಕಥಮಸೌ ಅಪ್ರಮಾಣಂ ಸ್ಯಾತ್। .... ಪುಟ 23: ಯಥಾ ಅಬುದ್ಧಿಪೂರ್ವಕಮಪ್ಯೇಕೇನೂಲೂಕೇನ ಕೃತಮನೇಕ ಕಾಕನಾಶನಂ ಅಶ್ವತ್ಥಾಮ್ನೋ ಅಹಮೇಕ ಏವಾನೇಕಾನ್ವಧಿಷ್ಯಾವೀತ್ಯಸ್ಯಾರ್ಥಸ್ಯ ಬೋಧಕಂ ಸಮ್ಯಗನುಭವಂ ಪ್ರತಿ ಸಾಧನಂ ಜಾತಂ। ತಥಾ ಶ್ರುತಿರಬುದ್ಧಿ ಪೂರ್ವಾಪಿ ಸಮ್ಯಗನುಭವ ಸಾಧನಂ। ...... ನನುಶಾಕುನಮರ್ಥವಿಸಂವಾದ್ಯಪಿ ದೃಶ್ಯತೇ। ಸತ್ಯಂ। ಯತ್ತು ಪ್ರಮಾಣ ವಿರುದ್ಧಂ ತದ್ವ್ಯಭಿಚಾರಿ ಸ್ಥಳಂ ಭವಿಷ್ಯತೀತಿ ಭಾವೇನೋಕ್ತಂ ಅವಿರುದ್ಧಮಿತಿ। ....ಪ್ರಮಾಣವಿರುದ್ಧಂ ಯದುನ್ಮತ್ತವಾಕ್ಯಂ, ತತ್ಪ್ರಮಾಣವಿರೋಧಾದೇವ ಬಾಧಿತಂ ಅಯಥಾರ್ಥಮಿತಿಯಾವತ್ । ನತೂಕ್ತ ಹೇತುಭ್ಯಾಮಿತಿ । ....... ಅತಏವಾಪ್ತಾಪ್ರಣೀತ ವಾಕ್ಯತ್ವಹೇತುರಪ್ಯಪಾಸ್ತಾಃ। ........ತಥಾಚ ತತ್ರ ಪ್ರಮಾಣಬಾಧಿತತ್ವಮುಪಾಧಿಃ। ....... ಅಯಮತ್ರ ಪ್ರಯೋಗಃ। ವೇದೊನಾಯಥಾರ್ಥಃ ಪ್ರಮಾಣಾವಿರುದ್ಧತ್ವಾತ್, ಪ್ರತ್ಯಕ್ಷವತ್। ....... ತನ್ಮೂಲತ್ವಾದಿತಿ ....... ವಿರೋಧ ಇತಿ। ..... ಯಾಸಾಂ ಸ್ಮೃತೀನಂ ಸರ್ವಥಾ ಪ್ರಮಾಣ ವಿರೊಧೋ ನಾಸ್ತಿ ತಾಸಾಮೇವ ಪಕ್ಷೀಕರಣಾ ನ್ನಕಶ್ಚಿದ್ದೋಷ ಇತ್ಯಾಶಯಃ। ನನ್ವೇವಂ ಸತಿ ವೇದಮೂಲೋಪನ್ಯಾಸೋ ವ್ಯರ್ಥಃ। ಜ್ಞಾನಜನಕಾನಾಮವಶ್ಯಾಂಗೀಕರಣೀಯೇನ ವಿರೋಧಾಭಾವೇನೈವಪ್ರಾಮಾಣ್ಯ ಸಿದ್ಧಿರಿತಿ ಚೆನ್ನ। ಫಲವ್ಯಭಿಚಾರ ಲಕ್ಷಣ ವಿರೋಧ ದರ್ಶನೇನ ಅಸಿದ್ಧಿ ಪ್ರಸಂಗಾತ್। ಪ್ರಾಮಾಣ್ಯೇನ ತದಪನಯನೇ ಚ ಇತರೇತಾರಾಶ್ರಯತ್ವಾಪಾತಾತ್। ವೇದ ಮೂಲತ್ವೇನತು ಪ್ರಾಮಾಣ್ಯೇ ಸಿದ್ಧೇನಕೊಪಿದೋಷ ಇತಿ॥ ಅಪ್ರಾಮಾಣ್ಯ ಪ್ರಯೋಜಕಸ್ಯ ಪ್ರಮಾಣ ವಿರೋಧಸ್ಯಾಭಾವಾನ್ನ ಶ್ರುತಿಸ್ಮೃತ್ಯೋರಪ್ರಮಾಣ್ಯಮಿತ್ಯುಕಂ........ತದಯಕ್ತಂ.........ಅನುಮಾನವಿರುದ್ಧದ್ವಾದಿತ್ಯುತ ಆಹ। ವಿರೋಧೋಪೀತಿ। ........ ವಿರೋಧಾದೇವಬಾಧಿತಮಿತ್ಯಪ್ರಾಮಾಣ್ಯ ಪ್ರಯೋಜಕತಯೋಕ್ತೋ ವಿರೋಧೋಪಿ ಸ ಏವ ಯಃ ಪ್ರತ್ಯಕ್ಷೇಣಾಗಮೇನವಾಸ್ಯಾತ್। ನ ಪುನರನುಮಾನೇನ। .........ಅಸ್ಮಾಭಿಶ್ಚ ಪ್ರತ್ಯಕ್ಷಾಗಮ ವಿರೋಧ ಏವ ತಥಾ ಅಭಿಪ್ರೇತೋ ನಾನುಮಾನ ವಿರೋಧಃ। ........ನನು ಪ್ರಮಾಣ ವಿರೋಧ ಏವ ಅಪ್ರಾಮಾಣ್ಯೇ

ಪ್ರಯೋಜಕೊಸ್ತು ಕಿಂ ಪ್ರತ್ಯಕ್ಷೇಣಾಗಮೇನ ವೇತಿ ವಿಶೇಷಣೇನ|.......ಮೈವಂ | ವಕ್ಷಾಮೋಽಹ್ಯತ್ರ ಬ್ರಹ್ಮಾದಿ ವಸ್ತುಷು ಪ್ರಮಾಣಂ ವೇದ ಏವೈಕ ಇತಿ ವೈದಿಕೇ ಆರ್ಥೇಽನುಮಾನಸ್ಯಾನವಕಾಶಂ| ಯತ್ರಚ ಯಸ್ಯಾಪ್ರವೇಶೋ ನತಸ್ಯ ತದ್ಬಾಧಕತ್ವಂ ॥ ........ಪುಟ 21: ಅಪಿಚ ಪ್ರತ್ಯಕ್ಷಾಗಮ ವಿರೋಧೋಽಪಿ ನ ಸ್ವರೂಪೇಣಾಪ್ರಾಮಾಣ್ಯಂ ಪ್ರಯೋಜಯತಿ| ಕಿಂತು ತಯೋರುಪಜೀವತ್ವಾದಿನಾ ಪ್ರಾಬಲ್ಯೇ ಸತ್ಯೇವ | ದುರ್ಬಲಯೋಃ ಪ್ರತಿಬಂಧಮಾತ್ರ ಹೇತುತ್ತ್ವೇನ ಅಪ್ರಾಮಾಣ್ಯ ನಿಶ್ಚಯಾನುಪಪತ್ತೇಃ | ........ "ವೇದಸ್ಯ ಪ್ರತೀತಾರ್ಥ ಪ್ರಚ್ಯಾವನ ಮಾತ್ರಂ | " [ಮೇಲ್ಕಂಡ ಪ್ರಮಾಣಗಳು ಪೂರ್ವಪಕ್ಷ ಧ್ವಂಸವನ್ನು ವಿಶೇಷವಾಗಿ ಮಾಡುತ್ತವೆ. ಅವನ್ನು ಭಾಷಾಂತರಿಸಿಲ್ಲ. ಸ್ಥಳ ಸಂಕೋಚದಿಂದ ಸಂಕ್ಷೇಪವಾಗಿ ತಾತ್ಪರ್ಯ ಕೊಡಲಾಗಿದೆ. ಅಷ್ಟು ಪೂರ್ವಪಕ್ಷ ನಿರಾಕರಣೆಗೆ ಸಾಕು. ಸನ್ನ್ಯಾಯ ರತ್ನಾವಳೀ ಮತ್ತು ನ್ಯಾಯಸುಧೆಯ ವ್ಯಾಖ್ಯಾನಾಲಂಕೃತವಾದ ಈ ಅನುವ್ಯಾಖ್ಯಾನ ವಾಕ್ಯವು ದ್ವೈತಸಿದ್ಧಾಂತದ ಬಹು ಮುಖ್ಯ ಪ್ರಮೇಯ ಒಂದನ್ನು ತಿಳಿಸುತ್ತದೆ. ಏನೆಂದರೆ "ಕರಣಗಳಿಗೆ ಸ್ವತಃ ಪ್ರಾಮಾಣ್ಯವಿದೆ. ತತ್ರಾಪಿ ವಾಕ್ಯ ಪ್ರಾಮಾಣ್ಯವು ಸ್ವತ ಏವ ಎಂದರೆ ಬೋಧಕ ವಾಕ್ಯವು ಅದರ ಸ್ವಭಾವದಿಂದಲೇ ಯಥಾರ್ಥ ಜ್ಞಾನವನ್ನು ಹುಟ್ಟಿಸುತ್ತದೆ; ಗುಣಾದಿಗಳನ್ನು ಅಪೇಕ್ಷಿಸುವುದಿಲ್ಲ" ಎಂದು ಸಿದ್ಧಾಂತ. ಹಾಗಾದರೆ ಬೌದ್ಧಾದಿ ವಾಕ್ಯಗಳೂ ಪ್ರಮಾಣವಾಗಲಿ ಎಂದರೆ ಆ ವಾಕ್ಯಗಳಲ್ಲಿ ದೋಷ ಸೇರಿಕೊಂಡಿದೆ. ಅದು ಹೇಗೆ ಗೊತ್ತಾಯಿತೆಂದರೆ ಪ್ರಮಾಣ ವಿರೋಧಗಳು ಬೌದ್ಧ ವಾಕ್ಯಗಳಿಗಿವೆ. ತಥಾಚ ಪ್ರಮಾಣವಿರೋಧ ಬಂದರೆ ವಾಕ್ಯವು ದೋಷಯುಕ್ತವಾಗಿ ವಿಪರೀತ ಬೋಧಕವಾಗಿದೆ ಎಂದು ಸಿದ್ಧಾಂತ. ಪ್ರಮಾಣವಿರೋಧ ಬರದಿದ್ದರೆ ಆ ವಾಕ್ಯವು ಉನ್ಮತ್ತನು ಹೇಳಿರಲಿ, ಅಜ್ಞನು ಹೇಳಿರಲಿ, ಇರುವೆಯು ಕೊರೆದಿರಲಿ, ಗೂಬೆಯು ಕಾರ್ಯದಿಂದ ಸೂಚಿಸಿರಲಿ - ಅದು ಪ್ರಮಾಣವೇ. ವಾಕ್ಯಕ್ಕೆ ಅಪ್ರಮಾಣ್ಯ ಸಾಧಿಸಬೇಕಾದರೆ ಬಲವತ್ಪ್ರಮಾಣ ವಿರೋಧವನ್ನೇ ತೋರಿಸಬೇಕು. ಅನ್ಯಥಾ ಅತಿಪ್ರಸಂಗ ಬರುತ್ತದೆ. ಹೀಗೆ ವೇದವಾಕ್ಯವೂ ಆಪ್ತಾದಿಗಳಿಂದ ರಚಿತವಲ್ಲದಿದ್ದರೂ ಪ್ರಮಾಣವೇ. ಏಕೆಂದರೆ ಇತರ ಪ್ರಮಾಣಾವಿರುದ್ಧವಾಗಿದೆ; ಪ್ರತ್ಯಕ್ಷದಂತೆ, ಅಪ್ರಾಮಾಣ್ಯಕ್ಕೆ ಪ್ರಬಲ ಪ್ರಮಾಣ ವಿರೋಧವು ಪ್ರಯೋಜಕವು. ಪ್ರಾಮಾಣ್ಯಕ್ಕೆ ಪ್ರಮಾಣವಿರುದ್ಧತ್ವವಿದ್ದರೆ ಸಾಕು, ಅದರಲ್ಲೂ ಪ್ರಮಾಣ ವಿರೋಧವೆಂದರೆ ಉಪಜೀವ್ಯ ಪ್ರತ್ಯಕ್ಷ ಅಥವಾ ಉಪಜೀವ್ಯ ಆಗಮಗಳ ವಿರೋಧ ಎಂದರ್ಥ. ಅನುಮಾನಕ್ಕೆ ವಿರೋಧಿಸುವ ಶಕ್ತಿಯೇ ಇಲ್ಲ. ಅದರಲ್ಲೂ 'ಬ್ರಹ್ಮ, ಧರ್ಮ, ಋಜುತ್ವ ಮುಂತಾದ ಅತೀಂದ್ರಿಯ ವಿಷಯದಲ್ಲಿ ಅನುಮಾನಕ್ಕೆ ಪ್ರವೇಶವೇ ಇಲ್ಲ. "ಪ್ರವೇಶವೇ ಇಲ್ಲದ ಮೇಲೆ ಬಾಧಕತ್ವವೇ ಇಲ್ಲ. ಇಂಥದು ದ್ವೈತಮತದ ಪ್ರಾಮಾಣ್ಯ ಸ್ವತಸ್ತ್ವದ ಸಿದ್ಧಾಂತ. ಹೀಗೆ ಇರುವುದರಿಂದ ಮೂಲ ಹತ್ತು ಶಾಸ್ತ್ರಗಳಿಗೆ ಅವಿರುದ್ಧವಾದ ವೃನ್ದಾವನಾಖ್ಯಾನಾದಿ ಸರ್ವ ಪೌರುಷೇಯ ಗ್ರಂಥಗಳೂ, ಪಾಶುಪತಾದಿ ಆಗಮಗಳಲ್ಲಿರುವ ಮತ್ತು ತಾಮಸ ಪುರಾಣಗಳಲ್ಲಿರುವ ವಾಕ್ಯಗಳೂ ಸಹ ಪ್ರಮಾಣಗಳ ವಿರುದ್ಧವಾದರೆ ಅಪ್ರಮಾಣಗಳೇ. ಹತ್ತು ಶಾಸ್ತ್ರಗಳಲ್ಲೇ ಪರಸ್ಪರ ವಿರೋಧ ಬಂದರೆ ಪ್ರತೀತಾರ್ಥವನ್ನು ತಿರಸ್ಕರಿಸಿ ವಿರೋಧ ಪರಿಹಾರವಾಗುವಂತೆ ಉಪಕ್ರಮಾದಿಗಳ ಸಹಾಯದಿಂದ ವಿಚಾರ ಮಾಡಿ ತಾತ್ಪರ್ಯಾರ್ಥವನ್ನು ಸ್ವೀಕರಿಸಬೇಕು. ಇಷ್ಟು ಪರಮ ರಹಸ್ಯ ಪ್ರಮೇಯ.

8. ಪ್ರಮಾಣವಿರುದ್ಧತ್ವವು ಪ್ರಾಮಾಣ್ಯ ವ್ಯವಸ್ಥೆಯಲ್ಲಿ ಪ್ರಯೋಜಕವು ಎಂಬಲ್ಲಿ ಯುಕ್ತಿಯೂ ಇದೆ. ಘಟಾದಿ ವಸ್ತುವು ಅಬಾಧ್ಯವಾಗಿದ್ದರೆ, ಪ್ರಮಾಣವಿರುದ್ಧವಾದರೆ ಸತ್ಯವೆನ್ನಿಸುತ್ತದೆ. ಸತ್ಯ(ಅಬಾಧ್ಯ) ವಸ್ತು ವಿಷಯಕ ಜ್ಞಾನವೂ, ಕರಣವೂ ಪ್ರಾಮಾಣ್ಯವುಳ್ಳದ್ದು, ಪ್ರಮಾಣವು ಎಂದು ಪ್ರಖ್ಯಾತವಾಗಿದೆ. ಎಂದರೆ ವಿಷಯವು ಸತ್ಯವಾಗಿದ್ದರೆ ತದ್ವಿಷಯಕ ಜ್ಞಾನವೂ, ಪ್ರಮಾಣ ಕರಣವೂ ಪ್ರಮಾಣವೆನ್ನಿಸುತ್ತವೆ, "ಏವಂ ಚ ಕರಣವೂ, ಜ್ಞಾನವೂ ಪ್ರಮಾಣಾವಿರುದ್ಧವಾದರೆ ವಿಷಯವು ಸತ್ಯವಾಗಿದ್ದೇ ಇರುತ್ತದೆ. ಅದೇ ಪ್ರಾಮಾಣ್ಯ. "ಜ್ಞಾನಸ್ಯ ಪ್ರಾಮಾಣ್ಯೇ ವಿಷಯಸ್ಯ ಸತ್ಯತ್ವಂ" ಎಂದು ವ್ಯಾಪ್ತಿ ಇದೆ. ಹೀಗೆ 'ಜ್ಞಾನಕ್ಕೆ ಯಾಥಾರ್ಥ್ಯ, ವಿಷಯಕ್ಕೆ ಸತ್ಯತ್ವ ಎಂಬುವು ಪ್ರಮಾಣಾ ವಿರುದ್ಧತ್ವದಿಂದ ಪ್ರಾಪ್ತವಾಗಲು, 'ಜ್ಞಾನ ವಿಷಯಾ ಏವಹಿ ಕರಣಾನಾಂ ವಿಷಯಾಃ' ಎಂಬ ನ್ಯಾಯದಿಂದ ಅಂಥ ಸತ್ಯ ವಸ್ತು ಸನ್ನಿಕೃಷ್ಟವೂ ಯಥಾರ್ಥ ಜ್ಞಾನಜನಕವೂ ಆದ ಕರಣಗಳು ಪ್ರಮಾಣಗಳೆಂದೇ ಆಯಿತು. ಹೀಗೆ ಪ್ರಮಾಣಾವಿರುದ್ಧತ್ವವು ಕರಣಪ್ರಾಮಾಣ್ಯಕ್ಕೆ ದ್ಯೋತಕವಾಗಿದೆ. ಕಿಂಚ ಬೋಧಕ ವಾಕ್ಯದ ಪ್ರಾಮಾಣ್ಯವು ಸ್ವಾಭಾವಿಕ ಧರ್ಮವು, ಸುಧಾದಿ ಗ್ರಂಥಗಳಲ್ಲಿ ಉತ್ಪತ್ತಿಯಲ್ಲೂ, ಜ್ಞಾನ ಕರಣವಾದ ವಾಕ್ಯಗಳಿಗೆ ಸ್ವತಃ ಪ್ರಾಮಾಣ್ಯ, ಜ್ಞಪ್ತಿಯಲ್ಲೂ ವಾಕ್ಯಗಳಿಗೆ ಸ್ವತಃ ಪ್ರಾಮಾಣ್ಯ ಎಂದು ಉಪಪಾದಿಸಿದ್ದಾರೆ. 'ಜ್ಞಾನ ಜನಕತ್ವ ಶಕ್ತ್ಯಭಿನ್ನ ಪ್ರಮಾಜನಕತ್ವ ಶಕ್ತಿಮತ್ವ ರೂಪ' ಉತ್ಪತ್ತಿಯಲ್ಲಿ ಸ್ವತಸ್ತ್ವವು ಇದೆ. ಎಂದರೆ ಶಾಬ್ದಬೋಧವನ್ನು ಹುಟ್ಟಿಸುವ ವಾಕ್ಯವು ಯಥಾರ್ಥಶಾಬ್ದಬೋಧವನ್ನು ಹುಟ್ಟಿಸುವುದಕ್ಕೆ ಇನ್ನು ಯಾವ ಪದಾರ್ಥ ಸಹಾಯವನ್ನೂ ಅಪೇಕ್ಷಿಸುವುದಿಲ್ಲ. ಯಥಾರ್ಥ ಶಾಬ್ದ ಬೋಧಜನಕಕತ್ವವೇ ಅದರ ಸ್ವಭಾವ ಎಂದರ್ಥ. ಜ್ಞಪ್ತಿಯಲ್ಲೂ, ಜ್ಞಾನಜನಕತ್ವ ಗ್ರಾಹಕ ಮಾತ್ರ ಗ್ರಾಹ್ಯತ್ಯರೂಪಸ್ವತಸ್ತ್ವವು ವಾಕ್ಯಕ್ಕಿದೆ - ಎಂದು ಸುಧೆಯಲ್ಲಿದೆ - ಎಂದರೆ 'ಸತಿ ವಾಕ್ಯಜ್ಞಾನೇಯಥಾರ್ಥ ಶಾಬ್ಬಬೋಧಃ ವಾಕ್ಯಜ್ಞಾನಾಭಾವೇ ಯಥಾರ್ಥ ಶಾಬ್ದ ಬೋಧಾಭಾವಃ' ಎಂಬ ಅನ್ವಯವ್ಯತಿರೇಕಗಳಿಂದ ವಾಕ್ಯದ ಶಾಬ್ದ ಬೋಧಜನಕತ್ವವೂ ಯಥಾರ್ಥ ಶಾಬ್ದ ಬೋಧಜನಕತ್ವವೂ ಒಟ್ಟಿಗೆ ಗೃಹೀತವಾಗುತ್ತವೆ, ಎಂದರೆ ಜ್ಞಾತ ವಾಕ್ಯಕ್ಕೆ ಯಥಾರ್ಥ ಶಾಬ್ದ ಬೋಧಜನಕತ್ವವು ಸ್ವಭಾವವೆಂದು ಒಂದೇ ಅನ್ವಯ[ಯದ್ಯಪಿ ಪ್ರಮಾಣ ಪದ್ಧತಿಯಲ್ಲಿ ಕರಣ ಪ್ರಾಮಾಣ್ಯಸ್ಯ "ಜ್ಞಪ್ತಿಸ್ತು ಪರತಏವ" ಎಂದಿದೆ. ಆದರೆ ಆ ಪರತಸ್ತ್ವವು ಬೇರೆ ವಿವಕ್ಷೆಯಿಂದ ಹೇಳಿದ್ದು. ಕರಣಗ್ರಾಹಕ ಗ್ರಾಹ್ಯತ್ವವಿಲ್ಲ ಎಂಬುದೇ ವಿವಕ್ಷೆ. ಕರಣಗ್ರಾಹಕ ಬೇರೆ. ಪ್ರಾಮಾಣ್ಯ ಗ್ರಾಹಕ ಬೇರೆ. ಆದರೆ ಆ ಚರ್ಚೆ ವಾಕ್ಯ ಪ್ರಾಮಾಣ್ಯ ವಿಷಯದಲ್ಲಿ ಸಂಗತವಲ್ಲ. ಪ್ರಮಾಣಾವಿರುದ್ಧ ವಾಕ್ಯವು ನಿಯಮೇನ ಪ್ರಮಾಜನಕವು ಎಂಬ ವ್ಯಾಪ್ತಿಗೆ ಬಾಧಕವಿಲ್ಲ.] ವ್ಯತಿರೇಕಗಳು ನಿಶ್ಚಯಿಸುತ್ತವೆ. ತತ್ವ ನಿರ್ಣಯದಲ್ಲಿ ಈ ವಚನಗಳಿವೆ: "ಪ್ರಮಾಣ್ಯಂ ಚ ಸ್ವತ ಏವ । ಅನ್ಯಥಾ ಅನವಸ್ಥಾನಾತ್। ನಚೋಕ್ತಯುಕ್ತ್ಯಧೀನತ್ವಂ ಪ್ರಾಮಾಣ್ಯಸ್ಯ। ಬುದ್ಧಿ ದೋಷ ನಿರಾಸ ಮಾತ್ರ ಕಾರಣ್ವತಾದ್ಯುಕ್ತಿನಾ0". ಅನಾಪ್ತನಿಂದ ರಚಿಸಲ್ಪಟ್ಟಿದ್ದರೂ, ಉನ್ಮತ್ತ, ಅಜ್ಞ, ಶತ್ರು ಇವರುಗಳಿಂದ ರಚಿಸಲ್ಪಟ್ಟ ಗ್ರಂಥಗಳಲ್ಲೂ ಪ್ರಬಲ ಪ್ರಮಾಣ ವಿರೋಧವಿಲ್ಲದಿದ್ದರೆ ಆಯಾಯ ಭಾಗಕ್ಕೆಪ್ರಾಮಾಣ್ಯವು ಇದ್ದೆ ಇದೆ. ಸ್ಥಾಲೀ ಪುಲಾಕ ನ್ಯಾಯದಿಂದ ಒಂದು ಸುಳ್ಳಾದರೆ ಎಲ್ಲಾ ಸುಳ್ಳೆನ್ನೆಬಾರದು. ಆದ್ದರಿಂದಲೇ "ಶೈವೇ ಚ ಸ್ಕಾಂದೇ" ಎಂದು ತಾಮಸ ಪುರಾಣವಾದ ಸ್ಕಂದ ಪುರಾಣದ ಭಾಗವನ್ನು ಕೂಡ ಶ್ರೀಮದಾಚಾರ್ಯರು ಪ್ರಮಾಣವೆಂದು ಗ್ರಹಿಸಿ

| |
|---|
| ಅಲ್ಲಲ್ಲಿ ತಮ್ಮ ಗ್ರಂಥಗಳಲ್ಲಿ ಉದಾಹರಿಸಿದ್ದಾರೆ. ಮ.ತಾ.ನಿ I 52 ಸ್ಕಾಂದೇಪ್ಯುಕಂ ಶಿವೇನೈವ ಷಣ್ಮುಖಾಯೈವ ಸಾದರಂ \| ಶಿವ ಶಾಸ್ತ್ರೇಪಿ ತದ್ಗ್ರಾಹ್ಯಂ ಭಗವಾಚ್ಛಾಸ್ತ್ರಯೋಗಿಯತ್ II ಎಂದು ಉಕ್ತ ವಾಗಿದೆ. (ಶಿವೋತ್ತಮತ್ವ ಹೇಳುವ ಸ್ಕಾಂದ ಪುರಾಣದಲ್ಲೂ, ಷಣ್ಮುಖನನ್ನು ಕುರಿತು ಶಿವನೇ ಪ್ರೀತಿಯಿಂದ ಹೇಳಿದ ಮಾತಿದೆ; ಏನಂದರೆ ಶೈವ ಶಾಸ್ತ್ರದಲ್ಲೂ ಕೂಡ ಯಾವ ವಾಕ್ಯವು ವಿಷ್ಣೂತ್ಕರ್ಷ ಹೇಳುವ ಶಾಸ್ತ್ರಕ್ಕೆ ಅನುಕೂಲವೋ ಅದು ಗ್ರಾಹ್ಯವೇ.) |
| 9. ಮ.ತಾ.ನಿ. I 56-57 "ಉಕ್ತಂ ಪದ್ಮ ಪುರಾಣೇಚ ಶೈವೇ ಏವ ಶಿವೇನತತ್" (ಪದ್ಮ ಪುರಾಣದಲ್ಲೇ ಶೈವ ಭಾಗದಲ್ಲೇ ಶಿವನಿಂದಲೇ ವಿಷ್ಣೂತ್ಕರ್ಷಾವಿರೋಧಿ ವಾಕ್ಯವು ಗ್ರಾಹ್ಯವೆಂದು ಹೇಳಲ್ಪಟ್ಟಿದೆ.) ಎಂದಿದೆ. ಅದರೆ ವಾದಿರಾಜೀಯ ವ್ಯಾಖ್ಯಾನ (ಪುಟ 24) ಪಾದ್ಮ ಪುರಾಣವು ಪೂರ್ವ ಕಾಂಡ, ಉತ್ತರಕಾಂಡ ಎಂದು ದ್ವಿವಿಧ. ಅದರಲ್ಲಿ ಪೂರ್ವಕಾಂಡವು ಪೂರ್ವಪಕ್ಷ, ಸಾತ್ವಿಕ ಗಾರುಡಾದಿ ಪಂಚ ಪುರಾಣ ವಿರುದ್ಧವಾದ ವಿಷಯವನ್ನು ಬೋಧಿಸುವುದರಿಂದ. ಆದರೆ ಉತ್ತರಕಾಂಡವು ಸಿದ್ಧಾಂತವು, ಏಕೆಂದರೆ ಪೂರ್ವೋಕ್ತ ಸಾತ್ವಿಕ ಪಂಚಪುರಾಣಗಳಿಗೆ ಅನುಕೂಲವಾಗಿರುವುದರಿಂದ. ಆದ್ದರಿಂದ "ಪದ್ಮ ಪುರಾಣೇ ಶೈವೇ" ಎಂದು ಆಚಾರ್ಯರು ಹೇಳಿದರು. 'ಶಿವಪ್ರತಿಪಾದಕ ಪೂರ್ವಕಾಂಡದಲ್ಲಿ' ಎಂದರ್ಥ. 56-57: "ಅನ್ಯಶಾಸ್ತ್ರೇಷು - ಶೈವಶಾಸ್ತ್ರಗಳಲ್ಲಿ; ಈರಿತಃ - ವಿಷ್ಣುವು ಉತ್ತಮನೆಂದು ಕೆಲವು ಭಾಗಗಳಲ್ಲಿ ಹೇಳಲ್ಪಟ್ಟಿದೆ. ಆದ್ದರಿಂದ ಸ್ವವಿರುದ್ಧವಾದ್ದರಿಂದ ವೇದಾದಿ ಶಾಸ್ತ್ರಗಳಲ್ಲಿ ವಿಶ್ವಾಸ ಮಾಡುವಂತೆ ಅವುಗಳು ವಿಶ್ವಾಸಾರ್ಹವಲ್ಲವೆಂದು ಭಾವ II 59" II ವೇದಗಳಲ್ಲಿ ಸರ್ವತ್ರ ವಿಷ್ಣುವು ಸರ್ವ ಜಗತ್ತಿನ ದೆಸೆಯಿಂದ ಉತ್ತಮನೆಂದು ಹೇಳಿದೆ. ಆದ್ದರಿಂದ ಸ್ವವಿರುದ್ಧತೆ ವೇದಗಳಲ್ಲಿಲ್ಲ II60II" ದ್ವಿತೀಯಾಧ್ಯಾಯ ಗೀತಾ ಭಾಷ್ಯದಲ್ಲೂ "ವೇದಾನಾಂ ತ್ವೇಕಾರ್ಥತ್ವಾನ್ನ ವಿರೋಧಃ II ಎಂದರೆ ಎಲ್ಲಾ ಕಡೆಯಲ್ಲೂ ವೇದಗಳು ವಿಷ್ಣೂತ್ತಮತ್ವವನ್ನೇ ಹೇಳುವುದರಿಂದ ಸ್ವವಿರುದ್ಧವಾಗಿಲ್ಲ ಎಂದು ಹೇಳಲ್ಪಟ್ಟಿದೆ. |
| ಮ.ತಾ.ನಿ. XX 16-19 ಶ್ಲೋಕಗಳಲ್ಲೂ ಈ ಸೂಕ್ಷ್ಮ ಪ್ರಮೇಯವು ಪ್ರತಿಪಾದಿತವಾಗಿದೆ. ಆ ಶ್ಲೋಕಗಳ ಭಾಷಾಂತರವೇನೆಂದರೆ "ಶೈವ ಶಾಸ್ತ್ರಗಳೂ ಕೂಡ ಅಲ್ಲಲ್ಲಿ ವೇದಾಧಿಕ್ಯವನ್ನೂ, ವೇದವನ್ನು ತ್ಯಾಗ ಮಾಡಿದ ಗ್ರಂಥಗಳ ನಿಂದೆಯನ್ನೂ ಬಹಳವಾಗಿ ಮಾಡುತ್ತವೆ. ಹಾಗೆ ಶಾಕ್ತೇಯ, ಸ್ಕಾಂದ, ಸೌರಾದಿಗಳ ನಿಂದೆಯನ್ನೂ ಮಾಡುತ್ತವೆ. ಮತ್ತು ಆ ಶೈವ ಶಾಸ್ತ್ರಗಳಲ್ಲಿಯೇ ವೇದಗಳು ವಿಷ್ಣು ಪರವೆಂದೂ ಹೇಳಲ್ಪಟ್ಟಿವೆ. II16II ಶೈವಶಾಸ್ತ್ರಗಳೂ ಕೆಲವು ಭಾಗದಲ್ಲಿ ಶಿವಾದಿಗಳ ದೆಸೆಯಿಂದ ವಿಷ್ಣುವಿಗೆ ಆಧಿಕ್ಯವನ್ನು ಹೇಳುತ್ತವೆ. ವೇದದಲ್ಲಿ ಮಾತ್ರ ಎಲ್ಲಿಯೂ ವಿಷ್ಣುವಿನ ದೆಸೆಯಿಂದ ಉತ್ಕೃಷ್ಟನಿದ್ದಾನೆಂದು ಹೇಳಿಲ್ಲ. ಬೌದ್ಧಾದಿಗಳೂ ಕೂಡ ಕೆಲವು ಕಡೆಯಲ್ಲಿ ಸರ್ವರ ದೆಸೆಯಿಂದ ವಿಷ್ಣುವೇ ದೊಡ್ಡವನೆಂಮ ಹೇಳಿದ್ದಾರೆ. II17II ಲೋಕಾಯತರೂ ತಮ್ಮ ಶಾಸ್ತ್ರದ ಕೆಲವು ಭಾಗದಲ್ಲಿ ವಿಷ್ಣುವು ಎಲ್ಲರಿಗೂ ಗುರುವು, ಬೃಹಸ್ಪತಿಗೂ ಗುರುವೆಂದೂ, ಅಗ್ರನೆಂದೂ ಹೇಳಿದ್ದಾರೆ. ಹೀಗೆ ಸರ್ವಾಗಮಗಳಲ್ಲಿ ವಿಷ್ಣುವು ಸಮಸ್ತಾಧಿಕನು, ಮುಕ್ತಿಪ್ರದನು ಎಂದು ಪ್ರಸಿದ್ಧನಾಗಿದ್ದಾನೆ. II18II ಆ ಆಗಮಗಳಲ್ಲಿ ಪರಸ್ಪರ ವಿರೋಧವಿದೆ. ಮತ್ತು ಪೂರ್ವೋತ್ತರ ವಿರೋಧ ತುಂಬಿದೆ. ಎಲೈ ಭೂಪರೆ ! ಆದರೆ ಪ್ರಮಾಣಾವಿರುದ್ಧ |

ಭಾಗವು ಅವುಗಳಲ್ಲೂ ಗ್ರಾಹ್ಯವೇ" ಎಂದು ಮುಂತಾಗಿ ಹೇಳಿ ಭೀಮಸೇನನು ಶತ್ರುಗಳನ್ನು ವಾದದಲ್ಲಿ ತಿರಸ್ಕರಿಸಿದ್ದಾನೆ. ಆದ್ದರಿಂದ ಆವ ಗ್ರಂಥದಲ್ಲಾಗಲೀ ಪ್ರಮಾಣ ವಿರೋಧವಿಲ್ಲದಿದ್ದರೆ ಆ ಭಾಗವು ಗ್ರಾಹ್ಯವು. ಇದೇ ವಾಕ್ಯ ಪ್ರಾಮಾಣ್ಯ ಸ್ವತಸ್ತ್ವದ ಮರ್ಮ. ಯಾವ ವಾಕ್ಯವೇ ಆಗಲಿ ವಿರೋಧಿ ಪ್ರಮಾಣ ಸಿಕ್ಕದಿದ್ದರೆ ಅದನ್ನೂ ಪ್ರಮಾಣ ವಂದೇ ಅಂಗೀಕರಿಸಬೇಕು. ಅವರಲ್ಲಿ ಪ್ರಾಮಾಣ್ಯ ಉಂಟು ಎಂದು ಸಾಧಿಸಲು ಯಾವ ಇನ್ನೊಂದು ಪ್ರಮಾಣವನ್ನೂ ಕೊಡಬೇಕಾಗಿಲ್ಲ.

**10.** "ಯದ್ಯಪಿ ಆಪ್ತಿ ಮೂಲತಯಾಚೈವ ಯುಕ್ತಿಮೂಲತಯಾ ತಥಾ | ಶ್ರುತಿ ಮೂಲತಯಾ ಚಾಪಿ ಪ್ರಾಮಾಣ್ಯ ತ್ರಿವಿಧಂ ಮಹತ್ | ದೃಶ್ಯತೇ ಬ್ರಹ್ಮಸೂತ್ರಾಣಾಂ" - ಅನು 1-1-1- "ಅನಾದಿಕಾಲ ಪರಿಗ್ರಹಸಿದ್ಧತ್ವಾತ್ | ಅತಃ ಪ್ರಾಮಾಣ್ಯಂ ಶ್ರುತೇಃ |" ಗೀ.ಭಾ II "ತಸ್ಮಾದ್ವೇದಾಃ ಪ್ರಮಾಣಂ ಸ್ಯುಃ ಬಾಹುಳ್ಯಾದೇವ ಕಿಂ ಪುನ: | ಅದೋಷತ್ವಾದ್ಗುಣಾಚ್ಯೈವ ಬಲವತ್ಕಾರ್ಯ ಸಾಧನಾತ್ | ವೇದೋಕ್ತ ಕರ್ಮಯುಕ್ತಾನಾಂ ತಥಾ ಸಿದ್ಧಿಮತಾಮಪಿ | ವೇದ ಬಾಹ್ಯ ಕ್ರಿಯಾ ಯೋಗಾನ್ನ ಬಾಧಃ ಕ್ವಾಪಿದೃಶ್ಯತೇ | ವೇದೋಕ್ತ ಕರ್ಮಸಿದ್ಧಾನಾಂ ನಾಬಾಧ್ಯಂ ದೃಶ್ಯತೇ ಕ್ವಚಿತ್| ಅಸಾಧ್ಯಂ ವಾ ತತೋ ವೇದಾಃ ಪ್ರಾಮಾಣ್ಯಂ ನಿಶ್ಚಯಂ ಗತಾಃ |" - ಬೃ.ಭಾ. III V ಪುಟ 97/ "ಭಾರತಂ ಸರ್ವ ಶಾಸ್ತ್ರೇಷು ಭಾರತೇ ಗೀತಿಕಾವರಾ | ವಿಷ್ಣೋಃ ಸಹಸ್ರನಾಮಾಹಿ ಜ್ಞೇಯಂ ಪಾರ್ಠ್ಯ ಚ ತದ್ವಯಮಿತಿ ಮಹಾಕೌರ್ಮೆ" "ಸಹಿಧರ್ಮಃ ಸುಪರ್ಯಾಪ್ತೋ ಬ್ರಹ್ಮಣಃ ಪದವೇದನೆ" - ಇತ್ಯಾದಿ ಚ ಗೀ.ಭಾ.II ಇತ್ಯಾದಿ ರೀತಿಯಾಗಿ ಬ್ರಹ್ಮಸೂತ್ರ ಉತ್ಕೃಷ್ಟ ಪ್ರಮಾಣ, ವೇದ ಉತ್ತಮ ಪ್ರಮಾಣ, ಭಾರತ ಉತ್ತಮ ಪ್ರಮಾಣ, ತತ್ರಾಪಿ ಗೀತೆ, ಸಹಸ್ರನಾಮ ಉತ್ತಮವಾದದ್ದು ಹೀಗೆ ಪ್ರಾಮಾಣ್ಯ ಸಿದ್ಧ್ಯರ್ಥವಾಗಿ ಅಲ್ಲಲ್ಲಿ ಗ್ರಂಥಾರಂಭದಲ್ಲಿ ಶಿಷ್ಟ ಗೃಹೀತತ್ವ, ಫಲದಾಯಕತ್ವ, ನಿತ್ಯತ್ವಾದಿ ಬೋಧಕಪ್ರಮಾಣಾಂತರೋದಾಹರಣೆಯೂ, ಯುಕ್ತ್ಯುಪನ್ಯಾಸವೂ ಮಾಡಲ್ಪಟ್ಟಿದೆ. ಅದು ಅಭ್ಯುಚ್ಚಯವಾದ. ಸ್ವತಃ ಪ್ರಾಮಾಣ್ಯವೇ ತತ್ವ. ಹೀಗಿದ್ದರೂ ಪ್ರಾಮಾಣ್ಯ ಸಾಧಿಸಲು ಪ್ರಮಾಣಾಂತರವೆಂಬ ವೈಭವವೂ ಇದೆ, ಅದರಿಂದ ತಕ್ಷಣ ಉದ್ರಿಕ್ತ ಪ್ರವೃತ್ತಿಯಾಗಲಿ ಎಂದು ಅಧಿಕ ಪ್ರಮಾಣೋಪನ್ಯಾಸವನ್ನು ಮಾಡಲಾಗಿದೆ. ಆದರೂ ಗ್ರಂಥವು ಪ್ರಮಾಣವಾಗಬೇಕಾದರೆ ಪ್ರಮಾಣಾಂತರ ವಿರೋಧವಿಲ್ಲದಿದ್ದರೆ ಸಾಕು. ಹಾಗೆ ಅನೇಕ ಸ್ಥಳದಲ್ಲಿ ಶ್ರೀಮದಾಚಾರ್ಯರ ಉಪಪಾದನೆಯೇ ಇದೆ. ದೃಷ್ಟಾಂತ. ಗೀ.ಭಾ.II "ಸ್ವತಃ ಪ್ರಾಮಾಣ್ಯಾತ್ಸನ್ನೇವ ಉಚ್ಯತೇ | ಅವಿರೋಧಾತ್ | ನ ಚ ಪ್ರಮಾಣ ಸಿದ್ಧಸ್ಯ ಅನ್ಯತ್ರಾ ದೃಷ್ಟ್ಯಾ ಅಪಹ್ನವೋ ಯುಕ್ತಃ। ಧರ್ಮ ವೈಚಿತ್ರ್ಯಾದರ್ಥಾನಾಂ। ಸ್ವತಃ ಪ್ರಾಮಾಣ್ಯಾನಂಗೀಕಾರೇ ಮಾನೋಕ್ತಾವಪ್ಯ ದೋಷತ್ವಂ ಸಾಧಯೇದಿತ್ಯತಿ ಪ್ರಸಂಗಃ | ಅನನ್ಯಾಪೇಕ್ಷಯಾ ತತ್ವರತ್ವಂ ಸಿದ್ಧಮಾಗಮಾನಾಂ" [ ಇದೆಲ್ಲಾ ಸ್ವಾಪ್ನವೃನ್ದಾವನಾಖ್ಯಾನಾದಿ ಪ್ರಾಮಾಣ್ಯ ಸಮರ್ಥನೆಗೆ ಚೆನ್ನಾಗಿ ಅನ್ವಯಿಸುತ್ತದೆ.] ಎಂದು II ಗೀತಾ ಭಾಷ್ಯದಲ್ಲಿ ಪೂರ್ವಪಕ್ಷ ಗ್ರಂಥಕಾರರ ವಿಚಾರ ರೀತಿಯ ಖಂಡನೆಯೇ ಇದೆ. ಅರ್ಥವೇನೆಂದರೆ "ವೇದವಾಕ್ಯವು "ವಿಷ್ಣುಃ ಪರಮಃ" ಎಂದು ಹೇಳಿದ ಮಾತ್ರಕ್ಕೆ ವಿಷ್ಣುವು ಸರ್ವೋತ್ತಮನು ಎಂದು ಏಕೆ ಅರ್ಥಮಾಡಬೇಕು?" ಇಂಥ ಅದ್ಭುತ ವಿಷಯ ಹೇಳಿದರೆ, ಎಲ್ಲೂ ಕಾಣದ ವಿಷಯ ಹೇಳಿದರೆ ಹೇಗೆ ನಂಬುವುದು? ಅದಕ್ಕೆ ಪ್ರಮಾಣವೇನು ಎಂದು

ಕೇಳಬೇಡವೇ? ಎಂದು ಪೂರ್ವಪಕ್ಷ ಬಂದರೆ ಆಚಾರ್ಯರು ಹೇಳುತ್ತಾರೆ: "ನೀವು ಬೇಕಾದ್ದನ್ನು ಹೇಳಿ, ತಥಾಪಿ ವಾಕ್ಯವು ಸತ್ಯವಾದದ್ದನ್ನೇ ಹೇಳುತ್ತದೆ. ಅದೇ ಅವರ ಸ್ವಭಾವ. ಅದರ ವಿಷಯಸತ್ಯತೆಗೂ ಅದೇ ಪ್ರಮಾಣ ಬೇರೆ ಸಹಾಯ ಬೇಕಿಲ್ಲ. ಅದೇ ಕರಣ ಪ್ರಾಮಾಣ್ಯದ ಸ್ವತಸ್ತ್ವ ಹಾಗಾದರೆ ಬೌದ್ಧ ಮತದ ವಾಕ್ಯವೂ ಸತ್ಯವಾದದ್ದನ್ನೇ ಹೇಳುತ್ತದೆ ಎಂದು ಕೇಳಿದರೆ ಏನು ಹೇಳುತ್ತೀರೆಂದರೆ "ಅವಿರೋಧಾತ್", ಬೌದ್ಧರ ವಾಕ್ಯಕ್ಕೆ ಪ್ರಬಲ ಪ್ರಮಾಣ ವಿರೋಧವಿರುವುದರಿಂದ ಅದು ಅಪ್ರಮಾಣ. "ವಿಷ್ಣು ಪರಮಃ" - ಇತ್ಯಾದಿ ವಾಕ್ಯಗಳಿಗೆ ಪ್ರಬಲ ಪ್ರಮಾಣ ವಿರೋಧವಿಲ್ಲವಾದ್ದರಿಂದ ಅದು ಪ್ರಮಾಣವೇ. ಅದು ಅದ್ಭುತ ವಿಷಯ, ನಾವು ಎಲ್ಲೂ ಸರ್ವೋತ್ತಮ ವಸ್ತು ಕಂಡಿಲ್ಲ ಇತ್ಯಾದಿ ಕಲ್ಪನೆಗಳಿಂದ ಪ್ರಮಾಣಸಿದ್ಧವಾದದ್ದನ್ನು ತಿರಸ್ಕರಿಸುವುದು ಅಯುಕ್ತವು. ಒಂದು ಪದಾರ್ಥವಿದ್ದಂತೆ ಇನ್ನೊಂದು ಇರುವುದಿಲ್ಲ; "ವಸ್ತು ವೈಚಿತ್ರ, ಅನುಭವಸಿದ್ಧ" ಎಂದು ಉತ್ತರ ಹೇಳಿದ್ದಾರೆ. ಅದರ ಮೇಲೆ "ನಾವು ವಾಕ್ಯಕ್ಕೆ ಸ್ವತಃ ಪ್ರಾಮಾಣ್ಯವನ್ನೇ ಒಪ್ಪುವುದಿಲ್ಲ." ಎಂದು ಪೂರ್ವಪಕ್ಷಿ ಹೇಳಿದರೆ, ಆಚಾರ್ಯರು ಹೇಳುತ್ತಾರೆ; "ಅತಿ ಪ್ರಸಂಗ ತಪ್ಪಿದ್ದಲ್ಲ. ಪ್ರತ್ಯಕ್ಷಾದಿಕರಣಗಳು ಸ್ವತಃ ಪ್ರಮಾಣವೆಂದು ಒಪ್ಪದಿದ್ದರೆ ಅದರ ಪ್ರಾಮಾಣ್ಯಕ್ಕೆ ಇನ್ನೊಂದು ವಾಕ್ಯ ಹೇಳಿದರೆ ಅಲ್ಲೂ ಆ ವಾಕ್ಯ ನಿರ್ದೋಷತೆ ತೋರಿಸಲು ಇನ್ನೊಂದು ವಾಕ್ಯ ಹೇಳಬೇಕಾಗುತ್ತದೆ. ಆ ಇನ್ನೊಂದು ವಾಕ್ಯದಲ್ಲೂ ನಿರ್ದೋಷತ್ವ ತೋರಿಸಲು ಇನ್ನೊಂದು ವಾಕ್ಯ ಹೇಳಬೇಕಾಗಿ ಅನವಸ್ಥೆ ಬರುತ್ತದೆ. ಪ್ರಾಮಾಣ್ಯಸ್ವತಸ್ತ್ವವು ಅವಶ್ಯ ಅಂಗೀಕರ್ತವ್ಯವು. ಹಾಗೆ ನೋಡಿದರೆ ಪರಾಪೇಕ್ಷೆ ಇಲ್ಲದೆ, ವಾಕ್ಯವು ಪ್ರಬಲ ಪ್ರಮಾಣ ವಿರೋಧವಿಲ್ಲದಿದ್ದರೆ, ಸ್ವಾರ್ಥವನ್ನು ಸತ್ಯವಾಗಿ ಬೋಧಿಸುತ್ತದೆ - ಎಂದ ಸಿದ್ಧಿಸತ್ತದೆ." ಎಂಬುದಾಗಿ ಆಚಾರ್ಯರು ಸಿದ್ಧಾಂತ ತೋರಿಸಿದ್ದಾರೆ.

ಈ ವಿಷಯ ತತ್ವ ನಿರ್ಣಯದಲ್ಲಿದೆ: "ಬಹು ಪ್ರಮಾಣ ವಿರುದ್ಧಾನಾಂ ದೋಷ ಜನ್ಯತ್ವ ನಿಯಮಾತ್, ದೋಷ ಜನ್ಯತ್ವಂ ಚ ಬಲವತ್ಪ್ರಮಾಣ ವಿರೋಧಾದೇವ ಜ್ಞಾಯತೇ । ಅದುಷ್ಟಮಿಂದ್ರಿಯಂ ತ್ವಕ್ಷಂ ತರ್ಕೋಽದುಷ್ಟಸ್ತಥಾನುಮಾ। ಆಗಮೋಽದುಷ್ಟನಾಂ ಚ ಸ್ವದೃಚ್ಚಾನುಭವಃ ಸ್ಮೃತಃ। ಬಲವತ್ಪ್ರಮಾಣತಶ್ಚೈಜ್ಞೇ ದೋಷಾ ನಚಾನ್ಯಥಾ।" ಪ್ರಬಲ ವಿರೋಧವಿದ್ದುದರಿಂದಲೇ ಬೌದ್ಧ ಪಾಶುಪತಾದ್ಯಾಗಮ ವಾಕ್ಯಗಳು ದೋಷಯುಕ್ತವಾಗಿ ಅಪ್ರಮಾಣಗಳೆಂದು ನಿಶ್ಚಯಿಸಲ್ಪಟ್ಟಿವೆ. ಹೀಗೆ ಪ್ರಮಾಣ ವಿರೋಧ ಕಾಣಿಸದಿದ್ದರೆ ವಾಕ್ಯವು ಪ್ರಮಾಣವೆಂದೇ ದ್ವೈತ ಸಿದ್ಧಾಂತ.

11. ಅಲ್ಲಲ್ಲಿರುವ ಶಾಸ್ತ್ರವಾಕ್ಯಗಳೂ ಟೀಕಾ ವಾಕ್ಯಗಳೂ ಈ ನಿಶ್ಚಯಕ್ಕೇ ದಾರ್ಢ್ಯಜನಕವಾಗಿವೆ. ತಥಾಹಿ:

1 ತ.ಪ್ರ. 2-10 "ಏವಂ ಪ್ರತ್ಯೇಕ ದೂಷಿತಾನ್ಯನೀಶ್ವರ ಮತಾನಿ ಸಾಮಾನ್ಯ ದೂಷಣೇನ ನಿರಾಕುರ್ವತ್ಸೂತ್ರಮುಪನ್ಯಸ್ಯ ವ್ಯಾಚಷ್ಟೇ' । 'ವಿಪ್ರತಿಷೇಧಾದಿತಿ' । ಸಕಲ ಶ್ರುತಿಸ್ಮೃತಿ ಯುಕ್ತಿ ವಿರುದ್ಧತ್ವಾಚ್ಚಾನೀಶ್ವರ ಮತಮಸಮಂಜಸಂ। "ಶ್ರುತಯಃ ಸ್ಮೃತಯಶ್ಚೈವ ಯುಕ್ತಯಶ್ಚೇಶ್ವರಂ ಪರಂ। ವದಂತಿ ತದ್ವಿರುದ್ಧಂ ಯೋವದೇತ್ತಸ್ಮಾನ್ನ ಚಾಧಮಃ। ....ಇತಿ ಪಾದ್ಮೇ" । (ಅನೀಶ್ವರ ಮತಗಳೆಲ್ಲಾ ಸುಳ್ಳು, ಏಕೆಂದರೆ ಅವು

| |
|---|
| ಸರ್ವ ವೇದ ಮತ್ತು ಸ್ಮೃತಿಗಳಿಗೆ ವಿರುದ್ಧವು; ಪಾದ್ಮ ಪುರಾಣದಲ್ಲೂ ಶ್ರುತಿ ಸ್ಮೃತಿಗಳಿಗೆ ವಿರುದ್ಧವಾಗಿ ಮಾತಾಡುವವನಿಗಿಂತ ಅಧಮನೇ ಇಲ್ಲ ಎಂದಿದೆ. ಎಂದು ತಾತ್ಪರ್ಯ) |
| **2 ತ.ಪ್ರ. II 2-26: "ಕಿಂ ಪ್ರತ್ಯಭಿಜ್ಞಾಯಾ ಬಾಧಿತತ್ವೇನ ಭ್ರಾಂತಿತ್ವಂ ಕಲ್ಪ್ಯತೇ । ಬಾಧಕಮಂತರೇಣ। ನಾದ್ಯಃ ತದಭಾವಾತ್। ದ್ವಿತೀಯೇ ದೀಪಾದಿದರ್ಶನಸ್ಯ ಭ್ರಮತ್ವ ಪ್ರಸಂಗಃ ಇತಿ ಭಾವಃ' । (ಪ್ರತ್ಯಭಿಜ್ಞೆಯು ಪ್ರಮಾಣ ವಿರುದ್ಧವಾದ್ದರಿಂದ ಪ್ರಮಾಣವೇ ಅಲ್ಲ, ಅದು ಭ್ರಾಂತಿ ಎಂದು ಕಲ್ಪಿಸುತ್ತೀರಾ, ಅಥವಾ ಪ್ರಮಾಣ ವಿರೋಧ ಕಾಣದಿದ್ದರೂ ಭ್ರಾಂತಿ ಎಂದು ಹೇಳುತ್ತಿರಾ? ಪ್ರಥಮ ಕಲ್ಪ ಯುಕ್ತವಲ್ಲ ಏಕೆಂದರೆ ಪ್ರಮಾಣ ವಿರೋಧವೇ ಇಲ್ಲ. ಎರಡನೆಯ ಕಲ್ಪವು ಅನ್ಯಾಯ, ಏಕೆಂದರೆ ಪ್ರಮಾಣ ವಿರೋಧ ಸಿಗದಿದ್ದರೂ ಜ್ಞಾನವನ್ನು ಭ್ರಾಂತಿ ಎಂದ ಹೇಳುವುದಾದರೆ ಈ ದೀಪವು ಜ್ವಾಲಾ ಪ್ರವಾಹವು ಎಂಬ ಬಾಧಕ ಜ್ಞಾನವೂ ಭ್ರಾಂತಿಯು ಎಂದು ಒಪ್ಪಬೇಕಾಗುತ್ತದೆ. ಎಲ್ಲಾ ಯಥಾರ್ಥ ಜ್ಞಾನಗಳೂ ಭ್ರಾಂತಿಯಾಗಲಿ ಎಂಬ ಅತಿ ಪ್ರಸಂಗ ಬರುತ್ತದೆ ಎಂದು ಅರ್ಥ. ಆದ್ದರಿಂದ ಪ್ರಮಾಣ ವಿರೋಧ ತೋರಿಸಿಯೇ ಪ್ರಸಕ್ತ ಜ್ಞಾನವು ಭ್ರಾಂತಿಯೆಂದು ನಿಶ್ಚಯಿಸಬೇಕು ಎಂದು ಅವರ ಭಾವ.)** |
| **3 ಭಾಗ.ತಾ. V 6-11 "ಕ್ರಮ್ಯಾ್ಯಖ್ಯಂ ಶಾಸ್ತ್ರಂ........ಕುಶಾಸ್ತ್ರಂ ಸರ್ವವೇದಾನಾಂ ವಿರುದ್ಧಂ ತಾಮಸಾಲಯಂ" (ಕ್ರಮುದೈತ್ಯನು ರಚಿಸಿದ ಶಾಸ್ತ್ರವು ಕುಶಾಸ್ತ್ರವು. ಏಕೆಂದರೆ ಅದು ಸರ್ವವೇದ ವಿರುದ್ಧ, ತಾಮಸ ಗುಣದ ತವರು ಮನೆ ಎಂದರ್ಥ).** |
| **4 ತ.ಪ್ರ. II 2-4 "ಪ್ರಮಾಣ ವಿರುದ್ಧಂ ನಿಷ್ಪ್ರಮಾಣಂಚಾಚೇತನ ಮತಂ' (ಜಡ ಪ್ರಧಾನವು ಜಗತ್ಕರ್ತೃ ಎಂಬ ಮತವು ಸುಳ್ಳು - ಏಕೆಂದರೆ ಅದು ಪ್ರಮಾಣ ವಿರುದ್ಧವು ಮತ್ತು ಪ್ರಮಾಣ ಹೀನವೂ ಆಗಿದೆ.)** |
| **5 ಅನು- I 1-1 "ವೇದ ವಿರೋಧಿಯನ್ನಮಾನಂ" - (ವೇದ ವಿರುದ್ಧವಾದ ನಾಕ್ಯವು ಪ್ರಮಾಣವಲ್ಲ).** |
| **6 ಅನು I 1-2 "ನ ಪುರಾಣಾದಿ ಮಾನತ್ವಂ ವಿರುದ್ಧಾರ್ಥೇ ಶ್ರುತೇರ್ಭವೇತ್॥ (ಶ್ರುತಿಗೆ ವಿರುದ್ಧವಾದರೆ ಆ ಪುರಾಣಾದಿ ವಾಕ್ಯವೂ ಪ್ರಮಾಣವಲ್ಲ)** |
| **7 ಬ್ರ.ಸೂ.ಭಾ. II 1-18 "ಅನ್ಯೇಷಾಂತು ವಿರುದ್ಧಾನಾಂ ವಿಪ್ರಲಂಭೋಽಥವಾ ಭ್ರಮಃ" । (ವೇದ ವಿರುದ್ಧವಾದ ಇತರ ಪಕ್ಷಗಳು ವಂಚನೆ ಅಥವಾ ಭ್ರಾಂತಿ ಮೂಲಕವೆಂದು ನಿಶ್ಚಯಿಸಬೇಕು.)** |
| **8 ಬೃ.ಭಾ. III 5 ಪುಟ 96 "ಬಹುಮಾನವಿರುದ್ದಂ ಯನ್ನ ತನ್ಮಾನಂ ವಿದೋವಿದುಃ" (ಯಾವುದು ಬಹು ಪ್ರಮಾಣ ವಿರುದ್ಧವೋ ಅದು ಪ್ರಮಾಣವೇ ಅಲ್ಲವೆಂದು ಜ್ಞಾನಿಗಳು ನಿಶ್ಚಯಿಸುತ್ತಾರೆ).** |
| **9 ಬೃ.ಭಾ. ಪುಟ 95 "ಪ್ರತ್ಯಕ್ಷಾದೇರ್ವಿರುದ್ಧತ್ವಾತ್ಸೌಗತಾದ್ಯಾದುರಾಗಮಾಃ । ಬಹ್ವಾಗಮ ವಿರೋಧಾಚ್ಚ ದುಷ್ಟತ್ವಂ ತೇಷು ಸಂಸ್ಥಿತಂ' (ಪ್ರತ್ಯಕಾದಿ ಪ್ರಬಲ ಪ್ರಮಾಣ ವಿರುದ್ಧವಾದ್ದರಿಂದ ಬೌದ್ಧಾದಿ ಶಾಸ್ತ್ರಗಳು ದುರಾಗಮಗಳು, ಬಹುಮೂಲ ಪ್ರಮಾಣಗಳಿಗೆ ವಿರುದ್ಧವಾದುದರಿಂದಲೂ ಅವು ದುಷ್ಟವೆಂದು ನಿರ್ಣಯಿಸಲ್ಪಟ್ಟಿದೆ).** |

| |
|---|
| 10 ಬ್ರ.ಸೂ.ಭಾ. II 1-13 ಏತೇನ ಶಿಷ್ಟಾ ಅಪರಿಗ್ರಹಾ ಅಪಿವ್ಯಾಖ್ಯಾತಾಃ - (ಇದರಿಂದ ಸರ್ವ ಅಪರಿಗ್ರಹಾಗಮಗಳೂ ವ್ಯಾಖ್ಯಾತವಾದವು. ಅಪರಿಗ್ರಹಾಃ ಎಂದರೆ ಪ್ರಮಾಣ ವಿರುದ್ಧ ಸಿದ್ಧಾಂತಗಳೆಲ್ಲಾ ಸುಳ್ಳು ಎಂದರ್ಥ). |
| 11 ಕರ್ಮನಿ. ಪುಟ 436 "ನಚೈವಮಾದಿ ವಾಕ್ಯಾನಾಂ ಸ್ವಾರ್ಥೇ ಪ್ರಾಮಾಣ್ಯಾಭಾವಃ \| ಸಿದ್ಧಾರ್ಥೇ ಪ್ರಾಮಾಣ್ಯಸ್ಯ ಸಾಧಿತತ್ವಾತ್ \| ಅವಿರೋಧಾಚ್ಚ \| (ಪೂರ್ವೋದಾಹೃತ ಶ್ರುತಿ ಸ್ಮೃತಿ ವಾಕ್ಯಗಳಿಗೆ ಅಪ್ರಾಮಾಣ್ಯ ಹೇಳಕೂಡದು. ಸಿದ್ಧ ವಿಷಯಬೋಧಕ ವಾಕ್ಯಕ್ಕೂ ಪ್ರಮಾಣ್ಯ ಉಂಟು ಮತ್ತು ಈ ವಾಕ್ಯೋಕ್ತ ವಿಷಯಗಳು ಪ್ರಮಾಣ ವಿರುದ್ಧವಲ್ಲ). |
| 12 ಭಾಗ.ತಾ. XI 3-27 "ಪಂಚರಾತ್ರ ವಿರೋಧಿಷು ಸದೈವನಿಂದಾ ಸರ್ವೈಶ್ಚ ಬ್ರಹ್ಮಾದಿ ಸ್ಥಾವರಾಂತಕೈಃ \| ಸಮ್ಯಕಾರ್ಯಾ ತದ್ವಿನಾ ಚ ತಮೋಯಾಂತಿವಿನಿಶ್ಚಯಾತ್ \| (ಪಂಚರಾತ್ರಾಗಮಕ್ಕೆ ವಿರೋಧಿ ಗ್ರಂಥಗಳ ನಿಂದೆಯನ್ನು ಬ್ರಹ್ಮಾದಿ ಸ್ಥಾವರಾಂತ ಸರ್ವಚೇತನರೂ ಮಾಡಬೇಕು. ಹಾಗೆ ದುಷ್ಟ ಗ್ರಂಥಗಳ ನಿಂದೆ ಮಾಡದಿದ್ದರೆ ನಿಶ್ಚಯವಾಗಿಯೂ ತಮಸ್ಸೇ ಆಗುತ್ತದೆ). |
| 13 ಬ್ರ.ಸೂ.ಭಾ. II 2-32 "ಪ್ರಮಾಣಾಭಾವಾತ್ \| ಸರ್ವ ಶ್ರುತಿ ಸ್ಮೃತಿ ಯುಕ್ತಿ ವಿರುದ್ಧತಾಚ್ಚ ನೈತೇಪಕ್ಷಾ ಗ್ರಾಹ್ಯಾಃ." (ಕ್ಷಣಿಕತ್ವವಾದ, ಶೂನ್ಯಾದ್ವೈತ, ವಿಜ್ಞಾನಾದ್ವೈತ ಮುಂತಾದ ಮತಗಳು ಸುಳ್ಳು; ಏಕೆಂದರೆ ಅವರ ಮಾತುಗಳಿಗೆ ಆಕರ ಪ್ರಮಾಣವಿಲ್ಲ. ಮತ್ತು ಅವು ಸರ್ವ ಶ್ರುತಿ ಸ್ಮೃತಿ ಯುಕ್ತಿ ವಿರುದ್ಧವೂ ಆಗಿವೆ. ಆದ್ದರಿಂದ ಆ ಮತಗಳು ಗ್ರಾಹ್ಯವಲ್ಲ). |
| 14 ಅನು III 4-41 "ಪ್ರತ್ಯಕ್ಷಮುಪಪತ್ತಿಶ್ಚಾಗಮಾಯದಾ \| ವಿರುದ್ಧ್ಯಂತೇ ನ ಚಾರ್ಥೋಽಸ್ತಿ." (ವಾಕ್ಯದಿಂದ ಹೇಳಲ್ಪಟ್ಟ ವಿಷಯಕ್ಕೆ ಪ್ರತ್ಯಕ್ಷ ಯುಕ್ತಿ ಮತ್ತು ಆಗಮಗಳು ವಿರುದ್ಧವಾಗಿದ್ದರೆ ಆ ವಿಷಯವು ಸುಳ್ಳೇ ಎಂದು ನಿಶ್ಚಿತ). |
| 12. ಹೀಗೆ ಅತೀಂದ್ರಿಯ ವಿಷಯದಲ್ಲಿ ವಾದಿಗೆ ವಿರುದ್ಧವಾಗಿ ಪ್ರತಿವಾದಿಯು ಸ್ವಾಗಮ, ಶುಭಾಗಮ, ಸಚ್ಛಾಸ್ತ್ರ, ಮೂಲಪ್ರಮಾಣ, ಸದಾಗಮಾದಿ ಶಬ್ದ ವಾಚ್ಯ ಪೂರ್ವೋಕ್ತ ಹತ್ತು ಶಾಸ್ತ್ರಗಳ ಪೈಕಿ ಯಾವುದಾದರೂ ಸರಿಯಾದ ವಾಕ್ಯವನ್ನು ಉದಾಹರಿಸಬೇಕು. |
| [1.ಬೃ.ಭಾ. III 5 ಅಕ್ಷಪಾದ ಕಣಾದೌಚ ಸಾಂಖ್ಯಯೋಗಾರ್ಹತಾಸ್ತಥಾ \| ಶಿವಶಕ್ತಿ ಮಹಾಯಾನ ಲೋಕಾಯತಪುರಸರಾಃ \| ಗಾಣಾಪತ್ಯಾಶ್ಚ ಸೌರಾಶ್ಚ ಸರ್ವೇ ಪ್ರೋಕ್ತಾ ದುರಾಗಮಾಃ \| "ಋಗ್ಯಜುಃ ಸಾಮಾಥರ್ವಾಶ್ಚೇತಿಹಾಸಪುರಾಣಕೌ \| ಸ್ವಾಗಮಾ ಇತಿ ಸುಪ್ರೋಕ್ತಾಃ ಮೀಮಾಂಸಾ ಧರ್ಮ ಏವಚ \| ಇತಿ ಪಾದ್ಮ" "ವೇದಾಶ್ಚೇತಿಹಾಸಾಶ್ಚ ಪುರಾಣಂ ಭಾಗವತಂ ತಥಾ। ಮೂಲಪ್ರಮಾಣಮುದ್ದಿಷ್ಟಂ ಮೀಮಾಂಸಾಚ ತಥೋತ್ತರಾ \| ಏತೇಷಾಮವಿರೂಧೇತು ಮಾನಮನ್ಯಮುದೀರಿತಂ । ಏತೇಷಾಂತು ವಿರುದ್ಧಂ ಯದಪ್ರಮಾಣಂ ವಿದೋ ವಿದುರಿತಿ ವ್ಯಾಸಮೃತೌ \| |
| 2 ಬ್ರ.ಸೂ.ಭಾ.I 1-3 ಋಗ್ಯಜುಃ ಸಾಮಾಥರ್ವಾಶ್ಚ ಭಾರತಂ ಪಂಚರಾತ್ರಕಂ \| ಮೂಲರಾಮಾಯಣಂ ಚೈವ ಶಾಸ್ತ್ರಮಿತ್ಯಭಿಧೀಯತೇ \| ಯಚ್ಚಾನುಕೂಲವೇತಸ್ಯ ತಚ್ಚಶಾಸ್ತ್ರಂ ಪ್ರಕೀರ್ತಿತಂ ಆತೋಽನ್ಯೋ ಗ್ರಂಥ ವಿಸ್ತಾರಃ ನೈವ ಶಾಸ್ತ್ರಂ ಕುವರ್ತ್ಮದಿತಿ ಸ್ಕಾಂದೇ। ಇತ್ಯಾದಿ ಇನ್ನೂ ಬಹು ಪ್ರಮಾಣಗಳಿವೆ, ] |

ಮೂಲದಶಕಗಳಲ್ಲಿ ಯಾವ ವಾಕ್ಯವೂ ಸಿಗದಿದ್ದರೆ ಮೂಲಶಾಸ್ತ್ರಾವಿರುದ್ಧವಾದ ಬೇರೆ ಗ್ರಂಥಗಳಿಂದಲಾದರೂ ವಿರುದ್ಧ ಪ್ರಮಾಣಗಳನ್ನು ಉದಾಹರಿಸಬೇಕು. ಬಾಧಕ ಪ್ರದರ್ಶನೆಯನ್ನು ಮಾಡದೆ, ಹೇಳಿದ್ದು ಸರಿಯಲ್ಲ ಎನ್ನುವುದು ಪರತತ್ತ್ವ ರೀತಿ, "ತದ್ವಿಪರೀತ ಪ್ರಮಾಣಾಭಾವಾತ್" ಎಂದು ತತ್ತ್ವನಿರ್ಣಯ ಮೂಲವಿದೆ. "ಬಾಧಕ ಪ್ರತ್ಯಯಾಧೀನಂ ಹಿ ಜ್ಞಾನಾನಾಂ ಭ್ರಮತ್ವ ಕಲ್ಪನಂ" ಎಂದು ಅದರ ಟೀಕೆ ಇದೆ. ಬಾಧಕ ತೋರಿಸದೆ ವಿರೋಧಿಸಿದರೆ ಅತಿಪ್ರಸಂಗವೂ ಹಿಂದೆ ತೋರಿಸಿದಂತೆ ಬರುತ್ತದೆ. ಆದ್ದರಿಂದ ತನ್ನ ಪಕ್ಷ ಸಾಧನೆಗಾಗಿ "ಸದ್ಭಿರಾಗಮ ಏವೈಕಃ ಪ್ರಯೊಜ್ಯೋಽಭೀಷ್ಟ ಸಿದ್ಧಯೇ" ಅನು II 1-21 ರಲ್ಲಿ ಹೇಳಿದಂತೆ ವಾಕ್ಯವನ್ನೇ ಪ್ರತಿವಾದಿ ಉದಾಹರಿಸಬೇಕು. ಏಕೆಂದರೆ ಅನೃಜತ್ವಾದಿ ವಿಷಯವು ಪ್ರತ್ಯಕ್ಷನುಮಾನ ಗಮ್ಯವಲ್ಲ.

**ಮೂರನೇ ಅಧ್ಯಾಯ ಮುಗಿಯಿತು.**

## ಅಧ್ಯಾಯ 4

### ಅನೃದಜುತ್ವವಾದದ ಪರೀಕ್ಷೆ

1. ವಾದಿರಾಜಗುರುಗಳು ಋಜುಗಣಸ್ಥರಲ್ಲ ಎಂಬ ವಾದಕ್ಕೆ ಪ್ರಮಾಣ ನಾವು ಯಾವುದು ಎಂದು ಈಗ ನಾವು ಕೇಳಬಹುದು. ಒಂದೂ ಮೂಲ ಪ್ರಮಾಣ ಆಗಮ ವಾಕ್ಯವಿಲ್ಲ. ತದವಿರುದ್ಧವಾದ ಇತರ ಪ್ರಮಾಣ ವಾಕ್ಯವೂ ಒಂದೂ ಇಲ್ಲ ಎಂದೇ ಉತ್ತರವಾಗಿದೆ. "ಅನ್ಯತ್ರೋಕ್ತಮಾಭಾವೇ ನ ಪ್ರಮಾಣಂ" ಎಂದು III 3-36 ಭಾಷ್ಯವಿದೆ. ಆ ಭಾಷ್ಯೋಕ್ತ ನ್ಯಾಯದಿಂದ ಪೂರ್ವಪಕ್ಷದವರಿಗೆ ಋಜುತ್ವಾಭಾವ ಸಾಧನೆಯಲ್ಲಿ ಸಹಾಯವಾಗುವ ವಾಕ್ಯವು ಒಂದೂ ಇಲ್ಲ ಎಂದು ಹೇಳಲು ಶಕ್ಯವಾಗಿದೆ.

2. ಇಲ್ಲಿ ಶಂಕೆ, ಏನೆಂದರೆ, ವಾದಿರಾಜರು ಋಜುಗಳು ಎಂದು ಸ್ಪಷ್ಟ ಪ್ರಮಾಣವಿಲ್ಲವಾದ್ದರಿಂದ ಪರಿಶೇಷತಃ ಅವರು ಅನೃಜು ಎಂದು ಕಲ್ಪಿಸಬಹುದು; ಅಥವಾ ಸಾಮಾನ್ಯತೋ ದೃಷ್ಟಾನುಮಾನದಿಂದಾದರೂ ಅವರು ಋಜುಗಳಲ್ಲವೆಂದು ಸಾಧಿಸುತ್ತೇವೆಂದು ಪೂರ್ವಪಕ್ಷಿಗಳು ಹೇಳಬಹುದು. ಅದು ಕೂಡುವುದಿಲ್ಲ. ಸ್ಪಷ್ಟ ಪ್ರಮಾಣಾಭಾವವು ಊಹೆಯಿಂದಲೇ ನಿಶ್ಚಿತವಾಯಿತೇ? ಪ್ರಮಾಣ ಗ್ರಂಥಗಳ ಶೋಧನೆ ಮಾಡಿ ನಂತರ ನಿಶ್ಚಿತವಾಯಿತೇ? ಮೊದಲನೆಯದು ಸರಿಯಲ್ಲ. ಭಾಷ್ಪರೋಪಿತ ಧೂಮದಂತೆ ಕೇವಲ ಊಹೆಯು ಅಸಾಧಕವು. ಎರಡನೆಯದೂ ಸರಿಯಲ್ಲ. ಏಕೆಂದರೆ ಅಸಿದ್ಧಿ ದೋಷವೇ ಇದೆ. ವಾದಿಯು ಋಜುತ್ವ ಸಾಧನೆಗಾಗಿ ಆಖ್ಯಾನ, ಸ್ಮೃತಿ, ಐತಿಹ್ಯ, ಜ್ಞಾನಿಪದಾದಿ ಅನೇಕ ಪ್ರಮಾಣ ಕೊಟ್ಟಿದ್ದಾನೆ. ಆದ್ದರಿಂದ ಸ್ಪಷ್ಟ ಪ್ರಮಾಣವಿಲ್ಲ ಎನ್ನುವುದು ಸುಳ್ಳು.

3. ಋಜುತ್ವಾಭಾವ ನಿರ್ಣಯಕ್ಕೆ ನಿರವಕಾಶ ಯುಕ್ತಿಗಳು ಸಾಧಕವಾಗಿವೆ ಎಂದರೆ ಅದೂ ಸುಳ್ಳು. ಬ್ರ.ಸೂ.ಭಾ, II 1-18 "ನಾವಾಕ್ಯ ಯುಕ್ತಿರಿಷ್ಯತೇ" ಎಂದಿದೆ. ಆಗಮ ಸಹಾಯ ಹೀನ ಯುಕ್ತಿ ಶುಷ್ಕಯುಕ್ತಿ, ಅದು ಅಪ್ರಯೋಜಕವೆಂದು ಅಧ್ಯಾಯ 2 ರಲ್ಲಿ ತೋರಿಸಿಯಾಗಿದೆ. I 1-3 II 1-18 ಭಾಷ್ಯದಲ್ಲೂ ಆಗಮ ಹೀನಯುಕ್ತಿಯಿಂದ ಅನೃಜುತ್ವ ಸಾಧಿಸುವುದು ಅಶಕ್ಯವೆಂದು ಸಿದ್ಧವಾಗುತ್ತೆ.

4. ಹೋಗಲಿ. ನಾವು ಋಜುತ್ವಾಭಾವವನ್ನು ಪ್ರಮಾಣಗಳಿಂದ ಸಾಧಿಸವ ಯತ್ನವನ್ನೇ ಮಾಡುವುದಿಲ್ಲ. ಆದರೆ ನೀವು ಹೇಳುವ ಋಜುತ್ವವು ಮನುಷ್ಯ ಮಾತ್ರರಿಗೆ ಹೇಗೆ ಸಂಭವಿಸುತ್ತದೆ ಎಂದು ಶಂಕಾಮಾತ್ರವನ್ನು ಮಾಡುತ್ತೇವೆ ಎಂದರೆ ಅದೂ ಯುಕ್ತವಲ್ಲ. ಋಜುತ್ವ ಸಾಧನಾರ್ಥವಾಗಿ ವಾದಿಯು ಶುಭ ಆಗನ ಪ್ರಮಾಣಗಳನ್ನು ಉದಾಹರಿಸುತ್ತಾನೆ. ಪ್ರಮಾಣಗಳಿಂದ ಪ್ರಮೇಯ ನಿಶ್ಚಯ ಆಗುತ್ತದೆ. ವಾಕ್ಯ ಪ್ರಾಮಾಣ್ಯದ ಸ್ವತಸ್ತವು ಹಿಂದೆಯೇ ಉಪಪಾದಿತವಾಗಿದೆ. ಆದ್ದರಿಂದ ವಿರೋಧಿ ಪ್ರಮಾಣವನ್ನು ತೋರಿಸಿ ಶಂಕೆ ಮಾಡಬೇಕು. ವಾದಿಯು ಹೇಳಿದ್ದು ಸಾಧುವೇ? ಅಸಾಧುವೇ, ವಿಚಾರ ನಡೆಯಿಸಬೇಕು. ಋಜುತ್ವ ವಿಷಯದಲ್ಲಿ ಪ್ರಮಾಣೋಪನ್ಯಾಸವೇ ಅಸಂಭಾವಿತವೆನ್ನುವ ಹಾಗಿಲ್ಲ. ಅಂಥ ಶಂಕೆಯು ನಿರ್ಮೂಲ. ವಂಧ್ಯಾಪುತ್ರನು ಋಜುವು ಎಂದು ವಾದಿ ಹೇಳಿಲ್ಲ. ಸಾಧನ ಭೂಮಿಯಲ್ಲಿ ಮನುಷ್ಯರಾಗಿ ಸಾಧನೆ ಮಾಡಿಕೊಂಡು ಬ್ರಹ್ಮ ರುದ್ರಾದಿ ದೇವತೆಗಳಾಗಿದ್ದಾರೆ. ಕಪಿಯಾಗಿದ್ದ ಹನುಮಂತನು ಋಜುವು, ಮನುಷ್ಯನಾಗಿದ್ದರೂ ಭೀಮಸೇನನು ಋಜುವು, ಎಂದು ಪ್ರಮಿತನಾಗಿದ್ದಾನೆ. ಮನುಷ್ಯತ್ವ ಋಜುತ್ವಗಳ ಸಮಾವೇಶವು ಘಟ, ತದ್ಘಟಾಭಾವಗಳ ಸಮಾವೇಶದಂತೆ ಏಕತ್ರ ವಿರುದ್ಧವಲ್ಲ. ಹಾಗಾಗಿದ್ದರೆ ಅಸಂಭಾವಿತವೆಂದು ಹೇಳಬಹುದಾಗಿತ್ತು. ಆದ್ದರಿಂದ ಅನೃಜುತ್ವ ಸಾಧಕ ಆಗಮವನ್ನು ತೋರಿಸದೆ ಶಂಕಿಸಬಾರದು. ಬ್ರ.ಸೂ.ಭಾ. II 1-12 ರಲ್ಲಿ "ಅತೋ ಯಾವತ್ಪ್ರಮಾಣಸಿದ್ಧಂ ತಾವದೇವಾಂಗೀಕರ್ತವ್ಯಂ| ನಾತೋಽನ್ಯಚ್ಛಂಕ್ಯಂ।" "ಯಾವದೇವ ಪ್ರಮಾಣೇನ ಸಿದ್ಧಂ ತಾವದಹಾಪಯನ್ ಸ್ವೀಕುರ್ಯಾನ್ನ ಚಾನ್ಯತ್ರ ಶಂಕ್ಯಂ ಮಾನಮೃತೇಕ್ವಚಿದಿತಿ ವಾಮನೇ |" ಎಂದು ಆಚಾರ್ಯರೇ ಹೇಳಿದ್ದಾರೆ. (ಪ್ರಮಾಣ ಹೇಳಿದ್ದನ್ನು ಸ್ವತಸ್ಯ ಮರ್ಯಾದೆಯಿಂದ ಸ್ವೀಕರಿಸಿ ಒಪ್ಪಬೇಕು; ವಿರುದ್ಧ ವಿಷಯದಲ್ಲಿ ಪ್ರಮಾಣ ಕೊಡದೆ ಶಂಕಿಸಬಾರದು ಎಂದರ್ಥ) ಆದ್ದರಿಂದ "ಮಾನಂಋತೇ" ವಿರೋಧಿ ಪ್ರಮಾಣವನ್ನು ಕೊಡದೆ ಮಾಡಿದ ಶಂಕೆಯು ನಿರ್ಮೂಲ ಶಂಕೆ ಎನಿಸುತ್ತದೆ. ಅದನ್ನು ಮಾಡಬಾರದು. ಭಾಗವತ XI 28-7 ರಲ್ಲೂ ಪ್ರಮಾಣವಿದೆ: "ತಸ್ಮಾನ್ನಹ್ಯಾತ್ಮನೋಽಮುಷ್ಮಾದನ್ಯೋ ಭಾವೋ ನಿರೂಪಿತಃ | ನಿರೂಪಿತೇಯಂ ತ್ರಿವಿಧಾ ನಿರ್ಮೂಲಾ ಮತಿರಾತ್ಮನಿ." ಇಲ್ಲಿ ತಾತ್ಪರ್ಯ: "ಅನ್ಯೇನ ಹರೇಃ ಸೃಷ್ಟಿಃ), ಸ್ಥಿತಿಃ, ಸಂಹಾರಃ ಇತಿ ತ್ರಿವಿಧಾಮತಿಃ ವಿದ್ವದ್ಭಿರ್ನೈರ್ವ ನಿರೂಪಿತಾ| ನಿರ್ಮೂಲಾ ಪ್ರಮಾಣವರ್ಜಿತಾ|" "ಅನ್ಯಸ್ಮಾತ್ಸೃಷ್ಟಿ `ಸಂಹಾರೌ ಸ್ಥಿತಿಶ್ಚ ಪರಮಾತ್ಮನಃ| ನಿರೂಪಿತಾ ನವಿದ್ವದ್ಭಿಃ ಪ್ರಮಾಣಾಭಾವತೋ ಹರೇಃ| ಇತಿ ಬ್ರಹ್ಮತರ್ಕೆ' ಎಂದು ಇದೆ. ಈ ಪ್ರಮಾಣದಲ್ಲಿ ನಿರ್ಮೂಲ ಶಂಕೆ ಎಂದರೆ ಪ್ರಮಾಣವರ್ಜಿತ ಶಂಕೆ ಎಂದೇ ಅರ್ಥಮಾಡಿದ್ದಾರೆ. XI 19-17 ಭಾಗವತ ಶ್ಲೋಕದಲ್ಲೂ "ಶ್ರುತಿಃ ಪ್ರತ್ಯಕ್ಷಮೈತಿಹ್ಯಮನುಮಾನಂಚತುಷ್ಟಯಂ। ಪ್ರಮಾಣೇಷ್ವನವಸ್ಥಾನಾತ್ ವಿಕಲ್ಪಾತ್ಸ ವಿರಜ್ಯತೇ|" ಎಂದೂ, "ವಿಕಲ್ಪಾತ್ ವಿರುದ್ಧ ಕಲ್ಪನಾತ್" ಎಂದು ತಾತ್ಪರ್ಯದಲ್ಲೂ ಇದೆ. ಜೀವ ಸ್ವಾತಂತ್ರ್ಯ ವಿಷಯದಲ್ಲಿ ಇರುವ ನಾಲ್ಕು ಪ್ರಮಾಣಗಳನ್ನು ಹುಡುಕಿದರೂ ಅದಕ್ಕೆ ಎಲ್ಲೂ ಸ್ಥಾನವಿಲ್ಲವಾದ್ದರಿಂದ ವಿವೇಕಿಯು ಜೀವನಿಗೆ ಸ್ವಾತಂತ್ರವುಂಟೆಂಬ ವಿರುದ್ಧ ಕಲ್ಪನೆಯನ್ನು ತ್ಯಜಿಸಬೇಕು ಎಂದರ್ಥ. ಹೀಗೆ ವಾದಿರಾಜರ ಅನೃಜುತ್ವ ವಿಷಯದಲ್ಲಿ ಎಲ್ಲಾ ಪ್ರಮಾಣಗಳನ್ನು ಹುಡುಕಿದರೂ ಎಲ್ಲೂ ಅದಕ್ಕೆ ಸ್ಥಾನವಿಲ್ಲವಾದ್ದರಿಂದ ಆ ವಿರುದ್ಧ ಕಲ್ಪನೆಯು ತ್ಯಾಜ್ಯವೆಂದು ನಿಶ್ಚಯಿಸಬೇಕು. "ಶುಷ್ಕ ತರ್ಕಂತು ವರ್ಜಯೇತ್",

“ಆಗಮಾನುಗ್ರಹಾಭಾವೇ ನ ತರ್ಕಃ ಸ್ಯಾತ್ಪ್ರತಿಷ್ಠಿತಃ”, “ನಹಿ ಶಬ್ದೈಕ ಸಮಧಿಗಮ್ಯವಸ್ತು ನಿಯುಕ್ತಿವಿರೋಧಃ” ಇತ್ಯಾದಿ ಪ್ರಮಾಣಗಳಿಗೆ ದ್ವಿತೀಯಾಧ್ಯಾಯದಲ್ಲಿ ಅರ್ಥ ಹೇಳಲ್ಪಟ್ಟಿದೆ. ಆದ್ದರಿಂದ ಋಜುತ್ವ ಸಾಧನಾರ್ಥವಾಗಿ ವಾದಿಯು ಉದಾಹರಿಸಿರುವ ಶ್ರುತಿ, ಸ್ಮೃತಿ, ಆಖ್ಯಾನ, ಕನ್ನಡ ಪದಾದಿಗಳಿಗೆ ವಿರುದ್ಧವಾದ ಶುಭ ವಾಕ್ಯವನ್ನು ತೋರಿಸದೇ ಪ್ರತಿವಾದಿಯು ಕೇವಲ ಯುಕ್ತಿಯಿಂದ ಎದುರಿಸುವುದು ಅನುಚಿತವೇ. ಛಾಂ.ಭಾ. ಪುಟ 97 ರಲ್ಲೂ “ಯುಕ್ತಿಶ್ಚ ದೋಷ ಏವಸ್ಯಾದ್ಬಲವನ್ಮಾನವರ್ಜಿತಾ” ಎಂದೂ, ತ.ಪ್ರ. II 1-8 “ನಿರ್ಮೂಲ ಯುಕ್ತೇಃ ಸ್ವತಏವಾಪ್ರಾಮಾಣ್ಯಮಿತಿ” ಎಂದೂ ಸ್ಪಷ್ಟವಾಗಿ ವಾಕ್ಯಾಧಾರ ಶೂನ್ಯವಾದ ಯುಕ್ತಿಯನ್ನು ನಿಂದಿಸಿದ್ದಾರೆ.

5.ತಥಾಪಿ ಪೂರ್ವಪಕ್ಷಿಗಳು ಇನ್ನೂ ಶಂಕಿಸುತ್ತಾರೆ. ಏನೆಂದರೆ, “ಗುರುರಾಜರ ಕಾಲದಲ್ಲಿದ್ದ ಅವರ ಪ್ರತ್ಯಕ್ಷದರ್ಶಿಗಳಾದ ವ್ಯಾಸರಾಜಾದಿಗಳು ಇವರು ಋಜುಗಳು” ಎಂದು ಹೇಳದಿದ್ದುದರಿಂದ ವಾದಿರಾಜ ಋಜುತ್ವಾಭಾವವನ್ನು ಸಾಧಿಸುತ್ತೇವೆ” ಎನ್ನುತ್ತಾರೆ. ಇದು ಸರಿಯಲ್ಲ. ಪೂರ್ವದಲ್ಲಿ ತೋರಿಸಿದಂತೆ ಈ ಋಜುತ್ವಾಭಾವ ವಿಷಯದಲ್ಲಿ ಆಪರೀಕ್ಷಿತ ಪ್ರತ್ಯಕ್ಷ ಪ್ರಮಾಣವು ಪ್ರವರ್ತಿಸುವುದೇ ಇಲ್ಲ. ಸುಧೆಯಲ್ಲಿ ಹೇಳಿದೆ “ಯತ್ರ ಚಯಸ್ಯಾಪ್ರವೇಶಃ ನ ತಸ್ಯ ತದ್ಬಾಧಕತ್ವಮಿತಿ” ಕಿಂಚ ಅನೃಜುತ್ವವು ಆಗಮೈಕ ವೇದ್ಯವಷ್ಟೆ. ಅನುಕ್ತಿ ಲಿಂಗಕ್ಕೆ ಆಗಮ ಸಹಾಯವು ಯಾವುದೂ ಇಲ್ಲವಲ್ಲ. ಯಾವಾಗ ಅನುಕ್ತಿಯೋ, ಆಗ ಆ ವಿಷಯವು ಅವಿದ್ಯಮಾನವು ಎಂದು ವ್ಯಾಪ್ತಿ ಕೂಡ ಇಲ್ಲ. ಭಾಗ. ತಾ. III 8-18 “ದ್ರೋಣ ದ್ರೋಣಿ ಕೃಪಾಃ ಪಾರ್ಥ ಭೀಷ್ಮೌ ವಿದುರ ಸಂಜಯೌ | ಯೇ ಚಾನ್ಯೇ ತತ್ರ ದೇವಾ0ಶಾಃ ಸಮ್ಯಕ್ತತ್ವಾಪರೋಕ್ಷಿಣ” ಇತಿ ಸ್ಕಾಂದೇ ಎಂದಿದೆ. ಹೀಗೆ ಪ್ರಮಿತಾಪರೋಕ್ಷಿಗಳಾದ ಇಷ್ಟು ಜನರಲ್ಲಿ ಯಾವ ಒಬ್ಬರೂ “ಈ ಭೀಮನು ಋಜುವು” ಎಂದು ಹೇಳಿಲ್ಲ. ಅವರ ಅನುಕ್ತಿಯಿಂದ ಭೀಮನ ಋಜುತ್ವವು ಪರಾಹತವಾಗುವುದಿಲ್ಲ. ತ.ಪ್ರ. III 3-35 “ಅನುಕ್ತsರುಭಯಥಾಪಿ ದರ್ಶನಂ ಸಂದೇಹ ಬೀಜಂ” ಎಂದಿದೆ. ಅಲ್ಲೇ ಭಾಷ್ಯ. “ಪ್ರಮಾಣಾದನುಕ್ತೇರ್ದುರ್ಬಲತ್ವಾತ್” ಅನುಕ್ತಿಯು ಒಂದು ವಸ್ತು ಇಲ್ಲ ಎಂಬಲ್ಲಿ ನಿರ್ಣಾಯಕ ಲಿಂಗವಲ್ಲ ಎಂದರ್ಥ. ಕಿಂಚ ಋಜುತ್ವ ಉಂಟು ಎಂಬ ಪ್ರಮಾಣವು ಪ್ರಬಲವು. ಬಾಧಕವಿಲ್ಲದೇ ಪ್ರಮಾಣವು ದುರ್ಬಲವೆಂದು ಆಪಾದಿಸಿದರೆ ಅತಿಪ್ರಸಂಗ ಬರುತ್ತದೆ. ಅನ್ಯೋನ್ಯಾಶ್ರಯವಿದೆ; ಪರತಸ್ತ್ವಾಂಗೀಕಾರ ಪ್ರಸಂಗವೂ ಬರುತ್ತದೆ.

ಕಿಂಚ ತ.ಪ್ರ. 11 3-8 “ತೈತ್ತಿರೀಯಶ್ರುತೌ ಆಕಾಶಾದ್ವಾಯುರಿತಿಶ್ರೂಯತೇ | ಛಂದೋಗಶ್ರುತೌ ತೇಜಃ ಪೂರ್ವೈವ ಸೃಷ್ಟಿರಿತಿಚೇನ್ನೈವಂ| ಉಕ್ತ್ಯನುಕ್ತ್ಯೋರ್ವಿರೋಧಾಭಾವಾತ್” ಎಂದು ಸಿದ್ಧಾ0ತೋಕ್ತಿ ಇದೆ. ಅಲ್ಲೇ ತ.ಪ್ರ, ಗುರ್ವರ್ಥದೀಪಿಕಾ (ಪುಟ 93): 'ಉಕ್ತ್ಯನುಕ್ತ್ಯೋರಿತ್ಯತ್ರ ತೈತ್ತಿರೀಯ ಶ್ರುತಿಯಲ್ಲಿ ಆಕಾಶ ವಾಯುಗಳ ಉಕ್ತಿ ಇದೆ. ತೇಜಃ ಪ್ರಭೃದತಿ ಸೃಷ್ಟಿ ಪ್ರತಿಪಾದಕ ಛಾಂ. ಶ್ರುತಿಯಲ್ಲಿ ಆಕಾಶ ವಾಯುಗಳ ಅನುಕ್ತಿಯು ವಿರೋಧಿಯಾಗುವುದಿಲ್ಲ" ಎಂದರ್ಥ ಎಂದಿದೆ. ತಥಾಚ ಅನುಕ್ತಿಗೆ ಸಾಧಕತ್ವವಿಲ್ಲವೆಂದು ಟೀಕಾ ಟಿಪ್ಪಣಿಗಳಲ್ಲಿ ಅಂಗೀಕೃತವಾದಂತಾಯಿತು. II 4-6 ಬ್ರ.ಸೂ.ಭಾ ದಲ್ಲೂ "ಸಪ್ತ ಪ್ರಾಣಾ” ಎಂಬ ಶ್ರುತಿಯಲ್ಲಿ ಹಸ್ತಾದಿ ಪಂಚಕದ ಅನುಕ್ತಿ ಇದೆ. ಆ ಶ್ರುತಿ ಪ್ರಮಾಣಾಂತರದಲ್ಲಿ ದ್ವಾದಶ ಪ್ರಾಣಗಳಿವೆ ಎಂಬ ಉಕ್ತಿಗೆ ವಿರೋಧಿಯಾದ್ದರಿಂದ ಹಸ್ತಾದಿಗಳೂ ಸೇರಿ ಪ್ರಾಣಗಳು

ಹನ್ನೆರಡು ಎಂದೇ ಸಿದ್ಧಾಂತ ಮಾಡಿದ್ದಾರೆ. ಅನುಕ್ತಿಗೆ ಸಾಧಕತ್ವ ಒಪ್ಪಲಿಲ್ಲ. ಹಾಗೆ ತ.ಪ್ರ. III 3-40 ರಲ್ಲೂ "ಪ್ರಕೃತೇರನುಕ್ತಿಃ" ನತ್ವಭಾವಾತ್ ಎಂದೇ ಸಿದ್ಧಾಂತಮಾಡಿದ್ದಾರೆ. (ಪ್ರಕೃತಿಯ ಹೆಸರೇ ಇಲ್ಲದಿದ್ದರೂ ಪ್ರಮಾಣಾಂತರರದಲ್ಲಿ ಹೆಸರಿದೆ. ಆದ್ದರಿಂದ ಅನುಕ್ತಿಯಿಂದ ಪ್ರಕೃತಿ ಇಲ್ಲವೇ ಇಲ್ಲ ಎಂದು ಹೇಳ ಕೂಡದು ಎಂದರ್ಥ). ಅನುಕ್ತಿ ಮುಂತಾದ ಹೇತುಗಳು ಅಪ್ರಯೋಜಕಗಳೇ. ಅವು ವ್ಯಾಪ್ತಿ ರಹಿತ, ವಿಷಯವು ಇದ್ದಾಗಲೂ, ನೋಡಿದ್ದರೂ, ಪ್ರಕಟನೆಯ ನಿಷಿದ್ಧತ್ವ ಜ್ಞಾನದಿಂದಲೋ, ಅಮುಖ್ಯತ್ವ ಜ್ಞಾನದಿಂದಲೋ, ಸ್ವಾಕರ್ತವ್ಯತ್ವ ಜ್ಞಾನದಿಂದಲೋ, ರಹಸ್ಯತ್ವ ಜ್ಞಾನದಿಂದಲೋ, ಗೋಪ್ಯ ರಕ್ಷಣೆ ಮಾಡಬೇಕೆಂಬ ವಿಧಿ ಜ್ಞಾನದಿಂದಲೋ, ಮನಸ್ಸಿನಲ್ಲಿ ತಿಳಿದಿದ್ದರೂ ಹೇಳಬೇಕೆಂಬ ಯತ್ನವನ್ನು ಮಾಡದದೆಯೋ ಅಥವಾ ಯತ್ನವು ನಡೆಯದೆಯೋ, ಉಕ್ತಿಯು ಸಂಭವಿಸದೆ ಅನುಕ್ತಿಯು ಕಾಣುತ್ತದೆ. ಕ್ವಚಿತ್ಸನ್ನಿಕರ್ಷವು ವಿವಕ್ಷಿತ ರೀತಿಯಲ್ಲಾಗದೆ ಜ್ಞಾನವೇ ಹುಟ್ಟದೆ ಅನುಕ್ತಿ ಕಾಣುತ್ತದೆ. ಇತರರು ಹೇಳಿದ್ದಾರೆ ನಾವು ಏತಕ್ಕೆ ಹೇಳಬೇಕೆಂದೂ ಅನುಕ್ತಿ ಉಂಟಾಗಿರಬಹುದು. ಪ್ರಸಕ್ತಿ ಬರದೇ ಪ್ರತಿಯೋಗಿ ಸ್ಮೃತಿಯೇ ಆಗದೆ ಆ ವಿಷಯ ಜ್ಞಾನವು ಉಂಟಾಗದೆಯೇ ಅನುಕ್ತಿ ಬಂದಿರಬಹುದು. ಭಗವನ್ಮಾಯೆಯಿಂದಲೋ, ಋಜುತ್ವವನ್ನು ಧ್ಯಾನದಿಂದ ತಿಳಿದ ದೊಡ್ಡವರ ಆಜ್ಞೆಯಿಂದಲೋ[ಬದುಕಿರುವಾಗ ಹೇಳಬಾರದು, ನೀವು ಈಗ ಹೇಳಬೇಡಿ ಎಂದು ಪುರಂದರದಾಸರು ವ್ಯಾಸತೀರ್ಥರಿಗೆ ಹೇಳಿರಬಹುದು. ತಮ್ಮ ಮಕ್ಕಳಿಗೂ ಹಾಗೆ ಹೇಳಿರಬಹುದು.] ಋಜುತ್ವದ ಅನುಕ್ತಿ ಸಂಭಾವಿತ. ಪ್ರಕೃತ ಆದೇ ಇರಬಹುದು. ಆದ್ದರಿಂದಲೇ "ನಿನಗೆಣೆಗಾಣೆ" ಎಂದು ಸ್ತುತಿ ಮಾತ್ರದಿಂದ ಶ್ರೀ ವ್ಯಾಸತೀರ್ಥರು ತೃಪ್ತಿ ಹೊಂದಿರಬಹುದು. ಋಜುತ್ವದ ಅಸತ್ವದಿಂದಲೇ ಅನುಕ್ತಿ ಉದ್ಭವಿಸಿದೆ ಎಂದು ಹೇಳಲಾಗುವುದಿಲ್ಲ. ಅನುಕ್ತಿಯಿಂದ ವಸ್ತುವಿನ ಅಸತ್ವಸಾಧನೆ ಮಾಡುವುದು ಲೋಕಾನುಭವ ವಿರುದ್ಧವೂ ಆಗಿದೆ. ತತ್ರಾಪಿ ಅತೀಂದ್ರಿಯ ವಿಷಯದಲ್ಲಿ ಯಾರು ಮಾತಾಡಿಲ್ಲವೋ ಅವರಿಗೆ ಅನೃಜುತ್ವವು ಪ್ರತ್ಯಕ್ಷವೇ ಆಗಿದೆ ಎಂದು ಸಾಧಿಸುವುದು ಪರಮವಿರುದ್ಧದ್ಧವೇ.

6. ಹೋಗಲಿ; ಋಜುತ್ವಾಭಾವವು ಯುಕ್ತಿ ಸಾಧ್ಯವಲ್ಲದಿದ್ದರೂ ಪ್ರತ್ಯಕ್ಷ ಸಿದ್ಧ ಎಂದು ಏತಕ್ಕೆ ಹೇಳಬಾರದು ಎಂದರೆ ಅದೂ ಕೂಡುವುದಿಲ್ಲ. ಧರ್ಮಾಧರ್ಮಗಳಂತೆ ಋಜುತ್ವ ತದಭಾವಗಳು ಆಗಮೈಕ ವೇದ್ಯ. ಆ ವಿಷಯದಲ್ಲಿ ಆಗಮ ಸಹಾಯವಿಲ್ಲದೆ ಪ್ರತ್ಯಕ್ಷವು ಪ್ರವೃತ್ತವಾಗುವುದಿಲ್ಲ. ಪ್ರವರ್ತಿಸಿದರೂ ಉಪಜೀವ್ಯಾಗಮ ಬಾಧಿತವಾದರೆ ಆ ಪ್ರತ್ಯಕ್ಷಕ್ಕೆ ಪ್ರಾಮಾಣ್ಯವಿಲ್ಲ. ಋಜುತ್ವವು ಪರೀಕ್ಷಿತ ಪ್ರತ್ಯಕ್ಷಕ್ಕೆ ವಿಷಯವೇ. ಮೂವತ್ತೆರಡು ಲಕ್ಷಣ, ಬೃಹದ್ಭಾಷ್ಯೋಕ್ತರೀತಿಯಿಂದ ಕೈಕಾಲುಗಳಲ್ಲಿ ಚಕ್ರವಿಶೇಷ, ಆಖ್ಯಾನೋಕ್ತ ಶಂಖಚಕ್ರಾದ್ಯಂಕಿತ ಅಸ್ಥಿಮತ್ವ, ರಾಮಕೃಷ್ಣಾದಿರೂಪಿ ಶ್ರೀಹರಿಯ ಆಲಿಂಗನ – ಇತ್ಯಾದಿಗಳು. ಆದರೂ ಇವುಗಳನ್ನು ಯಾರೂ ಪರೀಕ್ಷೆ ಮಾಡಿ ಯಾವ ಋಜುಗಳ ರೂಪವನ್ನೂ ನಿರ್ಣಯಿಸಿಲ್ಲ. ಹನುಮಂತ, ಭೀಮ, ಮಧ್ವರ ವಿಷಯದಲ್ಲಿಯೂ ಪರೀಕ್ಷೆಯಾಗಿ ವಿದ್ವತ್ಪ್ರತ್ಯಕ್ಷ ಪ್ರಮಾಣ ಎಂದು ನಿರ್ಣಯವಾಗಿಲ್ಲ. ವ್ಯಾಸರು, ಕೃಷ್ಣ ಇವರ ಉಕ್ತಿಯು, ಯೋಗಿಗಳು ತಿಳಿದು ಸ್ತುತಿಸಿದ್ದರೆ ಅವರ ಉಕ್ತಿಯ ಆಗಮವಾಯಿತು. ಋಜುತ್ವವು ಸಾಮಾನ್ಯ ಜನ ಪ್ರತ್ಯಕ್ಷಗಮ್ಯವಾಗಿಲ್ಲ. ಯುಧಿಷ್ಠಿರನೂ

| |
|---|
| ಭೀಮಾರ್ಜುನರ ದೇಹ ಲಕ್ಷಣವನ್ನು ಪರೀಕ್ಷಿಸಿ ತಿಳಿಯಲಿಲ್ಲ. ದುರ್ಯೋಧನನು ಲಕ್ಷಣಗಳನ್ನು ತಿಳಿಯಲಿಲ್ಲವೆಂದು ಹೇಳತಕ್ಕುದೇನು ? |
| ಹೀಗಿದ್ದರೂ ಸ್ವಯಂ ತಮ್ಮ ಪ್ರತಿಮಾ ನಿರ್ಮಾಣದಿಂದಲೂ, ತಾವು ನೋಡಿದ ಮಧ್ವಗುರುಗಳ ಪ್ರತಿಮಾ ಮಾಡಿಸಿ ಅದರ ಸ್ಥಾಪನೆಯಿಂದಲೂ ನಮ್ಮಲ್ಲಿ ವಾದಿರಾಜ ಗುರುಗಳು ಪರಮಾನುಗ್ರಹ ಮಾಡಿದ್ದಾರೆ. "ತಾರತಮ್ಯಂ ಚ ವಿಜ್ಞೇಯಂ ಲಿಂಗೈರ್ದೈಹಿಕ ಮಾನಸೈಃ" – ಎಂದು XXX 55 ನಿರ್ಣಯ ವಚನವಿದೆ. ಲಕ್ಷಣ ಪ್ರತಿಪಾದಕವಾದ ವಾಕ್ಯಗಳೂ ತಂತ್ರಸಾರ ನಿರ್ಣಯಾದಿಗಳಲ್ಲಿವೆ. ವಾದಿರಾಜರ ಕೃಪೆಯಿಂದ ನಿರ್ಮಿತ ಆ ಪ್ರತಿಮಾ ಪರೀಕ್ಷೆಯಿಂದ ಅವರ ಲಕ್ಷಣ ಪೂರ್ಣತ್ವವು ತಿಳಿಯಲು ಶಕ್ಯ. ಹಾಗೆ ಮಧ್ವ ಪ್ರತಿಮಾ ಪರೀಕ್ಷೆಯಿಂದ ಅವರಿಬ್ಬರ ಸಾಮ್ಯವನ್ನು ನಿರ್ಣಯಿಸಬಹುದೆಂದು ನನ್ನ ಅಭಿಪ್ರಾಯ. ಇಂಥ ಆಗಮಾನುಸಾರಿ ಪ್ರತ್ಯಕ್ಷವು ಉಪಜೀವ್ಯಾವಿರೋಧಿಯಾಗಿಯೇ ಆಗಿರುತ್ತದೆ. ಆದ್ದರಿಂದಲೇ ಸ್ವಾಪ್ನ.ವೃಂ.ಆ. ನವಮಾದಿ ಅಧ್ಯಾಯಗಳಲ್ಲಿ ತಮಗೂ ಮಧ್ವರಾಜರಿಗೂ ಸಾಮ್ಯ ತೋರಿಸಲು ವಾದಿರಾಜ ಗುರುಗಳು ಅನೇಕರೀತಿ ಉಪಪಾದಿಸಿರುವುದು ಕಾಣುತ್ತದೆ. |
| ತಂತ್ರಸಾರದ ಚತುರ್ಥಾಧ್ಯಾಯದ 130ನೆಯ ಶ್ಲೋಕದಲ್ಲಿ |
| 1 "ಪ್ರತಿಮೋಕ್ತ ಲಕ್ಷಣೈರ್ಯಾವದ್ಯುಕ್ತ ಆಚಾರ್ಯ ಉತ್ತಮಃ\| ಸರ್ವ ವಿತ್ತಪಸಾಯುಕ್ತ: ಆಜ್ಞಾ ಶಕ್ತಿಯುತೋ ಹರೇಃ"\| ಎಂದು ಆಚಾರ್ಯ ಲಕ್ಷಣವಿದೆ. ಈ ವಾಕ್ಯದಲ್ಲಿ ತೃತೀಯಾಧ್ಯಾಯದಲ್ಲಿ ಹೇಳಿದ ಪ್ರತಿಮಾ ಲಕ್ಷಣಗಳನ್ನೇ ಉತ್ತಮ ಆಚಾರ್ಯ ಎಂದರೆ ಋಜು ಲಕ್ಷಣವನ್ನಾಗಿ ಹೇಳಿದ್ದಾರೆ. |
| 2 "ದ್ವಾತ್ರಿಂಶಲ್ಲಕ್ಷಣೈರ್ಯುಕ್ತೋ ಗುರುರುತ್ತಮ ಉಚ್ಯತೇ\| ಬ್ರಹ್ಮೈವತಾದೃಶಸ್ತಸ್ಯ ಸಮೋನಾ ಕಶ್ಚನ" ಎಂಬ ಸನ್ಯಾಸಪದ್ಧತಿ ಶ್ಲೋಕವೂ ತಂತ್ರಸಾರ ಸಂಗ್ರಹ ಎಂಬ ಕನ್ನಡ ಗ್ರಂಥದಲ್ಲಿ ಉದಾಹರಿಸಲ್ಪಟ್ಟಿದೆ. |
| 3 "ಗುರು ಲಕ್ಷಣಮಾಹ ಪ್ರತಿಮೋಕ್ತಲಕ್ಷಣೈರಿತಿ" ಎಂದು ಶ್ರೀ ವೇದವೇದ್ಯ ಕೃತ ತಂತ್ರಸಾರ ಟೀಕಾ ವಾಕ್ಯವಿದೆ. ಹೀಗೆ ನಮಗೂ ಇವುಗಳಿಂದ ಸ್ವಲ್ಪ ಲಕ್ಷಣ ಶಾಸ್ತ್ರ ತಿಳಿದಂತಾಯಿತು. ಇವೆಲ್ಲವನ್ನು ಮನಸ್ಸಿನಲ್ಲಿಟ್ಟುಕೊಂಡು ಬೃಹತ್ಕರಣ ಯಂತ್ರಗಳ ಸಹಾಯದಿಂದ ವಾದಿರಾಜ ಗುರುಗಳ ಮತ್ತು ಮಧ್ವ ಗುರುಗಳ ಪ್ರತಿಮಾಗಳನ್ನು ಪರೀಕ್ಷೆ ಮಾಡಿದಲ್ಲಿ ಆ ಪ್ರತಿಮೆಗಳಲ್ಲಿ ಮೂವತ್ತೆರಡು ಲಕ್ಷಣಗಳೂ ತಿಳಿಯಲ್ಪಡುತ್ತವೆಂದೇ ನನ್ನ ಅಭಿಪ್ರಾಯ. ಕೊನೆಗೆ ಅವುಗಳ ಫೋಟೋರೂಪ ಚಿತ್ರವೂ ಕೂಡ ತುಂಬ ಸ್ಫೂರ್ತಿಜನಕವಾಗಿದೆ. ಆದ್ದರಿಂದ ಪರೀಕ್ಷಿತವಾದರೆ ಋಜುತ್ವ ಪ್ರತ್ಯಕ್ಷವೇ ಸಂಭಾವಿತವಾಗಿರುವುದರಿಂದ ಋಜುತ್ವಾಭಾವ ಪ್ರತ್ಯಕ್ಷವು ಸಂಭಾವಿತವೆಂದು ಹೇಳಕೂಡದು. ಆಗಮ ಸಹಾಯದಿಂದ ಪ್ರತ್ಯಕ್ಷವು ಪ್ರವರ್ತಿಸಿದರೆ ವಾದಿರಾಜ ಋಜುತ್ವವೇ ಪರೀಕ್ಷಿತ ಪ್ರತ್ಯಕ್ಷದಿಂದ ಸಿದ್ಧಿಸುತ್ತದೆ. ಅನ್ಯಋಜುತ್ವವು ಉಪಜೀವ್ಯಾಗಮ ಬಾಧಿತ. ವೇದವೇದ್ಯರ ಪ್ರತ್ಯಕ್ಷವಂತೂ ಋಜುತ್ವಕ್ಕೆ ಸಾಧಕ. ಅವರು ಸಂಪ್ರದಾಯ ಪ್ರವರ್ತಕರು. |
| ದರ್ಶನ ಮಾತ್ರದಿಂದ ಲಕ್ಷಣಗಳಾಗಲೀ ಋಜುತ್ವವಾಗಲೀ ಜ್ಞೇಯವಲ್ಲ. ಇದು ಮಧ್ವಾಚಾರ್ಯರನ್ನು ನೋಡಿದ ಪಂಡಿತಾಚಾರ್ಯರ ಮಾತುಗಳು. ಪುಟ 499 ತತ್ವಪ್ರದೀಪಿಕಾ: "ಯಸ್ಯಾಸ್ಖಲಿತಾನವರತ ವೇದಶಾಸ್ತ್ರ ವ್ಯಾಖ್ಯಾನ |

ಶ್ರವಣಕೌತುಕ ಸಮುತ್ಕ್ಯಾತದುಃಖ ಸಂಘಾತೋನಿಖಿಲಪಂಡಿತವರ್ಗೋಽಮಹಾಽಮೃತಸಮುದ್ರಾವಗಾಹೀವ ಬಹುಲಮಾಹ್ಲಾದಮಾಪ್ನೋತಿ"। ಪುಟ 18 "ಅಶ್ರುತಾ ಪ್ರತಿಭಾಯಸ್ಯ ಶ್ರುತಿಸ್ಮೃತ್ಯವಿರೋಧಿನೀ । ವಿಶ್ರುತಾನ್ಯಪಿ ಜಾತಂ ಚ ತ೦ವಿದ್ಯಾದ್ದೇವ ಸತ್ತಮಂ ಇತಿ ನಾರಾಯಣ ಶ್ರುತಿಃ । ಪ್ರತ್ಯಕ್ಷಮೇವ [ಇಲ್ಲಿ ಏತಲ್ಲಕ್ಷಣಂ ಎಂದರೆ ದೇವಶ್ರೇಷ್ಠತ್ವಲಕ್ಷಣ (ಅಶ್ರುತಪ್ರತಿಭಾತ್ವ). ಪೂರ್ವಪಕ್ಷಿಗಳು ಈ ವಾಕ್ಯವನ್ನು ವಿಪರೀತಾರ್ಥ ಮಾಡಿ 32 ಲಕ್ಷಣ ಜ್ಞಾನ ಪಂಡಿತಾಚಾರ್ಯರಿಗಾಯಿತು ಎಂಬುದಕ್ಕೆ ಸಾಧಕವಾಗಿ ಉದಾಹರಿಸಿದ್ದಾರೆ. ಹಿಂದೆ ತಪ್ಪು ತೋರಿಸಲ್ಪಟ್ಟಿದೆ.] ಚೈತಲ್ಲಕ್ಷಣಂ ದೃಶ್ಯತೇ ಭಗವತಿ ಭಾಷ್ಯಕಾರೇ" ಎಂದು ವರ್ಣಿಸಿದ್ದಾರೆ. ಅಷ್ಟೇ ಹೊರತು ಮೂವತ್ತೆರಡು ಲಕ್ಷಣಗಳನ್ನು ಕಂಡೆ, ಋಜುತ್ವವನ್ನು ಕಂಡೆ ಎಂದು ಹೇಳಿಲ್ಲ.

ಹೀಗೆಯೇ ಗುರುರಾಜರ ವಿಷಯದಲ್ಲೂ ವೃತ್ತರತ್ನ ಸಂಗ್ರಹ ಬರೆದ ರಘುನಾಥಾಚಾರ್ಯ ನಾಮಕ ಪಂಡಿತ ಕವಿ ಪ್ರತ್ಯಕ್ಷದರ್ಶಿಗಳ ವಾಕ್ಯಗಳಿವೆ: ವೃ.ರ.ಸಂ. ॥ 4. "ಸ್ಥಿರಾಸನೇಬದ್ಧ ಸುಯೋಗ ಪಟ್ಟಕೋಧ್ಯಾನ್ ಸುಮಾ ಲಾಗಣ ಶೋಭಿ ಕಂಠವಾನ್। ಸಂಸ್ಮಾರಯಾಮಾಸ ಜಪನ್ಗುರು: ಸತಾಂ ಸ್ವಾವಸ್ಥಯಾ ಸತ್ಯವತೀ ಸುತಂ ಹರಿಂ ॥ 4 ॥ ಅಲ್ಲೇ ಇನ್ನೂ ಅಸಾಧಾರಣ ಮಹಿಮೆಗಳ ಪ್ರತ್ಯಕ್ಷ ಕಂಡಿದ್ದನ್ನು ತೋರಿಸುವ ವಚನಗಳಿವೆ. "ಕ್ರೀಡಂತ ಮಾತ್ಮಾವಯವೇಷ್ಟಹೀಂದ್ರಂ ಸಂವೇಷ್ಟನಾದ್ಯೈಃ ಕಿಲವಾದಿರಾಜಃ । ಪಶ್ಯನ್ನ ಪೀಷನ್ನ ಚಚಾಲನಾಸೌ ತೇನಾತಿಶೇತೇಪಿ ಸಮಾಧಿ ಸಂಸ್ಥಾನ್ ॥5॥ ಸಂವೇಷ್ಟು ಮೇನಂ ಸಮುಪಾಗತೋಽಪಿ ಪರೀಕ್ಷ್ಯ ಸರ್ವತ್ರ ಸಮಂತ್ರ ರೂಪಂ। ನೂನಂತ್ವಸಕ್ತೋಽಪಸಸರ್ಪಭೀತ್ಯಾ ಸ್ವಾ೦ಶಕ್ತಿಮಾಚ್ಛಾದ್ಯ ಫಣೀವಿಹೃತ್ಯ ॥6॥ ವಾದಿರಾಜೇನ ಯತ್ಕರ್ಮಕೃತಂ ದೇವಸ್ಯ ಚಕ್ರಿಣಃ। ಚಕ್ರವರ್ತಿಭಿರಪ್ಯೇತತ್ಪ್ರಾಯಶೋನಕೃತಂಭುವಿ ॥40॥ । 45 "ನಿವೀತ ವೇಷ್ಟನಾ ಭೂಮೋಽಯಂ ನಮಂತಿ ಹಿ ವಾದಿನಃ । ತಸ್ಯೈವ ವಾದಿರಾಜತ್ವಂ ಯುಕ್ತಮನ್ವರ್ಥಕಂ ಕ್ಷಿತೌ" ॥45॥ "ಕುರ್ವನ್ ಪ್ರಸಂಗಂ ಕಿಲ ರಾಜಧಾನ್ಯಾಂ ರಾಜ್ಞಃ ಸಭಾಯಾಂ ಬಹುಶಾಸ್ತ್ರ ವಿದ್ಭಿಃ । ಪ್ರತೋಽಷ್ಯಭೂಪಂ ಬಹು ವಾದಿರಾಜಃ ಪ್ರಾಪ್ತಃ ಪ್ರಸಂಗಾಭರಣಭಿಧಾನಂ ॥47॥ [ಯಾವ ರಾಜನ ಕಾಲವೆಂಬುದನ್ನು ಶೋಧಿಸಬೇಕು. ವಾ.ಗು.ಚ. 3-3 ವೀರವಂಕಟಪತಿರಾಜನೆಂದಿದ].ಸವಿನೋದಂ ಸಾಟ್ಟಹಾಸಂ ಸಸ್ಮಿತಂ ಸುಸ್ವರಾನ್ವಿತಂ । ಸರಹಸ್ಯಂ ಸಪ್ರಮಾಣ೦ ವಾದಿರಾಜ ವಚೋಽಮೃತಂ ॥48॥ ಸಂಪ್ರದಾಯಯುತಂ ತತ್ವನಿರ್ಣಯಾಢ್ಯಂ ವಿಸಂಶಯಂ। ಅವಾರ್ಯ೦ ಪಂಡಿತಾಗ್ರ್ಯೈಶ್ಚ ಪ್ರತಿಚೇದ್ಯ ನಿವಾರಕಂ ॥49॥ ಸಸುಂದರ ಶಿರಃ ಕಂಪಂ ಪ್ರಹರ್ಷಿತ ಸಭಾಜನಂ। ವಿಕಾಸಿತ ಶ್ರೋತೃಮುಖಂ ವಿಕಸ್ವರ ವಿಲೋಚನಂ ॥50॥ ಹೃಷ್ಯತ್ತನೂರುಹಂ ಗಾತ್ರೇ ಸ್ವರ್ಪಿತ ಶ್ರೋತೃಮಾನಸಂ । ಸುಖಬೋಧಕರಂ ಶ್ರೋತುಗ್ರಾಹ್ಯಂ ಸದ್ಭಿಃ ಪುಮರ್ಥದಂ ॥5॥ ವಾಗೀಶ್ವರೇಶಕಾರುಣ್ಯವಾರ್ಧಿಜಾತಂ ಸುಕೋಮಲಂ । ನಿರ್ದುಷ್ಟಂ ರಸವತ್ಸ್ಪಷ್ಟಂ ನಾನಂದಯತಿ ಕಂಜನಂ ॥52॥ ಹರಿಚತುರ ಕಥಾಖ್ಯಾಂ ಪಾವನೀಂ ಪಾವನೋಽವಲಂ ಹರಿಚರಣ ಸಮೀಪಂ ಪ್ರಾಪಯಂತೀಂ ಜನೌಘಂ । ಬುಧಸದಸಿ ಸುಧಾಂ ಸ್ವಾಂ ಪಾಯಯಂತಂ ಪವಿತ್ರಂ । ಬುಧವರ ಮಿಮಮಾರ್ಯ೦ ವರ್ಣಯೇತ್ಕೋನು ಮಾದೃಕ್

॥53॥ ಕಲೌದುಷ್ಟ ಜನಾಕೀರ್ಣೇ ವರ್ಧಯನ್ ಮಧ್ವದರ್ಶನಂ । ವಾದಿರಾಜಂ ವಿನಾಕೋಽನ್ಯೋ ದುಷ್ಟಾನ್ ದಮಯಿತುಂ ಕ್ಷಮಃ ॥55॥ ಪುನಃ I-7: "ನತಚ್ಚಕ್ಷುರ್ನತಚ್ಛ್ರೋತ್ರಂ ವಾದಿರಾಜಂ ನ ಪಶ್ಯತಿ । ನಶೃಣೋತಿ ನ ಸಾಜಿಹ್ವಾ ಯಾ ನ ತಂ ವರ್ಣಯತ್ಯಲಂ ॥7॥ ಯಸ್ಯಾಂಗಮಂಗ ಚೇಷ್ಟಾಚ ದೃಷ್ಟ್ವಾ ಲೋಕಃ ಕುತೂಹಲೀ । ವಿಸ್ಮೃರತ್ಯಾಶುಕಾರ್ಯಾಣಿ ಗುರುಂ ಕಸ್ತಂ ನ ಸೇವತೇ ॥8॥ ಇತ್ಯಾದಿ ಶ್ಲೋಕಗಳು ಪ್ರತ್ಯಕ್ಷ ನೋಡಿದವರು ಬರೆದದ್ದು. (I 5-9; II 4-5, 40; III 18-37-44 ಕಂಠಪಾಠ ಯೋಗ್ಯ ಶ್ಲೋಕಗಳು).

ಈ ಪರೀಕ್ಷೆಯಿಂದ ಮಧ್ವಗುರು ವಿಷಯದಲ್ಲೂ, ವಾದಿರಾಜಗುರು ವಿಷಯದಲ್ಲೂ ನೋಡಿದವರ ಸಾಕ್ಷ್ಯವು ಅವರುಗಳ ಋಜುತ್ವಸಂಭಾವನೆಯನ್ನೇ ಹುಟ್ಟಿಸುತ್ತದೆ. ಆಗಮಗಳಿಂದ ನಿಶ್ಚಯವೇ ಆಗುತ್ತದೆ. ಋಜುತ್ವಾಭಾವ ಪ್ರತೀತಿಯು ಹುಟ್ಟುವುದಿಲ್ಲ. ಉಪಜೀವ್ಯಶಾಸ್ತ್ರಬಾಧಿತವಾದ್ದರಿಂದ ಋಜುತ್ವಾಭಾವ ಪ್ರತ್ಯಕವು ಅಸಂಭಾವಿತವೇ. ಹಾಗಾದರೂ ಸುದೃಢ ಋಜುತ್ವ ಪ್ರತಿಪತ್ತಿಯು ಉಪಜೀವ್ಯ ಆಗಮದ ವಿಮರ್ಶೆಯಿಂದಲೇ ಬರಬೇಕು. ಪ್ರತಿಮಾ ಪರೀಕ್ಷೆ ನಿರ್ಣಾಯಕವಲ್ಲ. ಏಕೆಂದರೆ ಋಜುತ್ವ, ತದಭಾವಗಳು ಶಬ್ದೈಕ ಸಮಧಿಗಮ್ಯ. ಯಾವುದು ಅಗ್ನಿಯನ್ನು ನೋಡುತ್ತದೆಯೋ ಅದೇ ಕಣ್ಣೇ ಅಜ್ಞ ಭಾವವನ್ನೂ ನೋಡಲು ಸಮರ್ಥವು. ಕುರುಡನು ಅಜ್ಞಭಾವವನ್ನು ಕಾಣಲಾರನು.

ಲಕ್ಷಣಗಳೆಲ್ಲಾ ಶಾಸ್ತ್ರಾನುಸಾರಿ ಪರೀಕ್ಷೆಯಿಂದ ಜ್ಞೇಯವೇ. ಆದರೂ ಕೆಲವು ದುರ್ಲಕ್ಷಣಗಳು ಅದರಲ್ಲೂ ದುರ್ಲಕ್ಷಣ ಬಾಹುಳ್ಯವು ಕ್ವಚಿತ್ಪ್ರತ್ಯಕ್ಷ ಸಿದ್ಧವೆಂದು ಅನುಭವವಿದೆ. ಆದ್ದರಿಂದಲೇ ವಾಲ್ಮೀಕ್ಯಾದಿಗಳಿಂದ ಅನೇಕ ರಾಕ್ಷಸರು ವರ್ಣಿಸಲ್ಪಟ್ಟಿದ್ದಾರೆ. ವಕ್ರಮೂಗು, ಕುನೇತ್ರ, ಕೋರೆಹಲ್ಲು, ಹ್ರಸ್ವ ಕಿವಿ, ಅಥವ ಮೊರದಂತೆ ಅಗಲ ಕಿವಿ, ಅತಿ ಸ್ಥೂಲ ಹೊಟ್ಟೆ ಮುಂತಾದವನ್ನು ಮುಚ್ಚಲು ಯಾವನಿಗಾಗುತ್ತೆ? ವಾದಿರಾಜ ಮುನಿಗಳ ವಿಷಯದಲ್ಲಿ ಅವರು ದುರ್ಲಕ್ಷಣವಂತರಾಗಿದ್ದರೆಂದು ಯಾವ ಪ್ರತ್ಯಕ್ಷದರ್ಶಿಯ ವಚನವೂ ಇಲ್ಲ. ಪ್ರತ್ಯುತ ಶೋಭನ ಲಕ್ಷಣಾನುಮಾಪಕ ಸಾಂಪ್ರದಾಯಕ ಸ್ತುತಿ ಇದೆ, ಪ್ರತಿಮೆ ಇದೆ, ರಘುನಾಥಾಚಾರ್ಯಾದಿಗಳ ಕಾವ್ಯವಿದೆ, ಗ್ರಂಥಗಳಿವೆ, ಆಖ್ಯಾನವಿದೆ, ಆದ್ದರಿಂದ ಋಜುತ್ವಾಭಾವ ಪ್ರತ್ಯಕ್ಷವು ಅಸಿದ್ಧವು.

7. ಆಗಮಾನುಸಾರಿ ಅನುಮಾನಗಳು ಋಜುತ್ವ ಸಾಧಕಗಳೇ. ಅವೆಲ್ಲವೂ ಅನೃಜುತ್ವವಾದಕ್ಕೆ ಬಾಧಕಗಳು. ವಿಮತೋ ವಾದಿರಾಜ ಮುನಿಃ, ಋಜುಸ್ಥ ರೆಂದು ಗ್ರಾಹ್ಯರು, ಸಂಪ್ರತಿಪನ್ನ ಯೋಗಿ ಜ್ಞಾನಿಗಳಾದ ವಿಜಯದಾಸಾದಿಗಳಿಂದ ಹಾಗೆ ಸುತರಾದ್ದರಿಂದ, ರುದ್ರಪದವೀ ಯೋಗ್ಯರೆಂದು ತಿಳಿಯಲ್ಪಟ್ಟ ಭೂತರಾಜ ಸೇವಿತರಾದ್ದರಿಂದ, ಗರುಡ ಪದವೀಯೋಗ್ಯ ವೇದನಿಧಿ ಸೇವಿತರಾದ್ದರಿಂದ, ಸಾಕ್ಷಾಚ್ಛಿಷ್ಯ ಋಜುಸ್ಥ ವೇದವೇದ್ಯರಿಂದ ಗುರುರಾಜಾ ದರ್ಶನ ಕಾಲದಲ್ಲೇ ಆರಂಭಿಸಿ ಹಾಗೆ ಘೋಷಿತರಾದ್ದರಿಂದ, ಶಿಷ್ಟ ಸಂಪ್ರದಾಯ ವಿಶೇಷಕ್ಕೆ ನಾಯಕತ್ವತನದಿಂದ ವಿಷಯರಾದ್ದರಿಂದ, ಸತ್ಯಧರ್ಮ, ಸತ್ಯಪರಾಕ್ರಮ ತೀರ್ಥಾದಿಗಳಿಂದ ಋಜುವೆಂದು ಮಾನಿತರಾದ್ದರಿಂದ, ಪ್ರೇಕ್ಷಾಯುಕ್ತ ಪಂಡಿತಪ್ರವರರಾದ ವಿಶ್ವಪ್ರಿಯತೀರ್ಥ, ರಘುಪ್ರವೀರತೀರ್ಥ, ಕೊಚ್ಚಿ ರಂಗಪ್ಪಾಚಾರ್ಯ, ವೇದಗರ್ಭ ಸೇತುಮಾಧವಾಚಾರ್ಯ, ಶ್ರೀ ಮುಷ್ಣಾಚಾರ್ಯ, ಜಂಖಂಡಿ

ವಾದಿರಾಜಾಚಾರ್ಯಾದಿಗಳಿಂದ ಸಫಲ ರೀತಿಯಲ್ಲಿ "ಉಪಗಚ್ಛಂತಿ, ಗ್ರಾಹಯಂತಿ ಚ", ಎಂಬಂತೆ ಉಪಾಸಿತರಾದ್ದರಿಂದ, ಋಜುವೆಂದು ವಿಶ್ವಾಸ ಹುಟ್ಟಿಸುವ ವಾದಿರಾಜ ಗುರುವರ ಚರಿತಾಮೃತ, ಸ್ವಾ.ವೃಂ.ಆಖ್ಯಾನ, ಕರ್ಣಾಟಕಪದಾದಿ ಗ್ರಂಥ ನಾಯಕರಾದ್ದರಿಂದ; ವೇದನಿಧಿತೀರ್ಥರ ಸ್ವಪ್ನದಲ್ಲಿ ಶ್ರುತವಾದ ಹಂಸವಾಹನತ್ವಚರಿತ್ರ ವಿಷಯರಾದ್ದರಿಂದ, ಇತ್ಯಾದಿ - ಸಾಮಾನ್ಯಮುಖ ವ್ಯಾಪ್ತಿ ಮೂಲಕಾನುಮಾನಗಳಿವೆ. ಯಾರು ಪ್ರೇಕ್ಷಾವಂತರಿಂದೆ ಹೇಗೆ ತಿಳಿಯಲ್ಪಡುತ್ತಾರೋ ಅವರು ಆ ಧರ್ಮವುಳ್ಳವರೇ. ಭೀಷ್ಮರಿಂದ ವಿಷ್ಣುವೆಂದು ತಿಳಿಯಲ್ಪಟ್ಟ ಕೃಷ್ಣನು ವಿಷ್ಣುವೇ.

8. ಇನ್ನು ಈ ಆಗಮಾನುಸಾರಿ ಅನುಮಾನಗಳಲ್ಲೂ ಬಾಧಕ ಸ್ವಲ್ಪವೂ ಇಲ್ಲದಿದ್ದರೂ, ಶಂಕಾ ಮಾಡುವವರಿದ್ದಾರೆ. ಅವರ ವಿಷಯದಲ್ಲಿ ಸುಧಾವಾಕ್ಯವಿದೆ. III 4-4 (ಪುಟ 590) "ಪಕ್ಷೇವಿಪಕ್ಷತ್ವ ಶಂಕಾ ಖಲುಕೇಚನಚಿದ್ಬೀಜೇನಸ್ಯಾತ್ | ನಿರ್ಬೀಜಂ ಶಂಕಮಾನೋನ ತಾರ್ಕಿಕೊ ನಾಪಿ ಪರೀಕ್ಷಕಃ ಇತ್ಯುನ್ಮತ ಇವೋಪೇಕ್ಷಣೀಯಃ।" ಹೀಗೆ ಖಂಡಿಸಲ್ಪಟ್ಟಿರುವುದರಿಂದ ವ್ಯರ್ಥ ನಿರಾಧಾರ ಶಂಕಾಗಳನ್ನು ಯಾರೂ ಮಾಡಕೂಡದು.

ಇನ್ನು ಋಜುತ್ವಾ ಭಾವಸಾಧಕಾನುಮಾನಗಳು ಆಗಮ ಸಹಾಯ ರಹಿತ ಶುಷ್ಕ ತರ್ಕ ಮಾತ್ರವಲ್ಲ; ಅವೆಲ್ಲವೂ ಪ್ರಮಾಣ ಬಾಧಿತವೆಂದೂ ಇನ್ನೂ ಅಧಿಕ ಋಜುತ್ವ ಸಾಧಕ ಪ್ರಮಾಣ ವಿತರಣೆಯಿಂದ ತೋರಿಸಲ್ಪಡುತ್ತವೆ.

ಇಲ್ಲಿಗೆ ನಾಲ್ಕನೇ ಅಧ್ಯಾಯ ಮುಗಿಯಿತು.

## ಅಧ್ಯಾಯ 5

### ಋಜುತ್ವ ಸಾಧಕ ಪ್ರಮಾಣಗಳು - ಪ್ರಥಮ ಪ್ರಮಾಣ - ಐತಿಹ್ಯ

1. ಶ್ರೀಮದಾಚಾರ್ಯರು "ವಾಯೋರುತ್ತಮಾಭಾವೇ ನ ಪ್ರಮಾಣಂ" ಎಂದು ಪ್ರತಿಜ್ಞೆ ಮಾಡಿ ಸಾಧಿಸಿದಂತೆ ನಾವೂ "ವಾದಿರಾಜ ಋಜುತ್ವಾಭಾವೇ ನ ಪ್ರಮಾಣಂ" ಎಂದು ತೋರಿಸಿಯಾಯಿತು. ಅನಂತ ಸದಾಗಮಗಳಲ್ಲಿ, ಐತಿಹ್ಯ, ಜ್ಞಾನಿಪದ್ಯಗಳಲ್ಲಾಗಲೀ ಅನೃಜುತ್ವವಾದಕ್ಕೆ ಸ್ಥಾನವಿಲ್ಲ. [ಪೂರ್ವಪಕ್ಷಿಗಳು ಶ್ರೀ ಸತ್ಯವೀರತೀರ್ಥರ ಮತ್ತು ಅವರ ಅನುಯಾಯಿಗಳ ವಾಕ್ಯ ವಿಲ್ಲವೇ ಎಂದು ಪುಟ 24 ರಲ್ಲಿ ಕೇಳಿದ್ದಾರೆ. ಅದು ಸರಿಯಲ್ಲ. ಏಕೆಂದರೆ ಆ ಸ್ವಾಮಿಗಳು ತಾವು ಹೇಳಿದ ವಿಷಯಗಳಿಗೆ ಯಾವ ಮೂಲ ಪ್ರಮಾಣವನ್ನೂ ಉದಾಹರಿಸಿಲ್ಲ. ಅವರು ಹೇಳಿದ್ದು ಆಗಮಗಳಾದ ಬ್ರಹ್ಮಾಂಡಾದಿ ಪುರಾಣಗಳು ಐತಿಹ್ಯ, ಆಖ್ಯಾನ, ಕರ್ಣಾಟಕ ಪದ್ಯಾದಿ ವಿರುದ್ಧವಾಗಿದೆ. ಶ್ರೀ ಶ್ರೀ ಪ್ರದ್ಯುಮ್ನತೀರ್ಥರ ಅಭಿಪ್ರಾಯ ಪ್ರಥಮಾಧ್ಯಾಯದಲ್ಲಿ ಹೇಳಲ್ಪಟ್ಟಿದೆ. ಶ್ರೀ ಸತ್ಯವೀರತೀರ್ಥರ ವಾದವು ಬೃ.ಭಾ.ಪು. 95 "ಬಹ್ವಾಗಮ ವಿರೋಧಾಚ್ಚ ದುಷ್ಟತ್ವಂ ತೇಷುಸಂಸ್ಥಿತಂ" ಎಂಬ ರೀತಿಯಿಂದ ಬಾಧಿತವೆಂದು ಸಿದ್ಧವಾಗುತದೆ. ಮತ್ತು ಶ್ರೀ ಸತ್ಯಪರಾಕ್ರಮಶೀರ್ಥರ ಮತಕ್ಕೂ ಇನ್ನೂ ಪೂರ್ವಿಕಸ್ವಮಠೀಯ ಜ್ಞಾನಿಗಳಾದ ಶ್ರೀ ಸತ್ಯಧರ್ಮತೀರ್ಥರ ಮತಕ್ಕೂ ಶ್ರೀ ಸತ್ಯವೀರರ ಪುಸ್ತಕವೂ ಪತ್ರಿಕೆಯೂ ವಿರುದ್ಧವೆಂದ ಮೇಲೆ ಅದಕ್ಕೆ ಪ್ರಾಮಾಣ್ಯ ಹೇಗೆ ಕೂಡುತ್ತೆ? ವಾದಿರಾಜಾಚಾರ್ಯರಿಂದಲೂ ಶ್ರೀ ಸತ್ಯವೀರರ ವಾದದ ಅಪ್ರಾಮಾಣಿಕತೆಯು ಜನತೆಗೆ ವ್ಯಕ್ತವಾಗಿದೆ.] ಪ್ರತ್ಯಕ್ಷವು ಪ್ರವರ್ತಿಸುವ ಹಾಗಿಲ್ಲ. ಆಗಮಾನುಸಾರಿ ಪ್ರತ್ಯಕ್ಷವು ಋಜುತ್ವ ಸಾಧಕವು. ಋಜುತ್ವ ವ್ಯಾಪ್ತವಾದ ಮೂವತ್ತೆರಡು

ಲಕ್ಷಣದ ದೇಹವು ಪ್ರತ್ಯಕ್ಷ ಯೋಗ್ಯವಾದರೂ ಆ ಲಕ್ಷಣಗಳು ಎಂಥ ಜ್ಞಾನಿಗಾದರೂ ಅವನ ಪರೀಕ್ಷಿತ ಪ್ರತ್ಯಕ್ಷದಿಂದಲೇ ತಿಳಿಯಲ್ಪಡತಕ್ಕವು. ಸಾಮಾನ್ಯ ಪ್ರತ್ಯಕ್ಷಜ್ಞೇಯವಲ್ಲ. ತ್ರಿವಿಕ್ರಮ ಪಂಡಿತಾಚಾರ್ಯರೂ ಆಗಮದಿಂದಲೇ ತಮ್ಮ ಆಚಾರ್ಯರ ಋಜುತ್ವವನ್ನು ತಿಳಿದರು, ಮೂವತ್ತೆರಡು ಲಕ್ಷಣ ನೋಡಿ ನಿಶ್ಚಯಿಸಲಿಲ್ಲ. ಅನೃಜುತ್ವ ವ್ಯಾಪ್ಯ ದುರ್ಲಕ್ಷಣಾದಿಗಳು ದಾನವರಲ್ಲಿ ಸ್ಫುಟವಾಗಿ ಕಾಣುತ್ತವೆ. ಅಂಥ ದುರ್ಲಕ್ಷಣದ ದರ್ಶನವು ವಾದಿರಾಜ ಗುರುಗಳಲ್ಲಿ ಯಾರಿಗೂ ಆಗಿಲ್ಲ. ಹೀಗೆ ಅನೃಜುತ್ವಕ್ಕೆ ಆಧಾರವಾಗಿ ಪ್ರತ್ಯಕ್ಷಾಗಮಗಳು ಇಲ್ಲದಿದ್ದ ಮೇಲೆ ಯೋಗ್ಯಾನು ಮಾನ ಪ್ರಯೋಗಕ್ಕೆ ಅವಕಾಶವೆಲ್ಲಿಂದ ಬಂತು? ಆದ್ದರಿಂದ ವಾದಿರಾಜರು "ಋಜುಗಳೆಂದೇ" ನಿಶ್ಚಯಿಸಲ್ಪಡಬೇಕು, ಋಜುತ್ವ ವಿರುದ್ಧ ಅನೃಜುತ್ವದಲ್ಲಿ ಪ್ರಮಾಣವಿಲ್ಲದಿರುವುದರಿಂದ; ದೃಷ್ಟಾಂತ - ಜಲವು ಶೀತವಲ್ಲ ಎಂಬಲ್ಲಿ ಪ್ರಮಾಣವಿಲ್ಲದ್ದರಿಂದ 'ಶೈತ್ಯಂ ಹಿ ಯತ್ಸಾ ಪ್ರಕೃತಿರ್ಜಲಸ್ಯ" ಎಂಬ ಕವಿಯ ಮಾತು ಸತ್ಯವೆಂದೇ ನಿಶ್ಚಯಿಸಲ್ಪಡುತ್ತದೆ; ಹೀಗೆ ಸಾಮಾನ್ಯ ವ್ಯಾಪ್ತಿ ಮೂಲಕವಾದ ಸಾಕ್ಷಿ ಗೃಹೀತವ್ಯಾಪ್ತಿ ಬಲದಿಂದ ಯುಕ್ತಿ ಪ್ರವರ್ತಿಸುತ್ತದೆ. "ವಸ್ತು ವಿಕಲ್ಪಾಯೋಗಾತ್" ಎಂಬ ನ್ಯಾಯವಿದೆ. ಪರಸ್ಪರ ವಿರುದ್ಧಗಳಲ್ಲಿ ಒಂದು ಪಕ್ಷ ಸುಳ್ಳಾದರೆ ಇನ್ನೊಂದು ಪಕ್ಷ ಸತ್ಯ ಎಂದು ನ್ಯಾಯದ ಅರ್ಥ. ತ.ಪ್ರ. II 3-43 "ನಚವಿಕಿಲ್ಪೇನಾವಿರೋಧೋಯವವ್ರೀಹಿಶ್ರುತ್ಯೋರಿವ| ವಸ್ತು ವಿಕಲ್ಪಾ ಯೋಗಾತ್" ತತ್ವೋದ್ಯೋತ ಪುಟ 101 ಮತ್ತು ಕರ್ಮನಿರ್ಣಯ ಪುಟ 430 ರಲ್ಲೂ ಹೀಗೆ ಪ್ರಮಾಣವಿದೆ. ವಿರುದ್ಧಗಳ ಪೈಕಿ ಒಂದು ವಾದವು ಸತ್ಯವೆಂದು ನಿಯಮವಿದೆ. ಚೈತ್ರನ ಮರಣವು ಅಸತ್ಯವೆಂದಾದರೆ ಅವನು ಬದುಕಿರುವುದು ಸತ್ಯವೆಂದೇ ಅಂಗೀಕರಿಸಲ್ಪಡುತ್ತದೆ. ಹೀಗೆ ಋಜುತ್ವ ಸಂಸಾಧನೆಯಲ್ಲಿ ಪರಿಶೇಷಾನುಮಾನವೂ ಸಾಧಕವೇ.

2. ಆದರೆ ಅಷ್ಟೇ ಅಲ್ಲ. ಶ್ರೀ ಮಧ್ವಾಚಾರ್ಯರು III 3-36 ಬ್ರ.ಸೂ.ಭಾ. ದಲ್ಲಿ "ದೃಶ್ಯತೇಚಾನ್ಯತ್ರ ಉತ್ತಮತ್ವಂ" ಎಂದು ಪ್ರತಿಜ್ಞೆ ಮಾಡಿ ಹೇಗೆ ವಾಯೂತ್ತಮ ಸದ್ಭಾವವನ್ನು ಸಾಧಿಸಿದರೋ ಹಾಗೆಯೇ ನಾವೂ 'ದೃಶ್ಯತೇ ವಾದಿರಾಜ ಋಜುತ್ವಂ ಪ್ರಮಾಣೇಷು' ಎಂದು ಹೇಳಿ ಸಾಧಿಸಬಹುದು. ತಥಾಹಿ: ಮೊದಲು ಋಜುತ್ವದಲ್ಲಿ ಐತಿಹ್ಯವು ಪ್ರಮಾಣವೆಂದು ಹೇಳಬಹುದು. ಭಾಗ XI 19-17 ರಲ್ಲಿ ಐತಿಹ್ಯವನ್ನು ಪ್ರಮಾಣವನ್ನಾಗಿ ಸಂಗ್ರಹಿಸಿದ್ದಾರೆ. ಕಥಾಲಕ್ಷಣದಲ್ಲೂ 'ಐತಿಹ್ಯಮಾಗಮ ಭೇದಃ' ಎಂದಿದೆ.

ಶ್ರೀ ವೇದವೇದ್ಯ ತೀರ್ಥರು (ಪಟ್ಟ 1600-1616 ಪ್ರಾಯಶಃ 1510 ಜನ್ಮ) ಸಾಕ್ಷಾತ್ ಶ್ರೀ ವಾದಿರಾಜ ಗುರುಗಳ ಶಿಷ್ಯರು, ಬಾಲ್ಯಾರಭ್ಯ ಗುರುಸೇವೆಯನ್ನು ಮಾಡಿದ ಹಣ್ಣು ಮುದುಕರು, ಪಂಡಿತ ಪ್ರವರರು. ತಪಸ್ವಿ ಜ್ಞಾನಿಗಳು. ತಂತ್ರಸಾರಕ್ಕೆ ಸರಳ ಟೀಕಾ ಅವರು ರಚಿಸಿದ್ದು ಸಿಕ್ಕಿದೆ. ಸೋದೆ ಮಠಾಧೀಶ್ವರರಾದ ಪೂಜ್ಯ ಶ್ರೀ ವಿಶ್ವೋತ್ತಮ ತೀರ್ಥ ಶ್ರೀಪಾದಂಗಳವರಲ್ಲಿದೆ. ಇನ್ನು ಎಷ್ಟು ಗ್ರಂಥ ರಚಿಸಿದ್ದರೋ ಗೊತ್ತಾಗಿಲ್ಲ. ಅವರು ತಮ್ಮ ಗುರುಗಳ ಪಂಚಮ ಪರ್ಯಾಯ ಕಾಲದಲ್ಲಿ ತಮ್ಮ ಅಭೀಷ್ಟದಂತೆ ಗುರುಗಳಿಂದ ಅಪ್ಪಣೆ ಪಡೆದು ತಾವೇ ಆ ಪಂಚಮ ಪರ್ಯಾಯೋತ್ಸವವನ್ನು ಉಡುಪಿ ಶ್ರೀ ಕೃಷ್ಣ ಮಠದಲ್ಲಿ 1596-1597 ಎರಡು ವರ್ಷ ನಡೆಸಿದವರು. ಪರ್ಯಾಯ ಮುಗಿದ ಮೇಲೆ ಗುರುಗಳ ಸಮೀಪದಲ್ಲೇ ಇದ್ದು 1600 ರಲ್ಲಿ ಅವರು ವೃಂದಾವನ ಪ್ರವೇಶ ಮಾಡಿದ ನಂತರ

ಸೀಠಾಧಿಪತ್ಯವನ್ನು ನಿರ್ವಹಿಸಿ ಆ ಕಾಲದಲ್ಲೂ 1612 ರಿಂದ 1614 ರವರಿಗಿನ ತಮ್ಮ ಪರ್ಯಾಯದಲ್ಲಿ ವೀರವೆಂಕಟಪತಿ ರಾಜನಿಂದ ಶ್ರೀ ಕೃಷ್ಣ ಪೂಜಾರ್ಥವಾಗಿ ಹೂವಿನಕೆರೆ ಗ್ರಾಮವನ್ನು ಬಳುವಳಿಯಾಗಿ ಪಡೆದಿದ್ದಾರೆ. [ಪುಟ 73 ವಾದಿರಾಜ ಗುರುವರ ಚರಿತ್ರೆ, ಶ್ರೀನಿವಾಸಭಟ್ಟ ವಿರಚಿತ 1940, ಮ.ಸೀ, ಗ್ರಂಥಾಲಯ, ಉಡುಪಿ] ಇವರು ಬಾಲ್ಯದಿಂದಲೂ ಬಹುಕಾಲದವರೆಗೆ ಅಪರೋಕ್ಷ ಜ್ಞಾನಿಗಳಾದ ತಮ್ಮ ಗುರುಗಳಿಂದ ಸುಶಿಕ್ಷಿತರು. ಇಂಥವರಿಗೆ ಮಿಥ್ಯೋಪಾಸನೆಯ ವ್ಯಸನವಿಲ್ಲವೆಂದು ಹೇಳಬೇಕಾಗಿಲ್ಲ. ಅದರಲ್ಲೂ ತಮ್ಮ ವಾರ್ಧಿಕ್ಯದಲ್ಲಿ ತಾವು ಚೆನ್ನಾಗಿ ನೋಡಿದ ಸ್ವಂತ ಗುರು ವಿಷಯದಲ್ಲಿ ವಿಪರೀತ ತಿಳಿಯುತ್ತಾರೆಂದು ಕಲ್ಪಿಸಲು ಕಾರಣವಿಲ್ಲ. ಅವರಿಗೆ ಈ ಶಾಸ್ತ್ರಶ್ಲೋಕಗಳು ಚೆನ್ನಾಗಿ ಗೊತ್ತು. ಬ್ರ.ಸೂ.ಭ. VI 1-4 ತ.ದೀ.ಪು. 469. "ನಹ್ಯನ್ಯದನ್ಯದಿತ್ಸೇವದ್ಯಾನಂ ಸ್ಯಾತ್ ಪುರುಷಾರ್ಥದಂ | ಅನರ್ಥಶ್ಚ ಭವೇತ್ತಸ್ಮಾದ್ಭೃತ್ಯೋರಾಜೇತಿ ಬೋಧವತ್ | ಇತಿ ಸಾಮಸಂಹಿತಾಯಾಂ | ಅಚೇತನಮಯೋಗ್ಯಂ ಚ ತಥೈವಾತಾತ್ವಿಕಂ ಕ್ವಚಿತ್ | ನೋಪಾಸೀತ ಪರೋನರ್ಥಃ ಸ್ಯಾತ್ತಥೋಪಾಸನಾಕೃತಃ | ಇತ್ಯುಪಾಸನಾ ಲಕ್ಷಣೇ |

ಶ್ರೀ ವೇದವೇದ್ಯರು ಸುಧಾದಿ ಪಾಠ ಪ್ರವಚನ ಶೀಲರು. ಅಂಥವರು ಗುರುಗಳು ವೃನ್ದಾವನ ಪ್ರವೇಶ ಮಾಡಿದ ಉತ್ತರ ದಿನದಲ್ಲಿಯೇ "ಉದ್ದಂಡೋದ್ದಂಡ ಪರವಾದಿ ಪ್ರಚಂಡ, ಗಂಡಭೇರುಂಡ, ಮಾಯಾಮತ ವಿಧ್ವಂಸಕ, ಮಧ್ವ ಮತೋದ್ಧಾರಕ, ಸುಧಾ ರಸಾಸ್ವಾದ, ದಿಗ್ವಿಜಯೀಕೃತಾ ಸೇತು ಮರ್ಯಾದ, ಭಾವಿ ಹನುಮಚ್ಚಕ್ರವರ್ತಿನ್, ಗುರುಸಾರ್ವಭೌಮ, ಪರಮಹಂಸಾರೂಢ, ವಾದಿರಾಜ ಭೋಪರಾಕ್." ........ "ಪಾರಮೇಷ್ಠಿ ಪದಾಧಿಕಾರಿ ಋಜುಪದಸ್ಥ ಗುರುರಾಜ ಪಟ್ಟಭದ್ರ ವ್ಯಾಖ್ಯಾನ ಸಿಂಹಾಸನಾಧೀಶ್ವರ, ಅಜ್ಞಾನ ತಿಮಿರ ಮಾರ್ತಾಂಡ, ಸುಜ್ಞಾನ ತೇಜೋಮಯ" ಇತ್ಯಾದಿ ರೀತಿಯಾಗಿ ತಮ್ಮ ಮಠದಲ್ಲೂ, ಆರಸಪ್ಪನಾಯಕನ ರಾಜಮಂದಿರದಲ್ಲೂ ಬಂದಿ ಜನರಿಂದ ಘೋಷಣ ಮಾಡಿಸಿ ಪ್ರಾಣದೇವರ ಪ್ರತಿಮೆಯ ಜೊತೆಯಲ್ಲಿ ಒಂದೇ ತಟ್ಟೆಯಲ್ಲಿ ವಾದಿರಾಜರ ಪ್ರತಿಮೆಯನ್ನು ಇಟ್ಟು ಅಭಿಷೇಕಾಲಂಕಾರ, ಪೂಜಾ, ನೈವೇದ್ಯಾದಿಗಳನ್ನು ಮಾಡಿ ಸಂಪ್ರದಾಯ ವಿಶೇಷವನ್ನು ಹಾಕಿಕೊಟ್ಟು ಭಕ್ತಜನರನ್ನು ಅನುಗ್ರಹಿಸಿದರು. ಅವರೂ ಋಜು ಗಣಸ್ಥರೇ ಎಂದು ವಾ.ಗು.ಚ. ಮತ್ತು ಸ್ವ.ಪ್ನ.ವೃಂ. ಆಖ್ಯಾನಸ್ಥ ಶ್ಲೋಕಗಳಿಂದ ತಿಳಿದು ಬರುತ್ತದೆ. ಅವರ ವೃನ್ದಾವನವೂ ಕೂಡ ಸೋದೆಯಲ್ಲಿಯೇ ತಮ್ಮ ಗುರು ವೃನ್ದಾವನದ ಸಮೀಪದಲ್ಲಿ ದಕ್ಷಿಣ ಪಾರ್ಶ್ವದಲ್ಲಿ ಸ್ಥಾಪಿಸಲ್ಪಟ್ಟಿದೆ.[ಮಂತ್ರಾಲಯದಲ್ಲಿ ಶ್ರೀ ರಾಘವೇಂದ್ರಸ್ವಾಮಿಗಳ ಮತ್ತು ಶ್ರೀ ವಾದೀಂದ್ರ ತೀರ್ಥರ ವೃನ್ದಾವನಗಳು ಏಕತ್ರ ಸಮೀಪದಲ್ಲಿವೆ. ಇಲ್ಲೂ ಹಾಗೆಯೇ ಶ್ರೀ ವಾದಿರಾಜರ ಮತ್ತು ಶ್ರೀ ವೇದವೇದ್ಯರ ವೃನ್ದಾವನಗಳೂ ಜೊತಯಲ್ಲಿವೆ. ಸ್ವರೂಪಸಾಮ್ಯಸೂಚಕವೆಂದು ವೃದ್ಧರು ಹೇಳುತ್ತಾರೆ.] ತಾವು ಬದುಕಿದ್ದಾಗಲೂ ಶ್ರೀ ವೇದವೇದ್ಯರು ತಪಸ್ಸು ಮಾಡಿ ವೃನ್ದಾವನಸ್ಥ ಗುರುರಾಜರ ದರ್ಶನ ಮಾಡಿದವರೆಂದು.ವಾ.ಗು.ಚ. VII 1-4 ಶ್ಲೋಕಗಳಿಂದ ತಿಳಿದುಬರುತ್ತದೆ. ಅವರಿಂದ ಪ್ರವರ್ತಿತವಾದ ಸಂಪ್ರದಾಯವು ಸೋದೆ ಮಠದಲ್ಲಿ ಕಲ್ಪವೃಕ್ಷದಂತೆ ಪ್ರಬುದ್ಧವಾಗಿ ಜ್ಞಾನ ಭಕ್ತ್ಯಾದಿಗಳನ್ನು ಅನುಷ್ಠಾತೃಗಳಿಗೆ ಕೊಡಿಸುತ್ತಾ ಅದ್ಯಾಪಿ ಅಬಾಧಿತವಾಗಿ ಪ್ರಕಾಶಿಸುತ್ತಿದೆ. ಹೀಗೆ 370 ವರ್ಷಗಳೂ ಫಲೋಪಲಬ್ಧಯಿಂದ ಪ್ರಾಮಾಣ್ಯ

ಧಾರ್ಥ ಹುಟ್ಟಿಸಿರುವ ಮಾಧ್ವ ಸಾತ್ವಿಕ ಸಂಪ್ರದಾಯವು. ಅದರಲ್ಲೂ ಬಹು ಮಾಧ್ವ ಮಠೀಯ ಯತಿಗಳಿಂದ ಮಾನಿತವಾದ ಸಂಪ್ರದಾಯವು ಈಗ ಅಜ್ಞಾನಿಗಳೂ ಪ್ರಶ್ನೆ ಮಾತ್ರದಿಂದ ಹೇಗೆ ಅಪ್ರಾಮಾಣ್ಯವನ್ನು ಹೊಂದೀತು? ಈ ಐತಿಹ್ಯಕ್ಕೆ ಯಾವ ಒಂದು ಪ್ರಮಾಣ ವಿರೋಧವೂ ಇಲ್ಲ. ಪುರಾಣಗಳು, ಕರ್ಣಾಟಕ ಜಾನಿ ಪದ್ಯಗಳು, ಸ್ವಾ.ವೃ.ಖ್ಯಾ, ವಾ.ಗು.ಚ. ಪ್ರಾಮಾಣ್ಯಬೋಧಿನೀ, ವಿಶ್ವಪ್ರಿಯ ತೀರ್ಥ ವಿಲಾಸಗಳು ಮುಂತಾದವೆಲ್ಲಾ ಸಂವಾದ ರೂಪವಾಗಿ ಇರುತ್ತವೆ.

3. ಶ್ರೀ ವೇದವೇದ್ಯರು ಹೇಗೆ ವಾದಿರಾಜರ ಋಜುತ್ವವನ್ನು ತಿಳಿದರು ಎಂಬ ಪ್ರಶ್ನೆಯು ಅಸಂಗತವು. ಪ್ರತಿಭಾಶಾಲಿಗಳಾದ ಅವರನ್ನೇ ಕೇಳಲು ಆಗಿನ ಜನರು ಭೀತರಾದರು. ಈಗಲೂ ಸಹ ಕೇಳಲು ಪ್ರಾಮಾಣ್ಯ ಸ್ವತಸ್ತ್ವ ನಿಯಮವು ದುರ್ವಾದಿಗಳ ಬಾಯಿಗೆ ಮುದ್ರೆಯನ್ನು ಹಾಕಿದೆ. ಅನು III 2-1 “ಪ್ರಶ್ನದೋಷಾ ಹಿ ಚತ್ವಾರ: ಸ್ವವ್ಯಾಹತಿರಸಂಗತಿಃ | ಸಿದ್ಧಾರ್ಥತಾ ಚ ನೈಷ್ಫಲ್ಯಂ ನತ್ಯೈಃ ಸ್ಯಾತತ್ವನಿರ್ಣಯಃ ‖" ಎಂದು ಪ್ರಮಾಣವಿದೆ. ದ್ವೈತಮತದಲ್ಲಿ ಆಗಮ ಪ್ರಾಮಾಣ್ಯವು ಕರಣ ಸ್ವಭಾವಸಿದ್ಧ. ಆಪ್ತೋಚ್ಚರಿತತ್ವಗುಣ, ಸಂವಾದಾದಿ ಸಹಕಾರಿ ಸಾಪೇಕ್ಷವಲ್ಲ. ಹೇಗೆ ಉಲೂಕ ವ್ಯಾಪಾರದಿಂದ ಅಶ್ವತ್ಥಾಮನಿಗೆ ಯಥಾರ್ಥ ಜ್ಞಾನವು ಹುಟ್ಟಿತೋ, ಪ್ರಮಾಣಾವಿರುದ್ಧ ವಾದ್ದರಿಂದಲೇ ಆ ಆಗಮಕ್ಕೂ ಅದರಿಂದ ಹುಟ್ಟಿದ ಜ್ಞಾನಕ್ಕೂ ಸಿದ್ಧಾಂತದಲ್ಲಿ ಪ್ರಾಮಾಣ್ಯವು ಹೇಗೆ ಅಂಗೀಕರಿಸಲ್ಪಟ್ಟಿತೊ, ಹಾಗೆ ಇಲ್ಲಿಯೂ ಉಲೂಕ ವ್ಯಾಪಾರಕ್ಕಿಂತ ಹೆಚ್ಚು ಸ್ಪಷ್ಟವೂ ನಿರವಕಾಶವೂ ಅದ ವೇದವೇದ್ಯರ ಸಂಪ್ರದಾಯಕ್ಕೆ ಪ್ರಾಮಾಣ್ಯವು ಅಂಗೀಕಾರ್ಯವೇ. ಸಂವಾದದಿಂದ ಪ್ರಮಾಣತ್ವ ನಿಶ್ಚಯ ದಾರ್ಢ್ಯವೂ ಅನುಭವ ಸಿದ್ಧವೇ ಆಗಿದೆ. ವ್ಯರ್ಥ ಪ್ರಶ್ನೆ ಆಯುಕ್ತವೇ. ಬಾಧಕರಾಪ್ರಮಾಣ ತೋರಿಸದೆ ಐತಿಹ್ಯವು ಅಪ್ರಮಾಣವೆನ್ನುವುದಾದರೆ ಪೂರ್ವಪಕ್ಷ ಗ್ರಂಥಕ್ಕೆ ಮೊದಲು ಅಪ್ರಾಮಾಣ್ಯವನ್ನು ಹೇಳಬೇಕಾಗುತ್ತದೆ. ಅಥವಾ ಪ್ರಮಾಣಹೀನ ಪೂರ್ವಪಕ್ಷ ಗ್ರಂಥವು ಪ್ರಮಾಣವೆಂದು ಒಪ್ಪಿದರೆ ಐತಿಹ್ಯವು ಅಪ್ರಮಾಣವು; ಐತಿಹ್ಯವು ಅಬಾಧಿತವಾಗಿದ್ದರೂ ಅಪ್ರಮಾಣವೆಂದು ಒಪ್ಪಿದರೆ ಪೂರ್ವಪಕ್ಷ ಗ್ರಂಥಕ್ಕೆ ಪ್ರಾಮಾಣ್ಯ ಪ್ರಾಪ್ತಿ ಮತ್ತು ಬಾಧಕತ್ವ ಸಾಮರ್ಥ್ಯ ಅನ್ಯಥಾ ಇಲ್ಲವೆಂದು ಅನ್ಯೋನ್ಯಾಶ್ರಯವು ಪೂರ್ವಪಕ್ಷಕ್ಕಿದೆ.

4. ಆಗಲಿ, ವೇದವೇದ್ಯರ ಸಂಪ್ರದಾಯವು ಪ್ರಮಾಣವಾಗಲಿ, ಮಾನ್ಯವಾಗಲಿ. ಆದರೂ 'ಮಾನಾಧೀನಾ ಮೇಯಸಿದ್ಧಿಃ' ಯಾವ ಪ್ರಮಾಣದಿಂದ ಶ್ರೀ ವೇದವೇದ್ಯ ಗುರುಗಳು ವಾದಿರಾಜ ಋಜುತ್ವವನ್ನು ತಿಳಿದರು ಎಂದರೆ ಕಥಾಂತರವಾಗುತ್ತದೆ. ಪ್ರಾಮಾಣ್ಯಕ್ಕೆ ಸ್ವತಸ್ತ್ವ ಒಪ್ಪಿ ವಿರೋಧಿ ಪ್ರಮಾಣ ಕಾಣದೆ ವಾದಿರಾಜರು ಹೇಗೆ ಋಜುಗಳು ಎಂದು ಶಂಕಿಸಿದರೆ ಆ ಪೂರ್ವ ಪಕ್ಷಿಯು ಪರತತ್ವಾವಾದಿಯೇ ಆಗುತ್ತಾನೆ. ಅಶ್ವತ್ಥಾಮರು ಹೀಗೆ ಉಲೂಕವನ್ನು ಪ್ರಶ್ನೆ ಮಾಡಲಿಲ್ಲ. ಕ್ರಿಯಾನುಮಿತ ಬೋಧಕ ಶಬ್ದವು ವಿರೋಧಿ ಪ್ರಮಾಣ ರಹಿತವಾಗಿದ್ದರೆ ಮಾನ್ಯ ಪ್ರಮಾಣವೇ ಎಂದು ಅವರಿಗೆ ತಿಳಿದೇ ಇತ್ತು. ಆದ್ದರಿಂದ ಯಾವ ಪ್ರಮಾಣದಿಂದ ವೇದವೇದ್ಯರು ಋಜುತ್ವ ನಿಶ್ಚಯಿಸಿದರೆಂಬುದು ಸೌಹಾರ್ದರಿಗೆ ಸಂಗತ ಪ್ರಶ್ನೆಯಲ್ಲ.

| |
|---|
| ಆದರೂ ಜ್ಞಾನಮಾತ್ರವನ್ನು ಬಯಸಿ ಶಿಷ್ಯಭಾವದಿಂದ ವೇದವೇದ್ಯರ ಜ್ಞಾನಕ್ಕೆ ಉಪಜೀವ್ಯ ಪ್ರಮಾಣವು ಯಾವುದೆಂದು ಪ್ರಶ್ನಿಸಿದರೆ ಗುರುಗಳು ಉತ್ತರ ಕೊಡಬೇಕು. ದೇವತಾ ಕಾರ್ಯವನ್ನೂ ಅದರ ಪಕ್ವಕಾಲವನ್ನೂ ತಿಳಿದಿದ್ದ ವಾದಿರಾಜ ಗುರುಗಳೇ ರಹಸ್ಯದಲ್ಲಿ ಮೊದಲೇ ಮಾಡಿದ ಉಪದೇಶವು ಕಾರಣವಾಗಬಹುದು. ತನ್ನ ಸ್ವಭಾವ ಸಿದ್ಧವಾದ ದೇವಸತ್ತಮ[ ವಿ.ತ.ನಿ.ಪು. 257 ಪ್ರಾಮಾಣ್ಯಂ ಚಸ್ವತಏವ \| ವಿಂಶಲಕ್ಷಣತೋನೂನಃ ತಪಸ್ವೀ ಬಹು ವೇದವಿತ್ \| ವೇದ ಇತ್ಯೇವ ಯಂಪಶ್ಯೇತ್ಸವೇದೋಜ್ಞಾನ ದರ್ಶನಾತ್ \| ಮತ್ತು ಗೀ. ಭಾ. 13 ರಲ್ಲಿ ಉದಾಹೃತವಾದ "ಅಶ್ರುತ ಪ್ರತಿಭಾಯಸ್ಯ" ಇತ್ಯಾದಿ ಪೂರ್ವೋಕ್ತ ನಾರಾಯಣ ಶ್ರುತಿ; ಮತ್ತು ಭಾಗತಾ XI 6-30 "ಆತ್ಮನೋತ್ತಮತಾಂಬ್ರೂಯುರುತ್ತಮಾ ಅಪಿ ಸರ್ವಶಃ। ಕದಾಚಿದೇವ ಸ್ವಗುಣಾನ್ ಸ್ನಿಗ್ಧೇಸ್ವೇವಹಿಸಾಧವಃ ಇತಿ ನಾರ ದೀಯೇ" ಎಂದು ಪ್ರಮಾಣಗಳಿವೆ.] ಸ್ವರೂಪಭೂತ ದಿವ್ಯ ಪ್ರತಿಭಾ ಶಕ್ತಿಯೇ ಕಾರಣವಾಗಿರಬಹುದು. ಮತ್ತು ವಾ.ಗು.ಚ. ಅಷ್ಟಮಾಧ್ಯಾಯದಲ್ಲಿ ಉದಾಹೃತವಾದ ಋಕ್ಸಂಹಿತಾ, ಬ್ರಹ್ಮಾಂಡ, ಬ್ರಹ್ಮವೈವರ್ತ, ಪಾದ್ಮ, ಬೃಹನ್ನಾರದೀಯ, ವಾಮನಾದಿ ಪುರಾಣಜ್ಞಾನ, ಪಂಚರಾತ್ರ, ಬಳಿತ್ಥಾಸೂಕ್ತಾರ್ಥ, ಪೂರ್ವಪ್ರಸಿದ್ಧ ವರ್ಜವೇದಾರ್ಥಗಳ ಜ್ಞಾನವೂ ಕಾರಣವಾಗಿರಬಹುದು. ಈ ಮೂರೂ ಮಿಳಿತವಾಗಿಯೂ ಕಾರಣವಾಗಿರಬಹುದು. ಅಂತೂ ಆ ಸಾತ್ವಿಕರು ಭಕ್ತರನ್ನು ತಮಸ್ಸಿಗೆ ತಳ್ಳುವ ಅಪ್ರಾಮಾಣಿಕ ಸಂವೇದನವನ್ನು ಆಚರಣೆಗೆ ತರುವವರಲ್ಲ. "ಆಚಾರಶ್ಚೈವ ಸಾಧೂನಾಂ' ಎಂಬ ಕೃ.ಮ. ಉಕ್ತಿರೀತ್ಯಾ ಅವರ ಸಂಪ್ರದಾಯವು ಮಾನ್ಯವೇ. ವಾದಿರಾಜರು ಋಜುಗಳೇ. |
| 5. ತಥಾಪಿ ಒಂದೇ ಪ್ರಮಾಣದಿಂದ ಜ್ಞಾತ ವಿಷಯದಲ್ಲಿ ಹೇಗೆ ಸುದೃಢ ನಿಶ್ಚಯ ಹುಟ್ಟುತ್ತದೆ ಎಂದರೆ ಆ ಪ್ರಶ್ನೆ ಯುಕ್ತವಲ್ಲ. ಸರ್ವ ವಿಷಯದಲ್ಲೂ ಅನೇಕ ಪ್ರಮಾಣಗಳಿರಬೇಕು; ಸಂವಾದವು ತುಂಬಿದ ಕೊಡದಂತೆ ತೃಪ್ತಿ ಪೂರ್ತಿಯನ್ನು ಉಂಟು ಮಾಡುತ್ತಿರಬೇಕು; ಒಂದು ಸಾಲದಿದ್ದರೆ ನಾಲ್ಕು ಸಂವಾದಗಳಿರಬೇಕು. ಸಜಾತೀಯ ವಿಜಾತೀಯಗಳೆಂಬ ಎರಡು ರೀತಿಯ ಸಂವಾದಗಳೂ ಇರಬೇಕು - ಇತ್ಯಾದಿ ನಿಯಮಗಳು ಪರತಸ್ತ್ವವಾದದಲ್ಲಿ ಉಚಿತವಾಗಬಹುದು. ಸ್ವತಸ್ತ್ವವಾದಿಗಳ ಸಿದ್ಧಾಂತದಲ್ಲಿ ಅನುಚಿತವೇ ಸರಿ. ಆದರೂ ಕರ್ಣಾಟಕ ಪದಗಳು ಮುಂತಾದ ಸಂವಾದವೂ ತೋರಿಸಲ್ಪಟ್ಟಿದೆ. ಗೀ.ಭಾ. II ಪುಟ 31 "ಗ್ರಂಥಾಂತರಗತತ್ವಾಚ್ಚನಾವಿದ್ಯಮಾನಸ್ತುತಿಃ" ಎಂದಿದೆ. ಮ.ತಾ.ನಿ. XI 80 "ಪ್ರಾಯಃ ಸತಾಂ ನಮನಃ ಪಾಪಮಾರ್ಗೇ ಗಜೇತ್' ಎಂದೂ, XIX 52 ನಾತ್ರ ಪ್ರಮಾಮಮಹೃದಿ ಪ್ರತಿಭಾತ್ಯಥಾಪಿ ಧರ್ಮಾಚಲಾಮಮ ಮತಿರ್ಹಿತದೇವಮಾನಂ" – ಎಂದೂ ಪ್ರಮಾಣಗಳು ಕೃಷ್ಣ ಭಕ್ತರೂ ಗುರುರಾಜ ಶಿಷ್ಯರೂ ಆದ ವೇದವೇದ್ಯರಿಗೆ ದಿವ್ಯಮನಸ್ಕತ್ವವು ಸಂಭಾವಿತವೆಂದು ತೋರಿಸುತ್ತವೆ. ಅಂಥವರು ಅವಿದ್ಯಮಾನ ಧ್ಯಾತೃಗಳಲ್ಲ. ಬೃ.ಭಾ. ಪುಟ 431 "ಅವಿದ್ಯಮಾನಂ ಧ್ಯಾಯಂತೋ ಯಾಂತಿ ಸರ್ವೇಽ ಅಧರಂ ತಮಃ" \| ಪುಟ 525 "ಮಿಥ್ಯೋಪಾಸ್ತಿಮತಾಂ ತೇಷಾಂ ನಿಷ್ಕೃತಿರ್ನಕದಾಚನ" (ಮಿಥ್ಯೋಪಾಸಕರಿಗೆ ಪ್ರಾಯಶ್ಚಿತ್ತವೇ ಇಲ್ಲ) ಈ ನಿಂದೆ ಭಯಂಕರವಷ್ಟೆ. ಅವರು ಇದನ್ನೆಲ್ಲಾ ತಿಳಿದವರು, ನಿಂದಿತ ಕಾರ್ಯ ಮಾಡ ತಕ್ಕವರಲ್ಲ. |

6. ನಿಜ, ಆದರೂ ಮನುಷ್ಯ ದೇಹವುಳ್ಳವನಿಗೆ ದೋಷವು ಸಂಭಾವಿತವು ಎಂದರೆ ಹಾಗೆ ಹೇಳುವುದು ಯುಕ್ತವಲ್ಲ. ಅವರು ಪ್ರಬಲ ತಪಸ್ವಿಗಳು. ಪೂರ್ವೋದಾಹೃತ ಪ್ರಮಾಣ ರೀತಿಯಿಂದ ಬಲವತ್ಪ್ರಮಾಣ ತೋರಿಸಿ ದೋಷವನ್ನು ಆಪಾದನೆ ಮಾಡಬೇಕು. ಅನ್ಯಥಾ ಇಲ್ಲವೆಂದೇ ತಿಳಿಯಬೇಕು. ಮೂಲ ಪ್ರಮಾಣಾವಿರುದ್ಧವಾದ ಒಂದು ಆಗಮವು ಅಪ್ರಮಾಣವಾಯಿತೆಂದು ಎಲ್ಲೂ ದೃಷ್ಟವಾಗಿಲ್ಲ. ಅನು ॥ 1-2 ರಲ್ಲಿ ಸ್ಮೃತಿಯು ಅಪ್ರಮಾಣವೆಂದು ಹೇಳಿದ ನೈಯಾಯಿಕನನ್ನು ಕುರಿತು ಶ್ರೀಮದಾಚಾರ್ಯರು "ಅಂಗೀಕೃತಂ ಚೇತ್ಪ್ರಾಮಾಣ್ಯಂ ಸ್ಮೃತ್ಯಾದೇಃ ಕಾ ವಿರುದ್ಧತಾ?" ಎಂದು ಪ್ರಶ್ನಿಸಿದ್ದಾರೆ. (ಸ್ಮೃತ್ಯಾದಿಗಳಿಗೆ ಪ್ರಾಮಾಣ್ಯ ಒಪ್ಪಿದರೆ ಯಾವ ಮೂಲ ಪ್ರಮಾಣ ವಿರೋಧ ಬರುತ್ತದೆ? ಎಂದರ್ಥ) ವೇದವೇದ್ಯರ ವಾಕ್ಯಗಳಿಗೆ ಪ್ರಾಮಾಣ್ಯ ಒಪ್ಪಿದರೆ ಯಾವ ಮೂಲ ಪ್ರಮಾಣ ವಿರೋಧ ಬರುತ್ತದೆ ಎಂದು ನಾವೂ ಕೇಳಬಹುದು. ಪ್ರಮಾಣ ವಿರೋಧವೇ [ನಿರ್ದೋಷ ನಿತ್ಯವೇದಸ್ಥ "ಯಜಮಾನ ಪ್ರಸ್ತರಃ, ಅಂಧೋಮಣಿಮವಿಂದತ" ಇತ್ಯಾದಿ ವಾಕ್ಯಗಳಿಗೆ ಪ್ರಬಲ ಪ್ರತ್ಯಕ್ಷ ವಿರೋಧ ಬಂದದ್ದರಿಂದ ಅವುಗಳಿಗೂ ಬೇರೆ ಅರ್ಥಮಾಡಿದ್ದಾರೆ. ವೇದ ಮೂಲಸ್ಮೃತಿಗೆ ಪ್ರಬಲ ಪ್ರಮಾಣ ವಿರೋಧ ಬರಲಾಗಿ IV 2-21 ಬ್ರ.ಸೂ.ಭಾ. ದಲ್ಲಿ ಸ್ಮೃತಿಗೆ ಅನ್ಯಾರ್ಥ ಮಾಡಲಾಗಿದೆ. "ದಕ್ಷಿಣೇ ಮರಣಾದ್ಯಾತಿ ಸ್ವರ್ಗಂ" ಎಂದು ಸ್ಮೃತಿ ಇತ್ತು. "ನತುಕಾಲ ವಿಶೇಷೋಸ್ತಿ ಜ್ಞಾನಿನಾಂ ನಿಯಮಾತ್ಫಲಂ" ಎಂಬ ಪ್ರಬಲವಾಕ್ಯ ವಿರೋಧ ತಪ್ಪಿಸಿಕೊಳ್ಳಲು ದಕ್ಷಿಣಾಯನ ಬೋಧಕವಾದ ದಕ್ಷಿಣ ಪದಕ್ಕೆ ದಕ್ಷಿಣಾಯನ ರಶ್ಮಿಗಳು ಎಂದು ಲಾಕ್ಷಣಿಕಾರ್ಥ ಮಾಡಿದ್ದಾರೆ. ವೇದಾದಿ ವಿರೋಧ ಬಂದಾಗ ರಾಜಸ ತಾಮಸ ಪುರಾಣಗಳ ಲಿಂಗಾನ್ವೇಷಣಾದಿ ಕಥೆಗಳಿಗೆ ಅಪ್ರಾಮಾಣ್ಯವನ್ನೇ ಹೇಳಲಾಗಿದೆ. ಸಾತ್ವಿಕ ಪುರಾಣಸ್ಥ ಕೃಷ್ಣವಪನ, ಶವದಹನಾದಿ ನಿರೂಪಕ ವಾಕ್ಯಗಳಿಗೆ ದುರ್ಜನ ಮೋಹಕ ತಾತ್ಕಾಲಿಕ ಸೃಷ್ಟಕೇಶವಪನ, ನಿರ್ಮಿತ ದೇಹ ದಹನವೆಂದು ಬೇರ ಅರ್ಥವನ್ನೇ ಮಾಡಲಾಗಿದೆ. ಅನ್ಯಥಾ "ಪೂರ್ಣಮದಃ ಪೂರ್ಣಮಿದಂ" ಇತ್ಯಾದಿ ವೇದ ವಿರೋಧ ಬರುತ್ತದೆ. ಆದ್ದರಿಂದ ಉಪಜೀವ್ಯ ಪ್ರತ್ಯಕ್ಷಾಗಮಗಳ ವಿರುದ್ಧ ಕಾಣುವ ಆಗಮಕ್ಕೆ ಅಪ್ರಾಮಾಣ್ಯ ತಪ್ಪಿದ್ದಲ್ಲ. ತಥಾ ಚ ಪ್ರಮಾಣವಿರುದ್ಧತ್ವವು ಸರ್ವತ್ರಮಾನಿತವಾದ ಪ್ರಾಮಾಣ್ಯ ನಿರ್ಣಾಯಕ ಸಾಧನವು. ಹಾಗಿದ್ದರೂ ಅದಕ್ಕೆ ಪಕ್ಷವೃತ್ತಿತ್ವ ತೋರಿಸುವುದು ಕಷ್ಟವಾದಾಗ ಬೇರೆ ಉಪಾಯಗಳೂ ಆದರಿಸಲ್ಪಡುತ್ತವೆ. ಆದ್ದರಿಂದ ನಿತ್ಯತ್ವ, ಆಪ್ತಿಮೂಲತ್ವ, ಶಿಷ್ಟಪರಿಗೃಹೀತತ್ವ, ಸಫಲ ಪ್ರವೃತ್ತಿಜನಕತ್ವಾದ್ಯನೇಕ ಅಪ್ರಾಮಾಣ್ಯ ಶಂಕಾ ನಿವರ್ತಕ ಯುಕ್ತಿಗಳಿವೆ. ಪ್ರಮಾಣಾ ವಿರುದ್ಧತ್ವವು ಎಲ್ಲದಕ್ಕಿಂತಲೂ ಶ್ರೇಷ್ಟವು. ವೇದದಲ್ಲಿ ವೈಭವದಿಂದ ಅನೇಕ ಉಪಾಯಗಳು ಕಾಣುತ್ತವೆಂದು ಬೃ.ಭಾಷ್ಯದಲ್ಲಿ ಹೇಳಿದ್ದನ್ನು ಮೂರನೆಯ ಅಧ್ಯಾಯದಲ್ಲಿ ಉದಾಹರಿಸಲಾಗಿದೆ. ॥ ಗೀತಾಭಾಷ್ಯದಲ್ಲಿ ಅನಾದಿಕಾಲ ಪರಿಗ್ರಹಸಿದ್ಧತ್ವಾತ್ । ಅತಃ ಪ್ರಾಮಾಣ್ಯಂ ಶ್ರುತೇ" ಎಂಬ ಉಪಾಯ ತೋರಿಸಿದ್ದಾರೆ. ಯಾವುದು ಇರಲಿ ಬಿಡಲಿ "ಪ್ರಮಾಣವಿರುದ್ಧತ್ವವನ್ನು ತೋರಿಸಲು ಶಕ್ಯವಾದರೆ ಅದೊಂದೇ ಸಾಕು] ಪ್ರಾಮಾಣ್ಯ ವಿಘಾತಕ. ಪ್ರಮಾಣ ವಿರೋಧವನ್ನು ತೋರಿಸಿಯೇ ಶಂಕಾಮಾಡಬೇಕು. ಅಶ್ವತ್ಥಾಮರು ಅಪಾಂಡವಾಸ್ತ್ರ ಪ್ರಯೋಗ ಮಾಡಿದ ಕಾಲದಲ್ಲಿ, ಯುಧಿಷ್ಠಿರನಿಗೆ ದ್ಯೂತಕಾಲದಲ್ಲಿ, ಅದೇ ಕಾಲದಲ್ಲಿ ಭೀಷ್ಮಾದಿಗಳಿಗೂ ಬುದ್ಧಿದೋಷ ಬಂದಿತ್ತೆಂದು ಪ್ರಮಾಣವು ದೃಷ್ಟವಾದ್ದರಿಂದ ಅಂಗೀಕೃತವಾಗಿದೆ. ಮ.ತಾ.ನಿ. XXI

325, 335 ರಲ್ಲೂ XXVIII 189 ರಲ್ಲೂ ಸರ್ವಜ್ಞಾಚಾರ್ಯರು ಹಾಗೆ ಪ್ರತಿಪಾದಿಸಿದ್ದಾರೆ. ಸುಮ್ಮ ಸುಮ್ಮನೇ ಯುಧಿಷ್ಠಿರಾದಿಗಳಿಗೆ ಅನ್ಯಾಯ ಬುದ್ಧಿ ಬಂತೆಂದು ಶಂಕಿಸಿಲ್ಲ. ಪ್ರಕೃತದಲ್ಲಿ ವಾ.ಗು.ಚ. VIII 16 “ವೇದವೇದ್ಯಾಖ್ಯ ಯೋಗೀಂದ್ರಃ ಪ್ರಿಯತಾಂ ಯತಿರಾಡೃಜುಃ” ಎಂಬಲ್ಲಿ ಋಜುಗಳೆಂದು ಪ್ರಸಿದ್ಧರಾದ ಶ್ರೀ ವೇದವೇದ್ಯರ ಐತಿಹ್ಯ ವಿಷಯದಲ್ಲಿ ಅಂಥಾ ವಿರೋಧಿ ಪ್ರಮಾಣವು ಯಾವುದೂ ಇಲ್ಲ.[ ವೇದವೇದ್ಯರ ಚರಿತ್ರೆ ವಾ.ಗು.ಚ. VI 51°55, VII 1-3 ಮುಂತಾದ ಶ್ಲೋಕಗಳಲ್ಲಿವೆ. ಸ್ವಾ.ವೃ.ಆ XXI 99 “ತಸ್ಮಾನ್ಮತ್ಸಾಮ್ಯಮೇವೇಹ ಚಾದತ್ಸ್ವ ಸುತ ಸಾತ್ವಿಕ| ಮತ್ಸಾಮ್ಯೇಚತ್ವಯಾ ಪ್ರಾಪ್ತೇತ್ವತ್ಸಮೋ ನಾಸ್ತಿಸತ್ಸುಚ ” ಎಂಬ ಶ್ಲೋಕ ದಲ್ಲಿ II 39 ರಲ್ಲೂ ಶ್ರೀ ವೇದವೇದ್ಯರು ಋಜುಗಳೆಂದೇ ಸೂಚಿತವಾಗಿದೆ. ಆಖ್ಯಾನದ ಕೊನೆಯ ಎರಡು ಅಧ್ಯಾಯಗಳು ಅವರ ಸ್ತುತಿಗೇ ಮೀಸಲಾಗಿದೆ ] ಆದ್ದರಿಂದ ವಾದಿರಾಜ ಋಜುತ್ವದಲ್ಲಿ ಅವರಿಂದ ಸ್ಥಾಪಿತವಾದ ಐತಿಹ್ಯವು ಪ್ರಥಮ ಪ್ರಮಾಣವು.

ಐದನೇ ಅಧ್ಯಾಯ ಮುಗಿಯಿತು.

## ಅಧ್ಯಾಯ 6

### ದ್ವಿತೀಯ ಪ್ರಮಾಣ-ಕರ್ನಾಟಕ ಹಾಡುಗಳು

1.ಪೂಜ್ಯ ವಾದಿರಾಜ ಗುರುಗಳು ವೃಂದಾವನ ಪ್ರವೇಶ ಮಾಡಿದಾಗಲೇ ಪುರಂದರದಾಸರ ಪುತ್ರನಾದ ದಾಸಶ್ರೇಷ್ಠನು ಶೋಕದಿಂದ ಹಾಡಿದನು :

i. 'ಕಂಡೆ ಕಂಡೆ ರಾಜರ ಕಂಡೆ ಪಂಚವೃಂದಾವನದಿ ಮೆರೆಯುವ ಋಜು ಗಣೇಶ' ಇತ್ಯಾದಿ ಪದ್ಯವು ವಾ.ಗು. ಕೀರ್ತನ ಮಂಜರಿ ಪುಟ 10 ರಲ್ಲಿದೆ. ವೃಂದಾವನ ಪ್ರವೇಶ ವರ್ಷದಲ್ಲಿಯೇ ರಚಿಸಲ್ಪಟ್ಟಿತೆಂದು ತಿಳಿಯಲು ಬಾಧಕವಿಲ್ಲ. ಪುರಂದರದಾಸರು “ಚಿತ್ತೈಸಿದವ್ಯಾಸರಾಯ” ಎಂದು ವ್ಯಾಸತೀರ್ಥರ ಮೇಲೆ ಪದ ಬರೆದರು. ಪುತ್ರರು ವಾದಿರಾಜರ ಮೇಲೆ ಪದ ರಚಿಸಿದರು. ಈ ಪದ್ಯವು ಪುರಂದರದಾಸರ ಮಗ ಬರೆದದ್ದು.

ಈ ಪದ್ಯವು ಕೊಳ್ಳೇಗಾಲದಲ್ಲಿ ನಾನು ಅಲ್ಲಿಗೆ ಶ್ರೀ ಸತ್ಯಧ್ಯಾನತೀರ್ಥರೊಂದಿಗೆ ಹೋಗಿದ್ದಾಗ ನರಸಿಂಗರಾವ್ ಎಂಬ ದಾಸಕೂಟದ ಗೃಹಸ್ಥರು ತನ್ನ ಮನೆಯಲ್ಲಿದ್ದ ಹಸ್ತಲಿಖಿತ ದೇವರ ನಾಮಗಳ ದೊಡ್ಡ ಪುಸ್ತಕ(ಸುಮಾರು ಸಾವಿರ ಪುಟ.)ದಲ್ಲಿ ಬರೆಯಲ್ಪಟ್ಟಿದ್ದನ್ನು ನನಗೆ ತೋರಿಸಿ ಆ ಹಾಡಿನ ಪ್ರತಿಯನ್ನು ಮಾಡಿ ಕೊಟ್ಟರು. ನಾನು ಆಗಲೇ “ಪುರಂದರದಾಸರು 1564ರಲ್ಲಿ ಸ್ವರ್ಗಸ್ಥರಾದರು. ಅವರು 1600 ರಲ್ಲಿ ಆದ ಪಂಚವೃಂದಾವನದ ವಿವರ ಬರೆಯುವುದು ಹೇಗೆ?” ಎಂದು ಕೇಳಿದೆನು. ಅವರು ಈ ಮುದ್ರಿಕೆಯು ವಿಶೇಷಣಯುಕ್ತವಾಗಿದೆ. ದಾಸಾರ್ಯರ ನಾಲ್ಕು ಮಕ್ಕಳಲ್ಲಿ ಎರಡನೇ ಪುತ್ರ ಗುರುರಾಯ ಅವನು ಬರೆದಿರಬೇಕೆಂದರು. ಅವರು ಹಾಗೆ ಹೇಳಿದ್ದರಿಂದ ಗುರು ಪುರಂದರವಿಠಲ ಎಂದು ಅವರ ಅಂಕಿತವೆಂದು ನನ್ನ ಮನಸ್ಸಿನಲ್ಲಿ ನಿರೂಢವಾಯಿತು. ಆದರೆ ಈಗ ಎಲ್ಲಾ ಮುದ್ರಿತ ಪುಸ್ತಕಗಳನ್ನು ನೋಡಲಾಗಿ “ನಿಜ ಪುರಂದರ ವಿಠಲೇಶನ” ಎಂದಿದೆ. ಅವರಿಂದ ವಿವಕ್ಷಿತ ವಿಶೇಷಣವು "ನಿಜ" ಎಂದೋ ಅಥವಾ ಅವರು ಗುರು, ನಿಜ ಎಂಬ ಎರಡರಲ್ಲಿ ಯಾವುದನ್ನಾದರೂ ಉಪಯೋಗಿಸುತ್ತಿದ್ದರೂ ನಾನು ನಿಶ್ಚಯಿಸಲಾರೆನು. ಆದರೆ “ವರದಪ್ಪನೇ ಸೋಮ, ಗುರುರಾಯ ದಿನಕರ, ಮಧ್ವಪತಿ ಭೃಗು, ಅಭಿನವನೇ ಜೀವ”

[ಹಾಡಿನ ಭಾಗವು ಯಾರೋ ವೃದ್ಧಳಿಂದ ಶ್ರೀ ಶ್ರೀ ಸಾಗರ ಕಟ್ಟೆಯ ಸ್ವಾಮಿಗಳ ಸಮ ಕ್ಷಮದಲ್ಲಿ ನನಗೋಸ್ಕರ ಸುಸ್ವರದಿಂದ ಹಾಡಲ್ಪಟ್ಟಿತು. ಸಂಪೂರ್ಣ ಪದವನ್ನು ನಾನು ಕೇಳಲಿಲ್ಲ. ಪುಟ. 206 ಶ್ರೀ 'ಹರಿಭಜನ ಪದ್ಧತಿ' ಹರಿದಾಸ ರತ್ನಂ ಗೋಪಾಲದಾಸರಿಂದ ಪ್ರಕಾಶಿತವಾದ್ದು. ಅದರಲ್ಲಿ ಪೂರ್ತಿ ಇದೆ.

ಇತ್ಯಾದಿ ವಿಜಯದಾಸಾರ್ಯ ಪದದಲ್ಲಿ ಹೇಳಲ್ಪಟ್ಟ ನಾಲ್ವರು ಪುತ್ರರ ಮಧ್ಯದಲ್ಲಿ ಯಾರೋ ಒಬ್ಬ ಮಹಾತ್ಮನಿಂದ ಬರೆಯಲ್ಪಟ್ಟಿದ್ದು. ಹಾಡು ಸಂಪ್ರದಾಯದಿಂದ ಬಂದದ್ದು. ಸರ್ವ ಪ್ರಮಾಣಾವಿರುದ್ಧ. ಮಾನ್ಯತಮ. ಶ್ರೀ ವಾದಿರಾಜರ ಋಜುತ್ವ ವಿಷಯದಲ್ಲಿ ಪ್ರಮಾಣವೇ. ಅಪೂರ್ವತಾ ಎಂಬ ತಾತ್ಪರ್ಯನಿರ್ಣಾಯಕ ಲಿಂಗದಿಂದ ಅದು ನಿಶ್ಚಿತವಾದ ತಾತ್ಪರ್ಯಾರ್ಥವುಳ್ಳದ್ದು. ಹಾಗೆಯೇ 1600 ರಲ್ಲಿ ವೇದವೇದ್ಯರು ಪ್ರವರ್ತಿಸಿದ ಸಂಪ್ರದಾಯ ಬಿರುದಾವಳಿ ಕೀರ್ತನಗಳ ಸಂವಾದದಿಂದ ಸುದೃಢ ಪ್ರಾಮಾಣ್ಯ ನಿಶ್ಚಯಜನಕವೂ ಆಗಿದೆ. 1630-42ರ ಕಾಲದಲ್ಲಿ ರೂಪ ತಾಳಿದ ಸ್ವಾಪ್ನವೃನ್ದಾವನಾಖ್ಯಾನಾದಿಗಳು ಉತ್ತರ ಕಾಲೀನ ಸಂವಾದ ರೂಪವಾಗಿಯೂ ಆಗಿವೆ.

ii. ಶ್ರೀ ವಿಜಯದಾಸರ (1687-1755) ಪದ್ಯವು ಪುಟ 11 ವಾ.ಗು. ಕೀರ್ತನ ಮಂಜರಿಯಲ್ಲಿ ಮುದ್ರಿತವಾಗಿದೆ. ಆ ದೇವರನಾಮವು ಜಂಖಂಡಿ ವಾದಿರಾಜಾಚಾರ್ಯರಿಂದ (1827-96) ಉಪಾಸನಾಕಾಲವಲ್ಲಿ ಸರ್ವದಾ ಕೀರ್ತಿಸಲ್ಪಡುತ್ತಿತ್ತು. ಅನಂತರದಲ್ಲೂ "ತಂದೆವರದ ಗೋಪಾಲದಾಸ"ರಿಂದ (1900-1933) ಹಾಗೆಯೇ ಉಪಾಸನೆಗೆ ಸಾಧನೆಯಾಗಿತ್ತೆಂದು ಹರಿಭಕ್ತ ವಿಜಯ I ಪುಟ 221, 241, 273 ರಲ್ಲಿದೆ. ಅದ್ಯಾಪಿ ಆ ಹಾಡು ಭಕ್ತರಿಂದ ಕೀರ್ತಿಸಲ್ಪಡುತ್ತಿದೆ. ಈ ಪದ್ಯದಲ್ಲಿ ವಾದಿರಾಜರೆನುತ ನಿಜವಾಗಿ ಬೊಮ್ಮಾಂಡ ಪುರಾಣ ಸಾಧಕದಿಂದ ಅಜನಪದಸಲುವುದು ಲೇಶ ಸಂಶಯಬ್ಯಾಡಿ" ಎಂದು ಬ್ರಹ್ಮಾಂಡ ಪುರಾಣವೂ ಪ್ರಮಾಣವಾಗಿದೆ ಎಂದು ಹೇಳಲ್ಪಟ್ಟಿದೆ. ಎಂಟು ಹಾಡಿನ ಈ ಸುಳಾದಿಯ ಕೊನೆಯ ಆದಿತಾಳ ಪದದಲ್ಲಿ "ವಾದಿರಾಜ ಮುನಿಯು ಸಾಮಾನ್ಯನೆಂದು ಎಣಿಸಿದ ನರರಿಗೆ | ಘನವಾದ ಶಿಕ್ಷೆಯೀವನು | ಇನಸೂನು ಕೋಪದಿಂದ" - [XVII 16; XX 28-29, 81-87; XXI 28, 35, 37. XXII 25, XIV 49 52. XVII 38-39. ಶ್ಲೋಕ ಗಳಲ್ಲೂ ಇಂಥ ಮಹಿಮೆಯ ವಚನಗಳಿವೆ] ಎಂದು ಸ್ವಾ.ವೃಂ.ಆ. XVIII 35-36 ರಲ್ಲಿ ಹೇಳಿದ ಮಹಿಮೆಯೇ ಇದೆ.

iii. ಶಕ್ತಿಯಲ್ಲಿ ತಿಮ್ಮಣ್ಣ ಎಂದು ವಿಜಯದಾಸರಿಂದಲೇ ಶ್ಲಾಘಿತರಾದ ಅವರ ಶಿಷ್ಯರೂ ಆದ ವೇಣುಗೋಪಾಲವಿಠಲ ಎಂಬ ಮುದ್ರಿಕೆಯ ತಿಮ್ಮಣ್ಣ ದಾಸರು (ವಾದಿರಾಜನೇ ಪಾದಕ್ಕೆರಗಿ ನಾ ಎಂದ ಆರಂಭಿಸಿ... ಘನ್ನ ಋಜುಗಣದೊಳಗೆ ಮಾನ್ಯನಾಗಿಹ ದ್ವಿಜಕುಲರನ್ನ ನಂಬಿದೆನೋ ನಿನ್ನ" ಎಂದು ಮುಗಿದಿರುವ ಹಾಡಿನ ಕರ್ತರು. ಅವರ ಹಾಡು ವಾ.ಗು. ಕೀರ್ತನಾಮಂಜರಿ ಪುಟ 17-19 ರಲ್ಲಿ ಮುದ್ರಿತವಾಗಿದೆ. ಪ್ರಾಯಶಃ ಕ್ರಿಸ್ತಾಬ್ದ 1730 ರಲ್ಲಿ ಬರೆದದ್ದು. ಆ ಹಾಡು ತಿಮ್ಮಣ್ಣ ದಾಸರಿಗೆ ಅವರ ಪೂರ್ವ ಜನ್ಮ ಸ್ಮೃತಿ ಇತ್ತೆಂದು ತೋರಿಸುತ್ತದೆ. ಹೀಗೆ ಅವರ ಜ್ಞಾನಿತ್ವಕ್ಕೆ ನಿದರ್ಶನ ಕೊಡುತ್ತದೆ. ವಾದಿರಾಜರಿಗೆ "ಶ್ರೀ ಭಾರತೀರಮಣನಂತೆ" ಎಂದು ಸಾಮ್ಯ ತೋರಿಸಿ ಋಜುತ್ವವನ್ನು ಬೋಧಿಸುತ್ತದೆ. ಚಂದ್ರಿಕಾಚಾರ್ಯರ ಮಠದಲ್ಲಿ ವಾದಿರಾಜರು ಶಿಷ್ಯತ್ವ ವಹಿಸಿದ್ದನ್ನು ಆರನೆಯ

| |
|---|
| ನುಡಿಯಲ್ಲಿ ನಿರೂಪಿಸುತ್ತದೆ. ಹೀಗೆ ಬಹು ಕಾರ್ಯಕಾರಿಯಾದ ಹಾಡು, ವಿಜಯದಾಸರ ಕಾಲದ್ದೆ. ತಿಮ್ಮಣ್ಣ ದಾಸರು ಆದವಾನಿಯ ರಾಜಸ್ಥಾನದಲ್ಲಿ ಮಂತ್ರಿಗಳಾಗಿಯೂ ಇದ್ದರೆಂದು ಕರ್ಣಾಟಕ ಭಕ್ತವಿಜಯ 594-7 ಪುಟಗಳಲ್ಲಿದೆ. ಈ ಹಾಡು ಸಾಂಪ್ರದಾಯಿಕವೇ. |
| iv. ಶ್ರೀ ಜಗನ್ನಾಥದಾಸಾರ್ಯರು ಸುಪ್ರಸಿದ್ಧ ಪಂಡಿತರು. (1728 1809) "ವಾದಿರಾಜ ಅಸ್ಮದ್ಗುರು ವಾದಿರಾಜ" ಇತ್ಯಾದಿ ಕೀರ್ತನಕಾರರು. ವಿಜಯದಾಸರ ಪ್ರಶಿಷ್ಯರು. ಜಗನ್ನಾಥದಾಸರೂ ಅವರ ಶಿಷ್ಯರೂ ಋಜುತ್ವ ಪಕ್ಷಪಾತಿಗಳು. ವಾದಿರಾಜ ಗುರುಗಳ ಅನುಗ್ರಹದಿಂದಲೇ ಹರಿಕಥಾಮೃತಸಾರ ಬರೆದವರೆಂದು ಜಗನ್ನಾಥದಾಸರ ಶಿಷ್ಯ ಕಮಲಾಪತಿದಾಸರ ಹೇಳಿಕೆ ಇದೆ. ಇಂಥ ಜಗನ್ನಾಥದಾಸರು "ಪೂತಾತ್ಮ ಜಗನ್ನಾಥವಿಠಲನ ಖ್ಯಾತಿಯ ಸ್ತುತಿಸುವ ಶ್ವಾಸನಿಯಾಮಕ" ಎಂದು ವಾದಿರಾಜ ಗುರುಗಳನ್ನು ಸ್ತುತಿಸಿದ್ದಾರೆ. ಋಜುತ್ವ ಮಂಡನ ಪುಟ್ಟ 5 ವಾ.ಗು. ಸಾರ್ವಭೌಮರು ಪುಟ 314ರಲ್ಲಿದೆ. 'ವಾದಿರಾಜ' ಎಂಬ ದೇವರನಾಮದಲ್ಲಿ ಲಾತವ್ಯರೇ ರುಕ್ಮಿಣಿ ಪತ್ರವನ್ನು ಶ್ರೀಕೃಷ್ಣನಿಗೆ ಕೊಟ್ಟರೆಂದೂ ಹೇಳಿದ್ದಾರೆ. ಆ ಹಾಡು ಪುಟ 192 ಹರಿಭಜನ ಪದ್ಧತಿಯಲ್ಲಿದೆ; ಪುಟ 7 ತಿದ್ದುಪಡಿಗೆ ಸೇರಿದೆ: "ಧಾತ್ರಿಪಾಲಕನ ಪುತ್ರಿಯು ಬರೆದಾ \| ಪತ್ರವ ಲಕುಮಿಕಳತ್ರನಿಗಿತ್ತೆ ‖ 14 ‖" ಹೀಗೆ ಆನುಪೂರ್ವಿ. |
| v. ಕಮಲಾಪತಿ ವಿಠಲದಾಸರು 'ಭಾವಿ ಭಾರತೀಪತಿ ವಾದಿರಾಜರ [ದಾಸರಪದ ಸಂಗ್ರಹ ಭಾಗ II ಪುಟ 113 ಶ್ರೀಮನ್ಮಧ್ವ ಸಿದ್ಧಾಂತ ಗ್ರಂಥಾ ಲಯ-ಉಡುಪಿ] ಎಂದು ಸ್ತುತಿಸಿರುವವರು ಸಾಕ್ಷಾಜ್ಜಗನ್ನಾಥದಾಸರ ಶಿಷ್ಯರು. |
| vi. ಹಾಗೆಯೇ ಪ್ರಾಣೇಶದಾಸರೂ ಸಾಕ್ಷಾಚ್ಛಿಷ್ಯರೇ. 'ಲಾತವ್ಯ ಯತೀಂದ್ರರ[ದಾಸರಪದ ಸಂಗ್ರಹ ಭಾಗ II ಪುಟ 113 ಶ್ರೀಮನ್ಮಧ್ವ ಸಿದ್ಧಾಂತ ಗ್ರಂಥಾ ಲಯ-ಉಡುಪಿ] ಎಂದು ಗುರುರಾಜರನ್ನು ಸ್ತುತಿಸಿದ್ದಾರೆ. |
| vii. ವೆಂಕಟದಾಸರೂ ಜ್ಞಾನಿಗಳೆಂದು ಪ್ರಸಿದ್ಧರಾದವರು. "ಭಾವಿಭಾರತೀವರನೇ' - ಎಂದು ಗುರುರಾಜರನ್ನು ಸ್ತುತಿಸಿದ್ದಾರೆ. ಪುಟ 9 ಋಜುತ್ವಮಂಡನ. |
| viii. ಇತರ ದಾಸರಗಳು ಇನ್ನೂ ಹದಿನಾರು ಜನರು ತಮ್ಮ ಕವಿತೆಯಲ್ಲಿ ಹೀಗೆ ಕೊಂಡಾಡಿರುವುದನ್ನು ವಾದಿರಾಜ ಗುರುವರ ಕೀರ್ತನಮಂಜರಿಯಲ್ಲಿ ನೋಡಬಹುದು. ಇಷ್ಟೇ ಅಲ್ಲದೆ |
| ix. ವ್ಯಾಸತೀರ್ಥರೂ 'ನಿನಗೆ ಎಣೆಗಾಣೆ' ಎಂದು ಸ್ತುತಿಸಿದ್ದಾರೆ. ಅರ್ಥ ಗರ್ಭಿತ ಮಾತು ಅವರ ಹಾಡು ವಾ.ಗು. ಕೀರ್ತನಮಂಜರಿ ಪುಟ 9 ರಲ್ಲಿದೆ. ದಾಸಕೂಟದವರೆಲ್ಲಾ ವಾದಿರಾಜ ಋಜುತ್ವದ ಉಪಾಸಕರೇ. |
| 2.ತತ್ಕೃತತ್ವ ಪ್ರಸಿದ್ಧಿ, ಪರಂಪರೆಯಿಂದ ಪಠ್ಯಮಾನತ್ವ ಎಂಬ ಗುಣಯುಕ್ತವಾಗಿ ನಡೆದುಕೊಂಡು ಬಂದಿರುವ ಈ ಪದಗಳಿಗೆ ಪ್ರಾಮಾಣ್ಯವು ಹೇಗೆ ಎಂದರೆ ಮಧ್ವಾಚಾರ್ಯರ ಸಿದ್ಧಾಂತದಲ್ಲಿ ಕರಣ ಪ್ರಾಮಾಣ್ಯಕ್ಕೆ ಉತ್ಪತ್ತಿಯಲ್ಲಿ 'ಸ್ವತಸ್ತ್ವ ಒಪ್ಪಿದ್ದಾರೆ. ಆ ಸ್ವತಸ್ವ ಔತ್ಸರ್ಗಿಕ. ಬಾಧಕವಿದ್ದರೆ ತ್ಯಾಜ್ಯವಾದದ್ದು; ಆದ್ದರಿಂದಲೇ ಚಾರ್ವಾಕಾಗಮಕ್ಕೆ ಪ್ರಾಮಾಣ್ಯ ಒಪ್ಪಲಿಲ್ಲ. ಚಾರ್ವಾಕಾಗಮಕ್ಕೆ ಬಾಧಕವಿದ್ದುದರಿಂದ ಅದು ಅಪವಾದ ರೀತಿಯಿಂದ ಕೆಟ್ಟ ಶಾಸ್ತ್ರವಾಯಿತು. ಪ್ರಕೃತ ದಾಸರ ಪದಗಳು ಸರ್ವ ಶುಭ ಮೂಲ ಪ್ರಮಾಣಗಳಿಗೆ ಅವಿರುದ್ಧವಾಗಿವೆ. ಅವುಗಳಲ್ಲಿ |

ಉಕ್ತವಾದ ವಿಷಯ ಸತ್ಯತ್ವಕ್ಕೆ ಬಾಧಕವೇ ಇಲ್ಲ. ಅಷ್ಟೇ ಅಲ್ಲ. ಐತಿಹ್ಯ, ವಾ.ಗು.ಚ., ಆಖ್ಯಾನ, ತತ್ಸಂಬಂಧಿ ಗ್ರಂಥಗಳು, ಆಖ್ಯಾನೋಪದೇಷ್ಟೃ ಶ್ರೀ ವಿಶ್ವಪ್ರಿಯತೀರ್ಥರ ಚರ್ಯೆ, ವಿಶ್ವಪ್ರಿಯಲೀಲಾವಿಲಾಸದ್ವಯ, ಜಂಖಂಡಿ ವಾದಿರಾಜಾಚಾರ್ಯರ ಋಜುತ್ವ ವಿರೋಧಿ ಕಪೋಲಚಪೇಟಕಾ, ಮೃತ್ತಿಕಾದ್ರೋಹಿ ಗರ್ವನಿರ್ವಾಪಣ, ರಘುಪ್ರವೀರ ತೀರ್ಥರ ಪ್ರಾಮಾಣ್ಯ ಬೋಧಿನೀ ಇತ್ಯಾದಿಗಳು ಸಂವಾದಿಗಳಾಗಿಯೂ ಇವೆ.

3. ಆದರೆ ಕೆಲವರು "ಕನ್ನಡ ಹಾಡುಗಳಿಗೆ ಪ್ರಾಮಾಣ್ಯ ಹೇಳಲೇಕೂಡದು. ಅವುಗಳಿಗೂ ಪ್ರಾಮಾಣ್ಯ ಒಪ್ಪಿದರೆ ಅವುಗಳಿಗೆ ವೇದಸಾಮ್ಯ ಬಂದು ಬಿಡುತ್ತದೆ. ಅವುಗಳನ್ನು ಆಧಾರವಾಗಿಟ್ಟುಕೊಂಡು ಪ್ರಮೇಯ ನಿರ್ಣಯವನ್ನು ಮಾಡಲೇ ಕೂಡದು. ಕಿಂಚ ಪದಗಳಲ್ಲಿ ಹೇಳಲ್ಪಟ್ಟಿರುವ ವಾದಿರಾಜ ಋಜುತ್ವವು ಯೋಗಿ ಪ್ರತ್ಯಕ್ಷ ಮೂಲಕ ತಿಳಿಯಿತೆಂದು ಹೇಳಲಾಗುವುದಿಲ್ಲ. ವಿಜಯದಾಸಾದಿಗಳ ವಚನಗಳು ಯಾಜ್ಞವಲ್ಕ್ಯಾದಿಗಳ ವಚನಗಳಂತೆ ನಿಸ್ಸಂಶಯ ಜ್ಞಾನಜನಕಗಳೆಂದು ಒಪ್ಪಲು ಅರ್ಹವಲ್ಲ. ದಾಸಭಕ್ತರ ಪಾಂಡಿತ್ಯವು ಸಂಪ್ರತಿಪನ್ನವಲ್ಲ." ಇತ್ಯಾದಿ ತುಚ್ಛ ಪೂರ್ವಪಕ್ಷವನ್ನು ಮಾಡುತ್ತಾರೆ.. ದ್ವೈತ ಸಿದ್ಧಾಂತವೇನೆಂದರೆ ಯಾವ ಭಾಷೆಯಲ್ಲೇ ಆಗಲಿ, ಯಾರಿಂದಲೇ ಆಗಲಿ, ಉಕ್ತವಾದ ವಿಷಯವು ಅಬಾಧಿತವಾಗಿದ್ದರೆ ಆ ವಾಕ್ಯಗಳ ಪ್ರಾಮಾಣ್ಯವು ಅಂಗೀಕರಿಸಲ್ಪಡಲೇಬೇಕು. ಪ್ರಾಮಾಣ್ಯವೆಂದರೆ ಹೇಳಿದ್ದು ಸುಳ್ಳಲ್ಲ ಎಂಬ ಅಪ್ರಾಮಾಣ್ಯಾಭಾವರೂಪ. ಅದಕ್ಕೆ ಹೆಚ್ಚು ಸುಳಲ್ಲ, ಕಮ್ಮಿ ಸುಳ್ಳಲ್ಲ ಎಂದು ತಾರತಮ್ಯವಿಲ್ಲ. ಅಸತ್ಯತ್ವಾಭಾವರೂಪ ಸತ್ಯತ್ವದಲ್ಲಿ ಹೇಗೆ ತಾರತಮ್ಯವಿಲ್ಲವೋ ಹಾಗೆಯೇ ವಾಕ್ಯದ ಅಪ್ರಾಮಾಣ್ಯಾಭಾವರೂಪ ಪ್ರಾಮಾಣ್ಯದಲ್ಲಿ ತಾರತಮ್ಯವಿಲ್ಲ. "ನಹ್ಯಭಾವ ಸ್ತಾರತಮ್ಯನ್ ಎಂದು ಸುಧಾವಚನವೂ ಇದೆ. ಆದ್ದರಿಂದ 'ಪೆಟ್ಟಿಗೆಯಲ್ಲಿ ತಂಬಿಗೆ ಇದೆ' ಎಂಬ ಹುಡುಗನ ವಾಕ್ಯಕ್ಕೂ, ಪೆಟ್ಟಿಗೆಯಲ್ಲಿ ತಂಬಿಗೆ ಇದೆ ಎಂಬ ಯುಧಿಷ್ಠಿರನ ವಾಕ್ಯಕ್ಕೂ ಯಾಥಾರ್ಥ್ಯರೂಪ ಪ್ರಾಮಾಣ್ಯ ವಿಷಯದಲ್ಲಿ ತಾರತಮ್ಯವಿಲ್ಲ. ಏಕೆಂದರೆ ಸತ್ಯತ್ವದಲ್ಲಿ ತಾರತಮ್ಯವಿಲ್ಲ. ಮನಸ್ಸಿನಲ್ಲಿ ಹುಟ್ಟಿದ ಪ್ರಾಮಾಣ್ಯ ನಿಶ್ಚಯರೂಪ ಜ್ಞಾನದಲ್ಲಿ ಮಾತ್ರ ಸಾಮಾನ್ಯ ನಿಶ್ಚಯ, ಸುದೃಢತರ ನಿಶ್ಚಯ, ಹೆಚ್ಚು ನಿಶ್ಚಯ, ದಾರ್ಢ್ಯತಮ ನಿಶ್ಚಯ, ಹೀಗೆ ಆಧಿಕ್ಯ ತಾರತಮ್ಯವಿದೆ. ವೇದಮಹಿಮೆ ತಿಳಿದವರಿಗೆ ವೇದವಾಕ್ಯ ಜನ್ಯ ಜ್ಞಾನದಲ್ಲಿ ಅತಿ ಸುದೃಢತಮ ನಿಶ್ಚಯ ಹುಟ್ಟುತ್ತದೆ. ಆದರೂ ಪ್ರಮಾಣ ಅವಿರುದ್ಧವೆಂದು ಜ್ಞಾತವಾದ "ನಂಬಿ ಕೆಟ್ಟವರಿಲ್ಲವೋ ರಂಗಯ್ಯನ", "ನೃಸಿಂಹ ಪಾದಂ ಭಜತಾಕುತೋಭಯಂ", ಯಸ್ಯ ಪ್ರಸಾದಾತ್ಪರಮಾರ್ತಿರೂಪಾದ ಸ್ಮಾತ್ಸಂಸಾರಾನ್ಮುಚ್ಯತೇನಾಪರೇಣ, ನಾರಾಯಣೋಽಸೌಪರಮೋವಿಚಿಂತ್ಯಃ ಎಂಬ ಮೂರು ವಾಕ್ಯಗಳಲ್ಲೂ ಅಪ್ರಾಮಾಣ್ಯಾ ಭಾವರೂಪ ಅಬಾಧಿತಾರ್ಥಕತ್ವವೆಂಬ ಪ್ರಾಮಾಣ್ಯವಿದೆ ಎಂಬ ವಿಷಯದಲ್ಲಿ ಸ್ವಲ್ಪವೂ ವೈಷಮ್ಯವಿಲ್ಲ. ಆದ್ದರಿಂದ ಮೂಲಪ್ರಮಾಣಾ ವಿರೋಧವು 'ಪದ'ಗಳಿಗೆ ಇದೆ ಎಂದು ತಿಳಿದ ಪಂಡಿತರಿಗೆ ಆ ಅವಿರುದ್ಧ ಹಾಡುಗಳಲ್ಲೆಲ್ಲಾ, ಅಂಥ ಅವಿರುದ್ಧ ಸಂಸ್ಕೃತ ವಾಕ್ಯಗಳಲ್ಲಿ ಹೇಗೋ ಹಾಗೆ ಪ್ರಾಮಾಣ್ಯನಿಶ್ಚಯವು ಹುಟ್ಟುತ್ತದೆ. ಪ್ರಾಮಾಣ್ಯ ನಿಶ್ಚಯದ ದಾರ್ಢ್ಯದಲ್ಲಿ ಸ್ವಲ್ಪ ತಾರತಮ್ಯ ಇದ್ದರೆ ಇದ್ದು ಕೊಳ್ಳಲಿ, ನಿಃಸಂಶಯತೆಯ ರೂಪದಿಂದ ಅನಿಶ್ಚಯಾ ಭಾವರೂಪ ಅವಧಾರಣ ಎನ್ನಿಸಿಕೊಳ್ಳುವುದರಲ್ಲಿ ಸಾಧ್ಯವಿದೆ. ಹೇಗೆ ತತ್ವಸಂಖ್ಯಾನವೂ ಪ್ರಮಾಣ, ಗೀತಾಭಾಷ್ಯ ಪ್ರಮಾಣ,

ಬ್ರಹ್ಮಸೂತ್ರ ಭಾಷ್ಯಾದಿಗಳೂ ಪ್ರಮಾಣ, ಅನುವ್ಯಾಖ್ಯಾನ ಸುಧಾದಿಗಳೂ ಪ್ರಮಾಣವೂ ಹಾಗೆ ತಿಳಿಯಬೇಕು. ಆದ್ದರಿಂದ ಕನ್ನಡ ಗ್ರಂಥಕ್ಕೆ ಪ್ರಾಮಾಣ್ಯವಿಲ್ಲವೆಂಬ ಪೂರ್ವಪಕ್ಷ ಸರಿಯಲ್ಲ.

4. ಕಿಂಚ ವಿಜಯ ದಾಸಾದಿಗಳ ಯೋಗಿತ್ವ ವಿಷಯದಲ್ಲೂ ನಿಃಸಂಶಯ ನಿಶ್ಚಯವು ಇರುತ್ತದೆ. ಅವರುಗಳು ಅಪರೋಕ್ಷ ಜ್ಞಾನಿಗಳು. ಅವರು ಅಪರೋಕ್ಷಿಗಳೆಂಬ ವಿಷಯದಲ್ಲಿ ಮಾಧ್ವ ಸಮಾಜದಲ್ಲಿ ಸುದೃಢ ನಿಶ್ಚಯವಿದೆ. ಇಂಥ ಸರ್ವಾಭಿಮತಿಯು, ಗೌರವ ಪೂರ್ವಕ ವಿಶ್ವಾಸವು, ಎಲ್ಲಾ ಹಾಡು ಬರೆದವರಲ್ಲೂ ಇಲ್ಲ. ಪುರಂದರದಾಸರು, ಕನಕದಾಸರು, ವಿಜಯದಾಸರು, ಗೋಪಾಲದಾಸರು, ತಿಮ್ಮಣ್ಣ ದಾಸರು, ಜಗನ್ನಾಥದಾಸರು - ಇಷ್ಟು ಜನರ ಕೀರ್ತಿಯು ವಿವಾದಹೀನವಾಗಿದೆ. ಅವರುಗಳ ವಿಷಯದಲ್ಲಿ ಪೂರ್ವಪಕ್ಷ್ಯನುಯಾಯಿ ವೈಷ್ಣವರೂ, ಋಜುತ್ವ ಪಕ್ಷದವರೂ ಏಕಕಂಠ್ಯದಿಂದ ಅವರು ಜ್ಞಾನಿಗಳೆಂದು ಒಪ್ಪುತ್ತಾರೆ. ಅಂತಹ ಸಂಪ್ರತಿಪನ್ನ ಮಹತ್ವವುಳ್ಳವರು ಆ ದಾಸಭಕ್ತರು. ಉಪನಿಷದುಕ್ತ ಯಾಜ್ಞವಲ್ಕ್ಯಾದಿ ಜ್ಞಾನಿಗಳಿಗೆ ಇವರಿಗಿಲ್ಲದ ಯಾವ ಕೋಡೂ ಬೆಳೆದಿಲ್ಲ. ವಿಜಯ ದಾಸಾದಿಗಳ ಚರಿತ್ರೆಯು ಬಹುಕಾಲೀನ ಪ್ರತ್ಯಕ್ಷಾನುಭವದಿಂದ ಶುದ್ಧವೆಂದು ಗೃಹೀತವಾಗಿದೆ. ಅವರುಗಳ ಸಾಧುತ್ವ, ಲೋಕೋದ್ಧಾರಕ ಶಕ್ತಿ, ಪರೋಪಕಾರ ಶೀಲತೆ, ಮುಂತಾದುವೆಲ್ಲಾ ನಮ್ಮಿಂದ ಚೆನ್ನಾಗಿ ತಿಳಿಯಲ್ಪಟ್ಟಿದೆ. ಆದ್ದರಿಂದ ಸುದೃಢ ನಿಶ್ಚಯವೇ ಅವರುಗಳ ಪದ್ಯಗಳಿಂದ ಮಾಧ್ವ ಸಂಘಕ್ಕೆ ಸೇರಿದ ಮಹಾತ್ಮರಿಗೆಲ್ಲಾ ಹುಟ್ಟುತ್ತದೆ. ಆ ದಾಸ ಭಕ್ತರಲ್ಲಿ ನ್ಯಾಯ ಮೀಮಾಂಸಾ ಪಾಂಡಿತ್ಯವು ನಮ್ಮಿಂದ ನಿರೀಕ್ಷಿತವಾಗಿಲ್ಲ. ಜನ್ಮಾಂತರೀಯ ಪಾಂಡಿತ್ಯ ಪಾಕದಿಂದ ಆ ಮಹಾತ್ಮರು ಈಗ ಸಿದ್ಧಿ ಹೊಂದಿದವರು. ಅವರ ಅನುಗ್ರಹದಿಂದ ಕಲ್ಲೂರು ಸುಬ್ಬಣ್ಣಾಚಾರ್ಯರೂ, ಅಡಿಗೆ ಮಾಡುವ ಮಾಧ್ವ ಸೇವಕರೂ ಉತ್ತಮ ಜ್ಞಾನವನ್ನು ಹೊಂದಿದರು. ಆದ್ದರಿಂದ ಆ ತಪಸ್ವಿ ದಾಸಜನ ವಾಕ್ಯಗಳಲ್ಲಿ ನಿರ್ಮೂಲ ಶಂಕೆಯನ್ನು ಮಾಡಬಾರದು ಎಂದು ಹಿಂದೆಯೇ ಉಪಪಾದಿತವಾಗಿದೆ. "ಶಾಸ್ತ್ರಾರ್ಥಯುಕ್ತ್ಯೋ ಅಕ್ಷಾನುಭವಃ ಪ್ರಮಾಣಂ ತೂತ್ತಮಂ ಮತಂ | ಮಧ್ಯಮಂತ್ವಾಗಮೋ ಜ್ಞೇಯಃ ಪ್ರತ್ಯಕ್ಷಂ ತ್ವಧಮಂ ಸ್ಮೃತಂ ||" ಎಂಬ ಬ್ರ.ಸೂ.ಭಾ. || 1-18 ಪ್ರಮಾಣ ರೀತಿಯಿಂದ ಅನುಭವ ಸಾಹಿತ್ಯದಿಂದ ದೃಢೀಕೃತವಾದ ಉತ್ತಮ ಪ್ರಾಮಾಣ್ಯೋಪೇತ ದಾಸ ಪದ್ಯಗಳು ಮಾನ್ಯವೇ.

5. ಈ ರೀತಿಯ ಮಾನ್ಯತೆಯು ಉಪನಿಷದುಕ್ತ ವಸಿಷ್ಠಾದಿ ಜ್ಞಾನಿಮಾತ್ರರಿಗೆ ಮಾಡಲ್ಪಡಬೇಕು, ಇತರರಿಗಲ್ಲ ಎಂದು ತಿಳಿಯಕೂಡದು. ವಿಜಯದಾಸಾದಿಗಳಿಗೆ ಉಪನಿಷತ್ಪ್ರತಿಪಾದ್ಯತ್ವವೂ ಇದ್ದೇ ಇದೆ. ಹೇಗೆ ಆಶ್ವಲಾದ್ಯರು ಯಾಜ್ಞವಲ್ಕ್ಯರನ್ನು ವೇದ ಪ್ರತಿಪಾದ್ಯ ಜ್ಞಾನಿ ಎಂದು ತಿಳಿಯದಿದ್ದರೂ ಯಾಜ್ಞವಲ್ಕ್ಯರು ಇಷ್ಟು ಮಾತ್ರಕ್ಕೆ ವಿಶ್ವಾಸಾರ್ಹರು, ನಾವು ಅವರು ಹೇಳಿದ್ದಕ್ಕೆಲ್ಲಾ ಪ್ರಮಾಣ ಹೇಳಿ ಎಂದು ಕೇಳಬಾರದು, ಅವರು ಸುಳ್ಳು ಹೇಳತಕ್ಕವರಲ್ಲ ಎಂದು ನಂಬಿದ್ದರೋ, ಹಾಗೆಯೇ ನಾವೂ ವಿಜಯದಾಸಾದಿಗಳು ಉಪನಿಷತ್ಪ್ರತಿಪಾದ್ಯ ಜ್ಞಾನಿಗಳೆಂದು ತಿಳಿಯದಿದ್ದರೂ ಅವರನ್ನು ನಂಬಿ ಅವರು ಹೇಳಿದ್ದನ್ನು ಪ್ರಾಮಾಣಿಕವೆಂದು ತಿಳಿಯಬಹುದು ಎಂದು ಶ್ರದ್ಧಾ ಭಕ್ತಿಯುಳ್ಳವರಾಗಿದ್ದೇವೆ. ಶಾಕಲ್ಯಾದಿಗಳಿಗೆ ಯಾಜ್ಞವಲ್ಕ್ಯರು ವೇದೋಕ್ತ ಜ್ಞಾನಿಗಳೆಂದು ಗೊತ್ತಿದ್ದರೆ ಅವರೊಂದಿಗೆ ಜಲ್ಪ ಕಥೆಯೇ ನಡೆಯುತ್ತಿರಲಿಲ್ಲ. ವಾದಕಥೆಯೇ ನಡೆಯುತಿತ್ತು. ಶಾಕಲ್ಯನು ಯಾಜ್ಞವಲ್ಕ್ಯರ

ಶಾಪದಿಂದ ಸುಟ್ಟು ಹೋಗುತ್ತಿರಲಿಲ್ಲ. ಆದ್ದರಿಂದ ಪೂರ್ವೋಕ್ತ ಕನ್ನಡಪದ ಮಾಡಿದ ಜ್ಞಾನಿಜನರ ವಿಷಯದಲ್ಲಿ ಪೂರ್ಣ ವಿಶ್ವಾಸವೇ ಯುಕ್ತವಾದುದು. ವ್ಯಾಸತೀರ್ಥರೇ ಪುರಂದರದಾಸರನ್ನು ಗೌರವಿಸಿ ಅವರ ಪದಗಳನ್ನು ಪುರಂದರ ಶ್ರುತಿಗಳೆಂದು ಪ್ರಶಂಸಿಸಿರುವರೆಂದ ಮೇಲೆ ನಾವು ಆದರ ಮಾಡುವುದರಲ್ಲೇನಾಶ್ಚರ್ಯ! [ಇಲ್ಲಿ ಕೆಲವರಿಗೆ ಶಂಕೆ ಇದೆ: ಏನೆಂದರೆ ನಿತ್ಯಾತೀಂದ್ರಿಯ ವಿಷಯದಲ್ಲಿ ವಿಜಯದಾಸರ ವಾಕ್ಯವು ಪ್ರಮಾಣವು, ಅದನ್ನು ಒಪ್ಪಬೇಕೆಂದು ಹೇಳಿದರೆ ತತ್ವನಿರ್ಣಯ ವಾಕ್ಯವಿರೋಧ ಬರುತ್ತದೆ. ನಿತ್ಯವಾಕ್ಯ ಒಂದಿಲ್ಲದಿದ್ದರೆ ಧರ್ಮಾದಿ ಸಿದ್ಧಿ ಯಾಗುವುದೇ ಇಲ್ಲ ಎಂದು ಮನಸ್ಸಿನಲ್ಲಿಟ್ಟುಕೊಂಡು ಆ ನಿಶ್ಚಯ ಸಾಧನೆಗಾಗಿ ತತ್ವನಿರ್ಣಯ ಮತ್ತು ಅದರ ಟೀಕಾ ಗ್ರಂಥಗಳಲ್ಲಿ ವಿಜಯದಾಸ ಸದೃಶರಾದ ವಸಿಷ್ಠ ವಾಮದೇವಾದಿಗಳ ವಾಕ್ಯಗಳಿಂದ ನಿತ್ಯಾತೀಂದ್ರಿಯ ಧರ್ಮಾದಿಸಿದ್ಧಿಯು ಆಗುವುದೇ ಇಲ್ಲ ಎಂದು ಹೇಳಿಬಿಟ್ಟಿದ್ದಾರೆ. ಅದೂ ಸರ್ವಜ್ಞಾಚಾರ್ಯರ ನಿರ್ಣಯ. ಆ ವಿರೋಧ ಪರಿಹಾರ ಹೇಗೆಂದರೆ ಸಮಾಧಾನವಿದೆ. ತತ್ವನಿರ್ಣಯ ದಲ್ಲಿ ಅನಂತಕಾಲದ ಅನಂತ ಧರ್ಮಾಧರ್ಮಗಳ ವಿಷಯದಲ್ಲಿ ಸರ್ವಜಗತ್ತುಗಳ ಸರ್ವವಾದಿಗಳಿಗೂ ಸಂಪ್ರತಿಪನ್ನವಾಗುವ ಶಂಕಾಲೇಶಾನರ್ಹವಾದ ವ್ಯವಸ್ಥೆಯನ್ನು ಹೇಗೆ ಮಾಡಬೇಕೆಂದು ಪರತಸ್ತ್ವವಾದ ರೀತಿಯಿಂದ ಅನ್ಯರು ಮಾಡಿದ ಪ್ರಶ್ನೆಗೆ ಶ್ರೀಮದಾಚಾರ್ಯರು ಉತ್ತರ ಕೊಟ್ಟರು. ವಸಿಷ್ಠಾದಿಗಳು ನಿರ್ಣಯ ಹೇಳಲಾರರು. ವಸಿಷ್ಠಾದಿಗಳು ಜ್ಞಾನಿಗಳೆಂದು ಸರ್ವರಿಗೂ ಗೊತ್ತಿಲ್ಲ. ಅದ್ದರಿಂದ ಸರ್ವರನ್ನು ಮೆಚ್ಚಿಸುವಂತೆ ಧರ್ಮಾಧರ್ಮ ನಿರ್ಣಯ ಹೇಳಲು ಅವರಿಗೆ ಶಕ್ಯವಲ್ಲ. ಇದರ ಮೇಲೆ ಅವರು ಸರ್ವದಾ ಸರ್ವ ವಿಷಯದಲ್ಲೂ ರಾಗಾದಿದೋಷ ಶೂನ್ಯರಲ್ಲ. ಕಿಂಚ ಸರ್ವರಿಂದಲೂ ಶಂಕಿಸಲ್ಪಡದಿರುವ ಪುರುಷನೊಬ್ಬನು ಇಲ್ಲವೇ ಇಲ್ಲ ಎಂದು ಪ್ರತ್ಯಕ್ಷಾದಿ ಪ್ರಮಾಣ ಸಿದ್ಧವಾಗಿದೆ. ಆದ್ದರಿಂದ ಸರ್ವರೂ ಒಪ್ಪಬೇಕಾದರೆ ನಿತ್ಯವಾದ್ದರಿಂದ ಪುರುಷ ನಿಬಂಧನ ದೋಷ ಪ್ರಾಪ್ತಿಗೆ ಅವಕಾಶವೇ ಇಲ್ಲವಾದ್ದರಿಂದ ವೇದ ಒಂದೇ ಅಂತಹ ಸರ್ವ ಸಂಪ್ರತಿಪನ್ನ ಪ್ರಮಾಣ ಎಂದು ಚೆನ್ನಾಗಿ ಹೇಳಿದರು. ಇಲ್ಲಿ ಅನುವ್ಯಾಖ್ಯಾನ ಸುಧಾ III 3-29 ರಲ್ಲಾದರೋ "ಪ್ರತ್ಯಕ್ಷವಚ್ಚ ಪ್ರಾಮಾಣ್ಯಂ ಸ್ವತ ಏವಾಗಮಸ್ಯಹಿ" ಎಂದು ಕರಣ ಪ್ರಾಮಾಣ್ಯಕ್ಕೆ ಸ್ವತಸ್ತ್ವವನ್ನು ಸಾಧಿಸಿ, ದೀರ್ಘಕಾಲೀನವಾದ ನಮ್ಮಗಳ ಪ್ರತ್ಯಕ್ಷ ವ್ಯವಹಾರದಿಂದ ನಮಗೆ ಚೆನ್ನಾಗಿ ತಿಳಿಯಲ್ಪಟ್ಟಿರುವ ಕೆಲವು ಭಕ್ತವಿರಕ್ತ ಜನರ ಅತೀಂದ್ರಿಯ ಸಂಬಂಧಿ ಕೆಲವು ವಾಕ್ಯಗಳ ವಿಷಯದಲ್ಲಿ ಪ್ರಬಲ ಬಾಧಕವಿಲ್ಲದಿದ್ದರೆ ವಿಶ್ವಾಸ ಮಾಡಬೇಕಾದ್ದೇ ಎಂದು ಮಾಧ್ವ ಸಮಾಜಕ್ಕೆ ಹಿತೋಪದೇಶ ರೀತಿಯ ನಿರ್ಣಯವನ್ನು ವಿದ್ಯಾಧಿಕರಣ ಸುಧೆಯಲ್ಲಿ ಅದೇ ಸರ್ವಜ್ಞರು ಮಾಡಿಕೊಟ್ಟರೆಂದು ಒಪ್ಪಿದರೆ ವಿರೋಧವಿಲ್ಲ. ಆ ಪ್ರಾಮಾಣ್ಯವಾಕ್ಯಗಳೇ ಈ ಅರ್ಥವನ್ನು ಸೂಚಿಸುತ್ತವೆ: ಅನು III 3-29 "ದೃಶ್ಯಂತೇ ಪುರುಷಾಲೋಕೇ ಪರಾಪರವಿದೋಽಪಿಚ| ಅಪರೋಕ್ಷದೃಶೋಯೋಗ ನಿಷ್ಠಾಶ್ಚಾಮಲ ಚಕ್ಷುಷಃ | ಪ್ರತ್ಯಕ್ಷಂ ದೇವತಾಂ ದೃಷ್ಟ್ವಾ ತತ್ಪ್ರಸಾದಾಪ್ತಭೂತಯಃ | ಜ್ಞಾನವಿಜ್ಞಾನ ಪಾರಜ್ಞಾ ನಿಷಿಧ್ಯಂತೇ ಕಥಂನೃಭಿಃ | ದೃಷ್ಯತೇ ಚಾತಿಮಹಾತ್ಮ್ಯಂ ತೇಷಾಮತಿ ಮಹೌಜಸಾಂ | ಯದಿತೇಽಪಿ ನಿಷಿಧ್ಯಂತೇ ಕಿಂನೋಕ್ತಿಸ್ತೇ ನಿಷಿಧ್ಯತೇ | ಯದುಕ್ತವಾಕ್ಯ ಪ್ರಾಮಾಣ್ಯಂ ಪ್ರತ್ಯಕ್ಷೇನೋಪಲಭ್ಯತೇ | ವರಾದಯೋಽಪಿ ತದ್ದತಾಃ ಸದಾ ಸತ್ಯಾ ಭವಂತಿ ಹಿ" | ಹೀಗೆ ಆ ಜ್ಞಾನಿಗಳ ಸಾಧುತ್ವಾದಿ ಮಹಿಮೆಗಳು ಮಾಧ್ವರಿಗೆ ಪ್ರತ್ಯಕ್ಷ

ಸಿದ್ಧವಾಗಿದೆಯಾದ್ದರಿಂದ ಅವರಲ್ಲಿ ಅಜ್ಞಾನಿತ್ವ ಕಲ್ಪನೆ, ಅಥವಾ ಅಸಾಧುತ್ವ ಕಲ್ಪನೆ ಹೇಗೆ ಮಾಡುತ್ತಾರೆ ಎಂದು ಇಲ್ಲಿ ಕೇಳಿದ್ದಾರೆ. ಕುರುಕ್ಷೇತ್ರ ಮಹಾಯುದ್ಧದಲ್ಲಿ ಆನೆ ಕುದುರೆ ರಥಾದಿಗಳು ಅವಶ್ಯಕವಾದ್ದರಿಂದ ಮಲ್ಲಯುದ್ಧದಲ್ಲೂ ಚತುರಂಗ ಸೇನೆಯು ಬೇಕೆಂದು ಯಾರೂ ಹೇಳುವುದಿಲ್ಲವಷ್ಟೇ, ಹಾಗೆ ನನ್ನ ತಂದೆಯು ನನಗೆ ಸರ್ವದಾ ಆತ್ಮನೆಂದು ನಿರ್ಣಯವಿರುವುದರಿಂದ ಅವನೇ ನಿಖಿಲಜಗತ್ತಿಗೂ ಪಾಲಕನಾಗಲು ಅರ್ಹನೆಂದು ಹೇಳುವುದಕ್ಕಾಗುವುದಿಲ್ಲವಷ್ಟೇ, ಆದ್ದರಿಂದ ಕೇವಲ ಸ್ವತಸ್ತ್ವವಾದಿಗಳಾದ ಮಾಧ್ವ ಸಮಾಜದಲ್ಲಿ ದೀರ್ಘ ಪರಿಚಿತರಾಗಿ ಪ್ರತ್ಯಕ್ಷ ಮಹಿಮೆಗಳಿಂದ ಚೆನ್ನಾಗಿ ಜ್ಞಾತರಾದ ವಿಜಯದಾಸಾದಿಗಳ ಕೆಲವು ವಿಷಯ ಸಂಬಂಧಿ ವಾಕ್ಯಗಳು ಮಾನ್ಯವೇ. ಆ ವಾಕ್ಯಾರ್ಥಕ್ಕೆ ಪ್ರಮಾಣ ವಿರೋಧಾಭಾವವು ಗೊತ್ತಾದ ಮೇಲೆ ಶಂಕೆಯನ್ನೂ ಕೂಡ ಮಾಡಕೂಡದು, ಹಾಗಿಲ್ಲದೆ ಸರ್ವತ್ರ ನಿತ್ಯ ವಾಕ್ಯದಿಂದಲೇ ವಿಷಯ ನಿರ್ಣಯ ಮಾಡುವ ಪಕ್ಷಕ್ಕೆ ದೇವರಪೂಜೆ, ಮಂತ್ರ ಕ್ರಮಾದಿಗಳು, ತಂದೆ ಮತ್ತು ಗುರ್ವಾದಿಗಳು ಹೇಳಿಕೊಟ್ಟಿದ್ದನ್ನೆಲ್ಲಾ ವ್ಯರ್ಥ ಎಂದು ಶಂಕಿಸಬೇಕಾಗುತ್ತದೆ. ಅವರ ಹಿತೋಪದೇಶಗಳೆಲ್ಲಾ ಅಪ್ರಾಮಾಣಿ ಕವೆಂದು ಶಂಕಿಸಬೇಕಾಗುತ್ತದೆ. ನಾರಾಯಣನು ಧ್ರುವನಿಗೆ ಕೊಟ್ಟವರ, ನರಸಿಂಹನು ಪ್ರಹ್ಲಾದನಿಗೆ ಕೊಟ್ಟವರ ಇತ್ಯಾದಿಗಳೆಲ್ಲಾ ಅಪ್ರಾಮಾಣವೆಂದು ಅವರವರು ಆಗಲೇ ಶಂಕಿಸಬೇಕಾಗಿತ್ತು. ಅತೀಂದ್ರಿಯ ವಿಷಯದಲ್ಲಿ ನಿತ್ಯವಾಕ್ಯ ಒಂದೇ ಬೋಧಿಸಬೇಕು. ತದನುಸಾರಿ ಜ್ಞಾನಿಗಳೂ ಪ್ರವರ್ತಿಸಕೂಡದು ಎಂದು ನಿಯಮ ಮಾಡಿದರೆ ಗುರು ಶಿಷ್ಯತ್ವಾದಿ ಸರ್ವ ನಿಃಶಂಕ ವ್ಯವಹಾರವೂ ನಿರ್ಮೂಲವಾಗಿ ನಾಶವಾಗಬೇಕೆಂಬ ಪ್ರಸಂಗ ಬರುತ್ತದೆ. ಹಾಗೆ ಅನುಭವವಿಲ್ಲ. ವಿದ್ಯಾಧಿಕರಣ ಸುಧೆಯಲ್ಲಿ ಹಾಗೆ ಜ್ಞಾನಿಗಳ ಮಹತ್ವವನ್ನು ತಿರಸ್ಕರಿಸಿ ಆಚಾರ್ಯರು ಅವರ ವಾಕ್ಯ ಪ್ರಾಮಾಣ್ಯವು ಅಂಗೀಕಾರಾರ್ಹವೆಂದು ಹೇಳಿಲ್ಲ. ತಥಾಚ ಮಹಿಮೆಗಳ ಪ್ರತ್ಯಕ್ಷ, ಬಹುಕಾಲ ಪರಿಚಯ, ಚೆನ್ನಾಗಿ ಪರಿಚಿತ ನಿಶ್ಚಯ, ನಮ್ಮ ಸಮಾಜದಲ್ಲೇ ಅವರ ಇರುವಿಕೆ – ಇತ್ಯಾದಿ ವಿಶೇಷ ಕಾರಣಗಳಿಂದ ದಾಸಭಕ್ತ ಜನರ ಹಾಡುಗಳಲ್ಲಿ ವ್ಯಾಸತೀರ್ಥರಿಗೆ ನಂಬಿಕೆ ಬಂದಂತೆ ನಮಗೂ ಬರುತ್ತದೆ. ಅವರ ವಾಕ್ಯಗಳಲ್ಲಿ ಪ್ರಾಮಾಣ್ಯ ನಿಶ್ಚಯವೂ ಕೂಡುತ್ತದೆ. ಇದರ ಮೇಲೆ ಪುಟ 545 ರಲ್ಲಿ ಅಲ್ಲೇ ಸುಧೆಯಲ್ಲಿ ನಿರೂಪಿಸಿದಂತೆ ಫಲೋಪಲಂಭ ರೂಪ ಸಂವಾದವೂ ಅವರ ವಾಕ್ಯಕ್ಕಿರುವುದು ಅನೇಕರಿಗೆ ಆಗಿಂದಾಗ್ಗೆ ಪ್ರತ್ಯಕ್ಷ ಸಿದ್ಧವಾಗಿದೆ] ॥ 1-2 ಸುಧೋಕ್ತ ರೀತ್ಯಾಬಲವತ್ಪ್ರಮಾಣ ವಿರೋಧದಿಂದಲೇ ಅವರುಗಳ ಹಾಡಿಗೆ ಅಪ್ರಾಮಾಣ್ಯ ಕಲ್ಪನೆ ಮಾಡಬೇಕು. ಅನ್ಯಥಾ ಕೂಡದು. ಉಕ್ತ ವಿಷಯದಲ್ಲಿ ಬೃಹದ್ಭಾಷ್ಯ V 9 ಪ್ರಮಾಣವಿದೆ. "ಪ್ರಶ್ನೋವಾದೇಚ ಜಲ್ಪಾದೌ ಕರ್ತವ್ಯಃ ಪ್ರತಿವಾದಿನಾ। ತದುಕ್ತಿಮಾತ್ರೇ ಪ್ರಾಮಾಣ್ಯಂ ಯದಿನಾಸ್ಯಾಂಗಮಾಂತರ । ಅಪೇಕ್ಷಿತಂ ಯದಾ ಶಂಕಾದರ್ಶನೀಯಸ್ತದಾಗಮಃ । ನಿಃಶಂಕತ್ವೇನಯೋ ವಕ್ತಾ ಪ್ರಶ್ನಾನಾಮುತ್ತರಂ ಸದಾ । ಆನುಕೂಲ್ಯೇನಾಗಮಾನಾಂ ನಾಶಂಕ್ಯಂತದ್ವಚಃ ಕ್ವಚಿದಿತಿ" ॥ ಅಲ್ಲೇ ಪುನಃ 310 - "ಯಸ್ಮಾನ್ನ ವಿದುಷಾಂ ವಾಕ್ಯಮಾಶಂಕ್ಯಂ ಕೇನಚಿತ್ಕ್ವಚಿತ್ । ತಸ್ಮಾದ್ವೇದೇಷು ಸರ್ವೇಷು ಕಥಾಃ ಪ್ರಶ್ನೋತ್ತರಾತ್ಮಿಕಾಃ । ನ ಪ್ರಮಾಣಾಂತರಂ ತತ್ರ ಪೃಚ್ಛಂತಿ ಘಟನಾಂ ವಿನಾ। ಏತಸ್ಮಾದಾಶ್ವಲಾದ್ಯಾಶ್ಚ ಪಪ್ರಚ್ಛುರ್ನೈವ ಕುತ್ರಚಿತ್ । ಆಗಮಂ ಯಾಜ್ಞವಲ್ಕ್ಯೋಕ್ತೇರನ್ಯಂ ತಂ ಮಿಥಿಲೋಪಿಚ ॥" ಇತಿ ಬ್ರಹ್ಮತರ್ಕೇ ।... "ಯಶ್ಚಿನ್ನ ವಿಚಿಕಿತ್ಸಸ್ತುಥಿನತ್ಯಪಿ

ಚ ಸಂಶಯಾನ್ | ತಸ್ಯ ಪರ್ಯೇಷಣಂ ಕುರ್ಯಾತ್ಪೃತೀಚ್ಛನ್ನೋ ತದಕ್ಷಿಣಾಂ | ಇತಿ ಚ ಭಾರತೇ |" - ಹೀಗೆ ಅಂತಹ ದೊಡ್ಡವರ ಮಾತೇ ಪ್ರಮಾಣ; ಅವರನ್ನು ಕುರಿತು ಪ್ರಮಾಣ ಪ್ರಶ್ನೆ ಮಾಡಬಾರದು; ಪೂರ್ವದಿಂದಲೂ ಅದೇ ಸಂಪ್ರದಾಯ ಎಂದು ಆಚಾರ್ಯರೇ ಪ್ರಮಾಣ ಕೊಟ್ಟಿದ್ದಾರೆ.

**6.** ಹೀಗಿದ್ದರೂ ಕೆಲವರು ಹೇಳುತ್ತಾರೆ. ವೇದಾದಿ ಹತ್ತು ಶಾಸ್ತ್ರಗಳು ಸ್ವತಃ ಪ್ರಮಾಣವೇ. ಹಾಗೆ ವೇದಗಳಲ್ಲಿ ಮಂತ್ರದ್ರಷ್ಟೃಗಳೆಂದು ನಿಶ್ಚಿತರಾದ ಚತುರ್ಮುಖ, ಸ್ವಾಯಂಭುವಮನು, ಯಾಜ್ಞವಲ್ಕ್ಯಾ ದಿಗಳ ವಚನವೂ ಕೂಡ ಸ್ವತಃ ಪ್ರಮಾಣವಾಗಲಿ; ಇವುಗಳಲ್ಲಿ ಶಂಕಿಸುವುದು ಅನುಚಿತವೇ. ಶಂಕಾ ಮಾಡಿದರೆ ವಿರೋಧಿ ಪ್ರಮಾಣ ತೋರಿಸಿಯೇ ಶಂಕಿಸಬೇಕು. ಆದರೆ ಈಚಿನ ಕಾಲದ ಟಿಪ್ಪಣ್ಯಾದಿ ಬರಹಗಾರರು, ಪುರಂದರದಾಸಾದಿ ಕೀರ್ತನಕಾರರು, ಮತ್ತು ಭಾರತ ದೇಶೀಯ ಚರಿತ್ರೆಕಾರರು - ಇಂಥವರ ವಾಕ್ಯಗಳಲ್ಲಿ ಅಂತಹ ವಿಶ್ವಾಸವು ಸಾಧ್ಯವಿಲ್ಲ. ಆದ್ದರಿಂದ ಯಥೇಷ್ಟವಾಗಿ 'ಈ ವಿಷಯದಲ್ಲಿ ಪ್ರಮಾಣವೇನು? ಆ ಪ್ರಮಾಣವು ಹೇಗೆ ಉಪಲಬ್ಧವಾಯಿತು ಅದು ಕೃತಕವಲ್ಲವೆಂಬಲ್ಲಿ ಏನು ಪ್ರಮಾಣ? ಹೀಗೆ ಪ್ರಶ್ನಿಸುತ್ತೇವೆ ಎನ್ನುತ್ತಾರೆ. ಅದು ಸರಿಯಲ್ಲ. ಈ ಮಾರ್ಗವು ಮಧ್ವಶಾಸ್ತ್ರಕ್ಕೆ ವಿರುದ್ಧವೇ. ವಾಕ್ಯವು ವೈದಿಕವಾಗಲಿ, ಲೌಕಿಕವಾಗಲಿ, ಪ್ರಾಚೀನವಾಗಲಿ, ಅರ್ವಾಚೀನವಾಗಲಿ, "ಪ್ರಮಾಣಮವಿರೋಧತಃ" ಎಂಬ ಅನು.। 1-2ರಲ್ಲಿ ಹೇಳಲ್ಪಟ್ಟ ನ್ಯಾಯವು ಅನ್ವಯಿಸಿಯೇ ಅನ್ವಯಿಸುತ್ತದೆ. ಈ ನಿರ್ಣಯವನ್ನು ಮೂರನೆಯ ಅಧ್ಯಾಯದಲ್ಲಿ ನಿರೂಪಿಸಿಯಾಗಿದೆ. ಪ್ರಾಮಾಣ್ಯ ನಿರ್ಣಯಕ್ಕಾಗಿ ಸರ್ವತ್ರ ಸಂವಾದಗಳನ್ನು ಹುಡುಕಿಕೊಂಡು ಹೋಗುವುದು ಲೋಕಾನುಭವ ವಿರುದ್ಧವೂ ಹೌದು, ಹಾಗೆಯೇ ನ್ಯಾಯಾಲಯದಲ್ಲೂ ಆಪಾದಿತನ ವಿಷಯದಲ್ಲಿ ಬಾಧಕ ಪ್ರಮಾಣ ಸಾಬೀತಾಗುವವರೆಗೂ ನ್ಯಾಯಾಧಿಪತಿಯು ಆ ಅಪರಾಧಿ ವಾಕ್ಯವನ್ನಾದರೂ ತಿರಸ್ಕರಿಸುವುದಿಲ್ಲ. ಯಾವಾಗ ಪ್ರಮಾಣ ವಿರುದ್ಧವನು ಆಪಾದಿತನು ಹೇಳುತಾನೆಯೋ ಆಗಲೇ ಜಡ್ಜಿಯು ಆತನು ಸುಳ್ಳುಗಾರನೆಂದು ನಿರ್ಣಯಿಸಿ ದಂಡಿಸುತ್ತಾನೆ. ಪ್ರಮಾಣವಿಲ್ಲದೆ ಶಂಕಮಾಡೋಣವು ಪೃಚ್ಛಕನ ಮನೋದೊಷಕ್ಕೆ ವ್ಯಂಜಕವು. ಆದ್ದರಿಂದ ಲೌಕಿಕ ಪುರುಷನ ವಾಕ್ಯದಲ್ಲಾದರೂ ಪ್ರಮಾಣ ವಿರೋಧಾದಿಗಳನ್ನೂ, ವ್ಯಾಹತಿಯನ್ನೂ, ಕಂಡಾಗ ಆ ಬಾಧಕವನ್ನೇ ತೋರಿಸಿ ಪ್ರಶ್ನೆ ಮಾಡಬಹುದು. ಅನ್ಯಥಾ ಮಾಡಬಾರದು. ಹಟದಿಂದ ಮಾಡಿದರೆ ಪ್ರಶ್ನೆ ಪರಂಪರೆಗೆ ಅವಕಾಶವಾಗಿ ಅನವಸ್ಥೆ ಬರುತ್ತದೆ. ಸ್ವತಃ ಪ್ರಾಮಾಣ್ಯವನ್ನೇ ಒಪ್ಪುವುದಿಲ್ಲವೆಂದರೆ ಸಾಧಕ ಪ್ರಮಾಣಾಂತರ ಹೇಳಿದರೂ ಆಗಲೂ ಪುನಃ ಆಪ್ರಮಾಣದ ನಿರ್ದೋಷತ್ವಕ್ಕೆ ಪ್ರಮಾಣ ಕೊಡಿ ಎಂದು ಮತ್ತೆ ಮತ್ತೆ ಕೇಳುತ್ತಲೆ ಇರಬಹುದು. ಹೀಗೆ ಅತಿ ಪ್ರಸಂಗವಿದೆ ಎಂದು ಗೀ. ಭಾ ॥ ರಲ್ಲಿ ಆಚಾರ್ಯರು ಹೇಳಿದ್ದಾರೆ.

**7.** ಹಾಗಿದ್ದರೆ ಲೌಕಿಕ ಪುರುಷ ವಾಕ್ಯದಿಂದ ಅಥವಾ ಅಪಂಡಿತ ದಾಸ ಭಕ್ತರ ಕೀರ್ತನೆಗಳಿಂದ ನಿಶ್ಚಯ ಜ್ಞಾನವು ಹುಟ್ಟುವುದೇ ಇಲ್ಲ ಎಂದು ಅನುಭವ ಸಿದ್ಧವಾದ್ದರಿಂದ ಋಜುತ್ವ ವಿಷಯದಲ್ಲಿ ಸುದೃಢ ನಿಶ್ಚಯವು ಸಾಧ್ಯವೇ ಇಲ್ಲ ಎಂದು ಪ್ರಾಪ್ತವಾಯಿತು - ಎಂದರೆ ಸತ್ಯವೇ, ಸರ್ವಥಾ ಅಜ್ಞಾತ ಲೌಕಿಕರ ಮಾತಿನಲ್ಲಿ, ತಿರುಪೆಗೆ ಬರುವ ಅಜ್ಞಾತ ದಾಸರ ಮಾತಿನಲ್ಲೂ ಅಂಥಹ ದೃಢ ಪ್ರಾಮಾಣ್ಯ ನಿಶ್ಚಯವಾಗುವುದಿಲ್ಲ. ಆದರೆ ಭೀಮಸೇನ ಯುಧಿಷ್ಠಿರಾದಿ

ಲೌಕಿಕರೂ ಪುರಂದರದಾಸರಂಥ ಭಿಕ್ಷುಕರೂ ಆಡುವ ಮಾತುಗಳಲ್ಲಿ ಪ್ರಬಲ ನಿಶ್ಚಯ ಜ್ಞಾನವೇ ಹುಟ್ಟುತ್ತದೆ. ಸಮಾಜದಲ್ಲಿ ವ್ಯವಹಾರದಿಂದ ಅವರ ಮಹತ್ವ ನಮಗೆ ಗೊತ್ತಾಗಿದೆ. ಆದ್ದರಿಂದ ಜ್ಞಾತ ಲೌಕಿಕ ಪುರುಷರ ಅಥವಾ ವಿಜಯದಾಸಾದಿ ಭಕ್ತರ ವಾಕ್ಯಜನ್ಯಜ್ಞಾನದಲ್ಲಿ ಕೂಡ ಯಾವಾಗ ಜ್ಞಾನಗ್ರಾಹಕ ಸಾಕ್ಷಿಯು ದೋಷಾಭಾವವನ್ನು ಸ್ಪಷ್ಟವಾಗಿ ಕಾಣುತ್ತದಯೋ ಆಗ ಆ ವಾಕ್ಯ ಪ್ರಾಮಾಣ್ಯ ವಿಷಯದಲ್ಲಿ ಸುದೃಢ ನಿಶ್ಚಯವೇ ಉಂಟಾಗುತ್ತದೆ. ಯಾವಾಗ ಮನೋದೋಷದಿಂದ ಸಾಕ್ಷಿಯು ಕುಂಠಿತ ಸಾಮರ್ಥ್ಯವುಳ್ಳದ್ದಾಗಿ ವಾಕ್ಯಜ್ಞಾನಗತ ದೋಷಾಭಾವವನ್ನು ಕಾಣಲಾರದೋ ಆಗ ಆ ವಾಕ್ಯದಿಂವ ಸಂಮುಗ್ಧಾಕಾರಕ ನಿಶ್ಚಯವು ಹುಟ್ಟುತ್ತದೆ. "ಏನೂ ದೋಷವಿಲ್ಲದಿದ್ದರೆ ಪ್ರಮಾಣವೇ" ಎಂದು ಜ್ಞಾನವಾಗುತ್ತದೆ. ಆದರೆ ಪರೀಕ್ಷೆ ಮಾಡಿದ ಮೇಲೆ ದೋಷಾಭಾವ ಜ್ಞಾನವಾಗಿ ಅತಿ ಸುದೃಢ ನಿರ್ಣಯವೂ ಅವರ ವಾಕ್ಯ ಜ್ಞಾನದಿಂದ ಸ್ವಲ್ಪ ವಿಳಂಬದಿಂದ ಹುಟ್ಟುತ್ತದೆ – ಇತ್ಯಾದಿ ಸೂಕ್ಷ್ಮ ವಿಚಾರಗಳು ಅನು III 4-6 ಪುಟ 592 ಆಧಿಕಾರಿಕಾಧಿ ಕರಣ ಸುಧೆಯಲ್ಲಿ ಉಕ್ತವಾಗಿವೆ. ತಥಾ ಚ ಲೌಕಿಕ ಪುರುಷ ವಾಕ್ಯದಿಂದಲೂ ಸಾಮಾನ್ಯ ನಿಶ್ಚಯಜ್ಞಾನವು ಹುಟ್ಟಿಯೇ ಹುಟ್ಟುತ್ತದೆ. ಪ್ರಾಮಾಣ್ಯ ಸ್ವತಸ್ತ್ವ ಭಂಗವಾಯಿತೆಂದು ಚಿಂತಿಸಬಾರದು, ಬಾಧಕ ತೋರಿಸಿಯೇ ಪರೀಕ್ಷೆ ಮಾಡಬೇಕು. ನಿರ್ಬಲ ಶಂಕೆಯು ಪರತಸ್ತ್ವ ಪಕ್ಷಕ್ಕೆ ಕಾಲುಚಾಚಿದಂತೆ ಅನುಚಿತವೇ. ಆದುದರಿಂದ ಜನ್ಮಾಂತರೀಯ ಬಹುಕೋಟಿ ಪುಣ್ಯ ಪ್ರಭಾವದಿಂದ ಅಪರೋಕ್ಷಜ್ಞಾನ ಹೊಂದಿದ ವಿಜಯದಾಸಾದಿ ಭಕ್ತವರ್ಗದವರ ವಾಕ್ಯದಲ್ಲಿ ಪ್ರಾಮಾಣ್ಯ ನಿರ್ಣಯಿಸುವುದಕ್ಕೆ ಯಾವ ಅನುಪಪತ್ತಿಯೂ ಇಲ್ಲ.

8. ಲೌಕಿಕ ಜನರ ಖಂಡನಾವಳಿಯು ಬಾಧಕ ಪ್ರಮಾಣವಲ್ಲವೇ ಎಂದರೆ ಆಗಲಾರದು. ಅದರ ಆಧಾರ ಊಹೆ, ಅದು ದಾಸಭಕ್ತರ ವಾಕ್ಯಗಳಿಗೆ ಸಮವಲ್ಲ. ಲೌಕಿಕರು ಪೂರ್ವೋಕ್ತ ವಿಜಯದಾಸ ಜಗನ್ನಾಥದಾಸರಂತೆ ಕ್ಲೇಶ ಹೊಂದಿ ತಪಸ್ಸು ಮಾಡಿ ಅಪರೋಕ್ಷಜ್ಞಾನ ಸಂಪಾದಿಸಿದವರೆಂದು ಪ್ರಸಿದ್ಧರಾಗಲಿಲ್ಲ, ಮತ್ತು ತಮ್ಮ ಪಾಂಡಿತ್ಯದಿಂದ ಸಂಶೋಧನೆ ನಡೆಯಿಸಿ ಶ್ರೀ ಗುರುರಾಜರ ವಿಷಯದಲ್ಲಿ ಪೂರ್ವೋತ್ತರ ಪಕ್ಷ ವಿಮರ್ಶೆಯಿಂದಾದ ಯಾವುದರೂ ಗ್ರಂಥ ಬರೆದಿಲ್ಲ. ಅವರು ಋಜುಗಳಲ್ಲ ಎಂದಿಷ್ಟೇ ಹೇಳಿದ್ದಾರೆಯೇ ಹೊರತು ಯಾವ ಪ್ರಮಾಣದಿಂದ ಎಂದು ತಿಳಿಸಿಲ್ಲ. ಅವರು ಋಜುವಲ್ಲದಿದ್ದರೆ ಇನ್ನು ಯಾವ ಸ್ವರೂಪ ಅವರದ್ದು ಎಂಬ ಪ್ರಶ್ನೆಗೂ ಸಮಾಧಾನ ಕೊಡಲಿಲ್ಲ. ಅವರಿಗೆ ಸ್ವರೂಪ ಗೊತ್ತಿಲ್ಲ ಎಂದಾಯಿತು. ಅಂದಮೇಲೆ ಋಜುವಲ್ಲ ಎಂದು ಹೇಳಲು ಆಗಮಹೀನರಾದ್ದರಿಂದ ಅಧಿಕಾರಿಗಳೇ ಅಲ್ಲ. ತಥಾ ಚ ಅನು II 1-2 "ಆಗಮೇನಾಗಮಸ್ಯೈವ ವಿರೋಧೇ ಯುಕ್ತಿರಿಷ್ಯತೇ" - ಎಂಬ ನ್ಯಾಯದಿಂದ ವಿಮರ್ಶೆ ಮಾಡಿದರೆ ಲೌಕಿಕ ಜನರ ಅನೃಜುತ್ವವಾದವು ಪ್ರಮಾಣಾಭಾವ ಪ್ರಮಾಣ ವಿರುದ್ಧತ್ವ ಎಂಬ ಎರಡು ದೌರ್ಬಲ್ಯಾಗ್ನಿಯಿಂದ ದಗ್ದಪ್ರಾಯವಾಗುತ್ತೆ, ಆಗಮಾನುಸಾರಿ ಅನುಮಾನವಿರೋಧ ತೋರಿಸಿಯಾಗಿದೆ. ತುಂಬಾ ತಪಸ್ವಿಗಳಾದ ವಿಶ್ವಪ್ರಿಯ ತೀರ್ಥಾದಿಗಳ ಪಕ್ಷವಾದರೋ ಪ್ರಾಬಲ್ಯೋಪೇತವಾದದ್ದು ಎಂಬಲ್ಲಿ ಎರಡು ವಿಶ್ವಪ್ರಿಯ ವಿಲಾಸ ಗ್ರಂಥಗಳು ಪ್ರಮಾಣ; ವಾ.ಗು.ಚ.; ವೇದವೇದ್ಯ ಸಂಪ್ರದಾಯಾದಿಗಳು ಪ್ರಮಾಣ. ಆಖ್ಯಾನವು ದೇವತಾ ವಾಕ್ಯವು. ಅಂತಹ ಆಖ್ಯಾನವು ಪ್ರಮಾಣ. ಹೀಗೆ ಬಹು ಪ್ರಬಲ ಪ್ರಮಾಣ ವಿರುದ್ಧವಾದ್ದರಿಂದ ಲೌಕಿಕ ಜನರ ಊಹೆಯು ಬಾಧಿತವೆಂದು ಒಪ್ಪಲೇಬೇಕು. ಬ್ರ.ಸೂ.ಭಾ. II 2-1 ಸ್ಮೃತ್ಯಧಿಕರಣ

ನ್ಯಾಯದಿಂದ ಪ್ರಬಲ ಪ್ರಮಾಣ ಸಹಾಯದಿಂದ ವಿಜಯದಾಸಾದಿಗಳ ಕೀರ್ತನೆಗಳೇ ನಿಃಶಂಕ ಪ್ರಾಮಾಣೋಪೇತವಾಗಿವೆ ಎಂದು ಸಿದ್ಧವಾಗುತ್ತದೆ.

9. ವಿಜಯದಾಸಾದಿಗಳ ಉಕ್ತಿಯು ಪ್ರಮಾಣವಾದರೆ ಇತರ ಜ್ಞಾನಿಶ್ರೇಷ್ಠರಾದ ರಾಘವೇಂದ್ರತೀರ್ಥರು, ರಘೋತ್ತಮತೀರ್ಥರು, ವ್ಯಾಸತೀರ್ಥರು ಮುಂತಾದವರ ಅನುಕ್ತಿಗೆ ಸಮಾಧಾನವೇನೆಂದು ಪೂರ್ವಪಕ್ಷಿಕೇಳಿದ್ದಾರೆ. "ಉಕ್ತ್ಯನುಕ್ತ್ಯೋರ್ವಿರೋಧಾಭಾವಾತ್" – ಇತ್ಯಾದಿ ಪ್ರಮಾಣ ಕೊಟ್ಟು ಸಮಾಧಾನವನ್ನು ಹಿಂದೆಯೇ IV ಪುಟ 48ರಲ್ಲಿ ಹೇಳಿದ್ದೇವೆ. ದೊಡ್ಡವರ ವಿರುದ್ಧೋಕ್ತಿಯೇ ಬಾಧಕ. ಅದು ಪ್ರಕೃತದಲ್ಲಿಲ್ಲ. ಇಂತಹ ಅನುಕ್ತಿಗೆ ಬಾಧಕತ್ವವಿದ್ದ ಪಕ್ಷದಲ್ಲಿ ವಾದಿರಾಜಗುರುಗಳು, ಪುರಂವರದಾಸರು, ಕನಕದಾಸರು, ರಘೋತ್ತಮತೀರ್ಥರು, ವ್ಯಾಸತೀರ್ಥರು, ರಾಘವೇಂದ್ರತೀರ್ಥರು ಮುಂತಾದ ಸಂಪ್ರತಿಪನ್ನ ಋಷಿಗಳ ಪರಸ್ಪರ ಅನುಕ್ತಿಯಿಂದ ಅವರವರ ದೇವತಾತ್ವವೂ ಸಿದ್ಧವಾಗದೇ ಹೋಗಬೇಕಾದೀತು. "ಯತ್ರಧೂಮಸ್ತತ್ರಾಗ್ನಿಃ" ಎಂಬಂತೆ 'ಯತ್ರಾನುಕ್ತಿಃ ತತ್ರವಿಷಯಾಸತ್ವಂ' ಎಂದು ನಿಯತ ವ್ಯಾಪ್ತಿ ಇಲ್ಲ. ಅನುಕ್ತಿಗೆ ವ್ಯವಸ್ಥಾಪಕತ್ವ ಪರೀಕ್ಷೆ ಫಲಿತಾಂಶ ಪ್ರಕಟನೆಯಲ್ಲಿ ವಿಶೇಷ ನಿಯಮದಿಂದ ಕೂಡುತ್ತೆ. ಪ್ರಕೃತ ವ್ಯಾಸತೀರ್ಥಾದಿಗಳ ಅನುಕ್ತಿಯಿಂದ ಹೀಗೆ ತಿಳಿಯೋಣ ಎಂಬ ಸಮಾಜದ ನಿಯಮವಿಲ್ಲ. ಉಕ್ತಿಗೆ ಪ್ರತಿ ಬಂಧಕಗಳು ಅನೇಕ. ಅವೆಲ್ಲಾ ಅನುಕ್ತಿಜನಕಗಳು, ವಿಷಯಾಭಾವ ಮಾತ್ರವಲ್ಲ. ಇದಲ್ಲದೆ ವ್ಯಾಸತೀರ್ಥಾದಿಗಳು ನೋಡಿ ತಿಳಿದು ಋಜುತ್ವ ನಿಶ್ಚಯಿಸಿಯೇ ಅವಕ್ತವ್ಯತ್ವಜ್ಞಾನದಿಂದಲೇ ಸುಮ್ಮನಿದ್ದರೆಂಬಲ್ಲಿ ಸಾಧಕೋಪನ್ಯಾಸ ಮಾಡಲಾಗಿದೆ. ಆದ್ದರಿಂದ ಉಕ್ತದಾಸರ ಹಾಡುಗಳು ಗುರುರಾಜ ಋಜುತ್ವ ವಿಷಯದಲ್ಲಿ ಪ್ರಮಾಣಗಳೇ. ಅವುಗಳು ಕೃತಕಗಳು ಎಂಬಲ್ಲಿ ಏನೇನೂ ಪ್ರಮಾಣವಿಲ್ಲ. ಅನೇಕ ಮಾನ್ಯ ಪಂಡಿತರಿಂದಲೂ ಅಂಗೀಕೃತವಾಗಿವೆ.

**ಆರನೆಯ ಅಧ್ಯಾಯವು ಮುಗಿಯಿತು.**

## ಅಧ್ಯಾಯ 7

### ತೃತೀಯ ಪ್ರಮಾಣ : ಸ್ವಾಪ್ನವೃನ್ದಾವನಾಖ್ಯಾನ

1.ಇದು ದೇವಸಂಬಂಧಿ ಅದ್ಭುತ ಅಸದೃಶ ಕಥಾನಕವು. ಸರ್ವ ಪ್ರಮಾಣಗಳಿಗೂ ಅವಿರುದ್ಧವಾಗಿದೆ. ಯದ್ಯಪಿ ಅನೇಕ ಪ್ರಕರಣಗಳಿಗೆ ಪರಸ್ಪರ ಸಂಬಂಧಾಜ್ಞಾನದಿಂದ ದೋಷಶಂಕೆಯು ಹುಟ್ಟುತ್ತದೆ. ಆದರೂ ವಿಲಕ್ಷಣ ರೀತಿಯಿಂದ ಲಕ್ಷ್ಮೀದೇವಿಯೋಪಾದಿಯಲ್ಲಿ ತನ್ನ ಉತ್ಪತ್ತಿ ರೀತಿಯಿಂದಲೇ ಈ ಗ್ರಂಥವು ಎಲ್ಲಾ ದೋಷ ಸಂಶಯವನ್ನು ತಳ್ಳಿಹಾಕುತ್ತದೆ. ಒಬ್ಬಾನೊಬ್ಬ ಲಕ್ಷಣಸಂಪನ್ನ ತೌಳವ ಬ್ರಾಹ್ಮಣ ಬಾಲಕನು ಏಡಮೂಕನಾಗಿ ಶ್ರೀ ವಾದಿರಾಜ ಗುರುಗಳ ಕಾಲದಲ್ಲಿಯೇ ಮಠದಲ್ಲಿ ಸೇವಕನಾದನು. ಗುರುಗಳು ವೃನ್ದಾವನ ಪ್ರವೇಶ ಮಾಡಿದ ಮೇಲೆ ಶ್ರೀ ವೇದವೇದ್ಯರ ಕಾಲದಲ್ಲೂ ಮಠದ ಸೇವಕನಾಗಿದ್ದು, ಅವರೂ ವೃನ್ದಾವನಸ್ಥರಾದ ಮೇಲೆ ಶ್ರೀ ವೇದನಿಧಿಗಳ ಕಾಲದಲ್ಲೂ ಅವನೇ ಹರಿಗುರು ಭಕ್ತಿಯಿಂದ ಮಠದಲ್ಲಿ ಸೇವೆ ಮಾಡಿಕೊಂಡಿದ್ದನು. ಕ್ರಿ.ಶ. 1630 ನೇ ವರ್ಷದಲ್ಲಿ [ಅಮುದ್ರಿತ ಪ್ರಾಚೀನ "ಗುರುರಾಜ ಮಾಹಾತ್ಮ್ಯಗಳು" ಎಂಬ ಕನ್ನಡಪತ್ರದಲ್ಲಿ 'ಏಡ ಮೂಕನಿಗೆ ಸ್ವಪ್ನ ಹೇಳಿದ್ದು

1630' - ಎಂದಿದೆ] ಸುಮಾರು ಆತನಿಗೆ ಅರವತ್ತೆಂಟು ವರ್ಷದ ವೃದ್ಧಾಪ್ಯ ಕಾಲ. ಆಗ ರಾತ್ರಿ ಆತನಿಗೆ ತನ್ನಸ್ವಪ್ನದಲ್ಲಿ ಶ್ರೀ ವಾದಿರಾಜ ಗುರುಗಳು ಆಗಿಂದಾಗ್ಗೆ ದರ್ಶನ ಕೊಟ್ಟು (XII 81-86 ರಲ್ಲಿ ಹೇಳಿದಂತೆ) ಸಂಗೀತ ಸ್ವರಸಂಯುಕ್ತವಾಗಿ ದಿವ್ಯ ಶ್ಲೋಕಗಳನ್ನು ಶ್ರವಣಮಾಡಿಸಿ, ಅವನಿಗೆ ವಾಕ್ಛಕ್ತಿ ಕೊಟ್ಟು ಪ್ರಾತಃಕಾಲದಲ್ಲಿ ಆ ಒಂದೆರಡು ಶ್ಲೋಕಗಳನ್ನು ಅವನಿಂದ ಗುರುಗಳ ಮುಂದೆ ಹೇಳಿಸಿ ಬರೆಯಿಸಿ ಆ ಆಖ್ಯಾನ ಗ್ರಂಥವನ್ನು 2258 ಶ್ಲೋಕದಷ್ಟು ಬೆಳೆಯಿಸಿ ಸುಮಾರು 1642ರಲ್ಲಿ ಸಮಾಪ್ತಿ ಹೊಂದಿಸಿ ದೇವ ಕಾರ್ಯನಿರ್ವಾಹಕ್ಕಾಗಿ ಪ್ರಕಟಮಾಡಿದ್ದಾರೆ. ಜಗತ್ತಿನಲ್ಲಿ ಇಷ್ಟು ದೊಡ್ಡ ಅದ್ಭುತ ಸ್ವಾಪ್ನಗ್ರಂಥ ಇನ್ನೊಂದಿಲ್ಲ. ವಾ. ಗು ಚ. VII 16-20: "ಅಸ್ಮದ್ಗುರೌ ವೇದನಿಧೌ ಪ್ರಸಾದೋ ವಾದಿರಾಣ್ಮುನೇಃ | ಕಿಂ ವಕ್ತವ್ಯೊ ಯತೋಽಸ್ಮಾಭಿಃ ಪ್ರತ್ಯಕ್ಷೀಕೃತ ಏವಯತ್ ‖16‖ ಏಡಮೂಕಂ ದ್ವಿಜಂ ಸ್ವಪ್ನೇ ಬೋಧಯನ್ನಾತ್ಮ ವೃತ್ತಕಂ| ಶ್ರೀಮಂದ್ವೃನ್ದಾಖ್ಯಾನಂ ಪಠತಾಂ ಸರ್ವ ಸಿದ್ಧಿದಂ ‖17‖ ತೋಷಯನ್ ಸಜ್ಜನ ಮನಃ ಸ್ವಮಾಹಾತ್ಮ್ಯಾವಬೋಧಕಂ | ಮಂತ್ರ ತುಲ್ಯಂ ಮಹಾಗ್ರಂಥಂ ರಚಯಾಮಾಸವಾದಿರಾಟ್ ‖18‖ ಪ್ರಾತಸ್ತದ್ವಚನಾಚ್ಚಿತ್ರಂ ನಿಃಸೃತಂ ಗುರುರಾಣ್ಮುಮ | ಶ್ರೀ ವೇದನಿಧಿರಾಕರ್ಣ್ಯ ಲೇಖಯಾಮಾಸ ಮತ್ಕರಾತ್ ‖19‖ ಸ್ವಪ್ನಜ್ಞಾತಂ ಗುರುಪೊಕ್ತಂ ಪ್ರಭಾತೇ ಕೀರ್ತಯನ್ ಜಡಃ | ತತಃ ಪರಂ ಮೂಕ ಏವ ಸಾಕ್ಷಿ ಚಾಹಂಚಮೇ ಗುರುಃ ‖20‖ ಹೀಗೆ ಏಡಮೂಕ ಬೆಳಿಗ್ಗೆ ಎದ್ದಾಗ ಮಾತಾಡಲು ಸಮರ್ಥನಾಗಿ ಗುರುಗಳ ಮುಂದೆ ತಾನು ಕೇಳಿದಂತೆ ಹೇಳಿ, ತಾಳ ಪತ್ರದಲ್ಲಿ ರಾಮಚಂದ್ರಾಚಾರ್ಯನೆಂಬ ಅವರ ಶಿಷ್ಯನಿಂದ ಅವರು ಬರೆಯಿಸಿ ತಯಾರುಮಾಡಿದ ಗ್ರಂಥವಿದು. ಗ್ರಂಥವು ಸಿದ್ಧಯೋಗಿ, ಭಾವಿ ಗರುಡರೆಂದು ಪ್ರಖ್ಯಾತಿ ಹೊಂದಿದ್ದ ಶ್ರೀ ವೇದನಿಧಿಗಳಿಂದ ಸಂಪಾದಿತವೂ ಲೇಖಿತವೂ ಆಗಿ ಸಂಶೋಧಿತವಾದದ್ದು. ಇವೆಲ್ಲಾ ವಿವರ ಸುಮಾರು 1640ರಲ್ಲಿ ಶ್ರೀ ವೇದನಿಧಿಗಳಿಂದಲೇ ಪ್ರತಿಷ್ಠಿತವಾದ ಅಣುವೃನ್ದಾವನಾಖ್ಯಾನ ಶಿಲೆಯಲ್ಲಿನ ಕೊನೆಯ ಎರಡು ಶ್ಲೋಕಗಳಿಂದ ವ್ಯಕ್ತವಾಗುತ್ತೆ. "ವಾದಿರಾಜಾಯತಿನಾ ಬ್ರಾಹ್ಮಣ ಸೃಷ್ಟಮೂರ್ತಿನಾ | ಕೃತಂ ವೃನ್ದಾವನಾಖ್ಯಾನಂ ಪಠತಾಂ ಸಂಪದಾಂ ಪದಂ ‖ ವೇದನಿಧ್ಯಾಕ್ಯಯತಿನಾ ವಾದಿರಾಜೇನ ಚೋದಿತಂ | ಸ್ವಾಪ್ನಂ ವೃನ್ದಾವನಾಖ್ಯನಂ ಲಿಖಿತಂ ಪ್ರೀತಯೇ ಗುರೋಃ।" ಎಂದು ಅಪ್ರಾಮಾಣ್ಯ ಶಂಕಾನಿವಾರಕವಾಗಿದೆ. ಶ್ರೀವೇದನಿಧಿಗಳು ವೃದ್ದರು. ಏಕೆಂದರೆ ಅವರು ಶ್ರೀ ವಾದಿರಾಜರಿಗೂ ಶಿಷ್ಯರಾಗಿದ್ದರು, ಶ್ರೀ ವೇದವೇದ್ಯರಿಗೂ ಶಿಷ್ಯರಾಗಿದ್ದರು. ಅವರ ಚರಿತ್ರೆಯೂ ಸ್ವಲ್ಪ ಮಾತ್ರ ವಾ.ಗು.ಚ ಗ್ರಂಥದಲ್ಲಿ VII 5-22 ರಲ್ಲಿದೆ. ಈ ಆಖ್ಯಾನ ಗ್ರಂಥವು ಪ್ರಾಯಶಃ 1642 ರಲ್ಲಿ ಸಮಾಪ್ತವಾಯಿತು. ಹನ್ನೊಂದನೆಯ ಅಧ್ಯಾಯದ ಗರುಡಸ್ತಂಭ ಸಂಬಂಧಿ ಶ್ಲೋಕಕ್ಕೆ ಸೋದೆಯಲ್ಲಿ 1640 ರಲ್ಲಿ ಕೆತ್ತಿಸಿದ ಶಿಲಾಶಾಸನದ ನಿರ್ದೇಶವೇ ಇದೆ. [ಪುಟ 232 Annual ReportS of South Indian Epigraphy 1952 ನೋಡಬಹುದು. ] XI 82: ಧ್ವಜಸ್ತಂಭೋ ದ್ವಿಜಶ್ರೇಷ್ಠ ಭುಜಸ್ತಂಭೇ ದೃತೋಮಯಾ ಎಂದು ಆಖ್ಯಾನವಿದೆ. ವೇದನಿಧಿಗಳ ಸ್ವಪ್ನ, ಗರುಡಸ್ತಂಭಧಾರಣೆ ಮುಂತಾದ ಮಹಿಮೆಗಳು ಇವಕ್ಕೆ ಸ್ವಲ್ಪ ಪೂರ್ವದಲ್ಲೇ ಆಗಿರಬೇಕು. ಇದಾದ ಮೇಲೆ ಇನ್ನು ಹನ್ನೊಂದು ಅಧ್ಯಾಯ ಬರೆಯಿಸಿ ಆಖ್ಯಾನ ಮುಗಿದಿದೆ ಎಂದ ಮೇಲೆ ಆಖ್ಯಾನದ ಸಮಾಪ್ತಿ 1642 ಎಂದಿಟ್ಟು ಕೊಳ್ಳುವುದರಲ್ಲಿ ಬಾಧಕವಿಲ್ಲ. ವಿಪ್ರನಿಂದ ಹದಿನೇಳು ಅಧ್ಯಾಯಗಳು

ಪ್ರಕಟಿಸಲ್ಪಟ್ಟ ಮೇಲೆ ಆತನಿಗೆ ಅಪಮೃತ್ಯು ರೂಪವಾದ ಪ್ರಾಣಗಂಡವು ಒದಗಿತು. ಗುರುರಾಜರ ಅನುಗ್ರಹದಿಂದ ಆ ಕಂಟಕವೂ ಪರಿಹೃತವಾಯಿತೆಂದು ಆಖ್ಯಾನದಲ್ಲೇ ಇದೆ. (XVII 53-57). ಇದು 1641 ರಲ್ಲಿ ಆಗಿರಬಹುದು. ನಂತರ ಇನ್ನೂ ಐದು ಅಧ್ಯಾಯಗಳನ್ನು ಯಥಾಶ್ರುತಂ ಬರೆಯಿಸಿ ಗ್ರಂಥ ಸಮಾಪ್ತಿಯಾದ ಮೇಲೆ ವೃದ್ಧ ವಿಪ್ರನೂ ಪ್ರಾಯಶಃ 1642 ರಲ್ಲಿ ದೈವಾಧೀನನಾದನು. ಗುರುಗಳೂ ಪರಮ ವೃದ್ದರು. ಅವರೂ ಸುಮಾರು 1645 ರಲ್ಲಿ ವೃನ್ದಾವನಸ್ಥರಾದರು. ಕೃತಿಲೇಖಕ ಶ್ರೀ ರಾಮಚಂದ್ರಾಚಾರ್ಯರು ಆ ವರ್ಷವೇ ಪ್ರಾಯಶಃ ಗುರುಗಳಿರುವಾಗಲೇ 1645 ರಲ್ಲಿ ವಾ.ಗು.ಚ. ಗ್ರಂಥ ಬರೆದರು. ಆ ಗ್ರಂಥವು ಆಖ್ಯಾನ ಗ್ರಂಥಕ್ಕೆ ಸಹಾಯ ಸಾಹಿತ್ಯರೂಪವಾಗಿದೆ. ವಾ.ಗು.ಚ ಗ್ರಂಥದಲ್ಲಿ ಮಾತ್ರವಲ್ಲ, ವೇದಗರ್ಭ ಸೇತುಮಾಧವಾಚಾರ್ಯ ಸೂರಿ ಎಂಬ ಉತ್ತರಾದಿ ಮಠೀಯರು, ದಕ್ಷಿಣದೇಶದವರು, ಸುಮಾರು 1865 ರಲ್ಲಿ ರಚಿಸಿದ ವಿಶ್ವಪ್ರಿಯವಿಲಾಸ ಎಂಬ ಸಂಸ್ಕೃತ ಗ್ರಂಥದಲ್ಲೂ ಅದೇ ಹೆಸರಿನ ಕನ್ನಡ ಕಾವ್ಯದಲ್ಲೂ, ಮತ್ತು ಕೊಚ್ಚಿ ರಾಜಾಸ್ಥಾನದ ಧರ್ಮಾಧಿಕಾರಿ ವಿದ್ವಾಂಸರಾದ ಕೊಚ್ಚಿಯಲ್ಲಿದ್ದ ರಂಗಪ್ಪಾಚಾರ್ಯರೆಂಬ ವ್ಯಾಸರಾಯ ಮಠೀಯರು ಸುಮಾರು 1870 ರಲ್ಲಿ ಬರೆದ ವಿಶ್ವಪ್ರಿಯಲೀಲಾವಿಲಾಸವೆಂಬ ಕಾವ್ಯದಲ್ಲೂ ಆಖ್ಯಾನ ಗ್ರಂಥಕ್ಕೆ ಗೌರವಪೂರ್ವಕವಾದ ನಿರ್ದೇಶವಿದೆ. ಉಡುಪಿಯ ಎಂಟು ಮಠಗಳಲ್ಲಿಯೂ, ಮತ್ತು ಭೀಮನಕಟ್ಟೆ ಮಠದಲ್ಲಿಯೂ ಕೂಡ ಪ್ರಾಚೀನ ಲಿಖಿತ ಆಖ್ಯಾನ ಪ್ರತಿ ಇದೆ ಎಂದು ತಿಳಿದುಬರುತ್ತದೆ. ಕಿಂಚ ಆಖ್ಯಾನ ಗ್ರಂಥದ ಹದಿನಾರು ಪದ್ಯಗಳನ್ನು [ಅಣು ವೃನ್ದಾವನಾಖ್ಯಾನ ಒಟ್ಟು 18 ಶ್ಲೋಕವಿದೆ. ಅದರ 16 ಶ್ಲೋಕಗಳು ಕಲ್ಲಿನಲ್ಲಿ ಕೊರೆಯಿಸಲ್ಪಟ್ಟಿವೆ. ಅದರ 6 ಶ್ಲೋಕ ಗುರುರಾಜ ಪ್ರೋಕ್ತವಾದರೂ ಸ್ವಾ.ವೃಂ.ಆ.ನದಲ್ಲಿಲ್ಲ. 15-16ನೇ ಶ್ಲೋಕಗಳು ಸ್ವಲ್ಪ ವಿಪರಿಣಾತವಾದ ಆಖ್ಯಾನ ಶ್ಲೋಕಗಳು ಕೊನೆಯ ಎರಡು ಶ್ರೀ ವೇದನಿಧಿಕೃತವಾದವು ಶಿಲೆಯಲ್ಲಿಲ್ಲ. ಈ ಶಿಲಾ ಸ್ಥಾಪನೆ ವಾ.ಗು.ಚ.ದಲ್ಲಿ ಹೇಳಲ್ಪಟ್ಟಿರುವುದರಿಂದ ಮತ್ತು ಇತರ ಚಿಹ್ನೆಗಳಿಂದ 1640ರಲ್ಲಿ ಮಾಡಲ್ಪಟ್ಟಿತೆನ್ನಬಹುದು] ಆರಿಸಿ ಜನರ ನಿತ್ಯಪಾರಾಯಣಾರ್ಥವಾಗಿ X 72 ಶ್ಲೋಕ ಸೂಚಿತ ಆಜ್ಞಾನುಸಾರ ಆಗಲೇ (1640ರಲ್ಲಿಯೇ) ವಿಶಾಲ ಶಿಲಾದಲ್ಲಿ ಶ್ರೀವೇದನಿಧಿಗಳು ಕೊರೆಯಿಸಿದ್ದಾರೆ. ಆ ಶಿಲೆಯು ಆಗಲೇ ಶ್ರೀವೇದವೇದ್ಯರ ವೃನ್ದಾವನ ಸಮೀಪದಲ್ಲಿ ಸ್ಥಾಪಿತವಾಗಿ ಅದ್ಯಾಪಿ ಪೂಜಿತವಾಗಿದೆ. ಆ ಕಲ್ಲಿನ ವಿಷಯದಲ್ಲೂ ವಾ.ಗು.ಚ. ಶ್ಲೋಕವಿದೆ. VII 21-22 "ಅಣುವೃನ್ದಾವನಾಖ್ಯಾನಂ ಶ್ರೀ ವೇದನಿಧಿ ಸದ್ಗುರುಃ । ಸ್ವಾಪ್ನ ವೃನ್ದಾವನಾಖ್ಯಾನಾತ್ಸಂಗೃಹ್ಯಾಲೇಖ್ಯ ಭಕ್ತಿತಃ ॥21॥ ಲೇಖಯಿತ್ವಾ ಶಿಲಾಯಾಂ ಸ ವೃನ್ದಾವನತಟೇ ಬಹಿಃ । ಸ್ಥಾಪಯಾಮಾಸ ಭಕ್ತಾನಾಂ ನಿರಂತರ ಜಪಾಯ ಹಿ ॥22॥" ಆದ್ದರಿಂದ ಸಮಗ್ರ ಗ್ರಂಥವೇ ಅನ್ಯರಿಂದ ಅನ್ಯಕಾಲದಲ್ಲಿ ಏತಕ್ಕೆ ಕೃತವಾಗಿರಬಾರದು ಎಂಬ ಶಂಕೆಯು ನಿರ್ಮೂಲ.

2.ಇದಕ್ಕಿಂತ ನಿಃಶಂಕ ನಿಶ್ಚಯ ಹುಟ್ಟಿಸುವ ಲಿಂಗವೆಂದರೆ 1876ರಲ್ಲಿ ಶ್ರೀಸತ್ಯಪರಾಕ್ರಮ'ತೀರ್ಥರು ಅಖ್ಯಾನವನ್ನು ಅದರ ಮಾಡಿರುವುದು. ["ಸುಮೃತ್ತಿಕಾರಿ ಮತ್ತಗಜಾಂಕುಶ" ಎಂಬ ಹೆಸರಿನ 1885ರಲ್ಲಿ ಮುದ್ರಿತ ಗ್ರಂಥದಲ್ಲಿ ಈ ವಿಷಯವು ನಿರೂಪಿತವಾಗಿದೆ. ಆ ಸಂಸ್ಕೃತ ಕನ್ನಡ ಮಿಶ್ರಭಾಷೆಯ ಗ್ರಂಥಸ್ಥ ಈ ಭಾಗವನ್ನು ನಾನು ಸಂಗ್ರಹಿಸಿ ಕನ್ನಡದಲ್ಲೇ ಹೇಳುತ್ತೇನೆ. [1885 ನೇ ಇಸವಿ ಜನವರಿ ತಾರಣಸಂವತ್ಸ ಮಾಘ ಶುದ್ಧ ದ್ವಾದಶಿಯ ದಿನ ಅನೇಕ

ವೈಷ್ಣವರು ಶ್ರೀ ಸತ್ಯವೀರ ತೀರ್ಥರ ಸನ್ನಿಧಾನದಲ್ಲಿ ಸಭೆಮಾಡಿ ಮದ್ರಾಸಿನಲ್ಲಿ ತಮ್ಮ ದುಃಖವನ್ನು ಹೇಳಿಕೊಂಡರು. ಏನೆಂದರೆ: ಉಡುಪಿಗೆ ಹೋಗಿದ್ದ ವೈಷ್ಣವರು ಹಿಂತಿರುಗಿ ಬಂದಿದ್ದಾರೆ. ಅಲ್ಲಿ ವಿಶ್ವಾಧೀಶತೀರ್ಥ ಸ್ವಾಮಿಗಳು ವಾದಿರಾಜ ಋಜುತ್ವಕ್ಕೆ ಬೇಕಾದಷ್ಟು ಪ್ರಮಾಣ ಕೊಟ್ಟಿದ್ದಾರೆ. ನಾವು ಏನು ಮಾಡಬೇಕೆಂದು ಕೇಳಿದರು. ಆಗ ಶ್ರೀ ಸತ್ಯವೀರ ಸ್ವಾಮಿಗಳವರು ಋಜುತ್ವವಾದಿಗಳ ನಿಲುವನ್ನು ಖಂಡಿಸಿದರು. ಮತ್ತು ಮೃತ್ತಿಕಾಧಾರಣ ಸಂಪ್ರದಾಯವನ್ನು ಖಂಡಿಸಿದರು. ಅವರೆಲ್ಲರೂ ಸೇರಿ "ಮಾರ್ತಿಕಗರ್ವನಿರ್ವಾಪಣ" ಎಂಬ ಗ್ರಂಥವನ್ನು ಮುಂಬಯಿಯಲ್ಲಿ ಪ್ರಿಂಟು ಮಾಡಿಸಿ ಕುಂಭಕೋಣ ಮತ್ತು ಇತರ ಮತ ಸಂಬಂಧಿ ಕೇಂದ್ರಗಳಿಗೆ ಕಳಿಸಿದರು. ಆದರೆ ಶ್ರೀ ಸತ್ಯವೀರ ಸ್ವಾಮಿಗಳವರ ಕಾರ್ಯವು ತಮ್ಮ ಸ್ವಂತ ಗುರುಗಳಾದ ಶ್ರೀ ಸತ್ಯಪರಾಕ್ರಮತೀರ್ಥರ ಕಾರ್ಯಕ್ಕೆ ಪರಮವಿರುದ್ಧವಾಗಿದೆ. ಅಪಸಿದ್ಧಾಂತಕ್ಕೆ ನಿದರ್ಶನವಾಗಿದೆ. ಹೇಗೆಂದರೆ 1876ನೆಯ ಧಾತ- ಸಂವತ್ಸರದಲ್ಲಿ ಕುಂಭಕೋಣದಲ್ಲಿರುವ ಕೆಲವರು ಶಿಷ್ಟ ವೈದಿಕ ವೈಷ್ಣವರು ತಮ್ಮ ತಮ್ಮಲ್ಲಿ ಶ್ರೀ ವಾದಿರಾಜರ ಋಜುತ್ವ ವಿಷಯದಲ್ಲಿ ಮತ್ತು ಅವರ ಮೃತ್ತಿಕಾಲೇಪನ ವಿಷಯದಲ್ಲಿ ಕಲಹ ಮಾಡಿಕೊಂಡು ಈ ವಿಷಯದಲ್ಲಿ ತಮ್ಮ ಸ್ವಾಮಿಗಳ ನಿರ್ಣಯ ಪಡೆಯಬೇಕೆಂದು ನಿಶ್ಚಯಿಸಿ ಒಂದು ಅರ್ಜಿಯನ್ನು ಬರೆದುಕೊಂಡರು. ಕೆಳಕಂಡ ನಾಲ್ಕು ವಿಷಯಗಳಲ್ಲಿ ತಮ್ಮ ನಿರ್ಣಯವನ್ನು ಹೇಳಬೇಕೆಂದು ಶ್ರೀ ಸತ್ಯಪರಾಕ್ರಮ ತೀರ್ಥರನ್ನು ಪ್ರಾರ್ಥಿಸಿದರು. 1. ಶ್ರೀ ವಾದಿರಾಜರು ವಾಯುದೇವರಿಗೆ ಸಮರೆಂದು ಗ್ರಾಹ್ಯವಾಗಿ ಮೃತ್ತಿಕಾಲೇಪನ ಪೂರ್ವಕವಾಗಿ ಸಮರೆಂದು ಉಪಾಸನೆ ಮಾಡಬೇಕೇ? 2. ಋಜುತ್ವ ಪಕ್ಷಪಾತಿಗಳು ಉದಾಹರಿಸುವ ವೃನ್ದಾವನಾಖ್ಯಾನ ಮತ್ತು ಬ್ರಹ್ಮಾಂಡ ಪುರಾಣಾದಿಗಳು "ಋಜುತ್ವಕ್ಕೆ" ಪ್ರಮಾಣಗಳೆಂದು ಗ್ರಾಹ್ಯವೇ? 3. ಅವರು ಋಜುತ್ವ ವಿರೋಧಿಗಳು ದೈತ್ಯರೆಂದು ನಿಂದಿಸುತ್ತಿರುವುದು ಸರಿಯೇ? 4. ಮತ್ತು ಕೆಲವು ಜನರನ್ನು ಅವರು ಬಲಾತ್ಕರಿಸಿ ವಾದಿರಾಜ ಮೃತ್ತಿಕಾಧಾರಣೆ ಮಾಡಿಸುತ್ತಿರುವುದು ಯುಕ್ತವೇ? ಎಂದು ನಾಲ್ಕು ಪ್ರಶ್ನೆಗಳಿಗೆ ಉತ್ತರ ಪ್ರಾರ್ಥಿಸಿದ್ದರು. ಅರ್ಜಿಯನ್ನು ನೋಡಿ ಶ್ರೀ ಸತ್ಯಪರಾಕ್ರಮ ತೀರ್ಥರು ಕುಂಭಕೋಣದ ಸಂಗಮೇಶ್ವರ ವೇದಾವ್ಯಾಸಾಚಾರ್ಯರೆಂಬ ಅರ್ಜಿದಾರನನ್ನು ಕರೆಯಿಸಿ ತಮ್ಮ ನಿರ್ಣಯವನ್ನು ಸಮಕ್ಷಮವಾಗಿ ಬರವಣಿಗೆಯಲ್ಲಿ "ನಿರೂಪ" ರೂಪವಾಗಿ ತಿಳಿಸಿಬಿಟ್ಟರು. ಸದರಿ ನಿರೂಪದಲ್ಲಿ ಒಂದು ಮತ್ತು ಎರಡನೆಯ ವಿಷಯಗಳಲ್ಲಿ ಯಾವ ವಿರೋಧವನ್ನೂ ಮಾಡಬಾರದೆಂದೂ ಆದರೆ ಆ ಋಜುತ್ವ ವಾದಿಗಳು ಸ್ವೇತರರನ್ನು ದೈತ್ಯರೆಂದು ಕರೆಯುವುದು ಯುಕ್ತವಲ್ಲವೆಂದೂ, ಹಾಗೆ ಬಲಾತ್ಕಾರವಾಗಿ ಮೃತ್ತಿಕಾಲೇಪನ ಮಾಡಿಸುವುದು ತಪ್ಪೆಂದೂ ಬರೆಯಿಸಿ ಕಳುಹಿಸಿದರು. ಶ್ರೀ ವೇದವ್ಯಾಸಾಚಾರ್ಯರು ಆ ಆಜ್ಞಾಪತ್ರವನ್ನು ತಂದು ಚಕ್ರಪಾಣಿ ದೇವಾಲಯದಲ್ಲಿ ಓದಿ ಕಲಹವನ್ನು ನಿಲ್ಲಿಸಿದರು. ನಂತರ ಶಾಂತಿಯುಂಟಾಯಿತು. ಹೀಗೆ ಹೇಳಿ ಈ ಸುಮೃತ್ತಿಕಾರಿ ಮತ್ತಗಜಾಂಕುಶ ಗ್ರಂಥಕಾರರು ಈ ಋಜುತ್ವ ಮೃತ್ತಿಕಾಲೇಪನ ವಿಷಯಗಳಲ್ಲಿ ವಾದಕಥಾರೂಪ ವಿಚಾರ ನಡೆಯಿಸಿ ಹತ್ತೊಂಭತ್ತು ಪ್ರಶ್ನೋತರ ವಿನ್ಯಾಸಗಳಿಂದ ಚರ್ಚಿಸಿ ಮಾರ್ತಿಕ ಗರ್ವ ನಿರ್ವಾಪಣವನ್ನು ಖಂಡಿಸಿ ತಮ್ಮ ನಿರ್ಣಯ ಹೇಳಿದ್ದಾರೆ. 24 ಪುಟಗಳಿವೆ. ಹೆಚ್ಚಾಗಿ ವಿಚಾರಮಾಡಿ ಕೊನೆಗೆ "ಬಾಧಕಲೇಶಸ್ಯಾಪ್ಯಭಾವಾತ್ | ಬಹುಸಾಧಕ ಸದ್ಭಾವಾಚ್ಚ | ರಾಜರು ಋಜುಗಳು ಎಂಬ

ಸಂಯಜ್ಞಾನದಿಂದಲೂ, ತನ್ಮೃತ್ತಿಕಾಧಾರಣತಚ್ಚಿಕೀರ್ಷು ವಿಶ್ವಾಸಿ ಸರ್ವಮಠೀಯರಿಂದಲೂ ಕರ್ತುಂ ಯೋಗ್ಯ ಎಂತಲೂ ಸಿದ್ಧಮಿತ್ಯಶೇಷಮತಿಮಂಗಳಂ | ಋಜುತ್ವೇನ ಸುನಿರ್ಣಿತೋ ವಾದಿರಾಜೋ ಜಗದ್ಗುರುಃ | ಸರ್ವದಾ ರಕ್ಷಕೊಭೂಯಾದಸ್ಮಾಕಂಧೃತತನ್ಮೃದಾ೦ | ಎಂದು ಮಂಗಳ ಶ್ಲೋಕ ಹೇಳಿ ಗ್ರಂಥ ಮುಗಿಸಿದ್ದಾರೆ. ಕೊನೆಯಲ್ಲಿ ಕನ್ನಡದಲ್ಲಿ ಮಟ್ಟುರಾಗದಲ್ಲಿ ಒಂದು ಋಜುತ್ವ ಪ್ರಶಂಸನೆ ಕೀರ್ತನೆ ರಚಿಸಿದ್ದಾರೆ. ಆರಂಭದಲ್ಲೇ "ಸುಮೃತ್ತಿಕಾರಿ ಮತ್ತಗಜಾಂಕುಶಾಖ್ಯೋಯಂ ಗ್ರಂಥಃ | ಮುಂಬಯಿ ಸುಬೋಧ ಪ್ರಕಾಶ ಛಾಪಖಾನೆಯಲ್ಲಿ ಸನ್ 1885 ರಲ್ಲಿ ಛಾಪಿಸಿದ್ದು" ಎಂದಿದೆ.

ಗ್ರಂಥದ ಮೂಲಪ್ರತಿ ಶ್ರೀ ಸಿ.ಕೃಷ್ಣಸ್ವಾಮಿರಾವ್,ಬಿ.ಎ.,ಬಿ.ಟಿ., ನಿವೃತ್ತ ಹೈಸ್ಕೂಲ್ ಹೆಡ್ ಮಾಸ್ಟರ್, ನಂ.2 ಮೊದಲನೇ ಕ್ರಾಸ್, ಗವಿಪುರಂ ಬಡಾವಣೆ, ಬೆಂಗಳೂರು 19, ಇವರಲ್ಲಿದೆ. ಅವರ ಕರುಣೆಯಿಂದ ಪ್ರತಿ ಮಾಡಿಕೊಂಡು ಇಲ್ಲಿ ಸ್ವಲ್ಪ ಭಾಗ ಸಂಕ್ಷೇಪವಾಗಿ ನಾವು ಉವಾಹರಿಸಿದ್ದೇವೆ ಮತ್ತು ಫೋಟೋ ಭಾಗ ಸಹ ತೆಗೆದು ತೋರಿಸಲಾಗಿದೆ.

ಇನ್ನೊಂದು ವಿಷಯ ಏನೆಂದರೆ, 1876ರಲ್ಲಿ ಶ್ರೀ ಸತ್ಯಪರಾಕ್ರಮ ತೀರ್ಥರು ಜಂಖಂಡಿ ವಾದಿರಾಜಾಚಾರ್ಯರಿಗೆ ಪಲ್ಲಕ್ಕಿ ಕರವಸ್ತ್ರ ದೀಪಾದಿಗಳನ್ನು ಉಪಯೋಗಿಸಬಹುದೆಂಬ ಉದಾರ ಮರ್ಯಾದೆ ನಿರೂಪ ಕೊಟ್ಟಿದ್ದಾರೆ. ಆ ಶ್ರೀ ಶ್ರೀಗಳ ಪೂರ್ವಾಶ್ರಮ ವಂಶದವರು "ವಾಯಿಕರ್" ಗಳು ಅದ್ಯಾಪಿ ಋಜುತ್ವ ವಿಶ್ವಾಸ ಉಳ್ಳವರು.

ಶ್ರೀ ಸತ್ಯಪರಾಕ್ರಮ ತೀರ್ಥರು ಅಸದೃಶ ಪಂಡಿತರೂ ಹೌದು. ಶ್ರೀ ಸತ್ಯ ರತೀರ್ಥರಿಗೆ ಸಾಕ್ಷದ್ಗುರುಗಳೂ ಹೌದು. ಅಂಥ ಜ್ಞಾನಿಶ್ರೇಷ್ಠರ ಅಭಿಪ್ರಾಯವು ಮಾನ್ಯವೇ. ಹಾಗಾದರೆ ಯಾವ ಕಾರಣದಿಂದ ಶ್ರೀ ಸತ್ಯವೀರ ತೀರ್ಥರೂ ಮತ್ತು ಶ್ರೀ ಸತ್ಯಧೀರತೀರ್ಥರೂ ವ್ಯರ್ಥಕಲಹ ಮಾಡಿದರೆಂಬ ವಿಷಯದಲ್ಲಿ ಕಾರಣಗಳನ್ನು ಪ್ರಥಮಾಧ್ಯಾಯದಲ್ಲಿ ನಿರೂಪಿಸಿಯಾಗಿದೆ. ಆ ವಿಷಯದಲ್ಲಿ ಶ್ರೀ ಶ್ರೀ ಪ್ರದ್ಯುಮ್ನತೀರ್ಥರ ಹೇಳಿಕೆಯನ್ನೂ ಕೊಟ್ಟಿರುತ್ತೇವೆ. ಹರಿಭಕ್ತವಿಜಯ I. ಇದರ ಸಮ್ಮತಿ ತೋರಿಸಲಾಗಿದೆ.

3. ಶೋಧಕಾಗ್ರೇಸರರಾದ, ಆರ್. ಗೋವಿಂದರಾಯರು ಬಹು ಸಂಚಾರ ಮಾಡಿ ಜಂಖಂಡಿ ವಾದಿರಾಜಾಚಾರ್ಯರ 1891ರಲ್ಲಿ ಮುದ್ರಿಸಲ್ಪಟ್ಟಿದ್ದ ಆಂಗ್ಲ ಪುಸ್ತಕದ ಪ್ರತಿಯೊಂದನ್ನು ನನಗೆ ತೋರಿಸಿದರು. ಆ ಗ್ರಂಥವು ಜಂಖಂಡಿ ವಾದಿರಾಜಾಚಾರ್ಯರಿಂದಲೇ ಬರೆಯಲ್ಪಟ್ಟದ್ದು. ಅದರಲ್ಲಿ ಅವರು ಸ್ವಮಠೀಯರಿಗೂ ತಮಗೂ ಕಲಹ ಉಂಟಾದ ರೀತಿಯನ್ನೂ, ತಮಗಾದ ದುಃಖವನ್ನೂ ವಿವರಿಸಿದ್ದಾರೆ. ಮಾಧ್ವ ಸಮಾಜದ ಶಾಂತಿಗೇ ಧಕ್ಕೆಬಂದ ವಿವರವು ಚೆನ್ನಾಗಿ ಗೊತ್ತಾಗಲೆಂದು ಆ ಗ್ರಂಥದ ಮಲಪ್ರತಿಯನ್ನು ಸಂಪಾದಿಸಿ ಇಲ್ಲಿ ಕೊಟ್ಟಿರುತ್ತೇನೆ.

**The leaflet iS called 'An ExpoSition and runS aS followS:**

**'I live at a place going by the name of Shiraguppa juSt cloSe by Bellary in the MadraS preSidency. My name iS Jamkhandi Vadirajacharya. The circumStanceS of my birth are very peculiar and therefore I am Sure they will neither be inSipid nor out of place here to be mentioned. My mother**

waS without any iSSue till She reached a ripe old age, when, She waS adviSed to do homage at the Shrine of an aScetic named Sri Vadiraja Swamy whoSe relicS reSt in holy place at a place called Swadi, which haS conSequently become a frequent reSort of VaiShnavite pilgrimS. My mother by conStant and hearty devotion aS well aS by faithfully drinking the Mrittika (the holy red mud) in hiS Vrindavana (a holy tomb) noted for itS efficacy in fulfilling the deSireS of itS devoteeS, waS SucceSSful in propitiating him and waS bleSSed with the long-hoped-for Son in mySelf. I Studied our ShaStraS with the learned and revered Swamy Satya Parakrama of the Uttaradi Mutt and with the Swamy of KriShnapur in Udipi in the Mangalore DiStrict for more than 24 yearS, and by their favour waS SucceSSful in many diScourSeS with many PanditS living in Such diStant partS of the country aS KaShmir and otherS, for which I waS honoured with a palanquin and other accompanying honourS by the Swamy, my maSter and head of the VaiShnavite Sect.

Sri SatyaVeera Swamy, the SucceSSor of my maSter to the Uttaradi Mutt, being enviouS of my fame aS a ShaStri and out of Spite towardS me on account of my applying to my body the mud, I alwayS look upon with veneration and gratitude, wrote an unmannerly letter to H. H. the Chief of Jumkhandi while in MadraS in the Hindu year Taran, requeSting him to caSt me away and to puniSh me aS if I waS a criminal, calling me and the Holy Vadiraja Swamy “Teeka charya Drohee” -literally an offender againSt Teekacharya, a term reflecting the greateSt diSreSpect upon any body it iS conferred on, aS far aS the VaiShnava community iS concerned and alSo two or three otherS were Sent to R. B. Hucha Rao at Belgaum, to the agent of the Mutha at Koppal and to the prieSt of Hulgi, all full of deadly rancour againSt me and in each of them the favourite curSe 'TeekacharyaDrohee' waS repeated. Pocketing all Such inSultS flung at me, I remained aS calm aS an ocean, Supported by my diScipleS like R. B. Vijayendra Rao, Chief Secretary to the MySore Govt.

In the meanwhile Sri Satyaveera Swamy the author of my excommunication breathed hiS laSt.

**Sri Satya Dheera Swamy, hiS SucceSSor without himSelf going into detailS with regard to the notice of hiS predeceSSor for excommunicating me, at once confirmed all that Sri SatyaVeera had done by again iSSuing orderS for my excommunication to MySore, Adonee, and Belgaum from Gadag and Koppal reSpectively, in all of which, beSideS the uSual curSe named above, it waS Stated that my behaviour waS Similar to that of Sri Bhimanakatte Swamy, though thiS latter waS Superior to him in every reSpect, Save that of power. After a while, I halted at Chikodi on my way to Belgaum from Kolhapur with my Son, extremely weak on account of a Severe SickneSS, when the Swamy who alSo waS there cauSed uS to be turned out, not even taking into hiS conSideration the feeble State of my Son'S health in the heat of the day.**

**ThiS waS the finiShing Stroke to the SerieS of perSecutionS and inSultS flung at me and it had reached Such a State that I waS unable to bear it any longer. I lodged a complaint againSt HiS HolineSS Sri Satya Dheera Swamy in the MagiStrate'S Court at Bellary for having called me 'Teekacharya Drohi Tamoyogya' which meanS a perSon fit for hell. The MagiStrate diSmiSSed the complaint Saying that he waS not authoriSed to take cognizence of a religiouS matter, aS it waS. I referred the caSe to the High court of judicature at MadraS where by the unceaSing exertionS of Mr. BhaShyaayengar, a pleader of that place, the magiStrate waS ordered to take my caSe upon hiS file and to try it. The trial commenced anew at Bellary. My diSciple R. B. Vijendra Rao came of hiS own accord to give evidence on my behalf and proved to the SatiSfaction of everybody, quoting authoritieS for hiS StatementS that in-aS-much-aS Sri Vadiraja waS Superior to Teekacharya, the devoteeS of the former do not aS a matter of fact become the haterS of the latter. Sufficient witneSSeS being heard, the Swamy of the Uttaradi Mutt, waS charged with having committed the offence under Sec. 499 of the Indian P. Code and waS aSked to enter on hiS defence. My beSt thankS are here due to Mr. Ranga Rao, my pleader. At the trial Mr. P. Rama Rao, the pleader for the defence tried to aSk me queStionS like the following: 1) In Shiraguppa did you not take your mealS twice on the AmavaSya the 15th of the dark half of a Hindu month? 2) Do you not drink**

**Panaka (a drink like lemonoda) on EkadaShi dayS (the 11th day)? 3) Do you not make a bow to grhaSthaS (Secular gentlemen) touchiug their feet? 4) Do you not drink Panaka Sitting on a carpet? 5) In Ramadurga Hanmentrao'S houSe did you not offer Naivedya (the daily offer of food) to God, wearing new clotheS? 6) Do you not drink water Standing?**

**TheSe queStionS were properly objected to and the objectionS allowed aS it iS evident that they are quite irrelevant in a caSe for having abuSed me. After taking the evidence for the defence the MagiStrate let off the accuSed Swamy for want of Sufficient evidence. I preferred an appeal againSt thiS deciSion to the DiStrict Judge at Bellary. I left Bellary for Deccan, Hyderabad, accompanied by my pleader MeSSerS. K. Ranga Rao and Ananthachar to See the Swamy who waS there and who had requeSted me in a letter to See him in perSon when he had promiSed to take my caSe into hiS conSideration.**

**We Saw him, my caSe waS conSidered, and the orderS of excommunication iSSued by hiS predeceSSor in office, aS well aS by himSelf, were cancelled. Further he added, that, no one of hiS diScipleS waS to queStion my actS and requeSted me to refrain from conducting the caSe againSt him any further. We agreed and accordingly the caSe waS withdrawn.**

**In the beginning of the year 1891 I waS at Shahapur, where I waS entertained at a dinner party by a gentleman named SreenivaSa Rao Tatti where Some of hiS friendS were alSo preSent. PrieStS of that place and of Belgaum, began to Show their envy and hatred againSt me, by trying to prohibit perSonS from inviting me to their houSeS and from even talking with me. They proceeded even So far aS to obStruct a religiouS ceremony which waS to be performed at the houSe of one of the gentlemen invited by Mr. Tatti. When I came to know all thiS nonSenSe I, aS a matter of neceSSity, again complained before the MagiStrate of Shahapur againSt the agent of the Uttaradi Mutt Swamy and who waS the Secret inStrument by which all the proceedingS named above were Set into motion. The complaint waS granted and a warrant waS iSSued for hiS arreSt. He abSconded and waS not found until the day of trial, when he preSented himSelf in the court and begged my pardon**

through Mr. KaShinatha Rao Kalghatgi, Nazer to the Sub-Judge'S Court, Belgaum, which I granted, out of compaSSion for hiS gray hairS and after withdrawing the caSe I left Shahapur for Bellary. After all thiS again I hear that order No. 852 from Karnool of excommunication againSt the Said SrinivaSa Naik haS been widely circulated. Nothing can be more aStoniShing for the Swamin to act in thiS way, after himSelf having entered into a contract with me to the effect that no one waS to queStion my actS. But wonderS upon wonderS. I hear that a certain prieSt of Shahapur, named Annacharya Bhooka Bhag who gave evidence againSt the Swamy at Bellary haS been ordered by a letter to repair to the Swamy, wherever he may be and the Same orderS hiS excommunication until he doeS So. I do not know how to criticize thiS.... Still the Swamy, a holy man, perSiStS in committing further breacheS of faith by excommunicating a prieSt named Belkhod KriStachari of Chikodi for having taken hiS food with me. I think I can fill volumeS upon volumeS were I to continue my deScription of the unjuSt, ... orderS of HiS HolineSS Satya Dheera Swamy of Uttaradi Mutt. But that iS not my intention to do. Like him, I do not take pride in mortifying otherS. The picture which I have tried to draw in the expoSition which I lay before the public, will, I am Sure, enable people to Set a right value upon hiS actS aS well aS upon hiS Self. Suffice it to Say that I mean to take law again into my handS for having So inSulted me by the letter referred to towardS the concluding portion of my ExpoSition.'

The original of thiS 'An ExpoSition iS a FoolScap Sheet printed on three pageS. It waS found in poSSeSSion of SrI C. KriShna Swamy Rao, B.A., B.T., Retired High School Head MaSter, No. 2, FirSt CroSS, Gavipuram ExtenSion, Bangalore 19. I have copied it, got it photographed and reproduced it in full by Sri KriShna Swamy Rao'S kind courteSy. Sri KriShna Swamy Rao got it at Shiraguppa from a grand-Son of Jamkhandi Vadirajacharya.

Shahapur 22nd Feb. 1891 Jamkhandi Vadirajacharya

Dhundiraj Printing PreSS,

Shahapur

ತಥಾಚ ಸ್ವಾಪ್ನ ವೃನ್ದಾವನಾಖ್ಯಾನವು ದಿವ್ಯ ಪ್ರಾಚೀನ ಗ್ರಂಥವು; ವಿಶ್ವಾಸಾರ್ಹವೆಂದೇ ನನಗೆ ನಂಬಿಕೆ ಇದೆ.

**4. ಹೀಗಿದ್ದರೂ ಋಜುತ್ವ ವಿಚಾರ ಪುಟ 23 ರಲ್ಲಿ ಪೂರ್ವಪಕ್ಷಿಗಳು ಹೇಳುತ್ತಾರೆ:**

"ಆಖ್ಯಾನ ಪ್ರಾಮಾಣ್ಯ ಸಿದ್ಧೌ ವಾದಿರಾಜರ್ಜುತ್ವ ಸಿದ್ಧಿಃ ।

ಋಜುತ್ವ ಸಿದ್ಧೌ ಆಖ್ಯಾನ ಪ್ರಾಮಾಣ್ಯ ಸಿದ್ಧಿರಿತ್ಯನೊನ್ಯಾಶ್ರಯಃ ॥ ಇತಿ"

ಎಂದರೆ ಆಖಾನ ಪ್ರಾಮಾಣ್ಯ ಸಿದ್ಧಿಯಾದರೆ ಋಜುತ್ವ ಸಿದ್ಧಿಯಾಗುತ್ತದೆ; ಋಜುತ್ವ ಸಿದ್ಧಿಯಾದರೆ ಆಖ್ಯಾನ ಪ್ರಾಮಾಣ್ಯ ಸಿದ್ಧಿಯಾಗುತ್ತದೆ; ಹೀಗೆ ಅನ್ಯೋನ್ಯಾಶ್ರಯವೆಂದು ಹೇಳುತ್ತಾರೆ. ಇದು ಸಾಧುವಲ್ಲ. ಮಧ್ವಸಿದ್ಧಾಂತದಲ್ಲಿ ವಾಕ್ಯ ಪ್ರಾಮಾಣ್ಯವು ಸ್ವತಃ ಎಂದರೆ ಇನ್ನೊಂದು ಕಾರಣದ ಅಪೇಕ್ಷೆ ಇಲ್ಲದೆ ವಾಕ್ಯವು ಸ್ವಾಭಾವಿಕವಾಗಿ ಪ್ರಮಾಣವು ಎಂದು ಹೇಳಲ್ಪಟ್ಟಿದೆ. ಆದ್ದರಿಂದ ಆಖ್ಯಾನದ ಪ್ರಾಮಾಣ್ಯವು ಸ್ವತಃ ಸಿದ್ಧವಾಗಿದೆ. ಋಜುತ್ವ ಸಿದ್ಧಿಯ ಅಧೀನವಲ್ಲ. ಕಿಂಚ ಆಖ್ಯಾನವು ಸತ್ಪ್ರಮಾಣವಿರುದ್ಧವೆಂದು ಪ್ರಮಿತವಾಗಿದೆ. ಆದ್ದರಿಂದ 'ಆಖ್ಯಾನ ಪ್ರಾಮಾಣ್ಯ ಸಿದ್ಧವಾದರೆ' ಎಂಬ ಉಪಕ್ರಮವೇ ದ್ವೈತಮತ ವಿರುದ್ಧವಾಗಿದೆ. ಅಷ್ಟೇ ಅಲ್ಲ. "ಆಖ್ಯಾನಕ್ಕೆ ಅಪ್ರಾಮಾಣ್ಯ ಒಪ್ಪಿದರೆ ಋಜುತ್ವ ಸುಳ್ಳೆಂದಾಗುತ್ತದೆ, ಋಜುತ್ವ ಬಹು ಪ್ರಮಾಣದಲ್ಲಿ ಹೇಳಿದ್ದರೂ ಸುಳ್ಳೆಂದು ಒಪ್ಪಿದರೆ ಆಖ್ಯಾನವು ಅಪ್ರಾಮಾಣವೆಂದಾಗುತ್ತದೆ; ತಥಾಚ ಪೂರ್ವಪಕ್ಷದ ವಾದಕ್ಕೇ ಅನ್ಯೋನ್ಯಾಶ್ರಯ ಬರುತ್ತದೆ" ಎನ್ನಬಹುದು.

5. ಕಿಂಚ, ಆಖ್ಯಾನದಲ್ಲೇ ಸ್ವಪ್ರಮಾಣ್ಯ ಸಾಧಕ ಯುಕ್ತ್ಯುಪನ್ಯಾಸವು ಕಂಡುಬರುತ್ತದೆ. "ವಿಪ್ರಪ್ರಾಣಾವಧಿರ್ಯಾವತ್ಸತ್ಪ್ರಮಾಣಾವಿರೋಧತಃ । ತದ್ವ್ಯಾಖ್ಯಾ ಚ ಪ್ರವಕ್ಷ್ಯೇಽಹಂ ಮ್ವ್ಯಾಖ್ಯಾವಿಷ್ಟಯಾಽನಯಾ" ॥ III 81 ಎಂದು ಪ್ರತಿಜ್ಞೆ ಮಾಡಿದ್ದಾರೆ. ಹೀಗೆ ಆಖ್ಯಾನವು ಅಕಳಂಕಿತ ಪ್ರಾಮಾಣ್ಯೋಪೇತವಾದದ್ದು, ಮೂಲ ಸಕಲ ಪ್ರಮಾಣವಿರುದ್ಧತ್ವದಿಂದ ಎಂದು ಅನುವ್ಯಾಖ್ಯಾನ, ಭಾರತತಾತ್ಪರ್ಯ ನಿರ್ಣಯಾದ್ಯುಕ್ತ ನ್ಯಾಯದಿಂದಲೇ ಪ್ರಾಮಾಣ್ಯ ಸಾಧಿಸಬಹುದು. ಹೇಗೆ ವೇದಭಾಗವತಾದಿಗಳು ಸ್ವಪಜೀವ್ಯ ಪ್ರಬಲ ಪ್ರಮಾಣಾವಿರುದ್ಧವಾದ್ದರಿಂದ ಪ್ರಮಾಣಗಳೊ ಹಾಗೆಯೇ ಆಖ್ಯಾನವೂ ಅದೇ ಯುಕ್ತಿಯಿಂದ ಪ್ರಮಾಣವೆಂದೂ ಸಾಧಿಸಬಹುದು. ತಥಾಚ "ಓ ಸ್ವಾಪ್ನ ಗ್ರಂಥವು ಇದು; ಇದಕ್ಕೆ ಎಂತಹ ಪ್ರಾಮಾಣ್ಯ" ಎಂದು ಅಪಹಾಸ ಮಾಡುವುದು ಉಚಿತವಲ್ಲ. ಮಾನ್ಯ ಗ್ರಂಥವಾದ ಋಜುತ್ವ ಚಂದ್ರೋದಯದಲ್ಲಿಯೂ ಮಂತ್ರಮಹೋದಧಿ ವಾಕ್ಯವನ್ನು ಉದಾಹರಿಸಿ ಸ್ವಾಪ್ನಮಂತ್ರೋಪದೇಶಾದಿಗಳಿಗೂ ಪ್ರಾಮಾಣ್ಯ ಉಂಟೆಂದು ಸಾಧಿಸಿದ್ದಾರೆ. ಸ್ವಾಪ್ನೋಪದೇಶವೂ ಅಮೋಘವು (ಅರ್ಥಕ್ರಿಯಾಕಾರಿಯು). ಸ್ವಾಪ್ನ ವಚನಗಳೂ ಪ್ರಾಮಾಣ್ಯವುಳ್ಳವು: "ಯದ್ವಾಪಿ ಬ್ರಾಹ್ಮಣೋ ಬ್ರೂಯಾತ್, ದೇವತಾ ವೃಷಭೋಪಿವಾ। ಸ್ವಪ್ನಸ್ಥಮಥವಾ ರಾಜಾ ತತ್ತಥೈವ ಭವಿಷ್ಯತಿ" – ಇತ್ಯಾಚಕ್ಷತೇ ಚ ಸ್ವಪ್ನವಿದೋ ವ್ಯಾಸಾದಯಃ – ಇತಿ ಬ್ರ.ಸೂ.ಭಾ III 2-4 ಪ್ರಮಾಣವಿದೆ. ಪ್ರಕೃತ ಆಖ್ಯಾನ ಗ್ರಂಥವು 2200 ಶ್ಲೋಕಾತ್ಮಕವಾದದ್ದು. ಗುರ್ವಾಜ್ಞೆಯಿಂದ ಶ್ರೀ ವೇದನಿಧಿಗಳಿಂದ ಇಪ್ಪತ್ತೆರಡು ಅಧ್ಯಾಯಗಳಲ್ಲಿ ವಿಭಾಗ ಮಾಡಲ್ಪಟ್ಟು ಸಂಗೃಹೀತವಾಗಿದೆ. **'Self-explanatory'** ಗ್ರಂಥ **(XII 81-86)** ತನ್ನ ವಿಷಯದಲ್ಲಿ ಹುಟ್ಟಬಹುದಾದ ಸ ಶಂಕಾನಿವಾರಕತನದಿಂದ ಅನೇಕ ಸೂಕ್ಷ್ಮ ವೃತ್ತಾಂತಗಳನ್ನು ಅಲ್ಲಲ್ಲಿ ಹೇಳಿ, ಸ್ವಪ್ರಾಮಾಣ್ಯವನ್ನು ಮಾಡಿಕೊಟ್ಟು, ಸಚ್ಛಾಸ್ತ್ರಾನುಸಾರಿ ಅನೇಕಾನೇಕ

ರಹಸ್ಯಗಳನ್ನು ಹೇಳಿ "ಮದ್ವಾಕ್ಯಂ ಮಾನಸಂಸಿದ್ಧಂ ಸರ್ವಂ ಸಂಗ್ರಾಹ್ಯಮೇವ ಹಿ | ಚೋದ್ಯಾನರ್ಹೇತು ಮದ್ವಾಕ್ಯೇಚೋದ್ಯಂ ಕುರ್ವಾನ್ಪತತ್ಯಧಃ' | ಎಂಬ ಗುರುರಾಜರ ವಾಕ್ಯದಿಂದ ನಿರ್ಮೂಲ ಶಂಕಿಸುವವರಿಗೆ ಪ್ರತ್ಯವಾಯವನ್ನೂ ಪ್ರತಿಪಾದಿಸಿಬಿಟ್ಟಿದೆ. **(XI 44-45 ಹಾಗೆ V 1 XIII 57 ಇತ್ಯಾದಿ.)**

ಸರ್ವ ಆಖ್ಯಾನ ಗ್ರಂಥಕ್ಕೂ ವಿಷ್ಣುಪರವಾದ ಬೇರೆ ಅರ್ಥವೂ ಇದೆ. ಎಲ್ಲಾ ಶ್ಲೋಕಗಳೂ ಮಂತ್ರಾತ್ಮಕಗಳು, ಪಾಪಹಾರಿ, ಅಭೀಷ್ಟಪ್ರದಗಳು. **(IV 55, XI 64-66, XVI 95-100)** ಯಾವ ಜಗತ್ತಿನಲ್ಲೂ ಇಂತಹ ದೊಡ್ಡ ಸ್ವಾಪ್ನಗ್ರಂಥ, ದರ್ಜ್ಞೇಯ ಮಹತ್ವವುಳ್ಳದ್ದು ಇನ್ನೊಂದಿಲ್ಲ. ಅನೇಕ ಶ್ಲೋಕ ರಚನೆ ಸ್ವಪ್ನದಲ್ಲಿ ಆಗಿದ್ದರೂ ಅವುಗಳಲ್ಲಿ ಕೆಲವು ಮಾತ್ರ ಭೂಲೋಕದಲ್ಲಿ ಪ್ರಚಲಿತವಾಗಿವೆ. **XIV 73-78** ಶ್ರೀ ಹರಿ ಶ್ಲೋಕ ಯಾಥಾರ್ಥ್ಯ ರಕ್ಷತ. **XVI 72-73** ತದರ್ಥವಾಗಿ ಗುರುರಾಜರು ತಪಸ್ಸು ಮಾಡುತ್ತಾರೆ. **XIV 88-94** ಅದ್ವೈತ ಮತವನ್ನು ಪರಿಗ್ರಹಿಸಿದವನು ಅಂಧಂ ತಮಸ್ಸನ್ನೇ ಹೊಂದುತ್ತಾನೆ. **IX 65-77** ದ್ವೈತಮತ ರೀತಿಯಿಂದ ಧ್ಯಾನ ಮಾಡಿದರೆ ಶ್ರೀ ಹರಿ ದರ್ಶನವಾಗುತ್ತದೆ. ದರ್ಶನ ಪ್ರಕಾರ ಅದ್ಭುತ. **IX 79-85** ಹೆಚ್ಚು ಹೇಳುವುದರಿಂದೇನು? ಶ್ರೀಮನ್ಮಧ್ವಮತಂ ದಿವ್ಯಂ. **X 53-59** ಗ್ರಂಥವು ದೇವಕಾರ್ಯಸಿದ್ಧಿಗೋಸ್ಕರ ಪ್ರಕಟಿತವಾದದ್ದು, ಮಂದರ ಕ್ಷೇಮಸಿದ್ಧಿಗೋಸ್ಕರವೂ ಹುಟ್ಟಿದ್ದು, ಈ ಗ್ರಂಥ ಪ್ರಕಾಶನಕ್ಕೆ ವಿಪ್ರನೇ ಯೋಗ್ಯ ನಿಮಿತ್ತಕಾರಣನು, ಅನ್ಯರಲ್ಲ. **III 85-100; XVIII 1; XI 1; XIX 15** ಈ ವಿಪ್ರನು ಇಂದ್ರಪದವಿ ಯೋಗ್ಯನು. **III 61, IV 12** ಈ ಜನ್ಮದಲ್ಲಿ ಗ್ರಂಥ ಪ್ರಕಾಶವಾದ ಮೇಲೆ ಆತನಿಗೆ ವಿತ್ತಾದಿಗಳನ್ನು ಕೊಡುವುದಿಲ್ಲ. **III 87** ಜನ್ಮಾಂತರದಲ್ಲಿ ರಾಜಸನ್ಮಾನ, ಶಿಬಿಕಾರೋಹಣ, ಮಧ್ವಶಾಸ್ತ್ರ ಪ್ರವತ್ಕೃತ್ವಭಾಗ್ಯ ಮುಂತಾದ್ದೆಲ್ಲಾ ಉಂಟು. **XII 1, IV 23-24** ಶ್ರೀ ವೇದನಿಧಿಗಳು ಗರುಡಪದ ಯೋಗ್ಯರು. ಉತ್ತರ ಜನ್ಮದಲ್ಲಿ ಭಕ್ತ್ಯಾದ್ಯತಿಶಯ ಯೋಗ್ಯರು. ಅವರು ವಿಪ್ರನಿಗಿಂತ ಅಧಿಕ ಪ್ರಿಯರು. ಇನ್ನು ವಾದಿರಾಜಗುರುಗಳು ಋಜಗಣಸ್ಥರು ಎಂದು 'ಯೋಮಾಂ ದೇವಂ ವಿಜಾನಾತಿ ಋಜುಸ್ಥಂ ಪುಣ್ಯಕೃನ್ನರಃ | ಸಯಾತಿ ನಿಲಯಂ ಪುಣ್ಯಂ ಯದ್ಗತ್ವಾ ನ ನಿವರ್ತತೇ॥ **III 5-7, VIII 52-53, 97, IV 48-50, 74; VI 67, IX 4, 102, X 50, XIV 90, 67, 65, 54-56 |** ಇತ್ಯಾದಿ ಬಹು ವಾಕ್ಯಗಳು ಹೇಳುತ್ತವೆ. ಮತ್ತು ಅನೇಕ ಲಕ್ಷಣೋಕ್ತಿಕಥಾನಕಗಳಿಂದ ಅವರಿಗೆ ಹನುಮದಾದಿರೂಪ ವಾಯುದೇವರ ಸಾಮ್ಯವನ್ನು ಬೋಧಿಸಿ, ಶ್ರೀ ವೇದವೇದ್ಯಗುರುಗಳಿಗೂ ಭಾವಿ ಲಾತವ್ಯತ್ವವನ್ನು ನಿರೂಪಿಸಿ, ಸಂಕ್ಷೇಪತಃ ಮಧ್ವ ಶಾಸ್ತ್ರವನ್ನು ಬೋಧಿಸಿ, ವಾದಿರಾಜ ವೇದವೇದ್ಯರ ಉಪಾಸಕರುಗಳಿಗೆ ಹರಿಗುರುಭಕ್ತಿದಾರ್ಢ್ಯ, ನಿರ್ವಿಘ್ನ ಸಾಧನಾದಿ ಫಲಪ್ರಾಪ್ತಿ ತೋರಿಸಿ ಪಾರಾಯಣಾದಿಕರ್ತೃಗಳಿಗೆ ಸರ್ವಾಭೀಷ್ಟ ಫಲ ಸಿದ್ಧಿಯನ್ನು ಬೋಧಿಸಿ **(X 73-74, XI 53-54)** ಆಖ್ಯಾನ ಗ್ರಂಥ ವಾಕ್ಯದಲ್ಲಿ ಆದರ, ಹೀನರಿಗೆ ಯಮದಂಡ ಪಾತ್ರತ್ವವನ್ನು ಹೇಳಿದ್ದಾರೆ. **XX 28** "ಸ್ವಲ್ಪಾಪರಾಧೋಪಿ ಮಮ ಮಹಾದ್ರೋಹಾಯ ಕಲ್ಪತೇ। ಮಾಷಮಾತ್ರಂ ಚ ಮದ್ರೋಹೋ ಮಹಾದೋಷಾಯ ಕಲ್ಪತೇ॥ **XIX 80** ಎಂದೂ ವಾಕ್ಯಗಳಿವೆ. ಗ್ರಂಥವು ಶ್ರೀಗುರುರಾಜರಿಂದಲೇ ರಚಿತವೆಂಬಲ್ಲಿ ಅನೇಕ ವಾಕ್ಯಗಳೂ ಯುಕ್ತಿಗಳೂ ಸಹ ಹೇಳಲ್ಪಟ್ಟಿವೆ. **III 101, X 69-70, 100, XII 11-131.**

6. ತಥಾಚ ಈ ಗ್ರಂಥವು "ಏತೇನಯೋಗಃ ಪ್ರತ್ಯುಕ್ತಃ" ಎಂಬ II 1-2-3 ಸೂತ್ರೋಕ್ತ ಫಲಾನುಪಲಬ್ಧಿರೂಪಾಪ್ರಾಮಾಣ್ಯಕಾರಣ ಶೂನ್ಯವು. ಮ.ತಾ.ನಿ. I-46 ಹೇಳಿದಂತೆ ಸೂತ್ರಾರ್ಥಗಳಿಗೆ ಅವಿರೋಧಿಯು; I-60 ಹೇಳಿದಂತೆ ವೇದದ ಮಹಾತಾತ್ಪರ್ಯಕ್ಕೆ ಅವಿರೋಧಿ; ಮಧ್ವಶಾಸ್ತ್ರದ ಪ್ರಾಶಸ್ತ್ಯಬೋಧಕವು IV 24,V 25, X112; ವಿಷ್ಣ್ವಾಧಿಕ್ಯ ತಾರತಮ್ಯ, ಪಂಚಭೇದ, ಜೀವತ್ರೈವಿಧ್ಯ ಮುಂತಾದ ಶಾಸ್ತ್ರ ಪ್ರಮೇಯಾವಿರೋಧಿ, ಅಬೋಧಕತ್ವ, ವಿಪರೀತ ಬೋಧಕತ್ವಾದಿ ದೋಷಶೂನ್ಯ; ಪರಶುಕ್ಲತ್ರಯಸ್ಥ ವಾದಿರಾಜ ಗುರುಗಳಿಂದಲೇ ಹೇಳಲ್ಪಟ್ಟಿದ್ದರಿಂದ ಆಪ್ತಿ ಮೂಲತ್ವರೂಪ ಗುಣೋಪೇತವೂ ಆಗಿದೆ. ಆನುಕೂಲ್ಯತ್ರಯವುಳ್ಳದ್ದು; ಶ್ರುತಿ ಪಂಚರಾತ್ರ ಮೂಲರಾಮಾಯಣಾದ್ಯವಿರುದ್ಧವು; ಹರಿಗುರುಗಳಲ್ಲಿ ಭಕ್ತಿವೃದ್ಧಿ ಕಾರಕವು; ಪಠನ ಮಾಡುವ ಅಥವಾ ಶ್ರವಣ ಮಾಡುವ ಭಕ್ತರ ಪಾಪ ಪರಿಹರಿಸುವ ಮಂತ್ರತುಲ್ಯ 2258 ಶ್ಲೋಕಭರಿತ ಮಹಾಗ್ರಂಥವಾಗಿದೆ. ಜೀವನ ಕಾಲವಲ್ಲಿ ಶ್ರೀವಾದಿರಾಜ ಮಹಾಗುರುಗಳು ಬರೆದ ಸರಸ ಭಾರತೀ ವಿಲಾಸಾದಿ ಗ್ರಂಥದಲ್ಲಿನ ಶೈಲೀ ಸ್ಮಾರಕವು.[ಪ್ರೌಢ ಆಂಗ್ಲ ಪಂಡಿತರಾದ ಶ್ರೀ B, N. K. ಶರ್ಮ M.A., Ph.D. ಇವರೂ ಕೂಡ ತಮ್ಮ "A HiStory of Dwaitha School of Vedanta and itS literature" Vol II P. 211 ರಲ್ಲಿ ಹಾಗೆಯೇ ಹೇಳಿದ್ದಾರೆ.]

7. ಹೀಗಿದ್ದರೂ ಪುಟ 20ರಲ್ಲಿ "ಸ್ವಪ್ನವೇ ಆಗಿರಲಾರದೆಂದು" ಪೂರ್ವಪಕ್ಷದವರು ಶಂಕಿಸುತ್ತಾರೆ. "ಅದಕ್ಕೆ ನಿಶ್ಚಾಯಕ ಪ್ರಮಾಣಗಳಿಲ್ಲ" ಎಂಬ ಅವರ ವಚನವು ನೈಯಾಯಿಕ ಮತೀಯರಿಗೇ ಉಚಿತವು. ನಾವು ಪರತಸ್ತ್ವ ವಾದಿಗಳಲ್ಲ. ಆಖ್ಯಾನ ಗ್ರಂಥವಾಕ್ಯಗಳೇ ಪ್ರಮಾಣಗಳು. ಬಾಧಕಗಳು ಎಲ್ಲೂ ತೋರುವುದೇ ಇಲ್ಲ. ಶಿಲಾ ಶಾಸನವೂ ಇದೆ. ವಾ.ಗು.ಚ., ವಿಶ್ವಪ್ರಿಯ ವಿಲಾಸಗಳು ಸಂವಾದಗಳಾಗಿಯೂ ಇವೆ. ಮತ್ತು ಆಖ್ಯಾನ ಗ್ರಂಥವೂ XI 1 "ಅರ್ಥೇ ಚ ದೃಷ್ಟಿಃ ಕ್ರಿಯಾತಾಂ ನ ಶಬ್ದೇ ಯತಶ್ಚೈಷಾ ಸ್ವಾಪ್ನಕೃತಿರ್ಹಿ ವಾಸನಿ' ಎಂದು ಇದು ಸ್ವಾಪ್ನ ಗ್ರಂಥವೆಂದು ಹೇಳುತ್ತದೆ. ಕೊಚ್ಚಿ ರಂಗಪ್ಪಚಾರ್ಯರ ವಿಶ್ವಪ್ರಿಯ ಲೀಲಾವಿಲಾಸ II 29ರಲ್ಲಿ 'ಸತ್ಯ ಧರ್ಮ ಇತಿ ಖ್ಯಾತೋ ವಾದಿರಾಡ್ಭಕ್ತಿ ಪೂರಿತಃ | ಗುರುಂ ಸ್ವಮಠಮಾನಾಯ್ಯ ವ್ಯಾಸ ಪೂಜಾಮಕಾರಯತ್'। ಎಂದಿದೆ. ಶ್ರೀಮುಷ್ಣಾಚಾರ್ಯರು, ಜಂಖಂಡಿ ವಾದಿರಾಜಾಚಾರ್ಯರು, ಶ್ರೀವಿಶ್ವಪ್ರಿಯತೀರ್ಥರು, ಶ್ರೀರಘುಪ್ರವೀರತೀರ್ಥರು, ಇವರೇ ಮುಂತಾದವರು ಆಖ್ಯಾನ ಸೇವೆಯನ್ನು ಪಾರಾಯಣ, ವ್ಯಾಖ್ಯಾನ ಉಪದೇಶಾದಿ ಬಹು ವಿಧದಿಂದ ಮಾಡಿರುತ್ತಾರೆ. ಕೇವಲ ಮನುಷ್ಯ ಲೋಕದಲ್ಲಿ ಪರಿಪಕ್ವ ಸಾಧನ ಸಂಪನ್ನರಿಂದ ಸೇವಿತವೆಂದು ಮಾತ್ರವಲ್ಲ; ದೇವಲೋಕದಲ್ಲೂ ಪರಮಾದರದಿಂದ ಸನ್ಮಾನಿತವೆಂದು ತಿಳಿಯಲ್ಪಟ್ಟಿದೆ. IX 25-29. ಇಂಥ ಗ್ರಂಥವನ್ನು ಯಾವ ಇತರರು ಮಾಡುವುದಕ್ಕೆ ಸಮರ್ಥರು? ಗ್ರಂಥದಲ್ಲಿ ಹೇಳಲ್ಪಟ್ಟ ದೇವತೆಗಳ ಮಹಿಮೆ, ಋಜುಗಳ ಮಹಿಮೆ, ಹರಿ ಮಹಿಮೆ, ವೃಂದಾವನ ಮಹಿಮೆ, ತೀರ್ಥ ಮಹಿಮೆ, ಶಾಸ್ತ್ರ ಮಹಿಮೆ, ಸಾಧನ ಮಹಿಮೆ, ಗುರುಮಹಿಮೆ, ಕ್ಷಮಾದಿ ಗುಣಗಳ ಮಹಿಮೆ, ಹರಿ ವಾಯುಮಹಿಮೆ ಇತ್ಯಾದಿಗಳನ್ನು ಇನ್ನು ಯಾರು ತಾನೇ - ಮಧ್ವ ಗುರುಗಳನ್ನು ಬಿಟ್ಟು, ಅವರ ಗುರು ಬಾದರಾಯಣರನ್ನು ಬಿಟ್ಟು ಇಷ್ಟು ಸ್ಫುಟತರವಾಗಿ ತಿಳಿಯುತ್ತಾರೆ ಅಥವಾ ನಿರೂಪಿಸುತ್ತಾರೆ? ಈ ಗ್ರಂಥದಲ್ಲಿ ಬಹು ಪ್ರಮೇಯಗಳು ಪ್ರತಿಪಾದಿತವಾಗಿವೆ. ಹಾಗಾದರೂ ಸಮಯ ಪಾದದಲ್ಲಿ ಅಲ್ಲಲ್ಲಿ ಸೂತ್ರಕಾರರಿಂದ ಅಪ್ರಾಮಾಣ್ಯ

ಕಾರಣವೆಂದು ಸೂಚಿತವಾದ ವ್ಯಾಹತಿ, ಮಿಥ್ಯಾಬೋಧಕತ್ವ, ಸಮವಾಯದಂತೆ ಕಲ್ಪಿತ ಪ್ರಕ್ರಿಯೆ, ಜಡಸ್ವಾತಂತ್ರ್ಯಾರೋಪ, ಜೀವ ಸ್ವಾತಂತ್ರ್ಯಾಭ್ಯುಪಗಮ, ವೇದ ಪ್ರಾಮಾಣ್ಯಾನಂಗೀಕಾರ ಇತ್ಯಾದಿ ಯಾವ ದೋಷವೂ ಆಖ್ಯಾನದಲ್ಲಿಲ್ಲ. ಅಂಥ ಈ ಗ್ರಂಥಕ್ಕೆ ಪಿಪೀಲಿಕಾಲಿಪಿಯ ದೆಸೆಯಿಂದ ಅಧಿಕ ಸ್ಪಷ್ಟ ಯಥಾರ್ಥಜ್ಞಾನಜನಕತ್ವವು ಇಲ್ಲವೆಂದು ಹೇಳಲು ಸಾಧ್ಯವಿಲ್ಲ.

8. ಕಿಂಚ ಆಖ್ಯಾನ ಗ್ರಂಥದಲ್ಲಿ ಅನೇಕ ಭವಿಷ್ಯಗಳು ಸೂಚಿತವಾಗಿವೆ. ಅವೆಲ್ಲವೂ ನೂರೈವತ್ತು ವರ್ಷಗಳ ಮೇಲೆ ಪ್ರತ್ಯಕ್ಷ ಫಲಿಸಿ ಸತ್ಯವಾಗಿವೆ ಎಂದು ಪ್ರಾಮಾಣ್ಯಬೋಧಿನೀ, ವಿಶ್ವಪ್ರಿಯ ವಿಲಾಸಾದಿಗಳಲ್ಲಿ ಹೇಳಲ್ಪಟ್ಟಿವೆ. ಏಡಮೂಕ ವಿಪ್ರನೇ ಜನ್ಮಾಂತರದಲ್ಲಿ ಶ್ರೀ ವಿಶ್ವಪ್ರಿಯತೀರ್ಥರು, ವಿಪ್ರೋಪಕಾರಿಗಳು ಆ ಸ್ವಾಮಿಗಳ ಪರಿವಾರ ಮಿತ್ರರಾಗಿ ಹುಟ್ಟಿದ್ದಾರೆ. ಎರಡು ವಿಶ್ವಪ್ರಿಯವಿಲಾಸದಲ್ಲಿರುವ ವೃನ್ದಾವನಾಚಾರ್ಯರ ಚರಿತ್ರೆಯು ಸ್ವಾಪ್ನವೃನ್ದಾವನಾಖ್ಯಾನದ ಪ್ರಾಮಾಣ್ಯವನ್ನೂ, ಆಖ್ಯಾನದಲ್ಲಿ ಹೇಳಲ್ಪಟ್ಟಿರುವ ಅರ್ಥಗಳು ಸತ್ಯವಾಗಿರುವ ರೀತಿಯನ್ನೂ ಪ್ರಕಾಶಪಡಿಸುತ್ತದೆ. ಆಖ್ಯಾನ ಗ್ರಂಥದ ಪ್ರಕರಣ ಭೇದಗಳು ಎಂದರೆ ಯಾವ ಯಾವ ಜನರಿಗೆ ಯಾವ ಯಾವ ಶ್ಲೋಕಗಳು ಹೇಳಲ್ಪಟ್ಟಿವೆ ಎಂಬ ವಿಭಾಗವನ್ನೂ, ಕೆಲವು ಒಗಟು ಶ್ಲೋಕಗಳ ಅರ್ಥ ವಿಶೇಷವನ್ನೂ ವೃನ್ದಾವನಾಚಾರ್ಯರೇ ತೋರಿಸಿಕೊಟ್ಟರು. ಆದ್ದರಿಂದ ಗ್ರಂಥವು 1630–1642ರಲ್ಲೇ ಸಂಜಾತವಾಗಿದ್ದರೂ ಶ್ರೀ ವೃನ್ದಾವನಾಚಾರ್ಯರಿಂದಲೇ 1825-1830ನೆಯ ವರ್ಷಗಳಲ್ಲಿ ವ್ಯಾಖ್ಯಾನ ರೀತಿಯನ್ನು ತೋರಿಸಿ ಪ್ರಚುರಪಡಿಸಲ್ಪಟ್ಟಿತೆಂದು ತಿಳಿಯಬೇಕು. 1860 ನೆಯ ವರ್ಷದಲ್ಲಿ ಅಥವಾ ಸ್ವಲ್ಪ ಹಿಂದೆಯೇ ವೃನ್ದಾವನಾಚಾರ್ಯರ ಶಿಷ್ಯರಾದ ಶ್ರೀಮುಷ್ಣಾಚಾರ್ಯರ ವ್ಯಾಖ್ಯಾನವು ಹದಿನಾರು ಅಥವಾ ಹದಿನೇಳು ಅಧ್ಯಾಯಗಳಿಗೆ ಪ್ರಾದುರ್ಭವಿಸಿತು. ಉಳಿದ ಅಧ್ಯಾಯಗಳಿಗೆ ಇತರರು ಈಚೆಗೆ ವ್ಯಾಖ್ಯಾನ ಮಾಡಿದ್ದಾರೆ.[ಸ್ವಾಪ್ನವೃನ್ದಾವನಾಖ್ಯಾನ ಭಾಗ 2 ಗುರುಗೋವಿಂದವಿಠಲದಾಸರು ರಚಿಸಿದ್ದು 1971 ಇದರ ಪ್ರಸ್ತಾವನೆ ನಾಲ್ಕನೇ ಪುಟದಲ್ಲಿ ಬುಕ್ಕೆಬಾಗ್ ಶ್ರೀನಿವಾಸಾಚಾರ್ಯರೆಂಬುವರು ಕೊನೆಯ ಪಂಚಾಧ್ಯಾಯಗಳಿಗೆ ವಾಖ್ಯಾನ ಮಾಡಿದವರೆಂದಿದೆ.] ಏವಂಚ ಆಖ್ಯಾನದ ಪ್ರಚಾರ ಕಾಲವೆಂದರೆ ಸತ್ಯಪರಾಕ್ರಮರ ಕಾಲದಿಂದ ಈಚೆಗೇನೇ. ಆಖ್ಯಾನಕ್ಕೆ ಪ್ರಾಮಾಣ್ಯ ಸಾಧನೆಗಾಗಿ ವೃನ್ದಾವನಾಚಾರ್ಯರ ಶಿಷ್ಯರಾದ ತಪೋವಿದ್ಯಾವಿರಕ್ತ್ಯಾದಿ ಗುಣಭರಿತರಾದ ಭೀಮನಕಟ್ಟೆ ಮಠದ ಸ್ವಾಮಿಗಳಾದ ಶ್ರೀಶ್ರೀರಘುಪ್ರವೀರ ತೀರ್ಥರಿಂದ 1834 ಕ್ರಿ.ಶ. ಜಯ ಸಂವತ್ಸರದಲ್ಲಿ ಪ್ರಾಮಾಣ್ಯಬೋಧಿನೀ ಸಿದ್ಧವಾಯಿತೆಂದು ಉಲ್ಲೇಖವಿದೆ, ವೃನ್ದಾವನ ಆಖ್ಯಾನದ ಮತ್ತು ಪಂಚವೃನ್ದಾವನದ ಮಹಿಮೆಯನ್ನು ತಿಳಿದು ಹೇಳಿ ಭಕ್ತವೃಂದವನ್ನು ರಕ್ಷಿಸಿದ್ದರಿಂದ ಶ್ರೀ ವಿಶ್ವಪ್ರಿಯತೀರ್ಥರಿಗೆ ಆಗಿನಿಂದಲೇ ವೃನ್ದಾವನಾಚಾರ್ಯರೆಂದು ಹೆಸರು ಪ್ರಸಿದ್ಧವಾಗಿಹೋಯಿತು. ಅವರು 1865 ರಲ್ಲಿ ವೃನ್ದಾವನಸ್ಥರಾದ ಮೇಲೆ ಉತ್ತರಾದಿಮಠದ ದಕ್ಷಿಣ ದೇಶದ ವೇದಗರ್ಭಸೂರಿ ಸೇತುಮಾಧವಾಚಾರ್ಯರೆಂಬ ಶ್ರೀ ವಿಶ್ವಪ್ರಿಯತೀರ್ಥರ ಶಿಷ್ಯರಿಂದ ಐದು ಅಧ್ಯಾಯಗಳ ವಿಶ್ವಪ್ರಿಯ ವಿಲಾಸವೆಂಬ ಸಂಸ್ಕೃತ ಕಾವ್ಯವೂ (ಸ್ತ್ರ್ಯಾದಿಗಳ ಉಪಯೋಗಕ್ಕಾಗಿ ಅವರೇ ಮಾಡಿದ ಕನ್ನಡ ಕಾವ್ಯ ದೊಂದಿಗೆ) ಪ್ರಕಟಿತವಾಯಿತು. ಇನ್ನೊಬ್ಬ ಶಿಷ್ಯರು ಕೊಚ್ಚೆ

ಆಸ್ಥಾನ ವಿದ್ವಾಂಸರು ವಿದ್ವಾನ್ ರಂಗಪ್ಪಾಚಾರ್ಯನಾಮಕರು ವ್ಯಾಸರಾಜಮಠೀಯರು. ಅವರು ಬರೆದ ಐದು ಅಧ್ಯಾಯಾತ್ಮಕ ವಿಶ್ವಪ್ರಿಯ ಲೀಲಾವಿಲಾಸವೆಂಬ ಕಾವ್ಯ[ಈ ಮುದ್ರಿತ ಪ್ರತಿಗಳು ಗ್ರಂಥಕರ್ತರ ಪ್ರಪೌತ್ರ ಡಾ B. N. K. ಶರ್ಮ ಎಂಬ ಪ್ರಸಿದ್ಧ ಪ್ರೊಫೆಸರರ ಬಳಿ ಸಿಗುತ್ತವೆ ಎಂದು ಕೇಳಿದ್ದೇನೆ. ಪುಟ 358 A.H. of D.V.L Vol. II ಸಹ ನೋಡಿ.]ರತ್ನವೂ ಸುಮಾರು 1870 ರಲ್ಲಿ ಪ್ರಕಾಶಕ್ಕೆ ಬಂತು. ಈ ಕೊನೆಯ ಕಾವ್ಯವು ಮುದ್ರಿತವೂ ಆಯಿತು. ಈ ಉಭಯರ ಕಾವ್ಯಗಳೂ ಆಖ್ಯಾನದ ಪ್ರಾಮಾಣ್ಯ ನಿಶ್ಚಯಕ್ಕೆ ಸಾಧಕವಾಗಿವೆ. ಶ್ರೀ ವಿಶ್ವಪ್ರಿಯತೀರ್ಥರ ವೃದ್ಧಾಪ್ಯ ಕಾಲದಿಂದ ಎಂದರೆ 1860ರ ಮೇಲೆ ಅವರ ವಿಷಯದಲ್ಲಿ ಅಸಹನೆ ಉಂಟಾಗಿ ಆಖ್ಯಾನ ಪ್ರಾಮಾಣ್ಯ ವಿಷಯದಲ್ಲೂ ಕಲಹವು ಆರಂಭವಾಯಿತೆಂದು ಐತಿಹ್ಯವು ಇದೆ ನಂತರ ಕಲಹ ಬೆಳೆದದ್ದನ್ನು ವಿವರಿಸಲಾಗಿದೆ. ಬೇಕಾದ ಕಲಹವಿರಲಿ, ವಿವೇಕಿಗಳು ಪೂರ್ವೋಕ್ತ ವ್ಯಾಖ್ಯಾನ ಗ್ರಂಥಗಳ ಸಾಹಿತ್ಯದಿಂದ ಶ್ರೀ ವಿಶ್ವಪ್ರಿಯತೀರ್ಥರ ಮಹಿಮೆಯನ್ನು ತಿಳಿದು ಆಖ್ಯಾನವನ್ನು ಪಠಿಸುವವರಾಗಿ ಅದರಲ್ಲಿ ಪ್ರಾಮಾಣ್ಯ ನಿಶ್ಚಯವನ್ನು ಮಾಡಿಯೇ ಮಾಡುತ್ತಾರೆ. "ಸ್ವಾಪ್ನವಾಕ್ಯಗಳಲ್ಲಿ ಎಷ್ಟು ಮಹಾವಿಶ್ವಾಸ ಬರುತ್ತದೆ" ಎಂಬ ಉದ್ಗಾರ ಉತ್ತರಾದಿ ಮಠೀಯರಿಗಂತೂ ಬರುವುದಿಲ್ಲ. ಅವರಿಗೆ ಅತ್ಯಂತ ವಿಶ್ವಾಸವೇ ಅನುಭವ ಸಿದ್ಧವಾಗಿದೆ, ಏಕೆಂದರೆ ಅವರ ಮಠದಲ್ಲಿ ಈಗ ಇರುವ ಕೂರ್ಮಾಕಾರ ಸಾಲಿಗ್ರಾಮವು ಅವರ ಪೂರ್ವಿಕರ ಸ್ವಪ್ನ ಪ್ರಮಾಣದಿಂದ ವೇದವ್ಯಾಸಮೂರ್ತಿಯೇ ಎಂದು ದೃಢನಂಬಿಕೆ ಇದೆ. ಅದರಂತೆ ಆ ಕೂರ್ಮಾಕಾರ ಪ್ರತಿಮೆಗೇ ಆವಾಹನಾದಿಗಳಿಲ್ಲದೆ ಅದೇ ವ್ಯಾಸ ಸಾಲಿಗ್ರಾಮವೆಂದು ಪ್ರೇಕ್ಷಾವಂತರಾದ ಎಲ್ಲಾ ಯತಿಗಳೂ ಪೂಜಿಸುತ್ತಿದ್ದಾರೆ. ಪ್ರತ್ಯಕ್ಷರೂಪ ವ್ಯತ್ಯಾಸ ಪ್ರಸಕ್ತವಾದರೂ ಆ ವಿಷಯದಲ್ಲಿ ಶಂಕೆಯನ್ನು ಮಾಡುವುದಿಲ್ಲ. ಪ್ರಕೃತ ಇಲ್ಲಿ ವೃದ್ಧ ವಿಪ್ರನು ಸ್ವಪ್ನದಲ್ಲಿ ಶ್ರುತವಾದ ಶ್ಲೋಕಗಳನ್ನು ಬರೆಸಿದನು ಎಂದು ನಂಬಲು ಏನು ಕಷ್ಟ? ಹೀಗೆ ಆ ವಿಷಯದಲ್ಲಿ ಏನು ಶಂಕೆ ಹುಟ್ಟುತ್ತದೆ? ಹೀಗೆ ಅಪ್ರಾಮಾಣ್ಯ ಕಾರಣ ದೋಷಶೂನ್ಯವಾದ್ದರಿಂದ ಸ್ವಾಪ್ನ ವೃನ್ದಾವನಾಖ್ಯಾನವು ಪ್ರಮಾಣವು, ಸಂಪ್ರತಿಪನ್ನ ಗೀತಾದಿಗಳಂತೆ ಎಂದು ಅನುಮಾನ ಪ್ರಯೋಗ ಮಾಡಬಹುದು. ಮಧ್ವರಾದ್ಧಾಂತ ಧರಣೀಧರರಾದ ಸತ್ಯಪರಾಕ್ರಮ ತೀರ್ಥರಿಂದಲೂ ಆದರಿಸಲ್ಪಟ್ಟ ಋಜುತ್ವವಾದವೂ, ಸಂಭಾವಿತವಾದ ಆಖ್ಯಾನ ಗ್ರಂಥವೂ ಹೇಗೆ ಈಗಿನ ಅಲ್ಪ ಪಂಡಿತರಿಂದ ಅನುಪಾದೇಯವೆಂದು ಸಾಧಿಸಲ್ಪಡುವುದಕ್ಕಾಗುತ್ತದೆ? ಆದ್ದರಿಂದ ಶ್ರೀ ಸತ್ಯವೀರ ಸ್ವಾಮಿಗಳವರ ಆಕ್ಷೇಪ ಬಹಿಷ್ಕಾರಾದಿಗಳು ಆಗ್ರಹವಶವಾಗಿ ನಡೆದು ಹೋಯಿತೆಂದು ತಿಳಿದು ಬಹು ಪ್ರಮಾಣ ವಿರುದ್ಧವಾದರಿಂದ ಉಪೇಕ್ಷಿಸಿ ಬಿಟ್ಟರಾಯಿತು.

9. ಈ ವಿಷಯದಲ್ಲಿ ಪೂರ್ವಪಕ್ಷಿಯೊಬ್ಬರು ಕೇಳುತ್ತಾರೆ: ಏನೆಂದರೆ 'ವಾದಿರಾಜರು ಅನೃಜುಗಳೆಂದು ಉಪಾಸನೆ ಮಾಡಿದರೂ ಕೆಲವರಿಗೆ ಫಲವು ಬಂದೇ ಇದೆ. ಕೆಲವರಿಗೆ ಹಾಗೆ ಉಪಾಸನೆ ಮಾಡಬೇಡ ಎಂದು ನಿಷೇಧ ಸ್ವಪ್ನ ಆಗಿಲ್ಲ. ಹಾನಿಯೂ ಆಗಿಲ್ಲವೆಂದು ಅನುಭವವಿರುವುದರಿಂದ ಗುರುರಾಜರ ಅಭಿಪ್ರಾಯವು ಹೇಗೆ ತಿಳಿಯಲ್ಪಡುತ್ತದೆ? ಎಂದು ಕೇಳುತ್ತಾರೆ.

ಈ ಪ್ರಶ್ನೆ ಏನೋ ಸರಿಯೇ, ಆದರೆ ಗುರುರಾಜರ ಹಾರ್ದ ಅಭಿಪ್ರಾಯವನ್ನು ವೇದವೇದ್ಯರೇ ಮುಂತಾದವರು ಕಂಡುಹಿಡಿದು ಹೇಳಿದ್ದಾರಲ್ಲ, ಹಾಗೆ ಅವರ ಋಜುತ್ವವನ್ನು ಪ್ರಮಾಣಗಳು ನಿರ್ಣಯಿಸಿವೆಯಲ್ಲ, ಅದೃಶ್ಯರಾಗಿಯೇ ಫಲವನ್ನು ಕೊಡುತ್ತಿರುವ ವೃನ್ದಾವನಸ್ಥರ ಹಾರ್ದ ಸ್ವರೂಪಾದಿಗಳನ್ನು ಪ್ರತ್ಯಕ್ಷ ಫಲ ವಿತರಣೆ, ಸಾವಕಾಶ ಸ್ವಪ್ನಸೂಚನಗಳಿಂದ ನಿರ್ಣಯಿಸಲಾಗದಿದ್ದರೆ ಹಾನಿ ಏನು? ಏಕೆಂದರೆ ಈ ವಿಷಯದಲ್ಲಿ ಪರೀಕ್ಷಾಪೂರ್ವಕ ನಿರ್ಣಯವು ಜಗದ್ಗುರುಗಳಾದ ವಾದಿರಾಜರಂಥವರಿಂದಲೇ ಶಕ್ಯವು. ಯಾವ ವಿಷಯದಲ್ಲಿ ಆಗಮವು ಉಪಜೀವ್ಯವೋ ಆ ವಿಷಯದಲ್ಲಿ ಪ್ರತ್ಯಕ್ಷದಿಂದ ಅರ್ಥ ನಿರ್ಣಯವು ದುಶಕ್ಯವೇ. ಏಕೆಂದರೆ ಪ್ರಾಪ್ತ ಫಲವು ದುರ್ಯೋಧನನ ಧ್ಯೂತಜಯ, ಅವನ ಮರಣದಲ್ಲಿ ಪುಷ್ಪವೃಷ್ಟಿ, ಜಯದ್ರಥನ ರೋಧನ ಕಾರ್ಯಸಿದ್ಧಿ ಇತ್ಯಾದಿಗಳಂತೆ ತಾಮಸವೇ ಅಥವಾ ಅರ್ಜುನನ ಸುಭದ್ರಾ ಪ್ರಾಪ್ತಿ, ಧ್ರುವ ಪ್ರಹ್ಲಾದರಿಗೆ ಬಂದ ರಾಜೈಶ್ವರ್ಯ, ಇತ್ಯಾದಿಗಳಂತೆ ಸಾತ್ವಿಕವೇ ಎಂಬುದನ್ನು ಕೂಡ ನಿರ್ಣಯಿಸಲು ನಮ್ಮಂಥವರಿಗೆ ಶಕ್ಯವಲ್ಲ. ಆದ್ದರಿಂದ ಇಲ್ಲಿ ನನ್ನ ಅಭಿಪ್ರಾಯವು ಮಾತ್ರ ನಿರೂಪಿಸಲ್ಪಡುತ್ತದೆ.

ಭಕ್ತಹೀನರಾದ ಅನೃಜುತ್ತೋಪಾಸಕರು - ಕಮಲನಾಭ, ತಮ್ಮಣ, ಶ್ರೀನಿವಾಸರಂತೆ ದುರದೃಷ್ಟವಂತರು; ಅವರು ಪ್ರತ್ಯವಾಯ ಯೋಗ್ಯರು; ಬೋಧಕರು ಇದ್ದರೂ ಕೂಡ ಅವರು ವಿಚಾರಿಸದೆ ಕೃತಿಯಲ್ಲಿ ಅವಿಶ್ವಾಸ ಮಾಡಿ ಉಪಾಸನೆ ಮಾಡಿದರೆ ಅಧಿಕ ಪಾಪಿಗಳೇ ಆಗುತ್ತಾರೆ. **(III 79, XVII 67-69, 71-76, VXII 32-40, XVI 81-84, 61-69, XIX 70-80, XXI 9-10, XX 28, XXII 27-28)** ಎಂಬ ಅನೇಕ ಆಖ್ಯಾನ ವಚನಗಳಿವೆ. ಯದ್ಯಪಿ ಗುರುರಾಜರು ಶಾಪ ಕೊಡುವುದಿಲ್ಲ. **(XXI 86)** ಪರಮಹಂಸರಾದ್ದರಿಂದಲೂ, ಪುಣ್ಯ ಲೋಭದಿಂದಲೂ ತಾಮಸ ಕ್ರೋಧಹೀನರಾದ್ದರಿಂದಲೂ ಅವರು ಶಾಪವಾಕ್ಯ ನುಡಿಯುವುದಿಲ್ಲ. ಹಾಗಿದ್ದರೂ ಉತ್ಕಟ ಪಾಪವಾದ್ದರಿಂದ ಅಂಥವರಿಗೆ ಆಗಿಂದಾಗ್ಗೆ ಹಾನಿಯು ಉಂಟಾಗುತ್ತಲೇ ಇರುತ್ತದೆ. XVIII 35ರಲ್ಲಿರುವ ಯಮದೇವರ ಪ್ರತಿಜ್ಞೆಯು ಭಯಜನಕವೇ – "ಯಮೋಽಪಿ ಮಾಂ ತದಾಪ್ರಾಹತ್ವಾಂ ಯೇನಿಂದಂತಿ ಮಾನವಾಃ । ತಾನ್ನೈವ ಮುಂಚಾಮಿಧೀಮನ್ನೃಹ್ಮಕಲ್ಪಕ್ಷಯೇಪ್ಯಹಂ ॥35॥ ವೃನ್ದಾವನಕೃತೌ ಚೊಕ್ತಮಹಿಮಾ ಘಟತೇನತೇ । ಇತಿಯೇಕಥಯಂತಿಹ ನಮುಂಚಾಮ್ಯಾತತಾಯಿನಃ॥36॥" ಎಂದಿದೆ. ಹಾನಿಯಾದರೂ ಭ್ರಾಂತರಾಗಿ ಆಗ್ರಹ ಬಿಡದೆ ಆ ಹಾನಿಯು ತಮ್ಮ ದುರುಪಾಸನೆಯ ಕಾರ್ಯ ಎಂದು ತಿಳಿಯುವುದೇ ಇಲ್ಲ. ಅಕಾಲಮೃತ್ಯ, ದುರ್ಮರಣಾದಿಗಳು ಸ್ತೋತ್ತಮ ದ್ರೋಹದ ಫಲವೆಂದು ಯಾರಿಗೆ ಗೊತ್ತಿಲ್ಲ? ಯಮಲೋಕದಲ್ಲಂತೂ ಶಿಕ್ಷೆ ತಪ್ಪಿದ್ದಲ್ಲ. XVIII 70 ವಾಕ್ಯಗಳಿವೆ. ಇಷ್ಟು ಅಭಕ್ತರ ವಿಚಾರ.

ಇನ್ನು ಯಾರು ಗುರುರಾಜರಲ್ಲಿ ಭಕ್ತಿಯುಕ್ತರೋ ಆದರೆ ಋಜು ಪ್ರತಿಪಾದಕ ಗ್ರಂಥ ನೋಡದೆ ಅಜ್ಞಾನ ಮಾತ್ರದಿಂದ ಅನೃಜುತ್ವೋಪಾಸಕರೋ ಅಂಥವರಿಗೆ ಕ್ವಚಿತ್ಫಲವು ಉಂಟಾಗುವುದು, ಹಾನಿಯ ತಪ್ಪುವುದು. ಆದರೆ ಅಂಥವರ ಸೇವೆಗೆ ವಿಘ್ನ ಬಂದು ವಿವಿಧ ಸಾಂಸಾರಿಕ ದುಃಖಾನುಭವಾನಂತರ ಪುನಃ ಸತ್ಸಂಗತಿಯು ನಿಶ್ಚಯವಾಗಿಯೂ ಒದಗುತ್ತದೆ. ಆಗ ಋಜುತ್ವಜ್ಞಾನವೂ ವಿಚಾರದಿಂದ ಹುಟ್ಟುತ್ತದೆ ಎನ್ನುವಲ್ಲಿ ಆಖ್ಯಾನದಲ್ಲಿ ಅನೇಕ ದೃಷ್ಟಾಂತಗಳು

| | |
|---|---|
| ಹೇಳಲ್ಪಟ್ಟಿವೆ. ವಿಠಲ, ವಾದಿರಾಜಭಟ್ಟ, ಕೃಷ್ಣಭಟ್ಟ, ಸೂರಭಟ್ಟ, ಕನಕಾಕೃಷ್ಣಭಟ್ಟ, ದಾಂಬಲಸ್ಥಹರಿ, ನಾರಾಯಣರು (XVII 66-69), ಚಿಂತಾಮಣಿ ಆಚಾರ್ಯರು, ಶೇಷಾದ್ರಿಪಂಡಿತ, ಲಕ್ಷ್ಮೀಪತ್ಯಾದಿಗಳು, ಕೊನೆಗೆ ಶೇಷನೂ ಕೂಡ ಅವಿಶ್ವಾಸ ನಿಮಿತ್ತದಿಂದ ದುಃಖಾನುಭವ ಹೊಂದಿ ಅನಂತರ ನಿರ್ಮಲ ಜ್ಞಾನವನ್ನು ಹೊಂದಿದವರು. ಸೀತಾಪತಿ, ವ್ಯಾಸಭಕ್ತ, ವಿಪ್ರ, ವೇದನಿಧಿಗಳು ಯಾವಾಗಲೂ ಶಂಕೆಮಾಡಿಲ್ಲವೆಂದಿದೆ. ಇತರರು ದುಃಖ ಪಟ್ಟಮೇಲೆ ಗುರುಕೃಪೆಯಿಂದ ಭಕ್ತಿ ಹೊಂದಿ ಋಜುತ್ವೋಪಾಸನೆ ಮಾಡಿ ಸಾಧನೆಯ ವೃದ್ಧಿ ಹೊಂದಿರುತ್ತಾರೆ. 'ನಮೇ ಭಕ್ತಃ ಪ್ರಣಶ್ಯತಿ' ಎಂಬ ಶ್ರೀ ಕೃಷ್ಣ ವಾಕ್ಯದಂತೆ ಗುರುರಾಜರ ಭಕ್ತರಿಗೂ ಅವರು ಕ್ವಚಿದ್ವಿರುದ್ಧೋಪಾಸನೆಯನ್ನು ಮಾಡಿದ್ದರೂ ಕೂಡ ಅವರಿಗೆ ಅಂತತಃ ದುರ್ಗತಿ ಇಲ್ಲ. (III 25-26) |
| XXI 30 "ಅಪ್ಪಣಃ ಕೃಷ್ಣೋಭಟ್ಟೋಽಯಂ ಇದಾನೀಂ ಪಾಪ ಮತ್ಯಜತ್ ............ ಶ್ರೀನಿವಾಸನಾಮಾ ಮಾನವಾನಾಂ ಭಯಾನಕಃ \| ಮನ ಮಾನಸ ಸಂಪ್ರೀತಿಂ ತನೋತೀಹ, ನಸಂಶಯಃ ‖31‖ ವಿಠಲಾದ್ಯಾ ಅಸ್ಮದೀಯಾಃ ಅಸ್ಮಾನ್ಮಠ ಸನ್ಯಾಸಿನಶ್ಚಯೇ \| ವಟಬೀಜವದೇವಾಸ್ಮದುಟಜಾನಂದವರ್ಧಕಾಃ ‖32‖ ಏವಂ ಚ ತ್ರಿವಿಧಾವಿಪ್ರಾಃ \|" ಇತಿ, ಹೀಗೆ ಕ್ರಮವಾಗಿ ವಿಳಂಬದಿಂದ ಆಖ್ಯಾನದಲ್ಲೂ, ಗುರುರಾಜರಲ್ಲೂ ಭಕ್ತಿ ಮಾಡಿದವರ ದೃಷ್ಟಾಂತಗಳಿವೆ. ಶ್ಲೋಕ 25: "ಏತೇ ಚಾನ್ಯೇ ಚ ಬಹವೋ ಬಹುಮಾನ ಪುರಃಸರಾಃ \| ಕುಹಕಾದ್ರಹಿತಾಃ ಸರ್ವೇ ಸರ್ವೇಶ್ವರ ಮತಾನುಗಾಃ ‖25‖, ವಿಶ್ವಾಸಿನೋಹ್ಯವಿಶ್ವಾಸಂನಕುರ್ವಂತೀಹ ಸರ್ವಥಾ \| ಸುಶ್ವಾಸ ಪ್ರೇರಕೋಹ್ಯೇಷಾಂ ವಾಸುದೇವೋಽಭಿಜಾಯತೇ ‖26‖" ಇತ್ಯಾದಿ. |
| ಅಲ್ಲಿಯೇ ಶ್ಲೋಕ 14: "ಕಲಿಃ ಕಮಲನಾಭಾಖ್ಯಃ ಪುನರ್ಭೂವಲಯೇಽಭವತ್ ‖ 14 ‖ ಮಿಳಿತಃ ಸ್ವಸ್ತ್ರಿಯಾಽಲಕ್ಷ್ಮ್ಯಾಯಾ ನಿರ್ಮಾಲ್ಯಂ ನಮೇಽಗೃಹೀತ್ ‖" ಇತ್ಯಾದಿ 14-17 ಶ್ಲೋಕಗಳಲ್ಲಿ ಭಕ್ತಹೀನರ ವರ್ಣನೆ ಇದೆ. ಅವರ ರೀತಿ ಸರಿಯಲ್ಲ. ಆದ್ದರಿಂದ ಭಕ್ತಿಯು ಅವಶ್ಯಕ. ಋಜುತ್ವವೆಂದು ತಿಳಿದು ಉಪಾಸನೆ ಮಾಡಿದರೂ ಭಕ್ತಿಯು ಅವಶ್ಯಕ. ಲಕ್ಷ್ಮೀಪತಿ, ಸೀತಾಪತಿ, ವಾಸುದೇವ ಮುನಿ, ಹಯಗ್ರೀವ ಮುನಿಗಳು ಕೂಡ ಭಕ್ತಿಬಲದಿಂದ ಸಿದ್ಧಿ ಹೊಂದಿದವರೆಂದು ತೋರಿಸಲ್ಪಟ್ಟಿದ್ದಾರೆ. |
| "ನ ಚ ತತ್ರ ತತ್ತ್ರೋಕ್ತೈಕ ದೇಶಜ್ಞಾನ ಮಾತ್ರೇಣ ಭವತಿ ಮುಕ್ತಿಃ – ಎಂದು III ಗೀ.ಭಾ. ರೀತಿಯಲ್ಲಿ ಕಾರಣ ಕೂಟವೇ ಕಾರ್ಯಜನಕವು. ಭಕ್ತಿ ಇಲ್ಲದೇ ಋಜುತ್ವ ನಿಶ್ಚಯವನ್ನು ಹೊಂದಿದ್ದ ಮಾತ್ರಕ್ಕೆ ಅಂಥವರಿಗೆಲ್ಲಾ ಸ್ವಾಪ್ನ ದರ್ಶನಾದಿ ಅಭೀಷ್ಟ ಫಲಗಳಾಗುತ್ತವೆಂದು ಪ್ರಮಾಣವಿಲ್ಲ. ಹಾನಿಯಾಗುವುದಿಲ್ಲ ಎಂದು ಸಹ ಪ್ರಮಾಣವಿಲ್ಲ. ಆದರೆ ಅಂತಹ ಯಾಥಾರ್ಥ ಜ್ಞಾನವುಳ್ಳ ಮುಕ್ತಿಯೋಗ್ಯರಿಗೆ ವಿಳಂಬದಿಂದಲಾದರೂ ಭಕ್ತಿವೈರಾಗ್ಯಾದಿ ಸತ್ಫಲವೂ ಬರುತ್ತದೆ. ಆದ್ದರಿಂದ ಪ್ರತ್ಯಕ್ಷೋಪಲಬ್ಧಿ ತದಭಾವಗಳಿಂದ ಗ್ರಂಥ ಪ್ರಾಮಾಣ್ಯ ನಿರ್ಣಯ ಕಾರ್ಯವು ಅತ್ಯಂತ ಕಷ್ಟ. ಆದ್ದರಿಂದ ಆಖ್ಯಾನ ಗ್ರಂಥ ತತ್ಸಂಬಂಧಿ ಪೂರ್ವೋಕ್ತ ವ್ಯಾಖ್ಯಾನಾದಿಗಳು ಭಕ್ತಿಯಿಂದ ನೋಡಲ್ಪಡಬೇಕು. ಪ್ರಮಾಣವಿರೋಧಾದಿ ಸಿದ್ಧಾಂತ ಯುಕ್ತಿಗಳನ್ನು ಅನುಸಂಧಾನ ಮಾಡಬೇಕು. ಅಷ್ಟರಿಂದ ಪ್ರಾಮಾಣ್ಯ ನಿಶ್ಚಯ ಆಗುತ್ತದೆ. ಪೂರ್ವಪಕ್ಷದವರು ಇದನ್ನು ಮನಸ್ಸಿನಲ್ಲಿಟ್ಟು ಕೊಂಡಿರಬೇಕು. ಏನಂದರೆ ಅನೃಜುತ್ತೋಪಾಸಕರಿಗೆ |

ಯಾವ ಅಭೀಷ್ಟ ಸಿದ್ಧಿಯಾದರೂ ಆಗಲಿ, ಹೋಗಲಿ. ಅದು ಬೇರೆ ವಿಷಯ (ಮಂಗಳ ಮಾಡದಿರುವ ಆಂಗ್ಲರಿಗೆ ಗ್ರಂಥ ಸಮಾಪ್ತಿ ಆಗಲಿ ಹೋಗಲಿ ಎಂಬಂತೆ). ವಿಮತ ಸ್ವಾಪ್ನ ವೃನ್ದಾವನಾಖ್ಯಾನವು, ಅಪ್ರಮಾಣವಲ್ಲ, ಭಕ್ತಿಪೂರ್ವಕವಾಗಿ ಅದರ ಪಾರಾಯಣಾದಿಗಳಿಂದ ಅದನ್ನು ಸೇವಿಸುವವರಿಗೆ ತಪ್ಪದೆ ಅದರಲ್ಲಿ ಹೇಳಲ್ಪಟ್ಟ ಫಲವು ಆಗಿಯೇ ಆಗುವುದರಿಂದ, ದೃಷ್ಟಾಂತ – ವಿಪ್ರ, ಶೇಷ, ಸೀತಾಪತಿಗಳಿಗೆ ಆಗಿರುವಂತೆ – ಎಂಬ ಅನುಮಾನಕ್ಕೆ ಬಾಧಕವಿಲ್ಲ. ಅಸಿದ್ಧಿ ವ್ಯಭಿಚಾರಾದಿ ದೋಷ ಕಂಡಿಲ್ಲ. ಹೇತುವು ಅಪ್ರಯೋಜಕ ಎನ್ನುವ ಹಾಗಿಲ್ಲ. 'ವಿಪಕ್ಷೇ - ಹೇತುವಿರಲಿ, ಸಾಧ್ಯ ಒಪ್ಪುವುದಿಲ್ಲವೆಂದರೆ ಸುಳ್ಳು ತುಂಬಿದ ಗ್ರಂಥ ಪಾರಾಯಣದಿಂದಲೂ ಫಲ ಬರಬೇಕಾಗುತ್ತದೆ. ಆದ್ದರಿಂದ ಆಖ್ಯಾನದಲ್ಲಿ ಪ್ರಾಮಾಣ್ಯ ಸಂದೇಹಕ್ಕೆ ಕಾರಣವಿಲ್ಲ.'

**10.** ವಾದಿರಾಜ ಋಜುತ್ವ ವಿಷಯದಲ್ಲಿ ವೃನ್ದಾವನನಾಖ್ಯಾನ ಸೂಚಿತವಾದ ಆಗಮಾನುಸಾರಿ ಯುಕ್ತಿಯು ನಿರವಕಾಶವಾಗಿದೆ. ಏನೆಂದರೆ: ತಮಗೆ ಯೋಗ್ಯತೆ ಇಲ್ಲದಿದ್ದರೂ ಹಿರಣ್ಯಕಶಿಪು ಮುಂತಾದವರು ಬ್ರಹ್ಮಪದವಿಯನ್ನು ಕೋರಿ ತಪಸ್ಸು ಮಾಡುತ್ತಾರೆ. ಹಾಗೆ ಪ್ರಮಾಣವಿದೆ: "ಜಾನತಾಮಪಿ ಕರ್ತವ್ಯಂ ಕರ್ಮಾತ್ಮ ಸದೃಶಂ ಸದಾ | ತತ್ರಾತ್ಮ ಸದೃಶಾಜ್ಞಾನಾದ್ರಾಗಾದ್ಯೈರ್ವಾವಿಮೋಹಿತಾಃ | ಜಾನಂತೋಽಪಿಹ್ಯ ಸದೃಶಂ ಕರ್ಮ ಕುರ್ಯುಃ ಋತೇ ವಿಭುಂ । ಚತುರಾಸ್ಯಂ ಸನಾಯೋಗ್ಯಂ ಕರ್ಮ ಕುರ್ಯಾತ್ಕಥಞ್ಚನ | ........ಭವಾಯಶ್ರೇಯಸೇ ಚೈವನ ಕಶ್ಚಿತ್ತದಪೇಕ್ಷತೇ | ಮಧುಕೈಟಭಯೋಶ್ಚೈವ ಹಿರಣ್ಯಾದೇಸ್ತಥೈವಚ | ನಾನ್ಯಾ ಬ್ರಹ್ಮಪದಂ ವಾಂಛಂತ್ಯಜೂನ್ ಯೋಗ್ಯಾನ್ಸಿನಾಕ್ವಚಿತ್ | ತತಃ ಶ್ರೇಯಾಂಸಿ ವಾಂಛಂತಿ ನತುತತ್ಪದಮಾಪ್ತಯೇ ||" ಇತಿ ಬ್ರಹ್ಮಾಂಡೇ || ಭಾಗ.ತಾ. VII 3-9-12. ಈ ಪ್ರಮಾಣಾರ್ಥ ಮತ್ತು ದಶಮಸ್ಕಂದ ತಾತ್ಪರ್ಯ ವಾಕ್ಯ ಪರ್ಯಾಲೋಚನೆಯಿಂದ ಮಧುಕೈಟಭ, ಹಿರಣ್ಯಕಶಿಪು, ನರಕಾಸುರ, ಸಪ್ತತಾಳಸ್ಥಾಸುರರು, ಇತ್ಯಾದಿ ಜೀವರು ತಮಗೆ ಅಯೋಗ್ಯ ಚತುರ್ಮುಖ ಪದವೀಕಾಂಕ್ಷೆಯಿಂದ ತಪಸ್ಸು ಮಾಡುತ್ತಾರೆಂದು ಪ್ರಸಿದ್ಧವು. ಹೀಗೆಯೇ ಋಜುದೇವತೆಗಳೂ ತಮಗೆ ಯೋಗ್ಯವಾದ ಆ ಪದವೀಕಾಂಕ್ಷೆಯಿಂದ ತಪಸ್ಸು ಮಾಡುತ್ತಾರೆಂದು ಪ್ರಸಿದ್ಧವು. ಪ್ರಮಾಣವಿದೆ, ಮ.ತಾ.ನಿ. I 94-97. "ಬ್ರಹ್ಮತ್ವಯೋಗ್ಯಾಋಜುವೋ ನಾಮದೇವಾಃ ಪೃಥಗ್ಗಣಾಃ | ತೈರೇವಾಪ್ಯಂ ಪದಂ ತತ್ತುನೈವಾನ್ಯೈಃ ಸಾಧನೈರಪಿ ||94|| ಏವಂ ಸರ್ವ ಪದಾನಾಂ ಚ ಯೋಗ್ಯಾಃ ಸಂತಿಪೃಥಗ್ಗಣಾಃ | ತಸ್ಮಾದ್ಯನಾದ್ಯನಂತಂ ಹಿ ತಾರತಮ್ಯಂ ಚಿದಾತ್ಮನಾಂ ||95|| ತಚ್ಚನೈವಾನ್ಯಥಾ ಕುರ್ತು೦ ಶಕ್ಯಂ ಕೇನಾಪಿ ಕುತ್ರಚಿತ್ | ಅಯೋಗ್ಯ ಮಿಚ್ಛನ್ ಪುರುಷಃ ಪತತ್ಯೇವ ನ ಸಂಶಯಃ ||96||" ಸ್ವಾ.ವೃಂ.ಆ.ದಲ್ಲಿ ವೃನ್ದಾವನಸ್ಥ ವಾದಿರಾಜರು ಹಾಗೆ ತಪಸ್ಸು ಮಾಡುವುದಲ್ಲದೆ ಅನೇಕ ವಾಕ್ಯಗಳಲ್ಲಿ ಚತುರ್ಮುಖಾದಿಗಳಿಗೂ ತಮಗೂ ಸಾಮ್ಯವನ್ನು ಹೇಳಿಕೊಂಡಿದ್ದಾರೆ. ಋಜುಗಳೆಲ್ಲರಿಗೂ ಸಾಮ್ಯವೂ ಪ್ರಮಾಣ ಪ್ರಮಿತವೇ: "ಗುಹ್ಯಾದೇಶಾಬ್ರಹ್ಮಪದೇಯೇ ಯೋಗ್ಯಾ ದೇವತಾಗಣಾಃ | ಸರ್ವೇ ಗುಹ್ಯೋಪದೇಷ್ಟಾರಃ ಸರ್ವೇಷಾಂ

| |
|---|
| ಗುರುವೋಹಿತೇ ॥" ಛಾಂ.ಭಾ. IV 5 "ತಸ್ಮಾದ್ವಾಯುತ್ವ ಯೋಗ್ಯೈರ್ಹಿ ಯೇಷಾಂ ಲೋಕಾಃ ಪ್ರಕೀರ್ತಿತಾಃ। ತೇಷಾಮಲೋಕ ಶಂಕಾ ಚ ನೈವ ಕಾರ್ಯಾಽರಿಣಾಕ್ಷಣಾತ್ ॥" ಇತಿ ಬೃಹದ್ಭಾಷ್ಯೇ ॥ |
| ಆವತಾರಿಕಾ ನ್ಯಾಯಸುಧಾ III 4-5 (ಪುಟ 585.) "ತತ್ರ ಹರೇಃ ಮಹಾಲಕ್ಷ್ಯಾ ಋಜುಭ್ಯಶ್ಚಾಧಿಕಂ ಬ್ರಹ್ಮಣಃ ಕಾಲತ್ರಯೇಽಪಿನಾಸ್ತಿ। ಹರೇಃ ಶ್ರೀಯಶಾಧಿಕತ್ವೇನ ಋಜೂನಾಂ ಸಮತ್ವೇನ ಪ್ರಮಿತತ್ವಾತ್ ॥" ಸುಮಧ್ವವಿಜಯೇ VIII 5 ವಿಶ್ವಪತಿ ವ್ಯಾಖ್ಯಾನೇ : "ಋಜು ಪುಂಗವಸ್ಯ, ಋಜುಶ್ಚಾ ಸೌ ಪುಂಗವೋ ರುದ್ರಾದಿಭ್ಯಃ ಶ್ರೇಷ್ಠಃ ಚ.... ಋಜುಪುಂಗವ ಸ್ಯೇತ್ಯತ್ರ ಋಜೂನಾಂ ಪುಂಗವಃ ಇತಿ ನ ಷಷ್ಠಿ ತತ್ಪುರುಷಃ। ಋಜೂನಾಂ ಸರ್ವೆಷಾಮಪಿ ಸಮತ್ವಾನ ಏಕಸ್ಮಾದೇಕಸ್ಯೋತ್ತಮತ್ವಾಭಾವಾತ್" ಎಂದಿದೆ. ಸ್ವಾನ್ವಾದ್ವೃನ್ದಾವನಾಖ್ಯಾನ ನಾಯಕರಾದ ಶ್ರೀ ವಾದಿರಾಜ ಮುನಿಗಳು ಆ ಗ್ರಂಥದಲ್ಲಿ ಪುನಃಪುನಃ ತಮಗೂ ಬ್ರಹ್ಮವಾಯುಗಳಿಗೂ ಸಾಮ್ಯ ಹೇಳಿಕೊಂಡಿದ್ದಾರೆ. ಪುನಃಪುನಃ ಚತುರ್ಮುಖ ಪದವೀಕಾಂಕ್ಷೆಯುಳ್ಳವರೆಂದೂ ಸೂಚಿಸಿದ್ದಾರೆ. (V 1, VIII 97-98, XVII 79, XXI 11, XXII 36, IX 48) ಅವರಲ್ಲಿ ವಿಷ್ಣು ಭಕ್ತ್ಯಾದಿ ಗುಣದರ್ಶನದಿಂದ ಅವರು ಅಸುರರಲ್ಲವೆಂದು ನಿಶ್ಚಯಿಸಿದ ಮೇಲೆ ಅವರು ಋಜುಗಣಸ್ಥರೆಂದು ಒಪ್ಪಲೇಬೇಕು. ರುದ್ರಾದಿ ಇತರ ಸಾಮಾನ್ಯ ಜನರಿಗಂತೂ ಆ ಆಕಾಂಕ್ಷೆ ಬರುವುದೇ ಇಲ್ಲ. "ನಿಜಾನುಭಾವವರ್ಜಿತಾ ಹರೇರನುಗ್ರಹೋಜ್ಝಿತಾಃ। ಮಹಾ ಪ್ರಯತ್ನ ವರ್ಜಿತಾ ಜನಾನಜಗ್ಮುರುನ್ನತಿ೦। ಎಂಬ XX1 97 ನಿರ್ಣಯಸ್ಥ ಭೀಮನ ವಾಕ್ಯಾನುಸಾರ ಋಜುಗಳೇ ಅಂತಹ ಯೋಗ್ಯ ಪ್ರಯತ್ನವಂತರು. ಆದ್ದರಿಂದ ವೃನ್ದಾವನಸ್ಥ ವಾದಿರಾಜ ಮುನಿಗಳು, ಋಜುಗಣಸ್ಥರೇ, ಅಸುರ ಭಿನ್ನರಾಗಿ ಅನ್ಯಮುಕ್ತಿ ಯೋಗ್ಯರಲ್ಲಿಲ್ಲದ ಚತುರ್ಮುಖ ಪದವೀಕಾಂಕ್ಷವುಳ್ಳದ್ದರಿಂದ, ತತ್ಸಾಮ್ಯ ಹೇಳಿಕೊಂಡಿದ್ದರಿಂದ, ತದನುಸಾರಿ ಪ್ರಯತ್ನವುಳ್ಳದ್ದರಿಂದ ಎಂಬುದು ಒಳ್ಳೆಯ ವಿಷ್ಣು ವೇದಾನುಸಾರಿ ಅನುಮಾನಗಳು. |

11. ಹೀಗೆ ಈ ಆಖ್ಯಾನಗ್ರಂಥಕ್ಕೆ ವಾದಿರಾಜ ಋಜುತ್ವವೇ ಪ್ರಧಾನ ವಿಷಯವು. ಆ ಋಜುಶ್ರೇಷ್ಠ ದೇವತೆಯನ್ನು ಸರ್ವಾಭೀಷ್ಟ ದಾತೃವೆಂದು ನಿರೂಪಿಸಿ ಭಕ್ತರಿಗೆಲ್ಲಾ ಅರ್ಪಿಸಿದೆ ಈ ಗ್ರಂಥ. ಕಲ್ಪವೃಕ್ಷಾದಿಗಳೂ ಕೂಡ ಇಷ್ಟು ಔದಾರ್ಯವಂತರೆಂದು ಪ್ರಮಾಣವಿಲ್ಲ. ಆದ್ದರಿಂದ ಭರತ ಭೂಮಿಯಲ್ಲಿ ಈ ಕಲಿಕಾಲದಲ್ಲಿ ನಿರ್ವಿಘ್ನ ಸಾಧನೆಯಾಗಬೇಕು, ಕೆಟ್ಟ ಅಭಿಮಾನ ಹೋಗಿ ಮನಃ ಶುದ್ಧಿ ಮೊದಲಾದ ಗುಣಬೇಕು ಎಂದು ಇಚ್ಛಿಸುವ ಮುಮುಕ್ಷುಗಳಿಗೆ ವೃನ್ದಾವನಾಖ್ಯಾನ ಬಿಟ್ಟರೆ ಸುಲಭವಾಗಿ ಶರಣ್ಯರು "ನಾನಿದ್ದೇನೆ ಭಯ ಪಡಬೇಡ" ಎಂದು ಸಂತೈಸುವವರು ಇನ್ನು ಯಾರು? ಆದ್ದರಿಂದ ರಾಮಚಂದ್ರಾಚಾರ್ಯರಿಂದ ವಾ.ಗು.ಚ. ಗ್ರಂಥದಲ್ಲಿ ಸಮಂಜಸವಾಗಿ ಹೇಳಲ್ಪಟ್ಟಿದೆ. "ಸ್ವಾಪ್ತವೃನ್ದಾವಾಖ್ಯಾನಂ ದಿವ್ಯಾದ್ಭುತ ಕಥಾಶ್ರಯಂ ಪಠತಾಂ ಶೃಣ್ವತಾಂ ಚೈವಕಾಮಿತಪ್ರದ ಮಂಜಸಾ"। viii 25.[ ಆಖ್ಯಾನವು III 4 'ನಗ್ರಹೋಥ ಬಲಿಗ್ರಹಃ' XVI 36 – 'ನಿತ್ಯಂ ಬ್ರಾಹ್ಮಣ ಸಂಬಂಧಿ ಸತ್ಯವಾಕ್ಯಂ ಮಯೇದಿತಂ' ಇತ್ಯಾದಿ ಶ್ಲೋಕಗಳಲ್ಲಿ ವಾದಿರಾಜ ಗುರುಗಳು ತೈತ್ತಿರೀಯೋಪನಿಷತ್ತು ಮತ್ತು ಅಶ್ವಮೇಧ ಬ್ರಾಹ್ಮಣಾದಿ ವೇದೋಕ್ತರೆಂದು ಬೋಧಿಸಿದೆ. ಪೂರ್ವ ಪ್ರಸಿದ್ಧವರ್ಜನಿಖಿಲ ವೇದವು ಅವರ

ಮಹಿಮೆಯನ್ನು ಹೇಳಿದ್ದರೂ ಅಲ್ಪಜ್ಞರಾದ ನಾವು ಆ ಅರ್ಥವನ್ನು ಉಪಪಾದನೆ ಮಾಡಿ ತೋರಿಸಲು ಸಮರ್ಥರಲ್ಲ, ಬಳಿಚ್ಚಾ ಸೂಕ್ತವು ಅವರನ್ನು ಬೋಧಿಸುತ್ತೆಂದು ಋಕ್ಸಂಹಿತೆ ತಿಳಿಸಿದೆ]

ಏಳನೆಯ ಅಧ್ಯಾಯವು ಮುಗಿಯಿತು.

## ಅಧ್ಯಾಯ 8

### ಚತುರ್ಥ ಪ್ರಮಾಣ- ವಾದಿರಾಜ ಗುರುವರ ಚರಿತಾಮೃತ

ಇದಾದರೋ ಪ್ರಾಚೀನ ಶಿಷ್ಟಕೃತ ಗ್ರಂಥ. ವಾದಿರಾಜ ಮುನಿಗಳ ಪ್ರಶಿಷ್ಯರಿಂದಲೇ ರಚಿತವಾದದ್ದು. ಆದ್ದರಿಂದ ಗ್ರಂಥಕರ್ತರು ಕಥಾನಾಯಕರನ್ನು ಬಾಲ್ಯದಲ್ಲಿಯೇ ನೋಡಿದ್ದರೂ ನೋಡಿರಬಹುದು. ಗ್ರಂಥಕರ್ತರ ಹೆಸರು ರಾಮಚಂದ್ರಾಚಾರ್ಯರು ಎಂದು. ಯೋಗೀಶ್ವರರೆಂದೂ, ಪಂಡಿತವರ್ಯರೆಂದೂ ಪ್ರಸಿದ್ಧರಾದ ವೇದನಿಧಿತೀರ್ಥರು ಅವರ ಗುರುಗಳು. ಅವರಿಬ್ಬರೂ-ಶೃತಿಸ್ಮೃತಿ ಕಲ್ಪಕರೆಂದು ಶಂಕಿಸುವುದು ಯುಕ್ತವಲ್ಲ. “ಪ್ರಾಯಃ ಸತಾಂ ನಮನಃ ಪಾಪ ಮಾರ್ಗೇ” - ಎಂದು ಹೇಳಲ್ಪಟ್ಟಿದೆ. ವಾ.ಗು.ಚ. ಪುಸ್ತಕವು ಗುರ್ವಾಜ್ಞೆಯಿಂದ ರಚಿತವಾದ ಕಾವ್ಯವು. ಸುಮನೋಹರ ಚರಿತ್ರೆಯನ್ನು ಒಳಗೊಂಡಿದ್ದು. ಸರಳಲಲಿತ ಪದಗಳಿಂದ ವಿನ್ಯಸ್ತವಾದದ್ದು. ಪ್ರಾಮಾಣಿಕ ಕಥಾಪೂರ್ಣವಾದದ್ದು. ಪ್ರಮಾಣ ಪುಂಜಗಳಿಂದ ಉಕ್ತಾರ್ಥ ಸಾಧಿಸತಕ್ಕದ್ದು. ವೇದನಿಧಿಗಳು ವಿಪ್ರನಿಂದ ತಾವು ಶ್ರವಣಮಾಡಿದ ಆಖ್ಯಾನವನ್ನು ಅನುವದಿಸಿ ಪಠಿಸಿದಾಗ ಈ ಪಂಡಿತರೇ ಅದನ್ನು ತಾಳವಾಲೆಯಲ್ಲಿ ಬರೆದು ಸ್ಟಾ.ನೃಂ.ಆ.ನ್ನು ತಯಾರು ಮಾಡಿಕೊಟ್ಟು ಲೋಕೋದ್ಧಾರ ಮಾಡಲು ವಿಪ್ರ ಮತ್ತು ಗುರುಗಳಿಗೆ ಸಹಾಯಕರಾದವರು. ಇಂಥವರು ಬರೆದದ್ದು [ಪೂರ್ವ ಪಕ್ಷದವರು “ಈ ವಾ.ಗು.ಚ. ಗ್ರಂಥವು ಶ್ರೀ ಸತ್ಯವೀರರ ಕಾಲದಲ್ಲಿ ಮುದ್ರಿತವಾಗಿರಲಿಲ್ಲ, ಪ್ರಕಟಿತವೂ ಆಗಿರಲಿಲ್ಲ. ಆದ್ದರಿಂದ ಈಚೆಗೆ ಇದು ಕಲ್ಪಿತವೆಂದು ಏತಕ್ಕೆ ಹೇಳಬಾರದು”? - ಎಂದು ಕೇಳಬಹುದು. ಈ ಪ್ರಶ್ನೆಯು ಪ್ರಾಮಾಣ್ಯ ಪರತಸ್ತ್ವ ರೀತಿಯನ್ನು ಅವಲಂಬಿಸಿದ್ದು, ಏನು ಮಾಡುವುದು? ಅದ್ಯಾಪಿ ಅಮುದ್ರಿತವಾದ ಅಶ್ರುತವಾದ ಅನೇಕ ಗ್ರಂಥಗಳು ನಮ್ಮ ಭಾರತದೇಶದಲ್ಲಿವೆ. ಅಷ್ಟು ಮಾತ್ರದಿಂದಲೇ ಅವು ಅಪ್ರಮಾಣಗಳಾಗುವುದಿಲ್ಲ.] [ಕಿಂಚ ವಾ.ಗು.ಚ. ಗ್ರಂಥದಲ್ಲಿ ಉಕ್ತವಾದ ಬಹುಪ್ರಮಾಣಗಳು ಋಜುತ್ವ ಚಂದ್ರೋದಯದಲ್ಲಿ ಸತ್ಯವೀರರ ಕಾಲದಲ್ಲಿಯೇ (1884) ಪ್ರಕಟಿಸಲ್ಪಟ್ಟಿವೆ. ಅದರಲ್ಲಿ ಬ್ರಹ್ಮ ವೈವರ್ತ, ಪಾದ್ಮ, ಬ್ರಹ್ಮಾಂಡ, ಸಾನ್ದವಚನಗಳೂ, ಋಕ್ಸಂಹಿತಾ ಶ್ಲೋಕಗಳೂ ಇವೆ ಮತ್ತು ಜಂಖಂಡಿ ವಾದಿರಾಜಾಚಾರ್ಯರ ಕೃತಿಗಳಲ್ಲೂ ಇವೆಲ್ಲಾ ಇವೆ. ತಿಮ್ಮಣ್ಣದಾಸರು, ವಿಜಯದಾಸರು, ಜಗನ್ನಾಥದಾಸರು, ನಿಜಪುರಂದರದಾಸರು ಇವರುಗಳ ಪದಗಳೆಲ್ಲಾ ಸತ್ಯವೀರರ ಕಾಲದಲ್ಲಿ ಪ್ರಸಿದ್ಧವಾಗಿದ್ದವು. ವಾದಿರಾಜಾಚಾರ್ಯರಿಂದ ಉದಾಹೃತವಾಗಿಯೂ ಇದ್ದವು. ಶ್ರೀ ವಿಶ್ವಾಧೀಶತೀರ್ಥರೂ ಕೆಲವು ದಾಸರ ಪದಗಳನ್ನು ಪ್ರಮಾಣಗಳನ್ನಾಗಿ ಉದಾಹರಿಸಿದ್ದರು.

ಕಿಂಚ, ಒಂದು ಸಮಿತಿಯು ಪ್ರಾಚೀನ ಗ್ರಂಥಗಳನ್ನು ಸಂಶೋಧನೆ ಮಾಡಿ ಅಮುದ್ರಿತ ಅನೇಕ ಪುಸ್ತಕಗಳನ್ನು ಸಂಗ್ರಹಿಸಿ ಅವುಗಳ ಪೈಕಿ ವಾ.ಗು.ಚ. ಗ್ರಂಥವನ್ನು ಪ್ರಕಟಿಸಿತೆಂದು ಅವತಾರಿಕೆಯಾದ 'ಶುಭಾ ಶಂಸನೆ, “ವಿಜ್ಞಪ್ತಿ”

ಗಳಿಂದ ತಿಳಿದುಬರುತ್ತದೆ. ಗ್ರಂಥಶೈಲಿ ವಿಷಯಾದಿಗಳನ್ನು ವಿಮರ್ಶಿಸಿದರೆ ಯಾವ ಶಂಕೆಯೂ ಹುಟ್ಟುವುದಿಲ್ಲ. ಪರಮ ಪ್ರಾಮಾಣಿಕ ಗ್ರಂಥವೆಂದು ತೋರುತ್ತದೆ. ಶ್ರುತಿಸ್ಮೃತಿ ಕಲ್ಪಕರಾದ ಪಾಪಿಗಳ ದೆಸೆಯಿಂದ ಮಾಡಲ್ಪಟ್ಟಂತೆ ಕಾಣುವುದಿಲ್ಲ. ವಿಚಾರ ಮಾಡಲಾಗಿ "ಶ್ರೀ ನಾರಾಯಣ ತಂತ್ರಿಗಳಿಗೆ ಉಡುಪಿ ಕಾಲೇಜು ಪ್ರಿನ್ಸಿಪಾಲ್ ರಾಮಚಂದ್ರರಾವ್, ಎಂ.ಎ. ಇವರು ಕುಂಭಕೋಣೆಯಿಂದ ತರಿಸಿಕೊಟ್ಟಿದ್ದ ; ಮುದ್ರಣ ಕೆಲಸವಾದ ಮೇಲೆ ಪ್ರತಿಯನ್ನು ಅವರಿಗೇ ವಾಪಸು ಕೊಟ್ಟಿದೆ" ಎಂಬ ಸಮಾಧಾನವು ಶ್ರೀ ಶ್ರೀ 108 ಸೋದೆ ಸ್ವಾಮಿಗಳವರ ಮುಖದಿಂದ ತಿಳಿದುಬಂದಿದೆ. ರಾಮಚಂದ್ರರಾವ್, ಪ್ರಿನ್ಸಿಪಾಲರು ಕಲ್ಪಕರೆಂಬಲ್ಲಿ ಪ್ರಮಾಣ ಲೇಶವೂ ಇಲ್ಲ. ಅವತಾರಿಕೆಯಾದ "ವಿಜ್ಞಪ್ತಿ"ಯಿಂದ ಇನ್ನೂ ಗುರುರಾಜರ ಸಂಬಂಧಿ ಗ್ರಂಥಗಳು ಋಜುತ್ವ ಸಾಧಕಗಳು ಸಮಿತಿಯಿಂದ ಸಂಗ್ರಹೀತವಾಗಿ ಅಮುದ್ರಿತವಾಗಿವೆ ಎಂದು ಗೊತ್ತಾಗುತ್ತದೆ. ಅವುಗಳೂ ಮುದ್ರಿತವಾಗಲೆಂದು ಅಪೇಕ್ಷಿಸುತ್ತೇವೆ. ವಾದಿರಾಜ ಋಜುತ್ವ ವಿಷಯದಲ್ಲಿ ಪ್ರಮಾಣವೆಂದು ಹೇಳಿದರೆ ವಿರೋಧವೇನು? ಈ ಲೋಕದಲ್ಲಿ ಅಂಥ ಅನೇಕ ಪ್ರಾಚೀನ ಚರಿತ್ರೆ ಗ್ರಂಥಗಳು ಇವೆ. ಅವುಗಳ ಪ್ರಾಮಾಣ್ಯವು ವೇದ ಪರಿಗೃಹೀತತ್ವ ಯುಕ್ತಿಯಿಂದಲಾಗಲೀ, ವೇದ ಮೂಲತ್ವ ಅಥವಾ ವೇದ ಸಂವಾದಿತ್ವ ಯುಕ್ತಿಯಿಂದಾಗಲೀ, ಆ ಗ್ರಂಥವನ್ನು ಬರೆದ ಪ್ರಾಚೀನ ಕರ್ತನು ಆಪ್ತನೆಂಬ ಯುಕ್ತಿಯಿಂದಲಾಗಲೀ, ತೋರಿಸಲು ಶಕ್ಯವೇ ಇಲ್ಲ. ತಥಾಪಿ ಆ ಗ್ರಂಥೋಕ್ತ ವಿಷಯಗಳು ಸತ್ಯವೇ, ಏಕೆಂದರೆ ಅವು ಅನೂಚಾನ ವೃತ್ತಾಂತ ತಿಳಿದ ಆ ಸಂಪ್ರದಾಯಾಭಿಜ್ಞ ಜನರಿಂದ ಮಾನ್ಯವಾಗಿವೆ, ವೇದಾದಿ ಸರ್ವ ಪ್ರಮಾಣಗಳಿಗೂ, ಸಜಾತೀಯ ಸಂವಾದ ರೂಪದಿಂದ ಇರುವ ಆ ಕಾಲದ ಇತರ ಗ್ರಂಥಗಳಿಗೂ ಅವಿರುದ್ಧವಾಗಿವೆ. ಹೀಗೆ ಸತ್ಯಾರ್ಥ ಬೋಧಕವಾದ ಆ ಗ್ರಂಥಗಳು ಪ್ರಮಾಣಗಳೇ. ಆದ್ದರಿಂದಲೇ ಆ ಗ್ರಂಥಗಳು ವೇದಾನುಕೂಲಗಳೆಂದು ನಿರ್ಣಯಿಸಲಿಕ್ಕೆ ಶಕ್ಯವಾಗಿವೆ. ಪ್ರಕಾರಾಂತರದಿಂದ ಪ್ರಾಮಾಣ್ಯ ಸಾಧನೆಯು ಶಕ್ಯವಲ್ಲ. [ಈ ಗ್ರಂಥವು ಪ್ರಾಮಾಣಿಕವಂಬಲ್ಲಿ ಇದರ 6-45ರಲ್ಲಿರುವ ಶ್ರೀ ಲಕ್ಷ್ಮಿದೇವಿಯವರ ಪ್ರತಿಷ್ಠಾಪ್ರಕಾರವು ವೃತ್ತರತ್ನ ಸಂಗ್ರಹ 2-41ರ ಸಂವಾದದಿಂದ ದೃಢೀಕೃತವಾಗಿ ಅಪೂರ್ವತಾ ಲಿಂಗದಿಂದ ಪ್ರತ್ಯಯಜನಕವಾಗಿದೆ. ಅಪೂರ್ವ ವಿಷಯ ಏನೆಂದರೆ "ಹಯಗ್ರೀವ ಸಮುದ್ರಸ್ಯ ನಿಕಟೇಶ್ರಿಯಮದರಾತ್" ಎಂದರೆ ಲಕ್ಷ್ಮಿ ದೇವಿಯವರನ್ನು ಹಯಗ್ರೀವ ಸಮುದ್ರದ ಸಮೀಪದಲ್ಲಿ ವಾದಿರಾಜಗುರುಗಳು ಪ್ರತಿಷ್ಠಿಸಿದರು ಎಂದಿದೆ. ವೃ.ರ.ಸಂ ದಲ್ಲೂ 'ತ್ರಿವಿಕ್ರಮನ್ಯಪುರತಃ..." ಎಂದಿದೆ. ಈಗ ಪ್ರಕೃತದಲ್ಲಿ ಹಾಗಿಲ್ಲ. 1583 ರಲ್ಲಿ ಹಾಗೆ ಪ್ರತಿಷ್ಟೆ ಆಗಿತ್ತು, ಗ್ರಂಥಕಲ್ಪಿತವಾಗಿದ್ದರೆ ಇಂತಹ ವಿಷಯಗಳು ಸಿಕ್ಕುತ್ತಿರಲಿಲ್ಲ. ಶ್ರೀತ್ರಿವಿಕ್ರಮಸ್ವಾಮಿ ಪ್ರತಿಷ್ಠೆಯ ವಿಷಯ ಶಾಸನದಲ್ಲಿದೆ. A.R.S.D.E-1952.]

ಇನ್ನು ವೇದ ವಿಷಯದಲ್ಲಿಯೇ ಕೆಲವರು ಅಪ್ರಾಮಾಣ್ಯ ಶಂಕೆಯನ್ನು ಉದ್ಘಾಟಿಸುತ್ತಾರೆ. ವೇದಗಳು ನಿತ್ಯಗಳೇ ಆದರೂ, ಪುರುಷರಿಂದ ಅಕೃತವಾದರೂ ಅವು ಜಡಗಳೇ. ಜ್ಞಾನಹೀನವಾದವು, ಆಪ್ತಿರಹಿತವು, ಪಿಪಿಲಿಕಾಲಿಪಿ ಸದೃಶಗಳು. ಅಂಥ ಶಬ್ದಗಳಿಂದ ಯಾವ ಮೋಕೋಪಯೋಗಿ ತತ್ತ್ವವನ್ನು ತಿಳಿಯಲಿಕ್ಕೆ ಶಕ್ಯವಾಗುತ್ತದೆ? ಅವುಗಳಿಗೆ ಪ್ರಾಮಾಣ್ಯವನ್ನು ಹೇಗೆ ನಿಶ್ಚಯಿಸಬೇಕು? ಎನ್ನುತ್ತಾರೆ. ಇಂತಹ ಪೂರ್ವಪಕ್ಷಕ್ಕೆ ಆಚಾರ್ಯರು ಅಪ್ಪಣೆ

ಕೊಡಿಸಿದ್ದಾರೆ: "ಪಿಪೀಲಿಕಾಲಿಪಿಶ್ಚಾಪಿ ಪ್ರಮಾಣಮವಿರೋಧತಃ| .....ವಿರೋಧಾದರ್ಶನಾತ್ತಸ್ಮಾದ್ವೇದ ಪ್ರಾಮಾಣ್ಯಮಿಷ್ಯತೇ|" ಎಂದು. ಕರಣ ಪ್ರಾಮಾಣ್ಯಕ್ಕೆ ಉತ್ಪತ್ತಿ ಸ್ವತಸ್ತ್ವ ಒಪ್ಪುವರೆಲ್ಲರಿಂದಲೂ ಇದೇ ಸಮಾಧಾನವು ಹೇಳಲ್ಪಡಬೇಕು. ಆದ್ದರಿಂದ ನಿತ್ಯತ್ವ ಅಪೌರುಷೇಯುತ್ವಾದ್ಯಪೇಕ್ಷಯಾ ಪ್ರಮಾಣವಿರುದ್ಧತ್ವವು ಇನ್ನೂ ಸೂಕ್ಷ್ಮ ಕಾರಣವು, ಮತ್ತು ಸರ್ವಪ್ರಮಾಣ ವಿಷಯಕವು ಎಂದು ಸಿದ್ಧವಾಗುತ್ತದೆ. ತತ್ವನಿರ್ಣಯದಲ್ಲಿ ಅಪೌರುಷೇಯವಾದ್ದರಿಂದ ವಾಕ್ಯ ದೋಷಗಳು ವೇದದಲ್ಲಿಲ್ಲವೆಂದು ತೋರಿಸಿ ನಿರ್ದೋಷ ವಾಕ್ಯರೂಪವಾದ್ದರಿಂದ ವೇದಗಳು ಪ್ರಮಾಣವೆಂದು ನಿರ್ಣಯಿಸಲ್ಪಟ್ಟಿತು. ಇಲ್ಲಿ ಅನುವ್ಯಾಖ್ಯಾನದಲ್ಲಾದರೋ ಪ್ರಮಾಣ ವಿರೋಧ ಕಂಡಿರುವಾಗ ವೇದಕ್ಕೆ ಪ್ರಾಮಾಣ್ಯವೆಲ್ಲಿಂದ ಬಂತು? "ಯಜಮಾನನು ದರ್ಭಮುಷ್ಟಿಯು" ಎಂಬ ವೇದವು ಪ್ರತ್ಯಕ್ಷ ಪ್ರಮಾಣ ವಿರುದ್ಧವಲ್ಲವೇ? ಎಂಬ ಸಂದೇಹ ಬರಲಾಗಿ "ಪ್ರಮಾಣಾವಿರುದ್ಧವಾದದ್ದೇ ಪ್ರಮಾಣ" ಎಂಬ ಸೂಕ್ಷ್ಮ ಯುಕ್ತಿಯಿಂದ ಎಲ್ಲಾ ಶಂಕೆಗಳನ್ನೂ ಪರಿಹರಿಸಿ ಸಿದ್ಧಾಂತ ಮಾಡಿದ್ದಾರೆ.

ಕಿಂಚ ಯಥಾವಸ್ಥಿತ ಜ್ಞೇಯ ವಿಷಯೀಕಾರಿ ಜ್ಞಾನವು ಪ್ರಮಾ. ಜ್ಞಾನವು ಪ್ರಮಾ ಆದರೆ ವಿಷಯಕ್ಕೆ ಸತ್ಯತ್ವವು ಇದ್ದೇ ಇರುತ್ತದೆ. ಅಬಾಧ್ಯತ್ವವೇ ಸತ್ಯತ್ವವು ಎಂದು ಪಂಡಿತರು ಹೇಳುತ್ತಾರೆ. ಅಬಾಧ್ಯತ್ವವೆಂದರೆ ಬಾಧಜ್ಞಾನಾವಿಷಯತ್ವ ಎಂದರೆ ಪ್ರಮಾಣವಿರುದ್ಧತ್ವವೇ. ವಿಷಯವು ಸತ್ಯವಾದರೆ, ಜ್ಞಾನಕ್ಕೆ ಪ್ರಮಾತ್ವ ತಜ್ಜನಕ ಕರಣಕ್ಕೆ ಪ್ರಮಾಣ್ಯ. ಹೀಗಿರುವುದರಿಂದ ಪ್ರಮಾಣವಿರುದ್ಧತ್ವವು ಅನುಗತ ಪ್ರಯೋಜಕವಾಗಿ ಕಂಡಿದೆ. ಅಬಾಧಿತಾರ್ಥ ವಿಷಯೀಕಾರಿ ಕರಣತ್ವ ಎಂದರೆ ಪ್ರಮಾಣಾವಿರುದ್ಧಾರ್ಥ ಬೋಧಕತ್ವ; ಅದೇ ವಾಕ್ಯ ಪ್ರಾಮಾಣ್ಯ ಎಂದರೆ ಪ್ರಮಾಣ ಅವಿರುದ್ಧತ್ವಾತಿರಿಕ್ತವಾದ ಯಾವ ಪ್ರಯೋಜಕಾಂತರವೂ ಇಲ್ಲ. ಆದ್ದರಿಂದ ವಿಷಯ ಸತ್ಯತ್ವ, ತತ್ಪ್ರತಿಪಾದಕ ವಾಕ್ಯಕ್ಕೆ ಪ್ರಾಮಾಣ್ಯ ಇವೆರಡೂ ದಂಪತಿಗಳಂತೆ ಪರಸ್ಪರ ವ್ಯಾಪ್ತವಾಗಿವೆ ಎಂದು ಸರ್ವ ವಾದಿಗಳೂ ಒಪ್ಪಬೇಕೆಂದು ಶಾಸ್ತ್ರಕಾರರ ಭಾವ.

ಪುರುಷಕೃತ ಎಂದು ಹೇಳಿದ ಮಾತ್ರಕ್ಕೆ ಆ ವಾಕ್ಯದಲ್ಲಿ ಪ್ರಾಮಾಣ್ಯ ಸಂದೇಹ ಬಂದು ಬಿಡುತ್ತದೆ ಎಂದು ಪೂರ್ವಪಕ್ಷ ಬಂದರೆ – ಹಾಗಾದರೆ ಪುರುಷಾಕೃತವಾದ ವೇದವು ಪ್ರಮಾಣವಾಗಬಹುದಷ್ಟೆ - ಎಂದು ಉತ್ತರ ಹೇಳಲಾಯಿತು. ಜ್ಞಾನಹೀನವಾದ ವೇದವಾಕ್ಯವು ಹೇಗೆ ಪ್ರಮಾಣ ವಾಗುತ್ತದೆ ಎಂದು ಪುನಃ ದೋಷ ಶಂಕೆ ಬಂದಾಗ ಪ್ರಬಲವಾದ ಪ್ರಯೋಜಕಾಂತರವನ್ನು ಹೇಳಬೇಕಾಗಿ "ಪ್ರಮಾಣ ವಿರೋಧಾಭಾವವೇ ಪ್ರಾಮಾಣ್ಯ ವ್ಯವಸ್ಥಾಪಕವು" ಬಲಯುಕ್ತ ಪ್ರಮಾಣ ವಿರೋಧ ಬಂದರೆ ದೋಷ ನಿಶ್ಚಯ.

ಮಾಡಲ್ಪಡಬಹುದು. ಅದಿಲ್ಲದಿದ್ದರೆ ದೋಷಾಭಾವವೇ. ನಿತ್ಯ ವಾಕ್ಯದಲ್ಲಿಯಾಗಲೀ, ಅನಿತ್ಯವಾಕ್ಯದಲ್ಲಾಗಲೀ, ಜ್ಞಾನಿವಾಕ್ಯದಲ್ಲಾಗಲೀ, ಅಜ್ಞಾನಿ ವಾಕ್ಯದಲ್ಲಾಗಲೀ, ಸಾಧುವಾಕ್ಯದಲ್ಲಾಗಲೀ, ವಂಚಕವಾಕ್ಯದಲ್ಲಾಗಲೀ, "ಬಲವತ್ಪ್ರಮಾಣ ತಶ್ಚೈವ ದೋಷಾಜ್ಞೇಯಾ ನಚಾನ್ಯಥಾ" ಎಂಬ ತತ್ವ ನಿರ್ಣಯೋಕ್ತ ವ್ಯಾಪ್ತಿಯನ್ನು ಅನುವ್ಯಾಖ್ಯಾನದಲ್ಲಿ ವಿಸ್ತಾರವಾಗಿ ಉಪಪಾದಿಸಿ ಸರ್ವಜ್ಞಾಚಾರ್ಯರು ತತ್ತದ್ಯೋಗ್ಯ ನಿಖಿಲ ಪ್ರಮಾಣಾವಿರುದ್ಧತ್ವವೇ ವಾಕ್ಯ ದೋಷಾಭಾವದಲ್ಲಿಯೂ, ನಂತರ ವಾಕ್ಯ ಪ್ರಾಮಾಣ್ಯದಲ್ಲಿಯೂ ಪ್ರಧಾನ

ಪ್ರಯೋಜಕವೆಂದು ಸಿದ್ಧಾಂತ ತೋರಿಸಿ ಬಿಟ್ಟಿದ್ದಾರೆ. ಆದ್ದರಿಂದ ಸುಮ್ಮ ಸುಮ್ಮನೆ ಶಂಕಾ ಮಾಡಬಾರದು. ವಿಪರೀತ ಪ್ರಮಾಣ ತೋರಿಸಬೇಕು. "ಭಾಧಕ ಪ್ರತ್ಯಯಾಧೀನಂ ಹಿ ಜ್ಞಾನಾನಾಮಪ್ರಮಾತ್ವ ಕಲ್ಪನಂ" – ಎಂದು ತ.ನಿ. ಟೀಕೆ ಇದೆ.

ಈ ಯುಕ್ತಿಯು ಅನುಭವಾನುಸಾರಿಯಾಗಿದೆ. ಮಾಧ್ವರಿಗೂ ನೈಯಾಯಿಕರಿಗೂ ಸಮ್ಮತವಾಗುವಂತಿದೆ. ನಿತ್ಯತ್ವಾಪೌರುಷೇಯತ್ವಾದಿಗಳು ಹಾಗಲ್ಲ. ಅವು ವೇದ ಪ್ರಾಮಾಣ್ಯದಿಂದಲೇ ಸಾಧಿಸಲ್ಪಡಬೇಕು. ಆ ವೇದದಲ್ಲಿ ಶಂಕೆ ಬಂದರೆ ಸ್ವತಃ ಪ್ರಾಮಾಣ್ಯವು ಸ್ಥಾಪಿಸಲ್ಪಡಬೇಕು. ಸ್ವತಃ ಪ್ರಾಮಾಣ್ಯವು ಔತ್ಸರ್ಗಿಕವಾದುದರಿಂದ ಪುನಃ ಶಂಕೆ ಬಂದರೆ ಬಾಧಕ ಪ್ರಾಮಾಣಗಳಿಲ್ಲ, ಪ್ರಮಾಣಾವಿರುದ್ಧತ್ವವಿದೆಯಾದ್ದರಿಂದ ದೋಷಾಭಾವವೂ ಅಂಗೀಕರ್ತವ್ಯವೇ ಎನ್ನಬೇಕು. ಅಥವಾ ವೇದವ್ಯಾಸರಿಂದ ದ್ರುಪದನು ಸಮಾಧಾನ ಹೊಂದಿದಂತೆ ಲಕ್ಷಣಯುಕ್ತ ಪುರುಷನಿಂದ ಸಮಾಧಾನವನ್ನು ಪಡೆದು ಶಂಕೆಯನ್ನು ನೀಗಬೇಕು. ಸರ್ವತ್ರ ಅಂತಹ ಪುರುಷರು ಸಿಕ್ಕುವುದಿಲ್ಲ. ಆದ್ದರಿಂದ ಸರ್ವಾನುಭವಸಿದ್ಧ ಪ್ರಾಮಾಣ್ಯ ಪ್ರಯೋಜಕವೆಂದರೆ 'ಪ್ರಬಲ ಪ್ರಮಾಣಾವಿರುದ್ಧತ್ವವೇ" ಎಂದು ಸರ್ವರೂ ಒಪ್ಪಲೇಬೇಕು. ತಿಳಿದೋ ತಿಳಿಯದೆಯೋ ಆ ನಿಯಮವನ್ನು ಅಂಗೀಕರಿಸಿಯೇ ಜನರು ವ್ಯವಹರಿಸುತ್ತಿದ್ದಾರೆ, ಪ್ರವರ್ತಿಸುತ್ತಿದ್ದಾರೆ. ಆದ್ದರಿಂದ ಪ್ರಮಾಣ ವಿರೋಧ ತೋರಿಸದೆ ವಾ.ಗು.ಚ. ಗ್ರಂಥವನ್ನು ತಿರಸ್ಕರಿಸಬಾರದು. ಮೂಲ ಪ್ರಮಾಣಾವಿರುದ್ಧವಾಗಿರುವುದರಿಂದ, ಈ ವಾ.ಗು.ಚ. ಗ್ರಂಥವು ಪ್ರಮಾಣವೆಂದು ನಿರ್ಣಯಿಸಲ್ಪಡಲು ಅರ್ಹವಾಗಿದೆ. ಸಂಪ್ರತಿಪನ್ನದೇಶೀಯ ಪ್ರಾಚೀನ ಚರಿತ್ರಸಾರ ಗ್ರಂಥದಂತೆ. [ವಾ.ಗು.ಚ.ಗ್ರಂಥದಲ್ಲಿ 'ಸತ್ತತ್ತ್ವರತ್ನಮಾಲಾ 'ಎಂಬ ಗ್ರಂಥದ "ನಿರ್ದೋಷಾಃ ಋಜುವಃ" ಎಂಬ ಒಂದು ಶ್ಲೋಕ ಭಾಗವು ಉದಾಹರಿಸಲ್ಪಟ್ಟಿದೆ. ಶೋಧಿಸಿ ನೋಡಿದಲ್ಲಿ ಆ ಗ್ರಂಥವೂ ಉತ್ತರಾದಿ ಮಠದ ಶ್ರೀ ಸತ್ಯನಿಧಿಗಳ ಮತ್ತು ಶ್ರೀ ಸತ್ಯನಾಥತೀರ್ಥರ ಕಾಲದಲ್ಲಿ ಪ್ರಖ್ಯಾತವಾದದ್ದು. ಶ್ರೀಸತ್ಯನಿಧಿಗಳ ಪಟ್ಟ ಕಾಲ **1638-1648.** ಗುರುಗಳು ಇರುವಾಗಲೇ ವಾ.ಗು.ಚ. ಗ್ರಂಥವನ್ನು **1645** ರಲ್ಲಿ ರಾಮಚಂದ್ರಾಚಾರ್ಯರು ಬರೆದಿದ್ದರೆಂದು ನನ್ನ ಅಭಿಪ್ರಾಯ. ಅಂತೂ ಮುಂದಿನ ಕಾಲದಲ್ಲಿ ಬರೆಯಲ್ಪಟ್ಟ ಗ್ರಂಥದ ಶ್ಲೋಕ ಉದಾಹೃತವಾಗಿದೆ ಎಂಬ ಸಂದೇಹಕ್ಕೆ ಅವಕಾಶವಿಲ್ಲ. ಸತ್ತತ್ವರತ್ನಮಾಲೆಯು ಸುಮಾರು **1642-43**ರಲ್ಲಿ ಬರೆಯಲ್ಪಟ್ಟದ್ದು.] ಅನ್ಯಥಾ ಪ್ರಾಮಾಣ್ಯ ಪರತಸ್ತ್ವವನ್ನು ಒಪ್ಪಬೇಕಾಗುತ್ತದೆ. ಇನ್ನೂ ಅಧಿಕ ಉಪಪಾದಕ ಯುಕ್ತಿಗಳು ಗ್ರಂಥಾರಂಭದಲ್ಲಿ ಶ್ರೀ ಕಾಣಿಯೂರು ಸ್ವಾಮಿಗಳವರಿಂದಲೂ, ಸಮಿತಿ ಕಾರ್ಯದರ್ಶಿ ನಾರಾಯಣ ತಂತ್ರಿಗಳಿಂದಲೂ ಕೊಡಲ್ಪಟ್ಟಿವೆ. ಈ ಗ್ರಂಥಕ್ಕೆ ಸಂವಾದವಾಗಿ ಐತಿಹ್ಯ ಆಖ್ಯಾನಾದಿಗಳೂ ಇಲ್ಲೇ ಉದಾಹೃತವಾದ ಶ್ರುತಿಸ್ಮೃತ್ಯಾದಿ ಪ್ರಮಾಣಗಳೂ ಇವೆ.

ಎಂಟನೆಯ ಅಧ್ಯಾಯವು ಮುಗಿಯಿತು.

# ಅಧ್ಯಾಯ 9

## ಪಂಚಮ ಪ್ರಮಾಣ ವಾದಿರಾಜ ಗುರುವರ ಚರಿತಾಮೃತಸ್ಥ ಮೂಲ ಪ್ರಮಾಣಗಳು

**1.** ವಾದಿರಾಜ ಗುರುವರ ಚರಿತಾಮೃತದಲ್ಲಿ ಹೇಳಲ್ಪಟ್ಟ ಅನೇಕ ವಿಷಯಗಳು ವೇದನಿಧ್ಯಾದಿಗಳಿಂದ ಜ್ಞಾತವಾದವು. ಕೆಲವು ರಾಮಚಂದ್ರ ಪಂಡಿತರಿಂದಲೇ ಸ್ವಾನುಭವದಿಂದ ತಿಳಿಯಲ್ಪಟ್ಟವೆಂದೂ ಹೇಳಬಹುದು. ಆದರೆ ಇನ್ನೇನೂ ಅಧಿಕವಾಗಿ ರಾಮಚಂದ್ರಪಂಡಿತಾಚಾರ್ಯರ ವಿಷಯದಲ್ಲಿ ತಿಳಿಯಲು ಶಕ್ಯವಿಲ್ಲದುದಕ್ಕಾಗಿ ಮನಸ್ಸು ಖೇದ ಯುಕ್ತವಾಗುತ್ತದೆ. ಅವರು ಎಷ್ಟು ವರ್ಷಗಳ ಕಾಲ ವೇದನಿಧಿಗಳಲ್ಲಿ ಗುರುಕುಲ ವಾಸ ಮಾಡಿದರು, ಎಷ್ಟು ವರ್ಷ ಆಖ್ಯಾನ ಗ್ರಂಥವನ್ನು ಬರೆದರು ಇತ್ಯಾದಿ ವಿವರವು ಪೂರ್ವೀಕರಿಂದ ಪ್ರಕಟಿತವಾಗಿಲ್ಲ. ಆ ಪಂಡಿತರಿಂದ ಲಿಖಿತವಾದ ಸ್ವಾ.ವೃಂ.ಆ. ಮೂಲ ಪ್ರತಿಯೂ ಸಹ ಕೀಟ ಭಕ್ಷಿತವಾದ ಬಹು ಗ್ರಂಥಗಳೊಂದಿಗೆ ಸುಮಾರು 1935 ರಲ್ಲಿ ನದಿಗೆ ಒಯ್ಯಲ್ಪಟ್ಟು ನಷ್ಟವಾಗಿ ಹೋಗಿದೆ ಎಂದು ಸೋದೆ ಮಠದ ಅಧಿಪತಿಗಳಾದ ಶ್ರೀ ಶ್ರೀ 108 ವಿಶ್ವೋತ್ತಮತೀರ್ಥ ಶ್ರೀಪಾದಂಗಳವರೇ ಅಪ್ಪಣೆ ಕೊಡಿಸಿದರು. ಆದರೂ ಇತರ ತಮ್ಮ ಮಠಗಳಲ್ಲಿ ಗ್ರಂಥ ಪ್ರತಿ ಇದ್ದುದರಿಂದಲೂ, ಉಡುಪಿಯ ಬೇರೆ ಮಠಗಳಲ್ಲೂ, ಭೀಮನಕಟ್ಟೆ ಮಠಗಳಲ್ಲೂ ಇದ್ದುದರಿಂದಲೂ, ಶಿಲಾದಲ್ಲಿ ಅಣುವೃನ್ದಾವನಾಖ್ಯಾನವು ಸಂಸ್ಥಾಪಿತವಾಗಿರುವುದರಿಂದಲೂ, ವ್ಯಾಖ್ಯಾನಗಳಲ್ಲೂ ವಾ.ಗು.ಚ. ಗ್ರಂಥದಲ್ಲೂ ಆಖ್ಯಾನವು ನಾಮನಿರ್ದೇಶದಿಂದ ವರ್ಣಿತವಾಗಿದೆಯಾದ್ದರಿಂದಲೂ ಅದು ವೇದನಿಧಿಗಳ ಕಾಲದಿಂದ ಇತ್ತು ಎಂದು ನಿಶ್ಚಯಿಸಲು ಅವಕಾಶವಿದೆ. ಆಖ್ಯಾನವನ್ನು ನಿರ್ದೇಶಿಸಿರುವ ಅಂತಹ ಅನ್ಯ ಗ್ರಂಥಗಳ ಪೈಕಿ ವಾ.ಗು.ಚ. ಗ್ರಂಥವು ಪ್ರಾಥಮ್ಯವನ್ನು ಹೊಂದಿರುತ್ತದೆ.

**2.** ಒಂಭತ್ತು ಬಿಂದು(ಅಧ್ಯಾಯ)ಗಳುಳ್ಳ ಈ ಗ್ರಂಥದಲ್ಲಿ ಋಜುಗಳಾದ ವಾದಿರಾಜರ ಚರಿತ್ರೆಯನ್ನು ಮೊದಲು ಏಳು ಅಧ್ಯಾಯಗಳಲ್ಲಿ ಪ್ರತಿಪಾದಿಸಿ ಎಂಟನೆಯ ಬಿಂದುವಿನಲ್ಲಿ ಋಜುತ್ವ ಸಾಧಕ ಪ್ರಮಾಣಗಳು ಉದಾಹರಿಸಲ್ಪಟ್ಟಿವೆ. ಒಂಭತ್ತನೆಯ ಅಧ್ಯಾಯದಲ್ಲಿ ದೇವ ಗುರು ಸ್ತುತಿ ಪೂರ್ವಕವಾಗಿ ಗ್ರಂಥವನ್ನು ಮುಗಿಸಿ ಮಂಗಳ ಮಾಡಲ್ಪಟ್ಟಿದೆ. ಎಂಟನೇ ಅಧ್ಯಾಯದಲ್ಲಿ ಉದಾಹೃತ ಪ್ರಮಾಣಗಳಿಂದ ವಾದಿರಾಜ ಋಜುತ್ವವು ಶಾಸ್ತ್ರಸಿದ್ಧ ಪ್ರಮೇಯವೆಂದು ಗೊತ್ತಾಗುತ್ತದೆ. ಆಖ್ಯಾನ, ವಾ.ಗು.ಚ, ಇತ್ಯಾದಿ ಗ್ರಂಥಗಳು ವೇದ ಪುರಾಣ ಮೂಲಉಳ್ಳವೆಂದೂ ಗೊತ್ತಾಗುತ್ತದೆ. ಪ್ರಥಮವಾಗಿ ಅಷ್ಟಮಾಧ್ಯಾಯದಲ್ಲಿ ಋಜುಸ್ವರೂಪವು ಛಾಂದೋಗ್ಯಭಾಷ್ಯ ಮತ್ತು ಮ.ಭಾ.ತಾತ್ಪರ್ಯ ನಿರ್ಣಯ ವಾಕ್ಯಗಳಿಂದ ಪ್ರತಿಪಾದಿಸಲ್ಪಟ್ಟಿದೆ. ಅನಂತರ ವಾಮನ ಪುರಾಣೋಕ್ತ ಕಲ್ಪಾ ದಿ ಚತುರ್ಮುಖ ಪರ್ಯಂತ ನೂರು ಕೊನೆಯ ಋಜುಗಳ ಹೆಸರುಗಳು ಕೊಡಲ್ಪಟ್ಟಿವೆ.

ಅನಂತರ ಸತ್ತ್ವರತ್ನಮಾಲಾ ವಾಕ್ಯದ ಆಧಾರದಿಂದ ಋಜುಗಳ ನಿರ್ದೋಷತ್ವವನ್ನು ತಿಳಿಸಿ ತಾತ್ಪರ್ಯ ನಿರ್ಣಯ ವಾಕ್ಯಾಧಾರದಿಂದ ಲಕ್ಷಾಲಂಕಾರ ವಿರಚಿಸಿರುವ ವಾದಿರಾಜ ಮುನಿಗಳಿಗೆ ಮಧ್ವಸಾಮ್ಯವು ಉಚಿತವೆಂದು ಪ್ರತಿಪಾದಿಸಿದ್ದಾರೆ. ಗಾರುಡ ವಾಕ್ಯದಿಂದ ಋಜುಗಳು ಸಾಮ್ಯವುಳ್ಳವರೆಂದು ಸ್ಪಷ್ಟಪಡಿಸಿದ್ದಾರೆ. ಶ್ರೀ ಹರಿಯೇ

ಗುರುರಾಜರನ್ನು ಆಜ್ಞಾಪಿಸಿ ಅವರ ಪ್ರತಿಭೆಯ ನಿಮಿತ್ತದಿಂದ ಲಕ್ಷಾಲಂಕಾರ ಮಾಡಿಸಿರುವುದರಿಂದ ಲಕ್ಷಾಲಂಕಾರವು ವಾದಿರಾಜ ಋಜುತ್ವ ಜ್ಞಾಪಕವೆಂದು ಶಾಸ್ತ್ರಾನಸಾರಿ ಅನುಮಾನ ತೋರಿಸಿದ್ದಾರೆ.

3. ಬ್ರಹ್ಮವೈವರ್ತ ಪುರಾಣದಲ್ಲಿ ಹೇಳಿದೆ ಎಂದು ಹೇಳಿ ವಾ.ಗು.ಚ. ಕಾರರು ಒಂದೇ ಶ್ಲೋಕ ಉದಾಹರಿಸಿದ್ದಾರೆ. ಆದರೆ ಋಜುತ್ವ ಚಂದ್ರೋದಯದಲೂ ಋಜುತ್ವ ಮಂಡನದಲ್ಲೂ ಮೂರು ಪಂಕ್ತಿ ಉದಾಹೃತವಾಗಿದೆ. "ಬ್ರಹ್ಮವೈವರ್ತ ಪುರಾಣೇ ಸ್ಪಷ್ಟ ವಾಕ್ಯತಃ" ಎಂದು .ವಾ.ಗು.ಚ. "ಬ್ರಹ್ಮ ವೈವರ್ತೇ ಚತುರ್ಮುಖ ವಚನಂ" - ಎಂದು ಇತರ ಎರಡು ಗ್ರಂಥಗಳಲ್ಲಿ, ಹೀಗೆ ಆನುಪೂರ್ವಿಬೇಧದಿಂದ ಉದಾಹರಿಸಲ್ಪಟ್ಟಿರುವುದರಿಂದ ಈ ವಾಕ್ಯವು ಅನಾಗಂತುಕವು, ಅನೇಕ ಕೋಶಗಳಲ್ಲಿ ಇದ್ದುದು, ಕೃತಕವಲ್ಲ ಎಂದು ತಿಳಿದಿರುತ್ತವೆ.

ಈ ವಾಕ್ಯದಲ್ಲಿ "ಸ್ಥಾಪಯಿಷ್ಯತಿಮಚ್ಛಾಸ್ತ್ರಂ" ಎಂಬ ವಾಕ್ಯ ಭಾಗದ ಹಿಂದೆ "ದುರ್ವಾದಿನಃ ಪ್ರಮಥ್ಯ" ಎಂದಿರುವುದರಿಂದ "ಮಚ್ಛಾಸ್ತ್ರಂ"=ವೈಷ್ಣವ ಶಾಸ್ತ್ರವನ್ನು ಮಧ್ವಶಾಸ್ತ್ರ ಪುರಾಣಾದಿಗಳನ್ನು, ಸ್ಥಾಪಯಿಷ್ಯತಿ=ದುರ್ವಾದಿಗಳು ಅದಕ್ಕೆ ದಹನ, ಅಪಾರ್ಥಕರಣ, ಪ್ರಕ್ಷೇಪ- ವಿಕ್ಷೇಪ, ರಾಜಶಾಸನ ನಿರ್ಬಂಧಾದಿಗಳಿಂದ ಅವು ಸಜ್ಜನರಿಂದ ಆಗ್ರಾಹ್ಯವಾಗುವಂತೆ ಮಾಡಿ ಹಾಳು ಮಾಡದಂತೆ ರಕ್ಷಿಸುತ್ತಾರೆ. ಅವುಗಳಲ್ಲಿ ಪ್ರಾಮಾಣ್ಯ ಪ್ರದರ್ಶನ ಮಾಡಿ ಭಕ್ತರಿಂದ ಅವು ಆದರಣೀಯವಾಗುವಂತೆ ಮಾಡುತ್ತಾರೆ ಎಂದರ್ಥ. ಸಂಚಾರದಲ್ಲಿ ವಾದಿ ಜಯದಿಂದ, ಅಲ್ಲಲ್ಲಿ ಅದ್ಭುತ ಕಾರ್ಯಪ್ರದರ್ಶನದಿಂದ, ಯುಕ್ತಿಮಲ್ಲಿಕಾದಿ ರಚನೆಯಿಂದ, ಸೋದೆಯ ರಾಜನ ದ್ವಾರಾ ದುರ್ಜನನಿಗ್ರಹದಿಂದ ಆ ಕಾರ್ಯವು ಗುರುರಾಜರಿಂದ ಮಾಡಲ್ಪಟ್ಟಿದೆ. ವಾ.ಗು.ಚ. VIII 25 ನೇ ಶ್ಲೋಕದಲ್ಲಿ ಹೇಳಿದೆ. – "ಅತೋ ಮಧ್ವಾರ್ಯ ಗುರುಣಾಯಥಾನುಷ್ಠಿತ ಮಂಜಸಾ | ಹಂಸಾನಾಂ ಸಾರ್ವಭೌಮೇನ ಜ್ಞಾನ ಸಾಮ್ರಾಜ್ಯ ಪಾಲನೇ | ತಥೈವ ವಾದಿರಾಜೇನ ಯುವರಾಜಾಯಿತೇನ ತತ್ | ಸಜ್ಜನೋದ್ಧಾರಕಂ ಕರ್ಮಕೃತಮಚ್ಯುತ ತುಷ್ಟಯೇ" ಎಂದು. ಈ ಶಾಸ್ತ್ರ ಸ್ಥಾಪನ ಕಾರ್ಯದಲ್ಲಿ ಇನ್ನೊಬ್ಬ ಯತಿಗಳೂ ಸಹಕಾರಿಯಾಗಿ ಆದರೆ ಆಗಲಿ, ಭೀಮನೂ ಕೂಡ ಏಕಾಕಿಯಾಗಿ ಧರ್ಮ ಸಂಸ್ಥಾಪನವನ್ನು ಮಾಡಲಿಲ್ಲ. ಒಂದು ಕಾರ್ಯಕ್ಕೆ ಒಬ್ಬರೇ ಕಾರಣ ಕರ್ತರು ಎಂಬ ನಿಯಮವಿಲ್ಲ. ಆದ್ದರಿಂದ ಈ ವಾಕ್ಯವು ಬಾಧಿತವಾಗಲಿಲ್ಲ ಎಂದರೆ ಅಪ್ರಮಾಣವಲ್ಲ.

ಮೂರನೆಯ ಪಂಕ್ತಿಯಲ್ಲಿ "ತೇನಮೊಕ್ಷೋಭವೇದ್ಧಿವಃ" ಎಂದು ವಾ.ಗು.ಚ. ಇದೆ. "ತೇನ ಕ್ಷೇವೋಭವೇದ್ಧಿವಃ" ಎಂದು ಇನ್ನೆರಡು ಗ್ರಂಥಗಳ ಪಾಠ. ಹೇಗೆ ಸಿದ್ಧಿ ಉಂಟಾಗಬೇಕೋ ಹಾಗೆ ಶಾಸ್ತ್ರೋಪದೇಶವನ್ನು ಮಾಡುತ್ತಾರೆ ಎಂದರ್ಥ. ಇದಾದರೂ ಋಜುಲಿಂಗವೇ. ಋಜುದೇವತೆಗಳ ಉಪದೇಶವು ಅಮೋಘವು ಎಂದು ಪ್ರಮಿತವಾಗಿದೆ.

4. ಹೀಗೆ ಪಾದ್ಮ, ವಾಮನ ಪುರಾಣಾದಿ ವಾಕ್ಯಗಳು ಈ ಗ್ರಂಥದ ಈ ಎಂಟನೇ ಅಧ್ಯಾಯದಲ್ಲಿ ಉದಾಹೃತವಾಗಿವೆ. ಅವುಗಳೇ ಪೂರ್ವೋಕ್ತ ಇತರ ಅನೇಕ ಗ್ರಂಥಗಳಲ್ಲಿ ಉದಾಹೃತವಾಗಿವೆ. ಜಂಖಂಡಿ ವಾದಿರಾಜಾಚಾರ್ಯ ಪ್ರಭೃತಿಗಳಿಂದ ಪ್ರಮಾಣರೂಪವಾಗಿ ಉಪಯೋಗಿಸಲ್ಪಟ್ಟವೆ.

| |
|---|
| **5.** ಅಷ್ಟಮಾಧ್ಯಾಯದ **12**ನೆಯ ಶ್ಲೋಕವು ಬೃಹನ್ನಾರದೀಯ ವಾಕ್ಯವು. ಅವು ಬಳಿತ್ಥಾ ಸೂಕ್ತವನ್ನು ಲಾತವ್ಯ ಋಜುಗಳ ಅವತಾರತ್ರಯ ಪರವಾಗಿ ವ್ಯಾಖ್ಯಾನ ಮಾಡಿವೆ. ಅಂಡದ ಹೊರಗಿರುವುದು ಮೂಲರೂಪ. ಸತ್ಯಲೋಕದಲ್ಲಿ "ವಿಶ್ವ" ನಾಮಕ ಹರಿಯನ್ನು ಪ್ರವಚನಾದಿಗಳಿಂದ ಸೇವಿಸುವುದು ಪ್ರಥಮ ರೂಪ. ರುಕ್ಮಿಣೀ ಪತ್ರ ಶ್ರೀಕೃಷ್ಣನಿಗೆ ಕೊಟ್ಟದ್ದು ದ್ವಿತೀಯ ರೂಪ. ವಾದಿರಾಜ ನಾಯಕ ತೃತೀಯ ರೂಪ. ಹೀಗೆ ಲಾತವ್ಯರ ಮೂರು ರೂಪ ಬಳಿತಾಸೂಕ್ತದಲ್ಲಿ ಹೊಗಳಿದೆ ಎಂದಿದೆ. ಹದಿನಾಲ್ಕನೆಯ ಶ್ಲೋಕದಲ್ಲಿ ಉದಾಹೃತವಾದ ಋಕ್ಸಂಹಿತಾ ವಾಕ್ಯವು ಬಳಿತ್ಥಾಸೂಕ್ತದ ವಿಸ್ತೃತ ವ್ಯಾಖ್ಯಾನವನ್ನು ಕೊಟ್ಟು; ಲಾತವ್ಯರ ಅವತಾರ ಕ್ರಮವನ್ನು ವರ್ಣಿಸುತ್ತದೆ. ಬ್ರಹ್ಮಾಂಡ ಮತ್ತು ಸ್ಕಾಂದ ಪುರಾಣ ವಚನಗಳನ್ನು ಇವರು ಕೊಟ್ಟಿಲ್ಲ. ಇತರರ ಗ್ರಂಥಗಳಲ್ಲಿ ಅವೂ ಇವೆ. ಅಂತೂ ಏಳು ಪ್ರಮಾಣಗಳು. |
| **6.** ಈ ವಾಕ್ಯಗಳೆಲ್ಲವೂ ಕೃತಕವೆಂದಾಗಲೀ, ಅಪ್ರಮಾಣವೆಂದಾಗಲೀ, ಶಂಕಿಸಬೇಕಾದರೆ ಪ್ರಮಾಣ ವಿರೋಧ ತೋರಿಸಬೇಕು. ಬಾಧಕವಿಲ್ಲದೆ ಅಪ್ರಾಮಾಣ್ಯ ಶಂಕೆಯನ್ನು ಮಾಡುವುದಾದರೆ ಅತಿಪ್ರಸಂಗವು ದುರ್ವಾರವು, ತ.ಪ್ರ. **II 2-26, II 2-29, II 2-32** ಭಾಷ್ಯಸಹಿತ ತ.ಪ್ರ. ನೋಡಬಹುದು. **II 1-12** ಬ್ರ.ಸೂ.ಭಾ. "ನೈವಚಾನ್ಯತ್ರ ಶಂಕ್ಯಂ ಮಾನಮೃತೇ ಕ್ವಚಿದಿತಿ ವಾಮನೇ" \| ಗೀ.ಭಾ **II** "ನಚ ಪ್ರಮಾಣ ಸಿದ್ಧಸ್ಯಾನ್ಯತ್ರಾದೃಷ್ಟ್ಯಾಽಪಹ್ನವೋ ಯುಕ್ತ" \| **XIII** ಗೀ.ಭಾ. "ಅತೋಯುಕ್ತಿಭಿರಪ್ಯೇತದಪಲಾಪೋನಯುಕ್ತ" \| ಹಾಗೆ ಪ್ರಮಾಣವಿರೋಧ ತೋರಿಸುವುದಾದರೆ "ಪೃಷ್ಟೇನ ಪ್ರಥಮಂ ಮಾನಂ ವಕ್ತವ್ಯಂ ವಾದಿನಾಶುಭಂ \| ....ವಾಕ್ಯಮೇವಾಗಮಃ ಶುಭಂ" – ಎಂಬ ಪುಟ **268** ಬೃ.ಭಾ. ಪ್ರಮಾಣಾನುಸಾರ ಶುಭವಾದ ಆಗಮವನ್ನೇ ಉದಾಹರಿಸಬೇಕು. ಅಂಥ ವಿರೋಧಿ ಆಗಮವಿಲ್ಲದೆ ನಿರ್ಮೂಲ ಶಂಕೆ ಮಾಡಬಾರದು. ಈ ಗ್ರಂಥವು ಅಂಥ ಶಂಕೆಗೆ ಅರ್ಹವೇ ಅಲ್ಲ**[ತ.ನಿ.ಟೀಕಾ(Mad.Edn.)ದಲ್ಲೂ ಪುಟ 150 ಪ್ರಾಮಾಣ್ಯಕ್ಕೆ ಸ್ವತಸ್ತ್ವವನ್ನು "ಪ್ರಾಮಾಣ್ಯಂ ಚ ಸ್ವತ ಏವ" ಮುಂತಾದ ವಾಕ್ಯಗಳಿಂದ ನಿರೂಪಿಸಿ, "ದುಷ್ಟಬುದ್ಧೀನಾಮೇವ ಆಪ್ರಾಮಾಣ್ಯಶಂಕಾ' ಎಂದು ಪುಟ 178 ರಲ್ಲಿ ಹೇಳಿದ್ದಾರೆ.]** ಇದರ ಜೊತೆಯಲ್ಲಿ ಸಿಕ್ಕಿರುವ ಇತರ ಗ್ರಂಥಗಳೂ ಕೂಡ ಮುದ್ರಿಸಲ್ಪಡಲಿ. |
| ಒಂಭತ್ತನೆ ಅಧ್ಯಾಯವು ಮುಗಿಯಿತು. |

## ಅಧ್ಯಾಯ 10

### ಷಷ್ಠ ಪ್ರಮಾಣ ಶ್ರೀ ವಿಶ್ವಪ್ರಿಯತೀರ್ಥರ ಜೀವನ ಚರಿತೆಗಳು 1776-1865

**1.**ಈ ಮಹಾತ್ಮರು ಉತ್ಪನ್ನ ಜ್ಞಾನಿಗಳು. ಮೂವತ್ತೇಳು ಮಾಧ್ವ ಗ್ರಂಥಗಳು ಇವರಿಗೆ ಕಂಠಪಾಠವಾಗಿ ವಾಚೊವಿಧೇಯವಾಗಿದ್ದವು. **1776**ರಲ್ಲಿ ಉಡುಪಿಯ ಹತ್ತಿರ ತೌಳವದೇಶದಲ್ಲಿ ಹುಟ್ಟಿದವರು. **1788** ನೆಯ ಇಸವಿಯಲ್ಲಿ ಬಾಲ್ಯದಲ್ಲೇ ಇವರ ಪರಮಗುರು ಶ್ರೀ ವಿಶ್ವಾಧೀಶ್ವರರ ಪ್ರೇರಣೆಯಿಂದ ಇವರ ಗುರುಗಳಾದ ಶ್ರೀ ವಿಶ್ವೇಶತೀರ್ಥರು ಉಪನೀತರಾಗಿದ್ದ ಇವರನ್ನು ಅಂಗೀಕರಿಸಿ ಸಂಸ್ಥಾನಕ್ಕೆ ಕರೆಯಿಸಿ ಆ ತಮ್ಮ ಪರ್ಯಾಯ ವರ್ಷದಲ್ಲೇ ಇವರಿಗೆ ಸನ್ಯಾಸಾಶ್ರಮ ಕೊಟ್ಟು, ಮೇಲ್ಕಂಡ ನಾಮದಿಂದ ಸಂಸ್ಥಾನ ಪೂಜೆಗೆ ಅರ್ಹರನ್ನಾಗಿ

ಮಾಡಿಬಿಟ್ಟರು. ಅನಂತರ ಪರ್ಯಾಯ ಕಳೆದ ಮೇಲೆ ಸ್ವಲ್ಪದರಲ್ಲಿಯೇ ಶ್ರೀ ವಿಶ್ವೇಶತೀರ್ಥರು ಕೊಚ್ಚಿ ದೇಶಕ್ಕೆ ಹೋಗಿ, ಅಲ್ಲಿ ಮಹಾರಾಜರಿಗೆ ವೈಷ್ಣವ ದೀಕ್ಷೆ ಕೊಟ್ಟು ಗುರುರಾಜರ ಮಹಿಮೆ ಬೋಧಿಸಿ ಹಿಂತಿರುಗಿ ಬಂದು ವೃನ್ದಾವನಸ್ಥರಾಗಿ ಬಿಟ್ಟರು. ಅನಂತರ ಸ್ವಲ್ಪ ಕಾಲದಲ್ಲಿಯೇ ಎಂದರೆ 1794ನೆಯ ಇಸವಿಯಲ್ಲಿ ಇವರಿಗೆ ಪಾಠವನ್ನು ಹೇಳಿಕೊಟ್ಟು, ವೃನ್ದಾವನಾಖ್ಯಾನ ಪಠಿಸಲು ಪ್ರೋತ್ಸಾಹಕೊಟ್ಟು, ವಿಶ್ವಾಸ ಮಾಡುತ್ತಿದ್ದ ಪರಮಗುರುಗಳ ಕೂಡ ದೈವಾಧೀನರಾಗಲು ಅದೇ ವರ್ಷ ಶ್ರೀ ವಿಶ್ವಪ್ರಿಯ ತೀರ್ಥರು ಸೋದೆ ಮಠದ ಪೀಠಾರೋಹಣ ಮಾಡಿದರು. ತಾವು ಪಟ್ಟಕ್ಕೆ ಬಂದ ಮೇಲೆ ಮೊದಲು ಸೋದಾಪುರಿಗೆ ಹೋಗಿ ಅನೇಕ ತಿಂಗಳ ಕಾಲ ವೃನ್ದಾವನ ಸೇವೆ ಮಾಡಿ ನಂತರ ದಿಗ್ವಿಜಯಾರ್ಥವಾಗಿ ಸಂಚಾರ ಮಾಡಲು ಅನುಜ್ಞೆ ಕೇಳಲು ಸೇವೆ ಮಾಡಿ ನಮಸ್ಕರಿಸಿದರು. ವೃನ್ದಾವನದ ದೆಸೆಯಿಂದ ಇವರ ತಲೆಯ ಮೇಲೆ ಮಂತ್ರಾಕ್ಷತೆಗಳು ಎಲ್ಲರೂ ಕಾಣುವಂತೆ ಬಿದ್ದವು. ನಂತರ ವೃನ್ದಾವನಾಚಾರ್ಯರು ಎಂಬ ಪ್ರಸಿದ್ಧಿಯನ್ನು ಹೊಂದಿದರು. ಪಾದಚಾರಣ ಕ್ರಮದಲ್ಲಿಯೇ ಸರ್ವತೀರ್ಥ ಕ್ಷೇತ್ರಗಳಿಗೂ ಹೋಗಿ ಪಾಠ ಪ್ರವಚನಗಳಿಂದ ಶಿಷ್ಯರನ್ನು ಆನಂದಪಡಿಸಿದರು. 1804, 1820, 1836, 1852 ಹೀಗೆ ನಾಲ್ಕು ಪರ್ಯಾಯ ಪೂಜೆಗಳನ್ನು ಸಂಭ್ರಮದಿಂದ ಮಾಡಿದರು. ದ್ವಿತೀಯಾದಿ ಪರ್ಯಾಯಗಳಲ್ಲಿ ವೇದವ್ಯಾಸರನ್ನು ಕೃಷ್ಣನ ಜೊತೆಗಿಟ್ಟು ಪೂಜೆ ನಡೆಸಿದರು. 1865 ರಲ್ಲಿ ವೃನ್ದಾವನಸ್ಥರಾದರು. ಕೊಚ್ಚಿ ರಾಜರು, ಅವರ ಅಳಿಯ ಮಾಟರಾಜರು ಮತ್ತು ಮಹಿಸೂರು ರಾಜರು ಸುವರ್ಣಾದಿ ದಾನಗಳಿಂದ ಇವರನ್ನು ತುಂಬ ಪೂಜಿಸಿದರು. ಮುಮ್ಮಡಿ ಕೃಷ್ಣರಾಜ ಒಡೆಯರು ಇವರ ಮಾತಿನಂತೆ ಕೃಷ್ಣ ಮಠಕ್ಕೆ ಭೂದಾನಮಾಡಿದ್ದಾರೆ. ವೃನ್ದಾವನಾಖ್ಯಾನದಲ್ಲಿ ಹೇಳಲ್ಪಟ್ಟಿರುವ ರಾಜಸನ್ಮಾನ, ಪಲ್ಲಕ್ಕಿ ಉತ್ಸವ, ಇದೇ ಮುಂತಾದ ಸರ್ವ ಮರ್ಯಾದೆಯನ್ನೂ ಈ ರಾಜರುಗಳ ದೇಶದಲ್ಲಿ ಹೊಂದಿ ವೃನ್ದಾವನಾಖ್ಯಾನವು ಸತ್ಯ ಫಲ ಸೂಚಕವೆಂದು ತೋರಿಸಿ ತಮ್ಮ ಜೀವನದಿಂದಲೇ ಅದರ ಪ್ರಾಮಾಣ್ಯವನ್ನು ಸ್ಥಾಪಿಸಿದವರಿವರು. ಇವರ ಕಾಲದಲ್ಲಿ ಇವರಿಗೆ ಸದೃಶರಾದ ಪ್ರವಚನ ಕರ್ತರು ಬೇರೊಬ್ಬರಿರಲಿಲ್ಲವೆಂದು ನಾನು 1930ರಲ್ಲಿಯೇ ನಮ್ಮ ಗುರುಮುಖದಿಂದ (ದ್ವೈತ ವೇದಾಂತ ವಿಶಾರದ ಪೆರಿಕೊಳಂ ಶ್ರೀ ರಾಮಚಂದ್ರಾಚಾರ್ಯರಿಂದ) ಕೇಳಿದ್ದೆನು. ಇವರ ಚರಿತ್ರೆಯು ದಕ್ಷಿಣ ದೇಶದ ವೇದಗರ್ಭ ಲಕ್ಷ್ಮೀನೃಸಿಂಹಾರ್ಯ ಸುತ ಸೇತುಮಾಧವಸೂರಿ ವಿರಚಿತ ವಿಶ್ವಪ್ರಿಯ (ಲೀಲಾ ವಿಲಾಸ ನಾಮಕ ಪಂಚಾಧ್ಯಾಯಾತ್ಮಕ ಗ್ರಂಥದಲ್ಲಿ ಸುಮಾರು 1865ರಲ್ಲಿ ವಿರಚಿತವಾಗಿ ಅಮುದ್ರಿತ ದೆಶೆಯಲ್ಲಿ ಶ್ರೀ ಶ್ರೀಗಳವರಲ್ಲಿ ದೊರಕುತ್ತದೆ. ಉತ್ತರಾದಿ ಮಠದ ಪಂಡಿತ ಪ್ರವರರು ಸೂರಿಗಳು, ತಮ್ಮ ಗ್ರಂಥದ III 22-25 ಶ್ಲೋಕಗಳಲ್ಲಿ ತಮ್ಮ ಸ್ವಂತ ಅನುಭವವನ್ನು ಹೇಳಿ ಕೊಂಡಿದ್ದಾರೆ. "ಕದಾಚಿದ್ಗುರುರೇಕತ್ರ ಸಮಾಗಮ್ಯ ನಿಜೇಷ್ಟದಂ । ಸುಂದರಂ ಸ್ಥಾಪಯಾಮಾಸ ಹನೂಮಂತಮರಿಂದಮಂ ॥22॥ [ಸೇಲಂ ಜಿಲ್ಲೆಯ ಪೊನ್ನಪ್ರಾಂಡಿಗ್ರಾಮದಲ್ಲಿ ಶ್ರೀ ವೃನ್ದಾವನಾಚಾರ್ಯರು ಹನುಮಂತನ ಪ್ರತಿಷ್ಠೆ ಮಾಡಿದ್ದಾರೆ. ಅಲ್ಲಿಯೇ ಪಂಚ ವೃನ್ದಾವನದ ಪ್ರತಿಷ್ಟೆಯೂ ಆಗಿದೆ. ಈಚೆಗೆ ಸೂಚನೆಯಾಗಿ ಅಲ್ಲಿಯೇ ಶ್ರೀವೃನ್ದಾವನಾಚಾರ್ಯರ ಮೃತ್ತಿಕಾ ವೃನ್ದಾವನವೂ ಸ್ಥಾಪಿತವಾಗಿದೆ.] ಸೂರೇರ್ಬಾಲಂ ಚೋಲ ದೇಶವಾಸಂ ಸಪರಿವಾರಕಂ ದಾಸಂ ಕೃತ್ವಾಚರನ್ರೇಜೇ ಭಕ್ತಷ್ಟೋಽರಿಷ್ಟಹಾಗುರುಃ

॥23॥ ದಯಾಲುರ್ವಾದಿರಾಜಸ್ಯ ಪೌರಟಂ ಪಾದುಕಾದ್ವಯಂ ಶಿರಸ್ಯಾಧಾಯ ಮೇ ತತ್ವಂ ರಹಸ್ಯುಪದಿದೇಶಹಿ ॥24॥ ಶುದ್ಧೀಕೃತ್ಯ ಸದಾಸಂಮಾಂ ಯೋಽಕರೋತ್ಸುಧಿಯಂ ಹೃದಾ । ನಕದಾಪ್ಯಸ್ಯೋಪಕಾರಂ ವಿಸ್ಮರೇಯ ಮನನ್ಯಧೀಃ ॥25॥" (ಅರ್ಥ: ಒಂದು ಕಾಲದಲ್ಲಿ ಗುರುಗಳು ಒಂದೂರಿಗೆ ಬಂದು ಅಲ್ಲಿ ಸುಂದರನೂ ಅಭೀಷ್ಟಪ್ರದನೂ ಆದ ಹನುಮಂತನನ್ನು ಸ್ಥಾಪಿಸಿದರು. ಚೋಲದೇಶದಲ್ಲಿದ್ದ ಸೂರಿಪುತ್ರನಾದ ನನ್ನನ್ನು ಶಿಷ್ಯ ಪರಿವಾರದೊಂದಿಗೆ ಪರಿಗ್ರಹಿಸಿ, ಉಪದೇಶಿಸಿ ಅನುಗ್ರಹಿಸಿದರು. ವಾದಿರಾಜರ ಸುವರ್ಣ ಪಾದುಕೆಯನ್ನು ತಲೆಯ ಮೇಲಿಟ್ಟುಕೊಂಡು ನನಗೆ ತತ್ವವನ್ನು ರಹಸದಲ್ಲಿ ಬೋಧಿಸಿದರು. ನಮ್ಮನ್ನೆಲ್ಲಾ ಶುದ್ಧಮನಸ್ಕರನ್ನಾಗಿ ಮಾಡಿ ಜ್ಞಾನವನ್ನು ಕೊಟ್ಟ ಇವರ ಉಪಕಾರವನ್ನು ನಾನು ಯಾವಾಗಲೂ ಮರೆಯುವುದಿಲ್ಲ.)

ಮೇಲ್ಕಂಡ ಕಥೆಯು ಕೊಚ್ಚಿ ರಂಗಪ್ಪಾಚಾರ್ಯರುಮಾಡಿದ ಗ್ರಂಥದಲ್ಲೂ ಇದೆ. IV 15 -"ದೂರ ದೇಶಗತ ಭಕ್ತ ಜನೌಘಾನ್ ಉದ್ಧರನ್ ಹರಿಕಥಾ ಪ್ರಸಂಗತಃ । ಪೇಟಿಕಾಂ ಶಿರಸಿ ಧಾರಯನ್ ಕುಷೋಪ್ಯಾಯಯೌ ಸ ಹರಿಭಕ್ತಿ ತುಂದಿಲಃ ॥ ತತ್ರ ತತ್ರ ಸುಜನಾನನುಗೃಹ್ಣನ್ ಉತ್ತರಾ0 ಗುರುರಗಾತ್ಸಹ್ಯಜಾಂ । ವೇದಗರ್ಭಕುಲ ಮಣ್ಡನ ಭೂತಃ ಶಿಷ್ಯ ಸಂಘಯುತ ಏತ್ಯನನಾಮ ॥16॥ ಸೇತುಮಾಧವ ಇತೀಡ್ಯ ಸುನಾಮಾ ಮೌನಿರಾಜಮನುವರ್ಣಿತ ತತ್ವಂ । ದೇವವರ್ಯಸದೃಶಂ ಸವಿದಿತ್ವ ಮಧ್ವಶಾಸ್ತ್ರಮಖಿಲಂ ಪ್ರಪಪಾಠ ॥17॥ ತತ್ರ ನಿರ್ಮಲತಮೇ ಗುರುವರ್ಯೋ ರಾಮದೂತಮಥ ಭಾವಿಸಮೀರಂ । ಗ್ರಾಮವರ್ಯೇ ಉಪವೇಶ್ಯ ಸಪರ್ಯಾವೃತ್ತಿಮತ್ರಸಜನ್ಯೈರಕಾರಯತ್ ॥18॥" ಎಂದಿದೆ.

ಇಂತಹ ಪ್ರಚಂಡ ಪಂಡಿತಸೂರಿಗಳು ಮತ್ತೂ ಹೇಳುತ್ತಾರೆ: IV 16 "ಕಲಿಂತು ದೂರತಃ ಕೃತ್ವಾಗುರುರಾಲಸ್ಯವರ್ಜಿತಃ । ಸಪ್ತತ್ರಿಂಶ ಮೂಲ ಕೋಶೇಯತ್ತು ಪೃಚ್ಛತಿತದ್ವದೇತ್ ॥ ಯದ್ವೃನ್ದಾವನಮಾವಿಶ್ಯವಾದಿರಾಜೋಽವದದ್ವಿಜೇ । ನಿಧೇಸ್ತುಲ್ಯಂ ತದಾಖ್ಯಾನಮುದ್ಧೃತ್ಯ ಸುಖದೋಹಿನಃ ॥17॥ ನಿತ್ಯಂ ಸುಧಾದಿ ಗ್ರಂಥಾನಾಂ ಪ್ರವಕ್ತೃಷ್ವದ್ಯಸೂರಿಷು । ಮೃಗ್ಯಮಾನೇಷ್ವನಂತಯಾಂ ಕಃ ಸಮೋಸ್ಯಕ್ವಚಾಧಿಕಃ ॥" ಪುನಃ V 16: 'ತಪೋ ವಿದ್ಯಾದಿ ಮತ್ಸ್ವದ್ವ ಲೋಕೇಸ್ಯ ಸದೃಶೋ ಗುರುಃ । ನಾಸ್ತೀತ್ಯೇವಂ ಹರೇಃ ಪಾದಂ ಸ್ಪೃಶೇಯಂ ವಿದ್ಧಿ ಹೇಮತೇ ॥16॥ ಅತ್ರೋಕ್ತಾಸ್ತು ಕಥಾಃ ಸರ್ವಾಃ ತತ್ರ ತತ್ರ ನಿವಾಸಿಭಿಃ । ದೃಷ್ಟಾಃ ಶ್ರುತಾಶ್ಚ ಸಂದೇಹಂ ಮಾಕುರುಷ್ವ ಮಹಾಮತೇ ॥18॥" ಎಂದು ಹೇಳಿದ್ದಾರೆ. ಪುನಃ II 35 "ಸರ್ವಜ್ಞ ವಂಶ ಜಾತೇಷು ಕವಿಃ ಶ್ರೇಷ್ಟಃ ಸ್ವಯಂ ಗುರು॥ ಇದಾನೀಂ ವರ್ತಮಾನೇಷು ರೇಜೇತಾರಾಧಿಪೋ ಯಥಾ॥" (ಅರ್ಥ: ಕಲಿಯನ್ನು ದೂರವಾಡಿ ಗುರುಗಳು ಆಲಸ್ಯ ಬಿಟ್ಟು 37 ಮೂಲಗ್ರಂಥಗಳಲ್ಲಿ ಯಾವುದನ್ನು ಕೇಳಿದರೆ ಅದನ್ನು ಹೇಳುತ್ತಿದ್ದರು. ವೃನ್ದಾವನವನ್ನು ಪ್ರವೇಶ ಮಾಡಿದ ಮೇಲೆ ವಾದಿರಾಜರು ದ್ವಿಜನಿಗೋಸ್ಕರ ಸ್ವಪ್ನದಲ್ಲಿ ಏನನ್ನು ಹೇಳಿದರೋ [ಆಖ್ಯಾನವನ್ನು ಉಪದೇಶ ಮಾಡಿ ಅನುಪೂರ್ವಿಯನ್ನು ಸರಿಯಾಗಿ ಬೋಧಿಸುವವರು ಮಾಂಡವ್ಯರು. ಅದಕ್ಕೆ ಹರಿಮಹಿಮೆ ಗುರುಮಹಿಮಯು ತಿಳಿಯುವಂತೆ ಪ್ರಕರಣಭೇದ ತಿಳಿದು ವ್ಯಾಖ್ಯಾನ ಮಾಡಿ ಅರ್ಥ ಬೋಧಿಸುವವರು

ಶಾಂಡಿಲ್ಯರು, ಅನಂತರ ಶಿಷ್ಯನ ಉಪಾಸನೆಗೆ ಅದರಲ್ಲಿರುವ ಯಾವ ಮಂತ್ರದಿಂದ ಯಾವ ಬಿಂಬರೂಪಿ ಭಗವಂತನನ್ನು ಹೇಗೆ ಸ್ತುತಿಸಬೇಕು ಎಂಬುದನ್ನು ತಿಳಿದು ಅವರವರ ಸಂಬಂಧಿ ಶ್ಲೋಕವನ್ನು ಆರಿಸಿಕೊಟ್ಟು ಬೋಧಿಸುವವರು, ಉದ್ಧಾರಕರು ಕೌಂಡಿನ್ಯ ನಾಮಕರು, ಇದರ ಮೇಲೆ ಶಿಷ್ಯನ ಅಭಿಮಾನ ಮಾಡಿ, ಪೂರ್ವೋಕ್ತ ಸಾಧನೆಗಳನ್ನು ಮಾಡಿಸಿ ಆಖ್ಯಾನದಿಂದ ಸಿದ್ಧಿಯಾಗುವಂತೆ ಅನುಗ್ರಹಿಸಿ ಸ್ವರೂಪ ಜ್ಞಾನದಾತೃಗಳು ಸ್ವರೂಪೋದ್ಧಾರಕರು. ಹೀಗೆ ನಮ್ಮನ್ನು ಉದ್ಧಾರಮಾಡಿದ್ದಾರೆಂದು ಸೂರಿಗಳ ಭಾವ] ಅಂತಹ ನಿಧಿಗೆ ಸದೃಶವಾದ ಆಖ್ಯಾನವನ್ನು ಉದ್ಧಾರ ಮಾಡಿ ನಮಗೆ ಸುಖಪ್ರದರಾದರು. ನಿತ್ಯವೂ ಸುಧಾದಿ ಪ್ರವಚನಶೀಲ ಜ್ಞಾನಿಗಳ ಮಧ್ಯದಲ್ಲಿ ಈಗ ಎಲ್ಲಾ ಭೂಮಿಯಲ್ಲೂ ಹುಡುಕಲಾಗಿ ಇವರಿಗೆ ಸಮರಾರು? ಅಧಿಕರೆಲ್ಲಿ ತಪೋ ವಿದ್ಯಾದಿ ಸಂಪನ್ನರಲ್ಲಿ ಈಗ ಇವರಿಗೆ ಸದೃಶರು ಇಲ್ಲವೆಂದು ನಾನು ಹರಿಪಾದವನ್ನು ಮುಟ್ಟಿ ಹೇಳುತ್ತೇನೆ...” “ಇಲ್ಲಿ ಹೇಳಲ್ಪಟ್ಟ ಕಥೆಗಳು ಅಲ್ಲಲ್ಲಿನ ಜನರಿಂದ ದೃಷ್ಟವಾದವು, ಶ್ರುತವೂ ಆದವು. ಸಂದೇಹ ಪಡಕೂಡದು. ಸರ್ವಜ್ಞ ವಂಶದಲ್ಲಿ ಹುಟ್ಟಿದವರಲ್ಲಿ ಇವರು ಕವಿ ಶ್ರೇಷ್ಠರು, ಗುರುಗಳು, ನಕ್ಷತ್ರ ಮಧ್ಯೆ ಚಂದ್ರನಂತೆ ವಿರಾಜಿಸುತ್ತಿದ್ದರು.”)

2. ಹೀಗೆಯೇ ವ್ಯಾಸರಾಜಮಠದ ಕೊಚ್ಚಿ ರಂಗಪ್ಪಾಚಾರ್ಯರೆಂಬ, ಮಹಾರಾಜರ ಆಸ್ಥಾನ ವಿದ್ವಾಂಸರೂ ಕೂಡ ತಮ್ಮ ವಿಶ್ವಪ್ರಿಯ ಲೀಲಾವಿಲಾಸದಲ್ಲಿ (ಸುಮಾರು 1865 ಅಥವಾ 1867 ರಲ್ಲಿ ಬರೆದದ್ದು) ಹೇಳಿದ್ದಾರೆ:I 23 ತೀರ್ಥಕ್ಷೇತ್ರಾಧಿಕಂ ಗಂತುಂ ಗುರುರಾಜಸ್ಯಸನ್ನಿಧೌ| ಪ್ರಣಮತ್ಯಸ್ಯ ಶಿರಸಿಪೇತುರ್ಮಂತ್ರಾಕ್ಷತಾಕಿಲ॥ II 28 ಜಗಾಮ ತೀರ್ಥಯಾತ್ರಾಯೈ ಮಧ್ಯೇ ಮಾರ್ಗಂ ಚ ಹಂಸರಾಟ್ | ಸತ್ಯಧರ್ಮ ಇತಿಖ್ಯಾತೋ ವಾದಿರಾಡ್ಭಕ್ತಿಪೂರಿತಃ| ಗುರುಂ ಸ್ವಮಠಮಾನಾಯ್ಯ ವ್ಯಾಸಪೂಜಾಮಕಾರಯತ್ ॥ III 19 ಆಖ್ಯಾನ ಪ್ರೋಕ್ತಸಲ್ಲಿಂಗೈಃ ವ್ಯಾಸಾನಯನ ಪೂರ್ವಕೈಃ| ನಿರನ್ನತ್ವವ್ರತ ಮುಖ್ಯೈರಯಂ ವೃನ್ದಾವನಾರ್ಯಕಃ | ಇತಿ ವ್ಯಜಾನನ್ನಾಮೋದೋ ಮೃಗನಾಭೇರವಾರಕಃ ॥ IV 1 ವಾಸವೀಸುತ ಸಮರ್ಪಿತಂ ಪರಂ ಕಲ್ಕಿದೋರಮುಖಮತ್ರಕಶ್ಚನ | ಪ್ರೇಷಿತಂ ಗುರುವರೇಣ ದೂಷಯನ್ ಪ್ರಾಕ್ಷಿಪದ್ಭುವಿಯತಿಃ ಪ್ರಕೋಪಿತಃ ॥1॥ ತೇನ ದೋಷ ನಿವಹೇನ ಚಕ್ಷುತಃಸ್ಥಾನಮತ್ಯಜದಮುಷ್ಯ ವಿಶ್ವಕಃ | ಸ್ವಾಪ್ನಪದ್ಯ ಗುರುರಾಜ ವಾಕ್ಯಸನ್ನಾನತಾಪಿಕಿಲಸಿದ್ಧತಾಮಗಾತ್ ॥2॥ ವಾದಿರಾಜ ಗುರುಭಕ್ತಜನೌಘಃ ಸಂಬಭೂವಮಿಳಿತೋ ಗುರುಪಾರ್ಶ್ವೇ| ಮೋದತೀರ್ಥ ಗುರುಶಾಸ್ತ್ರಜಸಾರಂ ಪಾತುಮೇವ ಗುರುವರ್ಯಮುಖಾಬ್ಜಾತ್ ॥12॥ ಶಿಷ್ಯಭೂಪತಿವರಾರ್ಥ ನಯಾತದ್ದೇಶಗೇ ಸಮವಸಚ್ಚಚಿತ್ಪುರೇ॥24॥ ತತ್ರ ಕೇಪಿ ಗುರುವರ್ಯ ಸಕಾಶಂ ಮೋದತೀರ್ಥ ಗುರುಶಾಸ್ತ್ರಜಸಾರಂ| ಶ್ರೋತು ಮಾಯಯುರಹಂ ಚತದಾsಗಾಂ ಪೂರ್ವಪುಣ್ಯವಿಭವೋ ಹಿಮಮಾಸೀತ್॥25॥ V 32 ಏವಂ ವಿಧಾನಿ ಚರಿತಾನಿ ಗುರೂತ್ತಮಸ್ಯ ದೃಷ್ಟಾನಿಚಾಪ್ತ ಮುಖತೋಪಿ ಮಯಾಶೃತಾನಿ V 35 ಇಂದ್ರತ್ವಂ ತವಮಸ್ಕರಿಪ್ರವರಭೋ ಯುಕ್ತಂ ತು ಮನ್ಯಾಮಹೇ ಇತ್ಯಾದಿ [ಈ ಗ್ರಂಥವು ಪ್ರಾಯೇಣ 1865-67ರಲ್ಲಿ ಬರೆಯಲ್ಪಟ್ಟು 1889ನೆಯ ವರ್ಷದಲ್ಲಿ ಮುದ್ರಿತವೂ ಆಯಿತು. ಗ್ರಂಥಕರ್ತರ ಪ್ರಪೌತ್ರರಾದ ಬಿ. ಎನ್. ಕೆ. ಶರ್ಮ ಇವರಲ್ಲಿ ಮುಂಬಯಿ ಪುರಿಯಲ್ಲಿ ಪುಸ್ತಕ ಪ್ರತಿಗಳು ಸಿಗುತ್ತವೆ ಎಂದು ಶ್ರವಣ

ಮಾಡಿದ್ದೇನೆ. ಈ ಕೊಚ್ಚಿ ರಂಗಪ್ಪಾಚಾರ್ಯರೇ 'ವಿಶ್ವಪ್ರಿಯತೀರ್ಥ ಗುರ್ವಷ್ಟಕ' ಎಂಬ ಸ್ತೋತ್ರವನ್ನು ರಚಿಸಿದ್ದಾರೆ, ಅವರ ವಾದಿರಾಜ ಗುರ್ವಷ್ಟಕವೂ 'ಶ್ರೀಲಾತವ್ಯಪದಾಧಿರೂಡವಿಬುಧಾಧೀಶಃ" ಎಂದು ಆರಬ್ಧವಾಗಿ ಪ್ರಸಿದ್ಧವಾಗಿದೆ. ಒಂಭತ್ತು ಶ್ಲೋಕದ ಸಂಸ್ಕೃತ ಸ್ತುತಿ. ಎಂಟನೆಯ ಶ್ಲೋಕದಲ್ಲಿ ಸ್ವಾಪ್ನವೃನ್ದಾವನಾಖ್ಯಾನದ ರಚನೆ ಗುರುರಾಜರಿಂದಲೇ ಆಗಿದೆ ಎಂದು ಹೇಳಿದ್ದಾರೆ. (ಅರ್ಥ - ತೀರ್ಥಕ್ಷೇತ್ರಾದಿಗಳಿಗೆ ಹೋಗಲು ಗುರುರಾಜರ ಸನ್ನಿಧಿಯಲ್ಲಿ ನಮಸ್ಕರಿಸಲಾಗಿ ಆಗ ಅವರ ತಲೆಯ ಮೇಲೆ ಮಂತ್ರಾಕ್ಷತೆಗಳು ಬಿದ್ದವಷ್ಟೇ. (I 23) ತೀರ್ಥಯಾತ್ರೆಗೆ ಹೋದರು. ಮಾರ್ಗಮಧ್ಯದಲ್ಲಿ ವಾದಿರಾಜರಲ್ಲಿ ಭಕ್ತಿಪೂರ್ಣರಾದ ಯತಿಶ್ರೇಷ್ಠರಾದ ಸತ್ಯಧರ್ಮರು ಗುರುಗಳನ್ನು ತಮ್ಮ ಮಠಕ್ಕೆ ಕರೆಯಿಸಿ ವ್ಯಾಸಪೂಜೆಯನ್ನು ಮಾಡಿಸಿದರು. (II 28), ಆಖ್ಯಾನದಲ್ಲಿ ಹೇಳಲ್ಪಟ್ಟ ವ್ಯಾಸ ಸಾಲಿಗ್ರಾಮ ತಂದಿದ್ದೇ ಮುಂತಾದ ಉತ್ತಮ ಲಿಂಗಗಳಿಂದಲೂ, ಅನಶನವ್ರತವೇ ಮೊದಲಾದ ಉತ್ತಮ ಕಾರ್ಯಗಳಿಂದಲೂ, ಇವರೇ ವೃನ್ದಾವನಾಖ್ಯಾನದ ವಿಪ್ರರು ಎಂದ ಜನರು ತಿಳಿದುಬಿಟ್ಟರು. ಕಸ್ತೂರಿಯ ಗಂಧವನ್ನು ಮುಚ್ಚಿಡಲಾಗುವುದಿಲ್ಲ. (III 19) ವೇದವ್ಯಾಸರಿಗೆ ಸಮರ್ಪಿತವಾದ ಕಲ್ಕಿಸೂತ್ರ ಮುಂತಾದ ಪ್ರಸಾದವನ್ನು ಅಲ್ಲಿ ಒಬ್ಬ ಯತಿಯು ವೃನ್ದಾವನಾಚಾರ್ಯರಿಂದ ಕಳಿಸಲ್ಪಟ್ಟದ್ದಾಗ್ಯೂ ಕೋಪದಿಂದ ಭೂಮಿಯ ಮೇಲೆ ಒಗೆದರು. ಆ ಪಾಪ ಬಾಹುಳ್ಯದಿಂದ 'ವಿಶ್ವ' ಸ್ವಾಮಿಯು ಅವರ ಕಣ್ಣಿನಿಂದ ಹೊರಗಾದನು. ಅವರು ಕುರುಡರಾದರು. ಆ ಕಾರ್ಯದಿಂದ ಸ್ವಾಪ್ನ ವೃನ್ದಾವನಾಖ್ಯಾನದಲ್ಲಿ ಹೇಳಲ್ಪಟ್ಟ ಕಾರ್ಯವು ಆದಂತಾಗಿ ಆ ಗ್ರಂಥದ ಪ್ರಾಮಾಣ್ಯ ಸಿದ್ಧಿಯೂ ಆಯಿತು. (IV 1-2) ಕೊಚ್ಚಿ ರಾಜಧಾನಿಯಲ್ಲಿ ವಾದಿರಾಜ ಗುರುಭಕ್ತರ ಸಮೂಹವು ಗುರುವರ್ಯರ ಮುಖದಿಂದ ಸಚ್ಛಾಸ್ತ್ರಶ್ರವಣಮಾಡಲು ಮಿಳಿತವಾಯಿತು. ಶಿಷ್ಯರಾದ ಮಹಾರಾಜರ ಪ್ರಾರ್ಥನೆಯಿಂದ ಕೆಲವು ದಿನ ಶ್ರೀ ವಿಶ್ವಪ್ರಿಯತೀರ್ಥರು ಚಿತ್ತುರದಲ್ಲಿ ವಾಸಮಾಡಿದರು. ಅಲ್ಲಿಯೂ ಅವರ ಉಪನ್ಯಾಸವನ್ನು ಕೇಳಲು ಜನರು ಉತ್ಸಾಹದಿಂದ ಬಂದು ಸೇರಿದರು. ಆಗ ನನ್ನ ಜನ್ಮಾಂತರ ಪುಣ್ಯ ಪರಿಪಾಕದಿಂದ ನಾನೂ ಅಲ್ಲಿಗೆ ಬಂದೆ (IV 2-12-25). ಈ ರೀತಿಯ ಸ್ವಾಮಿಗಳ ಚರಿತ್ರೆಗಳು ನನ್ನಿಂದ ನೋಡಲ್ಪಟ್ಟವು. "ಹೇ ಯತಿಶ್ರೇಷ್ಠನೇ! ನಿನಗೆ ಹೇಳಲ್ಪಟ್ಟಿರುವ ಇಂದ್ರತ್ವವು ಯುಕ್ತವೆಂದು ತಿಳಿದಿರುತ್ತೇವೆ. V 32-35)" .

ಹೀಗೆ ಮೇಲ್ಕಂಡ ಎರಡು ಗ್ರಂಥಗಳೂ ಪರಮಪ್ರಾಮಾಣಿಕಗಳಾಗಿ ವಿರಾಜಿಸುತ್ತವೆ. ಇವು ಗುರುರಾಜ ಋಜುತ್ವ ವಿಷಯದಲ್ಲೂ, ಆಖ್ಯಾನ ಪ್ರಾಮಾಣ್ಯ ವಿಷಯದಲ್ಲಿಯೂ, ಶ್ರೀ ವಿಶ್ವಪ್ರಿಯತೀರ್ಥರ ಮಹಿಮಾ ವಿಷಯದಲ್ಲಿಯೂ ನಿಶ್ಚಲ ಪ್ರಮಾಣಗಳು. ಹೀಗೆ ಶ್ರೀಮುಷ್ಣಾಚಾರ್ಯರಿಂದ ಮಾಡ ಟ್ಟ ಸ್ವಾಪ್ನ ವೃನ್ದಾವನಾಖ್ಯಾನದ ಹದಿನಾರು ಅಧ್ಯಾಯಗಳ ವ್ಯಾಖ್ಯಾನವೂ (1865-1870) ಗುರುಹೃದಯಾನುಸಾರಿಯಾಗಿದೆ. ಏಕೆಂದರೆ ಸಾಕ್ಷಾದ್ಗುರುಮುಖದಿಂದ ಪ್ರಕರಣ ಭೇದ ತಾತ್ಪರ್ಯಗಳನ್ನು ತಿಳಿದುಕೊಂಡು ಅದು ರಚಿತವಾದದ್ದು. ಶ್ರೀರಘುಪ್ರವೀರ ಯತಿಗಳು ಭೀಮನಕಟ್ಟೆ ಮಠಾಧಿಪತಿಗಳು, ಶ್ರೀ ವಿಶ್ವಪ್ರಿಯ ತೀರ್ಥರ ಪುತ್ರರಂತೆ ಪಾಲಿಸಲ್ಪಟ್ಟ ಶಿಷ್ಯರು, ಪ್ರಗಲ್ಭ ಪಂಡಿತ ಶ್ರೇಷ್ಠರು. ತಮ್ಮ ಮರಣ ಕಾಲದಲ್ಲಿ ವೃನ್ದಾವನಾಚಾರ್ಯರು ಜನರಿಂದ ನಮಗೆ "ಇನ್ನಾರು ಗತಿ" ಎಂದು ಕೇಳಲ್ಪಟ್ಟಾಗ "ನಿಮಗೆ ವಿಶ್ವಾಸವಿದ್ದರೆ ಶ್ರೀರಘುಪ್ರವೀರರುನ ಮ್ಮಂತೆ ಸಂಶಯ

ಪರಿಹಾರಕರು" ಎಂದು ಹೇಳಿದರಂತೆ. ಅಂತಹ ಗುರು ಪ್ರಿಯರಿಂದ ಆಖ್ಯಾನ ಗ್ರಂಥದ 'ಪ್ರಾಮಾಣ್ಯಬೋಧಿನಿಯು' ಜಯಸಂವತ್ಸರದಲ್ಲಿ (1834ರಲ್ಲಿ) ಸಿದ್ಧವಾಗಿ ಆಖ್ಯಾನ ಪ್ರಾಮಾಣ್ಯವನ್ನು ಸಾಧಿಸುವುದಲ್ಲದೆ ಮಧ್ಯೆ ಮಧ್ಯೆ ಶ್ರೀವಿಶ್ವಪ್ರಿಯತೀರ್ಥರ ಮಹಿಮೆಯನ್ನು ವರ್ಣಿಸುತ್ತದೆ. ಇನ್ನೂ ಅಮುದ್ರಿತವಾಗಿದೆ. ಕೊಚ್ಚಿ ರಂಗಪ್ಪಾಚಾರ್ಯರ ಗುರ್ವಷ್ಟಕ ಗ್ರಂಥಗಳೂ ಹಾಗೆಯೇ.

3. ಇಂತಹ ಬಹುವಿಧ ವರ್ಣಿತ ಮಾಹಾತ್ಮ್ಯೋತರಾದ ವೃನ್ದಾವನಾಚಾರ್ಯರ ಜೀವನವೇ ವಾದಿರಾಜರ ಋಜುತ್ವಕ್ಕೆ ಸಾಧಕ ಪ್ರಮಾಣವೆಂದು ಹೇಳಬಹುದು. ಏಕೆಂದರೆ ಅವರು ಗುರುರಾಜರ ಋಜುತ್ವ ಪ್ರಚಾರವನ್ನೇ ಸ್ವಜೀವನದ ಪರಮೋದ್ದೇಶ್ಯವನ್ನಾಗಿ ಮಾಡಿಕೊಂಡಿದ್ದರು. ಅವರು ಪ್ರೇಕ್ಷಾವಂತರು. ಭ್ರಾಂತಚಿತ್ತರಲ್ಲ. ರಾಜತ್ರಯಮಾನಿತರು. ಅದೂ ಸುವರ್ಣವೃಷ್ಟಿಯಿಂದ ಆದರಿಸಲ್ಪಟ್ಟವರುಯ ಮೈಸೂರಿನ ಕೃಷ್ಣರಾಜ ಭೂಪತಿಯು ಕೊಟ್ಟ ನೀಲರತ್ನದ ಪಚ್ಚೆಮಂಟಪವು ಅನರ್ಘವು - ಬೆಲೆಕಟ್ಟುವುದಕ್ಕೆ ಸಾಧ್ಯವಿಲ್ಲ. ಅದು ಅದ್ಯಾಪಿ ಸೋದಾ ಮಠದಲ್ಲಿ ಶೋಭಿಸುತ್ತಿದೆ. ಪಂಡಿತ ಪ್ರವರರ ಸಂಗಡ ಕಾಲುನಡಿಗೆಯಿಂದಲೇ ಯಾತ್ರೆಯನ್ನು ಮಾಡುತ್ತಾ, ಮಾಧ್ವ ಮೂವತ್ತೇಳು ಗ್ರಂಥಗಳನ್ನೂ, ಟೀಕಾಗಳನ್ನೂ ಅಲ್ಲಲ್ಲಿ ಗ್ರಂಥವಿಲ್ಲದೆಯೇ ಅನುವಾದ ಮಾಡುತ್ತಾ, ತತ್ವಪ್ರಕಾಶಿಕಾ ಸರ್ವಸ್ವವನ್ನು ಪುಸ್ತಕವಿಲ್ಲದೆ ಕೊಚ್ಚಿ ರಾಜನ ಮಂತ್ರಿ ಶ್ರೇಷ್ಠನಿಗೆ ಯಾವ ಮುಖ್ಯ ಪ್ರಮೇಯವನ್ನೂ ಬಿಡದೆ ಉಪದೇಶಮಾಡಿ ಅದ್ಭುತ ಜ್ಞಾನಿ ಎಂದು ಪ್ರಸಿದ್ಧಿ ಪಡೆದವರು. ಇಂತಹ ಜೀವನವುಳ್ಳ ಚರಿತ್ರ ನಾಯಕರು ಮಿಥ್ಯೋಪಾಸಕರಲ್ಲ. ಗುರುರಾಜರ ಪ್ರತ್ಯಕ್ಷದರ್ಶೀ, ಭೂತರಾ ರಿಂದ ಕಿವಿಯಲ್ಲಿ ರಹಸ್ಯ ವಿಷಯ ಶ್ರವಣ ಮಾಡುತ್ತಿದ್ದವರು ಎಂದು ಪಂಡಿತ ಗೋಷ್ಠಿಯಲ್ಲಿ ವಿಖ್ಯಾತರಾದವರು. ಅಂಥವರ ಮಾತು ಹೇಗೆ ಅಪ್ರಾಮಾಣ್ಯವನ್ನು ಹೊಂದುವುದು?

ಆದ್ದರಿಂದ “ಈ ವಚನಗಳೇ ಅಪ್ರಮಾಣ” ಎಂಬ ಪೂರ್ವಪಕ್ಷಿಗಳ ಶಂಕೆಯು ಯುಕ್ತವಲ್ಲ. ವಾಕ್ಯಕ್ಕೆ ಸ್ವತಃ ಪ್ರಾಮಾಣ್ಯವಿದೆ. ಶಂಕೆ ಬರುತ್ತದಲ್ಲಾ ಎಂದರೆ ಶ್ರೀ ವಿಶ್ವಪ್ರಿಯತೀರ್ಥಾದಿ ಪ್ರಬಲ ಶಿಷ್ಟ ಪರಿಗೃಹೀತವಾಗಿದೆ ಈ ಋಜುತ್ವವಾದ. “ಬಾಧಾಭಾವೇಸರ್ವಂ ಮಾನಸಿದ್ಧಂ ಸಂಗ್ರಾಹ್ಯ ಮೇವಹಿ । ನಾತೋಽನ್ಯಚ್ಛಂಕ್ಯಂ ಇತಿ ಭಾಷ್ಯಾರ್ಥಂ ನೈವವಿಸ್ಮರ” ಎಂದು III 38 ರಲ್ಲಿ ಸೇತುಮಾಧವಾಚಾರ್ಯರಿಂದ ತಮ್ಮ ಗ್ರಂಥದಲ್ಲಿ ಉಕ್ತವಾದಂತೆ ವಾಕ್ಯ ಪ್ರಾಮಾಣ್ಯಕ್ಕೆ ಸ್ವತಸ್ತ್ವವೇ, ಉಲೂಕಪ್ರಿಯ ಮಾತ್ರಕ್ಕೆ ಎಂದೇನೂ ಹೇಳಿಲ್ಲ. ಇಷ್ಟಾದರೂ ಶಂಕಿಸಿದರೆ ಮೂಲ ಪ್ರಮಾಣವಿರುದ್ಧವಾದುದು ಗ್ರಾಹ್ಯವು ಎಂದು ವಚನವಿದೆ. ಅದು ಅನುವ್ಯಾಖ್ಯಾನಾದಿ ಸಮ್ಮತವು ಎಂದು ತೋರಿಸಬಹುದು. ಹಾಗಿದ್ದರೂ, ಶಂಕಿಸಿದರೆ ಗ್ರಂಥೋಕ್ತ ವಿಷಯಗಳು ಸರ್ವ ಪ್ರಮಾಣವಿರುದ್ಧವು ಎಂದೂ ತೋರಿಸಬಹುದು. ತಥಾಪಿ ಶಂಕಿಸಿದರೆ “ಎಲೈ ಪೂರ್ವಪಕ್ಷಿಯೇ ನಿನಗೆ ಅನಾದಿ ಮನೋದೋಷವಿದೆ. ಸತ್ವದಾರ್ಥಗಳಲ್ಲಿ ಅವಿಶ್ವಾಸ [ಭಾಗ ತಾ, ತಾ. XI 7-19 ಪಾರೂಕ್ಷೇಣೈವ ತತ್ವಂತು ಲೋಕಂಚಾಪಿ ವಿದಂತಿಯೇ। ತೇಽಪಿಸತ್ಸ್ನೇಹ ನಿರ್ಮುಕ್ತಾಃ ತಮೋಯಾಂತಿ ವಿನಿಶ್ಚಯಾತ್॥ ಆಪರೋಕ್ಷಾನ್ನಚಜ್ಞಾನಂ ತೇಷಾಮುತ್ಪಾದ್ಯತೇಕ್ವಚಿತ್॥ ಇತಿಷಾಡ್ಗುಣ್ಯೇ. XI 12-2 ಸ್ವಭಕ್ತ ಸಂಗಹೀನಸ್ಯ ವ್ಯತ್ಕ್ರಮಾತ್ಸಙ್ಗಿನೋಪಿವಾ

ಸ್ವಸಂಗಭಂಗ ಕೃದ್ವಿಷ್ಣುಃ॥ಇತಿ ಸತ್ಸಂಗೇ॥ XI 21-22 "ಅಧರ್ಮಾಜ್ಞಾನರೂಪೇಣ ಕಲಿನಾವಿಷ್ಟದೇಹಿನಃ। ಸತ್ಸುಕ್ರೋಧೋ ದುರ್ವಿಷಹಸ್ತತಸ್ತಮಸಿಪಾತ್ಯತೇ" ತಂತ್ರ ಭಾಗವತೇ' ಎಂದು ಪ್ರಮಾಣಗಳಿವೆ.] ದ್ವೇಷಗಳು, ಪಂಡಿತನಿಗೂ ಹಾನಿಕರವು ಎಂದು ಷಾಡ್ಗುಣ್ಯ, ಸತ್ಸಂಗ, ತಂತ್ರ ಭಾಗವತಾದಿಗಳಲ್ಲಿ ಉಕ್ತವಾಗಿದೆ. "ವಿಷಯೇಷು ಚ ಸಂಸರ್ಗಾಚ್ಛಾಶ್ವತಸ್ಯ ಚ ಸಂಶಯಾತ್ । ಮನಸಾಚಾನ್ಯಥಾ ಕಾಂಕ್ಷಾತ್ಪರಂ ನಪ್ರತಿಪದ್ಯತೇ" ಎಂದು ಅನುವ್ಯಾಖ್ಯಾನದಲ್ಲೂ ಹೇಳಲ್ಪಟ್ಟಿರುವುದರಿಂದ "ನೀನು ಅನುಬಂಧಾದಿಗಳನ್ನು ಸರಿಪಡಿಸಿಕೊಂಡು ಬಾ" ಎಂದು ಉಪದೇಶ ಮಾಡಬೇಕು. ಪರತಸ್ತ್ವ ರೀತಿಯ ಶಂಕೆಗೆ ಬೇರೆ ಕಾರಣವಿಲ್ಲ.

4. ಪ್ರಕೃತದಲ್ಲಿ ಬಹು ಸಂವಾದವಿರುವುದರಿಂದಲೂ, ಬಹು ಜನ ಶಿಷ್ಟರಿಂದ ಪರಿಗ್ರಹೀತವಾಗಿರುವುದರಿಂದಲೂ, ಬಹುವಿಧ ಪ್ರತ್ಯಕ್ಷೋಪಲಬ್ಧಿಯು ಅವರ ಉಪದೇಶದಿಂದ ಮತ್ತು ಅವರಿಗೆ ಸೇವೆ ಮಾಡಿದ್ದರಿಂದ ಕಂಡುಬಂದಿರುವುದರಿಂದಲೂ ಶ್ರೀವಿಶ್ವಪ್ರಿಯತೀರ್ಥರ ಜೀವನವು, ಅವರ ಉಪದೇಶೋಪನ್ಯಾಸಗಳೂ ಕೂಡ ವಾದಿರಾಜ ಋಜುತ್ವ ಸಾಧಕವೇ. ವಿಶ್ವಪ್ರಿಯವಿಲಾಸಾದಿಗಳೂ ಸುದಾರ್ಢ್ಯ ಸಂಪಾದಕವಾಗಿವೆ ಎಂದು ಸಂತೋಷಪಡಬೇಕು. ಅಂತಹ ಮಾನ್ಯ ಪಂಡಿತರುಗಳಿಗೆ ಋಜುತ್ವ ವಿಷಯದಲ್ಲಿ ಸುದೃಢ ನಿಶ್ಚಯವು ಇಲ್ಲದಿದ್ದರೆ ಅವರು ಪರಮೋತ್ಸಾಹದಿಂದ ಊರಿಂದೂರಿಗೆ ನಡೆದುಕೊಂಡು ಹೋಗಿ ಭಕ್ತರನ್ನು ಹುಡುಕಿ ಅವರ ಕಿವಿಗಳಲ್ಲಿ ತುತ್ತೂರಿಯಂತೆ ವಾದಿರಾಜ ಋಜುತ್ವವನ್ನು ಊದಿ ಉದ್ಘೋಷಿಸಿ ಹೇಳುತ್ತಿರಲಿಲ್ಲ. ಹಾಗೆಯೇ ಉಪದಿಷ್ಟ ಶ್ರೀಮುಷ್ಣಾಚಾರ್ಯಾದಿ ಅವರ ಪಂಡಿತ ಶಿಷ್ಯರೂ ಅಂತಹ ವಿಧವಾದ ಗ್ರಂಥಗಳನ್ನು ಬರೆಯುತ್ತಿರಲಿಲ್ಲ ಎಂದು ಅನುಕೂಲ ತರ್ಕವಿದೆ. ತಥಾಚ ಅವರ ಜೀವನವೂ ಈ ಸಾಹಿತ್ಯ ಗ್ರಂಥವೂ ನಿರ್ದುಷ್ಟಸಾಧಕಗಳೆಂದು ಸಿದ್ಧಿಸುತ್ತವೆ.

5. ವಾದಿರಾಜ ಗುರುಗಳಿಗೆ ಯೋಗಿತ್ವ ಉಂಟೆಂದೂ (ಪುಟ 10) ದೇವತ್ವ ಉಂಟೆಂದೂ (ಪುಟ 24) ಪೂರ್ವಪಕ್ಷಿಗಳು ಒಪ್ಪಿದ್ದಾರೆ. ಇಲ್ಲಿ ಹೇಳಿದ ವಿಶೇಷ ಪ್ರಮಾಣಗಳ ಅವಲೋಕನದಿಂದ ಋಜುತ್ವ ನಿಶ್ಚಯವೂ ಹುಟ್ಟುತ್ತದೆ. ಶುಷ್ಕ ಯುಕ್ತಿಗಳಿಂದಲೂ, ಅತೀಂದ್ರಿಯದಲ್ಲಿ ಅಧಮ ಪ್ರಮಾಣವಾದ ಪ್ರತ್ಯಕ್ಷದಿಂದಲೂ, ಪ್ರಸಕ್ತವಾದ ಅಲ್ಪದೋಷಗಳು ಉಪಜೀವ್ಯ ಶಾಸ್ತ್ರಾನುಸಾರವಾಗಿ ಮೋಹಕ ವ್ಯಾಪಾರಗಳೆಂದು ನಿಶ್ಚಯಿಸಲ್ಪಡುತ್ತವೆ. ಭಗವತ್ಪಾದರೇ VI 11-6 ಭಾಗ.ತಾ. ದಲ್ಲಿ ಈ ಮಾರ್ಗ ತೋರಿಸಿದ್ದಾರೆ: "ಆಜ್ಞಯೈವ ಮಹಾವಿಷ್ಣೋಃ ಕಾರ್ಯಾರ್ಥಮಪಿಚ ಕ್ವಚಿತ್। ನೀಚಾನಪಿಚಯಾಚಂತೇ ಸ್ವಾತ್ಮಕೋ ಗುಣವತ್ತರಾಃ। ನೀಚವಾಕ್ಯಂ ವದೇಯುಶ್ಚ ಸುರಾನ್ನೈವ ತಾವತಾ ಕ್ವಚಿತ್ । ತೇಜಃ ಕ್ಷತಿರ್ಭವೇದೇಷಾಂ ಜನಕಸ್ಯ ಯಥಾರ್ಭಕೇ" ॥ ಎಂದಿದೆ. ಇಂತಹ ಅನೇಕ ಪ್ರಮಾಣ ವಾಕ್ಯಗಳಿವೆ. ವಾದಿರಾಜ ಗುರುಗಳ ಪ್ರತಿಮೆಯೂ ಕೂಡ ಚೆನ್ನಾಗಿ ಪರೀಕ್ಷೆ ಮಾಡಿದರೆ ಸುದೃಢ ನಿಶ್ಚಯಜನಕವೇ; ಪರೀಕ್ಷಿತ ಪ್ರತಿಮೆಯ ಪ್ರತ್ಯಕ್ಷವು ಉಪಜೀವ್ಯಾಗಮ ವಿರುದ್ಧವಾಗುವುದಿಲ್ಲವೆಂದು ನನ್ನ ಅಭಿಪ್ರಾಯ. ಆದ್ದರಿಂದ ನಿಃಸಹಾಯ ವಾದ ಹಾನಿಕರವೂ ಆದ ಪೂರ್ವಪಕ್ಷದ ತ್ಯಾಗವೇ ಉಚಿತವು.

ಹತ್ತನೆಯ ಅಧ್ಯಾಯವು ಮುಗಿಯಿತು.

# ಅಧ್ಯಾಯ 11

## ಸಪ್ತಮಪ್ರಮಾಣ ಉತ್ತರಕಾಲೀನ ಚರಿತ್ರೆ 1870ರ ತರುವಾಯ

ಶ್ರೀ ವೇದನಿಧಿತೀರ್ಥರ ಕಾಲವು ಆಖ್ಯಾನದ ಪ್ರಾದುರ್ಭಾವ ಕಾಲವೇನೋ ಹೌದು. ಆದರೂ ಶ್ರೀವಿಶ್ವಪ್ರಿಯತೀರ್ಥರ ಪಟ್ಟ ಕಾಲದಲ್ಲಿಯೆ ಫಲೋಪಬ್ಧಿ ಸಂವಾದ ಉಪದೇಶಾದಿಗಳಿಂದ ಆಖ್ಯಾನದ ಪ್ರಾಮಾಣ್ಯವು [III 4-5 ಸುಧೆಯಲ್ಲಿ ಫಲಪ್ರಾಪ್ತಿ ಸಂವಾದವು ಪ್ರಾಮಾಣ್ಯ ನಿಶ್ಚಾಯಕವೆಂದಿದೆ.] ನಿಶ್ಚಿತವಾಗಿ ಅದು ಅತಿಶಯವಾಗಿ ಪ್ರಚಾರಕ್ಕೆ ಬಂತು. ಅದೇ ಅದರ ಪ್ರಚಾರ ಕಾಲ. ಶ್ರೀವಿಶ್ವಪ್ರಿಯತೀರ್ಥರು ಪ್ರಕರಣ ಭೇದವನ್ನು ತೋರಿಸಿ ಅರ್ಥ ವಿಶೇಷಗಳನ್ನೂ ಬೋಧಿಸಿ ಶ್ರೀಮುಷ್ಣಾಚಾರ್ಯಾದಿ ಶಿಷ್ಯರಿಂದ ಕೃತವಾದ ವ್ಯಾಖ್ಯಾನಗಳ ಮೂಲಕ ಆಖ್ಯಾನವನ್ನು ಪ್ರಕಾಶ ಪಡಿಸಿ 'ಪ್ರಾಮಾಣ್ಯಬೋಧಿನೀ' (1834ರ ಸಂವತ್ಸರ) ಮುಂತಾದ ಗ್ರಂಥಗಳಾಗುವಂತೆಯೂ ಪ್ರೇರಿಸಿ ಆಖ್ಯಾನ ಪ್ರಾಮಾಣ್ಯವನ್ನು ಸುದೃಢವಾಗುವಂತೆ ಸ್ಥಾಪಿಸಿದರು.

ಹೀಗಿದ್ದರೂ (1841-1865 ವರ್ಷಗಳಲ್ಲಿ) ಇವರ ಮತ್ತು ಈ ಗ್ರಂಥದ ಮಾಹಾತ್ಮ್ಯವು ವಿಸ್ತಾರವಾಗುತ್ತಿರುವ ಕಾಲದಲ್ಲೇ, ಆಖ್ಯಾನದಲ್ಲಿಯೇ ಸೂಚಿಸಲ್ಪಟ್ಟಿರುವಂತೆ ಕೆಲವು ಜನರು ಆ ಮಹಾಪುರುಷರಲ್ಲಿ ಅವಿಶ್ವಾಸ ಮಾಡಿದರು. ಆಖ್ಯಾನ ವಿಷಯದಲ್ಲೂ ಅಪಹಾಸ ಪದ್ಯಗಳನ್ನು ರಚಿಸಿದರು. ಆಕಾಲದಲ್ಲಿ ಸುಮಾರು 1860 ರಲ್ಲಿ ಕೆಲವರು ದ್ವೇಷಿಗಳು "ಅಬ್ಜಾರಣ್ಯ ಮಾಹಾತ್ಮ್ಯಂ' - ಅಧ್ಯಾಯ 4 ಮತ್ತು 5 ಎಂಬ ಹೆಸರಿನ ಕ್ಷುದ್ರ ಗ್ರಂಥವನ್ನು ಸತ್ಯಮಂಗಳದೇಶದ ಅನಂತ ನಾಮಕ ಕಾವ್ಯಕಾರನಿಂದ ಬರೆಯಿಸಿ "ಪದ್ಮಪಾದ ನಾಮಕ ದೈತ್ಯನಾದ ಶಂಕರನ ಶಿಷ್ಯನು ವಿಶ್ವಪ್ರಿಯ ನಾಮಕ ಅವತಾರವನ್ನು ಮಾಡಿ ಕುಮಂತ್ರೇಂದ್ರ ಜಾಲಾದಿಗಳಿಂದ ಜನರನ್ನು ವಶಮಾಡಿಕೊಂಡು ವಾದಿರಾಜ ಋಜುತ್ವವನ್ನು ಉದ್ಘೋಷಿಸಿ ತಮಸ್ಸಿಗೆ ಬೀಳುತ್ತಾನೆ" ಎಂದು ಪ್ರತಿಪಾದಿಸಿ ರಹಸ್ಯದಲ್ಲಿ ಆ ಶ್ಲೋಕಗಳನ್ನು ಪ್ರಚಾರ ಪಡಿಸಿದರು.

2. ಆ ಕಾಲದಲ್ಲಿ ಜಂಖಂಡಿ ವಾದಿರಾಜಾಚಾರ್ಯರು ಪ್ರಸಿದ್ಧಿಗೆ ಬಂದಿದ್ದರು. ಅವರು ಸುಮಾರು 182 ರಲ್ಲಿ ಬಳ್ಳಾರಿ ಜಿಲ್ಲಾ ಶಿರಗುಪ್ಪೆಯ ಸಮೀಪದಲ್ಲಿ ಹುಟ್ಟಿದವರು. ಉತ್ತರಾದಿ ಮಠದ ಶಿಷ್ಯರು. ಮುಂಜಿಯಾದ ಕೆಲವು ವರ್ಷಗಳ ಕಾಲ ಉತ್ತರಾದಿ ಮಠದ ಪೂರ್ವಾಶ್ರಮದಲ್ಲಿದ್ದ ಶ್ರೀಸತ್ಯಪರಾಕ್ರಮತೀರ್ಥರಲ್ಲೂ ನಂತರ ಅನೇಕ ವರ್ಷ ಉಡುಪಿ ಕೃಷ್ಣಾಪುರ ಮಠದ ಸ್ವಾಮಿಗಳವರಲ್ಲೂ ಸುಶಿಕ್ಷಿತರಾಗಿ ವೇವಾಂತ ಪಂಡಿತರೆಂಬ ಖ್ಯಾತಿಹೊಂದಿ ವಾದಿರಾಜರ್ಜುತ್ವ ದೀಕ್ಷಾವನ್ನು ಉಳ್ಳವರಾಗಿ 1860-1896ರಲ್ಲಿ ವಿಶೇಷವಾಗಿ ವಾದಿರಾಜ ಗುರುಸೇವೆಯನ್ನು ಮಾಡಿದರು. 1876ರಲ್ಲಿ ಸ್ವಮಠದ ಶ್ರೀಸತ್ಯಪರಾಕ್ರಮ ತೀರ್ಥರು ಇವರು ಪಲ್ಲಕ್ಕಿಯಲ್ಲಿ ಕುಳಿತು ಕರವಸ್ತ್ರ ಧರಿಸಿ ಬಹುಮಾನಿತರಾಗಬಹುದೆಂದು ಪೂನಾದಲ್ಲಿ ನಿರೂಪಕೊಟ್ಟು ಗೌರವಿಸಿದರು. ಹ.ಭ.ವಿ. ಪುಟ 287 ರಲ್ಲಿ ನಿರೂಪ ಮುದ್ರಿತವಾಗಿದೆ. ಆಗ ಕುಂಭಕೋಣೆಯ ಪ್ರಾಂತ್ಯದಲ್ಲಿ ಸಂಚರಿಸುತ್ತಿದ್ದ ಶ್ರೀರಘುಪ್ರವೀರ ತೀರ್ಥರು ಅಬ್ಜಾರಣ್ಯ ಮಾಹಾತ್ಮ್ಯದ ರಹಸ್ಯ ಪ್ರತಿಯನ್ನು ಎಲ್ಲಿಯೋ ನೋಡಿ ದುಃಖತಪ್ತರಾಗಿದ್ದಾಗ ಜ೦ಖಂಡಿ ವಾದಿರಾಜಾಚಾರ್ಯರು ಅವರ ಸನ್ನಿಧಿಯಲ್ಲಿ ಅದರ ನಾಶಪಡಿಸಿ ಬರುತ್ತೇನೆಂದು ಪ್ರತಿಜ್ಞೆ ಮಾಡಿ ಹೊರಟು "ವಾದಿರಾಜ ಋಜುತ್ವ ವಿರೋಧಿ

ಕಪೋಲ ಚ ಪೇಟಕಾ" [ಈ ಗ್ರಂಥದಲ್ಲಿ ಆಖ್ಯಾನವಿಷಯದಲ್ಲಿ ಬ್ರಹ್ಮಾಂಡ ಪುರಾಣಾದಿ ಪ್ರಮಾಣಗಳಿರುವುದು ನಿರೂಪಿತವಾಗಿದೆ.] ಎಂಬ ಹೆಸರಿನ ಪ್ರತಿಗ್ರಂಥವನ್ನು ತಯಾರುಮಾಡಿಕೊಂಡು ವಾಜದಲ್ಲಿ "ಅಬ್ಜಾರಣ್ಯ ಮಾಹಾತ್ಮ್ಯ 4-5 ಅಧ್ಯಾಯ" ಎಂಬ ಗ್ರಂಥವನ್ನು ಖಂಡಿಸಿ ಅದು ಕೃತಕವೆಂದು ತೋರಿಸಿ 1876 ನೆಯ ಇಸವಿಯಲ್ಲಿ ತಮ್ಮ ಗುರುಗಳಾದ ಸತ್ಯಪರಾಕ್ರಮತೀರ್ಥರ ಅನುಗ್ರಹಬಲವನ್ನೂ, ಗುರುಪುತ್ರರಾದ ಶ್ರೀನಾರಾಣಾಚಾರ್ಯರ ಸಹಾಯವನ್ನು ಹೊಂದಿ ಕೊಯಿಮುತ್ತೂರು ದೇಶದಲ್ಲಿ ಆ ಗ್ರಂಥಾಭಾಸವನ್ನು ಬೆಂಕಿಯಲ್ಲಿ ಹಾಕಿ ಸುಡಿಸಿದರು. ಶ್ರೀರಘುಪ್ರವೀರತೀರ್ಥರನ್ನು ಸಂತೋಷಪಡಿಸಿ ಅವರಿಂದ ಅನುಗ್ರಹ ಪತ್ರಿಕೆಯನ್ನು ಪಡೆದರು. ಇವರು ಮಾಡಿದ ವಾದವು ಭ.ವಿ. I ರಲ್ಲಿ ಪ್ರಿಂಟಾಗಿದೆ. ಅಧ್ಯಾಯದ್ವಯಗಳು ಹಿಂದಿನ ಮೂರು ಅಧ್ಯಾಯಗಳಿಗೆ ಪರಮ ವಿರುದ್ಧ; ವ್ಯಾಹತಿ, ಪ್ರಮಾಣವಿರೋಧ ಮುಂತಾದುವನ್ನು ತೋರಿಸಿ ಅವೆರಡು ಅಧ್ಯಾಯಗಳೂ ಮೂರ್ಖರಿಂದ ಕಲ್ಪಿತವೆಂದು ಸಿದ್ಧಾಂತ ಮಾಡಿ 'ಗುರುರಾಜ ಋಜುತ್ವ ವಿರೋಧಿ ಮರ್ದನ' ಎಂಬ ಗ್ರಂಥವನ್ನು ರಚಿಸಿದರು. 1876ನೆಯ ಧಾತೃ ಸಂವತ್ಸರ ದಲ್ಲಿ ಹಿಂದೆ ಹೇಳಿದಂತೆ ಭೀಮನಕಟ್ಟೆ ಮಠದ ಶ್ರೀ ರಘುಪ್ರವೀರತೀರ್ಥರು ಈ ಕಾರ್ಯವನ್ನು ಶ್ಲಾಘಿಸಿ ಬಹುಮಾನ ಮಾಡಿದರು. [ಹತ್ತು ವರ್ಷಗಳ ಮೇಲೆ ವ್ಯಯ(1886)ಸಂವತ್ಸರ ಫಾಲ್ಗುಣದಲ್ಲಿ ಶ್ರೀ ರಘುಪ್ರವೀರ ತೀರ್ಥರು ಪುನಃ ನಿರೂಪಕೊಟ್ಟು ಜಂಖಂಡಿಆಚಾರ್ಯರನ್ನು ಅನುಗ್ರಹಿಸಿದ್ದಾರೆ; ಈ ನಿರೂಪದಲ್ಲಿ ಹಿಂದಿನ ನಿರೂಪವನ್ನು ನಮೂದಿಸಿದ್ದಾರೆ ಮತ್ತು ಈ 1886 ನಿರೂಪದಲ್ಲಿ ವಾದಿರಾಜರ 'ಲಾತವ್ಯತ್ವ', ಭೂತರಾಜರ ಭಾವೀರುದ್ರತ್ವ, ವೃನ್ದಾವನಾಚಾರ್ಯರ ಭಾವಿ 'ಸ್ವಃ ಪಶಿತ್ವ' ಗಳನ್ನು ನಿರ್ದೇಶಮಾಡಿದ್ದಾರೆ. ಇದರ ಪ್ರತಿ ಶ್ರೀಗೋವಿಂದರಾಯರಲ್ಲಿದೆ. ಅಮುದ್ರಿತ.] ಮತ್ತು ಅದೇ ವರ್ಷದಲ್ಲಿ ವ್ಯಾಸರಾಜಮಠಾಧೀಶ್ವರರಾದ ವಿದ್ಯಾಸಿಂಧುತೀರ್ಥ ಶ್ರೀಪಾದಂಗಳವರಿಂದ ವಾದಿರಾಜಾಚಾರ್ಯರು ಪ್ರಾಣದೇವರನ್ನೂ ವಾದಿರಾಜರ ವೃನ್ದಾವನವನ್ನೂ ಜೊತೆಯಲ್ಲಿಟ್ಟು ಸಮತೆಯಿಂದ ಪೂಜಿಸುವುದಕ್ಕೆ ಯಾರೂ ಆಕ್ಷೇಪಿಸಕೂಡದೆಂದು ನಿರೂಪ ಕೊಡಲ್ಪಟ್ಟಿದೆ. ಹ.ಭ.ವಿ. ಪುಟ 288. ಅದೇ 1876ನೆಯ ವರ್ಷದಲ್ಲಿ ಶ್ರೀಸತ್ಯಪರಾಕ್ರಮ ಸ್ವಾಮಿಗಳು ವಾದಿರಾಜ ಋಜುತ್ವವನ್ನೂ, ಆಖ್ಯಾನಪುಸ್ತಕವನ್ನೂ, ಬ್ರಹ್ಮಾಂಡಪುರಾಣಾದಿ ಪ್ರಮಾಣಗಳನ್ನೂ ಒಪ್ಪಬೇಕು. ಆದರೆ ಋಜುತ್ವ ಪಕ್ಷಪಾತಿಗಳು ಸ್ವಭಿನ್ನವೈಷ್ಣವರನ್ನು ತಮೋಯೋಗ್ಯರೆಂದು ನಿಂದಿಸಕೂಡದು ಮತ್ತು ಬಲಾತ್ಕಾರದಿಂದ ಯಾರಿಂದಲೂ ಮೃತ್ತಿಕಾಧಾರಣೆಯನ್ನು ಮಾಡಿಸಕೂಡದು ಎಂದು ನಿರೂಪಹೊರಡಿಸಿ, ಆ ಉಪದೇಶದಿಂದ ಕುಂಭಕೋಣಾದಿ ಪ್ರದೇಶಗಳಲ್ಲಿ ಶಾಂತಿಯನ್ನು ಸ್ಥಾಪನೆಮಾಡಿದರು. ಜಂಖಂಡಿ ಆಚಾರ್ಯರಿಗೆ ಇದು ಉಚ್ಛ್ರೇಯ ಕಾಲವಾಯಿತು.

3. ಆದರೆ ಶ್ರೀ ಸತ್ಯವೀರಸ್ವಾಮಿಗಳವರು ಅಲ್ಲಲ್ಲಿದ್ದ ತಮ್ಮ ಶಿಷ್ಯರಿಗೆ ವಾದಿರಾಜಾಚಾರ್ಯರ ಸತ್ಕಾರ ನಿಷೇಧ ಮಾಡಬೇಕೆಂದೇ ಆಜ್ಞಾಪಿಸಿದರು. ಹೀಗಿದ್ದರೂ ಸೆಪ್ಟಂಬರ್1884ನೇ ಇಸವಿ ತಾರಣ ಸಂವತ್ಸರವ ಭಾದ್ರಪದದಲ್ಲಿ ಮದ್ರಪುರಿಯಲ್ಲಿ ಶ್ರೀ ಸತ್ಯವೀರ ಸ್ವಾಮಿಗಳವರು ದೊಡ್ಡ ಸಭೆಮಾಡಿ ವಿಧವಾ ವಿವಾಹಖಂಡನೆ ಮಾಡಿದರು. ಆಶ್ವಯುಜದಲ್ಲಿ ಮಹಾಸಮಾರಾಧನೆ ಸಹ ಮಾಡಿದರು. ಆಗ ವಾದಿರಾಜಾಚಾರ್ಯರೂ ಕೂಡ ಮುಖ್ಯ ಪಾತ್ರವನ್ನು

ವಹಿಸಿ ವಾದೋಪನ್ಯಾಸಗಳಿಂದ ಶ್ರೀ ಸತ್ಯವೀರಸ್ವಾಮಿಗಳ ಮನಸ್ಸಂತೋಷವನ್ನುಂಟುಮಾಡಿ ಬಿಟ್ಟರು. ಸುಪ್ರೀತರಾದ ಸ್ವಾಮಿಗಳು ಇನ್ನು ಮೇಲೆ ಉತ್ತರಾದಿ ಮಠೀಯರೆಲ್ಲರೂ ವಾದಿರಾಜಾಚಾರ್ಯರಿಗೆ ಸತ್ಕಾರ ಸನ್ಮಾನಗಳನ್ನು ಮಾಡಬೇಕೆಂದು ಒಂದು ನಿರೂಪವನ್ನೇ ಕಾರ್ತಿಕ ಬಹುಳ ಪಂಚಮಿ ಹೊರಡಿಸಿಬಿಟ್ಟರು. ಹ.ಭ.ವಿ. ಪುಟ 290ರಲ್ಲಿ ನಿರೂಪ ಮುದ್ರಿತವಾಗಿದೆ. "ನಮ್ಮ ಪರೋಕ್ಷದಲ್ಲಿ ಬೇಕಾದರೆ ಮೃತ್ತಿಕಾವನ್ನು ಧರಿಸಲಿ" ಎಂದು ಕೂಡ ಶಿಷ್ಯನದ್ವಾರಾ ಆಜ್ಞಾಪಿಸಿಬಿಟ್ಟರು. ಸಂತೋಷದಿಂದ ವಾದಿರಾಜಾಚಾರ್ಯರೂ ಮಠದಲ್ಲಿ 2-3 ತಿಂಗಳು ಸೇವೆಯಾಗಿತ್ತುದರಿಂದ ಇನ್ನು ಸೋದೆ ಹೋಗಬೇಕೆಂದು ಸಂಕಲ್ಪಿಸಿ ಪ್ರಥಮಥಃ ಉಡುಪಿಗೆ ಪ್ರಯಾಣ ಬೆಳೆಸಿದರು. ಆದರೂ ಸ್ವಲ್ಪ ದಿನಗಳ ಮೇಲೆ "ವಾದಿರಾಜಗುರುಗಳ ಮೃತ್ತಿಕಾಧಾರಣವು ನಿಷಿದ್ಧವು; ಅವರು ಋಜುಗಳಲ್ಲ, ಅದಕ್ಕೆ ಪ್ರಮಾಣವಿಲ್ಲ" ಇತ್ಯಾದಿ ರೀತಿಯಾಗಿ ಉಪನ್ಯಾಸವನ್ನೇ ಕಾರ್ತಿಕ ಬಹುಳ ಏಕಾದಶಿಯ ದಿನ ಮದ್ರಾಸಿನ ಟ್ರಿಪ್ಲಿಕೇನಿನಲ್ಲಿ ಮಾಡಿಸಿ ಒಂದು ಪತ್ರಿಕೆಯನ್ನು ಪ್ರಕಟಿಸಿಬಿಟ್ಟರು. (1884-Nov.) ಆಗ ವಾದಿರಾಜಾಚಾರ್ಯರು ಮದ್ರಪುರಿಯಲ್ಲಿರಲ್ಲಿಲ್ಲ.

4. ಆಗ ರಜತ ಪೀಠಪುರದಲ್ಲಿ 1884ರಲ್ಲಿ ಸೋದಾಮಠದ ಸ್ವಾಮಿಗಳ ಪರ್ಯಾಯ ಪೂಜಾಕಾಲ. ಶ್ರೀ ವಿಶ್ವಾಧೀಶತೀರ್ಥ ಶ್ರೀ ಚರಣರು ಅದ್ಭುತ ಪಂಡಿತರು. ವೃಂದಾವನಾಚಾರ್ಯರ ಸಾಕ್ಷಾತ್ ಶಿಷ್ಯರು. ಅವರು ಮದ್ರಪುರಿಯಿಂದ ಬಂದಿದ್ದವರಿಂದ ಅಲ್ಲಿ ಶ್ರೀ ಶ್ರೀ ಸತ್ಯವೀರಸ್ವಾಮಿಗಳು ಹೊರಡಿಸಿದ ಪತ್ರಿಕೆಯನ್ನು ಶ್ರವಣ ಮಾಡಿದರು. ಶ್ರೀ ಕೃಷ್ಣ ಸನ್ನಿಧಿಯಲ್ಲಿ ಮಾಘ ಶುದ್ಧ ಪಾಡ್ಯದಲ್ಲಿ ದೊಡ್ಡ ಸಭೆ ಮಾಡಿ ಅಲ್ಲಿ ಆ ಋಜುತ್ವ ಖಂಡನ ಸಂಬಂಧಿ ಪತ್ರಿಕಾವನ್ನು ಓದಿಸಿ ಅದಕ್ಕೆ ಉತ್ತರವಾಗಿ ಉಪನ್ಯಾಸಮಾಡಿ ತಾವೇ 'ತಿಲಶಃ ಕಣಶಶ್ಚೈವ' ಎಂಬಂತೆ ಅನೃಜುತ್ವ ವಾದವನ್ನು ಖಂಡಿಸಿದರು. ಈ ಸಭಾ ವೃತ್ತಾಂತವೂ ದಿಕ್ಕುದಿಕ್ಕುಗಳಲ್ಲಿ ಹರಡಿತು. ಈ ಸಭೆಯಲ್ಲಿ ಮಾಡಿದ ಉಪನ್ಯಾಸದಲ್ಲಿ ಶ್ರೀ ಶ್ರೀಗಳವರು ಬ್ರಹ್ಮವೈವರ್ತಪುರಾಣ, ಸ್ಕಂದ, ಪಾದ್ಮ, ಋಕ್ಸಂಹಿತಾದಿ ವಚನಗಳನ್ನೂ, ನಿಜಪುರಂದರರದಾಸರು, ವಿಜಯದಾಸರು, ಜಗನ್ನಾಥದಾಸರು (ಶ್ವಾಸನಿಯಾಮಕರೆಂದು ಬರೆದಿರುವುದು), ವೆಂಕಟದಾಸರು, ತಿಮ್ಮಣ್ಣ ದಾಸರು - ಇವರ ಪದಗಳನ್ನು ಪ್ರಮಾಣವನ್ನಾಗಿ ಉದಾಹರಿಸಿದ್ದಾರೆ. ಮೃತ್ತಿಕಾಧಾರಣ ವಿಷಯದಲ್ಲೂ ಪ್ರಮಾಣ ಹೇಳಿದ್ದಾರೆ. ಅವೆಲ್ಲವೂ ಋಜುತ್ವ ಚಂದ್ರೋದಯ ಎಂಬ ಹೆಸರಿನಿಂದ ಒಂದು ವರ್ಷದ ಮೇಲೆ 1886ರಲ್ಲಿ ಬೆಂಗಳೂರಿನಲ್ಲಿ ಮುದ್ರಿತವಾಗಿ ಪ್ರಕಟಿಸಲ್ಪಟ್ಟಿದೆ. ಈ ಮಧ್ಯೆ ಜಂಖಂಡಿ ವಾದಿರಾಜಾಚಾರ್ಯರೂ ಕೂಡ ಉಡುಪಿ ಸಭೆಯ ವಿವರವನ್ನು, ಗುರುರಾಜ ಋಜುತ್ವ ಸಿದ್ಧಾಂತವಾಯಿತೆಂದು, ಎಲ್ಲಾ ಪ್ರಸಿದ್ಧ ಸ್ಥಳಗಳಿಗೂ ಸಂಚಾರ ಮಾಡಿ ತಿಳಿಸಿದರು. 1885ನೆಯ ಇಸವಿಯಲ್ಲಿ ಶ್ರೀ ರಾಘವೇಂದ್ರಮಠಾಧೀಶ್ವರರೂ ಕೂಡ ಅನುಗ್ರಹ ಪತ್ರವನ್ನು [ಈ ಎಲ್ಲಾ ನಿರೂಪ ಪ್ರತಿಗಳೂ ಶ್ರೀ ಸಿ. ಕೃಷ್ಣಸ್ವಾಮಿರಾಯರಲ್ಲಿದೆ. ಅವರು ನನಗೆ ಅವೆಲ್ಲವುಗಳ ಪ್ರತಿಗಳನ್ನೂ ತಾವೇ ಬರೆಸಿ ಕೊಟ್ಟಿದ್ದಾರೆ] ಕೊಟ್ಟು ವಾದಿರಾಜಾಚಾರ್ಯರನ್ನು ಸನ್ಮಾನಿಸಿದರು. ಹ.ಭ.ವಿ. ಪುಟ 289ರಲ್ಲಿ ಆ ನಿರೂಪ ಮುದ್ರಿತವಾಗಿದೆ.

ಋಜುತ್ವ ಚಂದ್ರೋದಯ ಮುದ್ರಿತವಾಗಿ ಪ್ರಚಾರಕ್ಕೆ ಬರುವ ಪೂರ್ವದಲ್ಲಿಯೇ ಸಭಾವೃತ್ತಾಂತವನ್ನು ತಿಳಿದುಕೊಂಡ ಶ್ರೀ ಸತ್ಯವೀರತೀರ್ಥರು 1885ನೇ ಜನವರಿ ಮಾಘ ಶುದ್ಧ ದ್ವಾದಶೀ ತಾರಣ ಸಂವತ್ಸರದಲ್ಲಿ ಋಜುತ್ವ ಖಂಡನೆಮಾಡಿ ಸಭೆಯಲ್ಲಿ ಉದ್ಘೋಷಿಸಿ ವಾದಿರಾಜಾಚಾರ್ಯರವರ ವಿಷಯದಲ್ಲಿ ಬಹಿಷ್ಕಾರ ಪತ್ರವನ್ನು ಹೊರಡಿಸಿದರು. ಆ ಬಹಿಷ್ಕಾರ ಪತ್ರವನ್ನು ಜಂಖಂಡಿ ರಾಜನೇ ಮುಂತಾದ ದೊಡ್ಡ ಮನುಷ್ಯರಿಗೆ ಕಳುಹಿಸಿದರು, ಆಗಲೇ 'ಮಾರ್ತಿಕಗರ್ವ ನಿರ್ವಾಪಣ' ಎಂಬ ಹೊತ್ತಿಗೆಯನ್ನು ಮುಂಬಯಿಯಲ್ಲಿ ಮುದ್ರಾಪಿಸಿ 'ಟೀಕಾಚಾರ್ಯದ್ರೋಹಿ, ತಮೋಯೋಗ್ಯಃ' ಎಂಬ ನಿಂದಾವಚನ ತುಂಬಿದ ಪತ್ರಗಳಿಂದ ಅಲ್ಲಲ್ಲಿ ಜಂಖಂಡಿ ಆಚಾರ್ಯರ ವಿರುದ್ಧವಾಗಿ ಪ್ರವರ್ತಿಸಿದರು. ಆದರೆ ಮುಂದಿನ ವರ್ಷವೇ ಅವರು ವೃನ್ದಾವನಸ್ಥರಾದರು. ನಂತರ ಸತ್ಯಧೀರತೀರ್ಥರು (1886-1906) ಪೀಠಾರೂಢರಾದರು. ಅವರೂ ಗುರುಸೇವಾಸಕ್ತ ಮನಸ್ಸಿನಿಂದ ತಮ್ಮ ಗುರುಗಳು ಕೊಟ್ಟ ವಾದಿರಾಜಾಚಾರ್ಯರ ಬಹಿಷ್ಕಾರವನ್ನು ಖಾಯಂ ಮಾಡಿ ತಾವೂ ಬಹಿಷ್ಕಾರ ಪತ್ರ ಬರೆಸಿ ಋಜುತ್ವ ಕಲಹವನ್ನು ನೂತನಕಾರ್ಯ ವಿಶೇಷದಿಂದ ಪ್ರವರ್ತನೆ ಗೊಳಿಸಿದರು: 'ಸಂಪ್ರದಾಯಂ ನ ಮುಂಚತ' ಎಂಬ ನ್ಯಾಯವನ್ನು ಅನುಸರಿಸಿದರು.

5. ಆದೊಂದನ್ನೂ ಲಕ್ಷಿಸದೆ ಋಜುತ್ವ ಪಕ್ಷೀಯರೂ ಕೂಡ ಸುಮೃತ್ತಿಕಾರಿಗರ್ವ ನಿರ್ವಾಪಣ (1886), ಸುಮೃತಿಕಾರಿ ಮತ್ತಗಜಾಂಕುಶ (1885) ಗ್ರಂಥಗಳನ್ನು ಛಾಪಿಸಿ ಪ್ರಕಾಶಪಡಿಸಿ ಹಿಂದೆ ಮುದ್ರಿತವಾಗಿದ ವಾದಿರಾಜ ಋಜುತ್ವ ಕಪೋಲ ಚಪೇಟಿಕಾ, ಮತ್ತು ಮಧ್ವಕಥೋಜ್ಜೀವನಗಳನ್ನೂ ಹೆಚ್ಚಾಗಿ ಸಂಗ್ರಹಿಸಿ ಉತ್ಸಾಹದಿಂದ ಸಮಾಜದಲ್ಲಿ ಪ್ರಚಾರಾನುವೃತ್ತಿಯಲ್ಲಿ ತತ್ಪರರಾದರು. ಒಂದು ಕಾಲ ವಿಶೇಷದಲ್ಲಿ ಒಂದು ಹಳ್ಳಿಯಲ್ಲಿ ಶ್ರೀ ಸತ್ಯಧೀರಸ್ವಾಮಿಗಳವರು ಇಳಿದುಕೊಂಡಿದ್ದಾಗ ವಾದಿರಾಜಾಚಾರ್ಯ ಪ್ರಭೃತಿಗಳು ಅನೇಕರು ಮೃತ್ತಿಕಾವನ್ನು ಧರಿಸಿ ಆಖ್ಯಾನ ಹೇಳಿಕೊಂಡು ಜಾಂಗಟೆ ಘಂಟೆಗಳನ್ನು ಬಾರಿಸುತ್ತಾ ಅವರ ಮುಂದೆಯೇ ಮೆರವಣಿಗೆಯನ್ನು ಮಾಡಿಬಿಟ್ಟರು. ಸ್ವಾಮಿಗಳು ಸುಮ್ಮನಿದ್ದು ಬಿಟ್ಟರು. ಈ ಋಜುತ್ವ ಪ್ರಚಾರ ವಿಜಯವನ್ನು ತಿಳಿದು ಶ್ರೀ ವಿಶ್ವಾಧೀಶತೀರ್ಥರು ವಾದಿರಾಜಾಚಾರ್ಯರ ಗುರುಭಕ್ತಿಗೆ ಮೆಚ್ಚಿ ನಿರೂಪ ವಿಶೇಷವನ್ನು ಕೊಟ್ಟು 1886ರಲ್ಲಿ ಸನ್ಮಾನ ಮಾಡಿದರು. [ಈ ನಿರೂಪ ಸಹ ಹ.ಭ.ವಿ. 1ರಲ್ಲಿ ಪ್ರಿಂಟುಮಾಡಿಸಲಾಗಿದೆ. ಪುಟ 291] ಹಾಗೆಯೇ ಅದೇ ಇಸವಿಯಲ್ಲಿ ಫಾಲ್ಗುಣದ ಪೌರ್ಣಿಮೆ ಇನ್ನೊ0ದು ನಿರೂಪವನ್ನು ಕೊಟ್ಟ ಭೀಮನಕಟ್ಟೆಯ ಮಠದ ಸ್ವಾಮಿಗಳವರೂ ಅವರನ್ನು ಆದರಿಸಿದರು. ಈ ನಿರೂಪವು ಮುದ್ರಿತವಾಗಿಲ್ಲ. ಶ್ರೀ ಗೋವಿಂದರಾಯರು ಪ್ರತಿಮಾಡಿಕೊಂಡಿದ್ದಾರೆ.

6. ಇಷ್ಟಾದ ಮೇಲೆ ತಮ್ಮ ಮೇಲೆ ಹಾಕಿದ್ದ ಬಹಿಷ್ಕಾರದ ನಿವೃತ್ತಿಗೋಸ್ಕರ ಜಂಖಂಡಿ ವಾದಿರಾಜಾಚಾರ್ಯರು ಯತ್ನಿಸಿದರು. ತಮ್ಮ ಮಠದವರು ನಿರ್ದಯವೃತ್ತಿಯಿಂದ 'ತಮೋಯೋಗ್ಯ ಟೀಕಾಚಾರ್ಯದ್ರೋಹಿ' ಮುಂತಾದ ನಿಂದಾವೃಷ್ಟಿಯನ್ನೇ ಮಾಡಿದಾಗ ನ್ಯಾಯಸ್ಥಾನದಲ್ಲಿ ಕ್ರಿಮಿನಲ್ ಆಪಾದನೆಯೂ ಆಗಿಹೋಯಿತು. ಅನಂತರ ಸಜ್ಜನ ಮಾಧ್ಯಸ್ಥ್ಯದಿಂದ ಶಾಂತಿಯಾಯಿತು. ಶ್ರೀ ಶ್ರೀಗಳವರು ಪೂರ್ವದಲ್ಲಿ ತಮ್ಮ ಗುರುಗಳು ಹಾಕಿದ್ದ ಮತ್ತು ತಾವು ಹಾಕಿದ್ದ ಬಹಿಷ್ಕಾರಗಳನ್ನು ಕಿತ್ತುಹಾಕಿ ಇನ್ನು ಮೇಲೆ ತಮ್ಮ ಮಠೀಯರು ಯಾರೂ ವಾದಿರಾಜಾಚಾರ್ಯರನ್ನು

ನಿಂದಿಸುವುದಿಲ್ಲವೆಂದು ವಾಗ್ದಾನಮಾಡಿ ಮಂತ್ರಾಕ್ಷತಾದಿಗಳನ್ನು ಕೊಟ್ಟು ಅನುಗ್ರಹಿಸಿ ಕಳಿಸಿಕೊಟ್ಟರು. ಆಚಾರ್ಯರೂ ಕ್ರಿಮಿನಲ್ ಕೇಸನ್ನು ಹಿಂತೆಗೆದುಕೊಂಡರು. ಇಷ್ಟಾದರೂ ಅಂತರಂಗದ ಕೋಪ ಹೋಗಲಿಲ್ಲ. 1891 ರಲ್ಲಿ ವಾದಿರಾಜಾಚಾರ್ಯರು ಪ್ರಿಂಟು ಮಾಡಿಸಿರುವ "An ExpoSition" - ವಿವರಣೆ ಎಂಬ ಆಂಗ್ಲ ಪುಸ್ತಕವು ಉತ್ತರಾದಿ ಮಠೀಯರಿಂದ ಅವರಿಗಾಗಿರುವ ತೊಂದರೆಯನ್ನು ಸಂಕ್ಷೇಪವಾಗಿ ವರ್ಣಿಸುತ್ತದೆ. 1896ರಲ್ಲಿ ಜಂಖಂಡಿ ವಾದಿರಾಜಾಚಾರ್ಯರು ಕಾಲವಾದ ನಂತರವೇ ಈ ಕಲಹವು ಸುಪ್ತಪ್ರಾಯವಾಯಿತು. ಶ್ರೀಸತ್ಯಧೀರರು 1906 ರಲ್ಲಿ ವೃನ್ದಾವನಸ್ಥರಾದ ಮೇಲೆ ಕಲಹವು ಪೂರ್ತಿಯಾಗಿಯೇ ಶಾಂತವಾಗಿ ಹೋಯಿತು.

7. ಶ್ರೀಸತ್ಯಜ್ಞಾನತೀರ್ಥರು ಅನಂತರ ಬಂದ ಉತ್ತರಾದಿಮಠದ ಯತೀಶ್ವರರು. ಅವರು ಈ ವಿಷಯದಲ್ಲಿ ಪ್ರವೇಶಿಸಲೇ ಇಲ್ಲ. ಶ್ರೀ ಸತ್ಯಧ್ಯಾನತೀರ್ಥರಂತೂ ಋಜುತ್ವ ವಿಶ್ವಾಸಹೊಂದಿದ್ದ ಶ್ರೀ ಲಕ್ಷ್ಮೀಂದ್ರತೀರ್ಥರೇ ಮುಂತಾದ ಅನೇಕ ತೌಳವರಿಗೂ ನಾನೇ ಮುಂತಾದ ಇತರರಿಗೂ ಗುರುಗಳೇ ಆಗಿದ್ದರು. ಅಭಿನವಾನಂದತೀರ್ಥರೆಂದು ಪಂಡಿತ ಪ್ರವರರಿಂದ ಸ್ತುತರಾದ ಶ್ರೀ ಸತ್ಯಧ್ಯಾನತೀರ್ಥರು ತಮ್ಮ ಶಿಷ್ಯ ಕುಲಾವತಂಸರೂ, ಅಷ್ಟ ಮಠೀಯ ಬಾಲ ಯತಿಗಳಲ್ಲೊಬ್ಬರೂ, ಮೇಧಾವಿರತ್ನರೂ, ಶ್ರೀ ಶಿರೂರುಮಠಾಧೀಶ್ವರೂ ಆದ ಶ್ರೀ ಲಕ್ಷ್ಮೀಂದ್ರತೀರ್ಥರಿಗೆ ಪರಮ ಸೂಕ್ಷ್ಮವೇದಾಂತ ರಹಸ್ಯಗಳನ್ನೆಲ್ಲಾ ತುಂಬ ಪ್ರೀತಿಯಿಂದ ಬೋಧಿಸಿ, ತಮ್ಮ ಕುರುಹಿಗಾಗಿ ಶ್ರೀಲಕ್ಷ್ಮೀಂದ್ರತೀರ್ಥರ ಉಡುಪಿ ಮಠದ ಗರ್ಭಗೃಹದಲ್ಲಿ ಆಚಂದ್ರಾರ್ಕ ವಿರಾಜಿಸಲು ಯೋಗ್ಯವಾದ ಅಧಿಕ ಬೆಲೆಯ ರತ್ನ ಮಂಟಪವನ್ನು ತಾವೇ ಮಾಡಿಸಿ, ನಮ್ಮೆಲ್ಲರ ಸಮಕ್ಷಮದಲ್ಲಿ ಕೊಟ್ಟು ಕಳುಹಿಸಿದರು. ಅವರ ವಾದಿರಾಜಗುರು ಋಜುತ್ವ ಭಕ್ತತ್ವ ನಿಮಿತ್ತದಿಂದ ಅವರಲ್ಲಿ ಅಪಕರ್ಷವೇನನ್ನೂ ತಿಳಿಯದೆ ಉಲ್ಲಾಸಪೂರ್ವಕವಾಗಿ ಆ ಶಿಷ್ಯರಲ್ಲಿ ಶ್ರೀಹರಿ ಸನ್ನಿಧಾಪಕ ಸತ್ಕಾರವನ್ನು ವಿತರಿಸಿದರು. ಶ್ರೀ ಲಕ್ಷ್ಮೀಂದ್ರತೀರ್ಥರಾದರೂ ಸತ್ಯವಿಮರ್ಶಕರಾದ ತಮ್ಮ ಗುರುಗಳ ಅಂತರಂಗಕ್ಕೆ ಅವಿರುದ್ಧವೆಂದು ತಿಳಿದೇ ಋಜುತ್ವಮಂಡನೆಯನ್ನು ರಚಿಸಿದ್ದಾರೆ. ಇಂಥ ಉದಾರ ಪ್ರವೃತ್ತಿ ಪ್ರದರ್ಶನದಿಂದ ಶ್ರೀ ಸತ್ಯಧ್ಯಾನತೀರ್ಥ ಸ್ವಾಮಿಗಳವರಿಗೆ ಶ್ರೀ ವಾದಿರಾಜ ಋಜುತ್ವದಲ್ಲಿ ಅವಿಶ್ವಾಸಾಭಾವವೇ ಸೂಚಿತವಾಗುತ್ತೆ. ಅಂತೂ ಅವರ ಕಾಲದಿಂದ ಈವರಿಗೆ ಈ ವಿಚಾರವು ಮತ್ತೆ ತಲೆ ಎತ್ತಲಿಲ್ಲ.

8. ಆದರೆ 1969 ನೆಯ ಇಸವಿ ಕೃಷ್ಣ ಜಯಂತಿಯಲ್ಲಿ ಶ್ರೀ ಪ್ರಭಂಜನನಾಮಕರು "ಶ್ರೀ ವಾದಿರಾಜ ಋಜುತ್ವ ವಿಚಾರ" ವೆಂಬ ಗ್ರಂಥಾಭಾಸಪದ ಕರ್ತರಾಗಿ ಈ ಪ್ರಸುಪ್ತ ಕಲಹದ ಧೂಳನ್ನು ಮತ್ತೆ ಎಬ್ಬಿಸಿದ್ದಾರೆ. ಹೀಗೆ ಸಮಾಜದ ಶಾಂತಿಗೆ ಭಂಜಕರು, ಶಾಸ್ತ್ರದಲ್ಲಿ ನಿಂದಿತರಾಗಿದ್ದಾರೆ. ಅವರು ಜನರುಗಳಿಗೆ ಪ್ರತ್ಯವಾಯ ಪ್ರಾಪಕ ನಿರ್ಮೂಲ ಸಂದೇಹಗಳನ್ನು ಎಬ್ಬಿಸಿ ಹರಡಿ ಬಿಡುತ್ತಾರೆ. ದೃಷ್ಟಾಂತ: ದೇವರೇ ಇಲ್ಲ, ದೇವತೆಗಳೇ ಇಲ್ಲ ಎಂಬ ಚಾರ್ವಾಕಾದಿ ನಾಸ್ತಿಕರು. ಪ್ರಕೃತ ಈ ಋಜುತ್ವ ವಿರೋಧಿ ಗ್ರಂಥಕಾರರು ರಾಜ ವಿರೋಧಿಗಳಲ್ಲ. ಕಾನೂನು ವಿರೋಧವಾಗಿ ಏನೂ ಬರೆದಿಲ್ಲ. ಆದರೆ ಗುರುರಾಜ ವಿರೋಧಿಗಳು; "ಗುರುರಾಜ" ಎಂದರೆ ಬಾದರಾಯಣರು, ಮಧ್ವಾಚಾರ್ಯರು, ವಾದಿರಾಜರು, ವೇದವೇದ್ಯರು, ರಾಘವೇಂದ್ರ ತೀರ್ಥಾದಿ ಅಪರೋಕ್ಷ ಜ್ಞಾನಿಗಳು. ಅವರು

“ಸಾಕ್ಷೀಹಯಾಸ್ಯೋsತ್ರಹಿ” ಎಂದು ನೋಡಿ ಹೇಳಿದಂತೆ ಜ್ಞಾನ ಚಕ್ಷುಸ್ಸಿನಿಂದಾಗಲೀ, ಆಗಮ ಚತುಸ್ಸಿನಿಂದಾಗಲೀ ಇವರು ಹೇಳಿಲ್ಲ. ಊಹೆಯಿಂದ ಪುಸ್ತಕ ಬರೆದಿದ್ದಾರೆ. ಪ್ರಕೃತ ಈ ಪೂರ್ವಪಕ್ಷ ಗ್ರಂಥದಿಂದ ನಿರ್ಮೂಲ ಸಂದೇಹ ಹೇಗೆ ಬಂದಿದೆ, ಲೋಕಾಪಕಾರ ಏನಾಗಿದೆ ಎಂದರೆ ಈ ಗ್ರಂಥದಲ್ಲಿ ವಾದಿರಾಜ ಋಜುತ್ವವು ಪ್ರತ್ಯಕ್ಷ ವಿರುದ್ಧವು ಎಂದು ಹೇಳಿ ಯಾರೋ ಒಬ್ಬ ಪ್ರಾಚೀನ ಪುರುಷರಿಗೆ ಪ್ರತ್ಯಕ್ಷಾಭಾವವಾಗಿದೆ ಎಂದು ವ್ಯಾಪ್ತಿ ಹೀನ ಅನುಮಾನದಿಂದ ಸಾಧಿಸಲು ಯತ್ನಿಸಿದ್ದಾರೆ. ವಾದಿರಾಜ ಋಜುತ್ವವು ಆಗಮ ವಿರುದ್ಧವು ಎಂದು ಪ್ರತಿಜ್ಞೆ ಮಾಡಿ ಯಾವ ಆಗಮ ವಾಕ್ಯವನ್ನೂ ಉದಾಹರಿಸದೆ ಪರೋದಾಹೃತ ವಾಕ್ಯಗಳು ಕೃತಕಗಳು ಎಂಬ ಶಂಕೆಯನ್ನು ಮಂಡಿಸಿದ್ದಾರೆ. ಅನುಮಾನ ವಿರುದ್ಧವು ಎಂದೂ ಪ್ರತಿಜ್ಞೆ ಮಾಡಿ ಉಪಜೀವ್ಯ ಪ್ರತ್ಯಕ್ಷಾಗಮ ಸಹಾಯ ಹೀನ ಶುಷ್ಕ ಯುಕ್ತಿಗಳನ್ನು ವಿಸ್ತರಿಸಿದ್ದಾರೆ. ಸ್ವಯಂ ಉಪದೇಶದಿಂದ ಅಥವಾ ತಪಸ್ಸಿನಿಂದ ವಾದಿರಾಜರ ಸ್ವರೂಪವನ್ನು ತಿಳಿದಿಲ್ಲ; ಆದರೂ ಪರರು ಹೇಳಿದ್ದು ಸರಿಯಲ್ಲ ಎಂದು ಖಂಡನೆ ಮಾಡುವುದರಲ್ಲೇ ದೀಕ್ಷೆಯುಳ್ಳವರು. ಆದ್ದರಿಂದ ವಿಷಯ ಪ್ರಯೋಜನಾದಿರಹಿತ ಚಾರ್ವಾಕವಾದಕ್ಕೆ ಇವರ ಗ್ರಂಥ ಸದೃಶವಾಗಿದೆ. ನ್ಯಾಯವೈಶೇಷಿಕಾದಿಗಳಿಂದ ಅಂಗೀಕೃತ ಪರತಸ್ತ್ವ ರೀತಿಯನ್ನು ಅವಲಂಬಿಸಿ ಸ್ಪರ್ಧೆಯಿಂದ ಏನೇನೋ ಪ್ರಶ್ನಿಸುತ್ತಾರೆ: ಋಜುತ್ವ ಸಾಧಕ ಪ್ರಮಾಣಗಳು ಕೃತಕಗಳಲ್ಲವೇ? ವೇದವೇದ್ಯಾದಿ ಮುನಿಗಳು ಭ್ರಾಂತರಲ್ಲವೇ? ಮನುಷ್ಯರಾದ ವಾದಿರಾಜಗುರುಗಳಿಗೆ ಋಜುತ್ವವು ಸಂಭಾವಿತವೇ? ವಿಜಯದಾಸಾರ್ಯಾದಿಗಳಿಗೆ ಅಪರೋಕ್ಷ ಜ್ಞಾನಿತ್ವಾದಿಗಳನ್ನು ಒಪ್ಪಿದರೆ ಕಲ್ಪನಾ ಗೌರವ ಬರುವುದಿಲ್ಲವೇ? ಇತ್ಯಾದಿ. ಸಂಸ್ಕೃತ ಭಾಷೆಯಲ್ಲಿ ರಚಿತವಾದ ಅಂತಹ ಗ್ರಂಥವು ಮಂದ ಬುದ್ಧಿಯುಳ್ಳ ಶ್ರೋತೃ ಜನರಲ್ಲಿ ವಿಪರೀತ ಭ್ರಾಂತಿಯನ್ನು ಹುಟ್ಟಿಸಿ ಅವರನ್ನು ಅಜ್ಞಾನ ಸಮುದ್ರಕ್ಕೆ ಮತ್ತು ಹೀನ ಲೋಕಗಳಿಗೆ ತಳ್ಳಿ ಬಿಡುತ್ತದೆ.

**9. 1870-1970** ಹೀಗೆ ಒಂದು ಶತಮಾನಕಾಲ ನಡೆದ ಕಲಹದಿಂದ ಇಷ್ಟು ತಿಳಿದುಬರುತ್ತದೆ. ಯೋಗಿಗಳೂ, ಅಪರೋಕ್ಷಜ್ಞಾನಿಗಳೂ, ತಪಸ್ವಿಗಳೂ ಎಂದು ಪ್ರಸಿದ್ಧರಾದ ಶ್ರೀವೇದವೇದ್ಯರು, ಶ್ರೀವೇದನಿಧಿಗಳು, ಶ್ರೀವಿಶ್ವಪ್ರಿಯರು, ಶ್ರೀರಘಪ್ರವೀರರು; ರಂಗಪ್ಪಾಚಾರ್ಯರು, ಸೇತುಮಾಧವಾಚಾರ್ಯರು ಇಂಥವರಿಗೆ ಸಮಕಕ್ಷರಾದ, ಕೊನೆಗೆ ಜಂಖಂಡಿ ವಾದಿರಾಜಾಚಾರ್ಯರಿಗೆ ಸರಿತೂಗುವ ವಿಮರ್ಶಕರು ಆ ಪಕ್ಷದಲ್ಲಿ ಪ್ರಸಿದ್ಧರಾಗಿ ಬರಲಿಲ್ಲ. ಈ ಪಕ್ಷಕ್ಕಾದರೋ ಕಾಲ ಕಾಲದಲ್ಲಿ ದೊಡ್ಡ ವ್ಯಕ್ತಿಗಳು ಆಶ್ರಿತರಾಗಿ ಬಂದು ತನು ಮನ ಧನಗಳನ್ನು ಸಮರ್ಪಿಸಿ ಸೇವಿಸಿರುತ್ತಾರೆ. ಶ್ರೀ ಸತ್ಯಪರಾಯಣರ ಕರಕಮಲ ಸಂಜಾತರಾದ ಶ್ರೀ ಸಂಕರ್ಷಣ ಒಡೆಯರು, ಹರಿಕಥಾಮೃತ ಸಾರಕ್ಕೆ ದಿವ್ಯ ವ್ಯಾಖ್ಯಾನಕಾರರು, ವಾದಿರಾಜ ಋಜುತ್ವ ದೀಕ್ಷಾಯಕ್ತರು, 1863ನೆ ಇಸವಿಯಲ್ಲಿ ಕರಪುಂಡಿ ಗ್ರಾಮದಲ್ಲಿ ವೃನ್ದಾವನಸ್ಥರಾದ ದೊಡ್ಡ ಜ್ಞಾನಿಗಳು. ಅವರ ಶಿಷ್ಯ ಪ್ರಶಿಷ್ಯರೂ ಹಾಗೆಯೇ ದೀಕ್ಷಾಉಳ್ಳವರಾಗಿ ಬದುಕಿದ್ದಾರೆ. ವ್ಯಾಸರಾಜಮಠದ ಗೌಡಗೆರೆ ವೆಂಕಟರಮಣಾಚಾರ್ಯರು ಪ್ರಸಿದ್ಧ ಪಂಡಿತರು. ಅವರ ತಂದೆಗಳಾದ ಗೌಡಗೆರೆ ವಾಸುದೇವಾಚಾರ್ಯರು ಕವಿಗಳೂ, ಚತುಃಶಾಸ್ತ್ರ ಜ್ಞಾನಿಗಳೂ ಆಗಿದ್ದವರು; ಅವರು ಶ್ರೀ ಸತ್ಯವೀರರ ಕಾಲದವರೇ, ಅವರು ಮಾಡಿರುವ 50 ಶ್ಲೋಕದ ಗುರುರಾಜಸ್ತವನದಲ್ಲಿ ವಾದಿರಾಜರು

ಋಜುಗಳೆಂದೇ ಒಪ್ಪಿದ್ದಾರೆ: "ಅಜಪದಮುಪರಿಷ್ಟಾದ್ದಾತು ಕಾಮೋಹಯಾಸ್ಯೋ ಯತಿವರ ಬಹು ಸೇವಾ ಭಾರಭೃದ್ಭಾಸಮಾನಃ |" ವಸತಿವದನ ಮಧ್ಯೇ ವಾದಿರಾಜಸ್ಯ ದಿವ್ಯೇ ಸರಳ ಸರಸ ಕಾವ್ಯಾರಂಭ ಲಕ್ಷ್ಮೀ ಸಮೇತಃ ॥9॥" ಎಂದು ಕೊಂಡಾಡಿದ್ದಾರೆ **[ಅವರ ವಿಚಾರ ಮಾ.ವಾ.ತ. ಪುಟ 673 ರಲ್ಲಿ ಸ್ವಲ್ಪ ಕೊಟ್ಟಿದೆ.]** ಯಲತ್ತೂರು ಸೇತುಮಾಧವಾಚಾರ್ಯಾದಿ ಅನೇಕ ಪಂಡಿತರು ಶ್ರೀ ಸತ್ಯವೀರರ ಕಾಲದಲ್ಲೇ ಅವರ ನಿಲುವನ್ನು ಖಂಡಿಸಿ ಆಖ್ಯಾನ ಪ್ರಾಮಾಣ್ಯ ಸಮರ್ಥಿಸಿ ಪತ್ರಿಕೆಗಳನ್ನು ಪ್ರಕಟಿಸಿದ್ದಾರೆ. **[ಶ್ರೀ ಸಿ. ಕೃಷ್ಣಸ್ವಾಮಿರಾಯರು ಅದರ ಪ್ರತಿ ಕೊಟ್ಟಿದ್ದಾರೆ. 1884ರಲ್ಲಿ ಮದ್ರಾಸ್ ಮೈಲಾಪುರ ಹಿಂದೂ ಛಾಪಾಖಾನದಲ್ಲಿ ಮುದ್ರಿತ]** ಆ ಪಕ್ಷಕ್ಕೆ ಸಾಧಕವಾಗುವಂತೆ ಯಾವ ಅಪರೋಕ್ಷಜ್ಞಾನಿ ದಾಸರೂ ಹಾಡನ್ನು ರಚಿಸಿಲ್ಲ. ಆಗಮವಿಲ್ಲದಿದ್ದರೂ, ಆಗಮಾನುಸಾರಿಯುಕ್ತಿಯಿಲ್ಲದಿದ್ದರೂ ಆ ಪಕ್ಷದವರು ಸ್ವಾತ್ಮಘಾತಕ ಪ್ರಮಾಣ ಶ್ಲೋಕಗಳಿಂದ, ಎಂದರೆ ತಮಗೇ ಬಾಧಕವಾದ ಶ್ಲೋಕಗಳಿಂದ ಗುರುರಾಜ ಭಕ್ತರನ್ನು ನಿಂದಿಸಿದ್ದಾರೆ. ಆ ಪಕ್ಷದವರು ಉದಾಹರಿಸಿರುವ ಶ್ಲೋಕಗಳು ಇವು: "ಅಂಧಃತಮಃ ಪ್ರವಿಶಂತಿ ಯೇತ್ವವಿದ್ಯಾಮುಪಾಸತೇ| ಇತಿ ಶ್ರುತಿ ವಿರೋಧಾಚ್ಚ ನಾನ್ಯಥೋಪಾಸನಂ ಭವೇತ್ |.... ಯತ್ಕಿಞ್ಚಿದನ್ಯಥಾಸಂಸ್ಥಂ ಅನ್ಯಥಾ ಜ್ಞಾತ ಮಂಜಸಾ | ಅನರ್ಥ ಕಾರಣಂ ಲೋಕೇ..... | ನ ಕಿಂಚದನ್ಯಥಾ ಜ್ಞೇಯಂ ಧ್ಯೇಯಂ ವಾ ತೇನ ಕುತ್ರಚಿತ್ | ತಸ್ಮಾದ್ವಸ್ತು ಯಥಾರೂಪಂ ಜ್ಞೇಯಂ ಧ್ಯೇಯಂ ಚ ಸರ್ವದಾ ॥ ಕಾರಣಂ ಪುರುಷಾರ್ಥಸ್ಯ ನಾನ್ಯಥಾ ಭವತಿ ಕ್ವಚಿತ್ ॥ ಯತ್ಕಿಞ್ಚಿದನ್ಯಥಾ ಸಂಸ್ಥಂ ಅನ್ಯಥಾ ಧ್ಯಾತಮಂಜಸಾ | ಮಹಾ ದೋಷಕರಂ....॥ ಅನು. III 3-29 ಅಸ್ತಿ ಚ ಸಾಂಕರ್ಷಣಂ ಸೂತ್ರಂ ಅನು. IV 13 "ಅಚೇತನಾ ಸತ್ಯಾಽಯೋಗ್ಯಾನ್ಯನುಪಾಸ್ಯಾನ್ಯ ಫಲತ್ವವಿಪರ್ಯಯಾಭ್ಯಾಂ" ಇತಿ - ಇದು ಛಾಂ.ಭಾಷ್ಯ (ಪುಟ 395)ದಲ್ಲೂ ಇದೆ. ಇವೇ ಮೊದಲಾದ ಪ್ರಮಾಣ ವಾಕ್ಯಗಳನ್ನು ಉದಾಹರಿಸಿ 'ವಾದಿರಾಜರು ಋಜುಗಳಲ್ಲ ಅವರು ಸಾಮಾನ್ಯ ದೇವತೆ' ಎಂದು ಸ್ವಬದ್ಧಿ ಕಲ್ಪಿತ ಸಿದ್ಧಾಂತ ಮಾಡಿ ಆಗ್ರಹಾವೇಶಗಳಿಂದ ಕೂಡಿದ ಉಪಸ ಘೋಷಣಾದಿಗಳಿಂದ ಭಕ್ತ ಜನರನ್ನು ದಿಗ್ಭ್ರಾ0ತರನ್ನಾಗಿ ಮಾಡುತ್ತಾರೆ. ಭಯಪಡಿಸಿಯೂ ಬಿಡುತ್ತಾರೆ.

10. ಪೂರ್ವದಲ್ಲಿಯೇ ಜಂಖಂಡಿ ವಾದಿರಾಜಾಚಾರ್ಯರು (1827 1898) ಪುರಾಣ, ಉಪನ್ಯಾಸ, ಕೀರ್ತನ, ನರ್ತನ, ವಾಕ್ಯಾರ್ಥ, ಸ್ವಾಪ್ನವೃನ್ದಾವನಾಖ್ಯಾನದ ಉಪದೇಶ, ಮುದ್ರಣದ ಏರ್ಪಾಡು ಇವೇ ಮೊದಲಾದ ಬಹು ಸಾಹಸಗಳಿಂದ ಪೂರ್ವಪಕ್ಷಿಗಳ ಮೇಲ್ಕಂಡ ಕೂಪಮಂಡೂಕ ದೃಷ್ಟಿಯನ್ನು ಪ್ರಕಟಪಡಿಸಿಬಿಟ್ಟರು. ಹೇಗೆಂದರೆ, ವಾದಿರಾಜ ಋಜುತ್ವ ವಿಷಯದಲ್ಲಿ ಸಮುದ್ರದಂತೆ ಪ್ರಮಾಣ ರಾಶಿಯು ತುಂಬಿದೆ. ಅದನ್ನು ಅರ್ಥಮಾಡಿ ಕೊಳ್ಳುವುದೂ ಅಶಕ್ಯವಲ್ಲ. ಋಜುಯೋಗಿಗಳನ್ನು "ಅವರು ಋಜುಸ್ಥರು" ಎಂದು ಉಪಾಸನೆ ಮಾಡಿದರೆ ಅಂಥ ಉಪಾಸಕರು ಅನ್ಯಥೋಪಾಸಕರಾಗುವುದಿಲ್ಲ. ಆದರೆ ಚತುರ್ಮುಖ ಬ್ರಹ್ಮ ಸದೃಶರಾದ ಅವರನ್ನು ಯಾರೋ ಸಾಮಾನ್ಯ ದೇವತೆ ಎಂದು ನಿಶ್ಚಯಿಸಿ ಉಪಾಸನೆ ಮಾಡಿದರೆ ಅಂಥವರು ಅನ್ಯಥೋಪಾಸಕರಾಗುತ್ತಾರೆ. ಬೃ.ಭಾ III 5 ಪುಟ 71ರಲ್ಲಿ ಹೇಳಲ್ಪಟ್ಟಿದೆ: ಸ್ವಾಪ್ನೋತ್ತಮೇಷು ವಿದ್ವೇಷಾತ್ತಮೋ ನಿಯಮತೋವ್ರಜೇತ್ | ಗುಣಾನಾಮಲ್ಪತಾಜ್ಞಾನಂ ತತ್ ಸ್ತ್ರರಾಗಸ್ತಥೈವಚ| ತತ್ಪ್ರೀತೀಪೇಚಯಾಬುದ್ಧಿಸ್ತ್ರಿವಿಧೋದ್ವೇಷಉಚ್ಯತೇ ॥

| |
|---|
| ಇತ್ಯಾದಿ ಪೈಂಗಿ ಶ್ರುತಿ ಇದೆ. III 5 ಪುಟ 70: ಯೋಪಿವೇದ ಸಮತ್ತ್ವೇನ ಸರ್ವಾನ್ನೀಚೋಚ್ಚತಃಸ್ಥಿತಾನ್ । ಸೋಪಿಯಾತಿತಮೋಘೋರಂ ಯಶ್ಚಸಾಮ್ಯಮುದೀರಯೇತ್। ಎಂದಿದೆ. ಮ.ತಾ.ನಿ. ಅಧ್ಯಾಯ 29. ಶ್ಲೋಕ 42. "ಮನ್ಯತೇ ತಾರತಮ್ಯಂ ತದ್ಭಕ್ತೇಷ್ವನ್ಯತ್ಯೈವಯಃ ಮನೋ ವಾಕ್ತನುಭಿರ್ಯೋವಾತಸ್ಮಿಂಸ್ತದ್ಭಕ್ತ ಏವವಾ । ವಿರೋಧಕೃತ್.... ತಮೋಧಂ ಯಾಂತ್ಯಸಂಶಯಂ" । ಎಂದಿದೆ. ತಥಾಚ ಅನ್ಯಜುತ್ತ್ವ ವಾದಿಗಳೇ ಅನ್ಯಥೋಪಾಸಕರು. |
| ಹಾಗಾದರೆ ಸರ್ವ ಋಜುಗಳನ್ನೂ ನಾವು ಹುಡುಕಿಕೊಂಡು ಉಪಾಸನೆ ಮಾಡಬೇಕು; ಸರ್ವ ಶೇಷಾದಿಪದಯೋಗ್ಯರನ್ನೂ ಹುಡುಕಿಕೊಂಡು ಹೋಗಿ ಉಪಾಸನೆ ಮಾಡಬೇಕು ಎಂದಾಯಿತು; ಆ ಕಾರ್ಯವು ಅಶಕ್ಯವಾದ್ದರಿಂದ ಯಾರಿಗೂ ಮುಕ್ತಿಯಾಗುವ ಸಂಭವವೇ ಇಲ್ಲವೆಂದು ಪ್ರಾಪ್ತವಾಯಿತು ಎಂದರೆ ಹಾಗಿಲ್ಲ. ಅಸಾಧ್ಯವನ್ನಾದರೂ ಮಾಡಿಯೇ ತೀರಬೇಕೆಂದು ಶಾಸ್ತ್ರ ವಿಧಿಯಿಲ್ಲ. "ಓಂ ಸರ್ವ ವೇದಾಂತ ಪ್ರತ್ಯಯಂ ಚೋದನಾದ್ಯ ವಿಶೇಷಾತ್" ಇತ್ಯಾದಿ ಶಾಸ್ತ್ರಗಳಲ್ಲಿ ಸರ್ವ ಶಾಖೋತ್ರ ಹರಿಗುಣಗಳೂ ಉಪಾಸನೆ ಮಾಡಲ್ಪಡಬೇಕು ಎಂದು ವಿಹಿತವಾಗಿದ್ದರೂ ಕೂಡ, ಅಶಕ್ತರ ವಿಷಯದಲ್ಲಿ "ಓಂ ಸಲಿಲವಚ್ಚ ತನ್ನಿಯಮಃ" - ಎಂಬ ಉತ್ತರ ಸೂತ್ರದಲ್ಲಿ ಯಾವ ಅಧಿಕಾರಿಗೆ ಎಷ್ಟು ಗುಣೋಪಾಸನೆಯಲ್ಲಿ ಶಕ್ತಿ ಇದೆಯೋ ಅವನು ಅಷ್ಟನ್ನೇ ಮಾಡಬೇಕು ಎಂದು ಅನುಜ್ಞೆಯನ್ನು ಬಾದರಾಯಣರು ಕೊಟ್ಟದ್ದಾರೆ. ಹಾಗೆಯೇ ಇಲ್ಲಿಯೂ ಸಮಾಧಿಸ್ಥ ಸ್ವೋತ್ತಮ ಗುರುಗಳನ್ನೆಲ್ಲಾ ಹುಡುಕಿನೋಡಿ ಅವರನ್ನು ಎಬ್ಬಿಸಿ ಪೂಜಿಸಬೇಕು ಎಂದು ವಿಧಿ ಇಲ್ಲ. ಆದರೂ ಸಾಧನ ಭೂಮಿಯಲ್ಲಿ ನಮಗೆ ಪರಿಚಿತ ದೇಶದಲ್ಲಿ ಯದೃಚ್ಛೆಯಿಂದ ಪ್ರಾಪ್ತರಾದ, ಸಂವ್ಯವಹಾರ, ಪ್ರಮಾಣ ವಿಶೇಷ, ಉಪದೇಶಾದಿಗಳಿಂದ ಸ್ಪಷ್ಟವಾಗಿ ಜ್ಞಾತರಾದ ಸ್ವೋತ್ರಮ ಮಹಾತ್ಮರನ್ನು, ಅವರು ಅಲ್ಪಸಂಖ್ಯಾಕರಾಗಲೀ, ಬಹು ಸಂಖ್ಯಾಕರಾಗಲೀ, ಯಥಾಶಕ್ತಿ ಸೇವಿಸಲೇಬೇಕು. ಹಾಗೆ ಮಾಡದೆ ಕಂಸನು ಶ್ರೀಕೃಷ್ಣ ಬಲರಾಮರನ್ನು ದ್ವೇಷ ಮಾಡಿದನು. ರಾವಣನು ಹನುಮಂತನನ್ನು ದ್ವೇಷ ಮಾಡಿದನು. ದ್ರುಪದನು ದ್ರೋಣಾಚಾರ್ಯರನ್ನು ತಿರಸ್ಕರಿಸಿದನು. ನಹುಷನು ಸಪ್ತರ್ಷಿಗಳನ್ನೂ, ದುರ್ಯೋಧನನು ಶ್ರೀಕೃಷ್ಣ ಭಾರ್ಗವ ನಾರದಾದಿ ಬಹು ಮಂದಿ ದೊಡ್ಡ. ಉಪದೇಷ್ಟ ಜನರನ್ನೂ ದ್ವೇಷಿಸಿದರುಯ ಕಿಂಚ ನಿರ್ಣಯದಲ್ಲಿ ಪ್ರಮಾಣವಿದೆ. – "ಸ್ವಾತ್ಮೋತ್ತಮೇಶ್ವಥ ಸುರೇಷು ವಿಶೇಷತಶ್ಚ ಸ್ವಲ್ಪೋಪಿದೋಷಉರುತಾಮಭಿಯಾತಿ ಯಸ್ಮಾತ್ ॥ XIV 47 (ಸ್ವೋತ್ತಮರು ತತ್ರಾಪಿ ದೇವತೆಗಳ ವಿಷಯದಲ್ಲಿ ಸ್ವಲ್ಪಾಪರಾಧ ಮಾಡಿದರೂ ಆ ದೋಷವು ಅತ್ಯಧಿಕವಾಗಿ ಬಿಡುತ್ತದೆ.) ಭಾಗವತ V10-26 ನೆಯ ಶ್ಲೋಕವು 'ತಾನಾಗಿಯೇ ಉತ್ತಮರಿಗೆ ಅವಮಾನ ಮಾಡಿದರೆ ಆತನು ಶೂಲಪಾಣಿಯಾದರೂ ಸ್ವಲ್ಪದರಲ್ಲಿಯೇ ನಷ್ಟವಾಗಿ ಹೋಗುತ್ತಾನೆ' ಎಂದು ಹೇಳುತ್ತದೆ. ಆ ಶ್ಲೋಕ ತಾತ್ಪರ್ಯದಲ್ಲೂ "ಸ್ವತೋಮಹದವಜ್ಞನಾದ್ರುದ್ರೋಪ್ಯಾತ್ಮಾನಮಾದಹೇತ್' ಎಂದಿದೆ. ಅದಕ್ಕೆ ಅಶ್ವತ್ಥಾಮರೇ ಸಾಕ್ಷಿ. ಮಧ್ವಶಾಸ್ತ್ರಾನುಸಾರಿಯೇ ಆದ ಆಖ್ಯಾನವೂ ಕೂಡ XVIII 95 ರಲ್ಲಿ "ಸ್ವಲ್ಪಾಪರಾಧೋಪಿ ಮಮ ಮಹಾಪಾಪಾಯ ಕಲ್ಪತೇ ।" ಎಂದೂ XIX 80ರಲ್ಲಿ 'ಮಾಷಮಾತ್ರಂ ಚ ಮದ್ರೋಹೋ ಮಹಾ ದೋಷಾಯ ಕಲ್ಪತೇ ಎಂದೂ |

ಹೇಳುತ್ತದೆ. XI 34-7 ಭಾಗ.ತಾತ್ಪರ್ಯದಲ್ಲಿ ಅಧಿಕ ನೀಚರನ್ನು ಉತ್ತಮರನ್ನಾಗಿ, ಉತ್ತಮರನ್ನು ನೀಚರನ್ನಾಗಿ ತಿಳಿದು ಭಕ್ತಿ ವ್ಯತ್ಯಾಸ ಮಾಡಿದರೆ ಅದು ಮನೋದೋಷವೆನ್ನಿಸುತ್ತದೆ - ಎಂದಿದೆ. ದಿಕ್ಪಾಲಕ ದೇವನಾದ ವರುಣನು ಚತುರ್ಮುಖನನ್ನು ಕುರಿತು ಸ್ವಲ್ಪಾಪರಾಧ ಮಾಡಿದ್ದರಿಂದ ಶಾಪವನ್ನು ಹೊಂದಿ ಶಂತನು ನಾಮಕನಾಗಿ ಹುಟ್ಟಿದನು ಎಂದು XI 16-17 ನಿರ್ಣಯದ ಕಥೆ ಇದೆ. ಹಾಗೆ ಭಾಗವತ ಕಥೆ(VI 17-13)ಯಲ್ಲಿ ಚಿತ್ರಕೇತುರಾಜನು ವಿಮಾನವನ್ನೇರಿ ಆಕಾಶದಲ್ಲಿ ಹೋಗುತ್ತಾ, ಕೆಳಗಿರುವ ರುದ್ರಸಭೆಯನ್ನು ನೋಡಿ ಅಲ್ಲಿ ಶಿವನ ತೊಡೆಯ ಮೇಲೆ ಪಾರ್ವತಿ ಕುಳಿತಿದ್ದುದನ್ನು ನೋಡಿ ಪರೀಕ್ಷಿಸದೆ, 'ಇದೇನಿದು?' ಎಂದು ಮನಸ್ಸಿನಲ್ಲಿ ಜುಗುಪ್ಸೆಯನ್ನು ಹೊಂದಿದದನು. ಅವನ ಮನೋಭಾವವನ್ನು ತಿಳಿದ ಪಾರ್ವತಿಯು "ಅವನು ದಂಡಾರ್ಹನು' ಎಂದು ಹೇಳಿ ಶಪಿಸಿಬಿಟ್ಟಳು. ಆ ಕಾರಣದಿಂದ ಅವನು ವೃತ್ರಾಸರನಾಗಿ ಹುಟ್ಟಿದನು. ಆದ್ದರಿಂದ ಋಜುಗಳನ್ನು ಅಲ್ಪರಾದ ಅನೃಜುಗಳ್ನಾಗಿ ತಿಳಿಯಬಾರದು. ಗಂಧರ್ವರೇ ವಾದಿರಾಜರನ್ನು ಹಾಗೆ ತಿಳಿದು ದುರವಸ್ಥೆಯನ್ನು ಹೊಂದಿದರೆಂದು VII 51-69 ಸ್ವಾ.ವೃ.ಆ.ದಲ್ಲಿ ಕಥೆ ಇದೆ. ಪುನಃ ನಿರ್ಣಯದಲ್ಲಿ XIV 46-47 XXI 86 ಶ್ಲೋಕಗಳಲ್ಲಿ ಇಂದ್ರನ ಮಿತ್ರನಾದ ಪರಾವಹನಾಮಕ ಮರುತನು ಅಕಾಲದಲ್ಲಿ ಇಂದ್ರನ ಭೇಟಿಗೆ ಹೋಗಿ, ಅವನೊಂದಿಗೆ ಅವನಿಗಿಷ್ಟವಿಲ್ಲದಿದ್ದರೂ ಮಾತಾಡುತ್ತಲೇ ಕುಳಿತಿದ್ದು ಅವನಿಗೆ ಸುಖವಿಘ್ನ ಉಂಟುಮಾಡಿದನು. ಇನ್ನೊಮ್ಮೆ ಅವನು ಎದುರಿಗೆ ಬಂದದ್ದನ್ನು ನೋಡಿಯೂ ಎದ್ದು ಸನ್ಮಾನ ಮಾಡಲಿಲ್ಲ. ಆ ದೋಷದಿಂದ (ಉತ್ಕಟ ಪಾಪದಿಂದ) ಆತನು ಪಾಂಡುಜನ್ಮದಲ್ಲಿ ಬಹು ದುಃಖ ವನ್ನನುಭವಿಸಿ ತಪಸ್ಸು ಮಾಡಿ ಸತ್ತರೂ ಸ್ವಯೋಗ್ಯ ಉತ್ತಮ ಲೋಕ ಹೊಂದದೆ ಚಕ್ರವರ್ತಿ ಹರಿಶ್ಚಂದ್ರನ ದೆಸೆಯಿಂದ ನೀಚ ಸ್ಥಾನವನ್ನು ಪಡೆದನು. ಭಾಗVII2-9 ರ ಕಥೆಯೂ ಕೂಡ ರಹಸ್ಯಾರ್ಥ ಬೋಧಕವು. ದೇವತೆಗಳು ಕೇಳಿದ್ದಕ್ಕೆ ಶ್ರೀ ವಿಷ್ಣುವು ಹೇಳುತ್ತಾನೆ: "ನಿರ್ವೈರನೂ, ಪ್ರಶಾಂತನ, ಮಹಾತ್ಮನೂ ಆದ ತನ್ನ ಪುತ್ರ ಪ್ರಹ್ಲಾದನಿಗೆ ಹಿರಣ್ಯಕಶಿಪುವು ಯಾವಾಗ ದ್ರೋಹ ಮಾಡುತ್ತಾನೆಯೋ ಆಗ ಆತನು ಎಷ್ಟು ವರಗಳಿಂದ ಕೊಬ್ಬಿದ್ದರೂ ಕೊಂದುಬಿಡುತ್ತೇನೆ." ಜೀವೋತ್ತಮರಾದ ಋಜುಗಳಿಗೆ ಯಾರು ನೀಚರೆಂದು ತಿಳಿದು ದ್ರೋಹ ಮಾಡುತ್ತಾರೆಯೋ ಅಂತಹ ಪಾಪಿಷ್ಠರನ್ನು ಹರಿಯು ದಂಡಿಸುತ್ತಾನೆಂದು ಕೈಮುತ್ಯದಿಂದ ಸಿದ್ಧವಾಗುವುದಿಲ್ಲವೇ? ಇದೇ ಮುಂತಾದ ಅನೇಕ ಪ್ರಮಾಣಗಳನ್ನು ವಾದಿರಾಜಾಚಾರ್ಯರು ವಾದಗಳಲ್ಲೂ, ಉಪನ್ಯಾಸಗಳಲ್ಲೂ ತೋರಿಸಿದರೆದು ಐತಿಹ್ಯವಿದೆ. ಅವರು ಗ್ರಂಥಗಳನ್ನು ಮಾಡಿದ್ದಾರೆ. ಆದರೆ 'ಗುರುರಾಜ ಋಜುತ್ವ ವಿರೋಧಿ ಮರ್ದನ' ವೇ ಮುಂತಾದ ಆ ಗ್ರಂಥಗಳು ಶೋಧಿತವಾಗಿ ಓದಲಿಕ್ಕೆ ಸುಲಭವಾಗುವಂತೆ ದೊರಕುವುದಿಲ್ಲ.['ಸುಧಾಕರ ಗುರುಗುಣರತ್ನಾವಳೀ' ಎಂಬ ಹೆಸರಿನ ಜಂಖಂಡಿ ಆಚಾರ್ಯರ ಜೀವನ ಚರಿತ್ರೆಯೂ ಮುದ್ರಿತವಾಗಿದೆ. ಷಟ್ಪುರಾಚಾರ್ಯರು ಆರಂಭಿಸಿದ್ದು. ಅವರ ಶಿಷ್ಯನಿಂದ ಸಮಾಪಿತವಾದದ್ದು. ಆ ಗ್ರಂಥದ ನಾಲ್ಕು ಅಧ್ಯಾಯ ಬರೆದುಕೊಂಡಿದ್ದುದನ್ನು ನಾನು ನೋಡಿದೋನು. ಅದು ತುಟಿತ, ಮಧ್ಯೆ ಕೆಲವು ಶ್ಲೋಕಗಳೇ ಇಲ್ಲ, ಆ ಪ್ರತಿ ಶ್ರೀ ಆರ್. ಗೋವಿಂದರಾಯರಲ್ಲಿದೆ. ಎಷ್ಟು ಅಧ್ಯಾಯದ ಪುಸ್ತಕವೋ ಅದೂ ಗೊತ್ತಾಗಲಿಲ್ಲ. ಗ್ರಂಥಾರಂಭದ 30-40 ಶ್ಲೋಕದ ಪತ್ರಗಳು ಹರಿದುಹೋಗಿತ್ತಾದ್ದರಿಂದ ಎಲ್ಲಿ ಯಾವಾಗ ಹುಟ್ಟಿದರೆಂಬುದೂ ಗೊತ್ತಾಗಲಿಲ್ಲ.

ಸ]

ಋಜುತ್ವ ಪಕ್ಷಪಾತಿಗಳಾದ ಜಂಖಂಡಿ ಆಚಾರ್ಯರಿಂದಲೇ ಯುಕ್ತಿಗಳೂ ಪ್ರಯೋಗಿಸಲ್ಪಟ್ಟಿದ್ದವು. ವಿಮತ ವಾದಿರಾಜ ಗುರುಗಳು ಋಜುಗಳೇ, ಪ್ರೇಕ್ಷಾವಚ್ಛಿಖಾಮಣಿಗಳಾದ, ವಾದಿರಾಜ ಮಂತ್ರದ್ರಷ್ಟೃಗಳಾದ, ವೃನ್ದಾವನಸ್ಥ ವಾದಿರಾಜ ಪ್ರತ್ಯಕ್ಷ ದರ್ಶಿಗಳೂ ಆದ ವೇದವೇದ್ಯ ಗುರುಗಳಿಂದ ಗುರುರಾಜ ಪ್ರವೇಶಾನಂತರವೇ ಹಾಗೆ ಉಪದೇಶ ವಿಷಯರಾದ್ದರಿಂದ, "ಯಂಯಥಾ ಪ್ರೇಕ್ಷಾವದುಪದಿಷ್ಟಃ ಸತಥೈವ ಯಥಾ ಶ್ರೀ ರಾಘವೇಂದ್ರಸ್ವಾಮಿನಃ ಪ್ರಹ್ಲಾದ ಏವ, ಟೀಕಾಚಾರ್ಯಾಃ ಇಂದ್ರ ಏವ' ಎಂದು ವ್ಯಾಪ್ತಿ ಇದೆ ಇತ್ಯಾದಿ, ಇತ್ಯಾದಿ. "ವಿಪಕ್ಷೇ ಹೇತೋಶ್ಛಿತಿಃ' ಎಂಬ ಅನುಕೂಲ ತರ್ಕ ಇದೆ. ಶ್ರೀ ವೇದವೇದ್ಯರು ಅಪರೋಕ್ಷ ಜ್ಞಾನಿಗಳೇ ಅಲ್ಲ [ವಾ.ಗು.ಚ. VII 1-4 ಶ್ಲೋಕ ನೋಡಿ] ಮೂಢರೆಂದು ಒಪ್ಪಬೇಕಾಗುತ್ತದೆ. - ಇತ್ಯಾದಿ ಬಾಧಕವಿದೆ. ಯಾರು ಮಂತ್ರದ್ರಷ್ಟರೋ ಅವರು ಅಪರೋಕ್ಷ ಜ್ಞಾನಿಗಳು ಎಂಬ ವ್ಯಾಪ್ತಿ ಇದೆ.

ಬ್ರಹ್ಮಾಂಡ ಪುರಾಣವಚನವೂ, ವಿಜಯದಾಸಕೃತ ಪದ್ಯವೂ ಮತ್ತು ಇತರ ವಚನಗಳೂ ಕೂಡ ವಾದಿರಾಜಾಚಾರ್ಯರಿಂದ ಉದಾಹರಿಸಲ್ಪಡುತ್ತಿದ್ದವೆಂದು ಶ್ರೀಶ್ರೀಪ್ರದ್ಯುಮ್ನತೀರ್ಥರು ಕಥೆ ಕೇಳಿದ್ದರಂತೆ - ಹಾಗೆ ವಿದ್ಯಾಗುರುಗಳು ಪೆರಿಕೊಳಂ ರಾಮಚಂದ್ರಾಚಾರ್ಯರಿಂದ ಪಾಠಕಾಲದಲ್ಲಿ ಆಗಿಂದಾಗ್ಗೆ ಜಂಖಂಡಿ ಆಚಾರ್ಯರ ಪ್ರಶಂಸೆ ನಮಗೆ ಶ್ರುತವಾಗುತ್ತಿತ್ತು. ಇನ್ನೊಬ್ಬರು ನಮ್ಮ ಗುರುಗಳು ಕಾಶಿಯಲ್ಲಿ ಇಪ್ಪತ್ತು ವರ್ಷವಿದ್ದವರು, ಶ್ರೀ ರಾಘವೇಂದ್ರಾಚಾರ್ಯ ನಾಮಕರು, ಚಿತ್ರದುರ್ಗದೇಶದವರು. ಅವರು ಜ0ಖಂಡಿ ಆಚಾರ್ಯರ ಸಂಗಡ ಕಾಶಿಯಿಂದ ಬದರೀಯಾತ್ರೆಗೆ ಅವರೊಡನೆ ಹೋಗಿ ಕಾಶ್ಮೀರಸಭೆ ಚರ್ಚೆಯಲ್ಲಿ ಭಾಗವಹಿಸಿದ್ದರು; ಅವರು ವಾದಿರಾಜಾಚಾರ್ಯರು ವಿಜಯದಾಸರ ಪದವನ್ನು ಆಗಿಂದಾಗ್ಗೆ ಹಾಡುತ್ತಿದ್ದರೆಂದೂ ಹೇಳುತ್ತಿದ್ದರು.

ವಾದಿರಾಜಾಚಾರ್ಯರು ಶೂರರು, ಪಂಡಿತರು, ವಾಗ್ಮಿಗಳೂ ಹೌದು. ಋಜುತ್ವ ಪ್ರಚಾರಾರ್ಥವಾಗಿ ದತ್ತ ಸರ್ವಸ್ವರು. ಅವರಾದ ಮೇಲೆ ಆ ರೀತಿ ಋಜುತ್ವ ದೀಕ್ಷೆಯಿಂದ ಸರ್ವಸ್ವವನ್ನು ಗುರುರಾಜರಿಗಾಗಿ ಮುಡುಪಾಗಿಟ್ಟವರೆಂದರೆ ಬೆಳಗಾಂವಿನ ವೆಂಕಣ್ಣಾಚಾರ್ಯರೆಂದು **(1859-1956)** ಪ್ರಸಿದ್ಧರಾದವರು. ದೇವಾಲಯಾದಿ ನಿರ್ಮಾತೃಗಳು, ಸೋದಾಪುರಿಯಲ್ಲಿ ಗುರುರಾಜರ ಪ್ರೀತಿಗೋಸ್ಕರ ಮಠ ಜೀರ್ಣೋದ್ಧಾರಾದಿಗಳನ್ನು ಮಾಡಿಸಿದವರು. ಉತ್ಸವಕ್ಕೋಸ್ಕರ ರಜತದ ಪಂಚಾವೃನ್ದಾವನ ಸಮರ್ಪಕರು. ಇನ್ನೂ ಅನೇಕ ಭಕ್ತರಿದ್ದಾರೆ. ಏತಕ್ಕೆ ಇವರ ವಿಷಯವನ್ನೆಲ್ಲಾ ಹೇಳಬೇಕೆಂದರೆ, ಇಷ್ಟು ಜನರಲ್ಲಿ ಯಾರೊಬ್ಬರೂ ಋಜುತ್ವೋಪಾಸನೆ ಮಾಡಿ ಪಶ್ಚಾತ್ತಾಪವನ್ನು ಹೊಂದಿಲ್ಲ. ಪ್ರತ್ಯುತ ಯಥಾಶಕ್ತಿ, ಸೇವಾನುರೂಪವಾಗಿ ಸಿದ್ಧಿರೂಪ ಫಲವನ್ನೇ [ಋಜುತ್ತೋಪಾಸಕರಾದ ನಮ್ಮ ಮಿತ್ರರೊಬ್ಬರು ಉನ್ಮಾದಗ್ರಸ್ತರಾಗಿ ವೈದ್ಯರೂ ಕೈ ಬಿಟ್ಟಿದ್ದ ತಮ್ಮ ಒಬ್ಬ ನೆಂಟರಿಗೆ ಮೃತ್ತಿಕಾಲೀಪನ ಪ್ರಾಶನ ಸೇವೆಮಾಡಿಸಿ ಆ ರೋಗಿಯನ್ನು ನೀರೋಗಿಯನ್ನಾಗಿ ಮಾಡಿರುವುದು ನಮಗೆಲ್ಲಾ ಪ್ರತ್ಯಕ್ಷವಾಗಿದೆ. ಅವರಿಬ್ಬರೂ ತುಮಕೂರಿನಲ್ಲಿ ಸುಖವಾಗಿದ್ದಾರೆ. ಈ ಅಧ್ಯಾಯಗಳ ಕೆಲವು ಚಾರಿತ್ರಿಕ

ಸಂಗತಿಗಳು ಶ್ರೀಯುತ ಆರ್.ಗೋವಿಂದರಾಯರು ತುಂಬ ಕಷ್ಟಪಟ್ಟು ಹುಡುಕಿ ಬರೆದುಕೊಂಡು ಬಂದಿದ್ದ ಗೋಪ್ಯ ರೆಕಾರ್ಡುಗಳ ಸೂಕ್ಷ್ಮವಿಮರ್ಶೆಮಾಡಿ ಬರೆಯಲ್ಪಟ್ಟಿವೆ. ಅವುಗಳನ್ನು ಈ ವಿಮರ್ಶೆಯಲ್ಲಿ ಉಪಯೋಗಿಸಿಕೊಳ್ಳಲು ಅಪ್ಪಣೆ ಕೊಟ್ಟಿದ್ದಕ್ಕಾಗಿ ಅವರಿಗೆ ನಾನು ಕೃತಜ್ಞನಾಗಿದ್ದೇನೆ.] ಹೊಂದಿದ್ದಾರೆ. ಆದ್ದರಿಂದ ಅನೃಜುತ್ವವಾದವು ಪ್ರತ್ಯವಾಯ ಪ್ರಾಪಕವೆಂದು ನಿಶ್ಚಯಿಸಲ್ಪಡುತ್ತದೆ. ಆ ವಾದವು ಪ್ರಮಾಣಹೀನವು ಮತ್ತು ಪ್ರಮಾಣವಿರುದ್ಧವು.

**ಹನ್ನೊಂದನೆಯ ಅಧ್ಯಾಯವು ಮುಗಿಯಿತು.**

## ಅಧ್ಯಾಯ 12

### ಅಷ್ಟಮ ಪ್ರಮಾಣ-ಅನುಮಾನಗಳು

1. ಕೊಚ್ಚೀರಾಜರ ಕಥೆಯೂ ವಾದಿರಾಜಗುರುಗಳ ಋಜುತ್ವ ವಿಷಯದಲ್ಲಿ ಪೋಷಕ ಪ್ರಮಾಣವಾಗಿಯೇ ಇದೆ. ಇದಕ್ಕೆ ಆಧಾರ ಕೊಚ್ಚಿ ರಂಗಪ್ಪಾಚಾರ್ಯರ ವಿಶ್ವಪ್ರಿಯ ಲೀಲಾವಿಲಾಸ । 14. "ತವಾ ಕೊಚ್ಚಮಹೀಪಾಲಃ ಸರ್ವತಂತ್ರ ವಿಶಾರದಃ | ಭೇಜೇ ಪೂರ್ಣತ್ರಯೀನಾಥಂ ಮೋಕ್ಷಮಾರ್ಗ ವಿವತ್ಸಯಾ ॥14॥ ತದ್ಭಕ್ತಿಸಾರ ಸಂತುಷ್ಟಃ ಸ್ವಪ್ನೋಽವದತ್ಪ್ರಭುಂ | ವಾದಿರಾಜೋಕ್ತ ಪದ್ಧತ್ಯಾ ಭಜನ್ಮಾಂ ಮುಕ್ತಿಮೇಷ್ಯಸಿ ॥ [ಸ್ವಾ.ವೃಂ.ಆ. VII 77-78ರಲ್ಲಿ ಸಮಾಖ್ಯಾಶ್ಲೋಕವಿದೆ "ಸಿದ್ಧಮದ್ಧರ್ಮಪದ್ಧತ್ಯಾ ಶ್ರದ್ಧಾವಾನ್ ಮಧುಸೂದನಂ । ಆರಾಧಯ" ...... ಎಂದು ಗುರುರಾಜರ ವಚನವಿದೆ.] 7-15 ಇತಿ ಸ್ವಾಪ್ನ ವಚಃ ಶ್ರುತ್ವಾ ಭೂಪಾಲೊ ವಿಸ್ಮಿತೋಭೃಶಂ | ಭಟಾನ್ ಸಂಪ್ರೇಷಯಾಮಾಸ ಗುರುರಾಜ ಮಠಂಪ್ರತಿ ॥16॥ ವಿಶ್ವೇಶಮೃನಿರಾಗತ್ಯ ವಿಷ್ಣುದೀಕ್ಷಾ ಪ್ರವರ್ತಕಂ | ಭೂಪಂ ಚಕಾರ ಸೋಪ್ಯಾಸೀನ್ಮಧ್ವಸಿದ್ಧಾಂತ ಪಾರಗಃ" ॥17॥ (ಅರ್ಥ: ಆಗ ಕೊಚ್ಚಿ ರಾಜನು ಸರ್ವಶಾಸ್ತ್ರವಿಶಾರದನಾಗಿದ್ದನು. ಅವನು ತನ್ನ ಅರಮನೆಯಲ್ಲಿ ಪ್ರತಿಷ್ಠಿತವಾಗಿದ್ದ 'ಪೂರ್ಣತ್ರಯಿನಾಥ' ನಾಮಕ ವೇ ವ್ಯಾಸಸ್ವಾಮಿಯನ್ನು ತನಗೆ ಮೋಕ್ಷಮಾರ್ಗವನ್ನು ತೋರಿಸಬೇಕೆಂದು ಪ್ರಾರ್ಥಿಸಿಕೊಂಡು ಸೇವಿಸಿದನು. ಭಕ್ತಿಯಿಂದ ಮಾಡಿದ ಅವನ ಸೇವೆಗೆ ಸಂತುಷ್ಟನಾಗಿ ಶ್ರೀಹರಿ ರಾಜನಿಗೆ ಸ್ವಪ್ನದಲ್ಲಿ ದರ್ಶನಕೊಟ್ಟ, "ವಾದಿರಾಜರು ಹೇಳಿರುವ ಮಾರ್ಗದಲ್ಲಿ ನನ್ನನ್ನು ಭಜಿಸಿದರೆ ಮುಕ್ತಿಯನ್ನು ಹೊಂಮವೆ' ಎಂದ ಹೇಳಿದನು. ಈ ಮಾತನ್ನು ಕೇಳಿ ಎದ್ದು, ಆಶ್ಚರ್ಯಭರಿತನಾದ ರಾಜನು ಗುರುರಾಜರ ಮಠಕ್ಕೆ ತನ್ನ ಭಟರನ್ನು ಕಳಿಸಿದನು. ಆಗ ಸೋದೆ ಮಠದ ಶ್ರೀ ವಿಶ್ವೇಶತೀರ್ಥರು ಕೊಚ್ಚಿಗೆ ಬಂದು ರಾಜನಿಗೆ ವಿಷ್ಣು ದೀಕ್ಷೆಯನ್ನು ಕೊಟ್ಟು ಮಧ್ವಮತವನ್ನು ಉಪದೇಶ ಮಾಡಿದರು. ಆ ರಾಜನು ಅಭ್ಯಾಸ ಮಾಡಿ ಕೊಂಡು ಮಧ್ವಸಿದ್ಧಾಂತದಲ್ಲಿ ದೊಡ್ಡ ಜ್ಞಾನಿಯಾದನು.) ಮಧ್ವ ಸಿದ್ಧಾಂತದಲ್ಲಿ ಜ್ಞಾನಿಯಾದನು ಎಂದಷ್ಟೇ ಅಲ್ಲ. 'ಪೂರ್ಣತ್ರಯೀಶತಕ' ಎಂಬ ಹೆಸರಿನ ಕಾವ್ಯವನ್ನೂ ರಚಿಸಿದ್ದಾನೆ. ಇದೆಲ್ಲಾ ಕ್ರಿಸ್ತಾಬ್ದ 1790-1792 ವರ್ಷಗಳ ಮಧ್ಯದಲ್ಲಿ ನಡೆದಿದೆ ಎಂದು ನಿಶ್ಚಯಿಸಬಹುದು.

ಶ್ರೀಹರಿಯು ಮಧ್ವರಾಜರ ಪದ್ಧತಿಯಿಂದಲೇ ಅಪರೋಕ್ಷಜ್ಞಾನ ಕೊಟ್ಟು ಮುಕ್ತಿ ಕೊಡುತ್ತಾನೆ, "ಆನಂದತೀರ್ಥಮತಮುಜ್ಜಿತ ದೋಷಜಾತಂ ಸ್ವಾನಂದದಾಯಿಶಿಥಿಲೀಕೃತಮತ್ತಮಾಯಿ। ಮಾನೌಘಶೋಭಿ

ಮಮದುರ್ಜನ ಪುಂಜತೋಽಭೀಃ ಯೇನದೃಶೀ ಮತಿರಭೂತ್ಕವಿತೋಲ್ಲಸದ್ಭೂಃ" ಎಂದು ರುಕ್ಮಿಣೀಶ ವಿಜಯದಲ್ಲಿ ವಾದಿರಾಜ ಗುರುಗಳಿಂದಲೇ ಹಾಗೆ ಅಂಗೀಕರಿಸಲ್ಪಟ್ಟಿದೆ. ಅಂಥ ಮಧ್ವ ಪದ್ಧತಿಯು ಶೀರೂರು ಮಠದಲ್ಲಿದೆ. ಇತರ ಮಠಗಳಲ್ಲೂ ಇದೆ. ಸೋದೆಮಠದ ಶ್ರೀವಿಶ್ವೇಶತೀರ್ಥ ಸ್ವಾಮಿಗಳೂ ಕೂಡ ಸುಮಾರು 1790ರಲ್ಲಿ ಕೊಚ್ಚಿ ರಾಜಧಾನಿಗೆ ಹೋಗಿ ಆ ರಾಜನಿಗೆ ಮಾಧ್ವ ಪದ್ಧತಿಯನ್ನೇ ಉಪದೇಶ ಮಾಡಿದರು. ಅದೇ ದ್ವೈತ ಮತವೆಂದು ಕರೆಯಲ್ಪಡುತ್ತದೆ. ಹೀಗಿರುವಲ್ಲಿ ಶ್ರೀದೇವರು ರಾಜನಿಗೆ ಬೇರೇ ಮಠದ ಹೆಸರು ಹೇಳದೆ "ಗುರುರಾಜರ ಪದ್ಧತಿಯನ್ನು ಹಿಡಿ" ಎಂದು ಹೇಳಿದ್ದರಿಂದ ಹರಿವಾಯು ಭಕ್ತಿ ಪೂರ್ವಕವಾದ ಮಧ್ವ ಶಾಸ್ತ್ರಜ್ಞಾನವು ಗುರುರಾಜ ಋಜುತ್ವ ಜ್ಞಾನ ಪ್ರಯೋಜ್ಯ ಗುರುರಾಜ ಭಕ್ತಿ ಸಹಕೃತವಾಗಿ ಪ್ರಾಪ್ತವ್ಯೈರೇನೇನೇ ಈ ಕಾಲದಲ್ಲಿ ನಿರ್ವಿಘ್ನ ಸಾಧನೆಯನ್ನುಂಟು ಮಾಡುತ್ತದೆ ಎಂದು ಸೂಚಿತವಾಗುತ್ತದೆ. ಅದೇನೇ ಆಖ್ಯಾನೋಕ್ತ ದೇವಕಾರ್ಯವು. (ಸ್ವಾ.ವೃಂ.ಆ. III 97) ಅದರ ನಿಷ್ಪತ್ತಿಗಾಗಿಯೇ ಅವತಾರವು, ಆಖ್ಯಾನ ಪ್ರಕಾಶನವು, ವೃನ್ದಾವನದಲ್ಲಿ ವಿಶೇಷ ಸನ್ನಿಧಿ. ಅದನ್ನೇ ಸೋದೆಮಠದ ಸ್ವಾಮಿಗಳವರು ರಾಜನಿಗೆ ಹೇಳಿಕೊಟ್ಟಿದ್ದರಿಂದ ಅವನು ಕೃತಾರ್ಥನಾದನು.

ಮುಂದೆ ವೃನ್ದಾವನಾಚಾರ್ಯರೂ ಕೂಡ 1822 ರ ಅನಂತರ ಕೊಚ್ಚಿಗೆ ಹೋಗಿ ಆಗಿನ ಕಾಲದ ಕೊಚ್ಚಿ ರಾಜನಿಗೆ ಉಪದೇಶ ಮಾಡಿದ್ದಾರೆ. ಆ ರಾಜ ಮಾತ್ರವಲ್ಲ, ರಾಜನ ಬಂಧುಗಳೂ ಕೂಡ ಅವರ ಉಪದೇಶದಿಂದ ಮಧ್ವಶಾಸ್ತ್ರ ಸಂಪನ್ನರಾಗಿ, ವಾದಿರಾಜ ಋಜುತ್ವದಲ್ಲಿ ಶ್ರದ್ಧಾ ಯುಕ್ತರೂ ಆದರು. ಹಾಗೆ ವೃನ್ದಾವನಾಚಾರ್ಯರ ಕಾಲಾನಂತರದಲ್ಲಿ, ಮುನಪಕ್ಷುಗಳಿಗೆ ವಾದಿರಾಜ ಗುರುಸೇವೆಯೂ, ಅವರ ಅನುಗ್ರಹವೂ ಅವಶ್ಯಕವೆಂದು ಪ್ರಖ್ಯಾತಿ ಬಂದುಬಿಟ್ಟಿದೆ.

2. ಇನ್ನೊಂದು ಅನುಮಾನವೂ ಭಾಗವತಶ್ಲೋಕ ಸೂಚಿತವಾಗಿದೆ : "ಪ್ರಾಯೇಣ ದೇವಮುನಯಃ ಸ್ವವಿಮುಕ್ತಿ ಕಾಮಾಃ ಮೌನಮ್ ಚರಂತಿ ವಿಜನೇನ ಪರಾರ್ಥನಿಷ್ಠಾಃ । ನೈತಾನ್ವಿಹಾಯ ಕೃಪಣಾನ್ವಿಮುಮುಕ್ಷ ಏಕೋ ನಾನ್ಯಂತ್ವದಸ್ಯ ಶರಣಂ ಭ್ರಮತೋಽನುಪಶ್ಯೇ ।" ಎಂದು ಭಾಗ VII 9-44 ಪ್ರಹ್ಲಾದ ವಚನವಿದೆ. ಅದಕ್ಕೆ ಭಾಗ. ತಾ. "ಆಶ್ರಿತೇಷು ಕೃಪಾಕಾರ್ಯಾ ವಿಶೇಷಾತ್ತಾತ್ವಿಕೈಃ ಸುರೈಃ । ಮುನಿಭಿಶ್ಚ ತಥಾ ಕೈಶ್ಚಿತ್ಕೈಶ್ಚಿತ್ಕಾರ್ಯಾಽಖಿಲೇಷ್ವಪಿ । ತಥಾಪಿ ತಾತ್ವಿಕಸುರ ಕೃಪಾವಿಷಯತಾಂಗತಾಃ । ಏತಏವ ವಿಮುಚ್ಯಂತೇ ತದನ್ಯೇನ ಕಥಂಚನ" ॥ ಎಂದಿದೆ. ಪ್ರಹ್ಲಾದನು ನಾರದರ ಅನುಗ್ರಹದಿಂದ ಅಗ್ನಿ ಸಾಮ್ಯವನ್ನು ಹೊಂದಿದನು. ವಾಯುದೇವರಿಂದ ಆವಿಷ್ಟನೂ ಆದನು. ಪೂರ್ವೋಕ್ತ ಭಾಗವತ ವಚನಾನುಸಾರ ಅವನು ತನ್ನ ಆಶ್ರಿತ ಜನರ ಉದ್ಧಾರಕ್ಕೋಸ್ಕರ ಪುನಃ ಪುನಃ ಅವತರಿಸಿಯೂ ಇದ್ದಾನೆಂದು ಐತಿಹ್ಯವಿದೆ. ವಿಜಯದಾಸ, ಜಗನ್ನಾಥ ದಾಸಾರ್ಯಾದಿಗಳ ಕೀರ್ತನೆಗಳಿವೆ.

ಹೀಗೆಯೇ ಲಾತವ್ಯದೇವರು ವಾದಿರಾಜ ಮುನಿಗಳಾಗಿ ಅವತರಿಸಿ ದೇವಕಾರ್ಯಗಳನ್ನು ಸಾಧಿಸುತ್ತಾರೆ. ವಿಪ್ರ, ಶೇಷ, ಸೀತಾಪತಿ, ವ್ಯಾಸಭಕ್ತ (ಲಕ್ಷ್ಮೀಪತಿ) ಮುಂತಾದ ಸ್ವಾಶ್ರಿತ ಜನರನ್ನು ರಕ್ಷಿಸುತ್ತಾರೆಂದು ನಿಶ್ಚಯಿಸಿದರೆ ಪ್ರಮಾಣ ವಿರೋಧವೇನೂ ಇಲ್ಲ. [ಸ್ವಾ.ವೃಂ.ಆ. X 17: "ತ್ರೀನುದ್ದಿಶ್ಯಮಯಾಪ್ರೋಕ್ತಂ ತ್ವಾಂ ವಿಶೇಷಾನ್ನ ಸಂಶಯಃ ।" X 41 "ಇದಂತು ಮದ್ವೈಭವಂ ತು ಮದ್ಭಕ್ತೇನ ತು ಕೀರ್ತಿತಂ । ಶೃಣೋತಿ ಮದ್ಭಕ್ತಿರತೋ ಮದ್ಭೂತಿಂ

ಲಭತೇನರಃ" ಎಂದಿದೆ. ಪುರಾಣ ವಾಕ್ಯಗಳೂ ಸಾಧಕವಾಗಿವೆ, ಅಧಿಕ ಪ್ರಮಾಣ, ಉದಾಹರಣೆಗಳು ಪ್ರಥಮಾಧ್ಯಾಯದಲ್ಲಿವೆ.] ವಾ.ಗು.ಚ. ಗ್ರಂಥೋದಾಹೃತ ಪ್ರಮಾಣಗಳು, ದಾಸರ ಹಾಡುಗಳು, ಆಖ್ಯಾನವೂ ಸಹ ಸಾಧಕಗಳು. ವಿಜನೇನ ಏಕಾಂತಧ್ಯಾ ನದಿಂದ, ಮೌನಂಚರಂತಿ = ಭಗವದ್ಗುಣ ಮನನ ಮಾಡುತ್ತಾರೆ ಎಂದಿರುವುದರಿಂದ, ಸ್ವಸ್ವರೂಪವನ್ನು ಅಲ್ಪರಿಗೂ ಅಪಕ್ವರಿಗೂ ತಿಳಿಸದೆ, ಉತ್ತಮರಾದ ಹೆಚ್ಚು ಭಕ್ತಿಮಾಡುವ ಅಧಿಕಾರಿಗಳ ಉಪಕಾರಕ್ಕೋಸ್ಕರ ಹರಿಗುಣ ಚಿಂತನರೂಪ ಉಪಾಸನೆ ಮಾಡುತ್ತಾರೆಂದು ಅರ್ಥ. ಪ್ರಾಯಿಕವಾಗಿ ತಾತ್ವಿಕದೇವತೆಗಳೂ ಅಥವಾ ತತ್ಸದೃಶರೂ ಈ ಕಾರ್ಯ ಮಾಡುತ್ತಾರೆ. ಅನ್ಯರು ಹಾಗೆ ಉಪಕಾರ ಮಾಡಿದರೂ ಅಧಿಕಾರಿಗಳಿಗೆ ಪ್ರಯೋಜನವಾಗುವುದಿಲ್ಲವೆಂದು ತಾತ್ಪರ್ಯದಲ್ಲಿಯೇ ಇದೆ. ಇಂತಹ ತಾತ್ವಿಕ ದೇವತೆಗಳಂಥ ದೊಡ್ಡವರು ತಮ್ಮ ಸೇವಕರು ತಮ್ಮನ್ನೇ ಅನ್ಯಥೋಪಾಸನೆಮಾಡಿ ನರಕಕ್ಕೆ ಹೋಗುವಂತೆ ಪ್ರೇರಿಸುತ್ತಾರೆಯೇ? ಹಾಗೇನಾದರೂ ಅನ್ಯಥೋಪಾಸನೆಯಲ್ಲಿ ಸ್ವಭಕ್ತರು ಪ್ರವರ್ತಿಸಿದರೆ ಅತೀಂದ್ರಿಯವಾದ ತಮ್ಮ ಶಕ್ತಿಯ ಮೂಲಕ ಸ್ವಪ್ನ ಸೂಚನಾದಿಗಳ ಮೂಲಕ ನಿಷೇಧಿಸದೇ ಇರುತ್ತಾರೆಯೇ? ತಮ್ಮಲ್ಲಿ ಭಕ್ತಿಹೀನರಾಗಿ ಅಯೋಗ್ಯರಾಗಿ ತಮ್ಮನ್ನು ಅನೃಜುಗಳೆಂದೂ, ಜಯತೀರ್ಥರಷ್ಟು ಯೋಗ್ಯತೆಯನ್ನು ಹೊಂದಿದವರಲ್ಲವೆಂದೂ ನಿಶ್ಚಯಿಸಿದವರನ್ನು ಉಪೇಕ್ಷೆಮಾಡಿದರೂ, ತಮ್ಮ ಮಾಹಾತ್ಮ್ಯಯನ್ನು ತಿಳಿದ ತಮ್ಮ ಭಕ್ತರಾಗಿರುವ ಯಥಾರ್ಥೋಪಾಸನೆಯನ್ನೇ ಆಕಾಂಕ್ಷಿಸುತ್ತಿರುವ ಸಜ್ಜನರನ್ನು ಉಪೇಕ್ಷಿಸುವುದೇ ಇಲ್ಲ. ಆದ್ದರಿಂದ ಇಷ್ಟು ದೀರ್ಘಕಾಲ, ಇಷ್ಟು ಸಂಖ್ಯಾತರಾದ ಭಕ್ತರು ತಮ್ಮನ್ನು ಋಜುವೆಂದು ಉಪಾಸನೆಮಾಡಿದರೂ, ಅದರಲ್ಲೂ ತಮ್ಮ ಮಠೀಯ ಯತಿಗಳೂ, ನೌಕರರೂ ಮತ್ತು ಶಿಷ್ಯರೂ ಉಪಾಸನೆ ಮಾಡುತ್ತಿದ್ದರೂ ಅವರು ನಿಷೇಧ ಮಾಡದೇ ಸತ್ಫಲಗಳನ್ನು ಕೊಟ್ಟು ಪ್ರೇರಿಸುತ್ತಿರುವುದು "ಹೌದು ನನ್ನನ್ನು ಋಜುವನ್ನಾಗಿಯೇ ತಿಳಿ" ಎಂದು ಋಜುತ್ವ ಸದ್ಭಾವ ಸೂಚಕ ಉಪದೇಶವೇ ಸರಿ. ಇದರ ಮೇಲೆ ಲಕ್ಷ್ಮೀಪತಿ, ವೇದವೇದ್ಯರು ಇಂತಹ ಋಜುತ್ವಧ್ಯಾತೃಗಳಿಗೆ ಎಲ್ಲರಿಗೂ ಅವರು ತಿಳಿಯುವಂತೆ ಅನುಗ್ರಹವನ್ನೆ ಮಾಡಿರುವುದು ಋಜುತ್ವಾಂಗೀಕಾರಕ್ಕೆ ಸಮಾನವೇ. ಇನ್ನೂ ಸ್ಪಷ್ಟವಾಗಿ ನೂರಾರು ಆಖ್ಯಾನ ವಚನಗಳು 'ವಾದಿರಾಜರು ಋಜುಗಳು' ಎಂದು ಕೊಂಡಾಡುತ್ತಿರುವುದು ಪೂರ್ಣನಿಶ್ಚಯವನ್ನೇ ಹುಟ್ಟಿಸುತ್ತವೆ. ಹೀಗಿರುವುದರಿಂದ ಈ ಪೂರ್ವೋಕ್ತ ಅನುಮಾನಕ್ಕೆ ಅನುಕೂಲ ತರ್ಕವೂ ಸಿಕ್ಕಿದಂತಾಯಿತು. ಹೇಗೆಂದರೆ ತಮ್ಮಲ್ಲಿ ಋಜುತ್ವವೇ ಇಲ್ಲದೆ ಹೋಗಿದ್ದರೆ ಆ ದೇವಮುನಿಗಳಾದ ವೃನ್ದಾವನಸ್ಥ ವಾದಿರಾಜ ಸ್ವಾಮಿಗಳು ತಮ್ಮನ್ನು ಋಜುವೆಂದು ನಿಶ್ಚಯಿಸಿ, ಭಕ್ತಿಯಿಂದ ಉಪಾಸನೆ ಮಾಡುತ್ತಾ, ಸಂಸಾರ ಕ್ಲೇತಪ್ತರಾಗಿ ಸಂಕಟ ಪಡುತ್ತಿರುವ ಸೇವಕಜನರನ್ನು ಉಪೇಕ್ಷೆಯನ್ನೇ ಮಾಡಿ, ನಿಷ್ಕರುಣೆಯಿಂದ ಹಾಗೆ ಮಾಡಬೇಡವೆಂದು ಸೂಚನೆಯನ್ನೂ ಕೊಡದೆ, ತತ್ರಾಪಿ ಆಖ್ಯಾನಾದಿಗಳಲ್ಲಿ 'ನಾನೇ ಋಜು' ಎಂದು ವಿರುದ್ಧೋಪದೇಶವನ್ನೂ ಮಾಡಿ ತಮಸ್ಸಿಗೆ ಹಾಕುತ್ತಿರಲಿಲ್ಲ. ಯಾರು ದೊಡ್ಡವರೋ ಅವರು ಸ್ವಭಕ್ತರನ್ನು ತಮ್ಮ ವಿಷಯಕ ದುರುಪಾಸನೆಯಿಂದ ತಪ್ಪಿಸುತ್ತಾರೆ ಎಂದು ಸಾಮಾನ್ಯತಃ ವ್ಯಾಪ್ತಿ ಪ್ರಮಿತವಾಗಿದೆ. ಅನಿಷೇಧ ಇರುವುದರಿಂದ, ಅವರು ಕಟುಕರಲ್ಲವಾದ್ದರಿಂದ

ಋಜುತ್ವವುಳ್ಳವರಾದ್ದರಿಂದಲೇ ಅವರು ಭಕ್ತರ ಸೇವೆಯನ್ನು ಅಂಗೀಕರಿಸಿ ಸುಮ್ಮನಿದ್ದಾರೆಂದು ತಿಳಿಯಬಹುದು."ಅಪ್ರತಿಷಿದ್ದಂ ಅನುಮತಂ' ಎಂಬ ನ್ಯಾಯವು ಈ ಸಂದರ್ಭದಲ್ಲಿ ಉಚಿತವೇ.

3. ದೇವ ಮುನಿಗಳ ದೆಸೆಯಿಂದ ದೇವತೆಗಳು ಹೆಚ್ಚು ಗಂಭೀರ ಸ್ವಭಾವದವರು. ಹಾಗೆ ಶಿವನು ದೊಡ್ಡ ದೇವತೆಯಾದರೂ ಘಂಟಾಕರ್ಣರನ್ನು ಶಿವನೇ ಮೋಕ್ಷದಾತೃವೆಂಬ ದುರುಪಾಸನೆಯಿಂದ ನಿವರ್ತಿಗೊಳಿಸಿದನು ಎಂದು ಹರಿವಂಶದಲ್ಲಿದೆ. ಆ ತನ್ನ ಇಬ್ಬರು ಭಕ್ತರಿಗೂ ಸನ್ಮಾರ್ಗವನ್ನು ತೋರಿಸಿದನು. ಹಾಗೆ ಕೂರ್ಮ (ಪುಷ್ಕರ), ಗಂಗಾ, ವರುಣ, ಪಾರ್ವತೀ, ರುದ್ರಾದಿ ಸರ್ವ ದೇವತೆಗಳೂ ನಾರದರನ್ನು ತಮ್ಮ ದುರುಪಾಸನೆ ಮಾಡುವುದನ್ನು ತಪ್ಪಿಸಿ ಶ್ರೀ ಕೃಷ್ಣನ ಸರ್ವೋತ್ತಮತ್ವವನ್ನೇ ಉಪದೇಶಿಸಿದರು. ಪೃಥುರಾಜನೂ ಅಧಿಕ ಗುಣಗಳಿಂದ ತನ್ನ ಸ್ತುತಿಪರರಾದ ಬಂದಿ ಜನರನ್ನು ಸ್ವಸ್ತುತಿ ಮಾಡುವುದನ್ನು ತಪ್ಪಿಸಿ, ಶ್ರೀಹರಿಯ ಸ್ತುತಿ ಪರರನ್ನಾಗಿ ಮಾಡಿದನು. ಹೀಗೇನೂ ಮಾಡಿಲ್ಲವಾದ್ದರಿಂದ ವಾದಿರಾಜ ಗುರುಗಳು ಋಜುಗಣಸ್ಥರೇ.

4. ಕಿಂಚ ದೇವಮುನಿ ಸ್ವಭಾವವು ಆಶ್ರಿತರಲ್ಲಿ ಕಾರುಣ್ಯ ಮಾಡುವ ಸ್ವಭಾವವು ಎಂದು ಪ್ರಮಿತವಾಗಿದೆ; ಹಾಗೆ ಆಖ್ಯಾನದಲ್ಲಿ ಅವರು ಅನೇಕ ವಾಕ್ಯಗಳಲ್ಲಿ ಭಕ್ತೋದ್ಧಾರಕ ದೀಕ್ಷಾವುಳ್ಳವರೆಂದೂ ಹೇಳಿಕೊಂಡಿದ್ದಾರೆ. ಆದ್ದರಿಂದ ಅನೇಕ ಭಕ್ತರಿಗೆ ತಮ್ಮ ಸ್ವರೂಪ ವಿಷಯದಲ್ಲೂ ಕೂಡ ಅವರು ಸ್ವಪ್ನದಲ್ಲೋ, ಅಸ್ವಸ್ವಪ್ನದಲ್ಲೋ, ಸೂಚನೆ ಕೊಟ್ಟು ಅನುಗ್ರಹಿಸುತ್ತಾರೆಂದು ತಿಳಿಯುವುದು ಸಂಭಾವಿತವೇ, ಕರ್ಣನಿಗೆ ಸೂರ್ಯನು ಹೇಗೋ ಹಾಗೆ, ಚಾರುಮತೀದೇವಿಗೆ ಲಕ್ಷ್ಮಿಯು ಹೇಗೋ ಹಾಗೆ, ಸ್ವರ್ಣಕಾಂತಾದೇವಿಗೆ ಪಾರ್ವತೀದೇವಿಯು ಹೇಗೋ ಹಾಗೆ, ವಾದಿರಾಜ ಗುರುಗಳು ಸ್ವಪ್ನದಲ್ಲಿ ಸ್ವಸ್ವರೂಪವನ್ನು ತಿಳಿಸಿದಾದಾರೆಂದರೆ ವಿದ್ವಾಂಸರು ಒಪ್ಪದೇ ಇರುವುದು ಹೇಗೆ ಅಂಥ ಅನುಗ್ರಹದಿಂದ, ಅಶರೀರ ಮಾತಿನಿಂದ, ಪ್ರತ್ಯಕ್ಷ ಮಂತ್ರಾಕ್ಷತೆ ಪ್ರಾಪ್ತಿಯಿಂದ, ನಿರ್ಣಯವಾಗದೇ ಇರುವುದೆಲ್ಲಿಂದ ಬಂತು? ನಮ್ಮ ಗುರುಗಳು ವೇದಾಂತ ವಿಶಾರದ ಶ್ರೀ ಪೆರಿಯಾಕುಳಂ ರಾಮಚಂದ್ರಾಚಾರ್ಯರು ಅಂತಹ ಅನುಗ್ರಹವನ್ನೂ ಶ್ರೀ ರಾಘವೇಂದ್ರ ಸ್ವಾಮಿಗಳವರಿಂದ ಪಡೆದರೆಂದು ನಾನು ಕೇಳಿದ್ದೇನೆ. ಹಾಗೆ ಗುರುರಾಜರಿಂದಲೂ ಅನುಗ್ರಹವು ಹೊಂದಲ್ಪಟ್ಟಿತೆಂದು ಭಕ್ತ ಜನರಿಂದ ಏಕಾಂತವಾಗಿ ಶ್ರುತವಾಗಿದೆ; ಅನೇಕ ಋಜುತ್ವೋಪಾಸಕರು ಸ್ಪಷ್ಟವಾಗಿಯೂ ಹೇಳುತ್ತಾರೆ. ಅನೃಜುತ್ವ ಸಾಧಕ ಪ್ರಮಾಣಗಳಿಲ್ಲದ ಮೇಲೆ ಈ ಮೇಲ್ಕಂಡ ಅನುಭವಗಳಿಂದ ವಾದಿರಾಜರು ಋಜುಗಳೆಂದು ಏತಕ್ಕೆ ನಿರ್ಣಯಿಸಬಾರದು? ಲಕ್ಷ್ಮೀಪತಿ, ಶ್ರೀವಿಶ್ವಪ್ರಿಯತೀರ್ಥರು, ಶ್ರೀವೇದವೇದ್ಯರು ಇವರು ಭ್ರಾಂತರಲ್ಲವಲ್ಲ. ಅವರು ಛಾಂ.ಭಾ.। 14 (ಪುಟ 391-5) ಹೇಳಿದ ಅಯೋಗ್ಯೋಪಾಸನೆಯ ದೋಷಾನಭಿಜ್ಞರಲ್ಲ. ಆದ್ದರಿಂದ ಅಂಥವರ ಅನುಭವವು ನಿರ್ಣಾಯಕವೇ.

5. ವಾ.ಗು. ಕೀರ್ತನ ಮಂಜರೀ ಪುಟ 23ರಲ್ಲಿ ಶ್ರೀಪತಿವಿಠಲದಾಸರು ರಚಿಸಿರುವ ದೇವರ ನಾಮದಲ್ಲಿ ಒಂದು ಪ್ರಾಚೀನ ಐತಿಹ್ಯವನ್ನೂ ನಿರೂಪಿಸಿದ್ದಾರೆ. ನಮ್ಮ ಗುರುಗಳು ಶ್ರೀ ವಿಶ್ವೇಂದ್ರತೀರ್ಥರು ಅದನ್ನು ಆಗಿಂದಾಗ್ಗೆ ಹೇಳುತ್ತಿದ್ದರು. ಹಾಡು ಹೀಗಿದೆ: “ಶರಧಿಗೆ ಪೋಗಲು ಮರುತನಿಂದ ಶುಭೋಚ್ಚರಿಸೆ ಗೋಪ್ಯವನು ತಿರುಗಿದೆ ಮುದದಿ |” ಆ ಪುಟದಲ್ಲಿ ಸಂಪಾದಕ ಸೂಚನೆ ಇದೆ. “ಶ್ರೀವಾದಿರಾಜರು ಸಂಚಾರ ಕ್ರಮದಲ್ಲಿ ಲಂಕೆಗೆ ಹೊರಟಿರಲು

ವಾಯುದೇವರು ಗೋಪ್ಯವಾಗಿ ಬಂದು ಮುಂದೆ ಹೇಗೋ ಹೋಗಬೇಕು, ಈಗ ಬೇಡವೆನ್ನಲು ಹಿಂತಿರುಗಿದರಂತೆ." ಈ ವಾಯುದೇವರ ಮಾತಿನಿಂದ ಗುರುರಾಜರು ಭಾವೀ ಹನುಮಂತನೆಂದು ಸಿದ್ಧಿಸುತ್ತದೆ. ಈ ಐತಿಹ್ಯವು ಅನುಮಾನ ವಿಶೇಷಕ್ಕೆ [ಋಜುದೇವತೆಗಳು ತಮ್ಮ ಯಾವಚ್ಛಕ್ತಿಯನ್ನು ಭೂಲೋಕದಲ್ಲಿ ಅವತರಿಸಿದಾಗ ತೋರಿಸುವುದಿಲ್ಲ. 'ಮಾನಷ ಧರ್ಮವನ್ನು ಪ್ರಕಟಿಸುತ್ತಾರೆ. ಹಾಗಿದ್ದರೂ 'ನಹಿ ಕಸ್ತೂರಿಕಾ ನ್ಯಾಯದಿಂದ' ಒಮ್ಮೊಮ್ಮೆ ಸ್ವಲ್ಪ ಶಕ್ತಿಯನ್ನು ತೋರಿಸುತ್ತಾರೆ. ಆದ್ದರಿಂದಲೇ ವಾಲಿಗೆ ಭಯಪಟ್ಟ ರಾವಣನು ಹನುಮಂತನಿಗೆ ಭೀತನಾಗಲಿಲ್ಲ. ಇತರ ಕಪಿಗಳೂ ಅಸದೃಶ ಬಲಿಷ್ಠನೆಂದು ತಿಳಿಯಲಿಲ್ಲ. ಭೀಮನು ಸ್ವಪರಾಕ್ರಮ ತೋರಿಸಿದ್ದರೆ ಭಾರತಯುದ್ಧ ನಡೆಯುತ್ತಿರಲಿಲ್ಲ. ಎಲ್ಲ ಋಜುಗಳೂ ಹಾಗೆಯೇ. ಆದ್ದರಿಂದ ಸ್ಪಷ್ಟ ಅನುಮಾನ ಅವರ ಕಾರ್ಯದಿಂದ ತೋರಿಸುವುದು ಕಷ್ಟ. ಮ.ತಾ.ನಿ XXII 364-5 ಪ್ರಮಾಣ] ಸಾಧಕವೆಂದು ಒಪ್ಪಬಹುದು. ಭಾವಿ ರುದ್ರಗರುಡಾದಿ ಸೇವ್ಯತ್ವಾದಿ ಅನುಮಾನಗಳು ನಾಲ್ಕು ಮುಂತಾದ ಅಧ್ಯಾಯಗಳಲ್ಲಿ ಹೇಳಲ್ಪಟ್ಟಿವೆ. ಹೀಗೆ ನಿರ್ದೋಷಾನುಮಾನಗಳೂ ವಾದಿರಾಜಋಜುತ್ವಕ್ಕೆ ಸಾಧಕಗಳೇ.

**ಹನ್ನೆರಡನೆಯ ಅಧ್ಯಾಯವು ಮುಗಿಯಿತು.**

**ಭಾಗ 1 ಸಂಪೂರ್ಣ**

ಶ್ರೀ ವಾದಿರಾಜಗುರ್ವಂತ ಶ್ರೀ ರಾಮಕೃಷ್ಣ ವೇದವ್ಯಾಸಾತ್ಮಕ ಶ್ರೀ ಲಕ್ಷ್ಮೀಹಯಗ್ರೀವಾಯ ನಮಃ

ಶ್ರೀಮದ್ವಾದಿರಾಜಋಜುತ್ವ ಸಿದ್ಧಾಂತ

## ಭಾಗ 2 ಕಂಟಕೋದ್ಧಾರ

### ಮುನ್ನೂಚನೆ :

ಪೂರ್ವೋಕ್ತ ವಿಸ್ತಾರಾತ್ಮಕವಾದ ಎರಡೇ ಅಧ್ಯಾಯದ ಈ ದ್ವಿತೀಯ ಭಾಗದಲ್ಲಿ ಪ್ರಥಮ ಭಾಗೋಕ್ತ ಸಿದ್ಧಾಂತ ಪ್ರಮಾಣಗಳನ್ನೂ, ಯುಕ್ತಿಗಳನ್ನೂ ಪೂರ್ವಪಕ್ಷ ಗ್ರಂಥದ ಉಕ್ತಿಗಳಿಗೆ ಅನ್ವಯಿಸಿ ಆ ಪೂರ್ವಪಕ್ಷವಾದದ ದೋಷಗಳ ಖಂಡನೆಯು ಮಾಡಲ್ಪಟ್ಟಿದೆ. "ಈ ಉಕ್ತಿಗೆ ಹೀಗೇ ಪ್ರತ್ಯುಕ್ತಿ" ಎಂಬ ಪ್ರಾಸಂಗಿಕ ನ್ಯಾಯದಿಂದ ಪೂರ್ವಭಾಗೋಕ್ತ ಅನೇಕ ಪ್ರಮಾಣಗಳೂ, ಹೇಳಿಕೆಗಳೂ ಪುನಃ ಪುನಃ ಬಂದಿವೆ. ಅಂಥ ಪ್ರಸಂಗ ಸಂಗತಿಯಿಂದ ಪ್ರಾಪ್ತವಾದ ಪುನರುಕ್ತಿಗಳು ತತ್ವನಿರ್ಣಯೋಪಯೋಗಿ ವಿಚಾರಸರಣಿಗೆ ಭೂಷಣ ಎಂದು ಟೀಕೋಕ್ತರೀತಿಯಿಂದ ತಿಳಿದು ವಾಚಕ ಸಜ್ಜನರು ಮನ್ನಿಸಬೇಕು. ಇನ್ನೇನಾದರೂ ಪ್ರಶ್ನೆಗಳು ಒದಗಿದರೆ, ವಾಚಕರು ತಿಳಿಸಿದಲ್ಲಿ ಅವುಗಳಿಗೂ ಉತ್ತರವನ್ನು ದ್ವಿತೀಯ ಮುದ್ರಣದಲ್ಲಿ ಸೇರಿಸಲಾಗುತ್ತೆ.

## ಅಧ್ಯಾಯ 13

### ಪೂರ್ವಪಕ್ಷ ಗ್ರಂಥದ ಸಾಮಾನ್ಯ ದೋಷಗಳು

**1.** ವಾದಿರಾಜ ಋಜುತ್ವ ವಿಚಾರ ಎಂಬ ಪೂರ್ವಪಕ್ಷ ಗ್ರಂಥದ ಮುಖ್ಯ ದೋಷಗಳು ನಾಲ್ಕು: **i)** ಋಜುತ್ವಾನೃಜುತ್ವಗಳು ಅತೀಂದ್ರಿಯವಾಗಿದ್ದರೂ ಋಜುತ್ವವ್ಯಾಪ್ಯ ಲಿಂಗಗಳು ಅನೃಜುತ್ವವ್ಯಾಪ್ಯ ಲಿಂಗಗಳೂ ವಿವಾದಾಸ್ಪದ ವ್ಯಕ್ತಿಯಲ್ಲಿ ನಿರವಕಾಶವಾಗಿ ಪ್ರತ್ಯಕ್ಷಕ್ಕೆ ವಿಷಯವಾಗುವ ಯೋಗ್ಯತೆಉಳ್ಳವು ಎಂಬ ಭ್ರಾಂತಿ. ಅದರಿಂದ ಋಜುತ್ವವ್ಯಾಪ್ಯಲಿಂಗ ನೋಡಿ ಇವರು ಋಜುಗಳು ಎಂದೂ, ಅನೃಜುತ್ವವ್ಯಾಪ್ಯಲಿಂಗ ನೋಡಿ ಇವರು ಅನೃಜುಗಳೆಂದೂ ನಿಶ್ಚಯಿಸಿಬಿಡಬಹುದೆಂದು ತಿಳಿದಿದ್ದಾರೆ. **ii)** ಹಾಗೆ ಪ್ರತ್ಯಕ್ಷದಿಂದಲೂ ಪ್ರತ್ಯಕ್ಷಾನುಸಾರಿಯುಕ್ತಿಗಳಿಂದಲೂ ವಾದಿರಾಜರು ಅನೃಜುಗಳೆಂದು ನಿಶ್ಚಯಿಸಬಹುದೆಂಬ ಭ್ರಾಂತಿ ಹೊಂದಿದ್ದಾರೆ. ಅಷ್ಟೇ ಅಲ್ಲ. **iii)** ಮೂರನೆಯದಾಗಿ ಪ್ರತ್ಯಕ್ಷಾಯೋಗ್ಯ ವಿಷಯದಲ್ಲೂ ಕೇವಲ ಯುಕ್ತಿಚಾಲನೆಮಾಡಿ ಆಗಮೋಕ್ತ ವಿಷಯವನ್ನು ಅಪ್ರಮಾಣವೆಂದು ನಿರ್ಣಯಿಸಬಹುದೆಂಬ ಭ್ರಾಂತಿಯು ಅವರಿಗಿದೆ. **iv)** ಇದರ ಮೇಲೆ ನಿರ್ಮೂಲವಾದ ಭ್ರಾಂತಿಯ ಹುಟ್ಟುತ್ತೆ; ಆದ್ದರಿಂದಲೇ ಕಾರಣ ಹೇಳದೆ ಪರೋಕ್ಷ ವಿಷಯದಲ್ಲಿ ಶಂಕೆಯನ್ನು ಮಾಡಬಹುದು; ಎಲ್ಲಾ ಗ್ರಂಥಗಳೂ ಸ್ವಪ್ರಾಮಾಣ್ಯ ಸಾಧಕಯುಕ್ತ್ಯಾದಿ ಪ್ರಮಾಣ ವಿಶೇಷಗಳಿಂದ ಕೂಡಿಕೊಂಡೇ ಪ್ರಚಾರಕ್ಕೆ ಬರಬೇಕು, ಅನ್ಯಥಾ ಅವುಗಳಿಗೆ ಮಾನ್ಯತೆ ದೊರಕುವುದಿಲ್ಲವೆಂಬ ನಿಯಮವುಂಟೆಂಬ ಭ್ರಾಂತಿಯು ನಾಲ್ಕನೆಯದು. ಇವೆಲ್ಲವೂ ಸುಳ್ಳೇ, ಗ್ರಂಥಕಾರರ ವ್ಯರ್ಥ ಮನಃಕಲ್ಪನೆ ಮಾತ್ರ. ಅವು ಸ್ಪಷ್ಟ ಅನುವ್ಯಾಖ್ಯಾನ ವಾಕ್ಯಾದಿ ವಿರುದ್ಧವಾಗಿವೆ.

ಋಜುತ್ವವ್ಯಾಪ್ಯಲಿಂಗಗಳು ಯಾವುವೆಂದರೆ, ಗ್ರಂಥಕಾರರ ರೀತಿಯಿಂದಲೇ ಮೂವತ್ತೆರಡು ಲಕ್ಷಣೋಪೇತ ಶರೀರ; ಇತರರಿಂದ ಅಶಕ್ಯವಾದ ಕಾರ್ಯಮಾಡೋಣ; ಅಸಾಧಾರಣ ಪ್ರತಿಭಾ; ಅನ್ಯರನ್ನು ಸೇವಿಸದಿರೋಣ; ಅನ್ಯರಿಗೆ ನಮಸ್ಕಾರ ಮಾಡದಿರೋಣ; ಇತ್ಯಾದಿಗಳು. ಅನೃ ಋಜುತ್ವವ್ಯಾಪ್ಯ ಲಿಂಗಗಳೆಂದರೆ, ನೀಚ ಸೇವೆ; ನೀಚ ಜನರ ದೆಸೆಯಿಂದ ವಿದ್ಯಾ ಪ್ರಾಪ್ತಿ; ಪರಾ ಜಯ; ದೌರ್ಬಲ್ಯ; ರೋಗಾದಿಗಳ ಅನುಭವ; ಸ್ವಕೃತಕಾರ್ಯಗಳಲ್ಲಿ ಅಸಾಧಾರಣ್ಯ ಹೀನತೆ; ಶರೀರದಲ್ಲಿ 32 ಲಕ್ಷಣಗಳ ಅದರ್ಶನ, ವಿಕೃತರೂಪ ಇತ್ಯಾದಿಗಳು. ಇವುಗಳು ವಿವಾದಾಸ್ಪದ ವ್ಯಕ್ತಿಯಲ್ಲಿ ಇವೆಯೇ ಇಲ್ಲವೇ ನೋಡಿಕೊಂಡು ಅವರು ಋಜು ಅಥವಾ ಋಜುವಲ್ಲ ಎಂದು ನಿರ್ಣಯಿಸಲೇ ಬಹುದೆಂದು ಅವರ ಆಶಯ.

**2.** ಆದರೆ ಹಾಗೆ ನಿರ್ಣಯವು ಆಗುವುದೇ ಇಲ್ಲ. ರಾಮ, ಕೃಷ್ಣ, ಬುದ್ಧ, ಹನುಮಂತ, ಭೀಮಾದಿಗಳಲ್ಲೂ ಅವರ ಅನೇಕ ಕಾರ್ಯಗಳಲ್ಲೂ ಪರೋಕ್ತ ಹೇತುಗಳಿಗೆ ವ್ಯಭಿಚಾರವಿದೆ. "ಅವಿದ್ಧೋವಿದ್ಧವದ್ವಿಷ್ಣುಃ ಅಜಾತೋಜಾತ ವನ್ನೃಷಾ | ಅಬದ್ಧೋ ಬದ್ಧವಚ್ಚೈವ ದರ್ಶಯತ್ಯಮಿತದ್ಯುತಿಃ" ‖ ಇತ್ಯಾದಿ ಅನೇಕ ಪ್ರಮಾಣಗಳಿವೆ. ಆದ್ದರಿಂದ ಆಬ್ರಹ್ಮತ್ವಲಕ್ಷಣ ಪ್ರತ್ಯಕ್ಷವಾದರೂ **[ದೃಷ್ಟಾಂತ : ಭಾಗ.ತಾ. IV 9-72-80, IV 19-16-17, IV 20-19, V 10-9, VI 10-41, VI 1-16 ಆಜ್ಞೆಯೈವ ಮಹಾವಿಷ್ಣೋಃ ಕಾರ್ಯಾರ್ಥಮಪಿ ಕ್ವಚಿತ್ ‖ ನೀಚಾನಪಿತು ಯಾಚಂತೇ ಸ್ವಾತ್ಮತೋ ಗುಣವತ್ತರಾಃ**

**॥ ನೀಚವಾಕ್ಯಂ ವದೇಯುಶ್ಚ ಸುರಾನ್ನೈತಾವತಾ ಕ್ವಚಿತ್ ॥ ತೇಜಃ ಕ್ಷತಿರ್ಭವೇದೇಷಾಂ ಜನಕಸ್ಯ ಯಥಾರ್ಭಕೇ" ॥ ಎಂದಿದೆ. IX 6-85, X 94-48 X 86-38, X75-52, X 52-25, XII 5-23 "ಸ್ವಸಂತಾನೋದ್ಭವಂ ಕೀರ್ತ್ಯಾಯೋಜಯನ್ ಜನಮೇಜಯಂ ॥ ಶಕ್ತೋಪ್ಯಶ್ಯಕ್ತವದ್ಯಷ್ಟುರಿಂದ್ರ ಆಸೀದುಪೇಕ್ಷಕಃ॥ ಏವಮೇವ ಋಷೀಣಾಂ ಚ ಕೀರ್ತಿ೦ ಯೋಜಯತಾಮುನಾ॥ ಕೃತೋಪೇಕ್ಷಾ ಮಹೇಂದ್ರೇಣ ಕಿಮುವಿಷ್ಣುಃ ಪರಾತ್ಪರಃ" ॥ ಹಾಗೆ ಬೃಹದ್ಭಾಷ್ಯ VII 2 (ಪುಟ 486) "ನೀಚಾದಪ್ಯುತ್ತಮಾ ಜ್ಞಾನಂ ಶೃಣುಯುರ್ಲೀಲಯಾ ಕ್ವಚಿತ್॥ ಶ್ರೋತೃವಕ್ತೃ ವಿಭೇದೋಯಂ ನಾಧಿಕ್ಯಜ್ಞಾಪಕಸ್ತತಃ ॥ ಯಸ್ಯಾಧಿಕ್ಯಂ ತು ವೇದೋಕ್ತಂ ಪಂಚರಾತ್ರೇಽಥವಾ ಭವೇತ್ ॥ ಇತಿಹಾಸೇ ಪುರಾಣೇವಾ ಸೋಧಿಕೋ ನೇತರಃ ಕ್ವಚಿತ್" ॥ ಇತಿ ಬ್ರಹ್ಮತರ್ಕೇ ॥ ಛಾಂದೋಗ್ಯ ಭಾಷ್ಯೇಪಿ X 7 (ಪುಟ 447-454) ಮ.ತಾ.ನಿ, I 36-39, II 81-86, V39, X 70 "ಕಾಮಾದಿ ದೋಷಾಂಶ್ಚ ಮೃಷ್ಯೈವ ದರ್ಶಯೇತ್ ॥ XI 42-45-198, XI 206-210, XIV 65, XIV 4-13-73, XV 45-184, XXXX 102, XXII 340-292-4-352-357-364-5, XXVI 39-40-42-154, XXVIII 108-118, XXXII 32-34-38-68, XXII 364 "ದೇವಾನಾಂ ಮಾನುಷಾದೌತುಶಕ್ಯೇಪ್ಯವ್ಯಕ್ತತಾತ್ಸ್ಯತೇಃ ॥ ಧರ್ಮವೃದ್ಧಿರ್ಭವೇತ್ತೇಷಾಂ ಪ್ರೀತೋ ಭವತಿ ಕೇಶವಃ ॥ ... ದೈವಂ ಬಲಂ ಸುಶಕ್ತೋಪಿ ವ್ಯಕ್ತಂ ಚಕ್ರೇ ನ ಮಾರುತಿಃ ॥ XXII 450 ದೇವಾ ಅಪಿ ಮನುಷ್ಯೇಷು ಜಾತಾಃ ಸುಬಲಿನೋಪಿ ಹಿ ॥ ಮಾನುಷೇಣೈವ ಭಾವೇನ ಯುಕ್ತಾಃ ಸ್ಯುಃ॥ ಇತ್ಯಾದಿ**

ಆದ್ದರಿಂದ ಅಬ್ರಹ್ಮತ್ವ ಲಕ್ಷಣ ಪ್ರತ್ಯಕ್ಷವಾದರೂ ಕೃಷ್ಣನಲ್ಲಿ ಅಬ್ರಹ್ಮತ್ವ ತಿಳಿಯಬಾರದು. ಉಪಜೀವ್ಯಾಗಮ ವಿರುದ್ಧವಾದ್ದರಿಂದ ಆ ನಮ್ಮ ಲೌಕಿಕ ಪ್ರತ್ಯಕ್ಷಕ್ಕೆ ನಿತ್ಯಾತೀಂದ್ರಿಯ ವಿಷಯದಲ್ಲಿ ಪ್ರಾಮಾಣ್ಯವಿಲ್ಲ. ಹಾಗೆ "ನಧರ್ಮೋ ದೇವತಾನಾಂ ಹಿ ಜ್ಞಾತವಾಸಶ್ಚಿರಂನೃಷು" ಎಂದು ನಿರ್ಣಯದಲ್ಲಿ ಹೇಳಿದಂತೆ ಮನುಷ್ಯಲೋಕದಲ್ಲಿ ಸ್ವರೂಪಾಚ್ಛಾದನೆ ಮಾಡಿಕೊಂಡಿರುವುದೇ ದೇವತೆಗಳಿಗೆ ಅವಶ್ಯ ಕರ್ತವ್ಯ ಸಾಮಾನ್ಯಧರ್ಮ. ಹನುಮಂತನೂ ಕೂಡ ಹುಡುಕಿಯೇ ಸೀತೆಯನ್ನು ಕಂಡನು. ಮುಷ್ಟಿ ಹೊಡೆತದಿಂದ ರಾವಣನನ್ನಾಗಲೀ, ಕುಂಭಕರ್ಣನನ್ನಾಗಲೀ ಸಾಯಿಸಲಿಕ್ಕೆ ಶಕ್ತನಾಗಲಿಲ್ಲ. ಇಂದ್ರಜಿತ್ತಿನ ಬ್ರಹ್ಮಾಸ್ತ್ರಕ್ಕೆ ಬದ್ಧನಾದನು. ಸುಗ್ರೀವ ಪಕ್ಷವನ್ನು ಅವಲಂಬಿಸಿದ್ದರೂ ವಾಲಿಯನ್ನು ಗುದ್ದಿ ಗೆದ್ದು ಸುಗ್ರೀವನನ್ನು ಅವನ ಸ್ಥಾನದಲ್ಲಿಟ್ಟುಕಾಪಾಡಲಿಲ್ಲ. "ನಮೋಸ್ತುರುದ್ರೇಂದ್ರಯಮಾನಿಲೇಭ್ಯೋ ನಮೋಸ್ತು ಚಂದ್ರಾರ್ಕ ಮರುದ್ಗಣೇಭ್ಯಃ" (ವಾ.ರಾ.) ಎಂದು ದೇವತೆಗಳನ್ನು ನಮಸ್ಕರಿಸಿ ಸಮುದ್ರವನ್ನು ಹಾರಿದನು. ಆ ಕಾಲದ ಅಪರೀಕ್ಷಿತ ದೃಷ್ಟಿಯುಳ್ಳವರಿಂದ "ಈತನು ಋಜುವು" ಎಂದು ತಿಳಿಯಲ್ಪಡಲಿಲ್ಲ. ಅವನಲ್ಲಿದ್ದ ಋಜುತ್ವ ಲಿಂಗಗಳು ಇತರರಿಗೆ ಕಾಣಲಿಲ್ಲ. ಪರೀಕ್ಷೆಮಾಡಿ ತಿಳಿದಿದ್ದ ದೇವರ್ಷಿಗಳಿಂದ ಋಜುವು ಇವನೆಂದು ಉಪದೇಶ ಮಾಡಲ್ಪಡಲಿಲ್ಲ. ಆದ್ದರಿಂದ ಆಗಮದಿಂದಲೇ ಕೃಷ್ಣ ಪರಬ್ರಹ್ಮತ್ವದಂತೆ ಹನುಮಪ್ಪನ ಋಜುತ್ವವು ತಿಳಿಯಲ್ಪಡಬೇಕು.

| |
|---|
| XXI 110 ನಿರ್ಣಯದ ಕಥೆ ನೋಡಿದರೆ, ಶ್ರೀ ಕೃಷ್ಣನು ಪಲಾಯನ ಮಾಡಿದನೆಂದು ಧರ್ಮರಾಜನೇ ತಿಳಿದಿದ್ದನೆಂದಿದೆ. ಅಂಥವನಿಗೇ ಅಬ್ರಹ್ಮತ್ವ ಜ್ಞಾನವಿದ್ದಲ್ಲಿ ನಾವು ಕೃಷ್ಣನ ಲಕ್ಷಣ ನೋಡಿ ಬ್ರಹ್ಮತ್ವ ನಿಶ್ಚಯ ಮಾಡಬಹುದೆಂಬುದು ಹೇಗೆ ಯುಕ್ತವಾಗುತ್ತೆ? ಹೀಗೆಯೇ ಭೀಮನು ಋಜುವೆಂದು ಭೀಷ್ಮದ್ರೋಣ, ಯುಧಿಷ್ಠಿರಾದಿಗಳಿಂದಲೂ ಪ್ರತ್ಯಕ್ಷೀಕೃತವಾಗಲಿಲ್ಲ. ಕರ್ಣ, ದುರ್ಯೋಧನ, ಜರಾಸಂಧಾದಿಗಳು ತಿಳಿಯಲಿಲ್ಲವೆಂದು ಹೇಳತಕ್ಕದ್ದೇನು ಭೀಮನಾದರೋ ಅಭಿಮನ್ಯುವನ್ನು ರಕ್ಷಿಸಲಿಲ್ಲ. ಅಜಗರದಿಂದ ಬದ್ಧನಾದನು; ಯಕ್ಷಮಾಯೆಯಿಂದ ಮೂರ್ಛೆಬಿದ್ದನು. ಕೃಪದ್ರೋಣರ ಪಾದದಲ್ಲಿ ಅನುವೃತ್ತಿಯಿಂದ ವಿದ್ಯೆಯನ್ನು ಪಡೆದನು. ಇಷ್ಟಾದರೂ ಅನೃಜುವಲ್ಲ. ಉಪಜೀವ್ಯಾಗಮ ವಿರುದ್ಧವಾದ್ದರಿಂದ ಭೀಮನು ಋಜುವಲ್ಲ, ಆಶಕ್ತ ಎಂಬ ಪ್ರತ್ಯಕ್ಷವು ಅಪ್ರಮಾಣವು. ಶ್ರೀಕೃಷ್ಣನ ಗೋವರ್ಧನೋದ್ಧಾರಾದಿ ಅಸಾಧಾರಣ ಕಾರ್ಯಗಳನ್ನು ನೋಡಿಯೂ ಕೂಡ ಆಗಿನ ಕಾಲದ ಎಲ್ಲಾ ಜನರಿಗೂ ಅವನ ಬ್ರಹ್ಮತ್ವವು ಗೊತ್ತಾಗಲಿಲ್ಲ. ಶಿಶುಪಾಲ, ದುರ್ಯೋಧನಾದಿಗಳು ಆ ಕಾರ್ಯಗಳನ್ನು ಅನ್ಯಥಾ ಪ್ರತಿಪಾದಿಸಿ ಅವುಗಳಲ್ಲಿ ಮಹತ್ವವೇನೂ ಇಲ್ಲವೆಂದೇ ನಿಶ್ಚಯಿಸಿದರು. ಜರಾಸಂಧ ಸಂಹಾರಾದಿ ಭೀಮಕಾರ್ಯಗಳೂ ಕಷ್ಟದಿಂದ ಆಗಿ ಹೋದವೆಂದು ತಿಳಿದರು. ಆತನು ಋಜುವೆಂದು ತಿಳಿಯಲಿಲ್ಲ. |
| ಮಧ್ವಾಚಾರ್ಯರು ಋಜುಗಳೆಂದು ಪಂಡಿತಾಚಾರ್ಯಾದಿ ಜನರು ಕೂಡ ಪ್ರತ್ಯಕ್ಷದಿಂದ ತಿಳಿಯಲಿಲ್ಲ. (ಪೂರ್ವಪಕ್ಷ ಗ್ರಂಥ 20 ನೇ ಪುಟದಲ್ಲಿ "ಪ್ರತ್ಯಕಮೇವ ಚೈತಲ್ಲಕ್ಷಣಂ ದೃಶ್ಯತೇ ಭಗವತಿ ಭಾಷ್ಯಕಾರೇ" ಎಂಬ "ತತ್ವಪ್ರದೀಪಿಕಾ" ವಚನೋದಾಹರಣವು ಋಜುತ್ವ ಲಕ್ಷಣಕ್ಕೆ ಸಂಬಂಧಿಸಿದ್ದಲ್ಲವೆಂದು ನಾಲ್ಕನೇ ಅಧ್ಯಾಯದಲ್ಲಿ ತೋರಿಸಲ್ಪಟ್ಟಿದೆ. ಆದ್ದರಿಂದ ಆಗಮದಿಂದಲೇ ಪಂಡಿತಾಚಾರ್ಯಾದಿಗಳು ಮಧ್ವ ಋಜುತ್ವವನ್ನು ತಿಳಿದರು, ಪ್ರತ್ಯಕ್ಷದಿಂದಲ್ಲ. ಯದ್ಯಪಿ ಶ್ರೀಕೃಷ್ಣ ಬ್ರಹ್ಮತ್ವವನ್ನು ಕ್ವಚಿತ್ ಭೀಷ್ಮವಿದುರಾದಿಗಳು ತಿಳಿಯುತ್ತಿದ್ದರು. ಹನುಮಂತನ ಮತ್ತು ಭೀಮನ ಋಜುತ್ವವನ್ನು ಸನಕಾದಿ ಋಷಿಗಳೂ, ಶೇಷಾದಿದೇವತೆಗಳೂ ತಿಳಿದರೆಂದು ಮಧ್ವ ವಿಜಯದಲ್ಲಿದೆ. ಅವರುಗಳ ಆ ಜ್ಞಾನವು ಪರೀಕ್ಷಿತ ದೃಷ್ಟಿ ಪ್ರಭಾವದಿಂದ ಪ್ರಾಪ್ತವಾದದ್ದು. ಪರೀಕ್ಷಿತ ದೃಷ್ಟಿ ಎಂದರೆ ಆಗಮ ಜ್ಞಾನಯುಕ್ತಧ್ಯಾನ ಸಹಕೃತ ದೃಷ್ಟಿ (ಶ್ರೀಕೃಷ್ಣನ ಅರಳಿದ ಮುಖವನ್ನು ನೋಡಿದ ಯಶೋದೆಗೆ ಇದ್ದಂತೆ.) ಬ್ರ.ಸೂ.ಭಾಷ್ಯ ॥ 1-7 ರಲ್ಲಿ ಹೇಳಿದೆ. "ಓಂ ದೃಶ್ಯತೇ ಚ ಓಂ॥ ತಾಸಾಂ ಸಾಮರ್ಥ್ಯಂ ಮಹದ್ಭಿಃ \| ಪೃಥಿವ್ಯಾದ್ಯಭಿಮಾನಿನ್ಯೋದೇವತಾಃ ಪ್ರಥಿತೌಜಸಃ \| ಅಚಿಂತ್ಯಾಃ ಶಕ್ತಯಸ್ತಾಸಾಂ ದೃಶ್ಯಂತೇ ಮುನಿಭಿಶ್ಚತಾಃ ॥" ಎಂದಿದೆ. ಅನು III 4-4 ರಲ್ಲೂ "ಅಪರೀಕ್ಷಿತ ದೃಷ್ಟ್ಯೈವ ಸದೋಷೋ ದೃಶ್ಯತೇ ಹರಿಃ॥ ಪರೀಕ್ಷಾ ದರ್ಶನೇ ನೈವದೋಷೋ ದೃಶ್ಯೋ ಹರೇಃ ಕ್ವಚಿತ್ ॥" ಎಂದಿದೆ. ಭೀಮಸೇನನ ವಿಷಯದಲ್ಲಿ ಹರಿಯ ಅಪರೋಕ್ಷ ಹೊಂದಿದ್ದ ದ್ರೋಣ, ಅಶ್ವತ್ಥಾಮ, ಕೃಪ, ಯುಧಿಷ್ಠಿರಾದಿಗಳು ಏತಕ್ಕೆ ಪರೀಕ್ಷಿತ ದೃಷ್ಟಿಯಿಂದ ತತ್ವ ತಿಳಿಯಲಿಲ್ಲ ಎಂಬ ಶಂಕೆ ಬರುತ್ತೆ. ನಿಜ. ಆದರೆ ದೈವೇಚ್ಛೆಯೇ ಅಂಥವೆಂದು ಸಮಾಧಾನ. ಬೇರೆ ಕಾರಣವನ್ನು ನಮಗೆ ಊಹಿಸಲಿಕ್ಕೂ ಶಕ್ಯವಲ್ಲ. ಹೀಗಿದ್ದರೂ ಈ ಪೂರ್ವಪಕ್ಷ ಗ್ರಂಥಕಾರರೂ ಕೂಡ ಪುಟ 20-16ರಲ್ಲಿ ವ್ಯಾಸತೀರ್ಥರೇ ಮುಂತಾದವರು ವಾದಿರಾಜರ ಸ್ವರೂಪವನ್ನು ನೋಡಿಯೇ ನೋಡಿದರು, ತಿಳಿದೇ ತಿಳಿದರು, ನಿರ್ಣಯವನ್ನು ಮಾಡಿಯೇ ಮಾಡಿದರು ಎಂದು |

ಹೇಳಿರುವುದು ಶಾಸ್ತ್ರ ವಿರುದ್ಧವಲ್ಲವೇ? ಭೀಷ್ಮಾದಿಗಳಿಗೆ ಪರೀಕ್ಷೆಮಾಡಿ ಭೀಮನ ಸ್ವರೂಪ ತಿಳಿಯಲು ಕಾರಣಗಳಿತ್ತು. ವ್ಯಾಸತೀರ್ಥರೇ ಮುಂತಾದವರಿಗೆ ವಾದಿರಾಜರ ಸ್ವರೂಪ ತಿಳಿದೇಬಿಡಬೇಕೆಂದು ಪ್ರೇರಿಸುವ ಯುದ್ಧ ಪ್ರಸಕ್ತ್ಯಾದಿ ಯಾವ ಪ್ರಬಲ ಕಾರಣವೂ ಇರಲಿಲ್ಲ. ಆದ್ದರಿಂದ ವಾದಿರಾಜರನ್ನು ಯಾರೂ ಪರೀಕ್ಷಿಸಲಿಲ್ಲವೆಂದೇ ಊಹಿಸಬೇಕು. [ಪರೀಕ್ಷಿಸಿದ್ದರೆ ಆ ಪರೀಕ್ಷೆಯು ಋಜುತ್ವವಾದಿಗಳಿಗೆ ಅನುಕೂಲವಾಗಿದೆ ಎಂದೂ ತೋರಿಸಲಾಗಿದೆ]

"ಅಪರೀಕ್ಷಿತ ದೃಷ್ಟಿಸ್ತು ಕಸ್ಮಿನ್ನರ್ಥೇ ನ ವಿದ್ಯತೇ ॥" ಎಂದು ಹೇಳಿರುವುದರಿಂದ ಎಲ್ಲಿ ಅಲೌಕಿಕ ಪರೀಕ್ಷಾಪ್ರತಿಪಾದಕ ವಿಶೇಷ ಪ್ರಮಾಣವಿಲ್ಲವೋ ಅಲ್ಲಿ ಅಪರೀಕ್ಷಿತ ಪ್ರತ್ಯಕ್ಷ ಮಾತ್ರವೇ ಇತ್ತೆಂದು ಪರಿಶೇಷ ಪ್ರಮಾಣದಿಂದ ಅಂಗೀಕರಿಸಲ್ಪಡುತ್ತೆ. ತಥಾಚ ಉಪಜೀವ್ಯಾಗಮ ವಿರೋಧ ಬಂದರೆ ಕೃಷ್ಣ, ಭೀಮ, ಮಧ್ವ, ವಾದಿರಾಜಾದಿಗಳ ವಿಷಯದಲ್ಲಿ ದೋಷಗ್ರಾಹಿ ಪ್ರತ್ಯಕ್ಷವು ಅಪ್ರಮಾಣವೆಂದೇ ಸಿದ್ಧಾಂತ, "ಲೌಕಿಕ ವ್ಯವಹಾರೇऽತ್ರ ಪ್ರತ್ಯಕ್ಷಸ್ಯೋಪಜೀವ್ಯತಾ॥ ಅವತಾರಾದಿ ದೃಷ್ಟೌಸ್ಯಾದಾಗಮಸ್ಯೋಪಜೀವ್ಯತಾ ॥ ಆಗಮೇನ ಹಿ ವಿಷ್ಣುತ್ವಂ ಜ್ಞಾತ್ವಾ ದೊಷೋತ್ರ ಕಲ್ಪ್ಯತೇ॥ ನ ಚೇತ್ಸ್ಯಾದ್ದೋಷವಾನನ್ಯಃ ಶಾಸ್ತ್ರಸಿದ್ಧಂ ಹಿ ಲಕ್ಷಣಂ ॥ ಕಸ್ಯಚಿದ್ದೋಷವತ್ವಂ ಸ್ಯಾದಿತಿಮಾತ್ರೇऽಕ್ಷಜಂ ವದೇತ್ ॥ ನ ವಿಷ್ಣೋರ್ದೋಷವತ್ವೇಹಿ ಪ್ರತ್ಯಕ್ಷಂ ವರ್ತತೇ ಸ್ವತಃ ॥" ಅನು. ಎಂಬ ಸ್ಪಷ್ಟ ಪ್ರಮಾಣವಿರುವ ಪ್ರಯುಕ್ತ ಉಪಜೀವ್ಯ ಶಾಸ್ತ್ರ ವಿರುದ್ಧ ಪ್ರತ್ಯಕ್ಷವು ತಿರಸ್ಕಾರ್ಯವೇ. ಋಜುತ್ವ, ಬ್ರಹ್ಮತ್ವ, ಪುಣ್ಯ, ಪಾಪ ಮುಂತಾದ ಅತೀಂದ್ರಿಯ ವಿಷಯಗಳಲ್ಲಿ ಪ್ರತ್ಯಕ್ಷಕ್ಕೆ ಆಗಮವು ಉಪಜೀವ್ಯವು. "ಆಪರೀಕ್ಷಿತಮೇವಾತ್ರ ವೇಧಾದಿಕಮಧೀಶಿತುಃ" ಅನು ಎಂದು ಹೇಳಿದಂತೆ ಋಜುಗಳಾದ ಹನುಮಂತ, ಭೀಮ, ಮಧ್ವ, ವಾದಿರಾಜಾದಿಗಳ ಪರಾಜಯವು, ಅನ್ಯ ನಮನವು, ನೀಚಾನುವೃತ್ತಿ, ರೋಗಾಶಕ್ತ್ಯಾದಿ ದರ್ಶನವೆಲ್ಲಾ ಅಪರೀಕ್ಷಿತ ದೃಷ್ಟಿ ಫಲ. ಅಂಥ ಅಪರೀಕ್ಷಿತ ಪ್ರತ್ಯಕ್ಷವನ್ನು ಆಧಾರವಾಗಿಟ್ಟುಕೊಂಡು ಐತಿಹಾದ್ಯಾಗಮ ಸಿದ್ಧ ಋಜುತ್ವವನ್ನು ನಿರಾಕರಿಸಬಾರದು. (III 4-4 ಅನು.) ಸ್ಪಷ್ಟ ಪ್ರಮಾಣವಿದೆ. "ಪರೀಕ್ಷಾ ದರ್ಶನೇನೈವ ದೃಶ್ಯತೇ ಕೇನಚಿತ್ ಕ್ವಚಿತ್ ॥ ನಿರ್ದೋಷಮೇವ ತಂ ಬ್ರಹ್ಮಾ ದದರ್ಶಾಶೇಷರೂಪಿಣಂ ॥ ನಿರ್ದೋಷಮೇವ ರುದ್ರೋ ಅದ್ರಾಕ್ಷೀನ್ನಿರ್ದೋಷಂ ತಂ ಪುರಂದರಃ ॥ ನಿರ್ದೋಷಾಣ್ಯಸ್ಯ ರೂಪಾಣಿ ದೃಷ್ಟಾನ್ಯೇವಂ ಸುರೋತ್ತಮಃ ।" ಎಂದ ಬರ್ಕಶ್ರುತಿ ಇದೆ. ಶ್ರೀಹರಿಯಲ್ಲಿ ದೋಷಾಭಾವಾವಗಾಹಿ ಪರೀಕ್ಷಿತ ಪ್ರತ್ಯಕ್ಷವು, ಉಪಲಕ್ಷಣವೂ ಗುರುರಾಜರಲ್ಲಿ ಋಜುತ್ವಾದಿ ಪ್ರತ್ಯಕ್ಷವು ಆಗಿಂದಾಗ್ಗೆ ದೇವತೆಗಳಿಗೆ [ಪ್ರಕೃತದಲ್ಲಿ ದೇವಸದೃಶರಾದ ವೇದವೇದ್ಯ ವಿಜಯದಾಸಾದಿಗಳಿಗೆ ಗುರುರಾಜರ ವಿಷಯದಲ್ಲಿ ಪರೀಕ್ಷಿತ ದರ್ಶನವು ಆಗಿತ್ತು, ಎಂದಾಗಲೀ, ಅವರಿಗೆ ಪರೀಕ್ಷಿತ ದೃಷ್ಟ್ಯಗಳಾದ ಅವರ ಗುರುಗಳ ಉಪದೇಶ, ಸ್ವೋತ್ತಮರ ಉಪದೇಶ, ಅನುಗ್ರಹ, ಸ್ಪಷ್ಟವಚನಾದಿಗಳಿಂದ ಗೊತ್ತಾಗಿತ್ತೆಂದಾಗಲಿ ಆಗಮವಿರುದ್ಧವಾಗಿ ಅನುಮಾನ ಮಾಡಿದರೆ ಪ್ರಮಾಣ ವಿರೋಧವೇನೂ ಇಲ್ಲ] ಆಗುತ್ತೆ. ಸರ್ವದಾ ಆಗುತ್ತೆಂದು ಹೇಳಿಲ್ಲ. ರುದ್ರದೇವರೇ ಭೀಮಸೇನನ ಸಂಗಡ ಯುದ್ಧ ಮಾಡಿಬಿಟ್ಟಿದ್ದಾರೆ (ಮ.ತಾ.ನಿ. XX, 20-22 XXII 201). ಶ್ರೀಕೃಷ್ಣನ ಸಂಗಡ ಇಂದ್ರನು ಯುದ್ಧ ಮಾಡಿದ್ದಾನೆ (XX 127-132), ಆದ್ದರಿಂದ ಪರೀಕ್ಷೆ ಮಾಡಲಿಕ್ಕೂ ಬರದ ಅಜ್ಞರಿಗೆ ವ್ಯಾಪಯಲಿಂಗ ಪ್ರತ್ಯಕ್ಷದಿಂದ ವ್ಯಾಪಕ ಋಜುತ್ವಾನೃಜುತ್ವ ನಿಶ್ಚಯವು ಸಾಧ್ಯವೆನ್ನುವುದು ಹುಚ್ಚರ ಮಾತು.

| |
|---|
| ಹಾಗಿದ್ದರೆ ನಿತ್ಯಾತೀಂದ್ರಿಯ ವಿಷಯದಲ್ಲಿ ಪರೀಕ್ಷಿತ ಪ್ರತ್ಯಕ್ಷವು ಪ್ರವರ್ತಿಸುತ್ತದೆ ಎಂದು ಒಪ್ಪಿದಂತಾಯಿತ್ತಾದ್ದರಿಂದ ಋಜುತ್ವಾದಿಗಳು ಆಗಮೈಕ ವೇದ್ಯಗಳೆಂದು ಹೇಗೆ ಹೇಳುವುದು ಎಂದು ಶಂಕಿಸಕೂಡದು, ಅಪರೋಕ್ಷಜ್ಞಾನಿ ವಿಶೇಷರ ಪರೀಕ್ಷಾದರ್ಶನವೆಂಬುದು ಆಗಮವನ್ನು ಆಶ್ರಯಿಸಿದ್ದು ; ಮತ್ತು ಆಗಮ ಪ್ರಮಾಣವೇದ್ಯವೂ ಆಗಿದೆ. ಆ ರೀತಿಯ ಪರೀಕ್ಷಿತ ಪ್ರತ್ಯಕ್ಷವೂ ಕೂಡ ಎಲ್ಲಾ ಅಪರೋಕ್ಷಿಗಳಿಗೂ ಎಲ್ಲಾ ವಿಷಯದಲ್ಲೂ ಯಾವಾಗಲೂ ಇರುತ್ತೆಂದು ತಿಳಿಯಕೂಡದು. ಹಾಗೆ ನಿಯಮವಿಲ್ಲ. ಅಂತೂ ಸುಲಭವಾಗಿ ಇವರು ಋಜುಗಳು, ಇವನು ದೇವರು ಎಂದು ತಿಳಿಯಲಾಗುವುದಿಲ್ಲ. |
| ಭಾಗ.ತಾ, III 8-18, III 17-21,28, ಮತ್ತು 67, III 19-21, III 20-5, IV 9-72 ಮತ್ತು 80, IV 19,16,17, IV 20-19, V 10-9, VI 10-41, VI 11-6, IX 6-85, XII 5-23, X94-48, X 86-38, X 75-52, X 52-25. |
| ಮ.ತಾ.ನಿ. XI 205-10, XIII 9, XIV 4-13-65, XVII 4-5, XX 102, XXII 364 : "ವಶಗವದಿಚ್ಛಯೈವಾಸ ಮಾರುತಿಃ ‖... ಧರ್ಮವೃದ್ಧಿರ್ಭವೇತೇಷಾಂ ಪ್ರೀತೋ ಭವತಿ ಕೇಶವಃ‖" XXXII 33-34-38-68, ಇತ್ಯಾದಿ ಸ್ಥಳಗಳಲ್ಲಿ ದೊಡ್ಡವರು ಬಹು ಮೋಹಕ ವ್ಯಾಪಾರವನ್ನು ಮಾಡಿದ್ದಾರೆಂದು ಪ್ರಮಿತವಾಗುತ್ತದೆ. XVIII 80 ಮತ್ತು XXII 450 ಇವೆರಡು ಶ್ಲೋಕಗಳೂ ನೋಡಲ್ಪಡಬೇಕು. ಈ ವಿಷಯವು ಪೂರ್ವಪಕ್ಷಿಯಿಂದ ತಮ್ಮ ಗ್ರಂಥದಲ್ಲಿ ಅನೇಕ ಕಡೆ ಮರೆಯಲ್ಪಟ್ಟಿದೆ ಎಂದು ಸ್ಪಷ್ಟವಾಗುತ್ತೆ. ಲೋಕದಲ್ಲಿ ಟೆರಿಲಿನ್ ಸೂಟನ್ನು ಧರಿಸಿ, ಮೋಟಾರು ಯಾನದಲ್ಲಿ ಸಂಚರಿಸುತ್ತಿರುವ, ಗಂಭೀರವಾಗಿದ್ದು, ಮನೋಹರ ಮಾತಾಡುವ ಶುಭ್ರ ವ್ಯಕ್ತಿಯನ್ನು ನೋಡಿ ಇವರು ರಾಷ್ಟ್ರಾಧಿಕಾರಿ ಅಥವಾ ದ್ರವ್ಯಸಂಪನ್ನ ದೊಡ್ಡ ಅಧಿಕಾರಿ ಎಂದು ಕಂಡುಹಿಡಿಯುವುದು ಹೇಗೆ ಶಕ್ಯವೋ, ಹಾಗೆಯೇ ತೀರ್ಥ ಕೊಡುತ್ತಿರುವ ಕಮಂಡಲುಧಾರಿ ಶ್ರೀರಾಘವೇಂದ್ರತೀರ್ಥರನ್ನು ನೋಡಿ "ಅಹೋ! ಇವರು ಉಜ್ವಲ ಕಾಂತಿಯುಕ್ತ ಭಗವಾನ್ [ಶ್ರೀ ರಾಘವೇಂದ್ರಸ್ವಾಮಿಗಳಲ್ಲಿ ಹರಿವಾಯುಗಳ ಆವೇಶ ಹೆಚ್ಚು. ಪ್ರತ್ಯಕ್ಷದರ್ಶಿಗೆ ಕಾಣುವುದು ಪ್ರಥಮತಃ ಆವೇಶವಾಗಿರುವ ಚೇತನ ರಾ.ವಿ. I 30 ನೋಡಿ] ಪ್ರಧಾನ ವಾಯುದೇವರು, ನನ್ನ ಉದ್ಧಾರಾರ್ಥವಾಗಿ ತೀರ್ಥ ಕೊಡಲು ಬರುತ್ತಿದ್ದಾರೆ" ಎಂದು ತಿಳಿದು ಬಿಡಬಹುದು ಎಂದು ಮನಸ್ಸಿನಲ್ಲೇ ಕಲ್ಪಿಸಿಕೊಂಡಿರುವಂತೆ ತೋರುತ್ತೆ. ಆದ್ದರಿಂದಲೇ ಪ್ರಾಮಾಣ್ಯ ಸ್ವತಸ್ತ್ವವನ್ನು ಅನಾದರಿಸಿ, ಪ್ರಮಾಣವಿಲ್ಲದಿದ್ದರೂ ವಾದಿರಾಜಾನೃಜುತ್ವವೇ ಸಿದ್ಧಾಂತವೆಂದು ಮನಸ್ಸಿನಲ್ಲೇ ನಿಶ್ಚಯಿಸಿ ಋಜುತ್ವ ಪಕ್ಷವನ್ನು ಖಂಡಿಸುತ್ತಾ ನಿರ್ಮೂಲ ಶಂಕೆಗಳಿಂದ ಮೂಲ ಪ್ರಮಾಣವಿರುದ್ಧ ತತ್ವಗಳ ವಿಷಯದಲ್ಲೂ ಪ್ರಶ್ನೆ ಮಾಡುತ್ತಾ "ಇದಕ್ಕೇನು ಪ್ರಮಾಣ? ಇದಕ್ಕೇನು ಪ್ರಮಾಣ?" ಎಂದು ಕೇಳುತ್ತಲೇ ಇರುತ್ತಾರೆ. ಈ ರೀತಿಯಾದ ವಿಚಾರ ಸರಣಿಯು ನಾಸ್ತಿಕರ ರೀತಿ. ಮಧ್ವಶಾಸ್ತ್ರವನ್ನು ಮನನ ಮಾಡಿರುವವರ ರೀತಿಯಲ್ಲ. ಆ "ಪ್ರಜ್ಞಾವಾದವು" ತ್ಯಾಜ್ಯವೇ. |
| 3. ಇನ್ನೊಂದು ವಿಷಯವೇನೆಂದರೆ ಮ.ತಾ.ನಿ. XII 16-17 ಮುಂತಾದ ಶ್ಲೋಕಗಳನ್ನು ನೋಡಿದರೆ ಯಾವನು ಯಾವ ಕಾರ್ಯಾರ್ಥವಾಗಿ ಅವತರಿಸಿದ್ದಾನೋ ಅವನು ಆ ಕಾರ್ಯವನ್ನು ಮಾಡಿಯೇ ಸದ್ಗತಿ ಹೊಂದುತ್ತಾನೆ. ಅನ್ಯಥಾ ಇಲ್ಲ. ದೃಷ್ಟಾಂತ: ಪತ್ನಿ ನಿಯೋಗದಿಂದ ದೇವತಾಂಶ ಪುತ್ರರನ್ನು ಪಡೆಯಬೇಕೆಂದೇ ಪಾಂಡುರಾಯನ |

ಅವತಾರ, ಹೀಗೆ ಹೇಳಿದೆ. XXI 178ರಲ್ಲಿ ಯಾವ ಕರ್ಮಕ್ಕೆ ಯಾವ ಚೇತನನು ಅಸಾಧಾರಣ ಕಾರಣನೋ ಆ ಚೇತನನು ಆ ಕರ್ಮದ ಪೂರ್ಣಫಲವನ್ನು ಹೊಂದುತ್ತಾನೆ. ಇತರರು ಅಲ್ಪ ಫಲವನ್ನು ಹೊಂದುತ್ತಾರೆ ಎಂದೂ ಪ್ರಮಾಣವಿದೆ. ಹಾಗೆ ಸಾಧನ ವಿಷಯದಲ್ಲೂ XXII 340 ಲೌಕಿಕ ಕ್ಲೇಶವಿಲ್ಲದೆ, ಸುಖವಾಗಿರಬಹುದೆಂದು, ದೂರಹೋಗಿ ಪರ್ವತ ಗುಹೆಯಲ್ಲಿ ಉತ್ತಮರ ಆಶ್ರಯದಲ್ಲಿ ಸುಖವಾಗಿ ವಾಸಮಾಡಿದರಾಗದು. "ನೈವ ಶತ್ರೂನನುತ್ಸಾದ್ಯ ನಾನಾದಾಯ ಮಹಾದ್ಯಶಃ ನಾಕೃತ್ವಾ ವಾಸುದೇವಾಜ್ಞಾ೦ ರಾಜ್ಞಾಂ ಮುಖ್ಯಾಗತಿರ್ಭವೇತ್" ಎಂದು ಭೀಮಸೇನನು ಯುಧಿಷ್ಠಿರನಿಗೆ ಹೇಳಿದ್ದಾನೆ. ಸ್ವವರ್ಣಾಶ್ರಮ ಧರ್ಮ ಕಾರ್ಯ ಎಲ್ಲಿ ಸನ್ನಿಹಿತವೋ ಅಲ್ಲೇ ವಾಸಮಾಡಬೇಕು ಎಂದು ಭಾವ. ಹೀಗಿರುವುದರಿಂದ ದೇವಾಂಶರಾದ ವಾದಿರಾಜ, ವ್ಯಾಸರಾಜ, ಪುರಂದರ ದಾಸಾದಿಗಳು ದೇವಾಂಶ ಸಂಭೂತರೆಂದು ಸಂಪ್ರತಿಪನ್ನರಾದವರು; ಅಂಥವರು ಯಾವುದೋ ದೇವಕಾರ್ಯಕ್ಕಾಗಿ ಅವತರಿಸಿದವರು; ಅದನ್ನು ನೆರವೇರಿಸಲು ಜನಮಧ್ಯದಲ್ಲಿರಬೇಕಾದರೆ ಪ್ರಾಕೃತ ಜನರ ಮಧ್ಯದಲ್ಲೇ ಇರುತ್ತಾರೆ. ಅವರಂತೆ ವ್ಯವಹರಿಸುತ್ತಿರುತ್ತಾರೆ. ತಾವೇ ಮಾಡಬೇಕಾದ ಕಾರ್ಯ ದೈವೇಚ್ಛೆಯಿಂದ ಒದಗಿದಾಗ ಉತ್ಸಾಹದಿಂದ ಅದನ್ನು ಮಾಡಿಬಿಟ್ಟು ಇತರ ವಿಷಯಗಳಲ್ಲಿ ಅಜ್ಞರಂತೆ ಸುಮ್ಮಗಿರುತ್ತಾರೆ. ಅನಧಿಕಾರಿಜನರಿಗೂ, ಅಪಕ್ವಾಧಿಕಾರಿಗಳಿಗೂ ಸ್ವಮಹತ್ವವನ್ನು ತಿಳಿಸದೆ ಮೋಹಕ ವ್ಯಾಪಾರವನ್ನು ಮಾಡುತ್ತಾರೆ. ಹಾಗೆ ಅಯೋಗ್ಯರಿಗೆ ಭ್ರಮೆ ಹುಟ್ಟಿಸಿದ್ದರಿಂದ ಅವರಿಗೆ ಪುರುಷಾರ್ಥವೃದ್ಧಿ ಇದೆ. ದೇವರಿಗಾದರೆ ದೇವಕಾರ್ಯ ಮಾಡಿದಂತಾಗುತ್ತೆ. ದೃಷ್ಟಾಂತ: ಕೃಷ, ಭೀಮರು ಸ್ವಸ್ವರೂಪ ವಿಮೋಹಕ ಚೇಷ್ಟೆಗಳನ್ನು ಮಾಡುತ್ತಿದ್ದರು. ಅವೈಶ್ಣವರು ತಮ್ಮನ್ನು ದ್ವೇಷಮಾಡುವುದಕ್ಕೆ ಕಾರಣಗಳಾದ ಚೇಷ್ಟೆಗಳನ್ನು ಮಾಡಿದರು. ಹಾಗೆ ಶುದ್ಧ ಧರ್ಮಸ್ಥಿತರಾಗಿ, ಮನೋವಾಕ್ಕಾಯ ಕರ್ಮಗಳಲ್ಲಿ ಏಕಪ್ರಕಾರ ಇರಬೇಕೆಂಬ ಮುಖ್ಯ ಲಕ್ಷಣಯುಕ್ತರಾಗಿದ್ದರೂ, ಋಜುಗಳು ಅಸಾಧಾರಣ ಧರ್ಮನಿಷ್ಠರಾಗಿದ್ದರೂ ಭೂಲೋಕದಲ್ಲಿ ಸರ್ವಜನಮಧ್ಯದಲ್ಲಿ ಕೇವಲ ಶುದ್ಧಕಾರ್ಯಕರ್ತರಾಗಿ ಕಾಣುತ್ತಿರುತ್ತಾರೆಂದು ತಿಳಿಯಬಾರದು. ಅನಿತರ ಸಾಧಾರಣವಾದ ಸರ್ವ ಕರ್ಮಗಳನ್ನೂ ತಾವೇ ಮಾಡಿಬಿಡುವುದಿಲ್ಲ. ಹಾಗೆ ಅವರು ಮಾಡಿಕೊಂಡಿದ್ದರೆ ಏತಕ್ಕೋಸ್ಕರ ಅವತರಿಸಿದ್ದಾರೆಯೋ ಆ ದೇವಕಾರ್ಯವೇ ಕೆಟ್ಟು ಹೋಗಿ ಆಕೃತತತ್ವ ದೋಷ ಬರುತ್ತೆ. ಆದ್ದರಿಂದ ಈ ವಿವೇಕ ತಿಳಿಯಬೇಕು. ಅವರು ಮಾಡುವ ಕಾರ್ಯಗಳೆಲ್ಲಾ ಮಹತ್ವಯುಕ್ತವಾಗಿ ಕಾಣದಿದ್ದರೂ ಅವರು ಅನುಷ್ಟಿಸುವ ಮಾನಸ ಧರ್ಮಸ್ಥಿತಿಯು ಅನಿತರ ಸಾಧಾರಣ ಮಹತ್ವವುಳ್ಳದ್ದೇ ಆಗಿರುತ್ತೆ ಎಂದು ಒಪ್ಪಬೇಕು. ಆ ಧರ್ಮಸ್ಥಿತಿಯು ಅತೀಂದ್ರಿಯವು, ಪ್ರತ್ಯಕ್ಷ ಯೋಗ್ಯವಲ್ಲ. ಈ ಪ್ರಮೇಯವೆಲ್ಲವನ್ನೂ ತಿಳಿಯದೇ ಅಥವಾ ಅನಾದರಿಸಿ ಕೆಲವು ಕಾರ್ಯಲಿಂಗಗಳನ್ನು ನೋಡಿ ಅದರಿಂದ ಋಜುತ್ವಾನೃಜುತ್ವಗಳನ್ನು ನಿಶ್ಚಯಿಸಿ ಬಿಡಬಹುದೆಂದು ಪೂರ್ವ ಪಕ್ಷಿಗಳು ಉತ್ಸಹಯುಕ್ತರಾಗಿದ್ದಾರೆ. ಅದಕ್ಕಿಂತ ಹೆಚ್ಚಿನ ಮಿಥ್ಯಾಜ್ಞಾನ ಕಾರ್ಯವು ಯಾವುದು? ಆ ದೋಷ ಪ್ರದರ್ಶನವು ಅವರ ಗ್ರಂಥದ 19-20 ಪುಟದಲ್ಲಿನ ವಾಕ್ಯ ಉದಾಹರಿಸಿ ದ್ವಿತೀಯಾಧ್ಯಾಯದಲ್ಲಿಯೇ ಮಾಡಲ್ಪಟ್ಟಿದೆ. ಇಲ್ಲಿ ಸಂಗತವಾದ್ದರಿಂದ ಸಂಗ್ರಹ ರೂಪವಾಗಿ ನಿರೂಪಿಸಲ್ಪಡುತ್ತೆ. ತಥಾಹಿ: ಯದ್ಯಪಿ ದೇವತೆಗಳ ಅದರಲ್ಲೂ ಋಜುಗಳ ದೇಹಲಕ್ಷಣಗಳು ಅವರು

ಭೂಮಿ ಲ್ಲಿ ಅವತರಿಸಿದ್ದಾಗಲೂ ಅವರನ್ನು ಬಿಟ್ಟಿರುವುದಿಲ್ಲ. ಹಾಗಿದ್ದರೂ ಆ ಲಕ್ಷಣಗಳು ಸಾಮಾನ್ಯ ಪ್ರತ್ಯಕ್ಷಗಮ್ಯವಲ್ಲವೆಂದು ನಿರ್ಣಯ ಪ್ರಮಾಣವಿದೆ. **XXX 125** "ಸಮಸ್ತ ಲಕ್ಷಣಾಭಿಜ್ಞಾಃ ಕೃಷ್ಣಃ ಸತ್ಯಾವೃಕೋದರಃ | ಕೃಷ್ಣಾಚ ಪಂಚಮೋನಾಸ್ತಿ ವಿದ್ಯಾಶುದದ್ಧೇಯಮಂಜಸಾ | ಪ್ರಸಂಗಾತ್ಪ್ರಾಪ್ತುಮಿಚ್ಛೇತ್ತಾಂ ವಿದ್ಯಾಶೀಲೋ ಯುಧಿಷ್ಠಿರಃ || ಇತಿ ಲೋಭಾತ್ತು ಪಾಂಚಾಲೀ ವಾಸುದೇವಂ ನ್ಯವಾರಯತ್ ||126|| ಎಂದಿದೆ. ಆದ್ದರಿಂದಲೇ ಹನುಮಂತನ ಲಕ್ಷಣಗಳು ನೋಡಲ್ಪಟ್ಟವೆಂದು ವಾಲ್ಮೀಕಿ ರಾಮಾಯಣದಲ್ಲಾಗಲೀ, ತಾತ್ಪರ್ಯ ನಿರ್ಣಯಸ್ಥ ರಾಮಕಥೆಯಲ್ಲಾಗಲೀ ಇಲ್ಲ. ಕಲಿಯುಗದ ಕಾಲದ ಶ್ರೀ ವ್ಯಾಸತೀರ್ಥರ ದೆಸೆಯಿಂದ ವಾಲಿಯು ಉತ್ತಮ ಜ್ಞಾನಿ, ವಿಟ್ಠಲ ಪೂಜಕ; ಅವನು ಪೂಜಿಸಿದ ವಿಟ್ಠ ಪ್ರತಿಮೆಯು ಈಗ ಸೋದೆ ಮಠದಲ್ಲಿದೆ. ಅಂಥ ವಾಲಿಯೂ ಹನುಮಂತನ ಲಕ್ಷಣಗಳನ್ನು ನೋಡಲಿಲ್ಲ. ತಾರೆಯ ಕಾಣಲಿಲ್ಲ. ಜಾಂಬವಂತಾದಿಗಳೂ ನೋಡಲಿಲ್ಲ. ಜಾಂಬವಂತಾದಿಗಳು ದೇಹ ದಾರ್ಢ ನೋಡಿ ಬಲಾತಿಶಯಾದಿ ಜ್ಞಾನ ಹೊಂದಿದ್ದರು; ಆದರೆ ಋಜು ಪ್ರತ್ಯಕ್ಷದಿಂದಾಗಲೀ ಮೂವತ್ತೆರಡು ಲಕ್ಷಣ ದರ್ಶನದಿಂದಾಗಲೀ ಅಲ್ಲ. ಪೂರ್ವಪಕ್ಷಿಗಳು ಹಾಗೆ ತಿಳಿದು ವಾಕ್ಯ ಬರೆದಿರುವುದು ಅಸಂಗತ ಕಥನವೇ.

**4.** ಹೀಗೆ ಯುಧಿಷ್ಠಿರನಿಂದಾಗಲೀ, ದುರ್ಯೋಧನಾದಿಗಳಿಂದಾಗಲೀ ಭೀಮನ ಲಕ್ಷಣಗಳು ನೋಡಲ್ಪಟ್ಟವೆಂದು ಮಹಾಭಾರತದಲ್ಲಿಲ್ಲ. ಆದ್ದರಿಂದ ದುರ್ಯೋಧನ ಹೇಳಿದ ದೇಹಬಲಾಧಿಕ್ಯದ ವಾಕ್ಯೋದಾಹರಣೆಯು ಅಸಂಗತವೇ. ಭೀಮನ ದೇಹದಾರ್ಢಜ್ಞಾನವು ಅವರಿಗಾಗಿದ್ದುದು ಲಕ್ಷಣ ಪ್ರತ್ಯಕ್ಷ ಜನ್ಯವಲ್ಲ. ಋಜುತ್ವ ಪ್ರತ್ಯಕ್ಷದ ಕಾರ್ಯವೂ ಅಲ್ಲ. ಬಾದರಾಯಣರು ಲಕ್ಷಣಗಳನ್ನು ಹೇಳಿದ್ದರೆ ಅದು ಆಗಮವಾಯಿತು. ಹೀಗೆಯೇ ಅಸಾಧಾರಣ ಕಾರ್ಯಕಾರಿತ್ವವೂ ಆಗಮಸಹಾಯವಿಲ್ಲದೆ ಪ್ರತ್ಯಕ್ಷ ಮಾತ್ರದಿಂದ ತಿಳಿಯಲ್ಪಡತಕ್ಕದ್ದಲ್ಲ. ಎಷ್ಟೋ ಜನ ಶೂರರಿದ್ದಾರೆ; ಅವರ ಮಧ್ಯೆ ಹನುಮಂತನೂ ಒಬ್ಬ ವೀರಾಗ್ರೇಸರನು, ಭೀಮನೂ ಪರಾಕ್ರಮಿಯು ಎಂದು ಸಂಮುಗ್ಧ ಜ್ಞಾನವು ತತ್ಕಾಲೀನ ಶೋಧಕ ಜನರಿಗೆ ಹುಟ್ಟಿ ಹೋಗುತ್ತೆ; ಇವನು ಜೀವೋತ್ತಮನೇ, ಏಕೈಕವೀರನೇ ಎಂದು ತಿಳಿಯುವುದಿಲ್ಲ. ಹಾಗೆ ಎಲ್ಲರಿಗಿರುವ ಸಾಮಾನ್ಯ ಪ್ರಕಟನೆಯಿಂದ ಅವರಿಗೆ ಪುಣ್ಯವೃದ್ಧಿ ಹೇಳಿದೆ. ಮಧ್ವಾಚಾರ್ಯರವರ ಸ್ವಷ್ಟೋಕ್ತಿಯು ಅಪವಾದ ರೂಪ. ಹಾಗೆ ಭಗವದಾಜ್ಞೆಯಾಗಿದೆ, ಎಂದು ನಿಶ್ಚಯಿಸಲ್ಪಡುತ್ತೆ, ಅನ್ಯಥಾ ಇಲ್ಲ. ಅದಕ್ಕೇ ಮಧ್ವಮುನಿಗಳನ್ನು ನೋಡಿಯೂ ಕೂಡ ಪಂಡಿತಾಚಾರ್ಯರು "ಇವರು ಮೂವತ್ತೆರಡು ಲಕ್ಷಣವುಳ್ಳವರಾಗಿದ್ದಾರೆ" ಎಂದು ಹೇಳಲಿಲ್ಲ. ಆಗಮದಿಂದಲೇ ಗುರೂಪದೇಶದಿಂದಲೂ ಕೂಡ ಅವರು ತತ್ವ ತಿಳಿದರು.

ಆದ್ದರಿಂದ ವಾದಿರಾಜರ ಕಾಲದಲ್ಲೂ ವ್ಯಾಸರಾಯರಿಗಾದ ವಾದಿರಾಜ ದೇಹಸ್ಥ ಮೂವತ್ತೆರಡು ಲಕ್ಷಣಗಳ ಅಪ್ರತ್ಯಕ್ಷವು ವಾದಿರಾಜರಲ್ಲಿ ಆ ಲಕ್ಷಣಗಳು ಇಲ್ಲದೇ ಇದ್ದ ಪ್ರಯುಕ್ತವಲ್ಲ; ಮತ್ತೆನೆಂದರೆ ದ್ರೋಣಾಚಾರ್ಯರು ಪಂಡಿತಾಚಾರ್ಯರುಗಳಿಗೆ ಹೇಗೋ ಹಾಗೆ ಲಕ್ಷಣಗಳು ಪರೀಕ್ಷಿತ ದೃಷ್ಟಿಗೆ ಮಾತ್ರ ವಿಷಯವಾಗತಕ್ಕವುಗಳಾದ ಪ್ರಯುಕ್ತವೆಂದೇ ನಿಶ್ಚಯಿಸಬೇಕು. ವ್ಯಾಸರಾಜಾದಿಗಳ ಅನುಕ್ತಿಯಿಂದ ವಾದಿರಾಜರಲ್ಲಿ ಲಕ್ಷಣಾಭಾವ ಸಾಧಿಸುವುದು ಮೊಣಕೈಯ್ಯಲ್ಲಿನ ಬೆಲ್ಲವನ್ನು ನೆಕ್ಕಿದಂತೆಯೇ ಸರಿ. ಅನುಮಾನವು ವ್ಯಾಪ್ತಿ ಹೀನವಾಗುತ್ತೆ, ದ್ರೋಣಕೃಪಾಶ್ವತ್ಥಾಮಾದಿಗಳ "ಅನುಕ್ತಿ"ಯಲ್ಲಿ ವ್ಯಭಿಚಾರಬರುತ್ತೆ. ಯಾರು ಜ್ಞಾನಿಯೋ ಅವನು ಪುರೋವೃತ್ತಿ

ವ್ಯಕ್ತಿಯಲ್ಲಿ ಲಕ್ಷಣಾಭಾವವನ್ನು ತಿಳಿದುಬಿಡುತ್ತಾನೆ ಎಂದು ವ್ಯಾಪ್ತಿ ಇಲ್ಲ. ಸಾತ್ಯಕಿ ಜ್ಞಾನದಲ್ಲಿ ವ್ಯಭಿಚಾರ ಬರುತ್ತೆ. ಸಾತ್ಯಕಿಯು ಅರ್ಜುನನು ಕೃಷ್ಣಾಧಿಕನೆಂದು ಆಗಿಂದಾಗ್ಗೆ ತಿಳಿಯುತ್ತಿದ್ದನು. ಲಕ್ಷಣಾಭಾವವನ್ನು ನೋಡಲು ಅಶಕ್ತನಾದನೆಂದಾಯಿತು. ಇದರ ಮೇಲೆ ತಿಳಿದವರೆಲ್ಲಾ ಹೇಳುತ್ತಾರೆ ಎಂಬ ವ್ಯಾಪ್ತಿಯೂ ಇಲ್ಲ. ಅವಶ್ಯವಕ್ತವ್ಯವನ್ನು ಸರ್ವಥಾ ಹೇಳದೆ ಇರೋಣವೆಂಬ ಧರ್ಮಕ್ಕೆ ತಾನೇ ಅನುಕ್ತಿ ಎಂದು ಹೆಸರು ಎಂದು ಪೂರ್ವಪಕ್ಷಿಗಳೇ ಪುಟ 20ರಲ್ಲಿ ಹೇಳಿದ್ದಾರೆ. ಈ ಲಕ್ಷಣಾದಿಗಳು ಅವಶ್ಯವಕ್ತವ್ಯವೇ ಅಲ್ಲ. "ನ ಧರ್ಮೋ ದೇವತಾನಾಂ ಹಿ ಜ್ಞಾತವಾಸಶ್ಚಿರಂ ನೃಷು ॥ ಕಾರಣಾದೇವಹಿ ಸುರಾ ನೃಷು ವಾಸಂ ಪ್ರಕುರ್ವತೇ ॥ ಇತಿ ಮ.ತಾ.ನಿ. XI 42 ಪ್ರಮಾಣವಿದೆ. ಅವ್ಯಕ್ತ ಅಥವಾ ಸೂಕ್ಷ್ಮವಾಗಿರುವುದರಿಂದ ಲಕ್ಷಣಗಳು ಅವಶ್ಯ ಜ್ಞಾತವ್ಯವೂ ಅಲ್ಲ. ಋಜುತ್ವವೇನೋ ಪೂಜಾರ್ಥವಾಗಿ ಅವಶ್ಯ ತಿಳಿಯಲ್ಪಡಬೇಕಾದ್ದೇ. ಅದು ಉಪದೇಶಾದಿ ಪ್ರಮಾಣಗಳಿಂದ ಗೊತ್ತಾಗುತ್ತೆ. ಪ್ರತ್ಯಕ್ಷದಿಂದಲ್ಲ. ಅಪರೀಕ್ಷಿತ ಪ್ರತ್ಯಕ್ಷವು ಈ ವಿಷಯದಲ್ಲಿ ಪ್ರವರ್ತಿಸುವುದೇ ಇಲ್ಲ.

5. "ಅನನ್ಯ ಸಾಧಾರಣ ಕಾರ್ಯಕಾರಿತ್ವಂ ಚಾನ್ಯೈತಿಹಾಸಿಕಂ । ವ್ಯಾಸಾರ್ಯಾದೀನಾಮೇವತತ್ತ್ಯೋಽಪತಿಶಯ ಕಾರ್ಯಕಾರಿತ್ವ ದರ್ಶನಾಚ್ಚ" ॥ ಎಂಬ (ಪುಟ 20-21) ಪೂರ್ವಪಕ್ಷ ಗ್ರಂಥದ ವಾಕ್ಯವೂ ಅಯುಕ್ತವೇ. ಅನನ್ಯ ಸಾಧಾರಣ ಧರ್ಮರತತ್ವವೇ ಋಜುಲಕ್ಷಣವೆಂದು ಹಿಂದೆ ಪ್ರದರ್ಶಿತವಾಗಿದೆ. ಕ್ವಚಿತ್ ಅನನ್ಯ ಸಾಧಾರಣ ಕಾರ್ಯಕಾರಿತ್ವವೂ ಉಂಟು ಎಂದು ಪ್ರಮಿತವಾಗಿದೆ. ಆಗಿನ ಕಾಲದ ಇನ್ನು ಯಾವ ಚೇತನನು ತಾನೇ ಸೋದಾರಾಜ ಗುರುವನ್ನು ಮರ್ದನಮಾಡಿ, ಮಂತ್ರಸಿದ್ಧಿಯನ್ನು ಪ್ರದರ್ಶಿಸಿ ಬ್ರಾಹ್ಮಣ್ಯೋದ್ಧಾರ ಮಾಡಲು ಸಮರ್ಥರಿದ್ದರು? ಇನ್ನಾವ ಚೇತನನು ಶ್ರೀಮಧ್ವಾಚಾರ್ಯರ ವ್ಯವಸ್ಥೆಯನ್ನು ಪ್ರಕಾರಾಂತರಮಾಡಿ ಅಷ್ಟಮಠೀಯರಿಗೆ ಪರ್ಯಾಯ ವ್ಯವಸ್ಥೆಯನ್ನು ಕ್ಲೃಪ್ತಿಮಾಡಿ ಎಂಟು ಮಠದವರಿಗೂ ಗ್ರಾಮ ಗೃಹಾದಿಗಳನ್ನು ಮಾಡಿ ಕೊಡಲು ಸಮರ್ಥರಿದ್ದರು ? ಇನ್ನಾವ ಬೇರೆ ವೀರ ಪುರುಷರು ಭೂತರಾಜರನ್ನು ವಶೀಕರಣ ಮಾಡಿಕೊಳ್ಳುತ್ತಿದ್ದರು? ರಾಜ ಸಹಾಯದಿಂದ ಮಾಡುವುದಕ್ಕೆ ಸುಕರವಾದದನ್ನೆಲ್ಲಾ ಇತರರು ಮಾಡಿದ್ದಾರೆ. ಗುರುರಾಜರು ರಾಜನಿಗೂ ಭಂಡಾರದಾನಮಾಡಿ ಅವನನ್ನು ವಿಪತ್ತುಗಳ ಮತ್ತು ರೋಗಗಳ ದೆಸೆಯಿಂದ ಉದಧಾರಮಾಡಿದ್ದಾರೆ. ಇದೇ ಮೊದಲಾದ ಅನೇಕ ರಹಸ್ಯಗಳಿವೆ. ಅವು ಚರ್ಚಾಯೋಗ್ಯವಲ್ಲ. ಇಷ್ಟು ಸಂಕ್ಷೇಪ ವಿವರಣೆಯೇ ಸಾಕು. ಇದರ ಮೇಲೆ ವಾದಿರಾಜರ ದೆಸೆಯಿಂದ ಅಧಮರಾದ ಅನ್ಯರಲ್ಲಿ ಅದರಲ್ಲೂ ವ್ಯಾಸತೀರ್ಥರಲ್ಲಿ ಆಧಿಕ್ಯ ದರ್ಶನವಾಯಿತು ಎಂದೇ ಇಟ್ಟುಕೊಳ್ಳೋಣ. ಅರ್ಜುನನಲ್ಲಿ ಭೀಮಾಧಿಕ್ಯವೂ, ಕೃಷ್ಣಾಧಿಕ್ಯವೂ ಅನೇಕರಿಂದ ದೃಷ್ಟವಾಯಿತು. ಜರಾಸಂಧನಲ್ಲಿ ಕೃಷ್ಣಾಧಿಕ್ಯವು ಯುಧಿಷ್ಠಿರನಿಂದಲೇ ದೃಷ್ಟವಾಯಿತು. ಬಾದರಾಯಣರ ಮತ್ತು ಮಧ್ವಾಚಾರ್ಯರ ವಾಕ್ಯಗಳಿಂದ ಮತ್ತು ಸದಾಗಮಗಳಿಂದ ನಮಗೆ ಸಿದ್ಧಾಂತವು ತಿಳಿದಿದೆ. ಆ ಕಾಲದ ಜನರಿಗೆ ಹಾಗೆ ಸಿದ್ಧಾಂತವು ತಿಳಿದಿರಲಿಲ್ಲ. ಹಾಗಾದರೂ ಕೃಷ್ಣ ಭೀಮ ವಾದಿರಾಜರ ಸ್ವರೂಪಮಹತ್ವವು ಎಲ್ಲಿ ಹೋಗುತ್ತೆ? ಯಾರಿಂದ ಅಪಹರಿಸಲ್ಪಡುತ್ತೆ? ಕಾರ್ಯಮಹತ್ವ ಒಂದೇ ಸರ್ವದಾ ಸ್ವರೂಧಿಕ್ಯಕ್ಕೆ ಜ್ಞಾಪಕವೆಂಬ ನಿಯಮವಿಲ್ಲ. "ಯಸ್ಯಾಧಿಕ್ಯಂತು ವೇದೋಕ್ತಂ ಪಂಚರಾತ್ರೇಽಥವಾ ಭವೇತ್ । ಇತಿಹಾಸೇ ಪುರಾಣೇ ವಾಸೋಽಧಿಕೋನೇತರಃ ಕ್ವಚಿದಿತಿ ಬ್ರಹ್ಮತರ್ಕೆ" ಎಂದು

| |
|---|
| ಬೃ.ಭಾ. VIII 2ರಲ್ಲಿದೆಯಾದ್ದರಿಂದ ವೇದೈಕಗಮ್ಯ ವಿಷಯದಲ್ಲಿ ಪ್ರತ್ಯಕ್ಷವು ನಿಶ್ಚಿತ ಪ್ರಮಾಣವಲ್ಲ. ಎಲ್ಲಿ ಸ್ವರೂಪಾಧಿಕ್ಯವೋ ಅಲ್ಲಿ ಪ್ರತ್ಯಕ್ಷತಃ ಆಧಿಕ್ಯ ದರ್ಶನವೂ ಆಗುತ್ತೆಂದು ವ್ಯಾಪ್ತಿ ಇಲ್ಲ. |
| 6. ಆದ್ದರಿಂದಲೇ ಪುಟ 21ರಲ್ಲಿ ಪೂರ್ವಪಕ್ಷ ಗ್ರಂಥದಲ್ಲಿ ಉಕ್ತಸರ್ವ ಅನುಮಾನಗಳೂ ಪ್ರಮಾಣ ಬಾಧಿತಗಳು. ಉಪಜೀವ್ಯಾಗಮ ವಿರುದ್ಧವೆಂದರ್ಥ. "ಋಜುತ್ವ ಸಿದ್ಧಿಯಾದ ಮೇಲೆ ಮೋಹಕತ್ವ ಕಲ್ಪನೆಗೆ ಅಂಗೀಕಾರ ಯುಕ್ತ" ಎಂಬ ಪೂರ್ವಪಕ್ಷಿಯ ಮಾತು ಅನ್ಯೋನ್ಯಾಶ್ರಯ ದೋಷದುಷ್ಟವಾಗಿದೆ. "ಅನೃಜುತ್ವ ಸಾಧಕ ಆಗಮವಿದ್ದರೆ ಋಜುತ್ವ ಅಪ್ರಾಮಾಣಿಕ; ಪ್ರಮಿತ ಋಜುತ್ವ ಅಪ್ರಾಮಾಣಿಕ ಎಂದು ಒಪ್ಪಿದರೆ ಅನೃಜುತ್ವಕ್ಕೆ ಪ್ರಾಮಾಣಿಕತ್ವ ಪ್ರಾಪ್ತಿ, ಬೇರೆ ಪ್ರಮಾಣವಿಲ್ಲ" ಹೀಗೆ ಅನ್ಯೋನ್ಯಾಶ್ರಯ ಪರಕೀಯರಿಗೆ ತಪ್ಪಿದ್ದಲ್ಲ. ಅನ್ಯಥಾ ಶಂಕೆಯೇ ಹುಟ್ಟುವುದಿಲ್ಲ. ಪ್ರಮಾಣವಿರುವಾಗ "ಋಜುತ್ವ ಸಿದ್ಧಿಯಾದರೆ" ಎಂಬ ಪ್ರತಿಪಕ್ಷಿಗಳ ವಚನವೇ ಪ್ರಾಮಾಣ್ಯಪರತಸ್ತ್ವ ವಾದಿಗಳ ಕಾಲು ಕಟ್ಟಿಕೊಂಡಂತೆ ಆಗಿದೆ. ಮಧ್ಯ ಶಾಸ್ತ್ರಕ್ಕೆ ವಿರುದ್ಧವೇ. |
| 7. ಋಜುತ್ವ ಪ್ರತಿಪಾದಕ ವಾಕ್ಯಗಳೂ ಇರಲಿ, ಪ್ರಾಮಾಣ್ಯ ಸ್ವತಸ್ತ್ವವನ್ನೂ ಒಪ್ಪಬಹುದು; ಆದರೂ ಮನುಷ್ಯ ಕೃತವಾದ್ದರಿಂದ ಬೌದ್ಧ ವಾಕ್ಯದಂತೆ ಐತಿಹ್ಯಾದಿಗಳು ಅಪ್ರಮಾಣಗಳೆಂದು ಏಕೆ ಶಂಕಿಸಕೂಡದು ಎಂಬ ಶಂಕೆಯು ಅ. III "ಆಗಮ ಸ್ವರೂಪ ನಿರೂಪಣ" ಸಂದರ್ಭದಲ್ಲಿ ಪರಿಹರಿಸಲ್ಪಟ್ಟಿದೆ. ಆ ಶಂಕೆಯು II 1-2 ಅಧಿ. ಸುಧೆಗೆ ವಿರುದ್ಧವಾಗಿದೆ. "ಮಾನಂ ಋತೇ" ಪ್ರಮಾಣಾಂತರವನ್ನು ಕೊಡದೆ ಶಂಕೆಯನ್ನು ತಂದೊಡ್ಡುವುಮ ಸರಿಯಲ್ಲವೆಂದು ಅಲ್ಲಿ ಸಿದ್ಧಾಂತಿತವಾಗಿದೆ. ವಿಮತವಾಕ್ಯಗಳು ಅಪ್ರಮಾಣಗಳು, ಮನುಷ್ಯ ಮಾತ್ರ ಕೃತವಾದ್ದರಿಂದ, ಬೌದ್ಧ ವಾಕ್ಯದಂತೆ" ಎಂಬ ಪರೋಕ್ತ ಅನುಮಾನವು "ಮೂಲ ಪ್ರಮಾಣ ವಿರುದ್ಧತ್ವಂ" ಎಂಬ ಉಪಾಧಿಗ್ರಸ್ತವಾಗಿದೆ ಎಂದು ಹೇಳಿಯಾಗಿದೆ. ಆದ್ದರಿಂದ ವಿಮತ ವಾದಿರಾಜ ಋಜುತ್ವ ಬೋಧಕ ಆಗಮವು, ನಿರ್ದುಷ್ಟ ಪ್ರಮಾಣವೇ, ಸರ್ವಮೂಲ ಪ್ರಮಾಣಾವಿರುದ್ಧವಾದ್ದರಿಂದ, ದ್ವಾದಶ ಸ್ತೋತ್ರದಂತೆ ಅಥವಾ ಪ್ರಾಚೀನ ಚರಿತ್ರ ಗ್ರಂಥದಂತೆ ಎಂಬ ಸದನುಮಾನವು ಫಲಿತವಾಯಿತು. ಇದರ ಮೇಲೆ "ವಿಮತ ಋಜುತ್ವ ಬೋಧಕ ಆಗಮವು ಅಪ್ರಮಾಣವು, ಅನಾಪ್ತ ಪ್ರಣೀತವಾದ್ದರಿಂದ, ಆಪ್ತಾ ಅಪ್ರಣೀತವಾದ್ದರಿಂದ, ಶಾಕ್ತೇಯ ಗ್ರಂಥದಂತೆ" ಎಂದರೆ ಅದು ಸರಿಯಲ್ಲ ಹೇತುವು ಅಪ್ರಯೋಜಕವು. "ಪ್ರಮಾಣ ಬಾಧಿತತ್ವ" ಎಂಬ ಉಪಾಧಿ ಇದೆ; ಇತ್ಯಾದಿ ದೋಷಗಳು ಅನುವ್ಯಾಖ್ಯಾನದಲ್ಲಿ ಸರ್ವಜ್ಞಾಚಾರ್ಯರಿಂದ II 1-4ರಲ್ಲಿ ಹೇಳಿದ ರೀತಿಯಲ್ಲಿ ಬಂದು ಬಿಡುತ್ತವೆ. ಸನ್ಯಾಯರತ್ನಾವಳೀ ಸುಧೆಗಳಲ್ಲಿ, ಆ ಕ್ರಮ ಉಪಪಾದಿತವಾಗಿದೆ. ಆದರೂ "ವಿಮತ ವಾದಿರಾಜ ಋಜುತ್ವ ಆಗಮವು ಅಪ್ರಾಮಾಣವು, ಅದರಲ್ಲಿ ಹೇಳಿದಂತೆ ಅನುಷ್ಠಾನ ಮಾಡಿದರೂ ಫಲಪ್ರಾಪ್ತಿಯಾಗಿಲ್ಲವಾದ್ದರಿಂದ" ಎಂದರೆ ಈ ಅನುಮಾನವೂ ಸರಿಯಲ್ಲ. ಹೇತುವಿಗೆ ಅಸಿದ್ಧಿ ದೋಷವೇ ಇದೆ. ಸ್ವಾ.ವೃಂ.ಆ. XII 22-24 "ವಿಪ್ರಸ್ಯ ಪುತ್ರ ಲಾಭೋಯಂ ಭವತೀತಿ ಮಯೋದಿತಂ । ತತ್ಸತ್ಯಂ ನಾತ್ರ ಸಂದೇಹೋ ವಿಶ್ವಾಸಂ ಕುರು ಸರ್ವದಾ।" XI 25-26 "ಪರೇತಸ್ವಾಪ್ಷೀಂ ಮಮ ಸತ್ಕೃತಿಂಚ ನೋಚೇದ ದಂಡಸ್ಯ ಕರೋಮಿ ತೀವ್ರಂ ॥ ಏವಂ ಮದ್ಭಕ್ತಿ ಮತ್ತಂಶ್ಚ ಸರ್ವ ಏವ ಪರಂತ್ವಿಮಾಂ ॥ ಖ್ಯಾತಾಂ ಕುರ್ವಂತು ಲೋಕೇಷು ನೋಚೇನ್ಮದ್ರೋಹಿಣಶ್ಚತೇ ॥ ಪರತಾಂ |

ಶೃಣ್ವತಾಂ ಚಾಪಿ ಖ್ಯಾತಾಮುರವ್ಯಾಂ ಪ್ರಕುರ್ವತಾಂ । ಸರ್ವೇಷ್ಟಾನಿ ಭವಿಷ್ಯಂತಿ ಹಯಗ್ರೀವಸ್ಯಚಾಜ್ಞಯಾ ॥ XX 86 "ತಸ್ಮಾಚ್ಚ ಮತ್ಕೃತೇಃ ಪಾಠಂ ಶಿಷ್ಟಾಃ ಕುರ್ವಂತು ನಾನ್ಯಥಾ ॥ ಇಷ್ಟಂ ಚ ತೇಷಾಂ ಭವತಿ ಕಷ್ಟ0ನೇಹ ಪರತ್ರ ಚ ॥.......ತಸ್ಮಾನ್ಮ್ಯೋಕ್ತಂ ಯತ್ಸರ್ವಂ ತತ್ಸತ್ಯಂ ನಾತ್ರ ಸಂಶಯಃ ॥ ಸ್ವಾಪ್ನ ಶ್ಲೋಕೇಪಿ ಯತ್ಪ್ರೋಕಂ ಪ್ರಾಪ್ಸುವನ್ ತಚ್ಚನಾನ್ಯಥಾ ॥ .......ದಿವಾ ಸ್ವಾಪ್ನೇರಿತಾನ್ಶ್ಲೋಕಾನ್ ಭವಾಬ್ಧೇ ಸ್ತಾರಕಾನ್ಸುತ । ಸುವಾಗ್ವೈಖರ್ಯರಾಶಿರ್ಮೆ ತವಾರ್ಥೈಃ ಪೂರಯಿಷ್ಯತಿ॥" XXI 12 "ತಸ್ಮಾನ್ಮಯೋಕ್ತಂ ಸಕಲಂ ಲೌಕಿಕಂ ವ್ಯಾಪ್ಯಲೌಕಿಕಂ । ಸತ್ಯಂ ಸತ್ಯವತಾಂ ನಾಥ ಸುತ ತತ್ವಮತೇಃಕೃತಿನ್॥ XI 53 "ಇಮಾಂ ಕೃತಿಂ ಮಮಸ್ವಾಪ್ನೀಂ ಆದರಾದ್ಯಸ್ತು ವಕ್ಷ್ಯತಿ ॥ ತಸ್ಯ ಶ್ರೀಶಃ ಪ್ರಸನ್ನಃ ಸನ್ ಶುಭಂ ದಾಸ್ಯತ್ಯಸಂತಯಃ॥" ಸತ್ಯಂ ಸತ್ಯಂ ಪುನಃ ಸತ್ಯಂ ತ್ರಿವಾಚಾಪಿ ಮಯೋಚ್ಯತೇ । ಶೃಣ್ವತಾಂ ಪಠತಾಂ ಚಾಪಿ ಸರ್ವಸಂಪದ್ಭವಿಷ್ಯತಿ ।" ಇತ್ಯಾದಿ ಅನೇಕ ವಾಕ್ಯಗಳಿವೆ. ವಾ.ಗು.ಚ. VII 25 "ಸ್ವಾಪ್ನವೃಂದಾವನಾಖ್ಯಾನಂ ದಿವ್ಯಾದ್ಭುತ ಕಥಾಶ್ರಯಂ । ಪಠತಾಂ ಶೃಣ್ವತಾಂ ಚೈವ ಕಾಮಿತಪ್ರದ ಮಂಜಸಾ॥" ಎಂದು ಹೇಳಿ ಅಲ್ಲೇ 28-33 ಶ್ಲೋಕಗಳಲ್ಲಿ ಸೇವಾ ಪ್ರಕಾರವೂ ಪ್ರತಿಪಾದಿತವಾಗಿದೆ. ವಿಶ್ವಪ್ರಿಯವಿಲಾಸ, ಪ್ರಾಮಾಣ್ಯ ಬೋಧಿನೀ [ಇನ್ನೂ ಅನೇಕ ವಾಕ್ಯಗಳು ಇದೇ ಅಧ್ಯಾಯದಲ್ಲಿ ಮುಂದೆ ಉದಾಹೃತವಾಗಿವೆ.]

ಇತ್ಯಾದಿ ಗ್ರಂಥಗಳಲ್ಲೂ ಆಖ್ಯಾನವೂ, ವೃನ್ದಾವನವೂ ಸೇವಾ ಮಾಡುವವರಿಗೆ ಅಭೀಷ್ಟಪ್ರದವೆಂದು ನಿರೂಪಿತವಾಗಿದೆ.

8.ಕಿಂಚ ಗ್ರಂಥವು ಪ್ರಮಾಣವಿರುದ್ಧವೆಂದು ತಿಳಿದಮೇಲೆ ಆ ಗ್ರಂಥ ವಿಷಯದಲ್ಲಿ ಸುಮ್ಮಸುಮ್ಮನೆ, ಸ್ಪಷ್ಟ ವಿರೋಧಿ ಸಾಕ್ಷಿ ಇಲ್ಲದೆ, ಫಲಾನುಪಲಬ್ಧಿ ಶಂಕೆಯನ್ನು ತಂದೊಡ್ಡುವುದು ಸ್ವತಸ್ತ್ವವಾದಿಗಳಿಗೆ ಸಾಂಪ್ರದಾಯಿಕವಲ್ಲ. ಹಾಗೆ ಮಾಡುವುದಾದರೆ, ವೇದದಲ್ಲೂ ವೃಷ್ಟ್ಯಾದಿಗಳು ಬರಲಿಲ್ಲವಾದ್ದರಿಂದ ವಾಕ್ಯವು ಅಪ್ರಮಾಣವೇ ಸರಿ ಎಂದು ಶಂಕಾಶೂಕವು ಉದ್ಭವಿಸಿಯೇ ಬಿಡುತ್ತೆ. ಅಪೌರುಷೇಯತ್ವ ಪೌರುಷೇಯತ್ವ ನಿಮಿತ್ತಗಳಿಂದ ಭೇದವಿದೆ ಎಂದು ತೋರಿಸಬಹುದು ಎಂದು ಸಹ ಹೇಳಲಾಗುವುದಿಲ್ಲ. ಉಭಯತ್ರ ಪ್ರಾಮಾಣ್ಯಕ್ಕೆ ಸ್ವತಸ್ತ್ವವಿರುವಾಗ ಆ ಭೇದವು ಕಾರ್ಯಕಾರಿಯಲ್ಲ ಎಂದು ಹೇಳಲು ಶಕ್ಯವಾಗುತ್ತೆ. ॥ 1-5 ಬೃ.ಸು. ಭಾಷ್ಯದಲ್ಲಿ 'ದೃಶ್ಯತೇತು' ಎಂಬ ಸೂತ್ರ ವ್ಯಾಖ್ಯಾನಾವಸರದಲ್ಲಿ "ಇತಃ ಪ್ರಾಮಾಣ್ಯಮನ್ಯೇಷಾಂ ನ ಸ್ವತಸ್ತು ಕಥಂಚನ॥ ಅದೃಷ್ಟೋಕ್ತೌ ತತಸ್ತೇಷಾಮಪ್ರಾಮಾಣ್ಯಂ ನ ಸಂಶಯಃ" ॥ ಎಂದು ಫಲಾದರ್ಶನ ಮಾತ್ರದಿಂದ ಅಪ್ರಾಮಾಣ್ಯವನ್ನೇ ನಿಶ್ಚಯಿಸಬಹುದೆಂದು ಹೇಳಿದೆಯಲ್ಲಾ ಎಂದರೆ ಅದು 'ವೇದವಿರುದ್ಧ ಆಗಮಗಳ' ವಿಷಯ ಎಂದರೆ 'ಶಾಸ್ತ್ರಭಾಸ'ವೆಂದು ಕರೆಯಲ್ಪಡುವ "ವೇದ ವಿರುದ್ಧಾಗಮ"ಗಳಲ್ಲಿ ಉಕ್ತ ಫಲವು ಕಾಣದಿದ್ದರೆ ಅಥವಾ ಪ್ರಾಪ್ತವಾಗದಿದ್ದರೆ ಆ ಗ್ರಂಥಕ್ಕೇ ಅಪ್ರಾಮಾಣ್ಯ ಹೇಳಬೇಕು. ವೇದಾನುಸಾರಿ ಅಥವಾ ಅವಿರುದ್ಧ ಗ್ರಂಥಗಳಲ್ಲಿ ಹಾಗಲ್ಲ. ಸ್ವಾ.ವೃಂ.ಆ.ನವು ವೇದಾನುಸಾರಿ, ಮಧ್ವಶಾಸ್ತ್ರನುಸಾರಿ. "ಯಚ್ಚಾನುಕೂಲಮೇತಸ್ಯ ತಚ್ಚ ಶಾಸ್ತ್ರಂ ಪ್ರಕೀರ್ತಿತಂ" ಎಂಬ

ನ್ಯಾಯದಿಂದ ಶಾಸ್ತ್ರ ಶಬ್ದವಾಚ್ಯವು. “ವೇದಾನುಕೂಲ'ವೆಂದರೆ ವೇದಾದ್ಯವಿರೋಧ ರೂಪವಾಗಿ [ಪುಟ 62 ಬ್ರ.ಸೂ.ಭಾ. ಉಡುಪಿ ಕನ್ನಡ Edn. "ಋಗಾದಿಗಳಿಗೆ ಅವಿರುದ್ಧವಾದ ಅರ್ಥವನ್ನು ಪ್ರತಿಪಾದಿಸುವ ಪುರಾಣಗಳು - ಇವೆಲ್ಲವೂ ಶಾಸ್ತ್ರವೆನ್ನಿಸುತ್ತವೆ.” ತ.ನಿ.ಟೀಕಾ ಪುಟ 59 "ತದನ್ಯೇ ತದ್ವಿರುದ್ಧಾಸ್ತದುದಾಸೀನಾಶ್ಚ” MadraS-Edn,] ಅರ್ಥಪ್ರತಿಪಾದನೆ ಮಾಡತಕ್ಕದ್ದು ಎಂದೂ ಅರ್ಥ. ಆದ್ದರಿಂದ ನಿರವಕಾಶ ಪ್ರಮಾಣದಿಂದ ಫಲಾನುಪಲಬ್ಧಿರೂಪ ದೋಷವನ್ನು ಆಪಾದಿಸಬೇಕು. ಹಾಗಿದ್ದರೂ “ತುಷ್ಯತು ದುರ್ಜನಃ” ಎಂಬ ನ್ಯಾಯದಿಂದ ಶಂಕೆಯನ್ನು ಒಪ್ಪಿಕೊಂಡು ಫಲೋಪಲಬ್ದ ವಿಷಯದಲ್ಲಿ ಬೇಕಾದಷ್ಟು ಪ್ರಮಾಣಗಳನ್ನು ಕೊಡಲಾಯಿತು. ವಾ.ಗು.ಚ.ಮುಂತಾದುವುಗಳ ಸಂವಾದವನ್ನೂ ತೋರಿಸಿಯಾಯಿತು.

9. ಇಲ್ಲಿ ಒಂದು ಶಂಕೆ. ಆಖ್ಯಾನ ಪ್ರಾಮಾಣ್ಯ ವಿಷಯದಲ್ಲಿ "ಅದರಲ್ಲಿ ಹೇಳಿದ ಫಲಬರುವುದಿಲ್ಲವಲ್ಲಾ, ಅದನ್ನು ಪ್ರಮಾಣವೆಂದು ಹೇಗೆ ನಂಬುವುದು?” ಎಂದು ಪ್ರಶ್ನೆ ಮಾಡಿದಾಗ ಆಖ್ಯಾನ ವಾಕ್ಯದಿಂದಲೇ ಫಲೋಪಲಬ್ಧಿ ಉಂಟೆಂದು ನಿರೂಪಿಸುವುದು ಯಾವ ನ್ಯಾಯವೆಂದು ಕೇಳಬಹುದು. ಹಾಗೆ ಕೇಳಬಾರದು. ಅಂಥ ಸಂಪ್ರದಾಯವು ತ.ಪ್ರ. II 1-4 ರಲ್ಲಿ ಮಾನ್ಯವೆಂದೇ ಒಪ್ಪಿದ್ದಾರೆ. “ಭವೇದುಕ್ತಾನುಪಲಬ್ಧ್ಯಾ, ವೇದಾಧ್ಯಪ್ರಾಮಾಣ್ಯ ಕಲ್ಪನಂ ಯದಿ ಪಾಶುಪತಾದಿ ಸ್ಮೃತ್ಯವತ್ ಫಲೋಪಲಬ್ಧ್ಯಾದಿ ಸಂವಾದಾಧೀನ ಜ್ಞಾನಂ ತತ್ಪ್ರಾಮಾಣ್ಯಂ ಸ್ಯಾತ್ | ವೇದಾದಿ ಪ್ರಾಮಾಣ್ಯಸ್ಯ ಸಂವಾದ ನಿರಪೇಕ್ಷಿತ ಜ್ಞಾನಾದೇವ ಸಿದ್ಧ್ಯಂಗೀಕಾರಾತ್| ನಹಿ ನಿರ್ದೋಷ ತದನುಸಾರಿ ತತ್ತತ್ಸ್ವರೂಪ ಗ್ರಹೇ ಪುನಃ ಪ್ರಾಮಾಣ್ಯೋಪಲಬದ್ಧ್ಯೈ ಸಂವಾದ ಸಾಪೇಕ್ಷತಾಽನುಭೂಯತೇ॥ ನ ಚ ಪಾಶುಪತಾದಿ ಸ್ಮೃತೀನಾಮಪಿ ತಥಾತ್ವಂ ವಾಚ್ಯಂ॥ ನಿರ್ದೋಷತ್ವಾದ್ಯ ನಿಶ್ಚಯಾದಿತಿ ಭಾವಃ ॥....ಅನ್ಯಥಾ ಅನವಸ್ಥಿತೇಃ॥........ನಿತ್ಯತ್ವಂ ಚೇತಿ ........ಅನಾದೀತಿ.........॥ ನ ಚ ವಾಚ್ಯಂ ವೇದಪ್ರಾಮಾಣ್ಯೇ ವಿವದಮಾನಂ ಪ್ರತಿ ಕಥಂ ತತ್ಪ್ರಾಮಾಣ್ಯೋಪಪಾದನಾಯ ಉಪನ್ಯಸ್ತಯೋರ್ನಿತ್ಯತ್ವ ಸ್ವತಃ ಪ್ರಾಮಾಣ್ಯಯೋಃ ಸಾಕ್ಷಿತಯಾ ಶ್ರುತ್ಯುಪಾದಾನಂ ಯುಕ್ತಮಿತಿ ॥ ಪರೇಣಾಪಿ ಫಲವ್ಯಭಿಚಾರೇಣಾಪ್ರಾಮಾಣ್ಯೇ ವೇದಸ್ಯಾಪಿ ತತ್ಪ್ರಸಂಗಃ ಇತ್ಯಾಪಾದನಮಾತ್ರಸ್ಯ ಕ್ರಿಯಮಾಣತ್ವಾತ್ ॥ ಯಕ್ತೇಶ್ಚ (ಪ್ರಮಾಣ್ಯಂ ಸ್ವತ ಇತಿ) ಉಪನ್ಯಸ್ತತ್ವಾದಿತಿ ॥” ಎಂದು ಹೇಳಿದ್ದಾರೆ. (ಮುಖ್ಯ ತಾತ್ಪರ್ಯವೇನೆಂದರೆ – ವೇದವೇದಾನುಸಾರಿ ಎಂದರೆ ವೇದಾವಿರುದ್ಧ ಶಾಸ್ತ್ರಗಳಿಗೆ – ಹಾಗೆ ಅವಿರುದ್ಧವಾಗಿರುವ ಸ್ವಾಪ್ನವೃಂ.ಆಖ್ಯಾನಕ್ಕೂ- ಪ್ರಾಮಾಣ್ಯ ಸ್ವತಸ್ತ್ವ ಒಪ್ಪಲಾಗಿದೆ. ಹಾಗೆ ಪಾಶುಪತಾದ್ಯಾಗಮಕ್ಕೂ ಪ್ರಾಮಾಣ್ಯಸ್ವತಸ್ತ್ವ ಒಪ್ಪಲಾಗುವುದಿಲ್ಲ. ಏಕೆಂದರೆ ಅವು ಅನಾಪ್ತ ಪ್ರಣೀತವೆಂಮ ಗೊತ್ತಾಗಿವೆ; ನಿರ್ದೋಷತ್ವ ನಿಶ್ಚಯ ಅವುಗಳಲ್ಲಿ ಇಲ್ಲ. ಆದ್ದರಿಂದ ಅಲ್ಲಿ ಯಾವುದಾದರೂ ಭಾಗಕ್ಕೆ ಪ್ರಾಮಾಣ್ಯ ಹೇಳಬೇಕಾದರೆ ಸಂವಾದಾದಿ ಸಹಾಯ ಬೇಕೇ ಬೇಕು. ವೇದಾದಿಗಳಲ್ಲಿ “ನಿತ್ಯತ್ವ” ಪ್ರಮಾಣ, ತದನುಸಾರಿತ್ವ ಪ್ರಮಾಣದಿಂದ ನಿರ್ದೋಷತ್ವ ನಿಶ್ಚಯ ಆಗಿದೆ. ಇನ್ನೊಂದು ವಿಷಯವೇನೆಂದರೆ ವೇದ ಪ್ರಾಮಾಣ್ಯ ವಿಷಯದಲ್ಲಿ ವಿವಾದವಿರುವಾಗ, ನಿತ್ಯವಾದ್ದರಿಂದ ವೇದವು ಪ್ರಮಾಣವು ಎಂದು ನಿತ್ಯತ್ವ ವಿಷಯದಲ್ಲಿ “ವಾಚಾವಿರೂಪ ನಿತ್ಯಯಾ” ಮುಂತಾದ ವೇದವಾಕ್ಯವನ್ನೇ ಉದಾಹರಿಸುವುದು ನ್ಯಾಯವೇ? ಎಂದು ಪ್ರಶ್ನೆ ಬರುತ್ತೆ. ಇದಕ್ಕೆ

ಉತ್ತರವೇನೆಂದರೆ ಪೂರ್ವಪಕ್ಷಿಯೂ ಕೂಡ ಪ್ರಾಮಾಣ್ಯ ಸ್ವತಸ್ತ್ವವನ್ನು ಒಪ್ಪಿದ್ದಾನೆ. ಆದ್ದರಿಂದ ವೇದವಾಕ್ಯದ ಯಥಾರ್ಥ ಬೋಧಕತ್ವವನ್ನು ತಿರಸ್ಕರಿಸಿಲ್ಲ. ಮತ್ತೇನೆಂದರೆ ಉಕ್ತಫಲವು ಬರದಿದ್ದರೆ ಅದಕ್ಕೆ ಪ್ರಾಮಾಣ್ಯ ಸಾಧನೆ ಹೇಗೆ ಮಾಡುವುದು? ಎಂದು ಪ್ರಶ್ನಿಸಿದ್ದಾನೆ. ಆದ್ದರಿಂದ ವೇದೋಕ್ತ ವಾಕ್ಯಗಳನ್ನು ನಿತ್ಯತ್ವಾದಿ ಸಾಧನೆಗಾಗಿ ಉದಾಹರಿಸಬಹುದು. ಪ್ರಾಮಾಣ್ಯ ಸ್ವತಸ್ತ್ವ ಯುಕ್ತಿಯನ್ನು ಉಪಪಾದಿಸಿಯೇ ಆಗಿದೆ ಎಂದು ಭಾವ.) ಹೀಗೆ ಸ್ವಾ.ವೃಂ.ಆ. ವಿಷಯದಲ್ಲೂ ವೇದಾನುಸಾರಿತ್ವ, ಪ್ರಾಮಾಣ್ಯ ಸ್ವತಸ್ತ್ವಾಂಗೀಕಾರಕ್ಕೆ ಅಡ್ಡಿಯಿಲ್ಲವಾದ್ದರಿಂದ ಫಲೋಪಲಬ್ಧಿ ವಿಷಯದಲ್ಲಿ ಬಂದ ಸಂಶಯಕ್ಕೆ ಪರಿಹಾರಕವಾಗಿ ಅಲ್ಲಿನ ವಾಕ್ಯಗಳನ್ನೇ ಸಾಧಕವನ್ನಾಗಿ ಉದಾಹರಿಸುವುದು ತಪ್ಪಲ್ಲ. ಆದರೆ ಅನೃಜುತ್ವವಾದವು ಪಾಶುಪತ ಶಾಸ್ತ್ರದಂತೆ ದುರ್ವಾದವು, ಪ್ರಮಾಣ ವಿರುದ್ಧವು. ಅ0ಥ ಮತವನ್ನು ಅಂಗೀಕರಿಸಿ ಅನೃಜುತ್ವವು ಸಿದ್ಧ ಪ್ರಮೇಯವೆಂದು ಮನಸ್ಸಿನಲ್ಲೇ ನಿಶ್ಚಯಿಸಿ ಋಜುತ್ವವಾದಿಗಳ ಪ್ರಮಾಣಗಳ ಮೇಲೆ ಸುಮ್ಮಸುಮ್ಮನೆ ಪ್ರಶ್ನಿಸಬಾರದು. ಮತ್ತೇನು ಮಾಡಬೇಕೆಂದರೆ ತಮ್ಮ ಪಕ್ಷಕ್ಕೆ ಶುಭಾಗಮನವನ್ನು ತೋರಿಸಿ ಶಂಕಿಸಬೇಕು. “ಋಜುತ್ವಾಗಮವು ಪ್ರಾಮಾಣಿಕವು, ಮೂಲಪ್ರಮಾಣಾವಿರುದ್ಧವಾದ್ದರಿಂದ” ಎಂಬ ಯುಕ್ತಿಗೆ ಅಸಿದ್ಧಿ ದೋಷವಿದ್ದರೆ ಹೇಳಲಿ. ಶುಭಾಗಮವು ಸಿಕ್ಕದೆ ಹೋದರೆ ಏನು ಮಾಡ ಬೇಕೆಂದರೆ, ಸುಮ್ಮನಿರಬೇಕು. ಪೂರ್ವಪಕ್ಷ ಗ್ರಂಥವನ್ನು ತಪ್ಪೆಂದು ನಿಶ್ಚಯಿಸಿ ತ್ಯಜಿಸಬೇಕು. ನಿರ್ಮೂಲ ಶಂಕಮಾಡಿ ಸಜ್ಜನರ ಮನಸ್ಸನ್ನು ಕಲುಷಿತವನ್ನಾಗಿ ಮಾಡಬಾರದು.

**10.** ಇದರ ಮೇಲೆ ಋಜುತ್ವವಾದಿಗಳು ಮಾಡಿರುವ ಪ್ರಮಾಣೋಪನ್ಯಾಸದ ಮೇಲೆ ಅತೃಪ್ತಿಯಿಂದ ಹೊರಟಿರುವ ಅನೃಜುತ್ವವಾದವು ಸರಿಯಾದ ವಿರೋಧಿ ಪ್ರಮಾಣವನ್ನು ಕೊಡುವುದರ ಜೊತೆಗೆ ಇತರ ಪ್ರಮಾಣಗಳ ಮತ್ತು ಶಿಷ್ಟ ಜ್ಞಾನಿಗಳ ಸಂವಾದಾದಿಗಳನ್ನು ಸಹ ಕೊಡಬೇಕು. ಸ್ವಪಕ್ಷದಲ್ಲಿ ದೋಷಾಭಾವವನ್ನು ಸಹ ತೋರಿಸಬೇಕು. ಏಕೆಂದರೆ “ಪ್ರಬಲೇನ ದುರ್ಬಲಸ್ಯ ಬಾಧಃ' ಎಂದು ನ್ಯಾಯವಿದೆ. ಆದ್ದರಿಂದ ವಾಲಿಯನ್ನು ಕೊಲ್ಲಲು ರಾಮನು ತನ್ನ ಪ್ರಾಬಲ್ಯ ಪರೀಕ್ಷೆ ಮಾಡಿಸಿಕೊಂಡಂತೆ ಅನೃಜುತ್ವವಾದವು ಪ್ರಮಾಣ ವಿಶೇಷ ತೋರಿಸಿ ತನ್ನ ಪ್ರಾಬಲ್ಯ ಸಾಧಿಸಿಕೊಳ್ಳಬೇಕು. ಋಜುತ್ವ ಪಕ್ಷದಲ್ಲಿ ಅನುಪಸಂಜಾತ ವಿರೋಧಿಯಾದ್ದರಿಂದ ಅಂಥ ಪ್ರಯಾಸವಿಲ್ಲ. ಪ್ರಮಾಣ ತೋರಿಸಿದರೆ ಸಾಕು. ಇಷ್ಟಾದರೂ ಸ್ವತಃ ಪ್ರಮಾಣ ವೇದಾನುಸಾರಿ ಆಗಮವಿದೆ. ಪ್ರತಿಭಾವಂತ ಪುರುಷರು ಸ್ಥಾಪಿಸಿದ ಐತಿಹ್ಯ ಸಂವಾದವೂ ಇದೆ. ಅದರಲ್ಲೂ ಶಂಕಾ ಬಂದರೆ ಆ ಸಂದೇಹ ಪರಿಹರಿಸುವ ದಾರ್ಢ್ಯಜನಕ ಪರಶುಕ್ಲ **[ಪ್ರಕಾಶ ಸಂಹಿತೆಯಲ್ಲಿ IV 228 ರಲ್ಲಿ ಪ್ರಮಾಣವಿದೆ: “ಪರಶುಕ್ಲ ತ್ರಯೋಕ್ತಾನಿ ನಿತ್ಯಂ ವಿಷ್ಣ್ವಾಜ್ಞಯೈವತು ॥ ಅತಿ ಪ್ರಮಾಣಾನಿ ದೈತ್ಯಾವೇಶಾಜ್ಞಾನಾದಿ ವರ್ಜನಾತ್॥” ಕಿಂಚ III 4-22 ಬ್ರ.ಸೂ.ಭಾ. “ವಿಧಿರ್ಭಾವೇ ಪ್ರಜಾಪತೇಃ ॥” “ಸ್ವೇಚ್ಛಯೈವ ಪ್ರವೃತ್ತಿಸ್ತು ಬ್ರಹ್ಮಣೋ ವಿಧಿ ಚೋದಿತಾ॥” ನಾಶಂಕ್ಯಂ ತನ್ಮತಂ ಕ್ವಾಪಿ ವಿಷ್ಣೋಃ ಪ್ರತ್ಯಕ್ಷ ಚೋದನಾ ॥........ಬ್ರಹ್ಮೈವ ಸ್ವೇಚ್ಛಾನಿಯತಃ ॥ ಇತ್ಯಾದಿ]** ಪ್ರಣೀತ ಆನುಕೂಲ್ಯತ್ರಯೋಪೇತ ಆಖ್ಯಾನ ಶಾಸ್ತ್ರವಿದೆ. ಯಾಜ್ಞವಲ್ಕ್ಯ ಸದೃಶರಾದ ಅಪರೋಕ್ಷ ಜ್ಞಾನಿಗಳಿಂದ ವಿರಚಿತವಾದ ಕರ್ಣಾಟಕ ಪದಗಳಿವೆ. ಆಖ್ಯಾನಾದಿ ಶಾಸ್ತ್ರವು ಸತ್ಯಾರ್ಥ ಬೋಧಕವು, ಸಫಲ ತಪಸ್ಯೆಯಿಂದ ಅಭೀಷ್ಟ ಪ್ರಾಪ್ತಿಯಾಗಿರುವುದರಿಂದ ಎಂಬ

ಅನುಮಾನದ ಪ್ರತ್ಯಕ್ಷ ಮೂರ್ತಿಯೋಪಾದಿಯಲ್ಲಿ ಶ್ರೀ ವಿಶ್ವಪ್ರಿಯತೀರ್ಥಾದಿಗಳ ಜೀವನಗಳೂ, ಅವರ ಇತಿಹಾಸಗಳೂ ಇವೆ. ಫಲಹೊಂದಿದ ಬಹುಭಕ್ತರ ಚರಿತ್ರೆಗಳೂ ಇವೆ. ಆಖ್ಯಾನೋಕ್ತ ಫಲ ಕಂಡಿಲ್ಲ ಎಂಬ ಪೂರ್ವಪಕ್ಷದವರ ಶಂಕೆಯು ರಾಜಾಸೂಯಾಶಾಲೆಯ ಅನ್ನ ಛತ್ರದಲ್ಲಿ ಅನ್ನವಿಲ್ಲವೆಂಬ ಶಂಕೆಯಂತೆ ಅತ್ಯಂತ ಹಾಸ್ಯಾಸ್ಪದವಾದ ಯುಕ್ತ್ಯಾಭಾಸವು. ಏಕೆಂದರೆ ಸಾಧುಸಜ್ಜನರಿಗೆ ಅಭೀಷ್ಟ ಫಲದಾನಮಾಡಿ ಉದ್ಧರಿಸಬೇಕೆಂದೇ ಗುರುರಾಜರ ಅವತಾರ, ಸೋದಾಕ್ಷೇತ್ರ ನಿರ್ಮಾಣ, ವೃನ್ದಾವನ ರಚನೆ, ತನ್ನ ವೃನ್ದಾವನದಲ್ಲಿ ಅನಂತ ಜನರ ಅನಂತ ಹರಿಬಿಂಬ ರೂಪಗಳ ಮತ್ತು ಚತುರ್ಮುಖಾದಿ ಅನೇಕ ದೇವತೆಗಳ, ಪರ್ವತಗಳ, ನದೀದೇವತೆಗಳ, ತೀರ್ಥದೇವತೆಗಳ, ಕ್ಷೇತ್ರದೇವತೆಗಳ, ಸ್ವಯಂವ್ಯಕ್ತ ಮತ್ತು ಮತ್ಸ್ಯಾದಿರೂಪಗಳ, ಅನಿರುದ್ಧಾದಿ ವ್ಯೂಹಗಳ ಸನ್ನಿಧಾನ ಸಂಗ್ರಹ; ಶ್ರೀ ವೇದವೇದ್ಯರಿಂದ ಗುರು ಸ್ವರೂಪ ಪ್ರಕಾಶನ, ವಿಪ್ರ ವೇದವಿನಿದ್ಯಾದಿಗಳ ದ್ವಾರಾ ಆಖ್ಯಾನ ಪ್ರಕಟನೆ, ಈಚಿನ ಕಾಲದಲ್ಲಿ ವೃನ್ದಾವನಾಚಾರ್ಯ, ರಘುಪ್ರವೀರತೀರ್ಥ, ಜಂಖಂಡಿ ಆಚಾರ್ಯಾದಿಗಳ ಸಾಧನೆ - ಇವೆಲ್ಲಾ ಸಾಧುಗಳಿಗೆ ಫಲವನ್ನುಂಟು ಮಾಡಿಕೊಡುವುದಕ್ಕೆ ಮತ್ತು ಫಲ ತಪ್ಪುವುದಿಲ್ಲವೆಂದು ತೋರಿಸುವುದಕ್ಕೆ ಎಂದು ತಿಳಿಯಬೇಕು. ಕೆಲವು ಆಖ್ಯಾನ ಶ್ಲೋಕಗಳಂತೂ ಆಖ್ಯಾನ ಸೇವೆಯಿಂದ ಅಥವಾ ವೃನ್ದಾವನ ಸೇವೆಯಿಂದ ಫಲವಾಗುವುದಿಲ್ಲವೆಂಬ ಶಂಕೆಯನ್ನು ಸಂಪೂರ್ಣವಾಗಿ ಬುಡಮಟ್ಟ ಕಿತ್ತು ಹಾಕಿಬಿಡುತ್ತವೆ [ಕೆಲವು ರೋಮಾಂಚ ಜನಕ ಪದ್ಯಗಳು ಮಾದರಿಗಾಗಿ ಉದಾಹರಿಸಲ್ಪಡುತ್ತವೆ. ಕೆಲವುಸೂಚಿಸಲ್ಪಡುತ್ತವೆ.

**I 14-20, 26, 32, 33:** “ಏವಂ ನಿಶಮ್ಯ ಮಮ ವೃತ್ಯ ಮುಖಾಚ್ಚ ಸರ್ವಂ ವೃನ್ದಾವನಸ್ಯ ವಿಭವಂ ಸುಜನಾಶ್ಚ ಸರ್ವೆ॥ ಶ್ರದ್ಧಾಲವೋ ವಿತತ ಭಕ್ತಿಯುತಾ ಭಜಂತು ಸರ್ವೆಷ್ಟದಂ ಸಕಲಪಾಪವಿನಾಶನಂ ತತ್ ॥” ಹಾಗೇ **34, 41, 59, 63, 68, 74, 106, 111, 114. II: 16-18, 58-63. III: 8, 13, 30, 47, 48:** ತಸ್ಮಾದ್ವೃಂದಾವನೇ ಪುಣ್ಯೇ ಪಂಚಪರ್ವಸು ಪೂಜನಂ । ದರ್ಶನಂ ಸುಜನಾನಾಂತು ಸರ್ವಾಘೌಘ ವಿನಾಶನಂ ॥ ಏತದ್ರಹಸ್ಯಂ ಮಮ ಪುತ್ರ ಪಶ್ಯನ್ ತ್ವಂ ಸುಪ್ರಸಿದ್ಧಿಂ ಕುರು ಸತ್ಸು ನಿತ್ಯಂ ॥ ಶೃಣ್ವಂತು ಸರ್ವೆ ಸುಜನಾಶ್ಚ ಮತ್ಕೃತಿಂ ಸರ್ವೆಷ್ಟದಾತ್ರೀಂ ಶರಣಾಗತಾನಾಂ ॥49॥ ಇದಮದ್ಭುತಮಾಖ್ಯಾನಾಂ ಮಮ ವೃನ್ದಾವನಸ್ಯ ಚ ॥ ಶೃಣ್ವತಾಂ ಪಠತಾಂ ವಾಪಿ ಸರ್ವಾಭೀಷ್ಟಪ್ರದಂ ಸತಾಂ ॥50॥....... ಇದಂ ಸಮಾಪ್ತಂ ಮಮ ಶೋಭನಂ ಮಹದ್ವೃನ್ದಾವನಾಖ್ಯಾನಮನುತ್ತಮಂ ನೃಣಾಂ । ಯಚ್ಛೃಣ್ವತಾಂ ಭಕ್ತಿರುದಾರ ಸದ್ಗುಣೇ ಹರೌಹರೇರ್ಲೋಕಗತೇ ತಥಾ ಮಯಿ ॥52॥ ಭವತ್ಯಹೋ ಸರ್ವ ಶುಭಾಪ್ತಿ ಸನ್ಮತಿಂ ದದಾತ್ಯಜಸ್ರಂ ಸುತ ಸತ್ಯಮೇವ ತತ್ ॥ ಅತಃ ಸತಾಂ ತ್ವಂ ವದ ಮತ್ಕೃತಿಂ ಸದಾ 'ಶುಭಾಪ್ತ ಯೇ ತೇ ಚ ಮಮಾತ್ರ ಕೀರ್ತಯೇ ॥53॥ **56, 58** ಆಖ್ಯಾನ ಪ್ರಕಟಿಸಿದ ಬ್ರಾಹ್ಮಣನಿಗೇ ದುಡ್ಡು ಬರಲಿಲ್ಲವಲ್ಲಾ ಎಂಬ ಶಂಕೆಗೆ ಉತ್ತರ: **66-67, 80.**

**IV 44** : “ಕಿಮತ್ರ ಬಹುನೋಕ್ತೇನ ಮದ್ವೈಭವ ಸಮೋನಹಿ ॥” **46-47, 55:** ಇದಂ ವೃನ್ದಾವನಾಖ್ಯಾನಂ ಸದಾನಂದಾದಿ ಸಾಧನಂ । ದ್ವಿಧಾವ್ಯಾಖ್ಯಾನ ವತ್ಕೃತ್ವಾ ಮದಾನಂದ ಪರೋಭವ ॥ 80।

V: 1, 9, 12, 2 : “ತಸ್ಮಾದ್ವೃಂದಾವನಾಖ್ಯಾನಂ ಮುಕುಂದಾನಂದ ಕಾರಣಂ | ಮಂದಾನಾಂ ಬೋದನಾರ್ಥಾಯ ಕಂದಾಶನ ಕೃತಂ ತ್ವಭೂತ್” ॥26॥56-57॥ “ಧ್ಯಾಯೇ ಮಾಯಾಂ ವಿನಾಕಾಯಂ ಪಾತಯಿತ್ವಾ ಚ ದಂಡವತ್ | ಶ್ರೇಯೋಯಾಸ್ಯೇ ತ್ವಯಾವಾರ್ಯ೦ ಮಯೋಕ್ತಂ ಸತ್ಯತಃ ಕುರು| ಇತಿ ಸಂಪ್ರಾರ್ಥಯನ್ನಿತ್ಯಂ ಶ್ರುತ್ಯಂತೇಷು ವಿಚಾರಯನ್” ॥92॥ "ಇದಂ ವೃನ್ದಾವನಾಖ್ಯಾನಂ ಯೇ ಪಠಂತಿ ಮನೀಷಿಣಃ| ಮುಕುಂದಾವನಮೇವಾಸ್ತು ತೇಷಾಂ ಕಂದಾಶನಾಜ್ಞಯಾ॥"

VI 20, 27, 53-59, 60, 67-74, VII 14: ಏವಂ ನಿತ್ಯಂ ಪ್ರನೃತ್ಯನ್‌ವೈ ಸತ್ಯಂ ಕರ್ತುಂ ಮಯೋದಿತಂ॥ ತತ್ತನ್ಮುಖೇ ಪ್ರಯತ್ನಾನಿ ವಕ್ತುಂ ತಥ್ಯಂ ಕರೋಮಿ ಚ ॥....71 ॥ “ವಿಶ್ವಾಸಿನಾಮವಶ್ಯಂತು ತದ್ವೈಸ್ಯಾತ್ವಶ್ಯ ಶೋಭನ॥ ಸ್ವಸ್ಯಾವಿಶ್ವಾಸತಃ ಶಾಂತನಸ್ಯಾದ್ವಾಕಸ್ಯ ದೋಷಿತಾ॥” 74-76....101 “ಪಾಕಶಾಸನ ಲೋಕೇಷು ಕೋನವಕ್ತಾಚ ನಾಕಿಷು ॥

VIII 16: ಮಮಾಭಿಷೇಕಸ್ಯ ಮಹೋತ್ಸವಂತು ಯೇ ದೋಷ ಯುಕ್ತಾಶ್ಚ ವಿಶೇಷತೋಽಪಿ॥ ಶ್ರುತ್ವಾಚ ತದ್ದೋಷಲಯಂ ಪ್ರಯಾಂತಿ ನಿರ್ದೋಷ ಭೂತಾ ಚ ನಮೇ ಮೃಷಾವಾಕ್” 35: “ಇಮಾಂ ಕಥಾಂ ಚ ಯೇ ನಿತ್ಯಂ ಶೃಣ್ವಂತಿ ಯತಯೋಽಪಿತು| ಲಭಂತೇ ಕಾಮತಃ ಶಾಂತಿಂ ಸುತ ಸತ್ಯಂ ಮಯೋದಿತಂ ॥ ಹಾಗೆ 37, 38, 51-56.

IX 21,28: “ಅರುಂಧತೀ ಸಮಾಯುಕ್ತೋ ವೃನ್ದಾವನ ಕೃತಿಂ ತ್ವಿಮಾಂ॥ ಸ್ವಮಂದಿರೇ ಸಮಾಧಾಯ ಚೇಂದ್ರೇಣ ಸಹ ಚಾರ್ಚಯತ್॥ ಏವಂ ಸರ್ವಾಶ್ಚ ದೇವ್ಯಸ್ತಾಃ ಪತಿಭಿಃ ಸಹ ಮಂದಿರಂ| ಮಾಂ ಸಮಾನೀಯ ಚಾನರ್ಚುಃ ವೃನ್ದಾವನ ಕೃತಿಂ ತ್ವಿಮಾಂ ॥ ತಸ್ಮಾತ್ಸ್ವಮಂದಿರೇ ಸರ್ವೆ ವೃನ್ದಾವನಕೃತೇಃ ಪರಂ | ಪ್ರಕುರ್ವಂತ್ವರ್ಚನಂ ಸಮ್ಯಗಾರಾತ್ರ್ಯಾ ಚ ಸಮನ್ವಿತಂ” ॥30॥ X 11: “ಏವಂ ಸರ್ವೇಽಪಿ ಋಷಯೋ ವರ್ಷೇ ವರ್ಷೆ ಸಮಾವೃತಾಃ ॥ ಚಕ್ರುಃ ಸರ್ಷಪ ಮಾತ್ರಾಣಿ ದುಷ್ಕೃತಾನಿ ಪ್ರಹರ್ಷಿತಾಃ ॥” 15-16, 42, 64, 74: “ಇಮಾಂ ಕೃತಿಂ ನರೋಯಸ್ತು ಸ್ವಾಪ್ನೀಂ ಮಂದಸ್ಯ ಬುದ್ಧಿದಾಂ ॥73॥ ಪರಿತ್ವಾ ಸರ್ವ ಪಾಪೇಭ್ಯೋ ಮುಚ್ಯತೇ ನಾತ್ರ ಸಂಶಯಃ ॥ ಅರ್ಥ೦ ಬುಧ್ವಾ ಕೃತೇರಸ್ಯಾಃ ಸರ್ವೆಷ್ಟಂ ಲಭತೇ ನರಃ ॥ ಯೋಽನುವಕ್ತಾ ಕೃತಿಮಿಮಾಂ ಮಮ ತೋಷಸ್ಯ ಭೂರಸೌ” ॥74॥ 84: “ಏವಂ ಸಂಪೂಜ್ಯ ಮಾನೋಽಹಂ ದದ್ಯಾಂ ವರಮನುತ್ತಮಂ” ॥ 97, 98, 104, 105, 127, 128, 141: “ಇದಂತು ಮದ್ವೈಭವಂತು ಮದ್ಭಕ್ತೇನತು ಕೀರ್ತಿತಂ | ಶೃಣೋತಿ ಮದ್ಭಕ್ತಿರತೋ ಮದ್ಭೂತಿಂ ಲಭತೇ ನರಃ॥”

XI 8-9-26: “ಪಠತಾಂ ಶೃಣ್ವತಾಂ ಚಾಪಿಖ್ಯಾತಾ ಮುರ್ವ್ಯಾ೦ ಪ್ರಕುರ್ವತಾಂ॥ ಸರ್ವೇಷ್ಟಾನಿ ಭವಿಷ್ಯ೦ತಿ ಹಯಗ್ರೀವಸ್ಯ ಚಾಜ್ಞಯಾ ॥53-54 ಇಮಾಂಕೃತಿಂ ಮಮ ಸ್ವಾಪ್ನಿಂ ಆದರಾದ್ಯಸ್ತು ವಕ್ಷ್ಯತಿ | ತಸ್ಯ ಶ್ರೀಶಃ ಪ್ರಸನ್ನಃ ಸನ್ ಶುಭಂ ದಾಸ್ಯತ್ಯ ಸಂಶಯಃ॥ ಸತ್ಯಂ ಸತ್ಯಂ ಪುನಃ ಸತ್ಯಂ ತ್ರಿವಾಚಾಪಿ ಮಯೋಚ್ಯತೇ ॥ ಶೃಣ್ವತಾಂ ಪಠತಾಂ ಚಾಪಿ ಸರ್ವ ಸಂಪದ್ಭವಿಷ್ಯತಿ ॥ "

| |
|---|
| XII 11-12 XIII 27-28 "ಮಮೋಪದೇಶವಾಕ್ಯಾನಿ ಸರ್ವಾಭೀಷ್ಟಪ್ರದಾನಿಚ॥ ಶ್ವಾನಾದಿ ಹೀನ ಜನ್ಮಾನಿ ನಿರಾಕುರ್ವಂತಿ ನಾನ್ಯಥಾ॥28॥ ಮಮೋಪದೇಶವಾಕ್ಯಾನಿ ಶ್ವಾಸಮಾತ್ರಾವಶೇಷಿತಾಃ । ಶ್ರುತ್ವಾಕಾಸಾದಿದೋಷೈಶ್ಚ ಮುಚ್ಯಂತೇ ನಾತ್ರ ಸಂಶಯಃ ॥27॥ 57 ಇದಂ ವೃನ್ದಾವನಾಖ್ಯಾನಂ ಯೇನ ಶೃಣ್ವಂತಿ ಮಾನವಾಃ। ದಾನವಾನಾಂ ಗತಿಂ ಪ್ರಾಪ್ಯ ಶ್ವಾನ ಜನ್ಮಾನಿ ಯಾಂತು ತೇ" ॥ 62-63-8-3 |
| XIV 88-94 XV 5-9 "ವದ ವೃನ್ದಾವನೇ ........ ಶಕ್ತಸ್ಯ ಭಕ್ತಿಯೋಗೇಚ ರಕ್ತಸ್ಯ ಮನಸತ್ಕೃತಿಂ" ॥8॥ ಮತ್ತು 60-61 XVI 32-33-70 "ತಸ್ಮಾನ್ಮಮ ಪ್ರಿಯಾಯೇವ್ವೈ ಪ್ರೀತಿಂ ಕುರ್ವಂತುಮತ್ಕೃತೌ ॥ ಅಪ್ರಿಯಂ ನ್ಯೆವ ಕುರ್ವಂತು ಮತ್ಪ್ರಿಯಾಸ್ತೇ ನ ಸಂಶಯಃ ॥81-84॥ "ಯಸ್ಯದೇವಾ ನ ಪ್ರಸನ್ನಾಃ ಮುನಯಶ್ಚ ತಪೋಧನಾಃ। ಗುರುಃ ಸರ್ವಾರ್ಥದವಶ್ಚೈವ ಸ ಹರಿಃ ಸಾಗಾರಾಲಯಃ ॥81॥ ಅಸ್ಮದ್ವೃಂದಾವನಂ ತಸ್ಮೈ ಭಸ್ಮನಾಚ್ಛಾದಿತಾಗ್ನಿವತ್ ॥ ಸ್ವಸ್ಮಿನ್ನಂತರ್ಗತಂ ನ್ಯೆವ ಸ್ವಾಮಿನಂ ಸ್ಮಾರ ಯತ್ಯಹೋ ॥82॥ 91-93 ಅಚಿಂತ್ಯಾದ್ಭುತ ಮಹಾತ್ಮ್ಯಮಹಂ ಹಯಮುಖಂ ಭಜೇ ॥ ....... ಕರಾದಿ ಸ್ಪರ್ಶನೇ ತೇನಕೃತೇ ಸತಿ ಚ ಮೂರ್ಧನಿ॥ ಕಿಮಸಂಭಾವಿತಂ ಪೂರ್ವಂ ಚೋಕ್ತಂ ಸಂಭಾವಿತಂ ತತಃ ॥ ಅಸಂಭಾವನಯಾ ತಸ್ಮಾದ್ವೈಭವಂ ನ ಪರಾಹತಂ" ॥93॥ |
| XVII 38-39,61-62-63,68-69-76,85-86,95-96-99 XVIII 1-14-18, 35-36 ಯಮೋಪಿಮಾಂ ತದಾ ಪ್ರಾಹ ತ್ವಾಂ ಯೇ ನಿಂದಂತಿ ಮಾನವಾಃ॥ ತಾನ್ನೈವ ಮುಂಚಾಮಿ ಧೀಮನ್ ಬ್ರಹ್ಮ ಕಲ್ಪಕ್ಷಯೇಪ್ಯಹಂ॥35॥ ವೃನ್ದಾವನ ಕೃತೌ ಚೋಕ್ತ ಮಹಿಮಾ ಘಟತೇನತೇ। ಇತಿಯೇ ಕಥಯಂತೀಹ ನಮುಂಚಾಮ್ಯಾತತಾಯಿನಃ ॥36॥ 46-50-51 XIX 15 ಮಮವ್ಯೆವಂ ದೇವಿಕಂ ಗ್ರಂಥಂ ಹೃದಯಗ್ರಂಥಿ ಸಂಯುತಾಃ॥ ಯೇನ ಗೃಹ್ಣಂತಿ ತಾನ್ ಸರ್ವಾನ್ ಗೃಷ್ಣಂತಿ ಯಮ ಕಿಂಕರಾಃ ॥ ಮಮಾಖ್ಯಾನ ಪ್ರವಕ್ತಾರಂ ಯಮಾಜ್ಞಯಾ ಗತಾ ಭಟಾಃ ॥ ತೇ ಮಯಾ ವಾರಿತಾಃ ಸರ್ವೇ ಕೋಽವಾ ಮತ್ಸದೃಶೋ ಯತಿಃ ॥17॥ 28-29,75-76 "ನಿಷ್ಕಲಂಕಾಶ್ಚ ಸರ್ವೇಽಪಿ ನಿಷ್ಕಲಂಕಾದರಾ ಹರೌ। ನಿಖಿಲಾನ್ ಕಾಮಿತಾನ್ ಯಾಂತಿ ನಿಖಿಲಾಽಗಮ ನಿರ್ಣಯೈಃ" ॥ |
| XX 81-96 "ತಸ್ಮಾಚ್ಚ ಮತ್ಕೃತೇಃ ಪಾಠಂ ಶಿಷ್ಯಾಃ ಕುರ್ವಂತು ನಾನ್ಯಥಾ ॥ ಇಷ್ಟಂ ಚ ತೇಷಾಂ ಭವತಿ ಕಷ್ಟಂ ನೇಹ ಪರತ್ರ ಚ ॥86॥.... ಸ್ವಾಪ್ನ ಶ್ಲೋಕೇಪಿ ಯತ್ಪ್ರೋಕ್ತಂ ಪ್ರಾಪುವನ್ ತಚ್ಚನಾನ್ಯಥಾ॥.... ಸುವಾಗ್ವೈಖರ್ಯರಾಶಿರ್ಮೆ ತವಾರ್ಥೈಃ ಪೂರಯಿಷ್ಯತಿ ॥90॥ XXI 38 "ತಸ್ಮಾದ್ವಿಶ್ವಾಸವಂತಶ್ಚ ಭವಿಷ್ಯಥ ಕೃತೌಮಮ॥ ವಿಶ್ವಸ್ತಾಃ ಪ್ರೇತ್ಯ ಮರ್ತ್ಯಾಯೇ ಹ್ಯಮರ್ತ್ಯತ್ವಂ ವ್ರಜಂತಿ ತೇ" ॥38॥ ಮತ್ತು 76 "ಪತ್ರತಾಪಾಖ್ಯ ರುದ್ರೋಪಿ ಸ್ವಪ್ರತಾಪಂ ಜಹಾವಿಹ । ಲಕ್ಷ್ಮೀಪತಿ ....... ನಿಷ್ಕದ್ವಯಂ ಸದತ್ವಾತು ಶುಷ್ಕಂ ತತ್ಪಾಪ ಸಂಚಯಂ। ಕಿಷ್ಕಂಧೇಶ್ವರವಚ್ಚಕ್ರೇ ಪುಲ್ಕಸಾಂ ಜನ್ಮಯಾಪಕಂ" ॥ |

**XXII 17 "ಹೇ ವಿಪ್ರ ಮತ್ಪ್ರಸಾದೇನ ತತ್ಪಿತೃಣಾಂ ತ್ರಿವಿಷ್ಟಪಂ| ತ್ರಿಮಾರ್ಗಗಾವಗಾಹಾತಿಪವಿತ್ರಾಂಗಯುಜಾಮಭೂತ್ ॥ ........ ಕುಲಂ ಕೃತಂ ಪವಿತ್ರಂ ತೇ ತಿಲಮಾತ್ರಂ ನ ದುಷ್ಕೃತಂ॥ ಮತ್ತು 27 ವಾದಿರಾಜ ಗುರು ನಾಮಧರಾ ಹೋಮತ್ಕೃತಿಃ ಪರಮತಂ ನಿರಾಕರೋತ್॥ ತ್ವಂ ಕುರುಷ್ವರತಿಮತ್ರ ವೇದರಾಟ್ ಪ್ರೀಯತೇ ಪರಮಪೂರುಷ ಏವ ॥ ಮತ್ತು 48 ಪೃಚ್ಛ ಸಚ್ಛಾಸ್ತ್ರ ತತ್ವಾನಿ ಮಯೋಕ್ತಾನಿ ನ ವೈಮೃಷಾ" ॥ ಇತ್ಯಾದಿ.**

**[Unlinked lineS.ಪ್ರಮಾಣಗಳಿರುವುದರಿಂದ ಋಜುಗಳು ಸದಾ ಹರ್ಯಾಜ್ಞಾನಾನುಸಾರವಾಗಿ ನಡೆಯುತ್ತಾರೆ. ಅವರ ವಾಕ್ಯಗಳು ಸದಾ ಮಾನ್ಯ. ಕಿಂಚ ಆಖ್ಯಾನ III 100.] 1 ಕೆಲವು ರೋಮಾಂಚ ಜನಕ ಪದ್ಯಗಳು ಮಾದರಿಗಾಗಿ ಉದಾಹರಿಸಲ್ಪಡುತ್ತವೆ.]**

ಆದ್ದರಿಂದ ಫಲೋಪಲಹಬ್ದಿಯು ಇದ್ದೇ ಇದೆ.. ಅಸಿದ್ಧಿ ಲೇಶಕ್ಕೂ ಅವಕಾಶವಿಲ್ಲ. ತಥಾಚ ವಾದಿರಾಜರ ಅನೃಜುತ್ವವು ಸತ್ಪ್ರಮಾಣ ವಿಕಲವು, ಅಸತ್ಯೋಪಾಸನಾರೂಪವಾದ್ದರಿಂದ ಆದ್ವೈತದಂತೆ ಎಂದು ಫಲಿಸಿತು. ಅನುವ್ಯಾಖ್ಯಾನ III **4-6 (ಪುಟ 1448)** ರಲ್ಲೂ ಪ್ರಮಾಣಗಳಿವೆ. "ತಾರತಮ್ಯೇನ ತೇಶ್ರದ್ಧಾಭಕ್ತಿರ್ದೃಷ್ಟಾನುಸಾರತಃ ॥ ವಿಷ್ಣು ಪ್ರಸಾದಾನುಸಾರಾತ್ಕುರ್ಯಾದ್ದೋಷಸ್ತದನ್ಯಥಾ॥" ಇತ್ಯಾದಿ ಪ್ರವೃತ ಗ್ರಂಥವಚನಗಳು ದೊಡ್ಡವರನ್ನು ದೊಡ್ಡವರು ಎಂದು ತಿಳಿದೇ ಪೂಜೆಮಾಡಬೇಕೆಂದು ಬೋಧಿಸುತ್ತದೆ. ಅನ್ಯಥಾ ಅಸತ್ಯೋಪಾಸನೆಯ ಫಲ ತಪ್ಪುವುದಿಲ್ಲವೆಂದೂ ತೋರಿಸುತ್ತವೆ. ಹೀಗೆ ವಾದಿರಾಜರ್ಜುತ್ವವು ಆದರಣೀಯವು, ಬಹು ಪ್ರಮಾಣಸಿದ್ಧವಾದ್ದರಿಂದ, ಅಥವಾ ಸತ್ಯ, ಸಫಲ, ಉತ್ತಮ ಪುರುಷಾರ್ಥೋಪಯೋಗಿ, ಪರಶುಕ್ಲೋಪದಿಷ್ಟ ಉಪಾಸನಾ ವಿಷಯವಾದ್ದರಿಂದ, ಸಂಪ್ರತಿಪನ್ನ ಮಧ್ವಋಜುತ್ವದಂತೆ ಎಂದು ನಿರ್ಣಯವಾಗುವುದರಿಂದ ಸರ್ವಸಮಂಜಸವೇ. ಹೇತ್ವಸಿದ್ಧಿಗೆ ಅವಕಾಶವಿಲ್ಲ. ಆಖ್ಯಾನಾದಿ ಸ್ಪಷ್ಟವಚನಗಳು ಉದಾಹೃತವಾಗಿವೆ. ಆದ್ದರಿಂದ ಇದನ್ನು ಮರೆಯಬಾರದು; ಏನಂದರೆ ಮೇಹನ, ವಪನಾದಿ ಪ್ರತ್ಯಕ್ಷವಿದ್ದರೂ ಶ್ರೀಕೃಷ್ಣನಿಗೆ ಅವಿಷ್ಣುತ್ವವನ್ನು ಹೇಗೆ ನಿಶ್ಚಯಿಸಕೂಡದೋ ಅಥವಾ ಮಧ್ವಗುರುಗಳ ಬಾಲಲೀಲಾ ಪ್ರತ್ಯಕ್ಷವಿದ್ದರೂ ಅವರಿಗೆ ಅನೃಜುತ್ವವನ್ನು ಹೇಗೆ ನಿಶ್ಚಯಿಸಕೂಡದೋ, ಹಾಗೆ ವಾದಿರಾಜ ಗುರುಗಳಲ್ಲಿ ಅನ್ಯಾನುಸಾರಿತ್ವಾದಿ ಪ್ರತ್ಯಕ್ಷದಿಂದಲೂ ಅವರಲ್ಲಿ ಅನೃಜುತ್ವವನ್ನು ತಿಳಿಯಕೂಡದು. ಉಪಜೀವ್ಯಾಗಮವಿರುದ್ಧ ಪ್ರತ್ಯಕ್ಷವೇ ಬಾಧಿತವಾಗುತ್ತೆ, ದೃಷ್ಟಾಂತ: "ನಫಲಾಂಡುಂ ಭಕ್ಷಯಿತ" ಎಂದು ಆಗಮವಿದೆ. ದ್ವಿಜನಿಗೆ ಈರುಳ್ಳಿ ಭಕ್ಷಣವು ಪಾಪಜನಕವು ಎಂದು ಸ್ಪಷ್ಟ ಆಗಮಿಸಿದ್ಧ ವಿಷಯದಲ್ಲಿ "ಈರುಳ್ಳಿ ಸೇವನೆಯು ಪಾಪಜನಕವಲ್ಲ, ಆರೋಗ್ಯದಾಯಕವಾದ್ದರಿಂದ ಸಂಪ್ರತಿಪನ್ನ ಗೆಣಸಿನ ಭಕ್ಷಣದಂತೆ" ಎಂಬುದೇ ಮುಂತಾದ ಪ್ರತ್ಯಕ್ಷವಾಗಲಿ, ಪ್ರತ್ಯಕಾನುಸಾರಿ ಯುಕ್ತಿಯಾಗಲೀ ಹೇಗೆ ಬಾಧಕವಲ್ಲವೋ, ಪ್ರತ್ಯುತ ತಾನೇ ಬಾಧಿತವಾಗಿ ಹುಟ್ಟಿ ಅಪ್ರಮಾಣವೆನ್ನಿಸುತ್ತೆಯೋ ಹಾಗೆ, ವಾದಿರಾಜರು ಅಥವಾ ಮಧ್ವ ರಾಜರು ಋಜುವಲ್ಲ, ಅಂಬೆಗಾಲಿಡೋಣ ಮುಂತಾದ ಅಶಕ್ತತ್ವ ಕಂಡದ್ದರಿಂದ ಸಂಪ್ರತಿಪನ್ನ ದೇವದತ್ತನಂತೆ ಇತ್ಯಾದಿ ಪ್ರತ್ಯಕ್ಷ ಅಥವಾ ಅನುಮಾನಗಳು ಬಳಿತ್ಥಾದಿ ಆಗಮಗಳಿಂದ ಬಾಧಿತವಾಗಿ ಅಪ್ರಮಾಣವೆನ್ನಿಸುತ್ತವೆ. ಅಷ್ಟೇ ಹೊರತು ಇವುಗಳೇ ಪ್ರಬಲವಾಗಿ ಬಳಿತ್ಥಾದಿಸೂಕ್ತ ಐತಿಹ್ಯಾದಿರೂಪ ನಿರ್ದೋಷ ಆಗಮಸಿದ್ಧ ಋಜುತ್ವ

ಬಾಧನೆಯಲ್ಲಿ ಇವು ಸಮರ್ಥವಲ್ಲ. ಆ ಆಗಮಗಳು ಅಪೌರುಷೇಯವಾದರೂ ಸರಿ; ಪೌರುಷೇಯದಲ್ಲೂ ಲೌಕಿಕ ಪುರುಷರಿಂದಾಗಲಿ ರಚಿಸಲ್ಪಟ್ಟಿರಲಿ; ಅವು ಅಬೋಧಕತ್ವಾದಿ ದೋಷರಹಿತವಾಗಿದ್ದರೆ ಸಾಕು, ಅಷ್ಟು ಮಾತ್ರದಿಂದ ಅವು ಪ್ರಮಾಣವೆನ್ನಿಸುತ್ತವೆ; ಅಲ್ಪ ಮನುಷ್ಯ ಕೃತತ್ವಾದಿ ಮಾತ್ರ ಕಾರಣದಿಂದ ಶಬ್ದವು ಸ್ವಸ್ವಭಾವವನ್ನ ಪರಿತ್ಯಜಿಸಿ ಪರತಸ್ತ್ವವನ್ನು ಹೊಂದಿಬಿಡುವುದಿಲ್ಲ. ದ್ವೈತಮತಕ್ಕೆ ಪರಮವಿರುದ್ಧವಾದ ಅದ್ವೈತಮತದಲ್ಲೂ ಕೂಡ ಈ ನಿರ್ಣಯವು ಅಂಗೀಕೃತವಾಗಿದೆ. ಭಾಮತೀ II 2-31 ಬ್ರ.ಸೂ.ಭಾ. (ಪುಟ 557) "ಪ್ರಮಾಣಾನಿ ಹಿ ಸ್ವಗೋಚರೇ ವರ್ತಮಾನಾನಿ ತತ್ವಮಿದಮಿತ್ಯೇವ ಪ್ರವರ್ತಂತೇ| ಅತಾತ್ವಿಕತ್ವಂತು ತದ್ಗೋಚರಸ್ಯಾನ್ಯಥೋಬಾಧಕಾದವಗಂತವ್ಯಂ | ನ ಪುನಃ ಸಾಂವ್ಯಾವಹಾರಿಕಂ ನಃ ಪ್ರಾಮಾಣ್ಯಂ ನತು ತಾತ್ವಿಕಮಿತ್ಯೇವ ಪ್ರವರ್ತಂತೇ" II ಎಂದಿದೆ (ಪ್ರಮಾಣಗಳು ಸ್ವಸ್ವಭಾವದಿಂದ "ನಾವು ತೋರಿಸತಕ್ಕವು ಪಾರಮಾರ್ಥಿಕ ಸತ್ಯವು" ಎಂದು ವಿಷಯಗಳನ್ನು ತೋರಿಸುತ್ತವೆ; ಇವುಗಳಿಗೆ ಅಸತ್ಯತ್ವ ಅಥವಾ ಅಪಾರಮಾರ್ಥಿಕತ್ವವನ್ನೂ ಹೇಳಬೇಕಾದರೆ - ಇದು ಬೆಳ್ಳಿಯಲ್ಲ ಎಂಬಂತೆ - ಬೇರೆ ಬಾಧಕ ಜ್ಞಾನದ ಆಧಾರದಿಂದಲೇ ಹೇಳಬೇಕು. ಪ್ರಮಾಣಗಳೇ ನಾವು ವಿಷಯೀಕರಿಸಿದ್ದು ಅಪಾರಮಾರ್ಥಿಕವೆಂದು ಹೇಳುವುದಿಲ್ಲ ಎಂದರ್ಥ.) ಇದಕ್ಕೆ ಪ್ರಾಮಾಣ್ಯ ಸ್ವತಸ್ತ್ವವಾದವೆಂದು ಹೆಸರು. ಸುಧೆಯಲ್ಲಿಯ II 1-2 ಅಧಿ. ಅನು ವ್ಯಾಖ್ಯಾನ ಟೀಕೆಯಲ್ಲಿ "ತದ್ಧಿ(ಅಪ್ರಾಮಾಣ್ಯಂ)ಬಲವತ್ಪ್ರಮಾಣ ವಿರೋಧತಃ ಕಲ್ಪನೀಯಂ II ಅನ್ಯಥಾ ಅತಿಪ್ರಸಂಗಾತ್" ಎಂದು ಪ್ರಾಮಾಣ್ಯ ಸ್ವತಸ್ತ್ವ ಸಿದ್ಧಾಂತವನ್ನೇ ಒಪ್ಪಿದ್ದಾರೆ. ಆ ವಾಕ್ಯಗಳು ಹಿಂದೆ ಅಧ್ಯಾಯ III ರಲ್ಲಿ ವಿಶದವಾಗಿ ಉದಾಹೃತವಾಗಿವೆ. ಆದ್ದರಿಂದ ನಿರವಕಾಶ ಆಗಮದಲ್ಲಿ ನಿರ್ಮೂಲ ಶಂಕೆಯು, ಇದಕ್ಕೆ ಪ್ರಾಮಾಣ್ಯ ಹೇಗೆ ಎಂಬ ಯುಕ್ತ್ಯಪೇಕ್ಷೆಯ ಪ್ರಶ್ನೆಯೂ ಅನುಚಿತವು. ಮತ್ತೇನೆಂದರೆ ಪ್ರಬಲಾಗಮವಿರೋಧ ಪ್ರದರ್ಶನ ಮಾಡಿಯೇ ವಾದಿರಾಜಋಜುತ್ವವು ಹೇಗೆ ಯುಕ್ತವಾಗುತ್ತೆಂದು ಕೇಳಬೇಕು. ಅಂಥ ಪ್ರಬಲ ಆಗಮ ಒಂದೂ ಇಲ್ಲವೇ ಇಲ್ಲವೆಂದು ನಾಲ್ಕನೇ ಅಧ್ಯಾಯಾದಿಗಳಲ್ಲಿ ಸಾಧಿಸಲ್ಪಟ್ಟಿರುವುದರಿಂದ ಈ ವಿಷಯದಲ್ಲಿ ಪೂರ್ವಪಕ್ಷಿಗಳ ವಾದವು ಆಗ್ರಹಾಜ್ಞಾನಾದಿ ಮೂಲಕವಾದದ್ದೆಂದೇ ನಿರ್ಣಯ.

ಹದಿಮೂರನೇ ಅಧ್ಯಾಯವು ಮುಗಿಯಿತು.

## ಹದಿಮೂರನೆಯ ಅಧ್ಯಾಯವು ಮುಗಿಯಿತು.

# ಅಧ್ಯಾಯ 14

## ಪ್ರತಿ ಪ್ರಕರಣಸ್ಥ ದೂಷಣೆಗಳು

ಪುಟ 1. ಪಙ್ಕ್ತಿ 6 : ಪೂರ್ವಪಕ್ಷೀಯ ಗ್ರಂಥದ ಖಂಡ್ಯಾಂಶಗಳ ಸೂಕ್ಷೇಪೋಕ್ತಿ.

**ಉಕ್ತಿ :**

“ಕೆಲವರು ವಾದಿರಾಜ ಗುರುಗಳು ಭಾವಿವಾಯುಪದ ಗ್ಯರೆಂದು ನಿಶ್ಚಯಿಸಿದ್ದಾರೆ. ಪ್ರಮಾಣಾಸಿದ್ಧವಾದ್ದರಿಂದಲೂ, ವಿರುದ್ಧ ಪ್ರಮಾಣ ಬಾಧಿತವಾದ್ದರಿಂದಲೂ, ಆ ಮತದ ಅನುಪಾದೇಯತ್ವವು “ಅಚೇತನಾಸತ್ಯಾನ್ಯನುಪಾಸ್ಯಾನಿ........ಯತ್ಕಿಂಚಿದನ್ಯಥಾಸಂತಂ ಸಮಾನಾಂ ವಿಷಮಾ ಪೂಜಾ......” ಇತ್ಯಾದಿ ಶಾಸ್ತ್ರವಚನಗಳಿಂದ ಸ್ಫುಟವಾಗಿ ತಿಳಿಯಲ್ಪಡುತ್ತೆ.

**ಪ್ರತ್ಯುಕ್ತಿ:**

ಈ ಹುಚ್ಚು ಉಪಕ್ರಮ ವಾಕ್ಯವೇ “ಅಹೋ ಮೊಹಸ್ಯ ಪಾರಮ್ಯಂ” ಎಂಬ ಉದ್ಗಾರವನ್ನು ಉಂಟುಮಾಡುತ್ತೆ; ಏಕೆಂದರೆ ಇಲ್ಲಿ ಪೂರ್ವಪಕ್ಷಿಗಳು ಕೊಟ್ಟಿರುವ “ಪ್ರಮಾಣಾಸಿದ್ಧವಾದ್ದರಿಂದ, ಪ್ರಮಾಣ ಬಾಧಿತವಾದ್ದರಿಂದ” ಎಂಬ ವಿಶೇಷಣಗಳೂ, “ಅಚೇತನಾಸತ್ಯಾನಿ” ಇತ್ಯಾದಿ ಪದ್ಯಗಳಲ್ಲಿ ಉಕ್ತವಾದ ಪ್ರತ್ಯವಾಯಗಳೂ ಗ್ರಂಥಕಾರರಿಗೆ ಅಭಿಮತವಾದ ನಿಷ್ಪ್ರಮಾಣ ಅನೃಜುತ್ವವಾದಕ್ಕೇ ಚೆನ್ನಾಗಿ ಲಗ್ನವಾಗುತ್ತೆ; ಋಜುತ್ವ ಪಕ್ಷಕ್ಕೆ ಅನ್ವಯಿಸುವುದಿಲ್ಲ ಏಕೆಂದರೆ ಋಜುತ್ವವಾದವು ವೇದ ಪುರಾಣ ಐತಿಹ್ಯ ಗೀತ ಆಖ್ಯಾನಾದಿ ಬಹು ಪ್ರಮಾಣ ಪ್ರತಿಪಾದ್ಯವೂ ಸರ್ವಮೂಲ ಪ್ರಮಾಣಾವಿರುದ್ಧವೂ ಆಗಿದೆ. ಆದ್ದರಿಂದ ಗ್ರಂಥದ ಆರಂಭದಲ್ಲೇ ಪೂರ್ವ ಪಕ್ಷಿಯು ಅತ್ಯಂತ ಭ್ರಮೆಯಿಂದ ತನ್ನ ಪಕ್ಷದ ದುಃಸ್ಥಿತಿಯನ್ನು ಪ್ರತಿವಾದಿಗಳ ಸಾಧುವಾದಕ್ಕೆ ಆರೋಪಿಸಿರುವುದು ವ್ಯಕ್ತವಾಗಿದೆ.

ಕಿಂಚ ಪೂರ್ವಪಕ್ಷಿಗಳು ವಾದಿರಾಜರ ಅನೃಜುತ್ವವನ್ನು ಸಾಧು ಸಜ್ಜನರಿಗೆ ವ್ಯಕ್ತಮಾಡಿಬಿಡುತ್ತೇವೆಂದು ಪ್ರತಿಜ್ಞೆ ಮಾಡಿ ಒಂದಾದರೂ ಪ್ರಮಾಣಕೊಟ್ಟಿಲ್ಲವಾದ್ದರಿಂದ, ಅಷ್ಟರಿಂದಲೇ ತದ್ವಿರೋಧಿ ಋಜುತ್ವವಾದವು ಪ್ರಾಮಾಣಿಕವೆಂದು ಸಿದ್ಧವಾಗುತ್ತೆ. “ವಿರುದ್ಧ ಪ್ರಮಾಣ ಬಾಧಿತತ್ವಾತ್” ಎಂಬ ವಾಕ್ಯದಿಂದ ಋಜುತ್ವ ಖಂಡನೆಯಂತೂ ಶಬ್ದ ಮಾತ್ರವೇ. ಏಕೆಂದರೆ ಪುಟ 19 ರಲ್ಲಿ ಗ್ರಂಥಕಾರರು “ಪ್ರತ್ಯಕ್ಷ ವಿರೋಧ ಹೇಗೆಂದರೆ” ಎಂದು ಉಪಕ್ರಮಿಸಿ ಒಬ್ಬರ ಪ್ರತ್ಯಕ್ಷ ವಿರೋಧವನ್ನೂ ನಿರ್ದೇಶಿಸಿಲ್ಲ. ಪುಟ 22 ಆಗಮ ವಿರೋಧ ಹೇಗೆಂದರೆ ಎಂದು ಆರಂಭಿಸಿ ಒಂದೂ ವಿರೋಧಿ ಆಗಮ ವಾಕ್ಯವನ್ನೂ ಕೊಟ್ಟಿಲ್ಲ. ಪ್ರತ್ಯಕ್ಷಾಗಮಗಳು ಇಲ್ಲದ ಮೇಲೆ ಪುಟ 21 ರಲ್ಲಿ ಅನುಮಾನ ವಿರೋಧವು ಹೇಗೆಂದರೆ ಎಂದು ಇವರು ಉಪಕ್ರಮಿಸಿರುವುದು ತುಂಬ ಅಜ್ಞಾನದ ಕಾರ್ಯವೇ ಆಗಿದೆ; ಏಕೆಂದರೆ ಆಗಮ ಸಹಾಯವಿಲ್ಲದ ಮೇಲೆ ಅನುಮಾನ ವಿರೋಧವು ಅಸಂಭಾವಿತವು. ಹೀಗೆ ಅವರು ಹೇಳಿದ ಪ್ರಮಾಣ ಬಾಧಿತತ್ವವು ಅಸಿದ್ಧವು.

“ಅಚೇತನಾಸತ್ಯಾನಿ” ಇತ್ಯಾದಿ ಪೂರ್ವಪಕ್ಷ್ಯುದಾಹೃತ ವಾಕ್ಯಗಳು ಅವರ ಅನೃಜುತ್ವ ಪಕ್ಷಕ್ಕೆ ಸಾಧಕವಲ್ಲ. ಋಜುತ್ವ ಪಕ್ಷಕ್ಕೆ ಸ್ವಲ್ಪವೂ ಬಾಧಕವಲ್ಲ. ಅಂಥ ವಾಕ್ಯೋದಾಹರಣೆ ಅಸಂಗತವೇ. ಆ ಪ್ರಮಾಣ ವಾಕ್ಯಗಳು ಕೇವಲ ಊಹೆಯಿಂದ ವಾದಿರಾಜರಿಗೆ ಅನೃಜುತ್ವ ಕಲ್ಪಿಸಿ ಅಪಚಾರ ಮಾಡುವ ಅವರ ಪಕ್ಷಕ್ಕೆ ಬಾಧಕ ಬೋಧಕವಾಗಿಯೂ, ಋಜುತ್ವ ಪಕ್ಷಕ್ಕೆ ಸಾಧಕವಾಗಿಯೂ ಇವೆ, "ಆದ್ದರಿಂದ ಸ್ಫುಟಮವಗಮ್ಯತೇ” ಸ್ಪಷ್ಟ ಗೊತ್ತಾಗುತ್ತೆಂದು ಕೊನೆಮಾತಾಡಿರುವುದು ಹಾಸ್ಯಾಸ್ಪದವೇ.

| |
|---|
| ಹಾಗಿದ್ದರೆ ಪೂರ್ವಪಕ್ಷಿಯು ಎಂಥ ಪ್ರಮಾಣ ಉದಾಹರಿಸಬೇಕೆಂದರೆ, । 3-10 ಭಾಗ.ತಾ.ದಲ್ಲಿ "ಕಪಿಲೋನ್ಯೂಜಗಾದಹ" ಎಂದ ಸರ್ವಜ್ಞರು ಪ್ರಮಾಣವನ್ನು ಉದಾಹರಿಸಿ, ವೇದವಿರುದ್ಧ ಸಾಂಖ್ಯಮತ ಪ್ರವರ್ತಕನು ದೇವರಲ್ಲ, ಅನ್ಯಪುರುಷನು ಎಂದು ತೋರಿಸಿದಂತೆ, ಇವರೂ ಕೂಡ ವಾದಿರಾಜ ಗುರುಗಳು ಋಜುಗಳಲ್ಲ, ಇಂಥ ದೇವಾಂಶ ಪುರುಷರು ಎಂಬ ವಾಕ್ಯವಿದ್ದರೆ, ಸಂಪ್ರತಿಪನ್ನ ಯೋಗಿ ಪ್ರತ್ಯಕ್ಷವಿದ್ದರೆ ಆ ಪ್ರಮಾಣ ಕೊಡಬೇಕು. ಅಂಥ ಪ್ರಮಾಣವಿಲ್ಲವಾದ್ದರಿಂದ ಸುಮ್ಮನಿರಬೇಕು. ಅನುಪಾದೇಯ ಗ್ರಂಥ ಬರೆಯಬಾರದು. |
| ಪುಟ 1-13 ಉಕ್ತಿ: |
| "ಇತಿ ತದ್ದರ್ಶನದ್ವಾರಾ ಪ್ರಮಾಣೈಕಶರಣ ಸಜ್ಜನ ಮೋದಾಯಾಯಂ ಗ್ರಂಥ : ಪ್ರವರ್ತತೇ" (ಹೀಗೆ ಋಜುತ್ವವು ಪ್ರಮಾಣಾಸಿದ್ಧ ಪ್ರಮಾಣಬಾಧಿತವೆಂದು ತೋರಿಸುವುದರ ಮೂಲಕ ಪ್ರಮಾಣೈಕಶರಣ ಸಜ್ಜನರ ಸಂತೋಷಕ್ಕಾಗಿ ಈ ಗ್ರಂಥವು ಪ್ರವರ್ತಿಸುತ್ತದೆ.) |
| ಪ್ರತ್ಯುಕ್ತಿ: |
| ಮಳಲಿನ ಮೇಲೆ ಮನೆಕಟ್ಟಿದಂತೆ ಇದು ವಿಫಲ ಪ್ರತಿಜ್ಞೆಯೇ ಆಗಿದೆ. ಏಕೆಂದರೆ "ವಾದಿರಾಜ ಗುರುಗಳಿಗೆ ಋಜುತ್ವವಿಲ್ಲ ಎಂಬಲ್ಲಿ ಆಗಮವಿಲ್ಲ; ಪ್ರತ್ಯಕ್ಷವಿಲ್ಲ; ಅವೆರಡೂ ಇಲ್ಲದ ಮೇಲೆ ಪ್ರವರ್ತಿಸುವ ಅನುಮಾನಗಳು ಅಸಾಧಕಗಳು. ಆದ್ದರಿಂದ ಗ್ರಂಥಕಾರರು ಹಲ್ಲಿಲ್ಲದ ಹಾವಿನಂತೆ ಆಗಿ ನಿರ್ಮೂಲ ಶಂಕಾಗಳಿಂದ ಅಲ್ಲಲ್ಲಿ ಪರಪಕ್ಷವನ್ನು ದೂಷಣೆ ಮಾಡುತ್ತಾರೆ. ಆ ದೂಷಣೆಗಳು ಸಮಂಜಸವಾಗಿಲ್ಲ. ಹಿಂದಿರುಗಿ ಅನೃಜುತ್ವ ಪಕ್ಷಕ್ಕೆ ಬಡಿಯುತ್ತವೆ. ಪ್ರಮಾಣೈಕ ಶರಣರಾದ ಸಜ್ಜನರು ಪ್ರಮಾಣಹೀನ ವಿಚಾರದಿಂದಾಗಲೀ, ನಿಷ್ಪ್ರಮಾಣಕ ಖಂಡನೆಯಿಂದಾಗಲೀ ವೈಷ್ಣವರನ್ನೆ ಹಿಂಸಿಸಿದರೆ ಹೇಗೆ ತಾನೇ ಸಂತೋಷವನ್ನು ಹೊಂದುತ್ತಾರೆ? |
| ಪ್ರಾಮಾಣ್ಯ ಸ್ವತಸ್ತ್ವವನ್ನು ಉಪೇಕ್ಷಿಸಿ ಸಾಧುಗಳು ಉದಾಹರಿಸಿದ ಪ್ರಮಾಣಗಳ ಮೇಲೆಲ್ಲಾ ಸುಮ್ಮಸುಮ್ಮನೆ ಶಂಕಿಸಿ ನಿಷ್ಫಲ ಪ್ರಶ್ನೆಗಳೆಂಬ ಬಾಣವೃಷ್ಟಿ ಮಾಡುವವರು ದುರ್ವಾದಿಗಳು. ಅವರುಗಳು ನ್ಯಾಯ ವೈಶೇಷಿಕಾದಿ ಕುವಾದಿಗಳ ರೀತಿಯನ್ನು ಅನುಸರಿಸಿದವರು. ಅಂಥ ರೀತಿಯಲ್ಲಿ ಪ್ರವರ್ತಿಸಿವ ಪೂರ್ವಪಕ್ಷ ಗ್ರಂಥಕರ್ತರು ಹೇಗೆ ಪ್ರಮಾಣೈಕ ಶರಣ ಮಾಧ್ವ ಜನರಿಗೆ ಸಂತೋಷವನ್ನುಂಟುಮಾಡುವರು? "ಬಾಯಿ ಇದ್ದದ್ದಕ್ಕೆ ಸಾರ್ಥಕ್ಯ ಬೈಯುವುದು" ಎಂಬ ನ್ಯಾಯದಿಂದ ನಿಷ್ಪ್ರಮಾಣ ಮಾತುಗಳಿಂದ ಅನ್ಯಮತನಿಂದನೆ ಮಾಡಿದರೆ ಸಜ್ಜನರ ಮನಸ್ಸಂತೋಷವಾಗುವುದಿಲ್ಲ. |
| **3. ಪುಟ 1-15** ಋಜುತ್ವ ವಿಚಾರ ಗ್ರಂಥದಲ್ಲಿ ಖಂಡನ ಸೌಕರ್ಯವಾಗುವಂತೆ ಋಜುತ್ವ ವಾದಿಗಳ ಪೂರ್ವಪಕ್ಷವು ದುರ್ಬಲವಾಗಿ ಕಲ್ಪಿತವಾಗಿದೆ. ಅದು ಹೇಗೆಂದರೆ |
| ಉಕ್ತಿ: |
| "ಋಜುತ್ವ ವಿಷಯದಲ್ಲಿ ನಮಗೆ ಪ್ರತ್ಯಕ್ಷವಿಲ್ಲದಿದ್ದರೂ ಕೂಡ, ಯೋಗಿ ಪ್ರತ್ಯಕ್ಷವು ಯೋಗಿಜನ ಕೃತ ಕರ್ಣಾಟಕ ಪದ್ಯಗಳಿಂದ ಅನುಮಿತವಾದ ಪ್ರಮಾಣವಾಗಿದೆ. ಅನುಮಾನಗಳೂ ಪ್ರಮಾಣವಾಗಿವೆ. ಆಗಮಗಳೂ ಇವೆ." |

**ಪ್ರತ್ಯುಕ್ತಿ:**

ಈ ಪೂರ್ವಪಕ್ಷ ರಚನೆಯೇ ಅಸಮಂಜಸ. ಮಧ್ವ ಮತಕ್ಕೆ ವಿರುದ್ಧವಾದ ರೀತಿ. ಹೇಗೆಂದರೆ ಆಗಮೈಕವೇದ್ಯ ವಿಷಯವಾದ ಪುಣ್ಯ, ಪಾಪ, ಋಜುತ್ವ ತದಭಾವ ವಿಷಯಗಳಲ್ಲಿ ಪ್ರತ್ಯಕ್ಷಾನುಮಾನಗಳನ್ನು ಮೊದಲು ಪ್ರಮಾಣವನ್ನಾಗಿ ಹೇಳಕೂಡದು. "ಪೃಷ್ಟೇನಾಗಮಏವಾದೌ ವಕ್ತವ್ಯಃ ಸಾಧ್ಯಸಿದ್ಧಯೇ" ಎಂದು ಕಥಾಲಕ್ಷಣ ವಚನವಿದೆ. ಕರ್ಣಾಟಕ ಪದ್ಯಗಳು ಆಗಮದಲ್ಲಿ ಸೇರಿದವು ಎಂದು ಯಾರಿಗೆ ತಿಳಿಯದು? ಅವುಗಳನ್ನು ಓದಿಕೊಂಡು ಯೋಗಿಪ್ರತ್ಯಕತ್ವಾನುಮಾನ ಮಾಡುವುದು ಮಾಧ್ವಮಾರ್ಗವಲ್ಲ. ಆಗಮ ಸಹಾಯವುಳ್ಳ ಯೋಗಿ ಪ್ರತ್ಯಕ್ಷವು ಪ್ರಮಾಣವೆನ್ನುವುದೇ I 1-3 ಭಾಷ್ಯೋಕ್ತ ಮಾಧ್ವ ಮಾರ್ಗ. ಯಶೋದೆಯ ಪ್ರತ್ಯಕ್ಷಕ್ಕೆ "ಯ ಉತ್ರಿಧಾತುಪೃಥಿವೀಂ ಏಕೋ ದಾಧಾರ ಭುವನಾನಿವಿಶ್ವಾ" ಇತ್ಯಾದಿ ಆಗಮ ಸಹಾಯ ಇದೆ. ಆಗವು ಸಹಾಯವಿಲ್ಲದ ಯೋಗಿಪ್ರತ್ಯಕ್ಷವು ಮಧ್ವ ಸಿದ್ಧಾಂತದಲ್ಲಿ ಪ್ರಮಾಣ ಪದವಿಯನ್ನು ಹೊಂದಿಲ್ಲ. ಆದ್ದರಿಂದ ವಿಜಯದಾಸಾದಿಗಳ ಪದ್ಯಗಳನ್ನು ಆಗಮ ಸಹಾಯ ಹೊಂದಿದ ಜ್ಞಾನಿವಚನಗಳೆಂದು ತಿಳಿದು ಆಗಮ ಪ್ರಮಾಣದಲ್ಲಿ ಸೇರಿಸಬೇಕು. ಆಗಮ ರೀತಿಯಾಗಿಯೇ ಅವುಗಳು ಪ್ರಮಾಣವಾಗಿರುವಾಗ, "ತದನುಮಿತಯೋಗಿಪ್ರತ್ಯಜಕ್ಷ" ಸಾಧಿಸಲಿಕ್ಕೆ ಹೋದರೆ ಹೇತುವು ಅಪ್ರಯೋಜಕವಾಗುತ್ತೆ. ಪದಗಳು ಯೋಗಿ ಪ್ರತ್ಯಕ್ಷೈಕ ಮೂಲವೆಂಬಲ್ಲಿ ಪ್ರಮಾಣವಿಲ್ಲ. ಆದ್ದರಿಂದ ಖಂಡನ ಸೌಕರ್ಯಕ್ಕಾಗಿ ಕುತ್ಸಿತರೀತಿಯಿಂದ ಋಜುತ್ವವಾದದ ಪೂರ್ವಪಕ್ಷ ರಚಿಸಲಾಗಿದೆ ಎಂದು ಸಿದ್ಧವಾಗುತ್ತೆ.

ಹಾಗಾದರೆ ಶಾಸ್ತ್ರೀಯವಾದ ಋಜುತ್ವಪಕ್ಷದ ಅನುವಾದವು ಹೇಗಿರಬೇಕು? ಎಂದರೆ ಹೀಗಿರಬೇಕು. ತಥಾಹಿ: ವಾದಿರಾಜ ಗುರುಗಳು ಋಜುಗಳಲ್ಲ ಎಂದು ಆಧುನಿಕರು ಕೆಲವರು ಶಂಕಿಸುತ್ತಾರೆ. ಅವರು ಋಜುಗಳೇ ಎಂದು ಸಂಪ್ರದಾಯ ಶರಣರು ಹೇಳುತ್ತಾರೆ. ಇದರಲ್ಲಿ ಯಾವುದು ತತ್ವವು ಎಂದು ವಿಚಾರಮಾಡಿದರೆ; ಅನೃಜುತ್ವ ಪಕ್ಷಕ್ಕೆ ಸಾಧಕ ಆಗಮವು ಒಂದೂ ಇಲ್ಲ. ಆತಏವ ಆಗಮಾನುಸಾರಿ ಲಿಂಗವೂ ಇಲ್ಲ. ಅತೀಂದ್ರಿಯವಾಗಿ ವಿಷಯವು ಸ್ಥಿತವಾಗಿರುವುದರಿಂದ ಲೌಕಿಕ ಪ್ರತ್ಯಕ್ಷವು ಆ ವಿಷಯದಲ್ಲಿ ಪ್ರವರ್ತಿಸುವುದಿಲ್ಲ. ಯೋಗಿ ಪ್ರತ್ಯಕ್ಷವು ಆಗಮ ಸಿದ್ಧವಾಗಬೇಕಾದ್ದರಿಂದ ಮತ್ತು ಆಗಮೋಪಜೀವ್ಯವೂ ಆದ್ದರಿಂದ ಆಗಮದಿಂದಲೇ ಯೋಗಿ ಪ್ರತ್ಯಕ್ಷವಿದ್ದರೆ ತಿಳಿಯಲ್ಪಡಬೇಕಾಗಿದೆ. ಆದ್ದರಿಂದ ಯೋಗಿಪ್ರತ್ಯಕ್ಷವನ್ನು ಆಗಮದಲ್ಲೇ ಸೇರಿಸಿ ಆ ಪ್ರಮಾಣಗಳನ್ನು ಹುಡುಕಿದರೂ ಅನೃಜುತ್ವಕ್ಕೆ ಒಂದೂ ಸಾಧಕ ಜ್ಞಾನಿವಚನವಿಲ್ಲ. ಹೀಗೆ ಪ್ರಮಾಣತ್ರಯ ಹೀನವಾದ್ದರಿಂದ ಅನೃಜುತ್ವವಾದವು ಶಿಷ್ಟರಿಂದ ತ್ಯಜಿಸಲ್ಪಡಬೇಕು.

ಅನೃಜುತ್ವ ವ್ಯಾಪ್ಯ ಲಿಂಗಗಳ ಕ್ವಚಿಲ್ಲೌಕಿಕರಿಗೂ ಕಾಣುತ್ತವೆ ಎನ್ನ ಕೂಡದ, ಆಗಮವನ್ನು ಉಪಜೀವಿಸಿಕೊಂಡು, ತಿಳಿಯಲ್ಪಡಬೇಕಾದ ಸ್ವರೂಪವುಳ್ಳ ವ್ಯಕ್ತಿ ವಿಷಯದಲ್ಲಿ ಅಂಥ ಸಂಪ್ರತಿಪನ್ನ ವ್ಯಾಪ್ಯಲಿಂಗ ಸದ್ಭಾವ ನಿರ್ಣಯವು ದುಃಶಕವು. ಯಾರು ಸುಳ್ಳು ಹೇಳುತ್ತಾರೋ ಅವರು ಅನೃಜು; ಯಾರು ದುರ್ಬಲರೋ, ಜ್ವರಗ್ರಸ್ತರೋ, ಶಠರೋ, ಜಡರೋ, ವಿದ್ಯಾಹೀನರೋ ಅವರು ಅನೃಜು; ಯಾರು ಅತಿ ದುರಹಂಕಾರಾದಿ ದೋಷಯುಕ್ತರೋ ಅವರು ಅನೃಜು; ಯಾರು ಮಾಲೀ, ಭೈರವೀ, ಗೋಣಿ ಮುಂತಾದ ದುರ್ದೇವತಾ ಪೂಜಕರೊ ಅವರು ಅನೃಜ ಜೀವನೇ ಎಂದು ವ್ಯಾಪ್ತಿ

ಇದೆಯಲ್ಲಾ ಎನ್ನ ಕೂಡದು. ವಿಮತ ವ್ಯಕ್ತಿಗಳಾದ ಶ್ರೀವಾದಿರಾಜರಲ್ಲಿ ಮೇಲ್ಕಂಡ ಕೆಲವು ಲಿಂಗಗಳು ಕಾಣುವುದೇ ಇಲ್ಲ. ಕೆಲವು ಕಂಡರೂ ಕೇವಲ ಮೋಹಕವೋ ಅಥವಾ ಅನೃಜುತ್ವ ಸ್ವಭಾವ ಪ್ರಯುಕ್ತವೋ ಎಂದು ಸಂದೇಹ ಮಾತ್ರ ಹುಟ್ಟುತ್ತೆ. ಅಂಥ ಪ್ರತ್ಯಕ್ಷವು ಜಘನ್ಯವು, ಅತೀಂದ್ರಿಯ ವಿಷಯದಲ್ಲಿ ವೇದಾದಿ ಸಹಾಯ ಹೀನವಾದರೆ ಅಸಾಧಕವೇ. [ಉದಾಹರಣೆ ಬೇಕೆಂದರೆ ಮ.ತಾ.ನಿ. XVIII 118-119 ಕಥೆಯಲ್ಲಿ ಸ್ಪಷ್ಟವಾಗಿದೆ. "ಭಾರತೀದೇವಿಯು ರುದ್ರದೇಹಸ್ಥಿತ ಹರಿಯನ್ನು ಕುರಿತು ತಪಸ್ಸು ಮಾಡಿ ಸಂತೋಷ ಪಡಿಸಿದಳು. ಆಕೆಗೆ ಆ ರುದ್ರದೇಹಸ್ಥಿತ ಹರಿಯು ಪ್ರಭುವಾದ್ದರಿಂದ ವರವನ್ನು ಕೊಟ್ಟನು" ಎಂದಿದೆ. ಬಾಹ್ಯಪ್ರತ್ಯಕ್ಷಾಕಾರ ಹೇಗಿದೆ ಎಂದರೆ ಇಂದ್ರಸೇನಾದೇವಿಯು ರುದ್ರನನ್ನು ಕುರಿತು ಜಪಮಾಡಿ ತಪಸ್ಸು ಮಾಡಿದಳು. ರುದ್ರನು ಪ್ರತ್ಯಕ್ಷವಾಗಿ ವರ ಕೊಟ್ಟನು. ಈ ಪ್ರತ್ಯಕ್ಷವು ಎಷ್ಟು ಮೋಹಕವು!] ಶ್ರೀಕೃಷ್ಣನ ಕ್ಷೌರ, ಮೂತ್ರ, ಪುರೀಷಾದ್ಯುತ್ಸರ್ಗ, ಸ್ತ್ರೀಸಂಗ, ರಕ್ತಸ್ರಾವ, ನಿದ್ರಾ, ಶ್ರಮ, ಅಂಬೆಗಾಲಿಡೋಣ, ಶೈಶವಕುಮಾರಾದಿ ಅವಸ್ಥಾಪ್ರಾಪ್ತಿ, ಕೊನೆಗೆ ಮರಣ ಇತ್ಯಾದಿ ಪ್ರತ್ಯಕ್ಷದಿಂದ ಹೇಗೆ ಅವನಲ್ಲಿ ಅನೀಶ್ವರತ್ವ ನಿಶ್ಚಯವನ್ನು ಮಾಡಲು ಶಕ್ಯವಿಲ್ಲವೋ, ಹೇಗೆ ಶ್ರೀಕೃಷ್ಣನು ಮನುಷ್ಯನೆಂಬ ನಿಶ್ಚಯವೇ ಬಾಧಿತವೋ, ಹಾಗೆಯೇ ಶ್ರೀವಾದಿರಾಜ ಗುರುಗಳಲ್ಲೂ ಪೂರ್ವೋಕ್ತ ಧರ್ಮಗಳು ಪ್ರತ್ಯಕ್ಷ ಸಿದ್ಧವಾದರೂ,ಅನೃಜುತ್ವ ಸ್ವಭಾವದಿಂದಲೇ ಇವೆ ಎಂದು ನಿಶ್ಚಯಿಸಲಿಕ್ಕಾಗಲಿ, ಅಂಬೆಗಾಲಿಡುವವನು ಅನೃಜುವು ಎಂಬ ವ್ಯಾಪ್ತಿಯು ನಿರುಪಾಧಿಕವೆಂದು ನಿರ್ಣಯಿಸುವುದಕ್ಕಾಗಲಿ, ಆಗಮ ಸಹಾಯದಿಂದ ಅಮುಕ ವ್ಯಕ್ತಿಯ ನಿಜ ಸ್ವರೂಸ ತಿಳಿಯದೇ ಶಕ್ಯವಿಲ್ಲ. ಇಂಥ ಧರ್ಮಗಳನ್ನು ನೋಡಿ ಅವರು ಅನೃಜು ಎಂದು ಅನುಮಾನ ಮಾಡಿದರೆ, ಆ ಅನುಮಾನಗಳಿಗೆ ಉಪಜೀವ್ಯ ಆಗಮಬಾಧವು ತಪ್ಪಿದ್ದಲ್ಲ. ಹಾಗಿದ್ದರೆ ಎಲ್ಲಾದರೂ ಗೋಪಾಲನೊಬ್ಬನನ್ನು ನೋಡಿದರೆ, ಪಾಚಕ, ಕಿರಾತ, ಮಾತಂಗರ ದರ್ಶನವಾದರೆ ಆತನು ವಿಷ್ಣುವು ಏತಕ್ಕಾಗಬಾರದು? ಭೀಮನೇ, ರುದ್ರನೇ, ಇಂದ್ರನೇ ಇತ್ಯಾದಿ ಸಂಶಯಗಳು ಹುಟ್ಟಿ ಲೋಕವ್ಯವಹಾರೋಚ್ಛೇದ ಪ್ರಸಂಗ ಬರುತ್ತೆ ಎಂದು ಶಂಕಿಸಕೂಡದು. ಅಪರೀಕ್ಷಿತ ದೃಷ್ಟಿಯಿಂದ, ಧರ್ಮಶಾಸ್ತ್ರ ರೀತಿಯಿಂದ ಸಾಮಾನ್ಯ ವ್ಯವಹಾರವು ನಡೆಯುತ್ತಿರುತ್ತದೆ. ಅದರಲ್ಲೂ ಅನೇಕರು ಸ್ಪಷ್ಟ ದುರ್ಲಕ್ಷಣಯುಕ್ತರೂ ಹೌದು. ಬಹುಕಾಲೀನ ಪರೀಕ್ಷೆಯಿಂದಲೂ, ನಮ್ಮ ಸಾದೃಶ್ಯಲಿಂಗಗಳಿಂದಲೂ ಇತರ ವ್ಯವಹಾರ ವಿಶೇಷಗಳಿಂದಲೂ ಚೈತ್ರ ಮೈತ್ರರು ಸಾಮಾನ್ಯ ಜನರೇ ಎಂದು ನಿಶ್ಚಯಿಸುತ್ತೇವೆ. ಪುರೋವೃತ್ತಿ ವ್ಯಕ್ತಿಯ ಲಕ್ಷಣ ವ್ಯವಹಾರಾದಿಗಳನ್ನು ಪುನಃ ಪುನಃ ಕಂಡಾಗ, ಆಗಮ ಬಾಧಕವು ಏನಾದರೂ ಇರಬಹುದೇ ಎಂದು ಶಂಕೆ ಬರದೇ ಹೋದರೆ, ಗೊಲ್ಲನು ಗೊಲ್ಲನೇ, ಪಾಚಕ ಕಿರಾತರೂ ಸಾಮಾನ್ಯರೇ. ಆದರೂ ಪರೀಕ್ಷಿತ ದೃಷ್ಟಿ ವಿಷಯವಾದಾಗಲೇ ಅವರ ನಿರ್ಣಿತ ಸ್ವರೂಪವು ನಿಶ್ಚಿತವಾಗುತ್ತೆ. ಆದ್ದರಿಂದಲೇ ಗೀ.ಭಾ IV ರಲ್ಲಿ ಹೇಳಲ್ಪಟ್ಟಿದೆ: "ಏಕಂಚ ತತ್ವತೋ ಜ್ಞಾತುಂ ವಿನಾ ಸರ್ವಜ್ಞತಾಂ ನರಃ| ನ ಸಮರ್ಥೋ ಮಹೇಂದ್ರೋಽಪಿ ತಸ್ಮಾತ್ಸರ್ವತ್ರ ಜಿಜ್ಞಸೇತ್" ಎಂದಿದೆ. ವಿಮರ್ಶೆಮಾಡಿ ಪ್ರಾಪ್ತವಾದ ಜ್ಞಾನದ ಪ್ರಾಮಾಣ್ಯವು ಸುದೃಢವಾಗಿ ಸಾಕ್ಷಿಯಿಂದ ನಿಶ್ಚಯಿಸಲ್ಪಟ್ಟಾಗ ಅಂಥ ಪ್ರತ್ಯಕ್ಷವು ಆಗಮ ಬಾಧಿತವಾಗುವುದಿಲ್ಲವೆಂದು ಹೇಳಬಹುದು. ಆದರೆ ಮಧ್ವರು ದುರ್ಬಲ ಶಿಶು, ವಾದಿರಾಜರು ಅಂಬೆಗಾಲಿಡುವ ದುರ್ಬಲರು, ಕೃಷ್ಣನು ತೊದಲು ಮಾತಾಡುತ್ತಾನೆ ಇತ್ಯಾದಿ ಪ್ರತ್ಯಕ್ಷವಾದಾಗ

| |
|---|
| ಜ್ಞಾನಗ್ರಾಹಕ ಸಾಕ್ಷಿಯು ಆ ಜ್ಞಾನ ಪ್ರಾಮಾಣ್ಯವನ್ನು ನಿಶ್ಚಯಿಸುವುದೇ ಇಲ್ಲ. ಇವರು ಯಾರೋ ಏನೋ ಎಂದು ಸುಮ್ಮನಿರುತ್ತೆ. ಆಗ ಪರೀಕ್ಷೆ ಪ್ರಾರಂಭವಾಗುತ್ತೆ. ಕಾಲಾಂತರದಲ್ಲಿ ಪಂಡಿತಾಚಾರ್ಯರಂಥ ಗುರುಗಳಿಂದ ಮಧ್ವಾಚಾರ್ಯರ ನಿಜಸ್ವರೂಪ ತಿಳಿಯುತ್ತಾನೆ. ವೇದವೇದ್ಯರಿಂದ ಗುರುರಾಜರ ಸ್ವರೂಪ ತಿಳಿಯುತ್ತಾನೆ. ಗರ್ಗಾದಿ ಋಷಿಗಳಿಂದ ಕೃಷ್ಣಾದಿಗಳ ಸ್ವರೂಪ ತಿಳಿಯುತ್ತಾನೆ. ಶಾಸ್ತ್ರವನ್ನು ಮನನಮಾಡುತ್ತಾನೆ. |
| ಆಗ ವಿವೇಕ್ಯಧಿಕಾರಿಯು ರಹಸ್ಯಗಳನ್ನು ತಿಳಿಯುತ್ತಾನೆ. ಆತನ ಸಾಕ್ಷಿಯು ಜ್ಞಾನ ಪ್ರಾಮಾಣ್ಯ ನಿಶ್ಚಯವನ್ನು ಮಾಡುತ್ತೆ. ವಾದಿರಾಜ ಗುರುಗಳು ಕೇವಲ ಮನುಷ್ಯರು ಎಂದು ಪ್ರಥಮ ಪ್ರತ್ಯಕ್ಷ ಬಂದರೂ ಆ ಜ್ಞಾನದಲ್ಲಿ ಪ್ರಾಮಾಣ್ಯ ನಿಶ್ಚಯ ಸಾಕ್ಷಿಗೆ ಉಂಟಾಗಿರುವುದಿಲ್ಲ. ಪರೀಕ್ಷಾ ವಿಶೇಷಗಳಿಂದ ಅವರ ಮಹತ್ವ ತಿಳಿದ ಮೇಲೆ ಜ್ಞಾನಿ ಗುರೂಪದೇಶದಿಂದಲೂ, ವೇದ ಪುರಾಣಾದಿ ವಾಕ್ಯಗಳಿಂದಲೂ, ವೇದವೇದ್ಯರ ಸಂಪ್ರದಾಯ ಪ್ರತ್ಯಕ್ಷಾದಿಗಳಿಂದಲೂ, ಅವರ ಋಜುತ್ವ ಸ್ವರೂಪ ನಿಶ್ಚಯವನ್ನು ಸಾಕ್ಷಿಯು ಸರಿಯಾಗಿಯೇ ಹೊಂದುತ್ತೆ. ಕೇವಲ ಲೌಕಿಕ ಪ್ರತ್ಯಕ್ಷಗಳಿಂದಲೂ, ವ್ಯಾಪ್ಯಲಿಂಗ ಪ್ರತ್ಯಕ್ಷದಿಂದಾದ ಶುಷ್ಕಾನುಮಾನಗಳಿಂದಲೂ, ನಿಜ ಸ್ವರೂಪ ತಿಳಿಯುವುದಿಲ್ಲ. ಆಗಮ ಸಹಾಯವೇ ಬೇಕು. |
| ಶ್ರೀ ವೇದವೇದ್ಯರ ಸಂಪ್ರದಾಯವೇನು ಆಗಮವೇ ಎನ್ನ ಕೂಡದು; ಗ್ರಂಥಾರಂಭದ ಮಂಗಳದಿಂದ ಗ್ರಂಥಸಮಾಪ್ತ್ಯಾದಿ ಫಲವಾಗುತ್ತೆ ಎಂಬ ತತ್ವಕ್ಕೆ ಸಾಧಕ ಶ್ರುತಿ ಪುರಾಣಗಳಿಲ್ಲ. ಆದರೆ ಅವಿಗೀತ ಶಿಷ್ಟಾಚಾರ ದರ್ಶನವೇ ಈ ವಿಷಯದಲ್ಲಿ ಪ್ರಮಾಣವಾಗಿದೆ. ಶಿಷ್ಟ ಸಂಪ್ರದಾಯವು ಐತಿಹ್ಯವೆನ್ನಿಸುತ್ತೆ. ಅದು ಆಗಮವಿಶೇಷ. ಮಹಾಭಾಷ್ಯಕಾರರಿಂದ, ಶ್ರೀಮಧ್ವಗುರುಗಳಿಂದಲೂ, ಶ್ರೀಟೀಕಾಚಾರ್ಯರಿಂದಲೂ ಮಾನಿತ. ಐತಿಹ್ಯ ಅಬಾಧಿತವಾದರೆ ಪ್ರಮಾಣವೆಂದು ಮಾತ್ರವಲ್ಲ, ಬಾಧಿತವೆಂದು ಸಾಮಾನ್ಯರಿಗೆ ಕಂಡರೂ ಪ್ರಮಾಣವೇ. "ನೀನು ಶಾಸ್ತ್ರ ಪಂಕ್ತಿಯನ್ನು ತಿದ್ದಿಕೋ. ಇನ್ನೂ ಎಲ್ಲೆಲ್ಲಿ ಏನು ವಾಕ್ಯ ವಿದೆಯೋ ನಿನಗೇನು ಗೊತ್ತು? ಅವರ ಸಾಸುವೆ ಬೆರೆಸಿದ ನೈವೇದ್ಯವನ್ನು ಶ್ರೀಹರಿ ತೆಗೆದುಕೊಂಡೇ ತೆಗೆದುಕೊಳ್ಳುತ್ತಾನೆ", ಎಂದು ಹೇಳುವಷ್ಟು ಸುದೃಢ ನಿರ್ಣಯಜ್ಞಾನ ಬರುತ್ತೆ. ಆದ್ದರಿಂದ ಶ್ರೀ ವೇದವೇದ್ಯಾದಿಗಳ ಸಂಪ್ರದಾಯವು ಬಲವತ್ತರ ಪ್ರಮಾಣವೇ. ಹಿರಿಯರ ಉಪದೇಶವಿಲ್ಲದೆ ಅಪರೋಕ್ಷ ಜ್ಞಾನಿಗಳು ಎಂದು ಒಬ್ಬರನ್ನು ಬಹುಕಾಲ ವ್ಯವಹಾರದಿಂದ ನಿಶ್ಚಯಿಸಬಹುದಾದರೂ, ಋಜುಗಳು ಎಂದು ಖಚಿತವಾಗಿ ನಿರ್ಣಯಿಸಲಾಗುವುದಿಲ್ಲ; ಆ ವಿಷಯದಲ್ಲೂ, ಅನೃಜುತ್ವವಾದವು ದುರ್ಮತವು ಎಂಬ ವಿಷಯದಲ್ಲಿ ಶ್ರೀ ವೇದವೇದ್ಯರ ಸಂಪ್ರದಾಯವು ಸಾತ್ವಿಕ ಸಾಧಕವಾಗಿದೆ. 'ಐತಿಹ್ಯಮಾಗಮ ಭೇದಃ' ಎಂದ ಪ್ರಮಾಣ ಲಕ್ಷಣದಲ್ಲಿದೆ. ಅನೃಜುತ್ವವಾದಕ್ಕೆ ಇಂಥ ಆಗಮ ಸಹಾಯವಿಲ್ಲ. ಆಗಮ ಸಹಾಯಹೀನ ಲಿಂಗ ದರ್ಶನದಿಂದ ಅನೃಜುತ್ವ ಅಥವಾ ಋಜುತ್ವ ನಿರ್ಣಯ ಶಕ್ಯವಿಲ್ಲ. ಅಂಥ ದೃಷ್ಟಾಂತವೇ ಇಲ್ಲ. |
| ಇಷ್ಟು ಮಾತ್ರವಲ್ಲ. ಬ್ರ.ಸೂ.ಭಾ. III 3-50 "ಶ್ರುತ್ಯಾದಿ ಬಲಿಯಸ್ತ್ವಾಚ್ಚ ನ ಬಾಧಃ" ಎಂದು ತೋರಿಸಿದಂತೆ ಋಜುತ್ವವಾದಕ್ಕೆ ಬಳಿತ್ಥಾಸೂಕ್ತ, ಬ್ರಹ್ಮಾಂಡಪುರಾಣಾದಿ ಆಗಮ, ಪೂರ್ವೋಕ್ತ ಐತಿಹ್ಯ, ಜ್ಞಾನಿ ಪದಗಳು, ಆಖ್ಯಾನ, ಮಹಾಪುರುಷ ಜೀವನ ಚರಿತ್ರೆಗಳು ಪ್ರಮಾಣಗಳಾಗಿವೆ. ಶಾಸ್ತ್ರಾನುಸಾರಿ ಅನುಮಾನ ಸೂಚಕಗಳಾಗಿಯೂ ಇವೆ. |

[ಶ್ರೀ ವಿಶ್ವಪ್ರಿಯ 1 ಶ್ರೀ ವಾದಿರಾಜರು ತಮ್ಮ ಗ್ರಂಥಗಳಲ್ಲಿ ಅಲ್ಲಲ್ಲಿ ಮಾಡಿರುವ ವಾಕ್ಯವಿನ್ಯಾಸಗಳೂ ಸೂಚಕಗಳು: "ಕಲಿಂಜಯತದ್ವಿವಿಕ್ಷುಂ" (ತೀ.ಪ್ರ.) "ತಮೇವ ದೇಹಿಮೇ" (ತೀ.ಪ್ರ.); "ಕುಲವೃದ್ಧೋ ಗುರುರ್ಮಮ (ಸ.ಭಾ.ವಿ.); "ಹಯಾಸ್ಯನಾಸಾ ಪುಟಜಾತವಾತ ವಿಘಾತಧೂತಾಘಕುಲಾಲರಾಶಿಃ| ಮನೀಶವಾಗೀಶಸುತಃ.... ವಾದಿರಾಜಃ" ॥ (ರು.ವಿ.); "ಲಕ್ಷ್ಮೀಕಾಂತನ ಕಂದನ॥ (ಲ.ಶೋ.)"; "ಸ್ವಭಜಕಾಬ್ಜ ಕುಲೋದಯ ಹೇತವೇ" (ರು.ವಿ.) | ಹಾಗೇ ತತ್ವಪ್ರಕಾಶಿಕಾ, ಸುಧಾ ಟಿಪ್ಪಣಿಗಳಲ್ಲೂ ಜಯತೀರ್ಥರ ಅನಮನ ॥ ಯುಕ್ತಿಮಲ್ಲಿಕಾದಿ ಯಾವ ಗ್ರಂಥಗಳಲ್ಲೂ ಶ್ರೀವ್ಯಾಸತೀರ್ಥರ ಅಸ್ಮರಣೆ, "ನಿನಗೆಣೆಗಾಣೆ" ಎಂದು ಶ್ರೀವ್ಯಾಸತೀರ್ಥರೇ ಕೊಂಡಾಡಿರುವುದು; ಮಧ್ವಚಾರ್ಯರಂತೆ ಕಲ್ಲನ್ನೆತ್ತಿಟ್ಟು, ಭೇದನಮಾಡಿ ದೈಹಿಕಶಕ್ತಿ ಪ್ರಕಟಿಸಿರುವುದು, ಭಾವಿರುದ್ರತ್ವೇನಜ್ಞಾತ ಭೂತರಾಜ ಗುರುತ್ವ, ಭಾವಿವೈನತೇಯನೆಂದು ಖ್ಯಾತ ವೇದನಿಧಿ ಗುರುತ್ವ, ಭಾವಿ ಲಾತವ್ಯರೆಂದು ಆಖ್ಯಾನೊಕ್ತ ವೇದವೇದ್ಯಗುರುತ್ವ, ಭಾವೀಂದ್ರನೆಂದು ಖ್ಯಾತ ಶ್ರೀವಿಶ್ವಪ್ರಿಯತೀರ್ಥ ಸೇವಿತತ್ವ, ಆಖ್ಯಾನೊಕ್ತ ಶಾಲ್ಮಲೀರಾಜಸ್ತುತಿ, ಬದುಕಿರುವಾಗಲೇ ವೃದ್ಧಾಪ್ಯದಲ್ಲೂ ಸುದೃಢ ದೈಹಿಕ ದೈವಿಕ ಜೀವನ, ಅಷ್ಟ ಮಠಯತಿ ಸೇವ್ಯತ್ವ, ಪರ್ಯಾಯ ವ್ಯವಸ್ಥೆ, ಮಠ ವ್ಯವಸ್ಥೆ, ಎಲ್ಲಾ ದೊಡ್ಡವರಿಗೂ ಪ್ರತಿಮೆ ಕೊಟ್ಟು ಅನುಗ್ರಹ, ಪೂಜಾಕ್ರಮ ವ್ಯವಸ್ಥೆ, ರುಕ್ಕಿಣೀಶವಿಜಯ ಯುಕ್ತಿಮಲ್ಲಿಕಾಗಳ ರಚನಾ ಪ್ರಣಾಡೀ, ಭಾರತಾರ್ಥ ಪ್ರಕಾಶನ ಪ್ರಣಾಡೀ, ಪೂಜಾ ಕಾಲದಲ್ಲಿ ಸಾಕ್ಷಾತ್ಪರಬ್ರಹ್ಮನಿಂದ ಆಲಿಂಗಿತರಾಗೋಣ ಇತ್ಯಾದಿ ಬಹು ಸೂಚಕಗಳವೆ. ಸೂಕ್ಷಜ್ಞರೂ ಸೂಕ್ಷವಿಮರ್ಶಕರೂ ಆದ ಶಾಸ್ತ್ರಾಭಿಜ್ಞರಿಗೆ ಇವೆಲ್ಲಾ ಅನುಮಿತಿ ಜನಕಗಳೇ. ಇಂಥವು ಅಸಂಖ್ಯಾತವಾಗಿವೆ. ಆ ವಿಶೇಷಗಳನ್ನು ವಿಸ್ತಾರ ಮಾಡದೆ ಸ್ಥೂಲ ಪಂಡಿತರಿಂದಲೂ ಸ್ಪಷ್ಟ ಪ್ರತೀಯಮಾನ ಕೆಲವು ಪ್ರಮಾಣಗಳನ್ನು ನಾನು ನಿರ್ದೇಶ ಮಾಡಿರುತೇನೆ. ಈ ಪ್ರಮಾಣ ವಿನ್ಯಾಸ ಸರ್ವ ಸಂಗ್ರಾಹಕವೆಂದು ತಿಳಿಯಬಾರದು.

ಶ್ರೀ ವಿಶ್ವಪ್ರಿಯತೀರ್ಥರೇ ಮುಂತಾದ ಮಹಾಜನ ಪರಿಗೃಹೀತತ್ವ, ಸ್ವಾಪ್ನದರ್ಶನಾದಿ ಫಲೋಪಲಬ್ಧಿ, ಗ್ರಂಥಗಳ ದೆಸೆಯಿಂದ ಅಬಾಧಿತತ್ವ, ಗುರುರಾಜರ ಅಚ್ಛಿನ ಭಕ್ತತ್ವ, ಮನೋವಾಕ್ಕಾಯ ಕರ್ಮಗಳಲ್ಲಿ ಏಕರೂಪ್ಯ, ಅಭೀಷ್ಟಜ್ಞಾನಾದಿ ದಾತೃತ್ವಾದ್ಯಾಗಮಾನುಸಾರಿ ಅನುಮಾನಗಳೂ ಪ್ರಮಾಣವು. ಇವೆಲ್ಲಾ ಅಪ್ರಮಾಣವೇ ಎನ್ನ ಕೂಡದು. 'ಪ್ರಾಮಾಣ್ಯಂ ಸ್ವತಃ' ಸ್ಪಷ್ಟಬಾಧಕ ಒಂದೂ ಇಲ್ಲ. ಪ್ರಮಾಣಾವಿರೋಧದಿಂದ ದೋಷಾಭಾವ ನಿಶ್ಚಿತವಾಗುತ್ತೆ. ಪ್ರಮಾಣ ವಿರೋಧವಿದ್ದರೇನೇ ಅಪ್ರಾಮಾಣ್ಯ ಶಂಕಾ ಮಾಡಬಹುದೆಂಮ ತತ್ವನಿರ್ಣಯ ವಿದೆ. ಅನುಮಾನಗಳಲ್ಲೂ ಅವು ಆಖ್ಯಾನಾದಿ ಆಗಮಾನುಸಾರಿಯಾದ್ದರಿಂದ ಅಪ್ರಯೋಜಕತ್ವ ಶಂಕಾ ಮಾಡಕೂಡದ. "ವಿಪಕ್ಷತ್ವ ಶಂಕಾಯಾಂ ಹೇತೂ ಚ್ಛಿತಿಃ | ನಿರ್ಮೂಲ ಶಂಕಾ ಪ್ರಸಂಗಃ | ನಿರವಕಾಶ ಆಗಮವಿರೋಧ ಪ್ರಸಂಗಃ|" ಎಂದು ಅನುಕೂಲ ತರ್ಕವಿದೆ. ಅನೃಜುತ್ವವು ಸಿದ್ಧವಾಗಿ ಹೋಗಿದೆ ಎಂದು ವಿರೋದೋದ್ಭಾವನೆ ಮಾಡಿದರೆ ಅನ್ನೊನ್ಯಾಶ್ರಯ ತಪ್ಪಿದ್ದಲ್ಲ; ಮತ್ತು ಪ್ರಮಿತವಾಕ್ಯಗಳಿಗೆ ಪ್ರಾಮಾಣ್ಯ ಪರತಸ್ತ್ವ ಅಂಗೀಕರಿಸಬೇಕಾಗುತ್ತೆ. ವಿರೋಧಿ ವಾಕ್ಯ ತೋರಿಸದೆ ಕೇವಲ ತರ್ಕವಿರೋಧ ಒಡ್ಡಿದರೆ ಜಿಂಕೆಮರಿಯಿಂದ ಸಿಂಹದ ಪರಾಭವವನ್ನು ಒಪ್ಪಬೇಕಾಗುತ್ತೆ. ಹೀಗೆ ಪೂರ್ವಪಕ್ಷವಾದಕ್ಕೆ ಅನಿಷ್ಟವಿದೆ.

ಆಗಮಾನುಸಾರಿ ಪ್ರತ್ಯಕ್ಷ ಪ್ರಮಾಣವು ಶ್ರೀ ವೇದವೇದ್ಯರದ್ದು ನಿಶ್ಚಿತ. ಶ್ರೀ ವ್ಯಾಸತೀರ್ಥರದ್ದು ಊಹ್ಯ. ರಘುನಾಥ ಪಂಡಿತರು ಮುಂತಾದ ತತ್ಕಾಲೀನ ಜ್ಞಾನಿಗಳದ್ದು ಸಂಭಾವಿತ. ಶ್ರೀ ವಾದಿರಾಜ ಗುರುಗಳಿಗೇ ಸ್ವಋಜುತ್ವ ಸ್ವರೂಪ ಪ್ರತ್ಯಕ್ಷವಿತ್ತೆಂಬಲ್ಲಿ [ಭಾಗ.ತಾ. 'ವೇವೋಽಸ್ಮೃತಿ ಚ ದೇವಾನಾಂ ತಚ್ಚ ಜ್ಞೇಯಂ ಸ್ವಲಕ್ಷಣೈಃ" X 5-21] ಆವರಿಂದಲೇ ಮಾಡಿಸಲ್ಪಟ್ಟ ದಿವ್ಯ ಪ್ರತಿಮೆ ಇದೆ. ಅವರಿಂದಲೇ ಮಾಡಿಸಲ್ಪಟ್ಟ ಮಧ್ವರಾಜರ ಪ್ರತಿಮೆ ಇದೆ. ಅವುಗಳಲ್ಲಿ ತಂತ್ರಸಾರೋಕ್ತ ಲಕ್ಷಣಗಳಿವೆಯೇ ಎಂದು ಪರೀಕ್ಷಿಸಲು ಆ ಪ್ರತಿಮೆಗಳನ್ನು ಬೃಹತ್ಕರಣಾದರ್ಶ (Magnifying glaSS) ಯಂತ್ರದಿಂದ ಉದ್ಭೂತರೂಪ ಯುಕ್ತಗಳನ್ನಾಗಿ ಮಾಡಿ ಪರೀಕ್ಷಿಸಿದರೆ, ಆಗಮೋಕ್ತ ಋಜುತ್ವ ವಿಷಯದಲ್ಲಿ ಸಂಭಾವನೆಯೇ ಹುಟ್ಟುತ್ತೆಂದು ನನಗೆ ತೋರುತ್ತೆ. ಈ ವಾದಕ್ಕೆ "ವಾದಿರಾಜ ಋಜುತ್ವ ವಿಚಾರ" ಗ್ರಂಥಕರ್ತರಾದ ಪೂರ್ವ ಪಕ್ಷಿಯವರು ಏನು ಉತ್ತರ ಹೇಳುತ್ತಾರೆ ತಿಳಿಸಲಿ. ಆಗಮಹೀನ ಪ್ರತ್ಯಕಾನುಮಾನಗಳನ್ನೂ ವಾದಕ್ಕೆ ತರದೇ, ಯೋಗ್ಯ ನಿಃಶಂಕ ವಚನಾದಿಗಳಿಂದ ಸ್ವಪಕ್ಷ ಸಾಧಿಸಿ ಪರಪಕ್ಷ ದೋಷ ತೋರಿಸಲಿ, ಇತಿ ಶಂ ||

## ಪ್ರತ್ಯಕ್ಷ ವಿಚಾರ :

### 4. ಪುಟ 4-8 ಉಕ್ತಿ:

"ಪುರಂದರ ದಾಸಾದಿಗಳ ಯೋಗಿತ್ವ ನಿಶ್ಚಯ ವಿಷಯದಲ್ಲಿ 'ಮಾನುಷಾ ನ ಪ್ರಭವಂತ್ಯೇವ, ಮನುಷ್ಯರು ಸಮರ್ಥರೇ ಅಲ್ಲ. ಅವರುಗಳ ಯೋಗಿತ್ವವು 'ನ ಕಶ್ಚಿದಾಗಮ ಸಿದ್ಧಂ' ಯಾವ ಆಗಮ ಸಿದ್ಧವೂ ಅಲ್ಲ."

### ಪ್ರತ್ಯುಕ್ತಿ:

ಸತ್ಯ. ಹೂಣರು, ಮ್ಲೇಂಛರು, ಪಾಷಂಡಿಗಳು, ಬಹುದೂರ ದೇಶದ ಅವೈದಿಕರು, ಹತ್ತಿರವಿದ್ದರೂ ಆದರಹೀನ ದೃಷ್ಟ್ಯಗಳಾಗಿರುವವರು, ತಮ್ಮ ಕೇವಲ ಲೌಕಿಕ ಪ್ರತ್ಯಕ್ಷದಿಂದ ದಾಸರಗಳ ಜ್ಞಾನ ಅಥವಾ ಯೋಗ ಪ್ರಭಾವವನ್ನು ತಿಳಿಯುವುದೇ ಇಲ್ಲ. ಆದರೂ ವೈದಿಕ ವೈಷ್ಣವರಾಗಿ ಅಪೌರುಷೇಯ ಆಗಮಾರ್ಥ ಅಭ್ಯಾಸಕ್ಕಾಗಿ ಸರ್ವವನ್ನೂ ತ್ಯಾಗಮಾಡಿ "ದಾಸರೆಂದರೆ ಪುರಂದರ ದಾಸರಯ್ಯಾ" ಎಂದು ನೋಡಿ ವಿಶ್ವಾಸಪೂರ್ವಕವಾಗಿ ಹೊಗಳಿರುವ ಶ್ರೀ ವ್ಯಾಸರಾಜ ಪ್ರಭೃತಿ ಪಂಡಿತರೂ, ಕನಕಾದಿ ದೇವಭಕ್ತರೂ, ಅವರನ್ನು ಸೇವಿಸಿ ಸುಖಪಟ್ಟಿರುವ ಅನೇಕ ಸಾತ್ವಿಕ ಸಜ್ಜನರೂ ಬಹುಕಾಲೀನ ಸಂವ್ಯವಹಾರದಿಂವಲೂ, ಪರೀಕ್ಷೆಯಿಂದಲೂ, ಪುರಂದರ ದಾಸಾದಿಗಳ ಜ್ಞಾನಿತ್ವ, ಯೋಗಿ ಪ್ರಭಾವಗಳನ್ನು ತಿಳಿದೇ ತಿಳಿಯುತ್ತಾರೆ. ತಮ್ಮ ಭಕ್ತರಿಗೆ ಉಪದೇಶವನ್ನು ಮಾಡುತ್ತಾರೆ. ಒಮ್ಮೊಮ್ಮೆ ದೇವರೇ ಅವರ ಮಹಿಮೆಯನ್ನು ಹೊರಗೆ ಹಾಕಿ ಬಿಡುತ್ತಾರೆ. ಅವರ ಶಿಷ್ಯಾದಿಗಳು ಪ್ರಕಟಿಸುತ್ತಾರೆ. ದೃಷ್ಟಾಂತ: ವಿಜಯದಾಸರ, ಭಾಗಣ್ಣದಾಸರ ಜ್ಞಾನಪ್ರಭಾವವು ಜಗನ್ನಾಥದಾಸರಿಂದ ಪ್ರಕಟಿತವಾಗಿ ಸರ್ವ ಮಾಧ್ವರಿಗೂ ವಿದಿತವಾಗಿಯೇ ಇದೆ. ಇಂಥ ಪ್ರಬಲ ಸಹಕಾರಿ ಸಾಮರ್ಥ್ಯದಿಂದಲೂ ಅವರ ಸಚ್ಚರಿತ್ರ ಮಹಿಮೆಗಳಿಂದಲೂ ಅವರ ಸ್ವರೂಪ ಮಹತ್ವವನ್ನು ಎಲ್ಲಾ ಮಾಧ್ವರ ತಿಳಿಯಬಲ್ಲರು.

ಹಾಗಿದ್ದರೆ "ಹೀಗೆ ಕಲ್ಪನಾಗೌರವ ಪ್ರಸಂಗದಿಂದ ಪೌರುಷೇಯ ವಾಕ್ಯದಿಂದ ಧರ್ಮಾದಿ ನಿಶ್ಚಯವು ಶಕ್ಯವಲ್ಲ" ಇತ್ಯಾದಿ ತತ್ವ ನಿರ್ಣಯ ಟೀಕಾ ವಾಕ್ಯಕ್ಕೆ ಅರ್ಥವೇನು? ಎಂದು ಪೂರ್ವಪಕ್ಷಿಗಳು ಕೇಳುತ್ತಾರೆ. ಉತ್ತರವೇನೆಂದರೆ

ಅಪೌರುಷೇಯ ವಾಕ್ಯವನ್ನು ಒಪ್ಪದಿದ್ದರೆ ಸರ್ವವಾದಿ ಸಂಪ್ರತಿಪತ್ತಿಯಾಗುವಂತೆ, ತತ್ರಾಪಿ ಆಗಮ ಪ್ರಮಾಣವನ್ನೇ ಒಪ್ಪದ, ಪ್ರಾಮಾಣ್ಯ ಸ್ವತಸ್ತ್ವವನ್ನೂ ಒಪ್ಪದ ಮಹಾ ಸಭೆಯಲ್ಲಿ ಸರ್ವರೂ ತಲೆತೂಗುವಂತೆ ಧರ್ಮಾಧರ್ಮ ವಿಷಯದಲ್ಲಿ ನಿರ್ಣಯವನ್ನು ವಸಿಷ್ಟ ವಾಮದೇವಾದಿಗಳೂ ಹೇಳಲಾರರು. ಅಷ್ಟೇ ಅಲ್ಲ. ಬಾದರಾಯಣರ ಜ್ಞಾನಿತ್ವ ವಿಷಯದಲ್ಲೇ ಸಂಪ್ರತಿಪತ್ತಿ ಉಂಟಾಗುವುದಿಲ್ಲ. ಯಾರೂ ನಿಶ್ಚಿತವಾಗಿ ಜ್ಞಾನಿಗಳೆಂದು ಅಂಗೀಕರಿಸಲ್ಪಡುವುದಿಲ್ಲ. ಒಬ್ಬರನ್ನು ಜ್ಞಾನಿಗಳು ಎಂದು ನಿರಾಗಮವಾಗಿ ತೋರಿಸಲು ಯತ್ನಿಸಿದರೆ ಕಲ್ಪನಾಗೌರವ ಬರುತ್ತೆ ಎಂದರ್ಥ. ಅವೈಷ್ಣವ ಸಭೆಯಲ್ಲಿ ಹಾಗಾದರೂ, ಆಗಮವನ್ನು ಪ್ರಮಾಣವಾಗಿ ಒಪ್ಪಿರುವ ವೈಷ್ಣವ ಜನಾಂಗದಲ್ಲಿ ಆ ನಿಯಮವಿಲ್ಲ. ಭೀಷ್ಮ ವಿಧುರರನ್ನು ಜ್ಞಾನಿಗಳೆಂದು ಯುಧಿಷ್ಠಿರಾದಿ ವೈದಿಕರು ತಿಳಿಯಲು ಸಮರ್ಥರಾಗಲಿಲ್ಲವೆಂದೇ ಅರ್ಥಮಾಡಕೂಡದು. ಅವರು ಸಮರ್ಥರೇ ಆಗುತ್ತಾರೆ. ತಥಾಚ ಲೌಕಿಕಾಗಮ, ಆಗಮಾನುಸಾರಿ ಪ್ರತ್ಯಕ್ಷಾನುಮಾನಗಳು, ಹಿರಿಯರ ಉಪದೇಶ, ಸ್ವಪ್ನ ಸೂತ್ರಾದಿ ಸಹಕಾರಿ ಸಾಮರ್ಥ್ಯದಿಂದ ಹೇಗೆ ಭೀಷ್ಮಾದಿಗಳಿಂದ ಶ್ರೀಕೃಷ್ಣನು ಜ್ಞಾತನಾದವನೋ, ಹೇಗೆ ಯುಧಿಷ್ಠಿರಾದಿಗಳಿಂದ ಭೀಷ್ಮಾದಿಗಳು ಜ್ಞಾತರಾದರೋ, ಹೇಗೆ ಪ್ರಹ್ಲಾದನಿಂದ ನರಸಿಂಹನು ಜ್ಞಾತನಾದನೋ, ಹಾಗೆ ಮಾಧ್ವರಿಂದ ಪುರಂದರ ದಾಸಾದಿಗಳು ಜ್ಞಾನಿಗಳೆಂದು ನಿಶ್ಚಯಿಸಲ್ಪಡುತ್ತಾರೆ. ಹಾಗೆ ಲೋಕಾನುಭವ ಸಿದ್ಧವಾಗಿರುವುದರಿಂದ ಇದರ ಅಪಲಾಪವು ಯುಕ್ತವಲ್ಲ. ತ.ನಿ. ಟೀಕೆಯಲ್ಲಿ ಧರ್ಮಾದಿ ವಿಷಯದಲ್ಲಿ ಸ್ವತಸ್ತ್ವ ಪರತಸ್ತ್ವ ವಾದಿಗಳೆಲ್ಲರ ಸಮಕ್ಷಮದಲ್ಲಿ ಆಗಮವನ್ನೇ ಒಪ್ಪದೆ, ಆಸ್ತಿಕ ನಾಸ್ತಿಕಾದ್ಯುಭಯವರ್ಗಕ್ಕೆ ಸಂಪ್ರತಿಪನ್ನ ಪ್ರಮಾಣದಂತಿರುವ ಜ್ಞಾನಿಗಳನ್ನು ನಿಶ್ಚಯಿಸುವ ಅವಸರದಲ್ಲಿ ಕಲ್ಪನಾಗೌರವಾದಿ ದೋಷವು ಹೇಳಲ್ಪಟ್ಟಿತು. ಇಲ್ಲಿ ಸ್ವವ್ಯೂಹದಲ್ಲಿ ಕೇವಲ ಸ್ವತತ್ತ್ವವಾದಿಗಳ ಸಮಕ್ಷಮದಲ್ಲಿ, ವೈದಿಕ ವಿವೇಕಿಗಳಿಂದ ದೀರ್ಘಪರೀಕ್ಷಿತರಾದ ಸಾಧುಗಳ ವಿಷಯದಲ್ಲಿ ಅಲ್ಲಿ ಹೇಳಲ್ಪಟ್ಟಿರುವ ಕಲ್ಪನಾ ಗೌರವಾದಿಗಳನ್ನು ತೋರಿಸಿ ಅವರ ಜ್ಞಾನಿತ್ವ ನಿರ್ಧಾರಣೆಯೇ ಅಶಕ್ಯವೆಂದು ಆಪಾದಿಸುವುದು ಲೋಕಾನುಭವ ವಿರುದ್ಧವೇ. ಮಾಧ್ವ ಸಮಾಜದಲ್ಲಿ ಶ್ರೀ ಜಯತೀರ್ಥರು ಜ್ಞಾನಿಗಳು, ಶ್ರೀ ರಾಘವೇಂದ್ರಸ್ವಾಮಿಗಳೂ ಜ್ಞಾನಿಗಳು; ಹಾಗೆ ಶ್ರೀ ರಘೋತ್ತಮತೀರ್ಥರೂ ಜ್ಞಾನಿಗಳು; ಕನಕದಾಸ, ವಿಜಯದಾಸ, ಜಗನ್ನಾಥದಾಸ ಪ್ರಭೃತಿಗಳೂ ಜ್ಞಾನಿಗಳು ಎಂದು ಎಲ್ಲಾ ವೈಷ್ಣವರಿಗೂ ಸುದೃಢ ನಿಶ್ಚಯವಿದೆ. ಈ ನಿಶ್ಚಯವೂ ಬಾಧಿತವಲ್ಲ. ಹಾಗೆ ತ.ನಿ.ಟೀಕಾ ವಾಕ್ಯವೂ ಪ್ರಮಾಣವೇ. ವಿದ್ವಾಂಸನು ಲೋಕಾನುಭವವನ್ನು ಅಪಲಾಪಮಾಡದೇ, ಎರಡಕ್ಕೂ ಪ್ರಾಮಾಣ್ಯವನ್ನು ಘಟನೆಯಾಗುವಂತೆ ಉಪಪಾದಿಸಬೇಕು. ಶ್ರೀ ರಾಘವೇಂದ್ರಸ್ವಾಮಿಗಳೂ, ದಾಸಭಕ್ತರೂ ಜ್ಞಾನಿಗಳೇ ಅಲ್ಲ ಎಂದು ಹೇಳಿ ಬಿಡಬಾರದು. ಅವರ ಜ್ಞಾನಿತ್ವವು ಸರ್ವ ಮಾಧ್ವ ಸಂಪ್ರತಿಪನ್ನ ವಿಷಯವಾಗಿದೆ. ಪ್ರತ್ಯಕ್ಷಾದ್ಯನುಭವಸಿದ್ಧವಾದ ಅವರ ಜ್ಞಾನಿತ್ವ ವಿಷಯದಲ್ಲಿ ಕಲ್ಪನಾಗೌರವ ದೋಷವು ಬರುವುದಿಲ್ಲ. ಬಂದರೂ ದೋಷವಾಗುವುದಿಲ್ಲ. ಆದ್ದರಿಂದ "ಮನುಷ್ಯರು ಪುರಂದರದಾಸಾದಿಗಳ ಜ್ಞಾನಿತ್ವ ನಿರ್ಣಯವನ್ನು ಮಾಡಲಾರರು" ಎಂದು ಹೇಳಿರುವುದು ಸರಿಯಲ್ಲ. ಕ್ವಚಿತ್ ಸಮರ್ಥರೇ ಆಗುತ್ತಾರೆ. ಹಿಂದೆ ಆರನೇ ಅಧ್ಯಾಯದಲ್ಲಿ ತೋರಿಸಿರುವಂತೆ ವಿದ್ಯಾಧಿಕರಣಾನುವ್ಯಾಖ್ಯಾನ ಸುಧೆಗಳಲ್ಲಿ ಉಕ್ತವಾದ ಜ್ಞಾನಿ

ಮಾಹಾತ್ಮ್ಯವನ್ನು ಅನುಸಂಧಾನ ಮಾಡಿದರೆ ಸ್ವಕೀಯ ಮಾಧ್ವ ಜನರಿಂದ ಜ್ಞಾನಿಗಳು ಆಗಿಂದಾಗ್ಗೆ ತಿಳಿಯಲ್ಪಡುತ್ತಾರೆಂದು ಗೊತ್ತಾಗುತ್ತೆ.

5. ಪುಟ 5-1. ಉಕ್ತಿ:

"ಕಿಂಚ ಯೋಗಿಸಾಮಾನ್ಯವು ಸ್ವೇತರ ನಿಖಿಲರ ಅಥವಾ ಸ್ತೋತ್ತಮರ ಸ್ವರೂಪ ವಿಷಯಾದಿಗಳಲ್ಲಿ ಪ್ರವರ್ತಿಸುತ್ತೆಂಬುದೂ ಪ್ರಮಾಣ ವಿರುದ್ಧವೇ.[ತಮ್ಮ ಗ್ರಂಥದ 20 ನೇ ಪುಟದಲ್ಲಿ ಇದೇ ಗ್ರಂಥಕಾರರು "ಗುರುರಾಜ ಋಜುತ್ವವನ್ನು ತಿಳಿದ ವ್ಯಾಸರಾಜಾದಿಗಳು ವಾದಿರಾಜರನ್ನು ಋಜುಗಳೆಂದು ಏತಕ್ಕೆ ಉಪಾಸನೆಮಾಡಲಿಲ್ಲ?" ಎಂದು ಮುಂತಾಗಿ ಬರೆದಿದ್ದಾರೆ. ಯೋಗಿಗಳಿಗೆ ಸ್ವಾನ್ಯಸ್ವರೂಪ ತಿಳಿಯುತ್ತೆ. ತಿಳಿಯಬೇಕೆಂದು ಪ್ರವೃತ್ತಿ ಇರುತ್ತೆ ಎಂದು ಅದರ ಅರ್ಥ. ತಥಾಚ ವ್ಯಾಹತ ಭಾಷಣೆಗೆ ದೃಷ್ಟಾಂತವಾಗಿದೆ.]

ಅದು ಟೀಕಾಚಾರ್ಯರಿಂದ ಹೇಳಲ್ಪಟ್ಟಿದೆ - "ಈಶ್ವರಾದನ್ಯತ್ರಾಲೋಚನೇಭ್ಯ ಸರ್ವವಿಷಯಂ ತಜ್ಞಾನಂ ॥ ಬಾಹ್ಯಂ ಕದಾಚಿದಯಥಾರ್ಥಮಪಿ" ಎಂದು. (ಅರ್ಥ: ಈಶ್ವರನ ದೆಸೆಯಿಂದ ಭಿನ್ನ ವಿಷಯಗಳಲ್ಲಿ ಆಲೋಚಿಸಿದರೂ ಅವರ ಜ್ಞಾನವು ಅಸರ್ವ ವಿಷಯಕವು. ಅವರ ಬಾಹ್ಯ ಜ್ಞಾನವು ಒಮ್ಮೊಮ್ಮೆ ಆಯತಾರ್ಥವೂ ಆಗುತ್ತೆ.)

ಪ್ರತ್ಯುಕ್ತಿ: ಇವರ ಪ್ರತಿಜ್ಞೆಯು ನಿರರ್ಥಕವೇ ಮತ್ತು ಅಸಂಗತವೂ ಆಗಿದೆ. ಏಕೆಂದರೆ ಆ ಪ್ರತಿಜ್ಞೆಗೂ ಅವರು ಉದಾಹರಿಸಿರುವ ಪ್ರಮಾಣವಾಕ್ಯಕ್ಕೂ ಏನೂ ಸಂಬಂಧವಿಲ್ಲ. ಸರ್ವ ಯೋಗಿಗಳೂ ಸರ್ವ ವಿಷಯಗಳನ್ನು ಸರ್ವದಾ ತಿಳಿಯುತ್ತಾರೆ, ಅಥವಾ ತಿಳಿಯಬೇಕೆಂದು ಪ್ರರ್ವತ್ರಿಸುತ್ತಾರೆಂದು ಯಾರೂ ಹೇಳಿಲ್ಲ. ಋಜುತ್ವವಾದಿಗಳ ಹೇಳಿಕೆ ಏನೆಂದರೆ, ವಿಜಯದಾಸಾದಿ ಭರತಖಂಡಸ್ಥ ಕೆಲವು ಜ್ಞಾನಿಗಳು ತಮ್ಮ ಕಾಲದಲ್ಲಿ ಪ್ರಸಕ್ತಿ ಬಂದಿದ್ದಾಗ ಶ್ರೀವಾದಿರಾಜ ಸ್ವರೂಪವನ್ನು ವಿಚಾರಿಸಿ ತಿಳಿದರು; ಕೀರ್ತನೆಯನ್ನು ಮಾಡಿದರು. ಇದರಲ್ಲಿ ದೃಷ್ಟಾಂತ: ಪ್ರಹ್ಲಾದನು ನರನಾರಾಯಣ ಸ್ವರೂಪವನ್ನು ಹಾಗೆ ತಿಳಿದನು. ಇಷ್ಟು ಹೇಳಿಕೆಯು ಅಬಾಧಿತವೇ ಆಗಿದೆ. ಆದ್ದರಿಂದ ಟೀಕಾಚಾರ್ಯರ ವಾಕ್ಯೋದಾಹರಣವು ಇವರಿಗೆ ಸಾಧಕವಲ್ಲ. ಪರರಿಗೆ ಬಾಧಕವಲ್ಲ. ಆ ವಾಕ್ಯದಲ್ಲಿ ವಿಜಯದಾಸಾದಿಗಳು ಸ್ವೋತ್ತಮ ವಾದಿರಾಜ ಋಜುತ್ವ ತಿಳಿಯಲು ಅಶಕ್ತರು ಎಂದು ಪ್ರತಿಪಾದಿಸಿಲ್ಲ. ಒಂದು ಪಾಪಿ ಪಿಶಾಚಿಯೂ ಕೂಡ ಶ್ರೀಮಧ್ವರಾಜರ ಸ್ವರೂಪವನ್ನು ತಿಳಿದುಕೊಂಡಿತ್ತು ಎಂದು II 34 ಸುಮಧ್ವವಿಜಯದಲ್ಲಿ ಹೇಳಲ್ಪಟ್ಟಿದೆ. ವಿಜಯದಾಸಾದಿಗಳು ಅದಕ್ಕಿಂತಲೂ ಅಶಕ್ತರಲ್ಲ.[ಅಪರೋಕ್ಷ ಜ್ಞಾನಿಗಳಿಗೆ ಸ್ವಸ್ವಬಿಂಬದರ್ಶನ ಶಕ್ತಿ ಇದೆ. "ನಾನ್ಯ ಬಿಂಬಸ್ಯ ದರ್ಶನಂ" ಎಂದೂ ಪ್ರಮಾಣವಿದೆ. ಆದರೆ "ನಾನ್ಯಸ್ವರೂಪಸ್ಯ ದರ್ಶನಂ" ಎಂದು ಪ್ರಮಾಣವಿಲ್ಲ. "ಋಜೂನಾಂ ಸರ್ವಬಿಂಬಾನಾಂ ಹ್ಯಾಪರೋಕ್ಷೋಸ್ತಿ ಸರ್ವದಾ" ಇತಿ ತತ್ವಸಾರೇ ಎಂದಿದೆ. ಋಜುಗಳ ಸಾಮರ್ಥ್ಯ ಅಂಥದು. ಇತರರಿಗೆ ಧ್ಯಾನಮಾಡಿದಾಗ ಸ್ವೋಮರ ಸ್ವರೂಪ ದರ್ಶನವು ಆಗುತ್ತೆ ಎಂದು ಒಪ್ಪಿದರೆ ಬಾಧಕವಿಲ್ಲ. ಒಪ್ಪದಿದ್ದರೂ ಧ್ಯಾನದಿಂದ ಉತ್ತಮರ ಸ್ವರೂಪಲಕ್ಷಣ, ಲಿಂಗಶರೀರ ಪ್ರಕಾರಾದಿಗಳನ್ನು ನೋಡಿ, ಧೂಮ ನೋಡಿ ವಹ್ನಿ ತಿಳಿದಂತೆ ಸ್ವೋತ್ತಮರ ಸ್ವರೂಪವನ್ನೂ ಅವರ ಬಿಂಬಸ್ವರೂಪವನ್ನೂ ನಿಶ್ಚಯಿಸುತ್ತಾರೆಂದು ತಿಳಿಯಲೇಬಹುದು. ಬಾಧಕವಿಲ್ಲ. ] ಕಿಂಚ III 3-29 ಅನುವ್ಯಾಖ್ಯಾನ ಶ್ಲೋಕ ಹೇಳಿ; ಜ್ಞಾನಿ

ಮಾಹಾತ್ಮ್ಯವನ್ನು ನಾವು ಆರನೇ ಅಧ್ಯಾಯದಲ್ಲಿ ವರ್ಣಿಸಿದ್ದೇವೆ. ಆದ್ದರಿಂದ ವಿವಕ್ಷಿತ ವಿಷಯವು ಪ್ರಮಾಣ ವಿರುದ್ಧವಲ್ಲ. II 1-17 ಬ್ರ.ಸೂ. ಭಾಷ್ಯದಲ್ಲೂ "ದೃಶ್ಯಂತೇ ಮುನಿಭಿಶ್ಚತಾಃ" (ಪೃಥಿವ್ಯಾದ್ಯಭಿಮಾನಿ ದೇವತಾಸ್ವರೂಪವನ್ನು ಧ್ಯಾತೃ ಮುನಿಗಳು ತಿಳಿಯುತ್ತಾರೆ) ಎಂದಿದೆ.

6. ಪುಟ 5-5 ಉಕ್ತಿ:

"ದೃಷ್ಟಂ ಚಾಶ್ವತ್ಥಾಮ ಯುಧಿಷ್ಠಿರಾದಿ ಯೋಗಿನಾಂತಾದೃಶಾಜ್ಞಾನಾದಿ ಭಾರತಾದೌ" ಇತಿ II (ಅಶ್ವತ್ಥಾಮ ಯುಧಿಷ್ಠಿರಾದಿ ಯೋಗಿಗಳಿಗೂ ಅಂಥ ಅಜ್ಞಾನಾದಿ ಪ್ರಾಪ್ತವಾದದ್ದು ಭಾರತಾದಿಗಳಲ್ಲಿ ಹೇಳಲ್ಪಟ್ಟಿದೆ.)

ಪ್ರತ್ಯುಪಕ್ತಿ:

a) ಅಶ್ವತ್ಥಾಮಾದಿ ಯೋಗಿಗಳಿಗೂ ದೈತ್ಯಾವೇಶಬಂದಿದೆ ಎಂದು ಪ್ರಮಿತವಾಗಿರುವುದರಿಂದ, ವಿಜಯದಾಸಾದಿಗಳು ವಾದಿರಾಜರನ್ನು ಋಜುಗಳೆಂದು ಹೊಗಳಿದಾಗ ಅವರಿಗೆ ದೈತ್ಯಾವೇಶವಿತ್ತೆಂದು ಏತಕ್ಕೆ ಹೇಳಬಾರದು ಎಂದು ಪೂರ್ವಪಕ್ಷದವರ ಭಾವ. ಹಾಗಿದ್ದರೆ ಈ ರೀತಿಯ ವಿಚಾರಪ್ರಣಾಡಿಯನ್ನು ಸಾತ್ವಿಕವೆಂದು ಅಂಗೀಕರಿಸುವುದಾದರೆ, ಟೀಕಾಚಾರ್ಯರು ಆಚಾರ್ಯರ ಹದಿನೇಳು ಗ್ರಂಥಗಳಿಗೆ ಟೀಕೆ ಬರೆಯುವಾಗ, ರಾಘವೇಂದ್ರ ಸ್ವಾಮಿಗಳು ನಲವತ್ತೆಂಟು ವರ್ಷಗಳ ಪಟ್ಟ ಕಾಲದಲ್ಲಿ ಪಾಠ ಹೇಳುವಾಗ, ರಘೋತ್ತಮ ತೀರ್ಥರು ಪಾಠ ಪ್ರವಚನ ಮಾಡಿದಾಗ, ಬರೀ ಸುಳ್ಳನ್ನೇ ಹೇಳುತ್ತಿದ್ದರೆಂದು ಏತಕ್ಕೆ ಕಲ್ಪಿಸಬಾರದು? ಸಕಲ ಮಾಧ್ವ ಸಂಸ್ಕೃತಿಯು ದೈತ್ಯಾವೇಶಾಜ್ಞಾನಾದಿ ಮೂಲವೆಂದು ಪ್ರಾಪ್ತವಾಗುತ್ತೆ. ಮನು, ವಸಿಷ್ಠ, ಪರಾಶರಾದಿ ಸರ್ವಸ್ಮೃತಿ ಕರ್ತರೂ, ತರ್ಕತಾಂಡವಾದಿ ಗ್ರಂಥಕರ್ತರೂ ವಿರುದ್ಧಜ್ಞಾನ ದೆಶೆಯಲ್ಲಿ ಆ ಗ್ರಂಥಗಳನ್ನು ಬರೆದರೆಂದು ಏತಕ್ಕೆ ಆಪಾದಿಸಬಾರದು? ಪ್ರಮಾಣವಿರೋಧವಿಲ್ಲದಿರುವಾಗ ಹಾಗೆ ಕಲ್ಪಿಸಬಾರದು ಎನ್ನುವುದಾದರೆ ವಿಜಯದಾಸಾದಿಗಳ ವಿಷಯದಲ್ಲ ಹಾಗೆ ಕಲ್ಪಿಸಬಾರದು.

b) ಕಿಂಚ ಪುಟ 12-20ರಲ್ಲಿ ಪೂರ್ವಪಕ್ಷ ಗ್ರಂಥದಲ್ಲಿ ವ್ಯಾಸರಾಜಾದಿಗಳಿಗೆ ಯೋಗಿತ್ವವನ್ನು ಒಪ್ಪಿಕೊಂಡು ಅವರಿಗೆ ವಾದಿರಾಜ ಋಜುತ್ವಾಭಾವ ಪ್ರತ್ಯಕ್ಷವಿತ್ತೆಂದು ಹೇಳಿದ್ದಾರೆ; ವ್ಯಾಸರಾಜಾದಿಗಳಿಗೂ ಅಶ್ವತ್ಥಾಮರ ಪಾಡು ಏತಕ್ಕೆ ಬಂದಿರಬಾರದೆಂದು ಶಂಕೆ ಬರುವುದರಿಂದ ಪೂರ್ವಪಕ್ಷದವರ ಋಜುತ್ವ ಖಂಡನೆಯು ವ್ಯಾಹತೋಕ್ತಿಯಲ್ಲಿ ಪರ್ಯವಸಾನವಾಗುವುದಿಲ್ಲವೇ? ಪ್ರಕೃತ "ವಿಜಯದಾಸಾದಿಗಳು ವಾದಿರಾಜ ಋಜುತ್ವ ಜ್ಞಾನಿಗಳು" ಎಂದು ಹೇಳಿದ ಮಾತ್ರಕ್ಕೆ, ಅಶ್ವತ್ಥಾಮ ಯುಧಿಷ್ಠಿರಾದಿಗಳ ದೃಷ್ಟಾಂತದಿಂದ ವಿಜಯದಾಸಾದಿಗಳಿಗೆ ದೈತ್ಯಾವೇಶಾಜ್ಞಾನಗಳನ್ನು ಆರೋಪಿಸುವುದು ಪ್ರಾಮಾಣ್ಯ ಸ್ವತಸ್ತ್ವ ರೀತಿಯಲ್ಲ. ಆ ವಿಚಾರ ಸರಣಿಯಿಂದ ಸರ್ವತ್ರ ಶಂಕೆಯುಂಟಾಗಿ ಪ್ರಾಮಾಣ್ಯಗ್ರಹವು ಅನವಶ್ಚಿತವಾಗಿ ಲೋಕವ್ಯವಹಾರೋಚ್ಛೇದವೇ ಪ್ರಸಕ್ತವಾಗುತ್ತೆ. ಸ್ವತಃ ಪ್ರಾಮಾಣ್ಯ ವಾದಿಗಳು ದಾಸಭಕ್ತರ ವಚನವನ್ನು ಪ್ರಮಾಣವೆಂದೇ ಒಪ್ಪಬೇಕು, "ಆವೇಶಾಭಾವಃ ಸಾಧ್ಯತಾಂ, ದೋಷಾಭಾವಃ ಸಾಧ್ಯತಾಂ" ಎಂದು ಪ್ರಶ್ನಿಸಬಾರದು. ವಿರೋಧಿ ಪ್ರಮಾಣ ಸಿಕ್ಕಿದರೆ ತನ್ಮೂಲವಾದ ಶಂಕೆಯನ್ನು ಮಾಡಬಹುದು. ಪ್ರಕೃತ ವಿಜಯಾರ್ಯರ ವಚನವನ್ನು ಮನ್ನಿಸದೆ, ವಿರೋಧಿ ಪ್ರಮಾಣವಿಲ್ಲದಿದ್ದರೂ

ಪ್ರಶ್ನಿಸಿರುವುದು ಪ್ರಾಮಾಣ್ಯ ಪರತಸ್ತ್ವ ವಾದಿಗಳಿಗೆ ಉಚಿತವಾದ ಕಾರ್ಯ. ಆಚಾರ್ಯರೇ ಹೇಳಿದ್ದಾರೆ. ಗೀ.ಭಾ॥ "ಸ್ವತಃ ಪ್ರಾಮಾಣ್ಯಾನಂಗೀಕಾರೇ ಮಾನೋಕ್ತಾವಪ್ಯದೋಷತ್ವಂಚಸಾಧಯೇದಿತ್ಯತಿಪ್ರಸಂಗಃ॥" ಆದ್ದರಿಂದ ಬಾಧಕ ಪ್ರಮಾಣ ಕೊಡದೆ ವಿಜಯದಾಸಾದಿಗಳ ವಾಕ್ಯ ವಿಷಯದಲ್ಲಿ ನಿರ್ಮೂಲ ಖಂಡನ ಕಾರ್ಯಕ್ಕೆ ತೊಡಗಬಾರದು. ಯುಧಿಷ್ಠಿರಾಶ್ವತ್ಥಾಮರಿಗೆ ಅವರು ನಿಂದ್ಯಕಾರ್ಯಮಾಡಿದ ಕಾಲದಲ್ಲಿ ಆವೇಶದಿಂದ ಅಜ್ಞಾನವಿತ್ತು ಎಂದು ಪ್ರಮಾಣವಿದೆ. ವಿಜಯದಾಸಾದಿಗಳ ವಿಷಯದಲ್ಲಿ ಅಂಥ ಪ್ರಮಾಣವಿಲ್ಲ. ಪ್ರತ್ಯುತ ದಾಸಾರ್ಯರು ಹೇಳಿದ ವಿಷಯದಲ್ಲಿ ಸಂವಾದವೂ ಇದೆ. ಆಖ್ಯಾನದಲ್ಲೂ, ಐತಿಹ್ಯದಲ್ಲೂ, ಬ್ರಹ್ಮಾಂಡಾದಿ ಪುರಾಣಗಳಲ್ಲೂ ವಾದಿರಾಜರು ಋಜುಗಣಸ್ಥರೆಂದಿದೆ. ಗೀ.ಭಾ ॥ "ಗ್ರಂಥಾಂತರಗತತ್ವಾಚ್ಚ ನಾವಿದ್ಯಮಾನಸ್ತುತಿ" (ಬೇರೆ ಗ್ರಂಥದಲ್ಲಿ ಸಂವಾದವಿರುವುದರಿಂದಲೂ ಪ್ರಮಾಣ ವಾಕ್ಯದಲ್ಲಿ ಹೇಳಲ್ಪಟ್ಟದ್ದು ಸುಳ್ಳೆಂದು ಶಂಕಿಸಬಾರದು).

ಕಿಂಚ ನಿಜ ಪುರಂದರದಾಸಾದಿಗಳು ವಾದಿರಾಜ ಋಜುತ್ವವನ್ನು ನಿರೂಪಿಸಿದ್ದಾರೆ ಎಂದು ನಮ್ಮಿಂದ ಹೇಳಲ್ಪಟ್ಟಿದೆ. ಅವರ ಹೇಳಿಕೆಯು ಯೋಗಿ ಪ್ರತ್ಯಕ್ಷದ ಕಾರ್ಯವೋ ಬೇರೆ ವಿಧವಾಗಿ ಪ್ರಾಪ್ತವಾದ ಜ್ಞಾನದ ಕಾರ್ಯವೋ ಎಂಬುದು ಹೇಳಲ್ಪಟ್ಟಿಲ್ಲ. ಜ್ಞಾನಕಾರಣಗಳು ಅನೇಕ. ಅವರ ಪ್ರತಿಭೆ, ಗುರೂಪದೇಶ, ಸ್ವಾಪ್ನ ದೇವತಾದಿ ವಚನ, ಪೂಜಾಧ್ಯಾನಾದಿ ಕಾಲಗಳಲ್ಲಿ ಶ್ರೀಹರಿಯಿಂದಲೇ ದೇವಕಾರ್ಯ ಸಿದ್ಧಿಗಾಗಿ ಅವರಿಗೆ ಅನುಗ್ರಹಿಸಲ್ಪಟ್ಟ ಉಪದೇಶ, ಅಶರೀರ ವಚನ, ಪುರಾಣಪಠನಾದಿ ಅನೇಕಗಳಿವೆ. ಆದ್ದರಿಂದ ಅಶ್ವತ್ಥಾಮರ ದೃಷ್ಟಾಂತ ಕೊಟ್ಟು ಎಲ್ಲರೂ ಸುಳ್ಳು ಹೇಳಿರಬಹುದೆಂಬ ಕಲ್ಪನೆಯು ಅಸಂಗತವೇ.

7. ಪುಟ 5-6 ಉಕ್ತಿ:

"ಕಿಂಚ ಋಜುತ್ವವು ಪುರಂದರದಾಸಾದಿ ಪ್ರತ್ಯಕ್ಷ ಸಿದ್ಧವೆಂದು ಏತರಿಂದ ತಿಳಿಯಲ್ಪಡುತ್ತೆ? ಅವರುಗಳ ಕರ್ಣಾಟಕ ಪದ್ಯಗಳಿಂದ ಎಂದು ಹೇಳಲಾಗುವುದಿಲ್ಲ. ಅವು ಕೃತಕವಾಗಿರಬಹುದು. ಅಧಿಕೃತ ಕೋಶಗಳಲ್ಲಿ ಕಾಣದಿರುವುದೇ ಈ ವಿಷಯದಲ್ಲಿ ಲಿಂಗವು." ಪ್ರತ್ಯುಕ್ತಿ: ಇಲ್ಲಿ "ಪುರಂದರದಾಸ ಪುತ್ರಾದಿ ಜ್ಞಾತತ್ವವೇ" ಲಿಂಗವಾಗಿ ವಿವಕ್ಷಿತವು. ಅದೇ ಋಜುತ್ವವಾದ್ಯಂಗೀಕೃತವು. ಪದಗಳು ಕೃತಕವಾಗಿರಬಹುದೆಂಬ ಶಂಕೆಯು ನಿರ್ಮೂಲ ಶಂಕೆಯು. ಉತ್ತರ ವಾಕ್ಯದಲ್ಲಿಯೇ ಕಾರಣ ಹೇಳಿರುವುದರಿಂದ ನಿರ್ಮೂಲವಲ್ಲವೆನ್ನಬಾರದು. ಅದು ಅಸಿದ್ಧವು. ಆ ಹೇತುವು ಅಪ್ರಯೋಜಕವೂ ಆಗಿದೆ. ನಮ್ಮ ಮಿತ್ರ ಗುರುಗಳು, ಶ್ರೀಕುಂದಾಪುರ ವ್ಯಾಸರಾಜ ಮಠಾಧೀಶರು ಶ್ರೀ ಲಕ್ಷ್ಮೀಶತೀರ್ಥ ಶ್ರೀಪಾದಂಗಳವರು. ಅವರ ಮನಸ್ಸಿನಲ್ಲಿ ಈ ಪದ್ಯವು ಅವರ ಪೂರ್ವಾಶ್ರಮದಲ್ಲಿ 1925 ನೇ ವರ್ಷದ ಕಾಲದಿಂದಲೂ ವಿರಾಜಿಸುತ್ತಿದೆ. ಅವರೂ ಅವರ ಸದೃಶರಾದ ಬಹು ಜನ ಪ್ರಾಚೀನರೂ ಅಧಿಕೃತ ಕೋಶರೇ. ಸಂಪ್ರತಿಪನ್ನ ಗ್ರಂಥರೂಪದ ಅಧಿಕೃತ ಕೋಶಗಳು ನಮ್ಮ ದೇಶದಲ್ಲಿ ಈಗ ಇಲ್ಲವೇ ಇಲ್ಲ. ಯಾವ ವಿಧವಾದ ಕೋಶವೂ ಇಲ್ಲದಿದ್ದರೆ ಈ ಹಾಡುಗಳು "ವಾದಿರಾಜ ಗುರುವರ ಕೀರ್ತನಮಂಜರಿ"ಯಲ್ಲಿ ಹೇಗೆ ಸಂಗ್ರಹೀತವಾಗಿ ಮುದ್ರಿತವಾಗಿವೆ? ಪಾವಂಜೆ ಗುರುರಾಯರಿಂದ ಮುದ್ರಣ ಮಾಡಿಸಲ್ಪಟ್ಟ ಪುಸ್ತಕಗಳಲ್ಲಿ ಕೆಲವು ಕೀರ್ತನಗಳು ಇವೆ. ತಥಾ ಚ ಕೋಶಗಳಲ್ಲಿ ಕಾಣುವುದಿಲ್ಲವೆಂಬುದು ಸುಳ್ಳು.

ಪದ್ಯಗಳಲ್ಲಿ ಋಜುತ್ವ ಪ್ರಮಾಣಗಳು ಇಲ್ಲವೇ ಇಲ್ಲ ಎಂಬ ಮಾತು ಪರತಸ್ತ್ವವಾದ. ಮಧ್ವಮತದಲ್ಲಿ ವಾಕ್ಯಪ್ರಾಮಾಣ್ಯವು "ಸ್ವತಃ" ಸ್ವಾಭಾವಿಕವೇ. ಬೃಹದ್ಭಾಷ್ಯ; ಗೀತಾ (IV 34); ಅನುವ್ಯಾಖ್ಯಾನ (III 3-29) ವಾಕ್ಯನೋಡಿದರೆ ಜ್ಞಾನಿಗಳು ಮಾಡಿರುವ ಕೀರ್ತನೆಗಳಲ್ಲಿ ಅಪನಂಬಿಕೆ ಹೊಂದುವುದು ಅಯುಕ್ತವೆಂದ ಸಿದ್ಧವಾಗುತ್ತೆ. ಕಿಂಚ ವಿಜಯದಾಸರ ಪದ್ಯದಲ್ಲಿ "ಬೊಮ್ಮಾಂಡ ಪುರಾಣದಿ ಪೇಳಿದ" ಎಂದು ಮೂಲ ಪ್ರಮಾಣವೂ ಹೇಳಲ್ಪಟ್ಟಿರುವುದರಿಂದ ಪದ್ಯಗಳಲ್ಲಿ ಪ್ರಮಾಣ ಕೊಟ್ಟಿಲ್ಲ ಎಂಬ ಆಪಾದನೆಯೂ ಭಾಗಶಃ ಅಸತ್ಯವೇ. [ಅಮುದ್ರಿತವಾದ ಜಂಖಂಡಿ ವಾದಿರಾದಾಚಾರ್ಯ ಕೃತವಾದ "ಋಜುತ್ವ ವಿರೋಧಿ ಕಪೋಲ ಚಪೇಟಿಕಾ" ಎಂಬ ಗ್ರಂಥದಲ್ಲಿ "ಮಾಮಕೈರುದಾಹೃತೇ ಚ ಬ್ರಹ್ಮಾಂಡ, ವಾಮನ ಬ್ರಹ್ಮವೈವರ್ತಮಾನಸಂಘೇ" (ನನ್ನವರಿಂದ ಉದಾಹೃತವಾದ ಬ್ರಹ್ಮಾಂಡ, ವಾಮನ ಬ್ರಹ್ಮವೈವರ್ತಗಳ ಪ್ರಮಾಣ ಸಮುದಾಯವಿರಲಾಗಿ) ಎಂದೂ ಚಿರಂತನ ಬ್ರಹ್ಮಾಂಡ ಪುರಾಣದ ಅಬ್ಬಜಾರಣ್ಯ ಮಾಹಾತ್ಮ್ಯದಲ್ಲಿ, ಮಧ್ಯ ಭಾಗದಲ್ಲಿ, ದ್ವಿತೀಯಾಧ್ಯಾಯದಲ್ಲಿ ... ಶ್ರೀಮದ್ವಿಷ್ಣು ತೀರ್ಥರ ವಂಶದಲ್ಲಿ ಸುರೇಶ್ವರರಾದ ವಾದಿರಾಜಯತೀಶ್ವರರ ಜನಿಯು ಹೇಳಲ್ಪಟ್ಟಿದೆ" ಎಂದು ಸಹ ಇದೆ. ಅಂತೂ ಪುರಾಣದಲ್ಲಿ ವಾದಿರಾಜ ಗುರುಗಳ ಅವತಾರ ಹೇಳಲ್ಪಟ್ಟಿರುವುದು ಜಂಖಂಡಿ ಆಚಾರ್ಯರಿಂದ ನೋಡಲ್ಪಟ್ಟಿದೆ ಎಂದು ಸಿದ್ಧವಾಗುತ್ತೆ, ಅವರ ಗ್ರಂಥ ಸಂಸ್ಕೃತದಲ್ಲೇ ಬರೆಯಲ್ಪಟ್ಟಿದೆ. **(Copied in 18 pageS of an exerciSe book by Sri R. Govinda Rao No. 22 P. 153 to 170 by whoSe courteSy thiS part iS reproduced here. H.S.]**

8. ಪುಟ 5-13 ಉಕ್ತಿ:

"ಕಂಡೇ ಕಂಡೇ" ಎಂಬುದು 1600 A.D. ಕಾಲದ ಪದ್ಯ. ಅದು ಪುರಂದರದಾಸಕೃತವಾಗಲಾರದು. ದಾಸರು 1564 A.D. ಯಲ್ಲಿ ದಿವಂಗತರೆಂದು ನಿಶ್ಚಿತವಾಗಿದೆ."

ಪ್ರತ್ಯುಕ್ತಿ: ಹಿಂದೆ ಆರನೆಯ ಅಧ್ಯಾಯದಲ್ಲಿ ಹೇಳಿದಂತೆ ಈ ಖಂಡನೆಯು ಮುದ್ರಿಕಾ ಅಭಿಮರ್ಶನದಿಂದಾದದ್ದು. ಪುರಂದರದಾಸರ ಪುತ್ರ ಕೃತವಾದದ್ದು ಈ ಪದ್ಯ. "ನಿಜ ಪುರಂದರ ವಿಠಲ" ನೆಂಬ ವಿಶೇಷಣಯುಕ್ತ ಮುದ್ರಿಕೆ ಇದಕ್ಕೆ ಇದೆ. ಹಾಗೆ ಐತಿಹ್ಯವಿದೆ. ಈ ಹಾಡಿನ ವಿಷಯವು ಅಬಾಧಿತವು. ಸಂವಾದ ವಿಶಿಷ್ಟವೂ ಆಗಿದೆ. ವೇದವೇದ್ಯರ ಸಂಪ್ರದಾಯಕ್ಕೆ ಅನುಗುಣವೂ, ವಿಜಯದಾಸರಿಂದಲೇ ರಚಿತವಾದ ಕೀರ್ತನೆಗಳ ಸಂವಾದ ವಿಶಿಷ್ಟವೂ ಆಗಿದೆ. ವಿರೋಧಿ ಕೀರ್ತನಾದಿಗಳು ಯಾವುದೂ ಇಲ್ಲ.

9. ಪುಟ 5-12 ಉಕ್ತಿ:

"ತದ್ವದನ್ಯೇಷಾಮಿತಿ ಪುರಂದರಾದೀನಾಂ ಯೋಗಿತ್ವ ಕಲ್ಪನಂ । ತೇಷಾಂ ಚ ಪ್ರಮಾಣ ವಿರುದ್ಧ ಸರ್ವದರ್ಶಿತ್ವ ಕಲ್ಪನಂ । ಪುನಶ್ಶಾಪ್ತತ್ವ ಕಲ್ಪನಂ । ಕರ್ಣಾಟಕ ಪದ್ಯಾನಾಂ ಚ ತತ್ಕೃತತ್ವಕಲ್ಪನಂ ಚೇತಿ ಕಲ್ಪನಾಗೌರವ ಪ್ರಾಪ್ತೇರಸಿದ್ಧಮೇವ ಯೋಗಿಪ್ರತ್ಯಕ್ಷೇಣ ಗುರುರಾಜ ಋಜುತ್ವಂ" ‖ಇತಿ‖ (ಹೀಗೆ ಇತರರ ವಿಷಯದಲ್ಲೂ, ಪುರಂದರಾದಿಗಳಿಗೆ ಯೋಗಿತ್ವ ಕಲ್ಪನೆ (ಅವರಿಗೆ ಪ್ರಮಾಣ ವಿರುದ್ಧ ಸರ್ವದರ್ಶಿತ್ವ ಕಲ್ಪನೆ, ಪುನಶ್ಶಾಶ್ಶಾಪ್ತತ್ವ

ಕಲ್ಪನೆ (ಕರ್ಣಾಟಕ ಪದಗಳು ತತ್ತ್ವವೆಂದು ಕಲ್ಪನೆ; ಹೀಗೆ ಕಲ್ಪನಾ ಗೌರವ ಬರುವುದರಿಂದ ಯೋಗಿ ಪ್ರತ್ಯಕ್ಷದಿಂದ ಗುರುರಾಜ ಋಜುತ್ವವು ಅಸಿದ್ಧವೇ.

**ಪ್ರತ್ಯುಕ್ತಿಃ** ಇದೆಲ್ಲವೂ ವಿದ್ಯಾಧಿಕರಣಾನುವ್ಯಾಖ್ಯಾನ, ಸುಧಾಗಳಿಗೆ ವಿರುದ್ಧವೇ. "ದೃಶ್ಯಂತೇ....ಸತ್ಯಾಭವಂತಿಹಿ" ಎಂದು 6ನೇ ಅಧ್ಯಾಯದಲ್ಲಿ, ಇಲ್ಲೂ ಐದನೇ ಪ್ರಕರಣದಲ್ಲೂ ಉಕ್ತ ಬ್ರ.ಸೂ.ಭಾ II 1-17 ವಚನ ವಿರುದ್ಧವೇ. ಪ್ರತ್ಯಕ್ಷ ಮಾಹಾತ್ಮ್ಯ ದರ್ಶನ, ಸಂವ್ಯವಹಾರಾದ್ಯನುಭವಗಳಿಂದ ಪ್ರಾಮಾಣಿಕವೆಂದು ಸಿದ್ಧವಾದ ವಿಷಯಗಳಲ್ಲಿ ಕಲ್ಪನಾಗೌರವವನ್ನು ಆಪಾದಿಸಬಾರದು. ತರ್ಕವೇ ಬಾಧಿತವಾಗುತ್ತೆ. II 1-12 ಬ್ರ. ಸೂ.ಭಾಷ್ಯದಲ್ಲಿ "ನಾತೋನ್ಯಚ್ಛಂಕ್ಯಂ" ಎಂದು ಪ್ರಮಾಣಿಸಿದ್ಧ ವಿಷಯದಲ್ಲಿ ಕಲ್ಪನಾಗೌರವಾದಿ ತರ್ಕ ಪ್ರವೃತ್ತಿಯನ್ನು ನಿಂದಿಸಿದ್ದಾರೆ. "ಪ್ರಾಮಾಣಿಕತ್ವಾಚ್ಚನಕಲ್ಪನಾಗೌರವಂ ದೋಷಾಯೇತಿ" (ಪುಟ 411ಯ ತ.ನಿ. Mad.Edn.) ಎಂದು ಶ್ರೀನಿವಾಸತೀರ್ಥಿಯ ವಚನವಿದೆ. "ಕಲ್ಪನಾಗೌರವಂ ಚೇತ್ಸ್ಯಾತ್ ಪೃಥಕ್ತಾತ್ಪರ್ಯ ಕಲ್ಪನೇ I ಕಲ್ಪನಾಗೌರವಾದೇವ ಪದಾರ್ಥನಸ್ಯುರೇವಹಿ ‖ ಪ್ರಮಾಣಾವಗತತ್ವಂ ಚೇತ್ತಾತ್ಪರ್ಯಾಣಾಂ ತಥೈವಹಿ ‖" ಎಂದು ಅನುವ್ಯಾಖ್ಯಾನ(I 1-1)ದಲ್ಲೂ ಹೇಳಲ್ಪಟ್ಟಿದೆ. ಆದ್ದರಿಂದ ಮೂಲಶಾಸ್ತ್ರಾ ವಿರುದ್ಧ ದಾಸಭಕ್ತರ ಕೀರ್ತನೆಗಳು ಪ್ರಮಾಣಗಳೇ. ವಿಜಯ ದಾಸಾದಿಗಳ ಜ್ಞಾನಿತ್ವವೂ ಮಾಧ್ವ ಸಮಾಜದಲ್ಲಿ ಸಂಪ್ರತಿಪನ್ನವಾಗಿಯೇ ಇದೆ.

ಜ್ಞಾನಿತ್ವಾದಿ ರೀತಿಯಾಗಿ ಸಂಪ್ರತಿಪನ್ನರಾಗಿದ್ದರೂ, ವಿಜಯ ದಾಸಾದಿಗಳ ವಾಕ್ಯಗಳು ಅಪ್ರಮಾಣವಾಗುವುದಾದರೆ, ತ್ರಿವಿಕ್ರಮಪಂಡಿತಾಚಾರ್ಯ, ಜಯತೀರ್ಥಾದಿಗಳ ವ್ಯಾಖ್ಯಾನ ವಾಕ್ಯಗಳಿಗೂ "ಪುಂವಾಕ್ಯತ್ವಾತ್" ಸಂದಿಗ್ಧ ವ್ಯಾಖ್ಯಾನತ್ವವು ಬರಬೇಕಾಗುತ್ತೆ. ತತ್ವನಿರ್ಣಯ ವಾಕ್ಯಗಳಿಗೆ ಗತಿ ಏನೆಂದರೆ ಆರನೇ ಅಧ್ಯಾಯದಲ್ಲಿ ಘಟನಾಪ್ರಕಾರವು ನಿರೂಪಿತವಾಗಿದೆ. ಅನಂತಾನಂತ ಧರ್ಮಾದಿ ವಿಷಯದಲ್ಲಿ ವೇದಪ್ರಾಮಾಣ್ಯವನ್ನು ಒಪ್ಪದ, ಪರತಸ್ತ್ವ ರೀತಿಯಿಂದ ಚರ್ಚಿಸುವ ಸಮಾಜದಲ್ಲಿಯೂ ಕೂಡ ಸಂಪ್ರತಿಪತ್ತಿಯುಂಟಾಗುವಂತೆ ನಿರ್ಣಯದ ಮಾತನ್ನು ಹೇಳುವುದಕ್ಕೆ ವೇದವ್ಯಾಸ ದೇವರಿಗೂ ಶಕ್ಯವಿಲ್ಲ; ಎಂದರೆ ಆ ಸಮಾಜವು ಅಂಥವರ ಮಾತನ್ನು ಒಮ್ಮತದಿಂದ ಅಂಗೀಕರಿಸುವುದಿಲ್ಲ. ಇನ್ನು ವಸಿಷ್ಠಾದಿ ಇತರರ ಮಾತಿಗೆ ಒಪ್ಪಿಗೆ ಬರುವುದಿಲ್ಲವೆಂದು ಹೇಳತಕ್ಕದ್ದೇನು? ಇಲ್ಲಿಯಾದರೋ ವೈದಿಕ ಮಾಧ್ವ ಸಮಾಜದಲ್ಲಿ ಪ್ರತ್ಯಕ್ಷಾದಿ ವ್ಯವಹಾರಗಳಿಂದ ದೀರ್ಘಪರೀಕ್ಷಿತರಾಗಿ ಒಬ್ಬರೋ ಇಬ್ಬರೋ ಜ್ಞಾನಿಗಳೆಂದು ತಿಳಿಯಲ್ಪಡುತ್ತಾರೆ; ಅವರು ಸ್ವಕೀಯ ಜನರಿಗೆ ಕೆಲವು ಅವಶ್ಯಕ ವಿಷಯಗಳನ್ನು ಕೃಪೆಯಿಂದಲೂ, ದೈವಭಕ್ತಿ ಪ್ರೇರಿತರಾಗಿಯೂ ಹೇಳುತ್ತಾರೆ; ಜನರಿಂದಲೂ ಅವರು ಆದರಿಸಲ್ಪಡುತ್ತಾರೆ. ಅಂಥವರ ಮಾತನ್ನು ಪ್ರಮಾಣವೆಂದು ಜನರು ಒಪ್ಪುತ್ತಾರೆ. ಅವರ ಮಾತುಗಳಿಗೆ ಬಾಧಕವೇ ಇಲ್ಲ ಎಂದು ಒಪ್ಪಿದರೆ ವಿರೋಧವೇನು? ಆದ್ದರಿಂದಲೇ ಪಂಡಿತರಾದ ಕಲ್ಲೂರು ಸುಬ್ಬಣ್ಣಾಚಾರ್ಯರಿಗೆ ವಿಜಯದಾಸರ ವಾಕ್ಯಗಳಲ್ಲಿ ಶಂಕೆಯೇ ಬರಲಿಲ್ಲ. ಅವರು ಅವರ ಅನುಯಾಯಿಗಳೇ ಆಗಿಹೋದರು. ಅಲ್ಪ ಬುದ್ಧಿಯುಳ್ಳ ನಮಗೆ ಅವರ ವಾಕ್ಯಗಳಲ್ಲಿ ಅಪ್ರಾಮಾಣ್ಯ ಶಂಕೆ ಏತಕ್ಕೆ? ಅನುಮಾನಗಳು:

10. ಪುಟ 6-5. ಉಕ್ತಿ:

"ಅನುಮಾನಗಳೂ ಕೂಡ ಋಜುತ್ವ ಸಾಧನಶಕ್ತಿ ಸಂಪನ್ನಗಳಾಗಿಲ್ಲ" ಎಂದು ಹೇಳಿ ಶುಷ್ಕ ತರ್ಕರೂಪಗಳಾದ ಅಪ್ರಯೋಜಕ ಹೇತುಭರಿತಗಳಾದ ಕೆಲವು ಅನುಮಾನ ವಾಕ್ಯಗಳು ಪ್ರಯೋಗಿಸಲ್ಪಟ್ಟಿವೆ. ಅದರಲ್ಲಿ ಪ್ರಥಮ ಪುಟ 6-6: "ಮಧ್ವಜೀವನ ಸದೃಶ ಜೀವನವುಳ್ಳವರಾದ್ದರಿಂದ ವಾದಿರಾಜರು ಋಜುಗಳು" ಎಂಬುದನ್ನು ಸ್ತೋತ್ರೈಕ್ಷಿತ ವ್ಯಾಖ್ಯಾನಮಾಡಿ ಛಲರೀತಿಯಿಂದ ಋಜುತ್ವವಾದಿ ವಿವಕ್ಷಿತಾರ್ಥ ಬರೆಯದೆ ಖಂಡಿಸಿದ್ದಾರೆ.

ಪ್ರತ್ಯುಕ್ತಿ: ಹಾಗಿದ್ದರೆ ಋಜುತ್ವ ಪಕ್ಷದವರಿಂದ ವಿವಕ್ಷಿತ ಹೇತುವು ಯಾವುದೆಂಬುದನ್ನು ಹೇಳುತ್ತೇವೆ. ತಥಾಹಿ: ಹರಿ ವಿಷಯಕ ಅಚ್ಛಿನ್ನ ಭಕ್ತತೆಯು ಋಜುತ್ವವು; ಮನಸಾ, ಕಾಯಾ, ವಾಚಾ ಏಕರೂಪದಿಂದ ಸದ್ಧರ್ಮರತನಾಗಿರುವುದು ಋಜುತ್ವವು. ಬ್ರ.ಸೂ.ಭಾ. 3-4-23 ರಲ್ಲಿ ಹೇಳಿದಂತೆ "ಸ್ವೈಚ್ಛಾನಿಯತರು" ಋಜುಗಳು. ಶ್ರೀಹರಿ ಪ್ರೇರಣೆಯಿಂದ ಉತ್ಪಾದಿತ ಇಚ್ಛೆಗಳನ್ನು ತಿಳಿದು, ತದನುಸಾರವಾಗಿ ಆಚರಿಸಿ ಅವನ ಮನಸ್ಸಂತೋಷವುಂಟುಮಾಡುವ ಸ್ವಭಾವ ಋಜುತ್ವ; ಸರ್ವದಾ ನಿರ್ದೋಷತೆಯಿಂದ ಅಂತರಂಗ ಧರ್ಮಯುಕ್ತರಾದವರು ಋಜುಗಳು. ಅಥವಾ "ವೇದೇಷು ದೇಶ ಕಾಲೇಷು ಲಿಂಗದೇಹೇತು ಚಾಕ್ಷರೇ| ಪ್ರಕೃತೌ ಸರ್ವಜೀವಾನಾಂ ಮಹತ್ತತ್ವೇ ಗುಣತ್ರಯೇ | ಅಂಶಾ ಋಜೂನಾಂ ಸಂತ್ಯೇವ ವಿಪಾದ್ಯಾಂಶಾನತೇಷು ಹಿ" ಇತ್ಯಾದಿ ಪ್ರಕಾಶಸಂಹಿತಾ. [ಪ್ರಥಮ ಪರಿಚ್ಛೇದ ಹತ್ತನೇ ಅಧ್ಯಾಯ ಶ್ಲೋಕ 626-8: "ಅಂಶಾನಂದ ಬಲ ಜ್ಞಾನ ದೇಶಕಾಲಾ ಪರೋಕ್ಷಕಾಃ| ಲಯಸೃಷ್ಟಿ ಪರಾವೇಶ ಗುಣಲಕ್ಷಣ ಕಾಂತಯ। ಏವಂ ಚತುರ್ದಶ ಮಹಾತಾರತಮ್ಯಾಃ ಪ್ರಕೀರ್ತಿತಾಃ" ಎಂದಿದೆ.]ವಚನಾನುಸಾರವಾಗಿ ಹದಿನಾಲ್ಕು ರೀತಿಯಲ್ಲಿ ಇತರ ದೇವತೆಗಳ ದೆಸೆಯಿಂದ ಉಪಪಾದಿತಾಧಿಕ್ಯವುಳ್ಳತನವು ಋಜುತ್ವವು. ಅಥವಾ ಸ್ವಾಭಿಮನ್ಯ ಜೀವರಿಗೆ ತತ್ತದ್ಯೋಗ್ಯಗತಿ ಸಂಪಾದನಾರ್ಥವಾಗಿ (ಕರ್ತುಂ ಚಾಕರ್ತುಮನ್ಯಥಾ ಕರ್ತುಂ ಚ" ಬೇಕಾದ ಅಚಿಂತ್ಯಶಕ್ತಿ ಯುಕ್ತತ್ವವು ಋಜುತ್ವವು. ಹಾಗೆಯೇ "ನಿತ್ಯಂ ಕಿಂಕರಭಾವೇನ ಸ್ವಾತ್ಮಾನಂ ವಿನಿವೇದಯತ್" ಎಂದು ಹೇಳಿದಂತೆ ಸಂತತ ಹರಿಪ್ರೀತಿಕರ ಕೃತ್ಯಭಾವನೆಯಿಂದಿರುವುಮ ಋಜುತ್ವವು. ಅಥವಾ "ಸತತಂ ಹರ್ಯಧೀನತ್ವೇಸತಿ ನಿಃಸೀಮ ಬಲತ್ವಂ ಋಜುತ್ವಂ"; "ಶಂಕಚಕ್ರಾದಿ ಹರ್ಯಾಯುಧ ಚಿಹ್ನಾಂಕಿತ ಅಸ್ತಿ ಪಂಜರತ್ವಂ ಋಜುತ್ವಂ"; "ದ್ವಾತ್ರಿಂಶವಲಕ್ಷಣೋಪೇತ ಶರೀರೋಪೇತತ್ವಂ ಋಜುತ್ವಂ"; III 3. ಬೃ.ಭಾಷ್ಯಕ್ತ ರೀತ್ಯಾ ಪವಮಾನ, ಪ್ರಸ್ತೋತೃ, ಉದ್ಗಾತೃ, ಮುಂತಾದ ಪದವಾಚ್ಯರಾಗಿ ರುದ್ರಾದಿ ಜೀವಾನುಗ್ರಾಹಕ ಶಕ್ತಿ ಯುಕ್ತತೆಯು ಋಜುತ್ವವು. "ಯಸ್ತೇ ಕಥಾಸೇವಕ ಏವ ಸರ್ವದಾ" ಇತ್ಯುಕ್ತ (ಮ.ತಾ.ನಿ. VIII 247)ರೀತ್ಯಾ ಶೇಷಾದಿ ದೇವಾಪೇಕ್ಷಯಾ ಅಧಿಕ ಜೀವನವತ್ವವು ಋಜುತ್ವವು; "ಮುಖ್ಯತಃ ಭಗವದನ್ಯ ಕಾಮನಾ ಹೀನತ್ವಂ ಋಜುತ್ವಂ"; ಭಗವತ್ಸೇವಾರ್ಥವಾಗಿಯೇ ವಿರಿಂಚಾದಿ ಸ್ವಸ್ವಯೋಗ್ಯ ಪದಕಾಮವತ್ವವು ಋಜುತ್ವವು; ಹಾಗೆ ಗರುಡ ಶೇಷಾದಿಗಳಲ್ಲಿದ್ದು ಶ್ವಾಸಪ್ರೇರಕ ಮಹಾಶಕ್ತಿಯುಕ್ತತೆ, "ಕಸ್ಮಿನ್ನಹಮುತ್ಕ್ರಾಂತೇ" ಇತ್ಯಾದಿ ಪ್ರಮಾಣಾನುಸಾರ ಸ್ವಭಕ್ತಿ ಸಾಮರ್ಥ್ಯದಿಂದ ವಶೀಕೃತ ಹರಿಸನ್ನಿಧಾನಯುಕ್ತತೆಯು ಋಜುತ್ವವು; "ಸ್ವಕೃತ ಹರಿಪೂಜಾಯಾಂ ಸಾಮ್ಯೇನ ಬ್ರಹ್ಮವಾಯು ಸಹಕಾರ ಪ್ರಾಪ್ತಿಮತ್ವಂ ಋಜುತ್ವಂ"; "ಮಹತ್ತತ್ವಾಂತ ಹರಿದರ್ಶನಶಕ್ತಿಮತ್ವಂ

ಋಜುತ್ವಂ ॥ ವೇದೋಕ್ತ ಯಾವದ್ಗುಣೋಪಾಸಕತ್ವಂ ಋಜುತ್ವಂ; "ಶ್ರೋತವ್ಯಂ ಧರ್ಮಸಾಧನಂ" ಇತ್ಯಾದಿ ಪ್ರಮಾಣರೀತ್ಯಾ "ವೇದವ್ಯಾಸೈರುಪದೇಶೇಪಿ ವಿಶೇಷ ಜ್ಞಾನವೃದ್ಧಿಂ ವಿನಾ ಪುಣ್ಯಾರ್ಥಂ ಹರಿತೋಷಣಾರ್ಥಂ ಶ್ರವಣವತ್ವಂ ಋಜುತ್ವಂ; ಕಲಿಪ್ರವೇಶಾನರ್ಹ ಆಖಣಾಶ್ಮ ಸಮದೇಹ ವೃನ್ದಾವನ ಪ್ರತಿಮಾದಿ ಶರೀರವತ್ವಂ ಋಜುತ್ವಂ"; ದೌರ್ಬಲ್ಯ ಹೊಂದದ ನಿತ್ಯನಿಃಸೀಮ ಶಕ್ತಿ ಯುಕ್ತತೆಯು ಋಜುತ್ವವು; "ಪ್ರಳಯೇಪ್ಯತಿರೋಹಿತ ವಿಜ್ಞಾನಾದಮೃತ ಶಬ್ದ ವಾಚ್ಯತ್ವಂ ಋಜುತ್ವಂ"; ನಿತ್ಯಂ ಶ್ರಮಹೀನತ್ವವು, ಹರಿ ವಿಷಯದಲ್ಲಿ ಸದಾ ಕ್ರೋಧಾಭಾವವು ಋಜುತ್ವವು ಎಂದೂ ಹೇಳಬಹುದು. ಹರಿಕರ್ತೃಕ ಅಧಿಕ ಸ್ವಾತ್ಮಪ್ರದಾನ ವಿಷಯತ್ವವು ಋಜುತ್ವವು; ಮುಖ್ಯ ಪ್ರಾಣ ಸಖಿತ್ವವು ವಾಯುಭಿನ್ನ ಋಜುಗಳ ಲಕ್ಷಣವೆನ್ನಬಹುದು; ಹೀಗೆ ಶಾಸ್ತ್ರದಲ್ಲಿ ಅಲ್ಲಲ್ಲಿ ಅನೇಕ ಋಜುಲಕ್ಷಣಗಳು ಹೇಳಿವೆ; ಇಂಥ ಗುಣಗಳಲ್ಲಿ ಶ್ರೀ ವಾದಿರಾಜ ಮುನಿಗಳು ಮಧ್ವ ಸಾಮ್ಯವುಳ್ಳವರು ಎಂದು ವಿವಕ್ಷಿತ ಹೇತು. ಅಸಿದ್ಧಿ ಇಲ್ಲ. ಸದಾಗಮದಿಂದ ಋಜುತ್ವ ಪ್ರಮಿತವಾಗಿದೆ. ಕೆಲವು ಹೇತುಗಳು ಆಖ್ಯಾನ ಪುರಾಣಾದ್ಯುಕ್ತ. ಹೀಗೆ ರಚಿತವಾದ ಅನುಮಾನಗಳನ್ನು ಪ್ರಾಮಾಣ್ಯ ಸ್ವತಸ್ತ್ವ ರೀತಿಯಿಂದ ಪ್ರತಿಪ್ರಮಾಣ ಕೊಟ್ಟು ಖಂಡನೆ ಮಾಡುವುದು ಶಕ್ಯವಲ್ಲ. ಪೂರ್ವಪಕ್ಷ ಗ್ರಂಥಕರ್ತೃ ರೀತಿಯು ಛಲರೀತಿ.

ಪುಟ 6-14 "ಕಿಂಚ ವಾದಿರಾಜ ಗುರುಗಳಿಗೆ ಮಧ್ವಸಾಮ್ಯ ಒಪ್ಪಿದರೂ" ಆ ಸಾಮ್ಯಲಕ್ಷಣಗಳು ವರಾವೇಶಾದಿಗಳಿಂದ ಬಂದಿರಬಹುದು ಎಂದು ಏತಕ್ಕೆ ಹೇಳಬಾರದು? ಎಂದೂ ಅತಿಶಂಕೆಯನ್ನು ಮಾಡಿ ಬಿಟ್ಟಿದ್ದಾರೆ. ಅದೇ ಪ್ರಾಮಾಣ್ಯ ಪರತಸ್ತ್ವ ರೀತಿ. ಅದು ಮಧ್ವಶಾಸ್ತ್ರಕ್ಕೆ ವಿರುದ್ಧವಾದ ವಿಚಾರರೀತಿ. ಅತಿ ಪ್ರಸಂಗ ದೋಷ ದುಷ್ಟ. **[ಪುಟ 209 ತ.ನಿ.ಟೀಕಾ (Mad.Edn.) ನೋಡಿ: "ಕಿಂದಿಶಾಂ ಭ್ರಾಂತಿ ಕಲ್ಪಿತತ್ವಂ ಕೇನಚಿತ್ಪ್ರಮಾಣೇನೋಚ್ಯತೇ ಏವಮೇವವಾ।ನಾದ್ಯಃ ಪ್ರಮಾಣಾನಾಂ ದೂಷಿತತ್ವಾತ್। ಅಸಾಧಾರಣ ಪ್ರಮಾಣಸ್ಯಾನುಪಲಂಭಾತ್। ನ ದ್ವಿತೀಯಃ ಅತಿಪ್ರಸಂಗಾದಿತ್ಯಾಹ".]** ಮಧ್ವಮತರೀತಿ ಏನೆಂದರೆ ಪ್ರಮಾಣವಿರೋಧ ಕಂಡರೆ ಶಂಕಾ ಮಾಡಬಹುದು, ಯಾವುದೊ ದೃಷ್ಟಾಂತ ಇದ್ದ ಮಾತ್ರಕ್ಕೆ ಅದು ಪ್ರಮಾಣವೆಂದೆನಿಸುವುದಿಲ್ಲ. ಅರ್ಜುನನಿಗೆ ನರವೇಶಾದಿಕಾರಣಗಳಿಂದ ಅಶ್ವತ್ಥಾಮಾಧಿಕ್ಯವು ಪ್ರಮಿತವಾಗಿದೆ. ವಾದಿರಾಜ ಮುನಿಗಳ ವಿಷಯದಲ್ಲಿ ಅಂಥ ನಿರವಕಾಶ ಪ್ರಮಾಣವಿಲ್ಲ. ಆದ್ದರಿಂದ ॥ 1-2 ಅನುವ್ಯಾಖ್ಯಾನಾದ್ಯುಕ್ತ ರೀತಿಯಲ್ಲಿ ವಿಚಾರ ನಡೆಯಿಸಿ ವಿಶೇಷ ಪ್ರಮಾಣವಿಲ್ಲದ್ದರಿಂದ ವಾದಿರಾಜ ಗುರುಗಳ ಮಹಿಮೆ ಎಲ್ಲವೂ ಅವರ ಸ್ವರೂಪ ವ್ಯಂಜಕ ಹರಿವಾಯುಗಳ ಮತ್ತು ಅವರ ಋಜುತ್ವ ಲೇಶ ಸಾಮರ್ಥ್ಯದ್ದೇ ಎಂದು ತಿಳಿಯಬೇಕು. ಒಬ್ಬರಿಂದ ಕಂಡ ಶಕ್ತಿ ಮತ್ತೊಬ್ಬರದ್ದು ಎಂದು ನಿಶ್ಚಯಿಸಲು ಸ್ವಾಶಕ್ತಿ ಪ್ರತಿಪಾದಕ ಪ್ರಮಾಣಬೇಕು. ಆಖ್ಯಾನದಲ್ಲಿ ವಾದಿರಾಜ ಗುರುಗಳಿಗೆ ಸ್ವಸಾಮರ್ಥ್ಯವೇ ವಿಪುಲವಾಗಿದೆ ಎಂದು ಧರ್ಮಿಗ್ರಾಹಕ ಪ್ರಮಾಣ ಇದೆ. ವೈಭವ ರೂಪದಿಂದ ಆವೇಶವನ್ನೂ ಒಪ್ಪಿದ್ದಾರೆ.

| ಅನುಮಾನ (II) : |
|---|
| ಪುಟ 7-3 ಉಕ್ತಿ: |
| "ಗರ್ಭವಾಸವಿಲ್ಲದೆ ಜನನ; ಊರ್ಧ್ವ ಬದರೀಸ್ಥವೇದವ್ಯಾಸ ನಾರಾಯಣ ದರ್ಶನ; ನಿಖಿಲ ವೇದಾದಿ ಶಾಸ್ತ್ರಜ್ಞಾನವೂ ಗುರುರಾಜರಲ್ಲಿ ಇವೆ ಎಂದು ಶ್ರುತವಾಗಿಲ್ಲ" ಎಂದಿದ್ದಾರೆ. |
| ಪ್ರತ್ಯುಕ್ತಿ: ಈ ಮಾತೂ ಸರಿಯಲ್ಲ. ಗರ್ಭವಾಸವು ಹತ್ತು ತಿಂಗಳು ಹನುಮಂತನಿಗೂ ಆಗಿತ್ತೆಂದು ವೇಂಕಟೇಶ ಮಹಾತ್ಮ್ಯೆಯಲ್ಲಿ ಶ್ರುತವಾಗಿದೆ. **[ಪ್ರಕಾಶ ಸಂಹಿತ ಶ್ಲೋಕ 620-1 ರಲ್ಲಿ ಸೂಕ್ಷ್ಮ ವಿವರ ಹೇಳಲ್ಪಟ್ಟಿದೆ: "ಸರ್ವತ್ರ ಭಾವಿ ಋಜುವೋ ವಿಷ್ಣೋರ್ವಾಯೋರ್ಭವಂತಿ ಹಿ \| ಅಂಡಾಂತರ ಬಹಿಸ್ಥಾವಾನಾನ್ಯೈರ್ಜನ್ಮ ಲಭಂತಿ ತೇ\| ವ್ಯಾಮೋಹಾಯಾಸುರಾಣಾಂತು ಅನ್ಯಜಾ ಇವ ಭಾಂತಿ ತೇ".\|]** ಅಷ್ಟರಿಂದಲೇ ಋಜುತ್ವ ಭಂಗವಿಲ್ಲ. ಗರ್ಭವಾಸವಾದರೂ ದುಃಖಾಭಾವವು ಹನುಮಂತನಿಗೆ ಹೇಗೋ ಹಾಗೇ, ವಾದಿರಾಜ ಗುರುಗಳಿಗೂ ಶ್ರುತವಾಗಿದೆ. ಬದರೀಸ್ಥ ವೇದವ್ಯಾಸದರ್ಶನವೂ ಆಯಿತೆಂದು ಲಕ್ಷಾಲಂಕಾರದ ಅವತಾರಿಕೆಯಲ್ಲಿದೆ. ಶ್ರೀವಿಷ್ಣುತೀರ್ಥರ ದರ್ಶನವನ್ನು ಮಾಡಿದರೆಂದೂ ಪ್ರಸಿದ್ಧವಾಗಿದೆ. ನಾರಾಯಣ ದರ್ಶನವೂ ಆಗಿತ್ತೆಂದು ವಾ.ಗು. ರತ್ನಮಾಲೆಯಲ್ಲಿದೆ. ಹೆಚ್ಚಿಗೆ ಹೇಳುವುದರಿಂದೇನು? ಅಚ್ಛಿನ್ನ ಹರಿಸೇವಕತ್ವಾದಿ ಮಧ್ವಸಾಮ್ಯವು ಧರ್ಮಿ ಗ್ರಾಹಕ ಮಾನಸಿದ್ಧವಾಗಿರುವುದರಿಂದ ಇತರ ಧರ್ಮಗಳಲ್ಲಿ ಸಾಮ್ಯವಿಲ್ಲದಿದ್ದರೂ ಋಜುತ್ವಕ್ಕೆ ವಿರೋಧವೇ ಇಲ್ಲವೆಂದು ಅಂಗೀಕರಿಸಲ್ಪಡುತ್ತೆ. ಆದ್ದರಿಂದ ಶಾಸ್ತ್ರೋಕ್ತ ಅಚ್ಛಿನ್ನ ಭಕ್ತತ್ವಾದಿ ಸದ್ಗುಣ ಸಾಮ್ಯದಿಂದಲೇ ಋಜುತ್ವವು ಸಾಧಿಸಲ್ಪಡುತ್ತೆ. ಯಾವ ಪ್ರಮಾಣವಿರೋಧವೂ ಇಲ್ಲ. |
| ಅನುಮಾನಗಳು (iii) : |
| ಪುಟ 7-23 ಉಕ್ತಿ: |
| ಪಾದ ಟಿಪ್ಪಣಿ: "ಯದ್ಯಪಿ ವಾದಿರಾಜ ಗುಣರತ್ನ ಮಾಲಾಖ್ಯ ಗ್ರಂಥದಲ್ಲಿ ವಾದಿರಾಜ ಮುನಿಗಳಿಗೂ ಊರ್ಧ ಬದರೀ ಗಮನಾದಿಗಳು ಶ್ರುತವಾಗಿವೆ. ಆದರೆ ಅಲ್ಲಲ್ಲಿ ಕಂಡ ಅನೇಕ ಅಪ್ರಾಮಾಣಿಕ ವಿಷಯಗಳಿಂದ ತುಂಬಲ್ಪಟ್ಟಿರುವ ಗ್ರಂಥಕ್ಕೆ ಅಪ್ರಾಮಾಣ್ಯವೇ ಸರಿ ಎಂದು ಅದರಿಂದ ಊರ್ಧ್ವ ಬದರೀ ಗಮನವು ನಿಶ್ಚಯವಾಗುವುದಿಲ್ಲ. ಅದರಲ್ಲಿ ತ್ರಿವಿಕ್ರಮ ಮೂರ್ತಿಯ ಆನಯನವು ಬದರಿಯ ದೆಸೆಯಿಂದ ಎಂದಿದೆ. ಅದು 'ಕಾಶೀದೇಶದಿಂದ ಬಂದ' ಇತ್ಯಾದಿ ತ್ರಿವಿಕ್ರಮ ದೇವಾಲಯಸ್ಥ ಶಾಸನ ವಿರುದ್ಧವಾಗಿದೆ." ಇತಿ. |
| ಪ್ರತ್ಯುಕ್ತಿ: ಈ ಟಿಪ್ಪಣಿ ಮೌಢ್ಯ ಮೂಲಕವಾದದ್ದು. ಶಾಸ್ತ್ರ ನಿಯಮವೇನೆಂದರೆ "ಮೂಲ ಪ್ರಮಾಣಗಳಿಗೆ ಅವಿರುದ್ಧವಾಗಿದ್ದರೆ ಯಾರ ಹೇಳಿಕೆ ಯಾಗಲಿ ಅದು ಪ್ರಮಾಣವೇ." ಆದ್ದರಿಂದ ಊರ್ಧ್ವ ಬದರೀ ಗಮನವು ಪ್ರಾಮಾಣಿಕವೆಂಬುದೇ ಉಚಿತವು. ಪ್ರಮಾಣ ವಿರೋಧಾಭಾವಾತ್, ವಾ.ಗು. ರತ್ನಮಾಲಾ ಗ್ರಂಥದಲ್ಲಿ ಬಹು ವಿಷಯಗಳು ಅಪ್ರಾಮಾಣಿಕಗಳು ಎಂಬ ಊಹೆಗೇ ಬೆಲೆ ಇಲ್ಲ. ಏಕೆಂದರೆ ಬಾಧಕ ಪ್ರಮಾಣವನ್ನು ಉದಾಹರಿಸಿಲ್ಲ. ಕಿಂಚ ಆ ಗ್ರಂಥದಲ್ಲಿ ಯಾವುದಾದರೂ ಒಂದಂಶವು ಪ್ರಮಾಣ ವಿರುದ್ಧವಾಗಿ ಅಪ್ರಾಮಾಣಿಕವಾದರೂ ಬದರೀ |

ಗಮನವು ಏತಕ್ಕೆ ಅಪ್ರಾಮಾಣಿಕ ವಾಗಬೇಕು? ಮ.ತಾ.ನಿ. XX 16-18 ರಲ್ಲಿ ಭೀಮಸೇನನೇ ಅವಿರುದ್ಧ ಗ್ರಂಥಾಂಶಕ್ಕೆ ಪ್ರಾಮಾಣ್ಯ ನಿಯಮ ಒಪ್ಪಿದ್ದಾನೆ. ಸ್ಥಾಲೀಪುಲಾಕ ನ್ಯಾಯ ಅನ್ವಯಿಸಿಲ್ಲ. ತ್ರಿವಿಕ್ರಮ ದೇವರ ವಿಷಯದಲ್ಲೂ "ಬದರಿಯಿಂದ ಬಂದ; ಕಾಶಿದೇಶದಿಂದ ಬಂದ" ಎಂಬ ಎರಡು ಹೇಳಿಕೆಗಳಿಗೆ ಪರಸ್ಪರ ದೃಢ ವಿರೋಧವಿಲ್ಲ. "ಉತ್ತರ ದೇಶದಿಂದ ಸ್ವಾಮಿ ಬಂದ" ಎಂಬ ಅಭಿಪ್ರಾಯದಿಂದ "ಕಾಶಿ ದೇಶದಿಂದ ಬಂದ" ಎಂದು ಕಲ್ಲಿನಲ್ಲಿ ಕೆತ್ತಿದ್ದಾರೆಂದು ಹೇಳಬಹುದು. ಕಿಂಚ ಕಾಶಿಯಿಂದ ಎಂದು ಹೇಳದೆ ಕಾಶಿ ದೇಶದಿಂದ ಎಂದು ಕೊರೆದಿರುವುದರಿಂದ ಬದರ್ಯಾದಿಗಳಿರುವ ಉತ್ತರ ದೇಶವೆಂದೇ ವಿವಕ್ಷೆ ಇರಬೇಕು. ದಕ್ಷಿಣ ದೇಶೀಯ ಯಾತ್ರಿಕರು ಬದರೀ, ಹರಿದ್ವಾರ, ಕಾಶೀ ಎಂಬ ಕ್ರಮದಿಂದ ತಾನೇ ಯಾತ್ರೆ ಯಿಂದ ಹಿಂದಿರುಗುತ್ತಾರೆ? ಅಷ್ಟೇ ಅಲ್ಲ, ತ್ರಿವಿಕ್ರಮ ಸ್ವಾಮಿಯು ಬದರಿಯಿಂದ ಬಂದನೆಂಬ ವಿಷಯದಲ್ಲಿ ವಾ.ಗು.ಚ. VI 40-41 ಶ್ಲೋಕ ಸಂವಾದವಿದೆ. ಶಾಸನಕ್ಕೆ ಸಂವಾದವಿಲ್ಲ. ಆದ್ದರಿಂದ ಪೂರ್ವಪಕ್ಷ ಗ್ರಂಥದ ಟಿಪ್ಪಣಿ ಅಜ್ಞಾನದ ಕಾರ್ಯ. ವಾ. ಗು. ರತ್ನಮಾಲೋಕ್ತ ಕಥೆಯು ಮಾನ್ಯವೇ. [ವಾ.ಗು. ರತ್ನಮಾಲಾ 3 ನೇ ಅಧ್ಯಾಯದಲ್ಲಿ ದೈತ್ಯ ಜೀವರು ಸಭೆ ಸೇರಿ ನೂತನ ಸಂವಿಧಾನ ರಚಿಸಿ, ತಪಸ್ಸಿನಿಂದ ವರ ಪಡೆದು ಅವತಾರ ನಿಶ್ಚಯ ಮಾಡಿದ್ದೇ ಮುಂತಾದ ವಿವರ ಹೇಳಲ್ಪಟ್ಟಿದೆ. ಅದಕ್ಕೂ ಕೂಡ ಸಂವಾದ ರೂಪವಾಗಿ 1844ರಲ್ಲಿ ಬರೆಯಲ್ಪಟ್ಟ ಶ್ರೀಮದಾಖ್ಯಾನಾರ್ಥ ಪ್ರದರ್ಶಿಕ ಪ್ರಸಿದ್ಧ ಪತ್ರಿಕಾ' ಎಂಬ ಹದಿಮೂರು ಪುಟದ ಅಮುದ್ರಿತ ಲಿಖಿತ ಪುಸ್ತಕ ಪ್ರತಿ ನಂ. 22 'Confidential recordS pertaining to Sode Sri Vadiraja Mutt' ನಾಮಕವಾಗಿ ನನ್ನಿಂದ ಗೋವಿಂದ ರಾಯರ ಗ್ರಂಥಗಳ ಮಧ್ಯದಲ್ಲಿ ದೃಷ್ಟವಾಯಿತು. ಆದ್ದರಿಂದ ರತ್ನಮಾಲಾ ಗ್ರಂಥದಲ್ಲಿ ಹೇಳಿರುವುದೆಲ್ಲಾ ಊಹೆ ಎಂಬ ಕಲ್ಪನೆಯು ಸರಿಯಲ್ಲ.]

ಅನುಮಾನ (iv) :

ಪುಟ 7-5 ಉಕ್ತಿ:

ಬಳಿತ್ಥಾ ಶ್ರುತಿ ಪ್ರತಿಪಾದ್ಯತ್ವವು, ತನ್ನಿಂದಲೇ ಸ್ವಮಹಿಮೆಯ ಮತ್ತು ಸ್ವಸ್ವರೂಪದ ವರ್ಣನೆಯು, ಭಾಷ್ಯ ನಿರ್ಮಾಣರಚನೆ ಮುಂತಾದವುಗಳು ವಾದಿರಾಜರಲ್ಲಿಲ್ಲವೇ ಇಲ್ಲ".

ಪ್ರತ್ಯುಕ್ತಿ: ವೃಂದಾವನ ಪ್ರವೇಶಕ್ಕಿಂತ ಮುಂಚೆ ತನ್ನಿಂದಲೇ ಸ್ವಮಹಿಮೆಗಳ ವರ್ಣನೆ ಮುಂತಾದವು ಕಂಡಿಲ್ಲ. ಮಧ್ವ ಗುರುಗಳಲ್ಲೂ ಬಾಲ್ಯದಲ್ಲಿ ಕಂಡಿಲ್ಲ. ಭೀಮನಲ್ಲೂ ಕಂಡಿಲ್ಲ. ಹಾಗೇ ಹನುಮಂತನಲ್ಲೂ ಕಂಡಿಲ್ಲ. ಭಾಷ್ಯ ನಿರ್ಮಾಣ ಕಾರ್ಯವೂ ಭೀಮ ಹನುಮಂತರಲ್ಲಿ ಕಂಡಿಲ್ಲ. ಇಂಥ ಗುಣಾಭಾವಗಳಿಂದ ಅವರಿಗೆ ಹೇಗೋ ಹಾಗೆ, ಯುಕ್ತಿಮಲ್ಲಿಕಾ ಕರ್ತರೂ, ಭೂತರಾಜ ಗುರುವೂ ಆದ ವಾದಿರಾಜರಿಗೆ ಋಜುತ್ವಾಭಾವವನ್ನು ಆಪಾದಿಸುವುದು ಸರಿಯಲ್ಲ. ಪರಂತು ಬಳಿತ್ಥಾಸೂಕ್ತಾದಿ ಪ್ರತಿಪಾದ್ಯತ್ವವು ಅವಶ್ಯಕವು. ಅದು ಎಲ್ಲ ಋಜುಗಳಿಗೂ ಇದ್ದೇ ಇದೆ. ಪ್ರವೃತ್ತಾದಿ ಗ್ರಂಥಗಳಲ್ಲಿ ಬಳಿತ್ಥಾಸೂಕ್ತವು ವಾಯುಪರವೆಂದು ಹೇಳಲ್ಪಟ್ಟಿರುವಂತೆ, ಋಕ್ಸಂಹಿತಾದಿಗಳಲ್ಲಿ ವಾದಿರಾಜ ಗುರುಗಳಿಗೂ ಬಳಿತ್ಥಾಸೂಕ್ತ ಪ್ರತಿಪಾದ್ಯತ್ವವು ಸ್ಪಷ್ಟವಾಗಿದೆ. III 4 ಸ್ವಾ.ವೃಂ. ಆಖ್ಯಾನದಲ್ಲಿ "ನಗ್ರಹೋಥ ಬಲಿಗ್ರಹಃ" ಎಂದು ಚತುರ್ಮುಖಸಾಮ್ಯ ನಿರೂಪಿಸಿ ವಾದಿರಾಜಗುರುಗಳಿಗೂ ತೈತ್ತಿರೀಯಾದ್ಯುಕ್ತ ಅನಂತ ವಿಷ್ಣು ರೂಪಗಳ

ಉಪಾಸಕತ್ವವು ಉಕ್ತವಾಗಿದೆ. ವೃನ್ದಾವನ ಪ್ರವೇಶಾನಂತರ ಸ್ವಮಹಿಮಾ ಆವಿಷ್ಕಾರ, ಸ್ವಸ್ವರೂಪ ವರ್ಣನೆ ಮುಂತಾದವೂ ದೇವಕಾರ್ಯಾನುಸಾರ ವಾದಿರಾಜರಿಂದ ಕೃತವಾಗಿದೆ. ಬ್ರ.ಸೂ.ಭಾ. II 1-13 "ಯತ್ರಾನ್ಯ ವಾಚಕತ್ವೇಽಪ್ಯವಿರೋಧಸ್ತತ್ರಾನ್ಯದಪ್ಯಮುಖ್ಯತಯೋಚ್ಯತೇ ಇತಿ ನಿಯಮಃ" ಎಂದು ಹೇಳಲ್ಪಟ್ಟಿದೆ. ಕರ್ಮನಿರ್ಣಯ(ಪುಟ 253)ದಲ್ಲೂ "ವಾಚನಿಕಾ ನಾಂತು ಬಹುನಾಮಪ್ಯವಿರೋಧೇ ಸ್ವೀಕಾರ್ಯತಾ" ಎಂದಿದೆ. ಋಗ್ಭಾಷ್ಯದಲ್ಲೂ "ಪೂರ್ವಪ್ರಸಿದ್ಧ ವರ್ಜ೦ತು ಶಕ್ರಾಂತಾದೇವತಾ ಮತಾಃ" ಎಂದಿದೆ. ಲಾತವ್ಯಾದಿಗಳು "ದೇವತೆಗಳೇ ಅಲ್ಲ" ಎನ್ನಬಾರದು. ಮ.ತಾ.ನಿ. XXXII 81 "ಋಜುವೋನಾಮಯೇದೇವಾಃ ದೇವಾನಾಮಪಿ ದೇವತಾಃ" ಎಂದು ವಚನವಿದೆ. "ವೇದೇಷು ........ ಅಂಶಾ ಋಜೂನಾಂ ಸಂತ್ಯೇವ ....... ಏವಂ ಚತುರ್ದಶ ಮಹಾತಾರತಮ್ಯಾಃ" ಮುಂತಾದ ಪ್ರಕಾಶಸಂಹಿತಾ ಶ್ಲೋಕಗಳೂ ದೇವತ್ವದ್ಯೋತಕವೇ. ಕಿಂಚ ಅನುವ್ಯಾಖ್ಯಾನದಲ್ಲಿ III 1-3 "ಶಾಸ್ತ್ರೋಕ್ತ ವಸ್ತುನಶ್ಚೈವ ವ್ಯತ್ಪತ್ತಿ ಶಾಸ್ತ್ರ ಲಿಂಗತಃ" ಎಂಬ ಪ್ರಮಾಣದಿಂದಲೂ, "ಇತಿಹಾಸ ಪುರಾಣಾಭ್ಯಾಂ ವೇದಂ ಸಮುಪಬೃಂಹಯೇತ್ ........ .ವೇದಶ್ಚೇತಿಹಾಸಾದ್ಯವಿರೋದೇನ ಯೋಜ್ಯಃ" ಎಂಬ ಗೀತಾಭಾಷ್ಯ ಪ್ರಮಾಣದಿಂದಲೂ ಋಕ್ಸಂಹಿತೆಯ ಉಪಬೃಂಹಣವನ್ನನುಸರಿಸಿ ಬಳಿತ್ಥಾ ಶ್ರುತ್ಯರ್ಥ ತಿಳಿಯುವುದು ನ್ಯಾಯವೇ. "ತ್ರ್ಯರ್ಥತಾಂ ಶ್ರುತಿಷು" ಎಂದು ಮಧ್ವವಿಜಯಲ್ಲಿ ಶ್ರುತಿಗಳಿಗೆ ನಾಲ್ಕೈದು ಅರ್ಥ ನಿಷೇಧಮಾಡಿಲ್ಲವೇ ಎಂದರೆ ಶ್ರುತಿಗಳ ಅರ್ಥಗಳನ್ನು ಮೂರು ಗುಂಪಾಗಿ ವಿಭಾಗಿಸಬಹುದೆಂದು ಆ ಪ್ರಮಾಣದ ಅರ್ಥ; ವಿಷ್ಣು ರೂಪಗಳ ಪರವಾಗಿ ಒಂದು ಅರ್ಥ; ದೇವತಾ, ಕರ್ಮಾದಿ ಜಗತ್ಪರವಾಗಿ ಒಂದು ಅರ್ಥ; ಅಧ್ಯಾತ್ಮ ಪರವಾಗಿ ಒಂದರ್ಥ. ಹೀಗೆ ಅರ್ಥತ್ರಯ ತಿಳಿಯಬೇಕು. ಬಹು ಭಗವದ್ರೂಪ, ಬಹುದೇವತಾ, ಬಹು ಕರ್ಮಪರವಾಗಿ ಅರ್ಥಮಾಡುವಾಗ ಒಂದೊಂದು ಶ್ರುತಿಗೆ ನಾಲ್ಕೈದು ಅರ್ಥಗಳು ಪ್ರಾಪ್ತವಾದರೂ 'ತ್ರ್ಯರ್ಥತ್ವ' ಕ್ಕೆ ಭಂಗವಿಲ್ಲ. ಹರಿಪರ, ಜಗತ್ಪರ, ಅಧ್ಯಾತ್ಮಪರ ಎಂದು ವರ್ಗತ್ರಯ ಪರವಾಗಿ ಅರ್ಥಗಳು ವಿವಕ್ಷಿತವಾಗಿವೆ. ಅಂತೂ ಬಳಿತ್ಥಾಸೂಕ್ತವನ್ನು ಲಾತವ್ಯಾದಿ ಪರವಾಗಿ ವ್ಯಾಖ್ಯಾನಮಾಡಿದ್ದರಿಂದ ಪ್ರಮಾಣವಿರೋಧವಿಲ್ಲ.

ಕಿಂಚ ಛಾಂದೋಗ್ಯ ಭಾಷ್ಯದಲ್ಲಿ (IV 22) "ಯಸ್ಮಾದ್ವಾಯುಪದೇ ಯೋಗ್ಯಾಃ ಬಹಸ್ತಿಂದ್ರ ನಾಮಕಾಃ | ಅತ ಇಂದ್ರೇದದಾನೀತಿ ಸ್ಮೃತಿಃ ಪ್ರಾಣಸ್ಯ ಯುಜ್ಯತೇ" ಎಂದು ಪ್ರಮಾಣವಿದೆ. "ಐಶ್ವರ್ಯಾದಿಂದ್ರನಾಮಾಸೌ ವಾಯುಃ ಸ್ವರಪತಿಃ ಸದಾ" ಎಂದು ಅಲ್ಲೇ ವಚನಾಂತರವಿದೆ. ಆ ವಚನೋಕ್ತ ಯೋಗರೀತಿಯಿಂದ "ಮತಿ, ಪೃಕ್ಷ, ದಶಮತಿ" ಶಬ್ದಗಳು ಇತರ ಋಜುಗಳನ್ನು ಬೋಧಿಸುವುವು. III 3. ಬೃಹದ್ಭಾಷ್ಯದಲ್ಲೂ "ಪವಮಾನ" ಮುಂತಾದ ಶಬ್ದಗಳು ಸರ್ವಋಜು ಬೋಧಕಗಳೆಂದು ಉಕ್ತವಾಗಿದೆ. ತಸ್ಮಾದ್ವಾಯುತ್ವ ಯೋಗ್ಯೈಃ ಯೇಷಾಂ ಲೋಕಾಃ ಪ್ರಕೀರ್ತಿತಾಃ | ತೇಷಾಮಲೋಕ ಶಂಕಾ ಚ ನೈವಕಾರ್ಯಾ ಕದಾಚನ" ಎಂದು ಅಲ್ಲೇ ಸರ್ವ ಋಜುಗಳಿಗೂ ಅಮೋಘಾನುಗ್ರಾಹಕತ್ವರೂಪ ದೇವತ್ವವೂ ಪ್ರತಿಪಾದಿತವಾಗಿದೆ. ತ.ಪ್ರ. III 3-58ರಲ್ಲೂ "ಬ್ರಹ್ಮರುದ್ರಪದಾನಿ ಸ್ವಸಮಾನಾಮ... ಪಲಕ್ಷಕಾಣಿ" ಎಂದು ಹೇಳಿ "ತೇಷಾಂ ತದ್ಗುಣಿತ್ತ್ವಾ ದಿತಿ ಭಾವಃ" ಎಂದು ಯುಕ್ತ್ಯುಪನ್ಯಾಸ

ಮಾಟಲ್ಪಟ್ಟಿವೆ. ಅದರಿಂದಲೂ ಸರ್ವ ಋಜುಗಳಿಗೂ ಬಳಿತ್ಥಾ ಸೂಕ್ತಾದಿ ಪ್ರತಿಪಾದ್ಯತ್ವವು ಉಂಟೆಂದು ಸಿದ್ಧವಾಗುತ್ತೆ.

ಕಿಂಚ "ಉಭಯ ವಚನಾದಾದಿತ್ಯಾತ್ಸಮುದ್ರಾಚ್ಚಾ ವಿರೋಧಃ" ಎಂಬ IV ಗೀ. ಭಾಷ್ಯೋಕ್ತ ನ್ಯಾಯದಿಂದಲೂ ವಾಯುಪರವಾಗಿಯೂ, ಲಾತವ್ಯಪರವಾಗಿಯೂ ಸೂಕ್ತವನ್ನು ಯೋಜನೆ ಮಾಡಿದರೆ ಏನೂ ವಿರೋಧವಿಲ್ಲ. ಪೂರ್ವಪಕ್ಷಿಗಳು ಅನೃಜುತ್ವವನ್ನು ಊಹೆಯಿಂದಲೇ ನಂಬಿಕೊಂಡು ಮೇಲ್ಕಂಡ ಪ್ರಾಮಾಣಿಕ ನ್ಯಾಯಗಳನ್ನನುಸರಿಸಬಾರದು ಎಂದು ಹಠಮಾಡಿದರೆ ಅವರಿಗೆ ಅನ್ಯೋನ್ಯಾಶ್ರಯ ದೋಷ ತಪ್ಪಿದ್ದಲ್ಲ. ಪ್ರಮಿತ ಋಜುತ್ವದ ಅಪಲಾಪ ಪ್ರಸಂಗವೂ ತಪ್ಪಿದ್ದಲ್ಲ. ಅದರಿಂದ ದೃಷ್ಟಹಾನಿ ಎಂಬ ದೋಷ ಇದೆ. ಪ್ರಾಮಾಣ್ಯ ಪರತಸ್ತ್ವ ಮರ್ಯಾದೆಯಿಂದ ಚರ್ಚಿಸುವುದು ಯುಕ್ತವಲ್ಲ.

ಕಿಂಚ III 3-57 ತತ್ವಪ್ರಕಾಶಿಕೆಯಲ್ಲಿ "ಸಾಮ್ಯೇ ವಿದ್ಯಮಾನೇಸತಿ ಸಾಮ್ಯೋಪಾಸನಾ ಯುಕತ್ಯೈವ" (ಸಾಮ್ಯವಿದ್ದರೆ ಸಾಮ್ಯೋಪಾಸನೆಯನ್ನು ಮಾಡಬಹುದು) ಎಂದು ಅನುಮತಿಯು ಟೀಕಾಚಾರ್ಯರಿಂದ ಕೊಡಲ್ಪಟ್ಟಿದೆ. ತಂತ್ರಸಾರವಾಕ್ಯ "ಬಲಾಢ್ಯಂ ಭೃಗುಣಾದೃಷ್ಟಂ ಪ್ರಾಣಾಗ್ನಿಃ ಸೂಕ್ತ ಮುಚ್ಯತೇ" ಎಂಬಲ್ಲೂ, ಪ್ರಾಣಪದವು ಬ್ರಹ್ಮಾದಿ ಸರ್ವ ಋಜೂಪ ಲಕ್ಷಕವೇ. ಏವಂ ಚ ವಾದಿರಾಜಗುರುಗಳಿಗೆ ಪವಮಾನ, ಬಳಿತ್ಥಾದಿ ಸೂಕ್ತ ಪ್ರತಿಪಾದ್ಯತ್ವವು ಕೂಡುವುದಿಲ್ಲವೆನ್ನುವ ಮಾತು ಅಯುಕ್ತವೇ. ಸುಧಾ III 4-5 (ಪುಟ 585) "ಋಜೂಣಾಂ ಸಮತ್ವೇನ ಪ್ರಮಿತತ್ವಾತ್" ಎಂಬ ವಾಕ್ಯ ಬಲದಿಂದ ಆ ಸೂಕ್ತಾದಿ ಅನೇಕ ವೇದಪ್ರತಿಪಾದ್ಯತ್ವ ಸಾಮ್ಯವು ಲಾತವ್ಯಾದಿ ಎಲ್ಲಾ ಋಜುಗಳಿಗೂ ಅಂಗೀಕಾರ್ಯವೇ. [ಸಾಮ್ಯವಿದ್ದರೆ ನಮ್ಯನಮಕಭಾವ ಹೇಗೆ ಕೂಡುತ್ತೆ? ಶ್ರೀ ವಾದಿರಾಜರು ಪುನಃ ಪುನಃ ಹನುಮಪ್ಪನಿಗೆ ನಮಸ್ಕರಿಸಿದ್ದಾರಲ್ಲಾ ಎಂದರೆ ಶ್ರೀಮದಾಚಾರ್ಯರೇ ಉತ್ತರ ಪ್ರಕಾರವನ್ನು ದ್ವಾದಶ ಸ್ತೋತ್ರದಲ್ಲಿ ತೋರಿಸಿದ್ದಾರೆ: "ತತ್ಪಾದ ಪಂಕಜ ಮಹಾಸನತಾಮವಾಪ ಶರ್ವಾದಿ ವಂದ್ಯ ಚರಣೋ ಯದಪಾಂಗಲೇಶಂ| ಆಶ್ರಿತ್ಯ ನಾಗಪತಿರನ್ಯಸುರೈರ್ದರಾಪಾಂ ಶ್ರೀರ್ಯತ್ಕಟಾಕ್ಷ ಬಲವತ್ಯಜಿತಂ ನಮಾಮಿ" ಎಂದು ಸ್ತುತಿ ಇದೆ. ಇದರಿಂದ ಸಾಮ್ಯವಿದ್ದರೂ ಔಪಚಾರಿಕ ನಮಸ್ಕಾರಗಳೂ ಆಶೀರ್ವಾದಗಳೂ ಶಿವ-ಶೇಷರಿಗಿರುವಂತೆ ಲೋಕ ಸಂಗ್ರಹಾದಿ ವಿವಕ್ಷೆಯಿಂದ ಕರ್ತವ್ಯವೆಂದೇ ಸಿದ್ಧವಾಗುತ್ತೆ.]

ಅನುಮಾನ (v) :

ಪುಟ 7-7 ಉಕ್ತಿ:

"ವಾಗೀಶ ವ್ಯಾಸರಾಜಾದಿಗಳ ಶಿಷ್ಯತ್ವವೇ ಪ್ರಸಿದ್ಧವಾಗಿದೆ; ಕೇವಲ ವೇದವ್ಯಾಸರ ಶಿಷ್ಯತ್ವವಲ್ಲ. ನಂದೀಶ್ವರಾದಿ ನಮನ ಕಂಡಿದೆ. ವಿಷ್ಣುಭಿನ್ನ ದೇವತೆಗಳ ನಮಸ್ಕಾರಭಾವ ಕಂಡಿಲ್ಲ; ಮಹಾನಾಟಕ ಅಮರಾದಿ ಗ್ರಂಥೋದಾಹರಣ ಕಂಡಿದೆ; ಮೂಲ ಸಚ್ಛಾಸ್ತ್ರಗಳಿಂದಲೇ ಪ್ರಮಾಣೋದಾಹರಣ ನಿಯಮ ಕಂಡಿಲ್ಲ. ಇವೆಲ್ಲಾ ಋಜುತ್ವ ಸಾಧನೆಗೆ ವಿರುದ್ಧವೇ" ಎಂದು.

ಪ್ರತ್ಯುಕ್ತಿ: ಧರ್ಮಾದೀನಿ ವಾ ಅನುಮಾನಾದಿಭಿರ್ನಪ್ರಮೀಯಂತೇ ತದಗೋಚರತ್ವಾತ್ ........ ನಾಪ್ಯನುಮಾನಂ ತತ್ಪ್ರತಿಬದ್ಧ ಲಿಂಗಾಭಾವಾತ್" ಇತ್ಯಾದಿ ತ.ನಿ.ಟೀಕಾ (ಪುಟ 233) ರೀತಿಯಿಂದ ವೇದ ಪ್ರಮಾಣವಿಲ್ಲದೆ ಇತರ ಪ್ರಮಾಣಗಳಿಂದ ಸಾಧಿಸಲು ಅನರ್ಹವಾದ ಅತೀಂದ್ರಿಯ ವಸ್ತು ವಾದಿರಾಜ ಋಜುತ್ವ; ಭೀಮಾದಿಗಳ ವಾಯುತ್ವವೂ ಹೀಗೇ. ಬಳಿತ್ಥಾ ಸೂಕ್ತಾದಿ ವೇದ, ಬ್ರಹ್ಮಾಂಡಾದಿಪುರಾಣ, ವೇದಾನುಸಾರಿ ಮತ್ತು ವೇದಾವಿರುದ್ಧ ಆಖ್ಯಾನಾದಿಗಳಿಂದ ಸಿದ್ಧವಾದ ವಾದಿರಾಜ ಲಾತವ್ಯತ್ವವನ್ನು ಮೇಲ್ಕಂಡ ಸಾವಕಾಶಲಿಂಗಗಳು ಬಾಧಿಸಲು ಸಮರ್ಥವಲ್ಲ. ಉಪಜೀವ್ಯಾಗಮ ವಿರುದ್ಧವಾದ ಪ್ರತ್ಯಕ್ಷ ಮತ್ತು ಅನುಮಾನಗಳು, ಆಗಮ ಮತ್ತು ಆಗಮಾನುಸಾರಿ ಪ್ರಮಾಣ ಸಿದ್ಧತತ್ವಗಳನ್ನು ಬಾಧಿಸಲು ಸಮರ್ಥವಲ್ಲ. ಆ ಪ್ರತ್ಯಕ್ಷಾನುಮಾನಗಳೇ ಬಾಧಿತವಾಗುತ್ತವೆ. ಕಿಂಚ ಸತ್ಯಲೋಕದಲ್ಲಿ ಈಶ್ವರೈಕ ಶಿಷ್ಯತ್ವ, ಲಕ್ಷ್ಮೀದೇವಿಯನ್ನು ಮಾತ್ರವೇ ತಾಯಿಯೆಂದು ವಂದಿಸುವುದು, ಭೌತಿಕಾನ್ನ ರಹಿತತ್ವ, ಕೇವಲ ಲಕ್ಷ್ಮೀನಾರಾಯಣರಿಗೆ ನಮಸ್ಕಾರ, ವೇದಪಂಚರಾತ್ರಾದಿ ಸ್ವತಃ ಪ್ರಮಾಣಗ್ರಂಥಗಳಿಂದಲೇ ಜಿಜ್ಞಾಸೆ; ಶ್ರೀಹರಿಕೃತ ಸಂಹಿತೆಗಳಿಂದಲೇ ವ್ಯವಹಾರ ಇತ್ಯಾದಿ ಸರ್ವವೂ ಪ್ರಮಿತವಾಗಿದೆ. ಆದರೆ ಅವತಾರ ಕಾಲಗಳಲ್ಲಿ ಭಗವದಾಜ್ಞಾನುಸಾರವಾಗಿ ಅಯೋಗ್ಯಾಪಕ್ವ ಜನರಿಗೆ ಮೋಹಕವಾಗುವಂತೆ ವರ್ತಿಸಬೇಕು; ಏಕಾಂತದಲ್ಲಿಯೇ ಭಕ್ತ ಜನೋದ್ಧಾರ ಮಾಡಬೇಕು; ದೇವ ಕಾರ್ಯಾನುಸಾರ ಸ್ವರೂಪ ಸಾಮರ್ಥ್ಯವನ್ನು ವ್ಯಕ್ತಮಾಡಬೇಕು; ಪ್ರಾಯಿಕವಾಗಿ 'ಮಾನುಷ ಸ್ವಭಾವ' ಪ್ರಕಟಿಸಬೇಕು; ಹೀಗೆ ದೇವತೆಗಳಿಗೆ ನಿಯಮವಿದೆ. ಆದ್ದರಿಂದಲೇ ಋಜುದೇವತೆಯಾದ ದ್ರೌಪದಿಯು ರುದ್ರೋಪಾಸನೆ ಮಾಡಿ ವರ ಪಡೆದಳೆಂದು XVIII 118 ನಿರ್ಣಯದ ಕಥೆ ಹಿಂದೆ ಹೇಳಲಾಯಿತು. ಭೀಮನೂ ಶಾಕ್ತೇಯ ಚಾರ್ವಾಕಾದಿಗಳ ಗ್ರಂಥಸ್ಥವಾಕ್ಯಗಳನ್ನು ಉದಾಹರಿಸಿ ಜರಾಸಂಧಾದಿಗಳನ್ನು ಗೆದ್ದಿದ್ದಾನೆ. ಸಮುದ್ರಲಂಘನ ಕಾಲದಲ್ಲಿ ದಿಕ್ಪಾಲರಿಗೆ ಹನುಮಂತನು ನಮಿಸಿದ್ದಾನೆ. ಕೃಪ, ದ್ರೋಣ, ಧೌಮ್ಯಾದಿ ಶಿಷ್ಯತ್ವ ಹೊಂದಿ, ಕುಬೇರ, ನಾರದಾದಿಗಳಿಗೆ ಭೀಮಸೇನನು ನಮಸ್ಕರಿಸಿದ್ದಾನೆ. ಭಾರತ ಯುದ್ಧಾನಂತರ ಧೃತರಾಷ್ಟ್ರನಿಗೂ ನಮಸ್ಕರಿಸಿದ್ದು ಪ್ರಸಿದ್ಧವಾಗಿದೆ. ಮಧ್ವಗುರುಗಳೂ ಹರ, ಸೇತುಲಿಂಗಾದಿಗಳಿಗೆ ನಮಸ್ಕರಿಸಿದ್ದಾರೆ. (ಮ.ವಿ. V 42 VI 23) ಅಚ್ಯುತ ಪ್ರೇಕ್ಷಾಚಾರ್ಯಾದಿ ಗುರುಗಳನ್ನು ವರ್ಷಾಕಾಲ ಉಪಸತ್ತಿ ಮಾಡಿದ್ದಾರೆ; ಅದ್ವೈತಭಾಷ್ಯಾದಿಗಳನ್ನು ಪ್ರವಚನ ಮಾಡಿದ್ದಾರೆ. ಲೋಕಮರ್ಯಾದಾನುಸಾರಿ ಅವತಾರ ಕಾರ್ಯಗಳಿಂದ ಋಜುತ್ವವಾಗಲಿ, ಅನೃಜುತ್ವವಾಗಲೀ ಆಗಮಸಹಾಯವಿಲ್ಲದೆ ನಿಶ್ಚಿತವಾಗುವುದಿಲ್ಲ. ಬೃ.ಭಾ. VIII 2 ರಲ್ಲೂ ಪ್ರಮಾಣವಿದೆ. 'ನೀಚಾದಪ್ಯುತ್ತಮಾ ಜ್ಞಾನಂ' ಎಂಬ ವಾಕ್ಯ ಅ. 13 ಆರಂಭದಲ್ಲಿ ಉದಾಹೃತವಾಗಿದೆ. ಆದ್ದರಿಂದ ಪೂರ್ವಪಕ್ಷದವರಿಗೆ ಅನ್ಯೋನ್ಯಾಶ್ರಯ ದೋಷ ತಪ್ಪಿದ್ದಲ್ಲ. "ಅನೃಜುತ್ವ ಪ್ರಮಾಣ ಸಿದ್ಧವಾದರೆ, ವ್ಯಾಸರಾಜ ಶಿಷ್ಯತ್ವಾದಿ ವ್ಯಾಪಾರಗಳು ಋಜುತ್ವ ವಿರುದ್ಧವಾಗುತ್ತವೆ; ವ್ಯಾಪಾರಗಳು ಭಗವದಾಜ್ಞಾನುಸಾರಿಯಾಗಿದ್ದರೂ ಋಜುತ್ವ ವಿರೋಧ ಎಂದು ಒಪ್ಪಿದರೇ, ಅನೃಜುತ್ವ ಸಿದ್ಧವಾಗುತ್ತೆ. ಬೇರೆ ಪ್ರಮಾಣವಿಲ್ಲ'. ಹೀಗೆ ಅನ್ಯೋನ್ಯಾಶ್ರಯ ಬರುವುದರಿಂದ ಆಗಮಿಸಿದ್ಧ ಜ್ಞಾನಾದಿ ಸಾಮ್ಯವೇ ಅಂಗೀಕರಿಸಲ್ಪಡಬೇಕು. ಋಜುಗಳು ಸ್ವೇಚ್ಛಾನಿಯತರು ಎಂದು ಪ್ರಮಾಣ ಕೊಟ್ಟಿದೆ. ಆದ್ದರಿಂದಲೇ

ಹನುಮಂತನ ಅಪೇಕ್ಷೆಯಿಂದ ಭೀಮನು ದುರ್ಬಲನು; ಭೀಮನದೆಸೆಯಿಂದ ಮಧ್ವರು ದುರ್ಬಲರು; ಅವರ ದೆಸೆಯಿಂದ ವಾದಿರಾಜರು ದುರ್ಬಲರಂತೆ ಕಾಣಿಸಿಕೊಂಡಿದ್ದಾರೆ. ಆಗಮೈಕ ವೇದ್ಯವಿಷಯವಲ್ಲಿ ಲೌಕಿಕ ಪ್ರತ್ಯಕ್ಷವು ಜಘನ್ಯ ಪ್ರಮಾಣವು; ತದನುಸಾರಿ ಯುಕ್ತಿಯಿಂದ ಖಂಡನೆಯು ವ್ಯರ್ಥವೇ. ಏಕೆಂದರೆ ಆ ಪ್ರತ್ಯಕ್ಷ ಯುಕ್ತಿಗಳೆರಡೂ ಆಗಮ ಬಾಧಿತಗಳಾಗುತ್ತವೆ.

ಅನುಮಾನ (VI):

ಪುಟ 7-10 ಉಕ್ತಿ:

"ವಾದಿರಾಜಕೃತ ವಾದಿಜಯವಾದರೋ ಅಕ್ಷೋಭ್ಯತೀರ್ಥ, ಜಯತೀರ್ಥ, ವ್ಯಾಸಾರ್ಯಾದಿಗಳಲ್ಲಿ ವ್ಯಭಿಚರಿತವಾಗಿದೆ." ಇತಿ.

ಪ್ರತ್ಯುಕ್ತಿ: ಇದೆಲ್ಲಾ ಸುಳ್ಳು. ಇತಿಹಾಸ ವಿರುದ್ಧವೇ. ಈ ವಿಷಯದಲ್ಲಿ ಅ. 4 ಪುಟ 52 ರಲ್ಲಿ ಅನೇಕ ವಚನಗಳನ್ನು ಕೊಡಲಾಗಿದೆ. ವಾದಿರಾಜರ ಕಾಲಕ್ಕೆ ಹಿಂದಿದ್ದವರ ಸಂಗಡ ವಾದಿರಾಜರನ್ನು ಹೋಲಿಸಬಾರದು. ಸಮಕಾಲಿಕರಾದ ಶ್ರೀ ವ್ಯಾಸತೀರ್ಥರು, 1595ರಲ್ಲಿ ವೃನ್ದಾವನಸ್ಥರಾದ ವಿಜಯೀಂದ್ರತೀರ್ಥರು, ಶ್ರೀ ರಘೂತ್ತಮತೀರ್ಥರು, ಇಂಥವರೊಂದಿಗೆ ಹೋಲಿಸಬಹುದು, ಶ್ರೀ ವಾದಿರಾಜಗುರುಗಳು ಸರ್ವ ಭರತಖಂಡವನ್ನೂ ಎರಡು ಮೂರಾವರ್ತಿ ಪಾದಯಾತ್ರೆ ಕ್ರಮದಿಂದ ಸಂಚರಿಸಿದ್ದಾರೆ. ಕಾಶಿಯಲ್ಲಿ ಕೂಡ ವಾದಮಾಡಿ ಜಯಸೂಚಕ ಶಿಷ್ಯರನ್ನು ಪಡೆದಿದ್ದಾರೆ. ಗುಜರಾತ್ ದೇಶದಲ್ಲೂ ಇವರ ಮುದ್ರಾಂಕಿತ ಶಿಷ್ಯರಾದರು. ಅನೇಕ ವಾದಗಳಲ್ಲಿ ದ್ವೈತ ಸಿದ್ಧಾಂತದ ಉತ್ಕರ್ಷವನ್ನು ಸ್ಥಾಪಿಸಿ ಶ್ರೀ ವಾದಿರಾಜಮುನಿಗಳು ಮೆರೆದರೆಂದು ಶ್ರೀ ವ್ಯಾಸತೀರ್ಥಕೃತ ಪದ್ಯವೇ ಹೇಳುತ್ತೆ. ನಿಜ ಪುರಂದರ ವಿಠಲಕೃತ ಪದ್ಯವೂ, ವಾ.ಗು.ಚ. VI 17-32 ಶ್ಲೋಕಗಳು, ಮತ್ತು ಅನೇಕ ವೃತ್ತರತ್ನ ಸಂಗ್ರಹ ಶ್ಲೋಕಗಳೂ ಪ್ರಮಾಣಗಳು.

ಕಿಂಚ ವಾದಿಜಯ ಸಾಮರ್ಥವು ಉತ್ಕರ್ಷ ನಿಶ್ಚಾಯಕವು; ಬಾಹ್ಯ ಜಯವಲ್ಲ. ಏಕೆಂದರೆ ಪ್ರತಿವಾದಿಗಳೇ ಇಲ್ಲದಿದ್ದರೆ ಜಯಪತ್ರಿಕಾ ಪ್ರಾಪ್ತಿ ಹೇಗೆ ತೋರಿಸಲಾಗುತ್ತೆ? ಅರ್ಜುನನು ಜಯಿಸಿದ ಪ್ರತಿ ಯೋಧರು ಹೆಚ್ಚೆಂಬ ಮಾತ್ರಕ್ಕೆ ಅವನು ಅಶ್ವತ್ಥಾಮರ ದೆಸೆಯಿಂದ ಅಧಿಕನಾಗುವುದಿಲ್ಲ. ಹೀಗೆ ಅಕೋಭ್ಯತೀರ್ಥರೂ, ಜಯತೀರ್ಥರೂ ವಿದ್ಯಾರಣ್ಯರನ್ನು ಗೆದ್ದರೆಂದು ಪ್ರತೀತಿ ಇದೆ. ಆದರೆ ವಿದ್ಯಾರಣ್ಯರು ದ್ವೈತ ತತ್ವವನ್ನು ಒಪ್ಪಿ ಮಾಧ್ವ ಶಿಷ್ಯರಾಗಲಿಲ್ಲ ಮತ್ತು ಅವರಿಬ್ಬರೂ ದೇಶದೇಶಕ್ಕೆ ಸಂಚರಿಸಿ ಅಲ್ಲಲ್ಲಿ ಜಯಹೊಂದಿ ಶಿಷ್ಯವೃದ್ಧಿ ಮಾಡಿಕೊಂಡರೆಂದು ಶ್ರುತವಾಗಿಲ್ಲ. ಶ್ರೀ ವ್ಯಾಸತೀರ್ಥರಿಗೆ ಅಂಥ ಕೆಲವು ಅವಕಾಶ ಸಿಕ್ಕಿತು. ಆವೇಶ ವಿವಕ್ಷೆಯಿಂದ ಭಗವಾನ್ ವ್ಯಾಸದೇವರೇ ಅಥವಾ ವಾಯುದೇವರೇ ವ್ಯಾಸತೀರ್ಥರೆಂದು ಹೇಳಬಹುದು. ಆದ್ದರಿಂದ ಅನೇಕ ಸನ್ಯಾಸಿಗಳಿಗೆ ಉದ್ಧಾಮ ಗ್ರಂಥಗಳ ಪಾಠ ಹೇಳಿದರು. ತಮ್ಮ ಸಂಚಾರದಲ್ಲಿ ಒದಗಿ ಬಂದ ಪ್ರತಿವಾದಿಗಳನ್ನು ಜಯಿಸಿ ಕೆಲವರನ್ನು ಶಿಷ್ಯರನ್ನಾಗಿಯೂ ಮಾಡಿಕೊಂಡರು. ಇವರೆಲ್ಲರಿಗಿಂತಲೂ ಅಧಿಕವಾಗಿಯೇ ಅವಕಾಶ ಶ್ರೀ ವಾದಿರಾಜಗುರುಗಳಿಗೆ ಒದಗಿತು. ಅವರು ಸೋಲಿಸಿದಷ್ಟು ಪ್ರತಿವಾದಿಗಳು, ಸಂಪಾದಿಸಿದಷ್ಟು ದ್ರವ್ಯ ಬಿರುದಾವಳಿಗಳು, ದಾನಧರ್ಮಮಾಡಿದ ಸಂಪತ್ತುಗಳು,

ಸಂಚರಿತವಾದ ತೀರ್ಥಾದಿಗಳು, ಚಕ್ರವರ್ತಿಗಳ ಅಂತಸ್ತಿಗೆ ಮೀರಿದ್ದು. ಕಾಶೀ, ಗುಜರಾತ್, ಮಹಾರಾಷ್ಟ್ರಾದಿ ದೇಶಗಳಲ್ಲಿ ಅನೇಕರು ನಾದದಲ್ಲಿ ಪರಾಭವ ಹೊಂದಿ ವೈಷ್ಣವರಾದರೆಂದು ಐತಿಹ್ಯವಿದೆ. ಕನಕದಾಸರಿಗೂ ಅವರೇ ಮುದ್ರಾಧಾರಣೆ ಮಾಡಿದರೆಂದು ತತ್ವವಾದದಲ್ಲಿದೆ. ಈಗಿನ ಶ್ರೀ ವ್ಯಾಸರಾಜ ಮಠೀಯ ಸ್ವಾಮಿಗಳೂ, ಸೋದೆ ಮಠದ ಸ್ವಾಮಿಗಳೂ ಅಲ್ಲಿಗೆ ಹೋಗಿ ತಮ್ಮ ಶಿಷ್ಯವರ್ಗವನ್ನು ಪ್ರತ್ಯಭಿಜ್ಞಾನದಿಂದ ನಿಶ್ಚಯಿಸಿದರೆ ಸಂಖ್ಯೆ ಗೊತ್ತಾಗುತ್ತೆ. ಇಷ್ಟು ಜನರೆಂದು ತಿಳಿಯಲಾಗದಿದ್ದರೂ ಇದು ತತ್ವವೇ. ಶ್ರೀ ವಾದಿರಾಜರ ಚಟುವಟಿಕೆಗೆ ಉಡುಪಿ ಶ್ರೀಕೃಷ್ಣ ಮಠ, ಅಷ್ಟಮಠಗಳು, ಮಧ್ವಸರೋವರ ಮುಂತಾದುವು, ಸೋದೆಮಠಕ್ಕೆ ಸೇರಿದ ಕೋಟೇಶ್ವರದ ಜನರು, ಸೋದೆಯ ದೇವಸ್ಥಾನಾದಿಗಳು, ಅಷ್ಟಮಠಗಳ ಹಯಗ್ರೀವಪ್ರತಿಮೆ ಮುಂತಾದ ಅನಂತ ನಿದರ್ಶನಗಳಿವೆ. ಅವರು ಸಂಚರಿಸಿದಷ್ಟು ದೇಶ, ಅವರು ಮಾಡಿದಷ್ಟು ವಾದ, ಪರವಾದಿ ಮರ್ದನಾದಿಗಳು, ಅನ್ಯರಿಂದ ನಡೆದಿಲ್ಲ. ಅರಸಪ್ಪನಾಯಕನ ಸಭೆಯಲ್ಲಿ ನಡೆದ ಕಾರ್ಯವೇ ಆಶ್ಚರ್ಯಕರ ನಿದರ್ಶನ. ಪುಣೆಯಲ್ಲಿ, ಕಾಶಿಯಲ್ಲಿ, ವಿಜಯನಗರದ ರಾಜ್ಯಸಭೆಯಲ್ಲಿ ಮತ್ತು ಬ್ರಹ್ಮರಾಕ್ಷಸನಾಗಿದ್ದ ಭೂತರಾಜನ ಸಂಗಡ ಸಹ ನಿರ್ಭೀತತನದಿಂದ ವಾದಮಾಡಿದ ಪ್ರಚಂಡ ಪರಾಕ್ರಮ ಅವರದು. "ನಭಃ ಪತಂತ್ಯಾತ್ಮ ಸಮಂ ಪತತ್ರಿಣ" ಎಂದು ಭಾಗವತ ವಚನವಿದೆ. ಇಷ್ಟು ವಾದಿಜಯಾದಿ ವೈಭವ ಮಧ್ವಗುರುಗಳಾದ ಮೇಲೆ ಇನ್ನಾವ ಯತಿಗಳ ಕಾಲದಲ್ಲೂ ಕಂಡಿಲ್ಲವೆಂದು ಪ್ರತ್ಯಕ್ಷದರ್ಶಿಯ ಕಾವ್ಯವಿದೆ. ಸಂಪಾದಿಸಿದ ಬಿರುದಾವಳಿಗಳಿಂದ ಒಂದು ಕೋಶವನ್ನೇ ಭರ್ತಿಮಾಡಬಹುದೆಂದು ತೋರುತ್ತೆ. **III 44** ವಾ.ಗು.ಚ. ಸಹ ಅದನ್ನೇ ಹೇಳುತ್ತೆ. ಇನ್ನೂ ಕೆಲವು ಶ್ಲೋಕ **20** ಮತ್ತು **23** ಪ್ರಕರಣಗಳಲ್ಲಿ ಉದಾಹೃತವಾಗುತ್ತವೆ. ಮುಖ್ಯ ಸಾರಾಂಶವೇನೆಂದರೆ ಬಾಹ್ಯವಾದಿ ಜಯಾದಿಗಳು ಬ್ರಾಹ್ಮಣನಿಗೆ ಸ್ವರೂಪಾಧಿಕ್ಯ ಸೂಚಕವಾದರೂ, ಅದು ನಿಯತವಾಗಿ ಕಾಣಲ್ಪಡತಕ್ಕ ಲಿಂಗವಲ್ಲ. ದುರ್ವಾದಿ ಪ್ರತಿಭಟನೆ ಇಲ್ಲದಿದ್ದರೆ ಜಯದರ್ಶನ ಸಾಧ್ಯವಿಲ್ಲ. ಹಾಗಿದ್ದರೂ ಶ್ರೀ ವಾದಿರಾಜರ ವಾದಿಜಯ ಎಲ್ಲರಿಗಿಂತಲೂ ಹೆಚ್ಚೆಂದು ಕಾಣುವಂತೆಯೇ ಶ್ರೀಹರಿ ಕರುಣಿಸಿದ್ದಾನೆ. ಮಹಾ ಪ್ರಬಲ ವೈರಿಗಳನ್ನೇ ಉರುಳಿಸಿ ಮೆರೆದಿದ್ದಾರೆ. ಗೌಡಗೆರೆ ಆಚಾರ್ಯರ ನಿಶ್ಚಯವು **133** ನೇ ಪುಟದಲ್ಲಿ ನಿರೂಪಿತವಾಗಿದೆ.

ಅನುಮಾನ (VII) :

ಪುಟ 7-12 ಉಕ್ತಿ:

"ಸಶರೀರವಾಗಿಯೇ ಅಂತರ್ಧಾನವು ವಾದಿರಾಜ ಗುರುಗಳಲ್ಲಿ ಅಶ್ರುತವೇ." ಪ್ರತ್ಯುಕ್ತಿ: ಹೌದು. ಹನುಮಂತನಲ್ಲೂ ಭೀಮನಲ್ಲೂ ಕೂಡ ಸಶರೀರ ಅಂತರ್ಧಾನವು ಅಶೃತವಾದಂತೆ ವಾದಿರಾಜಗುರುಗಳಲ್ಲೂ ಅಶ್ರುತವೇ. ಮಧ್ವ ಗುರುಗಳೂ ಕೂಡ ಕ್ರಿಸ್ತಾಬ್ಬ **1317** ಮಾಘ ಶುದ್ಧ ನವಮಿಯಲ್ಲಿ ಮಾತ್ರ ಆ ಶಕ್ತಿ ತೋರಿಸಿದರು. ಅಂತರ್ಧಾನ ಶಕ್ತಿಯುಳ್ಳವರು ಋಜು ಎಂದು ವ್ಯಾಪ್ತಿ ಇಲ್ಲ. ಪಿಶಾಚ ಮತ್ತು ದೇವ ದೈತ್ಯರೆಲ್ಲಾ ಋಜುಗಳೆಂದು ಒಪ್ಪಬೇಕಾಗುತ್ತೆ. ಋಜುಗಳೆಂದ ಮೇಲೆ ಅಂತರ್ಧಾನಶಕ್ತಿ ಇದ್ದೇ ಇರುತ್ತೆ. ಅಣಿಮಾದಿ ಸಿದ್ಧಿಗಳು ಗುರುರಾಜರಲ್ಲಿ ಪೂರ್ಣವಾಗಿದ್ದವೆಂದು ಆಖ್ಯಾನ ಶ್ಲೋಕಗಳಿವೆ. **(IX 31-34)**

| ಅನುಮಾನ (viii) : |
|---|
| ಪುಟ 7-13 ಉಕ್ತಿ : |
| “ಸಶರೀರ ವೃನ್ದಾವನ ಪ್ರವೇಶ ರಾಘವೇಂದ್ರ ಸ್ವಾಮಿಗಳಲ್ಲೂ ಶ್ರುತವಾಗಿದೆ”. |
| ಪ್ರತ್ಯುಕ್ತಿ: ಹೌದು. ವಾಯುದೇವರ ಆವೇಶದ ದೆಸೆಯಿಂದ, ಜನ್ಮಾಂತರೀಯ ಋಜ್ವಾದಿ ಸಂಗಬಲದಿಂದಲೂ, ಸರ್ವ ಮಹಿಮೆಯು ಶ್ರೀರಾಘವೇಂದ್ರಸ್ವಾಮಿಗಳಲ್ಲಿ ಸಂಭಾವಿತವೇ. ಆ ವಿವಕ್ಷೆಯಿಂದಲೇ 'ಪ್ರಿಯವ್ರತ ಕೃತಂ ಕರ್ಮ ಕೊನುಕುರ್ಯಾದ್ವಿನೇಶ್ವರಂ' ಎಂದು ಪ್ರಿಯವ್ರತನ ವಿಷಯದಲ್ಲಿ ಭಾಗವತೋಕ್ತಿ ಇದೆ. “ನಹಿ ಪಕ್ಷೇ ಪಕ್ಷಸಮೇವಾ ವ್ಯಭಿಚಾರ ಚೋದನಾ” ಎಂದು ನ್ಯಾಯವಿದೆ. ಅಚಿಂತ್ಯಮಹಿಮೆ ಶ್ರೀರಾಘವೇಂದ್ರ ಸ್ವಾಮಿಗಳಲ್ಲಿ ಪ್ರಮಿತವಾದ ಮಾತ್ರಕ್ಕೆ ಸಾಕ್ಷದೃಜುದೇವತೆಯಾದ ವಾದಿರಾಜಗುರುಗಳಿಗೆ ನ್ಯೂನತೆ ಏನೂ ಇಲ್ಲ. ಇಬ್ಬರೂ ದೊಡ್ಡವರು, ಒಬ್ಬರು ಸ್ವಾಭಾವಿಕ ಋಜುಗಳು, ಇನ್ನೊಬ್ಬರು ಔಪಾಧಿಕವಾಗಿ ಋಜು ಸದೃಶರೆಂದು ತಿಳಿದರೆ ವಿರೋಧವೇನು? ಅಷ್ಟಾದರೂ ಗುರುರಾಘವೇಂದ್ರರ ಮಹಿಮೆಯು ವಾದಿರಾಜ ಗುರುಗಳು ಅನೃಜು ಎಂದು ಸಾಧಿಸುವುದರಲ್ಲಿ ಪ್ರಮಾಣವಾಗುವುದಿಲ್ಲ. |
| ಅನುಮಾನ (ix) : |
| ಪುಟ 7-14 ಉಕ್ತಿ: |
| “ಹೀಗೆ ಅಸಿದ್ಧವೇ ವಾದಿರಾಜ ಮುನಿಗಳ ಮಧ್ವಜೀವನ ಸದೃಶ ಚರಿತ್ರಕತ್ವ”. ಪ್ರತ್ಯುಕ್ತಿ: ಪೂರ್ವಪಕ್ಷಿಗಳಿಂದ ವಿವಕ್ಷಿತವಾದ ಸಾದೃಶ್ಯ ಹೇತುವು ಅಪ್ರಯೋಜಕ. ಏಕೆಂದರೆ ಅಂಥ ಮಧ್ವಸಾದೃಶ್ಯವು ಭೀಮಸೇನನಿಗೂ ಬರುವುದಿಲ್ಲ; ಹನುಮಂತನಿಗೂ ಬರುವುದಿಲ್ಲ. ಅವರಿಬ್ಬರೂ ಭಿನ್ನಕಾಲ, ದೇಶ, ಕುಲಗಳಲ್ಲಿ ಭಿನ್ನ ಚೇಷ್ಟಾಯುಕ್ತರಾಗಿ ಸ್ವಾವತಾರಕಾರ್ಯ ನೆರವೇರಿಸಿದ್ದಾರೆ. ಆದ್ದರಿಂದ ಚರಿತ್ರಸಾದೃಶ್ಯವು ಸರಿಯಾದ ಋಜುತ್ವಹೇತುವಲ್ಲ. ಮತ್ತೇನೆಂದರೆ ಮಧ್ವಾಚಾರ್ಯರಂತೆ ಶಕ್ತಿ, ಜ್ಞಾನ, ಬಲ, ತಪಸ್ಸು, ಅಚ್ಛಿನ್ನ ಭಕ್ತಿ, ಸ್ವೇಚ್ಛಾ ನಿಯತತ್ವಾದಿ ಸಾದೃಶ್ಯ ಉಳ್ಳತನವೇ ಸರಿಯಾದ ಹೇತು. ಅದು ಅಸಿದ್ಧವಲ್ಲ. ಋಕ್ಸಂಹಿತಾ, ಆಖ್ಯಾನಾದಿ ಆಗಮ ಪ್ರಮಿತವಾಗಿದೆ. ವಾ.ಗು.ಚ. VI 56-58 ವೃತ್ತರತ್ನ ಸಂಗ್ರಹಾದಿಗಳಲ್ಲಿ ನಿರೂಪಿತವಾಗಿದೆ. ವಾದಿರಾಜ ಗುರುಗಳ ಶಾರೀರ ಬಲವೂ ಅನ್ಯಾದೃಶವೆಂದು ಶಿಲಾಭೇದನಾದಿ ಕಾರ್ಯಗಳಲ್ಲಿ ಕಂಡಿದೆ. (ವಾ.ಗು.ಚ. VI 36-38) ಹಾಗೆಯೇ ಷಾಣ್ಮಾಸಿಕ ಉಪೋಷಣಾದಿ ತಪೋಬಲ; ದುರ್ಗಮಸ್ಥಳಸ್ಥ ವಿಷ್ಣು ತೀರ್ಥರ ದರ್ಶನ; ಊರ್ಧ್ವಬದರೀ ಯಾತ್ರೆ; ಭೂತರಾಜರ ವಶೀಕರಣ ಮುಂತಾದುವೆಲ್ಲಾ ಅನ್ಯಾದೃಶವೇ. ಮಂತ್ರಸಿದ್ಧಿಯೂ ಅವರ್ಣನೀಯವೇ. ಯುಕ್ತಿಮಲ್ಲಿಕಾ, ರಗ್ಮಿಣೀಶ ವಿಜಯಾದಿ ಗ್ರಂಥಗಳೂ ಅಸದೃಶವೇ. ಇವರ ಚರಿತ್ರೆ ಶ್ರವಣ ಮಾಡಿದರೆ ಮಧ್ವಗುರುಗಳ ಮಹಾ ಶಕ್ತಿಯೇ ಸ್ಮೃತಿಪಥಕ್ಕೆ ಬರುತ್ತೆ. ಈ ರೀತಿಯ ಸಾದೃಶ್ಯವು ಋಜುತ್ವ ಸಂಭಾವಕವೇ. ಪೂರ್ವಪಕ್ಷಿಗಳು ಉಪನ್ಯಾಸಮಾಡಿದ್ದು ವಾಕ್ಯಸಹಾಯ ಹೀನ ಶುಷ್ಕಾನುಮಾನ, ಅದು ಅಸಾಧಕವೇ ಆಗುತ್ತೆ. ಋಜುತ್ವ ಭಂಜಕವಲ್ಲ. |

## 11. ದ್ವಿತೀಯಾನುಮಾನ :

### ಪುಟ 7-15 ಉಕ್ತಿ:

"ಋಜುತ್ವವು ನಿತ್ಯಾತೀಂದ್ರಿಯವಾದ್ದರಿಂದ, ತದ್ಗಮಕಾನುಮಾನಗಳಿಗೆ ಆಗಮ ಮೂಲತ್ವದಿಂದಲೇ ಸಿದ್ಧಿಯಾಗ ಬೇಕು; ಋಜುತ್ವವಾದಿಗಳಿಂದ ಉದಾಹರಿಸಲ್ಪಡುವವುಗಳಿಗೆ ಅನುಗ್ರಾಹಕಾಗಮವಿಲ್ಲದ್ದರಿಂದ ಆ ಅನುಮಾನಗಳಿಂದ ಋಜುತ್ವ ಸಿದ್ಧಿಯಾಗುವುದಿಲ್ಲ."

**ಪ್ರತ್ಯುಕ್ತಿ :**

ಈ ಮೇಲ್ಕಂಡ ವಾಕ್ಯವನ್ನು ಅನೃಜುತ್ವ ಪಕ್ಷಕ್ಕೆ ಹಿಂತಿರುಗಿಸ ಬಹುದು. ಆಗಮಹೀನವಾದ ಅನೃಜುತ್ವ ಪಕ್ಷವು ಕೆಟ್ಟ ಅನುಮಾನಗಳಿಂದ ಏನನ್ನು ಸಾಧಿಸಬಲ್ಲದು? ಆದ್ದರಿಂದ ಅದು ಸುಳ್ಳು ಮತ. ಕಿಂಚ ಋಜುತ್ವವು ಅತೀಂದ್ರಿಯವೆಂಬುದು ಸತ್ಯವೇ. ಆದರೆ ಅದನ್ನು ಪೂರ್ವಪಕ್ಷದವರು ಸೋತ್ಪ್ರೇಕ್ಷೆಯಿಂದ ಕಲ್ಪಿಸಿದ ಅನುಮಾನಗಳು ಸಾಧಿಸಲಾರವು. ಆದರೂ "ಅಚ್ಛಿನ್ನ ಭಕ್ತತ್ವಾದಿ" ನಾವು ಹೇಳಿರುವ ಅನುಮಾನಗಳು ಸಮರ್ಥವೇ. ಅನುಗ್ರಾಹಕ ಆಗಮಗಳು, ಐತಿಹ್ಯ, ಆಖ್ಯಾನ, ಪುರಾಣಾದಿಗಳು ಇದ್ದೇ ಇವೆ.

### ಪುಟ 7-20 ಉಕ್ತಿ:

"ತ್ರಿವಿಕ್ರಮ ಪ್ರತಿಷ್ಠಾಪಕತ್ವವು ಋಜುತ್ವ ಲಿಂಗವೆಂದು ಯಾವ ಆಗಮವೂ ಹೇಳುವುದಿಲ್ಲ."

**ಪ್ರತ್ಯುಕ್ತಿ:** ನಿಜ, ಪೂರ್ವಪಕ್ಷಿಗಳು ಉತ್ಪ್ರೇಕ್ಷೆಯಿಂದ ಹೀಗೆ ಕಲ್ಪಿಸಿರುವ ಅನುಮಾನವು ಋಜುತ್ವ ಸಾಧಕವೇ ಅಲ್ಲ. ಯಾರು ತ್ರಿವಿಕ್ರಮಮೂರ್ತಿ ಸ್ಥಾಪನೆ ಮಾಡುತ್ತಾರೋ ಅವರು ಋಜುಗಳು ಎಂದು ವ್ಯಾಪ್ತಿ ಇಲ್ಲ. ಆದರೆ ಯಾವ ಮಧ್ವಶಾಸ್ತ್ರ ಪಂಡಿತನು "ವಾದಿರಾಜ ಮುನಿಗಳು ಋಜು, ತ್ರಿವಿಕ್ರಮ ಮೂರ್ತಿ ಪ್ರತಿಷ್ಠಾಪನೆ ಮಾಡಿದ್ದರಿಂದ; ಮಧ್ವಮುನಿಗಳು ಋಜು, ಕೃಷ್ಣ ಪ್ರತಿಷ್ಠೆ ಮಾಡಿದ್ದರಿಂದ; ಭೀಮನು ಋಜು, ನರಸಿಂಹದೇವರಿಗೆ ಪೂಜಾಕ್ರಮ ಏರ್ಪಡಿಸಿದ್ದರಿಂದ; ಹನುಮಂತನು ಋಜು, ರಾಮಪೂಜೆ ಮಾಡಿದ್ದರಿಂದ" ಇತ್ಯಾದಿ ದುರನುಮಾನಗಳನ್ನು ರಚಿಸಿ ಪಂಡಿತರ ಸಮ್ಮತಿಯನ್ನು ಕೋರುತ್ತಾನೆ? ಪ್ರೇಕ್ಷಾವಂತನು ಹೀಗೆ ಹೇಳುತ್ತಾನೆ: "ಕೇವಲ ಯುಕ್ತಿಯಿಂದ ವಾದಿರಾಜರ್ಜುತ್ವವು ಸಾಧಿಸಲ್ಪಡಬಾರದು. ಆದರೂ ಕೂಡ ಈ ಜ್ಞಾನಿಗಳಗೋಸ್ಕರ ಹೇಗೆ ಹೇರಂಬನು ಹಯವದನನಾದನು, ಹೇಗೆ ಬುದ್ಧನು ವಿಠ್ಠಲ ರೂಪವನ್ನು ಹೊಂದಿದನು, ಯಾವ ರೀತಿಯಿಂದ ಈ ಮಹಾನುಭಾವರು ಎಂಥ ಬದರೀಸ್ಥ ತ್ರಿವಿಕ್ರಮನನ್ನು ಹೇಗೆ ಭೂತರಾಜರಿಂದ ತರಿಸಿ ಸೋದೆಯಲ್ಲಿ ಸ್ಥಾಪಿಸಿದರು (ವಾ.ಗು.ಚ. VI 34-35); ಯಾವ ಪ್ರಕಾರದಿಂದ ಲಕ್ಷಾಲಂಕಾರವನ್ನು ರಚಿಸಿದರು; ಯಾವ ರೀತಿಯಿಂದ ಅಷ್ಟಮಠೀಯರನ್ನು ಏಕ ಮನಸ್ಕರನ್ನಾಗಿ ಮಾಡಿ ಪೂಜಾವ್ಯವಸ್ಥಾದಿಗಳನ್ನು ಮಾಡಿದರು, ಇತ್ಯಾದಿ ಮಹಿಮೆಗಳನ್ನು ಪರ್ಯಾಲೋಚನೆ ಮಾಡಲಾಗಿ ಐತಿಹ್ಯ ಆಖ್ಯಾನಾದಿಗಳಿಂದ ನಿರೂಪಿತವಾದ ನಿತ್ಯ ತ್ರಿವಿಕ್ರಮಾದ್ಯುಸಾಸಕ ಋಜುತ್ವವು ಇವರಿಗೆ ಯುಕ್ತವೇ ಎಂದು ದೃಢಬುದ್ಧಿಯು ಹುಟ್ಟುತ್ತೆ." ಹೀಗೆ ಅಭಿಜ್ಞರು ಚಿಂತಿಸುತ್ತಾರೆ. ಇದರಲ್ಲಿ ಬಾಧಕವೇನು?

ಕಿಂಚ ಪೂರ್ವಪಕ್ಷಿ ನಿರೂಪಣವು "ವಾದಿರಾಜರ ತ್ರಿವಿಕ್ರಮ ಪ್ರತಿಸ್ಥಾಪಕತ್ವವು ಋಜುತ್ವ ಚಿಹ್ನೆಯಲ್ಲ" ಎಂಬುದು ಉಪಜೀವ್ಯಾಗಮ ಬಾಧಿತವು. ವಾ.ಗು.ಚ. VI 41 "ವಾದಿರಾಜೋಕ್ತಮಾಕರ್ಣ್ಯ ತ್ರಿವಿಕ್ರಮಂ ಋಜೂತ್ತಮೈಃ| ಅರ್ಚನೀಯಂ ನಯೇತ್ಯಾಜ್ಞಾಮಾದಿಶತ್ಕರುಣಾನಿಧಿಃ ||" (ವಾದಿರಾಜರ ಮಾತನ್ನು ಕೇಳಿ ಕರುಣಾನಿಧಿಗಳಾದ ಮಧಚಾರ್ಯರು "ಆಗಲಿ, ಋಜೂತ್ತಮರಿಂದ ಪೂಜಿಸಲು ಅರ್ಹನಾದ ಇಲ್ಲಿರುವ ತ್ರಿವಿಕ್ರಮನನ್ನು ಒಯ್ಯಿ" ಎಂದರು), ಎಂದಿದೆ. ಋಜು ಪೂಜಾರ್ಹ ತ್ರಿವಿಕ್ರಮಸ್ವಾಮಿ ಪ್ರತಿಮೆಯನ್ನೇ ತರಿಸಿ ಸ್ಥಾಪನೆ ಮಾಡಿದ್ದಾರಾದ್ದರಿಂದ ಗುರುರಾಜರು ಋಜುಗಳೇ ಎಂದು ಸಿದ್ಧಿಸಿಯೇ ಸಿದ್ಧಿಸುತ್ತೆ. ತಥಾಚ ಆ ಪೂಜಕರಲ್ಲಿ ಸ್ವಯಂ ಸ್ಥಿತರಾಗಿ ಇನ್ನೂ ಗುರುರಾಜರು ಪ್ರತಿಮೆಯನ್ನು ಪೂಜಿಸುತ್ತಾರೆಂದು ಊಹಿಸಬಹುದು.

ಏವಂ ಚ ಕೆಟ್ಟ ಮನಸ್ಸಿನಿಂದ ಅಬದ್ಧ ಪೂರ್ವಪಕ್ಷಗಳನ್ನು ರಚಿಸಿ ಕುಚೋದ್ಯ ರೀತಿಯಿಂದ ಖಂಡನೆ ಮಾಡಹೋದರೆ ವಟಬೀಜದಂತೆ ಗ್ರಂಥಗಳು ವೃದ್ಧಿ ಹೊಂದುತ್ತವೆ. ಮಹಜ್ಜನಾವಜ್ಞೆಯಿಂದ ಸಾಧುಜನ ವ್ಯಾಮೋಹನ ಮಾಡಿದ್ದರಿಂದ ಪ್ರತ್ಯವಾಯವೇ ಫಲವಾಗುತ್ತೆ.

## 12 ತೃತೀಯಾನುಮಾನ:

### ಪುಟ 8-9 ಉಕ್ತಿ:

ಭಾರತ ವ್ಯಾಖ್ಯಾತೃತ್ವವೂ ಋಜುತ್ವ ಗಮಕವಲ್ಲ. "ದುರ್ವಿಜ್ಞೆಯಮತಸ್ಸರ್ವಂ ಭಾರತಂ ಸುರೈರಪಿ" ಇತ್ಯಾದಿ ಪ್ರಮಾಣಭಿಮತವಾದ್ದು ಭಾರತ ವಿಜ್ಞೇಯತ್ವವೇ । ಅದರ ವ್ಯಾಖ್ಯಾತೃತ್ವ ಮಾತ್ರವಲ್ಲ| ಅದರ ವಿಜ್ಞೇಯತ್ವವಾದರೋ "ದಶಾರ್ಥಾಃ ಸರ್ವಭಾರತೇ" ಎಂಬುದರಿಂದ ಹತ್ತು ವಿಧ. "ಮನ್ವಾದಿ ಭಾರತಂ ಕೇಚಿತ್" ಇತ್ಯಾದಿ ರೀತಿ ತ್ರಿವಿಧ. ಆಧ್ಯಾತ್ಮ ನಿಷ್ಠತ್ವಪರವಾಗಿಯೂ, ತ್ರಿಭಾಷಾದಿ ಯುಕ್ತತ್ವದಿಂದಲೂ ಪುನಃ ಬಹುವಿಧ. ಸಾಕಲ್ಯೇನ ಈ ರೀತಿ ಭಾರತ ವಿಜ್ಞಾನವು ಋಜುಗಳಿಗೇ ಎಂದು ಆ ಪ್ರಮಾಣದ ಅಭಿಪ್ರಾಯ. ವ್ಯಾಖ್ಯಾತೃತ್ವ ಮಾತ್ರವು ಋಜುತ್ವ ಲಿಂಗವೆಂದು ಒಪ್ಪಿದರೆ, ಸತ್ಯಧರ್ಮಾದಿಗಳಲ್ಲಿ ವ್ಯಭಿಚಾರವಾಗುತ್ತೆ. ಅವರು ರಚಿಸಿದ ಭಾರತ ವ್ಯಾಖ್ಯಾನವು ಉಪಲಭ್ಯವಾಗಿಯೇ ಇದೆ.

### ಪ್ರತ್ಯುಕ್ತಿ:

ನಿಜ. ಮ.ತಾ.ನಿ. X 59, 72, 77 ರಲ್ಲಿ ಹೇಳಿದಂತೆ ಬಾದರಾಯಣರಿಂದಲೇ ಶುಕ, ವೈಶಂಪಾಯನ, ರೋಮಹರ್ಷಣಾದಿಗಳಿಗೆ ಉಪದಿಷ್ಟನಾದ್ದರಿಂದ ಆ ಶುಕಾದಿ ಜೀವರೂ ಸರಿಯಾಗಿ ಭಾರತಾರ್ಥ ತಿಳಿದವರು. ಹಾಗೆಯೇ ಅನೇಕ ಮಾಧ್ವರಾದ ನಾವೂ ಶ್ರೀಮಧ್ವಾಚಾರ್ಯರ ಕೃಪೆಯಿಂದ ಸಮಗ್ರ ಭಾರತವ್ಯಾಖ್ಯಾನದಲ್ಲಿ ಸಮರ್ಥರೇ. ವಿಷ್ಣುವು ಪರಬ್ರಹ್ಮನು ಸೃಷ್ಟಿಕರ್ತನಾದ್ದರಿಂದ ಎಂದು ಅನುಮಾನವಾಕ್ಯ ಪ್ರಯೋಗ ಮಾಡಿದರೆ ಘಟ ಮಾಡುವ ಕುಂಬಾರನಲ್ಲಿ ಹೇತುವಿಗೆ ವ್ಯಭಿಚಾರ ಬರುತ್ತೆ. ಸ್ವಾತಂತ್ರದಿಂದ ಸದಾ ಸರ್ವಸೃಷ್ಟಿಕರ್ತನಾದ್ದರಿಂದ ಎಂದು ಹೇತುವನ್ನು ವಿವರಿಸಿದರೆ ಆಗ ಆ ಅನುಮಾನವು ನಿರ್ದೋಷವಾಗಿ ಫಲಿಸುತ್ತೆ. ಆದ್ದರಿಂದ ಹೇತುಮುಂಡನ ಕಾರ್ಯವು ಸರಿಯಲ್ಲ. ಮತ್ತೇನೆಂದರೆ ಹೇಗೆ ಪರಿಷ್ಕರಿಸಿದರೆ ಹೇತು ಶರೀರವು ಆಗಮೋಕ್ತ ಲಕ್ಷಣ

ಬೋಧಕವಾಗುವುದೋ ಹಾಗೆ ಮಂಡನ ಮಾಡಿದರೇ ಸರಿಯಾಗುತ್ತೆ. ಪ್ರಕೃತ ಭಾರತವ್ಯಾಖ್ಯಾತೃತ್ವ ವಿಷಯದಲ್ಲೂ ಹೀಗೆ. ಸ್ವಪ್ರತಿಭೆಯಿಂದ ಸಮಗ್ರ ಭಾರತಾರ್ಥವನ್ನು ಹೇಗೆ ಋಜುಗಳು ತಿಳಿಯುತಾರೆಯೋ ಹಾಗೆ ರುದ್ರಾದಿಗಳೂ ಕೂಡ ಭಾರತಾರ್ಥ ತಿಳಿದಿಲ್ಲವೆಂಬುದು ತತ್ವ, ಮಧ್ವಗ್ರಂಥಾಭ್ಯಾಸದಿಂದ ಯದ್ಯಪಿ ಶ್ರೀಸತ್ಯಧರ್ಮಾದಿಗಳು ಸಮಗ್ರ ಭಾರತವ್ಯಾಖ್ಯಾನದಲ್ಲಿ ಸಮರ್ಥರಾಗಿದ್ದರೂ ಅವರು ಪೂರ್ಣ ಭಾರತವ್ಯಾಖ್ಯಾನವನ್ನು ಮಾಡಿಲ್ಲ. ಆದ್ದರಿಂದ ಅಂಥವರ ವಿಷಯದಲ್ಲಿ ಹೇತುವಿಗೆ ವ್ಯಭಿಚಾರ ಚೋದನೆ ಮಾಡುವುದು ಸರಿಯಲ್ಲ. ಅವರು ಪಕ್ಷ ಸಮ. ಪಕ್ಷದಲ್ಲೂ ಪಕ್ಷ ಸಮರಲ್ಲ ವ್ಯಭಿಚಾರ ತೋರಿಸಬಾರದು.

ಸರ್ವ ಮಾಧ್ವರಿಗೂ ಅಂಥ ಸಮಗ್ರ ಭಾರತವ್ಯಾಖ್ಯಾನ ಶಕ್ತಿ ಇದ್ದರೆ ಋಜುಗಳಲ್ಲಿ ಅತಿಶಯವೇನೆಂದರೆ ಪೂರ್ವೋಕ್ತ ಸ್ವತಂತ್ರ ವ್ಯಾಖ್ಯಾನ ಕೌಶಲ್ಯ. ಭಾವ ಪ್ರಕಾಶಿಕಾ III 6 ಹೀಗೆ ಹೇಳಲ್ಪಟ್ಟಿದೆ. "ಸಾಧಕರಲ್ಲೂ ವ್ಯಾಸ ಮುಖದಿಂದ ಶ್ರವಣಮಾಡಿ ಯಾರು ಭಾರತಾರ್ಥ ಸಾಧಕರೋ ಅಂಥವರು ಶುಕಾದಿಗಳು; ಅಂಥವರಿಗೆ ನಿಯಾಮಕನೆಂದರ್ಥ. ಭಾರತಾರ್ಥ ತಿಳಿದವರಲ್ಲಿ ಉತ್ತಮರಾದ್ದರಿಂದ ಅವರ ಕರುಣೆಯಿಲ್ಲದಿದ್ದರೆ ಇತರರಿಗೆ ಅರ್ಥವು ತಿಳಿಯುವುದಿಲ್ಲವಾದ್ದರಿಂದ ಅವರಿಗೂ ನಮನಮಾಡಬೇಕೆಂದು ಭಾವ." ಹೀಗೆ ಅನೇಕ ಭಾರತ ವೇತ್ತೃಗಳು ಇರಲಿಕ್ಕೂ ವಾದಿರಾಜರ ಜ್ಞಾನದಲ್ಲೂ ಅವರ ಭಾರತ ವ್ಯಾಖ್ಯಾನದಲ್ಲೂ ವಿಶೇಷವಿದೆ. ಇತರರು ಮಾಧ ಗ್ರಂಥಾಭ್ಯಾಸ ಜನಿತ ಸಾಮರ್ಥದಿಂದಲೇ ವ್ಯಾಖ್ಯಾನ ಮಾಡುವುದಕ್ಕೆ ಸಮರ್ಥರು. ಋಜುಗಳಾದರೋ ಮಧ್ವ ಶಾಸ್ತ್ರವನ್ನು ಉಪಜೀವಿಸದೆ ಮಧ್ವ ಶಾಸ್ತ್ರ ಸಂವಾದರೂಪವಾಗುವಂತೆ ಮೂಲ ಶಾಸ್ತ್ರ ವಿರೋಧವಾಗದಂತೆ ವ್ಯಾಖ್ಯಾನ ಮಾಡಿ ಸ್ವಪ್ರತಿಭೆಯಿಂದ ಜ್ಞಾತ ಪ್ರಮೇಯ ವಿಶೇಷಗಳನ್ನು ಅಲ್ಲಲ್ಲಿ ವ್ಯಾಖ್ಯಾನಾವಸರಗಳಲ್ಲಿ ತೋರಿಸುತ್ತಾರೆ. ವಾದಿರಾಜ ಗುರುಗಳೂ ಕೂಡ ಸುಧಾ ತತ್ವಪ್ರಕಾಶಿಕಾ ಟಿಪ್ಪಣಿಗಳಲ್ಲೂ ಕೂಡ "ವಸ್ತುತಸ್ತು" ಎಂದು ಅಲ್ಲಲ್ಲಿ ಅನುವ್ಯಾಖ್ಯಾನ ಭಾಷ್ಯಗಳಿಗೆ ಅವಿರುದ್ಧ ಅರ್ಥ ವಿಶೇಷಗಳನ್ನು ತೋರಿಸಿದ್ದಾರೆ. ಲಕ್ಷಾಲಂಕಾರದಲ್ಲೂ, ಭಾವಪ್ರಕಾಶಿಕೆಯಲ್ಲೂ, ಯುಕ್ತಿಮಲ್ಲಿಕೆಯಲ್ಲಿ ಮಧ್ವ ನಾಮಾಂಕಿತ ಮಂತ್ರ ವ್ಯಾಖ್ಯಾನಾವಸರದಲ್ಲಿ ಸಾಮಾನ್ಯಾರ್ಥ ಸಮುದ್ರದಲ್ಲಿ ಅಲ್ಲಲ್ಲಿ ಸೂಕ್ಷ್ಮ ಪ್ರಮೇಯ ರತ್ನಗಳನ್ನೂ ಪ್ರಕಾಶ ಪಡಿಸಿದ್ದಾರೆ. ಅಂಥ, ಅನೇಕ ಸಂದರ್ಭಗಳಲ್ಲಿ ಇವರಿಗೆ ಆಗಮೋಕ್ತ ಋಜುತ್ವವು ಯುಕ್ತವೆಂದೇ ನಿಶ್ಚಯಹುಟ್ಟುತ್ತೆ. ವಾ.ಗು.ಚ. III 18-22 ಶ್ಲೋಕಗಳಲ್ಲಿ ವೇದವ್ಯಾಸರ ಆಜ್ಞೆಯಿಂದಲೇ ಲಕ್ಷಾಲಂಕಾರ ರಚಿತವಾಯಿತೆಂದಿದೆ. ಲಕ್ಷಾಲಂಕಾರದ ಅವತಾರಿಕೆಯಲ್ಲೂ ಸ್ವಲ್ಪ ವಿವರಣೆ ಇದೆ. ಆದ್ದರಿಂದ ಲಕ್ಷಾಲಂಕಾರ ವ್ಯಾಖ್ಯಾನವು ವಿಮರ್ಶಿತವಾದರೆ ಋಜುತ್ವ ಜ್ಞಾಪಕವೇ. [ಇಂಥ ಕೆಲವು ಸ್ಥಳಗಳಲ್ಲಿ ಇವರ ಗ್ರಂಥಗಳಲ್ಲಿ ಇವರ ಶೈಲಿಯು ಸುಲಭ ಸುಮನೋಹರವಾಗಿರುವುದರಿಂದ, ಕೆಲವು ಕಡೆ ಅನ್ಯರ ಕೈವಾಡವೂ ಏನಾದರೂ ಆಗಿ ಹೋಗಿದೆಯೋ ಲೇಖಕ ದೋಷಾಧಿಕ್ಯವೋ ಎಂದು ಸಂದೇಹ ಬರುತ್ತ. ಇಷ್ಟಾದರೂ ಮಧ್ವ ಗುರುಗಳಿಂದ ಯಾವುದಾದರೊಂದು ರೀತಿಯಲ್ಲಿ ಉಕ್ತವಾಗದ ಅತೀಂದ್ರಿಯ ರಹಸ್ಯಗಳನ್ನು ಗುರುರಾಜರಾಗಲಿ ಇತರ ಜ್ಞಾನಿಗಳಾಗಲಿ ಪ್ರಾಯೇಣ ಪ್ರಕಾಶ ಪಡಿಸಿಲ್ಲ. ದೇವತೆಗಳಿಗೆ ಮನುಷ್ಯರಾಗಿದ್ದಾಗಲೂ ಹಾಗೆ ದೀಕ್ಷೆ ಇದೆ ಎಂದು ತೋರುತ್ತೆ. ಕಿಂಚ ಹೇಗೆ ಜಯತೀರ್ಥರು

ವಿಪುಲವಾಗಿ ನಿಃಸಂಶಯವಾಗುವಂತೆ ಅನುವಾಖಾನಾದಿಗಳಿಗೆ ಟೀಕಾಗಳನ್ನು ಪ್ರಕಾಶಪಡಿಸಿದರೋ ಹಾಗೆ ಅವರಿಗಿಂತ ಉತ್ತಮವಾದ ಪದ್ಮನಾಭತೀರ್ಥಾದಿಗಳೂ ಬಹ್ವರ್ಥಬೋಧಕ ಟೀಕಾಗಳನ್ನು ಬರೆಯಲಿಲ್ಲ. ಆ ದೇವತೆಗಳು ಗುರ್ವಾಜ್ಞಾನುಸಾರ ಹರಿಗುರು ವಿವಕ್ಷಿತ ಕಾರ್ಯ ಮಾಡುವವರು. ಆದ್ದರಿಂದ ಯಾರು ಯಾವ ಕಾರ್ಯದಲ್ಲಿ ಗುರುಗಳಿಂದ ಅಧಿಕೃತರೋ ಅವರನ್ನೇ ತದುತ್ತಮರಾದ ಇತರರೂ ಕೂಡ ಅನುಸರಿಸಿ ಬಿಡುತ್ತಾರೆ; ಅನ್ಯರು ಮಾಡಿದ ಕಾರ್ಯಕ್ಕೆ ಕೈಹಾಕುವುದಿಲ್ಲವೆಂದೂ ತಿಳಿಯಬೇಕು.] ಸ್ವಾ.ವ್ಯ0. ಖ್ಯಾನದಲ್ಲೂ IV 63 ರಲ್ಲಿ ಸಂವಾದವಿದೆ. ಹೀಗೆ ಆಗಮಾರ್ಥ ವಿಮರ್ಶನ ಪೂರ್ವಕವಾಗಿ ಹೇತುವನ್ನು ಪರಿಷ್ಕರಿಸಿದರೆ ಭಾವಪ್ರಕಾಶಿಕಾ ಲಕ್ಷಾಲಂಕಾರ ಕರಣವು ಋಜುದ್ವ ಸಾಧಕಾನುಮಾನವೇ ಆಗಲು ಅರ್ಹವಾಗಿದೆ.

| 13. ಈ ಸಂದರ್ಭದಲ್ಲಿ ಪೂರ್ವಪಕ್ಷ ಗ್ರಂಥದ ತುಂಬ ಉಚ್ಛೃಂಕಲ ವಾಕ್ಯ: |
|---|
| ಪುಟ 8-17 ಉಕ್ತಿ: |

“ಕಿಂಚ ಋಜುತ್ವ ಗಮಕ ವ್ಯಾಖ್ಯಾತೃತ್ವವು ಮೂಲಭಾರತಕ್ಕೆ ಬೇರೆ ಗ್ರಂಥಕ್ಕೇ? ಆದ್ಯಕ್ಕಾದರೆ ಅಸಿದ್ಧಿ, ಗುರುರಾಜ ವ್ಯಾಖ್ಯಾತ ಭಾರತವು ಮೂಲಭಿನ್ನವೇ ಆದ್ದರಿಂದ. ಅದು ಹೇಗೆಂದರೆ “ನಾರಾಯಣಂ ಸುರಗುರುಂ ಜಗದೇಕನಾಥಂ ಭಕ್ತಪ್ರಿಯಂ ಸಕಲ ಲೋಕ ನಮಸ್ಕೃತಂ ಚ| ತ್ರೈಗುಣ್ಯವರ್ಜಿತಮಜಂ ವಿಭುಮಾದ್ಯಮೀಶಂ ವಂದೇ ಭವಘ್ನಮಮರಾಸುರಸಿದ್ಧವಂದ್ಯಂ” ಎಂಬುದಾಗಿ ತಾನೇ ಭಾರತದ ಆದ್ಯ ಪದ್ಯವನ್ನು ಭಗವತ್ಪಾದರು ಹೇಳಿದ್ದಾರೆ. ಗುರುರಾಜರೂ ಕೂಡ ಭಾವ ಪ್ರಕಾಶಿಕೆಯಲ್ಲಿ “ಇದನ್ನು ಆದ್ಯಪದ್ಯವೆಂದು ಒಪ್ಪದ ಅಸಹಿಷ್ಣುಗಳಾದ ಕೆಲವರು ಆದಿಯಲ್ಲಿ ಇದನ್ನು ಬರೆಯುವುದಿಲ್ಲ. ಕೇರಳ ದೇಶದಲ್ಲಿರುವ ಪುರಾತನ ಪುಸ್ತಕಗಳಲ್ಲಿ ಈಗಲೂ ದೃಶ್ಯವಾಗಿದೆ” ಎಂದು ಇವರ ಆದ್ಯ ಪದ್ಯತ್ವವನ್ನು ಒಪ್ಪಿದ್ದಾರೆ. “ಲಕ್ಷಾಲಂಕಾರದಲ್ಲಾದರೋ ರೋಮಹರ್ಷಣ ಪುತ್ರ ಉಗ್ರಶ್ರವಾಃ” ಎಂಬುದೇ ಆದ್ಯಪದ್ಯವಾಗಿ ಕಾಣುತ್ತೆ. ಇದನ್ನೇ ಮಂಗಳಾಚರಣ ಪದ್ಯವೆಂಬುದಾಗಿ ಸ್ಥಾಪಿಸಿಯೂ ಇದ್ದಾರೆ: “ಅತ ಏವಾದೌ ಶ್ರವಣತೋಮಾಂಗಲಿಕ ರೋಮಹರ್ಷಣ ಪದೋಪಾದಾನಾನ್ನ ಪ್ರಥನ್ಮಂಗಲಾ ಚರಣಂ ಚ” ಎಂದು ಹೇಳಿದ್ದರಿಂದ ಇನ್ನೂ ಅಂಥ ಬಹು ವ್ಯತ್ಯಾಸಗಳಿವೆ. ಆದ್ದರಿಂದ ಮೂಲ ಭಿನ್ನವೇ. ದ್ವಿತೀಯವೆಂದರೆ ಋಜುತ್ವವೇ ಅಸಂಭವವಾಗುತ್ತೆ ಇತಿ.”

ಪ್ರತ್ಯುಕ್ತಿ:

ಈ ಖಂಡನೆಯು ಮರ್ಯಾದೆ ಮೀರಿದ್ದು. ಉಪಜೀವ್ಯಾಗಮವಿರುದ್ಧ, ಅಬದ್ಧಮಯವೂ ಆಗಿದೆ.

ಅ) ದ್ವಿತೀಯ ಪಕ್ಷದಲ್ಲಿ 'ಋಜುತ್ವಾಸಂಭವ' ಎಂಬ ಇವರ ಖಂಡನೆಯು ಇವರ ಗ್ರಂಥಪ್ರವೃತ್ತಿಯ ಮೂಲ ಅವಿವೇಕವನ್ನು ತೋರಿಸುತ್ತೆ. ಅದೇನೆಂದರೆ ಋಜುತ್ವಾಭಾವವು ಕೇವಲಾನುಮಾನ ವೇದವೆಂದು ಅವರು ಭ್ರಾಂತರಾಗಿದ್ದಾರೆ. ಏನಾದರೂ ದೈಹಿಕಲಕ್ಷಣ ವೈಕಲ್ಯವು ಆಗಮಾನುಸಾರಿ ದೀರ್ಘಯೋಗ್ಯ ಪರೀಕ್ಷೆಯಿಂದ ಅವರಲ್ಲಿ ಕಂಡರೆ ಆಗ ಮಾತ್ರ ಋಜುತ್ವಾಸಂಭವವನ್ನು ಹೇಳಬೇಕು. ಅನ್ಯಥಾ ಭೀಮಾಜಗರಗ್ರಸ್ತತ್ವಾದಿ ಪ್ರತ್ಯಕ್ಷದಲ್ಲಿ ವ್ಯಭಿಚಾರ ಬರುತ್ತೆ. ಸೈಂಧವ ಪರಾಜಿತನಾದರೂ ಭೀಮನು ಅನೃಜುವಲ್ಲ.

| |
|---|
| ಆ) ಆಗ್ರಹದಿಂದ ದುಡುಕಿ ವಾದಿರಾಜರ ಭಾರತವ್ಯಾಖ್ಯಾನದಲ್ಲೂ ಈ ಪೂರ್ವಪಕ್ಷದವರು ವಿರೋಧೋದ್ಘಾಟನೆ ಮಾಡಿದ್ದಾರಾದ್ದರಿಂದ ಇವರ ಸಹಾನುಭೂತಿ ವೈಕಲ್ಯವ್ಯಕ್ತನಾಗುತ್ತೆ. ವಾದಿರಾಜರು ಅಂಥ ಅಜ್ಞರಾಗಿದ್ದರೆ ಅಂಥವರಲ್ಲಿ ಅಪರೋಕ್ಷಜ್ಞಾನಿತ್ವ, ಯೋಗಿತ್ವಗಳನ್ನು ಇದೇ ಪೂರ್ವ ಪಕ್ಷಿಗಳು ಹೇಗೆ ಒಪ್ಪಿದರು? ಪ್ರಥಮ ಶ್ಲೋಕವನ್ನೇ ಮರೆಯುವ ವ್ಯಾಖ್ಯಾನಕಾರರು ಪರೋಕ್ಷ ಜ್ಞಾನಯುಕ್ತರೇ ಅಲ್ಲ. ಇನ್ನು ಅವರು ಅಪರೋಕ್ಷ ಜ್ಞಾನಿಗಳೆಂದು ಹೇಗೆ ನಿಶ್ಚಯಿಸಲಾಗುತ್ತೆ? ಅಪರೋಕ್ಷಜ್ಞಾನಿಗಳೆಂದು ಒಪ್ಪಿದ ಮೇಲೆ ಇಂಥ 'ಜ್ಞಾನಿತ್ವಾಸಂಭವ' ದೋಷ ಬರದಂತೆ ಅವರ ವ್ಯಾಖ್ಯಾನ ಶೈಲಿಯನ್ನು ವಿಮರ್ಶಿಸಬೇಕು. ಪೂರ್ವಪಕ್ಷದವರು ಹಾಗೆ ಮಾಡಿಲ್ಲದುದು ಅಸಾಧು ಆಗ್ರಹಕ್ಕೆ ವ್ಯಂಜಕ. |
| ಇ) ಇನ್ನೂ ಇವರು ಹೇಳುವ ದೋಷವಾದರೂ ಏನು? ಭಾರತದಲ್ಲಿ 'ನಾರಾಯಣಂ ಸುರಗುರುಂ' ಇತ್ಯಾದಿ ಶ್ಲೋಕವೇ ಆದ್ಯಮಂಗಳ ಪದ್ಯ. ಭಾವ ಪ್ರಕಾಶಿಕೆಯಲ್ಲಿ ವಾದಿರಾಜರೇ ಹಾಗೆ ಅಂಗೀಕರಿಸಿ ವ್ಯಾಖ್ಯಾನ ಮಾಡಿದ್ದಾರೆ. 'ಲಕ್ಷಾಲಂಕಾರ'ದಲ್ಲಿಯಾದರೂ 'ನಾರಾಯಣಂ ಸುರಗುರುಂ' ಶ್ಲೋಕವು ಪ್ರಥಮ ಪದ್ಯವೆಂದು ಗುರುರಾಜರು ಹೇಳಲೇ ಇಲ್ಲ. “ರೋಮಹರ್ಷಣ ಪುತ್ರಃ ಉಗ್ರಶ್ರವಾಃ” ಎಂಬ ಕಥಾ ಆರಂಭ ಶ್ಲೋಕ ಭಾಗವನ್ನು ಮಂಗಳ ಪದ್ಯವನ್ನಾಗಿ ಗ್ರಹಿಸಿ ವ್ಯಾಖ್ಯಾನ ಮಾಡಿದ್ದಾರೆ. ಆದ್ದರಿಂದ 'ವ್ಯಾಹತಿ ಬಂತು' ಎಂದು ಬರೆದಿದ್ದಾರೆ. ಆದರೆ ವಸ್ತುತಃ ವಿರೋಧವೇ ಇಲ್ಲ. ಏಕೆಂದರೆ ಲಕ್ಷಾಲಂಕಾರದಲ್ಲಿ 'ನಾರಾಯಣಂ ಸುರಗುರುಂ' ಶ್ಲೋಕವು ಭಾರತದ ಆದ್ಯಮಂಗಳ ಪದ್ಯವಲ್ಲವೆಂದು ನಿಷೇಧಿಸಿಲ್ಲ. ಹಾಗೆ ನಿಷೇಧಿಸಿದ್ದರೆ ವಿರೋಧಬರುತ್ತಿತ್ತು. ಇನ್ನೊಂದು ಪದ್ಯಭಾಗವನ್ನು ಮಂಗಳ ಪರವಾಗಿ ವ್ಯಾಖ್ಯಾನ ಮಾಡಿದ್ದರಿಂದ ಹಾಗೆ ನಿಷೇಧೋಕ್ತಿಯನ್ನು ಕಲ್ಪನೆ ಮಾಡುವುದು ಉಚಿತವಲ್ಲ. III 2-3 ತತ್ವಪ್ರಕಾಶಿಕಾದಲ್ಲಿ "ಆರ್ಥಿಕ ಕಲ್ಪನೆಯನ್ನು ವಿಶೇಷ ಪ್ರಮಾಣವಿಲ್ಲದೆ ಮಾಡಬಾರದು” ಎಂದಿದೆ. ಕಿಂಚ ಲಕ್ಷಾಲಂಕಾರದ ಉತ್ತರ ವಾಕ್ಯದಲ್ಲಿ “ಧರ್ಮಃ ಪ್ರೊಜಿತಕೈತವೋತ್ರ ಪರಮೋ ನಿರ್ಮತ್ಸರಾಣಾಂ ಸತಾಂ ವೇದ್ಯಂ ವಾಸ್ತವಮತ್ರವಸ್ತು ಶಿವದಂ ತಾಪತ್ರಯೋನ್ಮೂಲನಂ । ಶ್ರೀಮದ್ಭಾಗವತೇ ಮಹಾಮುನಿಕೃತೇ ಕಿಂವಾ ಪರೈರೀಶ್ವರಃ ಸದ್ಯೋಽಹೃದ್ಯವರುದ್ಧ್ಯತೇಽತ್ರ ಕೃತಿಭಿಃ ಶುಶೂಷುಭಿಃ ತತ್ ಕ್ಷಣಾತ್” ಎಂಬ ಭಾಗವತದ ದ್ವಿತೀಯ ಮಂಗಳ ಶ್ಲೋಕದಂಥ ಸರ್ವಾನಿಷ್ಟ ನಿವೃತ್ತಿಪೂರ್ವಕ ಸರ್ವಾಭೀಷ್ಟ ಪ್ರಾಪ್ತಿ ಬೋಧಕ ದ್ವಿತೀಯ ಮಂಗಳ ಪದ್ಯಾ ಭಾವವನ್ನು ಆಶಂಕಿಸಿಕೊಂಡು “ರೋಮಹರ್ಷಣ ಪುತ್ರಃ ಉಗ್ರಶ್ರವಾಃ” ಎಂಬ ಕಥಾರಂಭ ಶ್ಲೋಕಸ್ಥ ವಿಶೇಷಣದ್ವಯವನ್ನೇ ಅಂಥ ಮಂಗಳಕಾರ್ಯಕಾರಿ ಎಂದು ಅರ್ಥಬರುವಂತೆ ವ್ಯಾಖ್ಯಾನಮಾಡಿದ್ದಾರೆ. “ಉಗ್ರಶ್ರವಾಃ” ಎಂಬ ಉಕ್ತಿಯಿಂದ ಸಮಸ್ತಾನಿಷ್ಟ ಪರಿಹಾರಕತ್ವವು ಸೂಚಿಸಲ್ಪಡುತ್ತೆ; "ರೋಮಹರ್ಷಣ ಪುತ್ರ” ಪದದಿಂದ ಸರ್ವೇಷ್ಟದಾಯಕತ್ವವು ಸೂಚಿಸಲ್ಪಟ್ಟಿದೆ. ಎಂದು ಸ್ವಾರಸಿಕ ವ್ಯಾಖ್ಯಾನ ಮಾಡಲ್ಪಟ್ಟಿದೆ. ಆದ್ದರಿಂದ ಇಲ್ಲಿ ಖಂಡನ ಕಾರ್ಯವು ಭ್ರಮಮೂಲಕವಾದ ಅಕಾಂಡತಾಂಡವವೇ. |
| ಈ) ಆದರೂ ಅಲ್ಲಲ್ಲಿ ಲಕ್ಷಾಲಂಕಾರಾದಿ ಮುದ್ರಿತ ಗ್ರಂಥಗಳಲ್ಲಿ ಕೆಲವು ವ್ಯತ್ಯಾಸಗಳು ಕಾಣುತ್ತವೆ. ಆ ವ್ಯತ್ಯಾಸಗಳು ಕೇವಲ ಅನೃಜುತ್ವ ಸೂಚಕವಲ್ಲ. ಪರೋಕ್ಷಜ್ಞಾನಾಭಾವ, ಅಯೋಗಿತ್ವಾದಿ ಬಹುವಿಧ ದೋಷಗಳಿಗೆ ಸೂಚಕ. |

ಉಭಯ ಸಂಪ್ರತಿಪನ್ನ ರೀತಿಯಿಂದ ಆ ದೋಷಗಳು ಶ್ರೀವಾದಿರಾಜರಲ್ಲಿಲ್ಲ. ಆದ್ದರಿಂದ ಸದರೀ ವ್ಯತ್ಯಾಸಗಳು ಅಜಗರನ ಕೈಗೆ ಭೀಮನು ಮೋಹಕತನದಿಂದ ಸಿಕ್ಕಿಬಿದ್ದಂತೆ ಮೋಹಕ ವ್ಯಾಪಾರವೋ, ಮುದ್ರಣ ದೋಷ ಮೂಲವೋ, ಪ್ರಕ್ಷೇಪದ ಕಾರ್ಯವೋ, ಪ್ರತಿಮಾಡಿದವರದೋಷವೋ, ಹೇಗೆ ಬಂತೋ ತಿಳಿಯುವುದು ಕಷ್ಟ. ಅವುಗಳಿಂದ ಅನೃಜುತ್ವ ಸಾಧಿಸಲು ಹೊರಟರೆ ಉಪಜೀವ್ಯಾಗಮ ಬಾಧಿತವಾದ್ದರಿಂದ ಅನುಮಾನಗಳು ದುಷ್ಟವಾಗುತ್ತವೆ. ಋಜುತ್ವಾನ್ ಋಜುತ್ವಗಳು ಅನುಮಾನಾಗಮ್ಯವಾದವು. ಡಾಕ್ಟರ್ ಶರ್ಮರವರು ತಮ್ಮ ದ್ವೈತವೇದಾಂತ ಚರಿತ್ರೆಯ II ಪುಟ 196-7 ರಲ್ಲಿ ನಮೂದಿಸಿರುವ ಅನೇಕ ವಿಷಯಗಳ ಬಗ್ಗೆ ಮೇಲ್ಕಂಡ ಸಮಾಧಾನವೇ ಸಾಧು ಉತ್ತರ. ಶ್ರೀಗುರುರಾಜರ ಗ್ರಂಥಗಳು ಬರೆದಾಗಿ ಇನ್ನೂ 400 ವರ್ಷಗಳಾಗಿವೆ. ಅಂತೂ ಕೇವಲ ಪ್ರಾಚೀನವಲ್ಲ. ಇನ್ನೂ ಅನೇಕ ಬರೆದ ಪ್ರತಿಗಳನ್ನು ದ್ವಿತೀಯ ಮುದ್ರಣಾವಸರದಲ್ಲಿ ತರಿಸಿ ತಾಳೆ ಹಾಕಿಸಿ ನೋಡಿಸಿ ಶುದ್ಧ ಪಾಠದೊಂದಿಗೆ ಅವರ ಗ್ರಂಥಗಳು ಪ್ರಕಟಿಸಲ್ಪಡಲೆಂದು ಅಧ್ಯಕ್ಷರಿಂದ ಸಹಿತರಾದ ಸಮಿತಿಯವರನ್ನು ಪ್ರಾರ್ಥಿಸುತ್ತೇವೆ.

## 14. ಚತುರ್ಭಾನುಮಾನ:

### ಪುಟ ೨-೨ ಉಕ್ತಿ:

“ಹಂಸವಾಹನತ್ವವು ಋಜುಲಿಂಗವೆಂದು ಯಾವ ಆಗಮಸಿದ್ಧವೂ ಅಲ್ಲ. ವ್ಯಾಪ್ತಿಯಾದರೆ 'ಋಜುವೇ ಹಂಸವಾಹನ ಉಳ್ಳವನು' ಎಂದಿರಬೇಕು. ಆಗ ಅನ್ವಯವ್ಯತಿರೇಕಗಳಿಂದ ಚತುರ್ಮುಖ ಬ್ರಹ್ಮದೇವರಿಗೂ ಋಜುತ್ವವಿಲ್ಲವೆಂದಾಗುತ್ತೆ. ಅವರು ಸೃಷ್ಟ್ಯಾದಿಯಲ್ಲಿ ಕಮಲಾಸನಸ್ಥರಾಗಿದ್ದುದರಿಂದ. ಬ್ರಹ್ಮದೇವರಿಂದ ಭಿನ್ನರಾದ ಋಜುಗಳಿಗೆ ಹಂಸವಾಹನವು ಅಶ್ರುತಪೂರ್ವವು” ಇತ್ಯಾದಿ.

### ಪ್ರತ್ಯುಕ್ತಿ:

ಈ ಖಂಡನೆಯಲ್ಲಿ ಆಸನ ವಾಹನ ಶಬ್ದಾರ್ಥಭ್ರಾಂತಿ ಕಂಡಿದೆ. ಬ್ರಹ್ಮದೇವರು ಕಮಲಾಸನರು. ಕಮಲವಾಹನರೆಂದು ಕರೆಯಲ್ಪಡುವುದಿಲ್ಲ. ಆದ್ದರಿಂದ “ಯಾರು ಋಜುವೋ ಅವರೇ ದೇವತಾಸ್ವರೂಪ ಹಂಸವನ್ನು ಏರಲು ಅಧಿಕಾರವುಳ್ಳವರು;” ಎಂಬ ವ್ಯಾಪ್ತಿಯು ನಿಯತವಾಗಿಯೇ ಇದೆ. ಪಾದ್ಮ ಉತ್ತರಖಂಡ ಗೀತಾಮಹಾತ್ಮ್ಯ ಹತ್ತನೇ ಅಧ್ಯಾಯ ಮಹಿಮೆ ಕಥೆಯಲ್ಲಿ ಬ್ರಹ್ಮದೇವರ ವಾಹನ ಶಾಲೆಯಲ್ಲಿ ಅನೇಕ ಹಂಸಗಳಿದ್ದವೆಂದು ವರ್ಣನೆ ಇದೆ. ಒಂದೇ ಹಂಸ ಇತ್ತೆಂದು ಹೇಳಿಲ್ಲ. ಆದ್ದರಿಂದ ಸತ್ಯಲೋಕದ ಋಜುಗಳೆಲ್ಲರಿಗೂ ಹಂಸಾರೋಹಣಾಧಿಕಾರ ಒಪ್ಪಿದರೆ ಬಾಧಕವಿಲ್ಲವೆಂದು ತೋರುತ್ತೆ. III 14 ಸ್ವಾ.ವೃಂ. ಆಖ್ಯಾನದಲ್ಲಿ ವಾದಿರಾಜ ಗುರುಗಳಿಗೆ ಹಂಸವಾಹನತ್ವದ ವರ್ಣನೆ ಇದೆ: “ಪಂಚಾಶದ್ಯೋಜನಾನಾಂತು ವಿಸ್ತೀರ್ಣಂ ಕಾರ್ತಭಾಸ್ವರಂ| ಹಂಸ ವಾಹನ ಸಂಯುಕ್ತಂ ಜಾಂಬೂನದಮಯಂ ಶುಭಂ||” ವಾ.ಗು.ಚ. ಗ್ರಂಥದ ಏಳನೇ ಅಧ್ಯಾಯದಲ್ಲೂ ಹತ್ತರಿಂದ ಹದಿನೈದು ಪೂರ್ತಿ ಆರು ಶ್ಲೋಕಗಳಲ್ಲಿ ವಿಶೇಷ ಕಥೆ ಹೇಳಿ 1640ನೇ ಇಸವಿಯ ಗುಡಸ್ತಂಭ ಶಿಲಾಶಾಸನದ ಪ್ರತ್ಯಕ್ಷ ನಿದರ್ಶನ ಸಹ ಕೊಟ್ಟಿದ್ದಾರೆ. ಅದರ ಅರ್ಥ “ಅನಂತರ ಶ್ರೀ ವೇದನಿಧಿಯೋಗೀಶ್ವರರು ಸೋದೆ ಮಠಾಧೀಶ್ವರರತ್ತ

ಪದವಿಯನ್ನು ಹೊಂದಿದವರಾಗಿ ಸ್ವಲ್ಪ ಕಾಲದಮೇಲೆ ಈ ಶ್ರೀ ತ್ರಿವಿಕ್ರಮಸ್ವಾಮಿಯ ಮುಂದೆ ತುಂಬ ಎತ್ತರವಾಗಿ ಪ್ರಕಾಶಮಾನವಾದ ಶಿಲಾಮಯ ಧ್ವಜಸ್ತಂಭವನ್ನು ಭೂಮಿಯ ಮೇಲೆ ಶ್ರೀ ವಾದಿರಾಜರ ಕೀರ್ತಿ ಸ್ತಂಭದಂತಿರುವುದನ್ನು ಪ್ರತಿಷ್ಠೆ ಮಾಡಿಸಿದರು. ಆದರೆ ಆ ಶಿಲಾಸ್ತಂಭವು ಪುನಃ ಪುನಃ ನಿಲ್ಲಿಸಲ್ಪಟ್ಟರೂ ಒಂದು ಕಡೆಗೆ ವಾಲಿ ಬಿದ್ದುಹೋಯಿತು. ಗುರುಶ್ರೇಷ್ಠರಾದ ವೇದನಿಧಿಗಳು ಖಿನ್ನ ಹೃದಯವುಳ್ಳವರಾಗಿ ಶ್ರೀ ವಾದಿರಾಜ ಗುರುಗಳನ್ನೇ ಪ್ರಾರ್ಥಿಸಿದರು. ಆ ರಾತ್ರಿ ಸ್ವಪ್ನದಲ್ಲಿ 'ಎಲೈ ವತ್ಸನೇ! ನನ್ನ ಹಂಸಾರೂಢ ಪ್ರತಿಮೆಯನ್ನು ಆ ಶಿಲಾಕಂಬದ ಮೇಲೆ ಕೆತ್ತಿಸಿ ನೀನು ಭೂಮಿಯಲ್ಲಿ ಅದನ್ನು ನೆಡಿಸಿದರೆ ಅದು ಸ್ಥಿರವಾಗಿ ನಿಲ್ಲುತ್ತೆ' ಎಂದು ತಮ್ಮ ಪರಮಗುರುಗಳಾದ ಶ್ರೀ ವಾದಿರಾಜರ ಮುಖದಿಂದಲೇ ಸ್ಪಷ್ಟವಾಗಿ ಬೋಧಿತ ಪ್ರಮೇಯವನ್ನು ತಿಳಿದವರಾಗಿ ಹಾಗೆಯೇ ಮಾಡಿದರು. ಕಂಬವು ವಿಘ್ನರಹಿತವಾಗಿ, ಬೀಳದೆ ನಿಂತುಬಿಟ್ಟಿತು. ಆ ಕಲ್ಲಿನ ಕಂಬವು ಅದ್ಯಾಪಿ (1640ರಲ್ಲಿ ಕೆತ್ತಿಸಿದ) ಹಂಸಾರೂಢ ಸ್ಪಷ್ಟ ವಾದಿರಾಜ ಮುನಿಗಳ ಆಕಾರವನ್ನು ಒಳಗೊಂಡದ್ದಾಗಿ ಸೋದೆಯಲ್ಲಿದೆ" ಎಂದು ವೇವನಿಧಿಗಳ ಶಿಷ್ಯರೇ ಬರೆದಿದ್ದಾರೆ. ಗುರುರಾಜರಿಗೆ ಹಂಸವಾಹನತ್ವ ಉಂಟು ಎಂಬಲ್ಲಿ ಇನ್ನೇನು ಪ್ರಮಾಣವಾಗಬೇಕು? ಸ್ವಪ್ನ ವೃತ್ತಾಂತ ಸತ್ಯತ್ವ ವಿಷಯದಲ್ಲೂ ಸಾಕ್ಷಿರೂಪವಾಗಿ ಕಂಬದಲ್ಲೇ ಕೆತ್ತಿಸಿದ ಶಕವರ್ಷವನ್ನೂ ತಿಳಿಸುವ ಹಂಸವಾಹನಮೂರ್ತಿ ಯುಕ್ತ ಶಾಸನವೇ ಇದೆ. ಸ್ವಪ್ನದಲ್ಲಿ ಗುರುಗಳು ಹೇಳಿದ ಮಾತು ಪ್ರಮಾಣವು. ತತ್ರಾಪಿ ಫಲೋಪಲಬ್ಧಿಯಿಂದ ಆ ಉಪದೇಶ ಪ್ರಾಮಾಣ್ಯ ನಿಶ್ಚಿತವಾಗಿದೆ.

ಗೌಡಗೆರೆ ಆಚಾರ್ಯರ ಗುರುರಾಜಸ್ತವನದ ಹತ್ತನೇ ಶ್ಲೋಕದಲ್ಲೂ, "ಕಮಲಜ ಸಮಾನಃ ಶ್ರೀಪತೇರ್ಹಂಸಯಾನಃ", ಎಂದು ಹೊಗಳಿದ್ದಾರೆ. ಅನುಮಾನ ಮಾತ್ರದಿಂದ ವಿರೋಧಿಸುವುದು ಯುಕ್ತವಲ್ಲ. ಹೀಗೆ ಗುರುರಾಜರ ವಾಕ್ಯದಿಂದಲೇ ಅವರ ಹಂಸವಾಹನತ್ವವು ಪ್ರಮಿತವಾಗಿರುವುದರಿಂದ ಪೂರ್ವಪಕ್ಷಿಗಳ ಅನುಮಾನವು ಅಸಿದ್ಧವೂ, ಬಾಧಿತವೂ ಆಗಿದೆ. "ಗುರುರಾಜರಿಗೆ ಹಂಸವಾಹನತ್ವವು ಯಾವ ಆಗಮಸಿದ್ಧವೂ ಅಲ್ಲ" ಎಂಬ ಉಕ್ತಿಯು ಸುಳ್ಳೆ. ಆಖ್ಯಾನ, ವಾ.ಗು.ಚಾದಿ ವಚನರೂಪ ಆಗಮಗಳಿವೆ. ಕಿಂಚ "ಬ್ರಹ್ಮದೇವರು ಹಂಸ ವಾಹನರೆಂಮ ಪ್ರಸಿದ್ಧರಾಗಿದ್ದಾರೆ. 'ಸರ್ವ ಋಜುಗಳೂ ಸಮರು' ಎಂದು ಸುಧೋಕ್ತಿ ಇದೆ. ಹಾಗಿದ್ದ ಮೇಲೆ ಎಲ್ಲರಿಗೂ ಹಂಸವಾಹನತ್ವಾಧಿಕಾರ ಹೇಗಿಲ್ಲ?" ಹೀಗೆ ಅನುಮಾನವೂ ಇದೆ.

ಕಿಂಚ IX 37 ಮ.ತಾ.ನಿ.ಯಲ್ಲಿ ಹೇಳಿದಂತೆ ಹನುಮಂತನು ಸ್ವಭಾವಿ ಬ್ರಹ್ಮತ್ವಯೋಗ್ಯತಾ ಪ್ರಕಟನೆಗಾಗಿ ಒಮ್ಮೊಮ್ಮೆ ಬ್ರಹ್ಮಾಸತ್ರಗಳನ್ನು ವಿಫಲಗೊಳಿಸಿದ್ದಾನೆ. ಹಾಗೆ ವಾದಿರಾಜ ಮುನಿಗಳೂ ತಮ್ಮ ಭಾವಿ ಬ್ರಹ್ಮತ್ವ ಪ್ರಕಾಶಪಡಿಸುವುದಕ್ಕೋಸ್ಕರ ಬ್ರಹ್ಮದೇವರ ಹಂಸವಾಹನತ್ವವನ್ನು ತಮ್ಮಲ್ಲೇ ತೋರಿಸಿಕೊಂಡರೆಂದು ಏತಕ್ಕೆ ಆಗಬಾರದು? "ಪ್ರಮಾಣ ನಿಜಾಧಿಕ್ಯ ವಿಜ್ಞಪ್ತ್ಯೈಕ್ವಚಿದ್ವಾಯುಸ್ತದಾಜ್ಞಯಾ ಹಂತಿ ಬ್ರಹ್ಮತ್ವಮಾತ್ರೀಯಮಾದ್ಧಾಜ್ಞಾಪಯಿತುಂ ಪ್ರಭುಃ" ವಿರೋಧಿ ಪ್ರಮಾಣವಿಲ್ಲದಿದ್ದರೂ ಅನ್ಯತ್ರಾಶ್ರುತತ್ವ ಮಾತ್ರದಿಂದ ಐತಿಹ್ಯಾಗಮಾದ್ಯುಕ್ತ ಪ್ರಮೇಯಗಳನ್ನು ಅಲ್ಲಗೆಳೆಯುವುದಾದರೆ, ಗಜೇಂದ್ರಮೋಕ್ಷವೇ ಮುಂತಾದ ಸರ್ವ ಅದ್ಭುತ ತತ್ವಗಳನ್ನೂ ಅತತ್ವವೆಂದು ಹೇಳಬೇಕಾಗುತ್ತೆ. ಹಾಗೆ ಮಾಡಬಾರದು. ಒಂದೇ

ಪ್ರಮಾಣದಲ್ಲಾದರೂ ನಿರವಕಾಶವಾಗಿ ಪ್ರತಿಪಾದಿಸಿದ್ದು ಮೂಲಪ್ರಮಾಣಾಂತರ ವಿರೋಧಹೀನವಾಗಿದ್ದ ಮೇಲೆ ಅಪೂರ್ವತಾಲಿಂಗದಿಂದ ಪ್ರಾಬಲ್ಯಯುಕ್ತವಾಗಿ ಸುದೃಢ ಪ್ರಮಿತ ಪ್ರಮೇಯವೇ ಆಗುತ್ತೆ. ಬ್ರಹ್ಮ ಭಿನ್ನ ಋಜುಗಳಿಗೂ ಈಶ್ವರನು ಹಂಸ ವಾಹನತ್ವವನ್ನು ಅನುಗ್ರಹಿಸಿದ್ದರೆ ಅದರಲ್ಲಿ ವಿರೋಧವೇನು? ನಿಶ್ಚಲತನದಿಂದ ನಿಂತಿರುವ ಗರುಡಸ್ತಂಭವು ವಿರೋಧವೇನೂ ಇಲ್ಲವೆಂದೇ ಸ್ಪಷ್ಟಪಡಿಸುತ್ತೆ.

## 15. ಪಂಚಮಾನುಮಾನ ಪರೀಕ್ಷೆ:

### ಪುಟ 9-14 ಉಕ್ತಿ:

“ವಾಯುದೇವರ ಜೊತೆಯಲ್ಲಿ ಒಂದೇ ಪಾತ್ರೆಯಲ್ಲಿ ಪೂಜಿಸಲ್ಪಡತಕ್ಕದ್ದು ಪ್ರಮಾಣವಿರುದ್ಧವೇ. ಋಜುತ್ವ ಸಿದ್ಧಿ ಮಾಡಿಕೊಟ್ಟ ಮೇಲೆ ಅದು ಯುಕ್ತವಾದೀತು. ಗುರುರಾಜರಿಂದಲೇ ಹೇಳಲ್ಪಟ್ಟಿದ್ದರೆ ಅದು ಕಥಂಚಿತ್ ಋಜುತ್ವ ಸೂಚಕವಾಗುತ್ತಿತ್ತು. ಅನ್ಯಥಾ ರಾಮಾನುಜಮತಾನುಯಾಯಿಗಳಿಂದ ತ್ರಿಪುಂಡ್ರಾದಿಗಳಿಂದ ಭಗವಾನ್ ವೆಂಕಟೇಶನು ಅರ್ಚಿಸಲ್ಪಡುತ್ತಾನೆ ಎಂಬುವುದರಿಂದ ರಾಮಾನುಜ ಸಿದ್ಧಾಂತಕ್ಕೆ ಯಾಥಾರ್ಥ್ಯವೂ, ತ್ರಿಪುಂಡ್ರಧಾರಣೆಗೆ ವೈದಿಕತ್ವವೂ ಪ್ರಸಕ್ತವಾದೀತು. ಬಿರುದಾವಲಿಗಳಿ0ದ ಸ್ತೋತ್ರ ಮಾಡಲ್ಪಡುವರೆಂಬ ಹೇತುವೂ ಇದೇ ರೀತಿ ಆಭಾಸವೇ.”

**ಪ್ರತ್ಯುಕ್ತಿ:** ಋಜುತ್ವ ನಿಶ್ಚಯವಾದಮೇಲೆಯೇ ಹಾಗೆ ಪೂಜೆಮಾಡ ಬೇಕೆಂಬುದು ಸತ್ಯವೇ. ಇಲ್ಲೂ ಈ ಸಂಪ್ರದಾಯವನ್ನಾರಂಭಿಸಿದ ಶ್ರೀವೇದವೇದ್ಯರು ಪರಮ ತಪಸ್ವಿಗಳೂ ಜ್ಞಾನಿಗಳೂ ಆದ್ದರಿಂದ, ಅವರಿಗೆ ನಿಶ್ಚಾಯಕ ಪ್ರಮಾಣ ಪ್ರತ್ಯಕ್ಷವಾಗಿತ್ತೆಂದು ಅನುಮಾನ ಮಾಡಬಹುದು. ತಥಾಚ ವಿಮತ ಏಕಪಾತ್ರೇ ವಾಯು ವಾದಿರಾಜಯೋಃ ಪೂಜನಂ ಪ್ರಾಮಾಣಿಕಮೇವ ಅವಿಗೀತ ಶಿಷ್ಟಾಚರಿತ ಸಂಪ್ರದಾಯ ವಿಷಯತ್ವಾತ್ ಗ್ರಂಥಾರಂಭೇ ಆಚರಿತ ಮಂಗಳವತ್ (ಒಂದೇ ಪಾತ್ರೆಯಲ್ಲಿ ವಾಯುವಾದಿರಾಜರ ಪೂಜೆಯು, ಸತ್ಪ್ರಮಾಣ ಮೂಲಕವೇ, ಪರಮಶಿಷ್ಟರಿಂದ ಅನುಷ್ಠಿತ ಸಂಪ್ರದಾಯಕ್ಕೆ ವಿಷಯವಾದ್ದರಿಂದ, ಗ್ರಂಥಾರಂಭದಲ್ಲಿ ಆಚರಿತ ಮಂಗಳದಂತೆ) ಎಂದು ಸಾಮಾನ್ಯತೋದೃಷ್ಟ ಅನುಮಾನವಿದೆ. ಅಂಥ ವೃದ್ಧ ಪ್ರಾಜ್ಞರು ಜನಾಂಗಕ್ಕೂ ಮಠಕ್ಕೂ ತಮಃ ಪ್ರಾಪಕವಾದ ದುಷ್ಕರ್ಮವನ್ನು ಮಾಡುವುದಿಲ್ಲವಷ್ಟೇ. ಯೋಗೀಶ್ವರರಾದ ಶ್ರೀ ವೇದನಿಧಿಗಳಿಗೆ ಗುರುಗಳೂ, ಯೋಗೀಶ್ವರರಾದ ಅದ್ಭುತ ಜ್ಞಾನಿಗಳೆಂದು ವಿಖ್ಯಾತರಾದ ಶ್ರೀವಾದಿರಾಜರಿಗೆ ಶಿಷ್ಯರೂ ಆದ, ಪಂಡಿತರತ್ನರೂ, ಕೃಷ್ಣಭಕ್ತರೂ ಆದ ಆ ಯತಿಗಳು ಅಂಥ ಆಪಾದನೆಗೆ ಹೇಗೆ ಅರ್ಹರು ಎಂಬ ಅನುಕೂಲ ತರ್ಕವಿದೆ. ಋಜುತ್ವವು ಐತಿಹ್ಯಾದಿ ಎಂಟು ಪ್ರಮಾಣ ಪ್ರಾಪ್ತವಾಗಿದೆ. ತ.ಪ್ರ. 3-3-57 ಟೀಕಾರಾಯರ ವಾಕ್ಯ ಸಹಾಯವಿದೆ. ವಿರೋಧಾಭಾವರೂಪ ಸಹಕಾರಿ ಇದೆ. ಆದ್ದರಿಂದ ಅದು ನಿರ್ಣೀತ ತತ್ವವೇ. ಆದ್ದರಿಂದ ಆಗಮ ಸಹಾಯರಹಿತಾನುಮಾನದಿಂದ ಪ್ರತಿವಾದ ರಚನೆಯು ಉಚಿತವಲ್ಲ. ಆ ತರ್ಕವೇ ಬಾಧಿತವಾಗುತ್ತೆ. ಆಗಮದಿಂದ ಅನೃಜುತ್ವ ಸಿದ್ಧ್ಯಾನಂತರವೇ ತರ್ಕದಿಂದ ಸಮಪೂಜನಖಂಡನೆಯು ಯುಕ್ತವಾಗುತ್ತೆ. ಅನ್ಯಥಾ ಇಲ್ಲ. “ಅನೃಜುತ್ವವು ಸಿದ್ಧವಾದರೆ ಸಮಪೂಜನ ನಿಷಿದ್ಧತ್ವವು ಸಿದ್ಧವಾಗುತ್ತೆ. ಸಮಪೂಜೆಯ ನಿಷಿದ್ಧತ್ವವು

ಅಂಗೀಕೃತವಾದರೇನೇ ಅನೃಜುತ್ವವು ಸಿದ್ಧವಾಗುತ್ತೆ." ಹೀಗೆ ಪ್ರತಿವಾದಕ್ಕೇ ಅನ್ಯೋನ್ಯಾಶ್ರಯ ಬರುತ್ತೆ. ಬಾಧಕ ಪ್ರಮಾಣವನ್ನೇ ಕೊಡದೆ, ಅನೃಜುತ್ವವನ್ನು ಸಿದ್ಧಾಂತವನ್ನಾಗಿ ಕಲ್ಪಿಸಿಕೊಂಡು ನಿಷಿದ್ಧತ್ವಾಪಾದನೆ ಮಾಡಿರುವುದರಿಂದ ಪೂರ್ವ ಪಕ್ಷಿಗಳಿಗೆ ಪ್ರಾಮಾಣ್ಯ ಪರತಸ್ತ್ವ ವಿಶ್ವಾಸವು ಅಧಿಕವೆಂದು ಸ್ಪಷ್ಟವಾಗುತ್ತೆ. ಇನ್ನು ಕೆಲವು ಪೂರ್ವಪಕ್ಷಿಗಳು ಋಜುತ್ವವನ್ನಂಗೀಕರಿಸಿದರೂ ಸಮಪೂಜೆಗೆ ಬಾಧಕವೇ ಇದೆ, ಕೊನೆಗೆ 'ನಮ್ಮ ಮಠ ಸಂಪ್ರದಾಯ ವಿರುದ್ಧ' ಎಂದು[ಮಠೀಯ ಗುರುಶಾಸನವು ಬಾಧಕವೆಂಬ ವಾದವು ಮಠವನ್ನು ಮೀರಿಯೇ ಏಕಾದಶ್ಯಾದಿಗಳನ್ನು ಅನುಷ್ಠಿಸುತ್ತಿರುವ ಈಗಿನ ಕಾಲದಲ್ಲಿ ಶೋಭಿಸುವುದಿಲ್ಲ: "ಗುರೂತ್ತಮಪಿ ನ ಗ್ರಾಹ್ಯಂ ಯದನರ್ಥೇ ಅರ್ಥ ಕಲ್ಪನಮ್" ಎಂದು ಭಾಗವತ ಪ್ರಮಾಣವಿದೆ. ಹಾಗೆಯೇ ಪ್ರಹ್ಲಾದನ ಆಚರಣೆ ಇದೆ. ಕಿಂಚ ಮಠೀಯ ಗುರುಗಳೆಂದರೆ ದೀಕ್ಷಾಗುರುಗಳು. ಮುದ್ರಾಧಾರಣ, ತೀರ್ಥಪ್ರಸಾದ ದಾನಾದಿಗಳಿಂದ ದೇಹ ಮನಃ ಶುದ್ಧಿದಾಯಕರು, ಶಿಕ್ಷಾಗುರುಗಳಾದರೋ ಶಾಂತಿ ಪೂರ್ವಕವಾಗಿ ಶಾಸ್ತ್ರ ವಾಕ್ಯ ಶ್ರವಣಮಾಡಿಸಿ, ತಾತ್ಪರ್ಯಬೋಧಿಸಿ, ನಿರ್ಣೀತ ತತ್ವವಿಷಯಕ ವಿಜ್ಞಾನಜನಕರು. ಉಪಕ್ರಮಾದಿ ಲಿಂಗಗಳಿಂದ ವೇದಾದಿ ನಿಖಿಲ ಪ್ರಮಾಣ ವಿಚಾರ ನಡೆಯಿಸಿ, ತಪಸ್ಸನ್ನು ಮಾಡಿಸಿ, ವಾದಿರಾಜ ಋಜುತ್ವದ ಪ್ರಾಮಾಣಿಕತ್ವವನ್ನು ಅವರು ತೋರಿಸಿಕೊಡಬಲ್ಲರು. ಅಂಥ ಜ್ಞಾನಿಗಳ ಮತ್ತು ದೀಕ್ಷಾಗುರುಗಳ ದೆಸೆಯಿಂದ ಸ್ವರೂಪತಃ ಉತ್ತಮರ, ವಚನವು ಅಧಿಕಮಾನ್ಯವು. "ವಿರೋಧೇ ಯುಕ್ತಿ ಯುಕ್ತ ಬಲವದ್ವಚನಂ ಗ್ರಾಹ್ಯಂ" ಎಂದು ನ್ಯಾಯವಿದೆ. ಪ್ರಮಾಣಕೊಡದ ದೀಕ್ಷಾಗುರುಗಳ ವಾಕ್ಯದ ದಸೆಯಿಂದ ಆಗಮ ಪ್ರಮಾಣ ತದನುಸಾರಿ ಯುಕ್ತಿಭರಿತಜ್ಞಾನಿಗಳೂ ಅಧಿಕ ಮಧ್ವಪ್ರಿಯರೂ ಆದ ಶೀಕ್ಷಾಗುರುಗಳ ವಚನವೇ ಉಪಾದೇಯವು. ಮಾರ್ತಿಕಗರ್ವ ನಿರ್ವಾಪಣದಲ್ಲಿ "ದೀಕ್ಷಾಗುರುವಾಕ್ಯಕ್ಕೆ ವಿರುದ್ಧವಾಗಿ ಶೀಕ್ಷಾಗುರು ಉಪದೇಶ ಮಾಡಿದರೆ ಆ ಗುರುಶಿಷ್ಯರುಗಳು ದೀಕ್ಷಾಗುರುಗಳಿಂದ ದಂಡಿಸಿಕೊಂಡು ಸನ್ಮಾರ್ಗ ಪ್ರವೇಶ ಮಾಡುವುದು ಸರ್ವ ಸಂಮ್ಮತವಾದ್ದರಿಂದ ತಮ್ಮ ತಮ್ಮ ಮಠಾಧಿಪತಿಗಳೆಂಬ ದೀಕ್ಷಾಗುರಗಳಿಗೆ ಅಸಮ್ಮತವಾದ ತಮ್ಮ ತಮ್ಮ ಗುರೂಪದೇಶವನ್ನು ಅಸದುಪದೇಶ ಎಂದೇ ತಿಳಿಯಬೇಕು." ಎಂದಿದೆ. ಇದು ನಿಜ, ಆದರೆ ಸರ್ವವಿಷಯಕವಲ್ಲ. ಸ್ವಸ್ವಮಠೀಯ ಗುರುಗಳ ಆಜ್ಞೆಯು ಸಾಮಾನ್ಯ ಕರ್ಮವಿಷಯದಲ್ಲಿ ಅವರ್ಜನೀಯವಾದರೂ, ಋಜುತ್ವ ಶ್ರದ್ಧೆ ಮುಂತಾದ ಜ್ಞಾನಮಾರ್ಗದಲ್ಲಿ ದೀಕ್ಷಾಗುರುಗಳ ದೆಸೆಯಿಂದ ಉತ್ತಮ ಜ್ಞಾನಿತಪಸ್ವಿಗಳಾದ ಶೀಕ್ಷಾಗುರು ವಾಕ್ಯವೇ ಮಾನನೀಯವು. ] ಹೇಳಿಬಿಡುತ್ತಾರೆ. ಇವರ ವಾದವು III 3-57 ತ.ಪ್ರ. ಟೀಕಾವಾಕ್ಯ ವಿರುದ್ಧ. ಮಠೀಯ ಗುರುಗಳಿಗೆ, ಹರಿವಾಯುಗಳಿಗೆ ಪ್ರಿಯವಾದ ತತ್ವಮಾರ್ಗಕ್ಕೆ ವಿರುದ್ಧ ಪ್ರಕ್ರಿಯಾಗಳನ್ನು ಬೋಧಿಸಿ ಶಿಷ್ಯನು ವಿಧೇಯತನದಿಂದ ಅವುಗಳನ್ನು ಗುರೂಕ್ತರೀತಿಯಲ್ಲಿ ಉಪಾಸನೆ ಮಾಡಬೇಕೆಂದು, ಶಾಸನಮಾಡುವ ಅಧಿಕಾರವನ್ನು ಶ್ರೀಮದಾಚಾರ್ಯರು ಕೊಟ್ಟಿಲ್ಲ. ಶ್ರೀಮದಾಚಾರ್ಯರ ಶಾಸ್ತ್ರವನ್ನು ಮೀರುವ ಆಜ್ಞೆಯನ್ನು ಶ್ರೀಮದಾಚಾರ್ಯರ ಸಂಪ್ರದಾಯ ಪ್ರಾಪ್ತವಾವ ಮಠವು ಮಾಡಿದ ಪಕ್ಷದಲ್ಲಿ ಉಪಜೀವ್ಯ ವಿರೋಧದಿಂದ ಸ್ವಯಂ ನಿಂದ್ಯವಾಗುತ್ತೆ: ಎಂದರೆ 'ಮಠದ ಸಂಪ್ರದಾಯ, ಸದಾಭಾವ ಪ್ರತಿಯೋಗಿ ಪ್ರಾಮಾಣಿಕ; ನಿತ್ಯಸಂಸಾರಿಗಳಿಗೆ ಲಿಂಗಭಂಗವಿಲ್ಲ; ವಿದ್ವೈಕಾದಶನುಷ್ಠೆಯ;

ವಾದಿರಾಜರು ಅನೃಜುಗಳೇ; ದ್ವಿತ್ವಾದಿವ್ಯಾಸಜ್ಯ ವೃತ್ತಿ ಸಮುದಾಯ ಧರ್ಮಗಳೂ ಈಶ್ವರನಿಂದ ಅಂತ್ಯಂತಾಭಿನ್ನವೇ; ಶಿಷ್ಯ ವಾದ ಮಾಡಕೂಡದು; ತೂಷ್ಣೀಂ ಆಜ್ಞಾನು ಸಾರ ನಡೆಯಬೇಕು; ಅನ್ಯ ಮಠದ ಅಪರೋಕ್ಷ ಜ್ಞಾನಿಗಳನ್ನು ಕೂಡ ಸೇವಿಸ ಬಾರದು;' ಇತ್ಯಾದಿ ಶಾಸನಗಳನ್ನು ಮಾಡಿದರೆ ಶ್ರೀಮದಾಚಾರ್ಯರೆಂಬ ಮೂಲ ಗುರುಗಳ ವಿರೋಧವೇ ಉಂಟಾಗುವುದರಿಂದ ಆ ಮಠವು ಸ್ವಗುರುತ್ವವನ್ನೇ ಕಳೆದುಕೊಳ್ಳುತ್ತೆ. ದ್ವೈತಮತವಿರೋಧಿಗಳಾದ ಆ ಸ್ವಾಮಿಗಳ ಆಜ್ಞೆ ಅನುಷ್ಠಾನಾರ್ಹವಲ್ಲ. ಇಂಥ ಸಂದರ್ಭದಲ್ಲಿ ವಿವಾದ ಬಂದರೆ ಏನು ಮಾಡ ಬೇಕೆಂದರೆ ವಾದಮಾಡಬೇಕು. ಜಲ್ಪ ವಿತಂಡಾ ಕಥೆಗಳನ್ನು ಬಿಟ್ಟು ವಾದ ರೀತಿಯಿಂದ ಮೂಲ ಪ್ರಮಾಣಾವಿರುದ್ಧ ವಾಕ್ಯಗಳಿಂದಲೇ [ ಈಚೆಗೆ ಕೆಲವು ಧರ್ಮವಿಚಾರಪರ ಪತ್ರಿಕೆಗಳಲ್ಲಿ "ಧರ್ಮಸಿಂಧುಕಾರನ ವ್ಯಾಖ್ಯಾನವಿದೆ, ನಿರ್ಣಯ ಸಿಂಧುರಾರರು ತೀರ್ಮಾನಿಸಿದ್ದಾರೆ." ಎಂಬ ರೀತಿಯ ವಾಕ್ಯಗಳನ್ನು ಕಂಡೆ. ಅವೆಲ್ಲಾ ಮಧ್ವಶಾಸ್ತ್ರ ವಿರುದ್ಧ. "ಏತದ್ವಿರುದ್ದಂ ಯತ್ತುಸ್ಯಾನ್ನ ತನ್ಮಾನಂ ಕಥಂಚನ" "ಏಷಾಂ ಯನ್ನ ವಿರೋಧಿಸ್ಯಾತ್ತತ್ಪ್ರೋಕ್ತಂ ತನ್ನ ವಾರ್ಯತೇ." ಎಂದು I 31-53 ನಿರ್ಣಯ ವಾಕ್ಯಗಳಿರುವುದರಿಂದ, ಸಾತ್ವಿಕ ಸ್ಮೃತಿ ವಾಕ್ಯಗಳನ್ನೇ ಧರ್ಮವಿಚಾರದಲ್ಲಿ ಹೇಳಬೇಕು. ಆದ್ದರಿಂದಲೇ ವೈಷ್ಣವರು ಮೀಮಾಂಸಾ ಮಾಡಿ ಬಂದಿರುವ ಕೃಷ್ಣಾಚಾರ್ಯರ ಸ್ಮೃತಿ, ಸ್ಮೃತ್ಯರ್ಥ ಸಾಗರ ಮತಾದುವು ವಿವಾದದಲ್ಲಿ ಉದಾಹರಣೀಯ. ಸ್ಮಾರ್ತಗ್ರಂಥ ಕಾರರ ವಾಕ್ಯ ಮೂಲ ಸಾತ್ವಿಕ ಸ್ಮೃತಿಗಳಿಗೆ ಅವಿರುದ್ಧವಾಗಿ ಇದ್ದರೇನೇ ಗ್ರಾಹ್ಯ. ಅವೈಷ್ಣವ ಗ್ರಂಥಕಾರರ ಸ್ವಂತ ನಿರ್ಣಯ ಕೊಡದೆ, ಅವರು ಉದಾಹರಿಸಿರುವ ಸಾತ್ವಿಕ ಸ್ಮೃತಿ ಪುರಾಣಗಳ ವಾಕ್ಯಗಳನ್ನು ಮಾತ್ರ ಮಾಧ್ವರು ವಾದದಲ್ಲಿ ಉಪಯೋಗಿಸಬೇಕು.] ವಿಚಾರಮಾಡಿ ಮಠೀಯ ಗುರುವನ್ನು ಸತ್ಪ್ರಮಾಣಗಳಿಂದ ಬಂಧಿಸಿ ಸನ್ಮಾರ್ಗಕ್ಕೆ ತರಬೇಕು: "ಗುರೋರಪ್ಯವಲಿಪ್ತಸ್ಯ" ಎಂಬ ನ್ಯಾಯವನ್ನು ಅವರು ಹುಚ್ಚರಾಗಿದ್ದರೆ ಅನುಸರಿಸಬೇಕು. ಅವರು ಕಾಮಾಹಂಕಾರವಶರಾಗಿ 'ವಾದ' ಪ್ರಣಾಡಿಯನ್ನು ಅನುಸರಿಸದಿದ್ದರೆ, ಮೂಲಾಚಾರ್ಯರ ತತ್ವಾನುಸಾರ ಉಪದೇಶಮಾಡಿರುವ ಮತ್ತು ಮಠೀಯ ಗುರುಗಳದೆಸೆಯಿಂದ ಉತ್ತಮಜ್ಞಾನಿಗಳೂ, ತಪಸ್ವಿಗಳೂ ಆದ ಶೀಕ್ಷಾಗುರುಗಳನ್ನೇ ಅನುಸರಿಸಿ ಶ್ರೇಯಸ್ಸನ್ನು ಹೊಂದಬೇಕು. ಬಂದ ಕಷ್ಟ ತಪಸ್ಸೆಂದು ತಿಳಿದು ಸಹಿಸಿಕೊಳ್ಳಬೇಕು. ಮುಖ್ಯ, ಹರಿವಾಯುಗಳ ತತ್ವ ಮಾರ್ಗಬಿಟ್ಟು ಅತತ್ವವನ್ನು ಉಪಾಸನೆ ಮಾಡಬಾರದು. ವಿಕಲ್ಪಾಧಿಕರಣ ಸುಧೆಯಲ್ಲಿ ಗುರುತ್ಯಾಗದ ವಿಚಾರ ವಿಪುಲವಾಗಿದೆ.

ತಥಾಪಿ ಎರಡು ವಿಷಯ ನೆನಪಿನಲ್ಲಿಡಬೇಕು. ಒಂದನೆಯದು ಸೂಕ್ಷ ವಿಚಾರಮಾಡಿ ವೈಷ್ಣವ ತತ್ವಮಾರ್ಗ ಗ್ರಹಿಸಿ, ತ್ಯಾಗಮಾಡದಿದ್ದರೆ ಹರಿವಾಯು ವಿರೋಧ ಬಂದೀತೆಂಬ ಭಯದಿಂದ ತತ್ವ ತಿಳಿದು, ವಿರುದ್ಧೋಪದೇಶಕ ದೀಕ್ಷಾ ಗುರ್ವಾದಿಗಳನ್ನು ಬಿಡಬೇಕು. ದೃಷ್ಟಾಂತ: ವಿಭೀಷಣ ಪ್ರಹ್ಲಾದಾದಿಗಳಂತೆ ಸೂಕ್ಷ್ಮ ವಿಚಾರಮಾಡಿರಬೇಕು. ಪ್ರಿಯವ್ರತ ಪಿತ್ರಾಜ್ಞೆ ಮೀರಿ ತಪಸ್ಸಿಗೆ ಹೋದಾಗ ಸೂಕ್ಷ್ಮ ವಿಚಾರ ಮಾಡಿರಲಿಲ್ಲ. ಬ್ರಹ್ಮದೇವರು "ನೀನು ಆಧಿಕಾರಿಕ ಚೇತನ" ಎಂಬ ವಿಶೇಷ ಪ್ರಮಾಣ ತೋರಿಸಲಾಗಿ ತನ್ನ ತಪ್ಪನ್ನು ಒಪ್ಪಿಕೊಂಡು ಪುನಃ ಮನುವಿನ ಆಜ್ಞಾನುಸಾರ ರಾಜ್ಯವಾಳಿದ್ದಾನೆ. ಎರಡನೆಯದಾಗಿ ಮಠೀಯ ಗುರುಗಳ ಆಜ್ಞೆ ಶಾಸ್ತ್ರ ವಿರುದ್ಧವಾಗಿದ್ದರೂ ಸಾತ್ವಿಕ

| |
|---|
| ರೀತಿಯನ್ನನುಸರಿಸಬೇಕು. ಕೋಲಾಹಲವನ್ನೆಬ್ಬಿಸದಂತೆ ವಿಚಾರ ನಡೆಯಿಸಿ ಹೇಗೆ ನಡೆದರೆ ಅವರು ತನ್ನ ವೈಷ್ಣವಧರ್ಮಕ್ಕೆ, ವಿದ್ಯಾಪ್ರಗತಿಗೆ, ಇತರ ವೈಷ್ಣವರೊಂದಿಗೆ ವ್ಯವಹಾರ ಕಾರ್ಯಗಳಿಗೆ ಪ್ರತಿಬಂಧಕರಾಗುವುದಿಲ್ಲವೋ ಹಾಗೆ ಮಾರ್ಗಕ್ಕೆ ತರಲು ಸಾಮಾದಿಮಾರ್ಗ ಅವಲಂಬಿಸಬೇಕು ಎಂದು ಏಕಾದಶಸ್ಕಂಧ ತಾತ್ಪರ್ಯಾಭಿಜ್ಞರಿಗೆ ತಿಳಿದ ವಿಷಯ. ಅದು ಯಾವುದೂ ಪ್ರಯೋಜನವಾಗದೇ ಹೋಗಿ "ನೀವು ವಾದಿರಾಜರ ಮೃತ್ತಿಕೆ ಧರಿಸಿದರೆ ಭಸ್ಮ ರುದ್ರಾಕ್ಷಿ ಧಾರಣೆ ಮಾಡಿದಂತೆಯೇ ಸರಿ; ಅನ್ಯಮತದ ಉತ್ಕರ್ಷದ್ಯೋತಕ ಚಿಹ್ನೆಯಂತೆ ಆಗುತ್ತೆ. ಸ್ವಮಠ ದ್ರೋಹ ಬರುತ್ತೆ." ಇತ್ಯಾದಿ ರೀತಿಯಾಗಿ ಕ್ರೂರ ಮಾತಾಡಿಕೊಂಡು ಹಟಮಾಡಿ, ಸ್ತೋತ್ತಮ ವೈಷ್ಣವ ದ್ರೋಹಕರ ವ್ಯಾಪಾರ ಪ್ರೇರಿಸಿದರೆ ಅಂಥವರ ಸಂಗತ್ಯಾಗವೇ ಉಚಿತ. "ಪರಸ್ಪರ ವಿರೋಧೇತು ವಿಶಿಷ್ಟಸ್ಯಾನುಕೂಲ್ಯತಾ" ಎಂದು ಮ.ತಾ.ನಿ. XXIX 21 ವಚನವಿದೆ. (ಪರಸ್ಪರ ವಿರೋಧ ಬಂದರೆ ಇಬ್ಬರು ದೊಡ್ಡವರಲ್ಲಿ ಹೆಚ್ಚು ಅಧಿಕರು ಯಾರೋ ಅವರ ಪಕ್ಷ ಹಿಡಿಯಬೇಕು.) ಋಜುಗಳಾದ ಗುರುರಾಜರ ದ್ರೋಹವನ್ನು ಸರ್ವಥಾ ಸಂಪಾದಿಸಬಾರದು. ಕಿಂಚ ವಾಕ್ಯಾರ್ಥ ವಿಚಾರಕ್ಕೆ ಒಪ್ಪದೇ ಇರುವ ಗುರುಗಳ ಮಹತ್ವದಲ್ಲಿ ಏನು ತಾನೇ ಪ್ರಾಶಸ್ತ್ಯ ಇರುತ್ತೆ ? |
| ಕಿಂಚ ಶ್ರೀ ರಾಘವೇಂದ್ರ ಸ್ವಾಮಿಗಳು ದೇವರಿಗೆ ಆ ಕಾಲದಲ್ಲಿ ಸಾಸಿವೆ ನಿವೇದನೆ ಮಾಡಿದರೂ, ಅವರ ಎದುರಿಗೆ ನಿಂತು ಯಾರೂ ಪ್ರಶ್ನೆ ಮಾಡಿ ಚರ್ಚಿಸಲಿಲ್ಲ. ಹಾಗೆ ನಿರ್ದೋಷ, ಕೃಷ್ಣಪೂಜಕ ಯತಿವರೇಣ್ಯರಾದ ಶ್ರೀ ವೇದವೇದ್ಯರು ಸ್ಥಾಪಿಸಿರುವ ಸಂಪ್ರದಾಯ ವಿಷಯದಲ್ಲೂ, ಅವರ ಕಾಲದಲ್ಲೂ, ನಂತರ ನೂರಾರು ವರ್ಷಗಳ ಪರ್ಯಂತ ಸುಮ್ಮನಿದ್ದ ಜನರು ಈಚೆಗೆ ಕಾರಣ ಕೊಡದೆ ಅವರ ಸಂಪ್ರದಾಯ ಸರಿಯಲ್ಲ ಎಂದು ಶಂಕಿಸುವುದು ಗೀತಾಭಾಷ್ಯ II ಮತ್ತು ಕಥಾಲಕ್ಷಣೋಕ್ತವಾದ ಮಾರ್ಗಕ್ಕೆ ವಿರುದ್ಧವಾಗಿದೆ. "ಸರ್ವಾಭಿಮತಸ್ಯ ಪ್ರಮಾಣಂ ವಿನಾ ನಿಷೇದ್ಧುಮಶಕ್ಯತ್ವಾತ್" (P. 31 Kum. Edn.); "ಪೃಷ್ಟೇನಾಗಮ ಏವಾದೌ ವಕ್ತವ್ಯಃ ಸಾಧ್ಯಸಿದ್ಧಯೇ" ಎಂದೂ ವಚನಗಳಿವೆ. ಮುನ್ನೂರೆಪ್ಪತ್ತು ವರ್ಷ ಅನೇಕ ವಿದ್ವಜ್ಜನಮಾನಿತವಾಗಿ ನಡೆದುಕೊಂಡುಬಂದಿರುವ ಐತಿಹ್ಯಾದಿ ಪ್ರಮಿತ ಮತವನ್ನು ಬಾಧಕ ವಚನ ತೋರಿಸದೆ ನಿರಾಕರಣೆ ಮಾಡಕೂಡದು,."ನ ಚಾನುಭವ ವಿರೋಧೆ ಆಗಮಸ್ಯ ಪ್ರಾಮಾಣ್ಯಂ" ಎಂದು ತ.ನಿ. ವಚನವಿದೆ. ಋಜುತ್ವ ಬೋಧಕಾಗಮಗಳಿಗೆ ಅಂಥ ಅನುಭವ ವಿರೋಧ ಸ್ವಲ್ಪವೂ ಇಲ್ಲ. ಪ್ರಮಾಣ ವಿರೋಧವೂ ಇಲ್ಲ. ಹಾಗೆಯೇ ಶ್ರೀ ವೇದವೇದ್ಯರು ಮಠದಲ್ಲಿ ಘೋಷಣೆಮಾಡಿಸಿ ಯಾವ ಬಿರುದಾವಳಿಗಳನ್ನು ಪ್ರಖ್ಯಾತ ಮಾಡಿದರೊ, ಅರಸಪ್ಪನಾಯಕ ರಾಜಗೃಹದಲ್ಲಿ ಅವರ ಬಿರುದಾವಳಿಗಳು ಯಾವುವು ಘೋಷಿತವಾಯಿತೋ, ಮತ್ತು ಸಂಚಾರ ಕಾಲದಲ್ಲಿ ಸಂಪಾದಿತವಾದ "ಪ್ರಸಂಗಾಭರಣತೀರ್ಥ" ಇತ್ಯಾದಿ ಯಾವ ಬಿರುದಾವಳಿಗಳೊ, ಅವುಗಳ ವಿಷಯದಲ್ಲಿ ಪರಸ್ತ್ವ ರೀತಿಯನ್ನನುಸರಿಸಿ ಪ್ರಶ್ನೆ ಮಾಡುತ್ತಾ, ನಿಂದಿಸುವುದು ಮಿಥ್ಯಾಜ್ಞಾನಕಾರ್ಯವೇ ಸರಿ. ಅವರ ಸಮಕಾಲಿಕ ವೈಷ್ಣವ ವಿದ್ವಾಂಸರು ಶ್ರೀ ವಾದಿರಾಜರಿಗೆ ನ್ಯೂನತ್ವದಾಯಕ ಗ್ರಂಥಾದಿಗಳನ್ನು ಬರೆದಿದ್ದರೆ ಪೂರ್ವಪಕ್ಷದವರು ಅವನ್ನು ಹೇಳಬೇಕು. ಅಂಥದೇನೂ ಇಲ್ಲ. |

ಪ್ರತ್ಯುತ ವೃತರತ್ನ ಸಂಗ್ರಹ, ವಾ.ಗು.ಚ.ಗಳಲ್ಲಿ ಈಚೆಗೆ ವಿಶ್ವ ಪ್ರಿಯವಿಲಾಸಾದಿಗಳಲ್ಲಿ ಅವರ ಅಸದೃಶ ಮಹಿಮೆಯೇ ಹೇಳಲ್ಪಟ್ಟಿದೆ.

"ರಮಾಬ್ರಹ್ಮಾದಯೋ ದೇವಾಃ" ಇತ್ಯಾದಿ ಮಂತ್ರಹೇಳಿ ನೆಲ್ಲಿಕಾಯಿಯಷ್ಟು ಅನ್ನಕ್ಕೆ ತೀರ್ಥಹಾಕಿ ಪ್ರಾರ್ಥಿಸಿದರೆ ಅನೇಕ ದೇವತೆಗಳು ತರತಮಭಾವದಿಂದ ಆ ನೈವೇದ್ಯವನ್ನು ಸ್ವೀಕರಿಸುತ್ತಾರೆ. ಹಾಗೆ "ಶುಕಾದ್ಯಾಃ ಸನಕಾದಯಃ" ಇತ್ಯಾದಿ ಮಂತ್ರ ಪಠಿಸಿ ಇನ್ನೊಂದು ತುತ್ತು ಅನ್ನಕ್ಕೆ ತೀರ್ಥ ಪ್ರೋಕ್ಷಿಸಿದರೆ ಸನಕಾದಿ ಸರ್ವ ಪರಮಹಂಸರೂ ತಾರತಮ್ಯದಿಂದ ಅದನ್ನು ಸ್ವೀಕರಿಸುತ್ತಾರೆಂದು ಪ್ರಮಾಣವಿದೆ. ಹೀಗಿರುವಲ್ಲಿ ಸಮಾನ ಋಜುದ್ವಯರನ್ನು ಒಂದೇ ಪಾತ್ರೆಯಲ್ಲಿಟ್ಟು ಸಾಮ್ಯಭಾವದಿಂದ ಪೂಜೆಮಾಡಿ ಅವರಿಬ್ಬರಿಗೂ ಒಟ್ಟಿಗೆ ಒಂದೇ ಪಾತ್ರೆಯಲ್ಲಿ ಅನ್ನಾದಿಗಳನ್ನು ನೈವೇದ್ಯ ಮಾಡಿದರೆ ಯಾವ ಪ್ರಮಾಣ ವಿರೋಧವಿದೆ? 3-3-59 ತ.ಪ್ರ.ದಲ್ಲಿ "ಭವೇತ್ಸಾಮ್ಯೇನೋಪಾಸನಂ ಯುಕ್ತಂ ಯದಿ ತೇಷಾಂ ಸಾಮ್ಯಮೇವಸ್ಯಾತ್" ಎಂಬ ವಾಕ್ಯದಿಂದ ಟೀಕಾಚಾರ್ಯರು ಸಮರ ವಿಷಯದಲ್ಲಿ ಸಾಮ್ಯೋಪಾಸನೆಯನ್ನು ಅನುಮತಿಸಿದ್ದಾರೆ, ಸುಧೆಯಲ್ಲಿ ಋಜುಗಳಿಗೆ ಪರಸ್ಪರ ಸಾಮ್ಯವಿದೆ ಎಂದೂ ಹೇಳಿದ್ದಾರೆ. ಆದ್ದರಿಂದ ಇದು ಪ್ರಮಾಣವಿರುದ್ಧ ವೆಂದು ತೋರಿಸಬೇಕಾದರೆ ಪೂರ್ವಪಕದವರು "ಋಜುದ್ವಯ ಪೂಜೆಯನ್ನಾದರೂ ಏಕಪಾತ್ರೆಯಲ್ಲಿ ಮಾಡಬಾರದು" ಎಂದು ಹೇಳುವ ವಾಕ್ಯ ಉದಾಹರಿಸಬೇಕು. ಅಂಥ ಆಗಮವಿಲ್ಲವಾದ್ದರಿಂದ ಮೌನದಿಂದಿರಬೇಕು. "ಸಮಾನಾಂ ವಿಷಮಾ ಪೂಜಾ" ಇತ್ಯಾದಿ ಪ್ರಮಾಣವಚನ ವನ್ನು ಗೌರವಿಸಬೇಕು.

ಪುಟ 9-15 "ಗುರುರಾಜರಿಂದಲೇ ಉಕ್ತವಾಗಿದ್ದರೆ ಕಥಂಚಿತ್ ಋಜುತ್ವ ಸೂಚಕವಾದೀತು." ಎಂಬ ಉಕ್ತಿಯೂ ಸರಿಯಲ್ಲ. ಅದು ಸಂಕುಚಿತ ರೀತಿ. ಈ ಪ್ರಮೇಯಸಿದ್ಧಿಗೆ ಅದೊಂದೇ ಮಾರ್ಗವಲ್ಲ. ಗುರುರಾಜರೇ ಹೇಳಿದ್ದರೆ "ಮಾನುಷಂಚ" ಎಂಬ ವಿಧಿ ವಿರುದ್ಧವಾಗುತ್ತಿತ್ತು. ಅಹಂಕಾರ ಎಂದು ಅಕೀರ್ತಿ ತರುತ್ತಿತ್ತು. ಪ್ರಕೃತ ಟೀಕಾಚಾರ್ಯರ ವಿಷಯದಲ್ಲಿ ಅವರ ಶಿಷ್ಯರು ಹೇಳಿದಂತೆ ಗುರುರಾಜರ ಸಾಕ್ಷಾಚ್ಛಿಷ್ಯರಾದ ಶ್ರೀ ವೇದವೇದ್ಯರು ತಮ್ಮ ಪ್ರತಿಭಾದಿಗಳಿಂದ ತಿಳಿದು ಹೇಳಿದ್ದಾರಾದ್ದರಿಂದ ಅವರ ಸಂಪ್ರದಾಯಕ್ಕೆ ಪ್ರಾಮಾಣ್ಯ ಕೂಡಿಯೇ [ಕೃ.ಮಹಾರ್ಣವ. 288: "ಆಚಾರಶ್ಚೈವ ಸಾಧೂನಾಂ ಆತ್ಮನೋ ರುಚಿರೇವಚ| ವೇದಪ್ರಣಿಹಿತೋ ಧರ್ಮಃ" ಎಂದಿದೆ.] ಕೂಡುತ್ತೆ. ಆಗಿನ ದೊಡ್ಡ ಪಂಡಿತರೂ, ತಪಸ್ವಿಗಳೂ, ನಂತರ ಬಂದ ಅನೇಕ ಜ್ಞಾನಿಗಳೂ ಅವರ ಮಾತಿನ ಪ್ರಾಮಾಣ್ಯ ವಿಷಯದಲ್ಲಿ ಪ್ರಶ್ನೆಮಾಡದೇ ಅದನ್ನೇ ಅನುಸರಿಸಿದ್ದಾರೆ. 1884 ತಾರಣ ಸಂವತ್ಸರದಲ್ಲಿ, ಅಥವಾ ಈಗ ಕಲಹಕಾರರು ಅದನ್ನು ಒಪ್ಪುವುದಿಲ್ಲವೆಂದು ಹೇಳಲು ಆಗಮ ಪ್ರಮಾಣ ಕೊಡಬೇಕು. ಕೇವಲ ಯುಕ್ತಿ ಹೇಳಬಾರದು. ಪ್ರಾಮಾಣ್ಯ ಸ್ವತಸ್ತ್ವ, ಬಾಧಕಾಭಾವಗಳಿಂದ ಶ್ರೀ ವೇದವೇದ್ಯರಿಂದ ಉಕ್ತವಾದ ಅರ್ಥವು ಸ್ವೀಕಾರ್ಯವೇ. "ಗುಣಾನುಸಾರಿಣೀಂ ಪೂಜಾಂ ಸಮಾಂ ದೃಷ್ಟಿಂ ಚ ಯೋ ನರಃ| ಸರ್ವಭೂತೇಷು ಕುರುತೇ ತಸ್ಯ ವಿಷ್ಣುಃ ಪ್ರಸೀದತಿ||" ಎಂದು ಗೀ. ಭಾಷ್ಯ VI ರಲ್ಲಿ ಸಾಧಕ ವಚನವಿದೆ. "ಋಜೂನಾಂ ಸಮತ್ವೇನ ಪ್ರಮಿತತ್ವಾತ್" ಎಂದು 3-4-5 ಸುಧಾ ವಚನವಿದೆ. ಈ ಸಂದರ್ಭದಲ್ಲಿ ಪುಟ 9-16ರಲ್ಲಿ ಪೂರ್ವಪಕ್ಷಿ ಬಾಧಕ ತರ್ಕ ಹೇಳಿದ್ದಾರೆ: "ಅನ್ಯಥಾ

ರಾಮಾನುಜ ಮತಾನುಯಾಯಿಗಳಿಂದ ತ್ರಿಪುಂಡ್ರಾದಿಗಳಿಂದ ಭಗವಾನ್ ವೇಂಕಟೇಶನು ಪೂಜಿಸಲ್ಪಡುತ್ತಿದ್ದಾನೆ; ಆದ್ದರಿಂದ ಅವರೂ ತಮ್ಮ ಸಿದ್ಧಾಂತವು ಯಥಾರ್ಥವೆಂದು ಘೋಷಿಸಬಹುದು. ತ್ರಿಪುಂಡ್ರಧಾರಣಾದಿಗಳಿಗೆ ವೈದಿಕತ್ವವನ್ನು ಅಂಗೀ ಕರಿಸಬೇಕಾಗುತ್ತೆ" ಎಂದು ಬರೆದಿದ್ದಾರೆ. ಆದು ಸರಿಯಲ್ಲ. ಮೂಲಪ್ರಮಾಣ ವಿರೋಧವಿಲ್ಲದಿದ್ದರೆ ಅವರ ಅನುಷ್ಠಾನಕ್ಕೂ ವೈದಿಕತ್ವ ಬರುತ್ತಿತ್ತು. ಆದರೆ ಅವರ ಕಾರ್ಯಕ್ಕೆ ಪ್ರಮಾಣ ವಿರೋಧವಿದೆ. ಪಾದ್ಮ ಉತ್ತರಖಂಡ 253 ನೇ ಅಧ್ಯಾಯದಲ್ಲಿ "ತ್ರಿಪುಂಡ್ರಂ ಬ್ರಾಹ್ಮಣೋ ವಿದ್ವಾನ್ ಲೀಲಯಾಪಿ ನ ಧಾರಯೇತ್ । ತ್ರಿಪುಂಡ್ರಧಾರಣಾದ್ವಿಪ್ರ ಪತತ್ಯೇವ ನ ಸಂಶಯಃ" ॥ ಎಂಬ ವಾಕ್ಯವಿದೆ. ವಸಿಷ್ಠ ಸಂಹಿತಾ, ಬ್ರಹ್ಮಾಂಡ, ಆದಿತ್ಯ ಪುರಾಣಸ್ಥ ವಾಕ್ಯಗಳಲ್ಲೂ ನಿಷಿದ್ಧವಾಗಿದೆ. ಆದರೆ ವಾದಿರಾಜರಿಗೆ ಋಜುತ್ವವಿಲ್ಲವೆಂದಾಗಲೀ, ಸಮರಾದ ಇಬ್ಬರು ಋಜುಗಳಿಗೆ ಸಾಮ್ಯ ರೀತಿಯಿಂದ ಪೂಜೆಮಾಡಬಾರದೆಂದಾಗಲೀ ವಿರೋಧಿ ಪ್ರಮಾಣವಿಲ್ಲ. ಕಿಂಚ ತ್ರಿಪುಂಡ್ರಾದಿ ಧಾರಣೆ, ಪಂಚಾಯತನ ಪೂಜೆ, ಜೀವೇಶ್ವರ ಸಾಮ್ಯವಾದ, ಜೀವೇಶ್ವರಾಭೇದವಾದ, ಅಸ್ಥಿ ಕೇಶಕಪಾಲಾದಿ ಧಾರಣೆ ಇತ್ಯಾದಿ ಪ್ರಕ್ರಿಯೆಗಳಿಗೆ ಪ್ರಮಾಣ ವಿರುದ್ಧತ್ವ ತೋರಿಸುವ ಸಲುವಾಗಿಯೇ ಸರ್ವ ಪ್ರಮಾಣಜ್ಞ ಭಗವಾನ್ ವಾಯುದೇವರು ಮಧ್ವ ರೂಪದಿಂದ ಅವತರಿಸಿದರು. ಹಾಗೆ ಅವರು ವಿರೋಧಿ ಪ್ರಮಾಣ ಕೊಟ್ಟಿರುವುದರಿಂದ ಆ ವಿರುದ್ಧ ಮತಗಳನ್ನು ವಿಶ್ವಾಸ ಮಾಡಬಾರದು. ಸಚ್ಛಾಸ್ತ್ರೋಕ್ತ ದೋಷಗಳನ್ನೇ ಅವುಗಳಲ್ಲಿ ತಿಳಿಯಬೇಕು. ಆ ರೀತಿ ದೋಷಹೀನವಾದ್ದರಿಂದ ಶ್ರೀ ವೇದವೇದ್ಯರ ಸಂಪ್ರದಾಯಪ್ರಾಪ್ತ ಸಮಪೂಜೆಯು ಉಪಾದೇಯವು.

## 16. ಅನುಮಾನ ಆರು: ಪುಟ 9-21 ಉಕ್ತಿ:

"ಅಷ್ಟಮಠದ ಯತಿಗಳಿಗೆ ಸ್ವಪೂಜಿತ ಹಯಗ್ರೀವ ಪ್ರತಿಮಾ ದಾನವು ಅವರುಗಳ ದೆಸೆಯಿಂದ ಶ್ರೀ ವಾದಿರಾಜರಿಗೆ ಆಧಿಕ್ಯ ಮಾತ್ರ ಸೂಚಕ. ಅಷ್ಟೇ ವಿನಃ ಋಜುತ್ವ ಸಾಧಕವಲ್ಲ. ಉತ್ತರಾದಿ ಮಠಾಧೀಶರಿಗೂ ಪ್ರತಿಮೆ ಕೊಟ್ಟಿದ್ದರೆ ಕಥಂಚಿತ್ ಮಧ್ವಸಾದೃಶ್ಯ ಕಂಡು ಋಜುತ್ವ ಸೂಚಕವಾಗಬಹುವಾಗಿತ್ತು, ಅದಂತೂ ಇಲ್ಲವೇ ಇಲ್ಲ".

**ಪ್ರತ್ಯುಕ್ತಿ:**

ಋಜುತ್ವ ಸಾಧನಬಾಧನ ವಿಷಯದಲ್ಲಿ ಪ್ರತ್ಯಕ್ಷವು ಅಧಮ ಪ್ರಮಾಣವು. ಆಗಮವಿಲ್ಲದೆ ಅದನ್ನು ಉಪಯೋಗಿಸಬಾರದು. ಹಾಗೆ ಉಪಯೋಗಿಸಿದರೆ ನಿಂದಕ ಶಿಶುಪಾಲನನ್ನು ನಿಗ್ರಹಿಸಿ ಸಭೆಯಲ್ಲಿ ಸುಮುಖವಾಗಿ ಕೂರಿಸಲು ಅಸಮರ್ಥನಾದ ಭೀಮಸೇನನು ಹೇಗೆ ಋಜುವೆಂದು ಖಂಡನೆ ಬರುತ್ತೆ. ಕಿಂಚ ಐತಿಹ್ಯಾದಿ ಆಗಮಗಳಿಂದ ಶ್ರೀವಾದಿರಾಜರು ಋಜುಗಳೇ ಸರಿ ಎಂದು ತಿಳಿದಮೇಲೆ 11-12 ಪ್ರಕರಣಗಳಲ್ಲಿ ತೋರಿಸಿದ ರೀತಿಯಲ್ಲಿ ಬಹು ಮಠಗಳಿಗೆ ಪ್ರತಿಮಾ ದಾನ ಮಾಡಿರುವುದು ಋಜುವಾಗಿದ್ದುದರಿಂದಲೇ ಯುಕ್ತವಾಯಿತು; ಅನಂತಾಗಮಗಳ ಸಮನ್ವಯವು ಶ್ರೀಹರಿವಾಯುಗಳಿಗೆ ಹೇಗೆ ಶಕ್ಯವೋ ಹಾಗೆ ಶ್ರೀಮಧ್ವಾಚಾರ್ಯರು ಮಾಡಿದ ವ್ಯವಸ್ಥೆಯನ್ನು ಕದಲಿಸಿ ಅಷ್ಟ ಮಠೀಯರ ಐಕಮತ್ಯವನ್ನು ಹೊಂದಿಸಿ ಬೇರೆ ವ್ಯವಸ್ಥೆಯನ್ನು ಎಲ್ಲರಿಗೂ ಸಮ್ಮತವಾಗುವಂತೆ ಸ್ಥಾಪಿಸಿ ಆ ಮಠೀಯರನ್ನು ಭಕ್ತರನ್ನಾಗಿ ಮಾಡಿಕೊಂಡು ಹಯಗ್ರೀವ ಪ್ರತಿಮೆಯನ್ನು

ಅವರುಗಳ ಪೂಜೆಗೆ ಅವರ ಇಷ್ಟದಂತೆ ಕೊಟ್ಟು, ಅವರುಗಳ ಮೆಚ್ಚಿಗೆಯನ್ನು ಪಡೆದಿರುವ ಕಾರ್ಯವು ಋಜುಭಿನ್ನರಿಗೆ ಶಕ್ಯವಲ್ಲವೆಂಬುದು ರಜತಪೀಠಪುರದಲ್ಲಿ (1969-71) ಪ್ರಕೃತ ವ್ಯವಹಾರ ದರ್ಶಿಗಳಾದ ಸರ್ವರಿಂದಲೂ ಸಂಭಾವಿತವಾಗುತ್ತೆ. ಉತ್ತರಾದಿ ಮಠಕ್ಕೂ ವಿಬುಧೇಂದ್ರ ಮಠಕ್ಕೂ ಪ್ರಯಾಣ ಸೌಕರ್ಯಹೀನವಾದ ಆ ಕಾಲದಲ್ಲಿ ಶ್ರೀ ವಾದಿರಾಜ ಗುರುಮಠದ ನಿಕಟ ಸಂಬಂಧವು ಒದಗಲಿಲ್ಲವಾಗಿ ಹಾಗೆ ಪ್ರತಿಮಾದಾನಾದಿ ವಿಶೇಷ ಸಂಬಂಧವು ಅವರ ಸಂಗಡ ಉಂಟಾಗಲಿಲ್ಲ. ವ್ಯಾಸರಾಜ ಮಠಕ್ಕೆ ಕಾರ್ಯಾರ್ಥವಾಗಿ ಗುರುಗಳೇ ಹೋಗಿ ಶಿಷ್ಯವೃತ್ತ್ಯನುಸರಿಸಿದ್ದರಿಂದ ಅಂಥ ಅನುಬಂಧವು ಅಲ್ಲೂ ಉಂಟಾಗಲಿಲ್ಲ. ಹಾಗಿದ್ದರೂ ಆ ಮಠಗಳ ಯತಿಗಳೆಲ್ಲರಿಂದಲೂ ಭಗವಾನ್ ಮುನಿಗಳು ಮಾನಿತರೇ ಆಗಿದ್ದರೆಂದು ಐತಿಹ್ಯವಿದೆ. ಮಹಾಪ್ರತಿಭಾಯುಕ್ತರಾದ್ದರಿಂದ ಸರ್ವತ್ರ ಮುಕ್ತಿಯೋಗ್ಯರ ಸೌಹಾರ್ದವಿದ್ದುದರಿಂದ, ವ್ಯಾಸರಾಜ ಮಠದ ಸ್ವಾಮಿಗಳೂ, ರಾಯರಮಠದ ಸ್ವಾಮಿಗಳೂ ಜಂಖಂಡಿ ಆಚಾರ್ಯರಿಗೆ ಆದರಿಸಿ ನಿರೂಪಕೊಟ್ಟಿದ್ದಾರೆ. ಶುಷ್ಕಾನುಮಾನರೀತಿಯಿಂದ ವಿಚಾರಿಸಿದರೆ ಹದಿನೆಂಟು ಮಠಗಳಿಗೂ ಪ್ರತಿಮೆ ದಾನಮಾಡಿ ಉಪದೇಶಮಾಡಿದರೂ ಅಂಥವರು ಋಜುಗಳೇ ಆಗಬೇಕೆಂಬ ವ್ಯಾಪ್ತಿ ಇಲ್ಲವಾದ್ದರಿಂದ ಋಜುತ್ವವು ಸಿದ್ಧವೇ ಆಗುವುದಿಲ್ಲ. ಪಾಚಕನಾದ ಭೀಮನಿಗೆ ಹೇಗೆ ಯುಕ್ತಿಯಿಂದ ಋಜುತ್ವ ಸಾಧಿಸುವುದು ಶಕ್ಯವಲ್ಲವೋ, ಹಾಗೆ ವಾದಿರಾಜ ಋಜುತ್ವವೂ ಶುಷ್ಕಯುಕ್ತಿಯಿಂದ ಗಮ್ಯವಲ್ಲ. ಮಧ್ವಾಚಾರ್ಯರೂ ಕೂಡ ಋಗ್ವ್ಯಾಖ್ಯಾನವನ್ನು ಮುಗಿಸದೇ ಹೋದರು. ಮಯನಿರ್ಮಿತ ಸ್ವಯಂಪ್ರಭಾ ಬಿಲದ್ವಾರವನ್ನು ತಿಳಿಯದ ಮತ್ತು ಸ್ವಜನರಿಗೂ ತಿಳಿದು ಹೇಳದ ಹನುಮಂತನು ಋಜುವೆಂದು ಯುಕ್ತಿಯಿಂದ ಹೇಗೆ ನಿರ್ಣಯಿಸುವುದಕ್ಕೆ ಶಕ್ಯವು? ಇಂಥ ಶುಷ್ಕ ಯುಕ್ತಿಗಳು ಅಸಾಧಕವೆಂದು ತಿಳಿದ ಮೇಲೆ ವಾದಿಯು ಪ್ರತ್ಯಕ್ಷವನ್ನು ತ್ಯಜಿಸಿ, ಶುಷ್ಕ ಯುಕ್ತಿಮಾರ್ಗವನ್ನು ತ್ಯಜಿಸಿ ಆಗಮವನ್ನೇ ಶರಣು ಹೊಂದಬೇಕು. ಆಗಮವು ಪೂರ್ವಪಕ್ಷಕ್ಕೆ ಏನೇನೂ ಇಲ್ಲ. ಋಜುತ್ವಪಕ್ಷದವರಿಗಾದರೋ ವಾದಿರಾಜಗುರುಗಳ ವಿಷಯದಲ್ಲಿ ನಿರ್ಮಲ ಐತಿಹ್ಯವಿದೆ, ಆಖ್ಯಾನವಿದೆ, ಪುರಾಣ ಶ್ಲೋಕಗಳಿವೆ, ಜ್ಞಾನಿಗಳ ಕೀರ್ತನೆಗಳೇ ಮುಂತಾದ ಪ್ರಮಾಣಗಳಿವೆ. ಅವು ಪ್ರತಿಪ್ರಮಾಣ ಹೀನವಾದ್ದರಿಂದ ಅಭೇದ್ಯವೂ ಪರಸ್ಪರ ಸಂವಾದರೂಪವಾಗಿಯೂ ಇವೆ. ಅವನ್ನು ನಿರಾಕರಿಸಿದರೆ ತತ್ತ್ವವಿಪ್ಲವವೇ ಆಗುತ್ತೆ. ಅಂಥ ಆಗಮಾನುಸಾರಿಯಾಗಿ ಚರ್ಚಿಸಿದರೆ, ಶ್ರೀವೇದವೇದ್ಯ, ವೇದನಿಧಿಗಳೇ ಮುಂತಾದವರಿಗೆ ಪ್ರವಚನ ಮಾಡೋಣ, ಪಾದಯಾನದಿಂದ ಬದರೀಯಾತ್ರೆ, ದುರ್ಗಮ ಸ್ಥಳದಲ್ಲಿರುವ ಶ್ರೀವಿಷ್ಣುತೀರ್ಥರ ದರ್ಶನ, ಷಾಣ್ಮಾಸಿಕ ಉಪೋಷಣ (ವಾ.ಗು.ಚ. III 2-4), ವೃದ್ಧಾಪ್ಯದಲ್ಲೂ ಯೌವನದಂತೆ ಪೂಜಾಶಕ್ತಿ; ಪಾದಸ್ಪರ್ಶದಿಂದ ಶಿಲಾವಿಭೇದ; ಭಾರಶಿಲೆಯ ಉದ್ಧಾರ; ಪರ್ಯಾಯವ್ಯವಸ್ಥಾ; ಮೃತೋಜ್ಜೀವನ; ಭೂತರಾಜ ವಶೀಕರಣ; ಸೋದಾದೇಶೀಯ ರಾಜಗುರುವನ್ನು ಸೋಲಿಸಿ, ರಾಜನನ್ನು ರಕ್ಷಿಸಿ, ಧರ್ಮ ವ್ಯವಸ್ಥೆ ಮಾಡಿದ್ದು; ವಿಜಯನಗರದಲ್ಲಿ ರಾಜನಿಗೆ ದಾರಿದ್ರನಾಶಮಾಡಿದ್ದು; ಶತಶಃ ಅನ್ಯ ಪಕ್ಷೀಯ ವಾದಿಜಯದಿಂದ ಮಧ್ವಮತೋತ್ಕರ್ಷಸಾಧನ (ವಾ.ಗು.ಚ. III 18-23); ಲಕ್ಷಾಲಂಕಾರ, ಯುಕ್ತಿಮಲ್ಲಿಕಾದಿ ಗ್ರಂಥ ಕರಣ;[ Yuktimallika iS 'a monumental work' - A.C.M.C. of S. P. by Dr. Narain, M.A.,Ph.D.,

**Allahabad. (P. 243)]** ಇತ್ಯಾದಿ ಸರ್ವಮಹಿಮೆಗಳೂ ಅದ್ಭುತವಾಗಿ ಕಾಣುವುವು; ಆಗಮವನ್ನು ತಿರಸ್ಕರಿಸಿ ಕೇವಲ ಯುಕ್ತರೀತಿಯಿಂದ ಇವುಗಳ ಮಹತ್ವವನ್ನು ಅಲ್ಪವನ್ನಾಗಿ ಉಪಪಾದಿಸಿದರೆ ಗುರುರಾಜರು ಅಪರೋಕ್ಷಜ್ಞಾನಿಗಳೆಂದೂ ಸಿದ್ಧವಾಗುವುದಿಲ್ಲ. ಕೇವಲ ಯುಕ್ತಿಯಿಂದ ಎಂಥ ಕಾರ್ಯದಿಂದಲೂ ಋಜುತ್ವ ಸಾಧಿಸಲಾಗುವುದಿಲ್ಲ ಎಂದು ಒಪ್ಪುತ್ತೇವೆ. ಆದರೆ ಒಂದು ತೃಪ್ತಿ ಇದೆ. ಪೂರ್ವಪಕ್ಷಿಯೂ ಅನೃಜುತ್ವವನ್ನು ಕೇವಲ ಯುಕ್ತಿಯಿಂದ ಸಾಧಿಸಲಾಗುವುದಿಲ್ಲ. ಒಂದೊಂದು ಪ್ರಕರಣದಲ್ಲೂ ಅವರ ಪರಾಭವವೇ ಸ್ಫುಟವಾಗುತ್ತಿದೆ.

## 17. ಏಳನೇ ಅನುಮಾನ ಪರೀಕ್ಷೆ :

### ಪುಟ 10-1 ಉಕ್ತಿ:

“ಭೂಗೋಳ ನಿರ್ಣಯ ಏಕಾದಶೀ ನಿರ್ಣಯಗಳೂ ಭಗವತ್ಪಾದರಿಂದಲೇ ಮಾಡಲ್ಪಟ್ಟಿದೆಯಾದ್ದರಿಂದ ಅವು ಶ್ರೀ ಮದಾಚಾರ್ಯರಿಂದ ಉಳಿಸಲ್ಪಟ್ಟವುಗಳಲ್ಲ. ವಿಜಯಧ್ವಜ, ಯಾದವಾರ್ಯಾದಿಗಳಿಂದ ಭೂಗೋಳ ನಿರ್ಣಯವು ಅವರ ಭಾಗವತ ಟೀಕಾಗಳಲ್ಲೂ, ವಿದ್ಯಾಧೀಶಾದಿಗಳಿಂದ ಏಕಾದಶೀ ನಿರ್ಣಯವೂ ವಿಸ್ತರಿಸಲ್ಪಟ್ಟೇ ಇದೆ. ಹೀಗೆ ಇರುವುದರಿಂದ ಭಗವತ್ಪಾದರಿಂದ ಸಂಕ್ಷೇಪತಃ ಈ ಕಾರ್ಯಮಾಡಲ್ಪಟ್ಟಿತ್ತು, ಗುರುರಾಜರಿಂದ ವಿಸ್ತರಿಸಲ್ಪಟ್ಟಿತು ಎಂಬುದೂ ಪರಾಸ್ತವಾಯಿತು.”

### ಪ್ರತ್ಯುಕ್ತಿ:

ಈ ವಿಷಯದಲ್ಲಿ ಸ್ಪಷ್ಟ ಗುರುರಾಜರ ವಚನಗಳೇ ಪ್ರಮಾಣವಾಗಿವೆ. ಭೂಗೋಳ ವಿಷಯದಲ್ಲಿ ಏನು ಹೇಳಿದ್ದಾರೆಂದರೆ, “ಕಿಂತೂಕ್ತ ಏವಾರ್ಥೋಽ ಸಂಪೂರ್ಣಮತೇರರ್ಥೋಽಮತೋಂಜಸಾ| ಮೃದಿವ್ರೀಹ್ಯರ್ಥ ಸಿದ್ಧಾರ್ಥ ಪ್ರಮಾಣಂ ನ ಸ್ಥಿರೀಭವೇತ್ ‖75‖ ಇತಿಮತ್ವಾ ವಜ್ರಲೇಪೇ ನಿರ್ಮಮೇಽತಿ ದೃಢಿಮ್ನಿ ತತ್ ‖ ಗ್ರಂಥ ಬಾಹುಳ್ಯಭೀತ್ಯೇದಂ ಸ್ಪಷ್ಟಂ ನಾಚಷ್ಟಸರ್ವವಿತ್ ‖76‖ ಅಧಿಕಾರ್ಥೋಽಪಸರ್ಗೋಕ್ತ್ಯಾ ಸಂಜ್ಞಯಾ ಆಜ್ಞಾಪಯತ್ರಭುಃ‖ ಸ್ವಸೇವಕ ಜನಖ್ಯಾತ್ಯೈರ್ನಿತ್ಯಂ ಮಮಹೃದಂಬುಜೇ ‖77‖ ಕೃತಧಾಮಾ ಮಧ್ವನಾಮಾ ಸ್ಪಷ್ಟಯಾಮಾಸ ತುಷ್ಟ ಧೀಃ‖” ಎಂದು ಆರಂಭದಲ್ಲೂ, “ವಾಕ್ಯಾರ್ಥ ಕಥನವ್ಯಾಜಾದ್ಭೂಗೋಳಮಿತಿ ವರ್ಣಿತಂ‖” ‖360‖ ಎಂದು ಅಂತ್ಯದಲ್ಲೂ ತಮ್ಮ ಕಾರ್ಯವೇನೆಂಬುದನ್ನು ವರ್ಣಿಸಿದ್ದಾರೆ. ತಥಾಚ ವಾದಿರಾಜಗುರುಗಳು ಮಾಡಿದ್ದು ಭೂಗೋಳ ವರ್ಣನೆ ಎಂದರೆ, ಭಗವತ್ಪಾದರು ಅಸ್ಪಷ್ಟವಾಗಿ ಯಾವ ವಜ್ರಲೇಪ ಭೂಮಿಸ್ವರೂಪ, ತಮಸ್ಸು, ಘನೋದಕ, ದ್ವೀಪ ಸಮುದ್ರಾದಿಗಳ ಪರಿಣಾಮಗಳನ್ನು ಹೇಳಿದ್ದರೋ, ಅದನ್ನೇ ಅವರ “ಅಧಿ” ಎಂಬ ಉಪಸರ್ಗ ಸೂಚಿತವಾದ ಅಧಿಕಾರ್ಥವನ್ನು ಸ್ಪಷ್ಟಿಕರಣ ಪೂರ್ವಕವಾಗಿ ವ್ಯಕ್ತಮಾಡಿ ವಾಕ್ಯಾರ್ಥಗಳನ್ನು ಏಕತ್ರ ಸಂಗ್ರಹಿಸಿ ಪ್ರಕರಣ ರೂಪದಿಂದ ಭೂಗೋಳ ಖಗೋಳಾದಿ ವಿಷಯದಲ್ಲಿ ಶಾಸ್ತ್ರೋಕ್ತ ಸರ್ವಸ್ವವನ್ನೂ ವಿವರಿಸಿರುವುದು. ಯಾದುಪತ್ಯಾಚಾರ್ಯರು ಈಚಿನವರು. ವಿಜಯಧ್ವಜ ತೀರ್ಥರು ಅಲ್ಲಲ್ಲಿ ಸ್ವಲ್ಪ ಮಾತ್ರ ಬರೆದಿದ್ದಾರೆ. ಯಾವುದು ಅಸ್ಪಷ್ಟವಾಗಿತ್ತೋ ಅದನ್ನೇ ಮಧ್ವೋಪಾಸಕರಲ್ಲಿ ಮೇಲಾದ ಗುರುರಾಜರು ತಿಳಿದು ಮುಗಿಸಿದ್ದಾರೆಂಬುದು ಗ್ರಂಥದಿಂದಲೇ ಗೊತ್ತಾಗುತ್ತೆ. ಇತರರು ಬರೆದಿರುವುದು ಎಷ್ಟು ಪ್ರತಿಪತ್ತಿಜನಕವಾದರೂ

ವಾದಿರಾಜಗುರುಗಳು ಮಾಡಿರುವ ವರ್ಣನೆ ನೋಡಿದ ಮೇಲೆ ದೃಢನಿಶ್ಚಯ ಹುಟ್ಟುವಷ್ಟು ವಿಪುಲವಾಗಿಲ್ಲ. ಅಷ್ಟೇ ಅಲ್ಲ, ಪ್ರಾಸಂಗಿಕವಾಗಿ ಶ್ರೀಮಧ್ವಾಚಾರ್ಯರ ವಾಸಸ್ಥಾನವೂ ಉಕ್ತವಾಗಿದೆ: "ಅತ್ರಾಪಿ ಹಿಮವತ್ಶೃಂಗೇ ಪುಣ್ಯೇ ಬದರಿಕಾಶ್ರಮೇ| ನರೇಣ ಸಹಿತೋ ನಾರಾಯಣಃ ಸಿದ್ಧರ್ಷಿ ಸೇವಿತಃ ‖201‖ ನಾರದೇನಾರ್ಚ್ಯತೇ ನಿತ್ಯಂ ಸಹ ಸಪ್ತರ್ಷಿ ಪೂರುಷೈಃ‖ ವ್ಯಾಸರೂಪೀ ಚ ಭಗವಾನ್ ಅತ್ರೈವ ಕಿಲ ಪೂಜ್ಯತೇ ‖202‖ ವಾಯೋಸ್ತೃತೀಯ ರೂಪೇಣ ಮಧ್ವೇನ ಮುನಿಭಿಃ ಸಹ" | ಹೀಗೆ ಪ್ರತ್ಯಕ್ಷ ಹೋಗಿ ನೋಡಿಯೂ ಪ್ರತಿಭಾ ಬಲದಿಂದಲೂ ಜ್ಞಾತತತ್ವವನ್ನು ನಿರೂಪಿಸಿದ್ದಾರೆ. ಇಲ್ಲೇ ಭೂಗೋಳ ವರ್ಣನ ಕಾರ್ಯದಲ್ಲೂ ಮಧ್ವಸಿದ್ಧಾಂತೋಕ್ತ ಸರ್ವ ಪ್ರಮೇಯವನ್ನೂ 360 ಶ್ಲೋಕಗಳಲ್ಲಿ ಏಕತ್ರವಿಸ್ಪಷ್ಟತಯಾ ತಿಳಿಸಿ ಕೊಟ್ಟಿದ್ದಾರೆ. ಜನರಿಗೆ ಅಪೇಕ್ಷಿತವಾದದ್ದೇ ಈ ಕಾರ್ಯ. ಅದುವರೆಗೆ ಇತರ ಯಾರಿಂದಲೂ ಮಾಡಲ್ಪಟ್ಟಿರಲಿಲ್ಲ. ಆದರೂ ಈ ಒಂದು ಸಿದ್ಧಾಂತ ಮರೆಯಬಾರದು. ಈ ಎಲ್ಲಾ ಕಾರ್ಯ ಪ್ರತ್ಯಕ್ಷದಿಂದ ಸಂಪ್ರತಿಪನ್ನವಾಗುವ ರೀತಿಯಲ್ಲಿ ಅವರು ಋಜುಗಳೆಂದು ಸಾಧಿಸಲು ಶಕ್ಯವಲ್ಲ. ಆಗಮ ಸಹಾಯವೇ ಬೇಕು. ಅತೀಂದ್ರಿಯ ವಿಷಯದಲ್ಲಿ ಹಾಗೇ ನಿರ್ಣಯ. ಆಗಮಾನುಸರಣೆಮಾಡಿ ಪ್ರತ್ಯಕ್ಷ ಮಹಿಮೆಯನ್ನು ಮನಸ್ಸಿನಿಂದ ಅನುಸಂಧಾನ ಮಾಡಿದರೆ ಪ್ರತ್ಯಕ್ಷವೂ ಋಜುತ್ವಕ್ಕೆ ಸಂಭಾವಕವಾಗುತ್ತೆ,.

ಹೀಗೆ ಏಕಾದಶೀ ವಿಷಯದಲ್ಲೂ "ವರ್ಣನೆ" ಮಾತ್ರ ಮಾಡಿಲ್ಲ; ಶ್ರೀ ಮಧ್ವಾಚಾರ್ಯರ ಅಭಿಪ್ರಾಯ ವಿರುದ್ಧ ಪಕ್ಷವಾಗಿ ಇತರ ವೈಷ್ಣವರೇ ಆಚರಿಸುತ್ತಿರುವುದನ್ನು ಸಹಿಸದೆ, ಆ ವಿರುದ್ಧ ಪಕ್ಷದ ಖಂಡನ ಪೂರ್ವಕವಾಗಿ ಆಚಾರ್ಯಾಭಿಮತ ಸಿದ್ಧಾಂತವನ್ನು ಸ್ಫುಟವಾಗಿ ಸಂಗ್ರಹಿಸಿ, ಅನುವದಿಸಿ, ವಿವರಿಸಿ, ನಿರ್ಣಯವನ್ನೇ ತಿಳಿಸಿಕೊಟ್ಟಿದ್ದಾರೆ. ಆದ್ದರಿಂದಲೇ ಗ್ರಂಥಕ್ಕೆ "ಏಕಾದಶೀ ನಿರ್ಣಯ" ಎಂದು ಹೆಸರಿಟ್ಟಿದ್ದಾರೆ. ಆರಂಭದಲ್ಲೇ "ಏಕಾದಶೀಂ ವೃಥಾ ಘ್ನಂತಿ ಕೇಚಿದಾಸ್ಮಾಕ ಪಂಡಿತಾಃ ‖ ತೇಷಾಂ ಲುಪ್ತ್ಯೈಃ ಕರ್ಮಕ್ಲೃಪ್ತ್ಯೈಃ ಕೃಷ್ಣ ಪ್ರೀತ್ಯೈ ಯತಾಮಹೇ |" (ಕೆಲವರು ವೈಷ್ಣವ ಮಠದ ಪಂಡಿತರೇ ಏಕಾದಶೀ ಸ್ವರೂಪವನ್ನು ವಿಪರೀತ ತಿಳಿದುಕೊಂಡು ಅದರ ಅನುಷ್ಠಾನ ನಿಷ್ಫಲವಾಗುವಂತೆ ಮಾಡಿಕೊಂಡಿದ್ದಾರೆ. ಅವರ ಖಂಡನೆಮಾಡಿ ಕರ್ಮನಿಯಮ ತೋರಿಸಿ ಕೃಷ್ಣ ಪ್ರೀತಿ ಸಂಪಾದಿಸಲು ಯತ್ನಿಸುತ್ತೇವೆ) ಎಂದಿದೆ. ಹೀಗೆ ಪ್ರತಿಜ್ಞೆ ಮಾಡಿ ಗ್ರಂಥ ಪೂರ್ತಿಮಾಡಿ, "ಇತಿ ಶ್ರೀ ಮಧ್ವಕೃಪಯಾ ಹಯಗ್ರೀವಸ್ಯ ಕಿಂಕರಃ ‖ ಏಕಾದಶೀ೦ ನಿರ್ಣಿನಾಯ ವಾದಿರಾಜೋ ಯತಿಃ ಸ್ಫುಟಂ‖ ಎಂದು ಉಪಸಂಹಾರವಾಕ್ಯ ಬರೆದಿದ್ದಾರೆ. (ಹೀಗೆ ಶ್ರೀ ಮಧ್ವಾಚಾರ್ಯರ ಕೃಪೆಯಿಂದ ಹಯಗ್ರೀವ ಭೃತ್ಯರಾದ ವಾದಿರಾಜ ಯತಿಗಳು ಏಕಾದಶೀ ಸ್ವರೂಪವನ್ನು ನಿರ್ಣಯಿಸಿದ್ದಾರೆ ಎಂದರ್ಥ.) ಯದ್ಯಪಿ ಕೃ. ಮಹಾರ್ಣವದಲ್ಲಿ ವಿದ್ಧೈಕಾದಶೀ ಉಪೋಷಣ ಮಾಡಬಾರದು, ಅವಿದ್ಧವನ್ನೇ ಉಪೋಷಣೆ ಮಾಡಬೇಕು. ಸಂದೇಹ ಬಂದರೆ ದ್ವಾದಶ್ಯುಪೋಷಣೆಮಾಡಿ ತ್ರಯೋದಶೀ ಬೆಳಿಗ್ಗೆ ಪಾರಣೆ ಮಾಡಬೇಕೆಂದು ನಿರ್ಣಯವನ್ನು ಶ್ರೀಮದಾಚಾರ್ಯರೇ ಬರೆದಿದ್ದಾರೆ. ಆದರೂ "ಅತಿವೃದ್ಧಿ ಪಕ್ಷದಲ್ಲಿ ಯಾವಾಗ ವೇಧ ಬರುತ್ತೆ; ಸಮ ವೃದ್ಧಿ ಪಕ್ಷದಲ್ಲಿ ಎಷ್ಟು ಘಳಿಗೆ ದಶಮಿ ಇದ್ದರೆ ವೇಧ ಬರುತ್ತೆ; ಸಮಪಕ್ಷದಲ್ಲಿ ಹೇಗೆ; ಕ್ಷಯಪಕ್ಷದಲ್ಲಿ ಹೇಗೆ? ಏಕೆಂದರೆ ವೃದ್ಧಿ ಸಮಕ್ಷಯಗಳಲ್ಲಿ ತಿಥಿಗಳು ಒಂದೇ ರೀತಿಯಲ್ಲಿರುವುದಿಲ್ಲ" ಎಂದು ಶಂಕಿಸಿದರೆ, ಆ ವಿಷಯದಲ್ಲಿ ಯಾವ ಸಮಾಧಾನ ರಹಸ್ಯ ವಿಶೇಷವನ್ನು ಶ್ರೀಮದಾಚಾರ್ಯರು ಬರೆಯದೆ,

ತ್ರಿವಿಕ್ರಮ ಪಂಡಿತಾಚಾರ್ಯರಿಗೆ ಮುಖತಃ ವಿವರಿಸಿದ್ದಾರೋ, ಮತ್ತು ಅವರಿಂದ ಪ್ರತ್ಯಕ್ಷವಾಗಿ ತಿಳಿದುಕೊಂಡು ಉಡುಪಿಯ ಮಠದವರು ಅನುಷ್ಠಾನ ಮಾಡುತ್ತಿದ್ದರೋ, ಆ ತತ್ವವಿಶೇಷವನ್ನು ಈ ಗ್ರಂಥದಲ್ಲಿ ವಾದಿರಾಜ ಗುರುಗಳು ನಿರವಕಾಶ ವಾಕ್ಯಗಳಿಂದ ಪ್ರತಿಪಾದಿಸಿದ್ದಾರೆ. ಶ್ರೀಮದಾಚಾರ್ಯರು ಏಕೆ ಆ ವಿಶೇಷಗಳನ್ನು ಬರೆಯಲಿಲ್ಲವೆಂಬುದಕ್ಕೆ ಕಾರಣವನ್ನು ಗುರುರಾಜರು ಹೇಳುತ್ತಾರೆ: "ಮುಕ್ತಿಯೋಗ್ಯ ಜನನಾಯಕರಾದ ಶ್ರೀಮದಾಚಾರ್ಯರು ಏಕಾದಶೀ ವಿಷಯದಲ್ಲಿ ಮೂಲಗ್ರಂಥಗಳ ಪ್ರಮಾಣ ಶ್ಲೋಕಗಳನ್ನೇ ಸಂಗ್ರಹ ಮಾಡತಕ್ಕವರಾಗಿ ವೇದಕಾಲ ವ್ಯತ್ಯಾಸ ವಿಷಯಕವಾದ ತಮ್ಮ ಆಶಯವನ್ನು ಶಿಷ್ಯನಿಗೆ ಉಪದೇಶ ಮಾಡಿದವರಾಗಿ ಅದನ್ನು ಗ್ರಂಥದಲ್ಲಿ ಬರೆಯಲಿಲ್ಲ. ಅವರು ಉದಾಹರಿಸಿದ ಸ್ಮೃತಿಯಾದರೋ ಸಾಮ್ಯವಿವಕ್ಷೆಯಿಂದ ಹೊರಟಿತ್ತು." ವೃದ್ಧಿ ಕ್ಷಯಗಳ ಕಾಲವ್ಯತ್ಯಾಸದಿಂದ ವೇಧಾಕಾಲ ವ್ಯತ್ಯಾಸಮಾಡಿಕೊಳ್ಳುವ ವಿಧಾನ ಅದರಲ್ಲಿರಲಿಲ್ಲ. ತಥಾಚ ಶಿಷ್ಯನಿಗೆ ಉಪದೇಶಮಾಡಿದ ಸ್ಪಷ್ಟ ಆಚಾರ್ಯರ ವಾಕ್ಯಗಳ ಅಜ್ಞಾನದಿಂದ, ದೂರಸ್ಥ ಅನ್ಯವೈಷ್ಣವ ಮಠೀಯರು "ಪದಕಾ" (formula) ನಿರ್ಮಾಣ ಮಾಡಿಕೊಂಡು ಅತಿವೃದ್ಧಿ ಮುಂತಾದ ಆರೇಳು ಸಂದರ್ಭಗಳಲ್ಲಿ ವೇಧಾಭಾವ ಸಂಪಾದನೆಗಾಗಿ ಎಷ್ಟು ದಶಮೀ ಘಳಿಗೆ ಇರ ಬೇಕೆಂಬುದನ್ನು ತಿಳಿಯುವ ಕ್ರಮವನ್ನು ಸ್ವಯಂ ರಚಿಸಿದರು. ಆ ಪದ್ಧತಿಯು ಆಚಾರ್ಯರ ಗ್ರಂಥಬಾಹ್ಯ ವಾಕ್ಯಗಳಿಗೆ (ಮುಖತಃ ಪಂಡಿತಾಚಾರ್ಯರಿಗೆ ಮಾಡಿದ ಉಪದೇಶ ವಾಕ್ಯಗಳಿಗೆ) ಸಮಂಜಸವಾಗಲಿಲ್ಲ ಎಂದು ನಿರ್ಣಯ ಪ್ರದರ್ಶನಾರ್ಥವೇ ಈ ಏಕಾದಶೀ ನಿರ್ಣಯಗ್ರಂಥವು ಪ್ರವೃತ್ತವಾದುದೆಂದು ಪಾಠಕರೆಲ್ಲರಿಗೂ ಸಮ್ಮತವಾದ ವಿಷಯ. [ದುಡುಕಿ ಅನುಮಾನ ಮಾಡುವುದಾದರೆ ಇತರ ವೈಷ್ಣವ ಮಠಕ್ಕೆಲ್ಲಾ ಬೋಧಕ ನಿರ್ಣಯ ಗ್ರಂಥ ಮಾಡಿದ್ದರಿಂದ ಅವರೆಲ್ಲರಿಗಿಂತಲೂ ವಾದಿರಾಜ ಗುರುಗಳು ಉತ್ತಮರು ಎಂದು ವಾದಿಸ ಬಹುದು, ಆದರೆ ಹಾಗೆ ಆಗಮರಹಿತ ಅನುಮಾನ ಮಾಡಿಬಿಟ್ಟರೆ ಆ ಅನುಮಾನ ಕೆಟ್ಟು ಹೋಗುತ್ತೆ, ಆದ್ದರಿಂದ ಆಖ್ಯಾನ, ವಾ.ಗು.ಚ. ವೇದವೇದ್ಯ ಸಂಪ್ರದಾಯಾದಿ ಆಗಮಗಳಿಂದ ಋಜುತ್ವ ತಿಳಿದು, ನಂತರ ಆಗಮಾನುಸಾರಿ ಅನುಮಾನಮಾಡಿದರೆ ನಿಜತತ್ವವೇ ಸಿದ್ಧಿಸುತ್ತೆ. ಅನ್ಯಥಾ ಅರ್ಜುನನಿಗೆ ಅಶಕ್ಯವಾದ ದಸ್ಯುಹನನವನ್ನು ಪರೀಕ್ಷಿದ್ರಾಜ ಮಾಡಿದ್ದರಿಂದ ಪರೀಕ್ಷಿತನು ಅರ್ಜುನನಿಗಿಂತ ಉತ್ತಮನೆಂದು ಹೇಳಬೇಕಾದೀತು. ಟೀಕಾಚಾರ್ಯರು ಪದ್ಮನಾಭತೀರ್ಥಾದಿಗಳ ದೆಸೆಯಿಂದ ಉತ್ತಮರೆಂದು ಹೇಳಬೇಕಾದೀತು. ] ಆದ್ದರಿಂದ ಗುರುರಾಜರು ಎಲ್ಲ ವೈಷ್ಣವ ಮಠದವರಿಗೂ ತಿಳಿಯಲೆಂದು ಪಂಡಿತಾಚಾರ್ಯರು ಆಚಾರ್ಯರ ದೆಸೆಯಿಂದ ಉಪದೇಶಹೊಂದಿದ ವಾಕ್ಯಗಳನ್ನು ಉದಾಹರಿಸಿ ಆ ವಾಕ್ಯಗಳಿಗೆ ಸ್ಪಷ್ಟ ವ್ಯಾಖ್ಯಾನಮಾಡಿ ವೃದ್ಧ್ಯಾದಿ ಪಕ್ಷಗಳು ನಾಲ್ಕೇ ಎಂದು ತೋರಿಸಿ ಅತಿವೃದ್ಧಿಯಲ್ಲಿ 54-40 ದಶಮೀ ಪ್ರಾಪ್ತವಾದರೆ ವೇಧೆ. ಸಮವೃದ್ಧಿಯಲ್ಲಿ 55 ಘಳಿಗೆ ದಶಮೀ ಪ್ರಾಪ್ತವಾದರೆ ವೇಧೆ. ಸಮ ಪಕ್ಷದಲ್ಲಿ 55-50 ಘಳಿಗೆ ದಶಮೀ ಬಂದರೆ ವೇಧೆ. ಕ್ಷಯ ಪಕ್ಷದಲ್ಲಿ 55-55 ಘಳಿಗೆ ದಶಮೀ ಬಂದರೆ ವೇಧೆ, ಎಂದು ಆಚಾರ್ಯರ ಅಭಿಪ್ರಾಯ, ತ್ರಿವಿಕ್ರಮಪಂಡಿತಾಚಾರ್ಯರ ಮೂಲಕ ಜ್ಞಾತವಾದದ್ದು ಎಂದು ನಿರ್ಣಯ ಮಾಡಿದ್ದಾರೆ. 44ನೇ ಶ್ಲೋಕದಲ್ಲಿ ನಾಲ್ಕು ಐದು ಆರು ಘಳಿಗೆ ವೃದ್ಧಿ ಬಂದರೆ "ಅತಿವೃದ್ಧಿ" ಎಂದೂ, ಒಂದು ಎರಡು ಮೂರು ಘಳಿಗೆ ತಿಥಿ ವೃದ್ಧಿ ಆದರೆ

"ಸಮವೃದ್ಧಿ" ಎಂದೂ, ಸಾಮ್ಯವಿದ್ದರೆ ತಿಥಿ "ಸಾಮ್ಯ"ವೆಂತಲೂ, ದಶಮಿ ದೆಸೆಯಿಂದ ತಿಥಿ ಒಂದೆರಡು, ಮೂರುನಾಲ್ಕು, ಐದಾರು, ಘಳಿಗೆ ಕಮ್ಮಿಯಾದರೆ "ಕ್ಷಯಪಕ್ಷ" ಎಂತಲೂ ಹೆಸರೆಂದು ಸೂಚಿಸಿದ್ದಾರೆ. ಹೀಗೆ ನಾಲ್ಕೇ ಪಕ್ಷ. "ಕೆಲವರು ನಮ್ಮ ಪಂಡಿತರು" ಎಂದು ಪೂರ್ವಪಕ್ಷಿಗಳನ್ನು ಕರೆದಿರುವುದರಿಂದ, ಈ ಖಂಡನೆಗೆ ವಿಷಯರು ಪ್ರಸಿದ್ಧ ಅನೇಕ ನಮ್ಮ ಮಾಧ್ವ ಮಠಾಧಿಪತಿಗಳೇ ಮುಂತಾದ ವಿದ್ವಾಂಸರು. ಅವರ ಏಕಾದಶೀ ಅನುಷ್ಠಾನವು ಶ್ರೀಮದಾಚಾರ್ಯರ ಮತಾವಲಂಬನದಿಂದ ನಿರ್ದೋಷವಾಗಲೆಂಬುದು ಗ್ರಂಥದ ಉದ್ದೇಶ. "ಬಹ್ವಾಗಮ ವಿರೋಧೇತು" ಎಂಬ ವಾಕ್ಯರೂಪ ಆಚಾರ್ಯರ ಆಜ್ಞೆಯನ್ನು ಅವರು ಮೀರಬಾರದೆಂದೂ ಅವರ ಉದ್ದೇಶ್ಯ. ಗ್ರಂಥೋಕ್ತ ನಿರ್ಣಯವು ರಜತಪೀಠಪುರದಲ್ಲಿ ಅನೇಕ ಮಠೀಯರಿಂದ ಅನುಷ್ಠಿತವಾಗಿದ್ದರೂ; ಇತ್ತೀಚೆಗೆ ಉಡುಪಿ ಸರ್ವ ಮಠೀಯರಿಂದ ಸ್ವೀಕೃತವಾಗಿದ್ದರೂ, ಇದುವರೆವಿಗೆ ಈ ಗ್ರಂಥವು ದೊರೆಯದೇ ಅಮುದ್ರಿತವಾಗಿ ಐತಿಹ್ಯ ರೂಪವಾಗಿದ್ದು ಈಗತಾನೇ **1911** ಕ್ರಿಸ್ತಾಬ್ದ ಬೆಳಗಾಂವಿನಲ್ಲೂ, ನಂತರ **1953** ರಲ್ಲಿ ಉಡುಪಿಯಲ್ಲೂ, ಅಚ್ಚು ಮಾಡಲ್ಪಟ್ಟು ಜನರಿಗೆ ಸಿಕ್ಕಿದೆಯಾದರೂ, ಪ್ರಾಚೀನ ಬಹು ವರ್ಷಗಳಲ್ಲ ಈ ವಿಷಯವು ಸರ್ವ ವೈಷ್ಣವರಿಗೂ ಸ್ಪಷ್ಟವಾಗಿ ಗೊತ್ತಾಗದೇ ಇದ್ದುದು ವಿಷಾದಾರ್ಹ ವಿಷಯವೇ. ಗ್ರಂಥವು ಶ್ರೀಮದಾಚಾರ್ಯರಿಂದ ಅವಶೇಷಿತ ಕಾರ್ಯವನ್ನೇ ಪೂರ್ತಿ ಮಾಡಿದೆ ಎಂದು ಹೇಳಿದರೂ ಏನೂ ಅತಿಶಯೋಕ್ತಿಯಾಗಲಾರದು. ಅನ್ಯವಾದನಿರಾಕರಣ ಪೂರ್ವಕವಾಗಿ ಶ್ರೀಮದಾಚಾರ್ಯರ ಸಿದ್ಧಾಂತ ಸ್ಥಾಪನ ರೂಪವಾಗಿರುವುದರಿಂದ (ಅತಿವೃದ್ಧಿ, ಸಮವೃದ್ಧಿ, ಸಾಮ್ಯ, ಕ್ಷಯ ಎಂಬ ನಾಲ್ಕಾ ಕಕ್ಷೆಗಳು; **54-40; 55; 55-50 ; 55-55** ಎಂಬುದೇ ಕ್ರಮವಾಗಿ ದಶಮೀ ವೇಧವಾಗುವ ಘಳಿಗೆಗಳು ಎಂದು ನಿರವಕಾಶವಾಗಿ ಸಪ್ರಮಾಣವಾಗಿ ಪ್ರತಿಪಾದಿಸಿರುವುದರಿಂದ) "ನಿರ್ಣಯ" ಎಂಬ ಹೆಸರೂ ಗ್ರಂಥಕ್ಕೆ ಅಂಗೀಕಾರ್ಯವೇ. ಆದ್ದರಿಂದ ಪೂರ್ವಪಕ್ಷ ಗ್ರಂಥದಲ್ಲಿ ಗುರುರಾಜರ ಗ್ರಂಥವನ್ನು ಅಲೆಗಳೆದಿರುವುದೆಲ್ಲಾ ಪ್ರತ್ಯಕ್ಷಾದಿ ಪ್ರಮಾಣ ವಿರುದ್ಧವೇ. ಮುದ್ರಿತ ಭೂಗೋಳ ವರ್ಣನೆ, ಏಕಾದಶೀ ನಿರ್ಣಯಗಳನ್ನು ಅವರು ಓದಿಯೇ ಇಲ್ಲವೆಂದು ತೋರುತ್ತೆ.

ಕಿಂಚ ನಾವಾದರೂ ಒಂದು ತತ್ತ್ವವನ್ನು ಮರೆಯಬಾರದು. ಅದೇನೆಂದರೆ ಭೂಗೋಳ ನಿರ್ಣಯ, ಏಕಾದಶೀ ನಿರ್ಣಯ ಎಂಬ ಎರಡು ಗ್ರಂಥಗಳಲ್ಲೂ ಪ್ರಾಯೇಣ ಶ್ರೀಮದಾಚಾರ್ಯರಿಂದ ಸರ್ವಥಾ ಅನುಕ್ತವಾದ ನೂತನ ಪ್ರಮೇಯಗಳು ಆವಿಷ್ಕೃತವಾಗಿಲ್ಲ. ಶ್ರೀ ವಾದಿರಾಜ ಮುನಿಗಳು ಶ್ರೀಮದಾಚಾರ್ಯ ಸಂಚರಿತ ಮನೋಮಾರ್ಗವನ್ನು ಅನುಸರಿಸಿ ವ್ಯಾಖ್ಯಾನ ಪ್ರವಚನಾದಿರೂಪದಿಂದ ಭೂಗೋಳದ ವಿಸ್ತಾರಾದಿಗಳನ್ನು ಸ್ಪಷ್ಟವಾಗಿ ವರ್ಣಿಸಿದ್ದಾರೆ. ಆದರೆ ಆಂಗ್ಲಾದಿ ಜನರ ಮತನಿರಾಕರಣೆಮಾಡಿ ದೇವಲೋಕ ವಿಶೇಷಗಳನ್ನು ತೋರಿಸಿ ದೇವತೆಗಳ ಸಂಬಂಧಿ ರಹಸ್ಯ ತತ್ತ್ವಗಳನ್ನು ಪ್ರಕಾಶಿಸಿಲ್ಲ. ಆ ದೇವಲೋಕ ಸಮುದ್ರಾದಿಗಳಿಗೆ ಹೊಗತಕ್ಕ ಸುಲಭಮಾರ್ಗಗಳು ಹೇಳಲ್ಪಟ್ಟಿಲ್ಲ. ಏಕಾದಶೀ ನಿರ್ಣಯಗ್ರಂಥದಲ್ಲೂ ತ್ರಿವಿಕ್ರಮ ಪಂಡಿತಾಚಾರ್ಯರ ವಚನಗಳನ್ನು ಉದಾಹರಿಸಿ ಶ್ರೀಮದಾಚಾರ್ಯರಿಗೆ ಅಭಿಮತವಾದ ವೇದಾನುಷ್ಠಾನ ಪ್ರಕಾರಗಳನ್ನು ವಿವರಿಸಿ ನಿರ್ಣಯ ಮಾಡಿದರು. ಏವಂಚ ಪೂರ್ವಾಚಾರ್ಯರಿಂದ ಅನುಕ್ತವಾದ ತತ್ತ್ವಗಳನ್ನು ಪ್ರತಿಪಾದಿಸದಿದ್ದರೂ

ಗ್ರಂಥಗಳಿಂದ ಲೋಕೋಪಕಾರ ಆಗಿದೆ ಎಂಬುದು ವಾಚಕರಿಗೆ ಸ್ಪಷ್ಟವೇ. ಇಷ್ಟೇ ಶ್ರೀಮಧ್ವಗುರುಗಳು ಇತರರಿಗಾಗಿ ಮೀಸಲಾಗಿ ಉಳಿಸಿದ್ದ ಕಾರ್ಯ, ಟೀಕಾದಿ ರಚನೆಯು ಶ್ರೀ ಜಯತೀರ್ಥಾದಿ ಜನರಿಗೆ ಉಳಿಸಲ್ಪಟ್ಟಿತ್ತು. ಸ್ವೇಚ್ಛಾನಿಯತ ತತ್ವರೀತಿಯಲ್ಲಿ ವ್ಯಾಖ್ಯಾನ, ಪ್ರಚಾರ, ಸ್ಪಷ್ಟೀಕರಣ, ಮಠಪರ್ಯಾಯ ಪೂಜಾದಿ ವ್ಯವಸ್ಥಾ, ಶೈವದಮನಾದಿ ದೇವಕಾರ್ಯ ನಿರ್ವಾಹ, ತದರ್ಥವಾಗಿ ಆಖ್ಯಾನಪ್ರಕಾಶ, ಸಂಶಯ ನಿವರ್ತಿಯಾಗುವಂತೆ ತದಧಿಕಾರಿ ಯೋಗ್ಯತಾನುಸಾರವಾಗಿ ಭಿನ್ನ ಭಿನ್ನ ಭಾಷಾಗಳಲ್ಲಿ ಶಾಸ್ತ್ರಾರ್ಥ ಪ್ರತಿಪಾದನೆ, ಭಕ್ತಿ ಮಾರ್ಗ ಪ್ರದರ್ಶನ ಇತ್ಯಾದಿಗಳು ವಾದಿರಾಜ ಗುರ್ವಾದಿಗಳಿಗೆ ಸೂಚಿಸಲ್ಪಟ್ಟಿತ್ತು, ಪಾಠ ಪ್ರವಚನಗಳಿಂದ ಸಾಂಪ್ರದಾಯಿಕ ಶಾಸ್ತ್ರಾರ್ಥ ಪ್ರವರ್ತನೆಯು ಇತರರಿಗೆ ವಿಹಿತವಾಗಿ ಉಳಿಸಲ್ಪಟ್ಟಿತು. ಅಷ್ಟೇ ಹೊರತು ಸಂಕ್ಷೇಪರೂಪದಿಂದಾಗಲಿ, ಸಾಮಾನ್ಯರೂಪದಿಂದಾಗಲಿ, ಅಸ್ಪಷ್ಟರೂಪದಿಂದಾಗಲಿ, ಸೂಚನಾರೂಪದಿಂದಾಗಲಿ, ಸರ್ವಥಾ ಶ್ರೀಮದಾಚಾರ್ಯರು ಹೇಳದೆ ಇರುವ ಸಿದ್ಧಾಂತ ನಿರೂಪಣವನ್ನು ಇತರರು ಮಾಡಲೆಂದು ಅವರು ಬಿಟ್ಟಿದ್ದಾರೆಂದು [ಇನ್ನು ಕೆಲವು ರಹಸ್ಯ ವಿಶೇಷಗಳನ್ನು ಪಂಡಿತಾಚಾರ್ಯರಿಗೆ ಉಪದೇಶಮಾಡಿ ಲೋಕಕ್ಕೆ ತಿಳಿಸಲೆಂದೇ ಬಿಟ್ಟಿದ್ದಾರೆ. ಅಪರೋಕ್ಷ ಜ್ಞಾನಾರ್ಥವಾಗಿ ಆವಶ್ಯವಕ್ತವ್ಯವಾದ ಸರ್ವವನ್ನೂ ಆಚಾರ್ಯರು ಹೇಳಿಯೇ ಇದ್ದಾರೆ. ಅಧಿಕ ಅವಶ್ಯಕತೆ ಯಾರಿಗಾದರೂ ಇದ್ದರೆ ಶಾಸ್ತ್ರದಲ್ಲಿ ಸೂಚಿತಾರ್ಥವನ್ನು ಅನುಗ್ರಹ ಶಕ್ತಿಯಿಂದ ಪ್ರಕಾಶಪಡಿಸಿದ್ದಾರೆ. “ಯಸ್ಯದೇವೇ” ಎಂದು ಶ್ರುತಿ ಇದೆ. ಉಪದೇಷ್ಟೃ ಗುರುಗಳಲ್ಲಿ ಸ್ಥಿತರಾಗಿಯೂ ಅನುಗ್ರಹಿಸುತ್ತಾರೆ] ತಿಳಿಯಬಾರದು. ಜ್ಞಾನಿಗಳಾದ ವಾದಿರಾಜ ಗುರುಗಳಂಥ ಇತರರು ಶ್ರೀಮದಾಚಾರ್ಯರು ಬರೆಯದೇ ಬಿಟ್ಟಿರುವ ದೇವರಹಸ್ಯಗಳನ್ನು ಬರೆವಣಿಗೆಯಿಂದ ಪ್ರಕಾಶ ಪಡಿಸುವ ಗೋಜಿಗೆ ಹೋಗುವವರಲ್ಲ. ಕಿಂತು ಬದುಕಿರುವವರಿಗೂ ಸಾಮಾನ್ಯವಾಗಿ “ಮಾನುಷತ್ವ”ವನ್ನೇ ಪ್ರಕಟಿಸುತ್ತಾರೆ. ಅದಕ್ಕೇ ಟೀಕಾಚಾರ್ಯರು ತತ್ವನಿರ್ಣಯ ಟೀಕಾಂತ್ಯದಲ್ಲಿ ತಾವು ದೇವತೆಗಳಲ್ಲವೆಂದು ಹೇಳಿಕೊಂಡು ಬಿಟ್ಟಿದ್ದಾರೆ. “ಆನಂದತೀರ್ಥ ಭಗವದ್ವಚಸಾಂವಿಶಿಷ್ಟ ವ್ಯಾಖ್ಯಾನ ಕರ್ಮಣಿ ಸುರಾಹ್ಯಧಿಕಾರಿಣೋತ್ರ ‖ ಯಾನ್ಮಾದೃಶೋಪಿಯತತೇ ತದತೀವ ಹಾಸ್ಯಂ ಕಿಂನಾಮ ಭಕ್ತಿಭರಿತಸ್ಯ ವಿಭೂಷಣಂ ತತ್;” “ಅಸ್ಮದಾದೀನಾಂ ಪ್ರತ್ಯಕ್ಷಂ ಅಯೋಗಿಕಂ;” ಎಂದೂ ತಮ್ಮನ್ನು ಅಯೋಗಿಗಳೊಂದಿಗೆ ಸೇರಿಸಿಕೊಂಡಿದ್ದಾರೆ, ಅಂಥ ಅನಹಂಕೃತಿ ದ್ಯೋತನದಿಂದ ಅವರಿಗೆ ಪುಣ್ಯವಿದೆ. ವಾದಿರಾಜ ಗುರುಗಳೂ "ಕಲಿಂಜಯ ತದ್ವಿವಿಕ್ಷುಂ" ಎಂದು ಗುರುಗಳನ್ನು ಪ್ರಾರ್ಥನೆ ಮಾಡಿ ತಾವು ಕಲಿ ಪ್ರವೇಶಾರ್ಹರೆಂಬ ಅರ್ಥ ಬರುವಂತೆಯೂ [ಆಗಮಾನುಸಾರಿ ವಿಚಾರಿಸಿದರೆ ಅದಕ್ಕೆ "ಪ್ರವೇಶಾನರ್ಹ” ಎಂದೂ ಅರ್ಥವಾಗುತ್ತೆ.]ಸೂಚಿಸಿಬಿಟ್ಟಿದ್ದಾರೆ. ತಥಾಚ ಇಂಥ ಸಂಪ್ರತಿಪನ್ನ ಅಪರೋಕ್ಷ ಜ್ಞಾನಿಗಳ ಮಹತ್ವಾದಿಗಳನ್ನು ಗೌಣೋಕ್ತಿ, ಪ್ರತ್ಯಕ್ಷ ಶುಷ್ಕಾನುಮಾನಗಳಿಂದ ಚರ್ಚಿಸಬಾರದು. ಆಗಮ, ಆಗಮಾನುಸಾರಿ ಯುಕ್ತಿ ಪ್ರತ್ಯಕ್ಷ, ಶ್ರೀವೇದವೇದ್ಯರಂಥ ಶಿಷ್ಟಾಚಾರ್ಯೋಪದೇಶಗಳಿಂದ ನಿಶ್ಚಯಿಸಬೇಕು.

**ಪುಟ 10-7 ಉಕ್ತಿ:** ವಿಜಯೇಂದ್ರಸ್ವಾಮಿಗಳವರ ವೃಂದಾವನದ ಎದುರಿಗೆ ಸಾಕ್ಷಾನ್ನಾರಾಯಣನೇ ಇರುತ್ತಾನೆ. ಹೀಗೆ "ಅನ್ಯವೈಲಕ್ಷಣ್ಯವಿರುವುದರಿಂದ ವೃಂದಾವನದ ಎದುರಿಗೆ ಬಾದರಾಯಣಮೂರ್ತಿ ಇರುವುದರಿಂದ ವಾದಿರಾಜಗುರುಗಳು ಋಜು" ಎಂಬ ವಾದವು ಖಂಡಿಸಲ್ಪಟ್ಟಂತಾಯಿತು.

**ಪ್ರತ್ಯುಕ್ತಿ:** ಆಗಲಿಲ್ಲ. ಏಕೆಂದರೆ ಯಾವ ವಿವೇಕಿಯಾದ ಋಜುತ್ವವಾದಿಯೂ ಇಂಥ ಕೆಟ್ಟ ಅನುಮಾನವಾಕ್ಯವನ್ನು ಋಜುತ್ವಸಾಧಕವನ್ನಾಗಿ ಹೇಳಿಲ್ಲ ಮತ್ತು ಹೇಳುವುದಿಲ್ಲ. ವಿಲಕ್ಷಣ ವೃಂದಾವನಸ್ಥ ಯತಿಯು ಋಜುವೆಂದು ಎಲ್ಲಿ ವ್ಯಾಪ್ತಿ ಇದೆ? ಹಾಗಿದ್ದರೆ ಋಜುತ್ವ ವಾದಿಗಳು ಏನುಹೇಳುತ್ತಾರೆ ಎಂದರೆ ಆಗಮದಿಂದ ಋಜುವೆಂದು ಪ್ರಮಿತರಾದ ವಾದಿರಾಜಗುರುಗಳ**[1-33 ಶ್ಲೋಕಗಳಲ್ಲಿ ವಾದಿರಾಜಗುರುಗಳ ವಾಸಸ್ಥಳವು ಕಲಿ ಪ್ರವೇಶಾನರ್ಹ ಪಂಚವೃಂದಾವನವು. ಬ್ರಹ್ಮವಾಯ್ವಾದಿ 33 ಕೋಟಿ ದೇವತೆಗಳು ಆ ವೃಂದಾವನದಲ್ಲೂ ಅದರ ಹಿಂದಿರುವ ಧವಳಗಂಗೆಯಲ್ಲೂ ಒಂದೊಂದಂಶದಿಂದ ವಾಸ ಮಾಡುತ್ತಾರೆಂದಿದೆ. ಸರ್ವಭಕ್ತರ ಬಿಂಬರೂಪಗಳೂ ಆ ವೃಂದಾವನದಲ್ಲಿದೆ. ಅನಿರುದ್ಧಾದಿ ಪಂಚರೂಪಗಳು, ಮತ್ಸ್ಯಾದಿ ದಶ ರೂಪಗಳು, ಕಪಿಲ, ಹಂಸ, ಧನ್ವಂತರಿ, ವೇದವ್ಯಾಸ, ಬಿಂದುಮಾಧವ, ಶ್ರೀನಿವಾಸಾದಿ ಅನಂತರೂಪಗಳು ಅಲ್ಲಿ ಸನ್ನಿಹಿತರಾಗಿದ್ದಾರೆ. ಆದ್ದರಿಂದ ವೃಂದಾವನ ಸರ್ವಾಭೀಷ್ಟ ಫಲಪ್ರದವೆಂದಿದೆ. ಸರ್ವನದೀ ಪರ್ವತ ವನದೇವತಾ ಕ್ಷೇತ್ರ ದೇವತೆಗಳು ವೃಂದಾವನದಲ್ಲಿದ್ದಾರೆ. ಭೂಲೋಕದಲ್ಲಿ ಇಷ್ಟು ಸನ್ನಿಧಾನದ ವೃಂದಾವನ ಬೇರೊಂದು ಪ್ರಮಿತವಾಗಿಲ್ಲ. ವಿಜಯೇಂದ್ರ ಸ್ವಾಮಿಗಳ ವೃಂದಾವನದ ಮುಂದೆ ನಾರಾಯಣ ದೇವರಿದ್ದರೂ ಅಲ್ಲಿ ರಾಘವೇಂದ್ರ ಸ್ವಾಮಿಗಳ ವೃಂದಾವನದಷ್ಟು ಮಹಿಮೆ ಐತಿಹ್ಯದಿಂದ ಪ್ರಮಿತವಾಗಿಲ್ಲ. ಶ್ರೀವಿಜಯದಾಸಾರ್ಯಾದಿಗಳು ಕೊಟ್ಟಿರುವ ಆಗಮ ನೋಡಿದರೆ ಪೃಥ್ವಿಯಲ್ಲಿ ಇನ್ನೂ ನಾಲ್ಕು ನೂರು ವರ್ಷ ಶ್ರೀರಾಘವೇಂದ್ರ ಗುರುಗಳು ಅಸದೃಶ ಔದಾರ್ಯದಿಂದ ಭಕ್ತಾಭೀಷ್ಟರಾಗಿರುತ್ತಾರೆಂದಿದೆ. ಶ್ರೀರಾಮ ಕುಳಿತಿದ್ದ ಕಲ್ಲಿನದೆಸೆಯಿಂದ ಶ್ರೀರಾಘವೇಂದ್ರ ಸ್ವಾಮಿಗಳ ವೃಂದಾವನವಾಗಿದೆ. ರಾಮ, ನರಹರಿ, ಕೃಷ್ಣ ಹಯಗ್ರೀವಾದಿ ರೂಪಗಳು ಅಲ್ಲಿ ಸನ್ನಿಹಿತವಾಗಿವೆ. ಆದರೆ ವಿಜಯೇಂದ್ರ ಸ್ವಾಮಿಗಳು ಎಷ್ಟು ಕಾಲ ಅಧಿಕ ಸನ್ನಿಹಿತರಾಗಿ, ಹೇಗೆ ಇರುತ್ತಾರೆಂಬುದು ಗೊತ್ತಾಗಿಲ್ಲ.]** ಅವರ ಮಹತ್ವವನ್ನು ಬಹುಮಟ್ಟಿಗೆ ಸೂಚಿಸುತ್ತೆ" ಎಂದು ನಿರೂಪಿಸುತ್ತಾರೆ. ಆದರೆ, ವೃಂದಾವನ ಮಹತ್ವವು ಅನ್ಯಋಜುವಿಗೆ ಋಜುತ್ವವನ್ನು ಸಂಪಾದಿಸಿ ಕೊಡಲಾರದು. ಟಾಜ್ಮಹಲ್ ಪ್ರಾಸಾದದಲ್ಲಿ ಹೇತುವಿಗೆ ವ್ಯಭಿಚಾರವಿದೆ. ಆದರೂ ಆ ಅಪರೋಕ್ಷಜ್ಞಾನಿಗಳೇ ಸಾಕ್ಷಾತ್ಪ್ರಯತ್ನ ಮಾಡಿ ಅನುಸಂಧಾನ ವಿಶೇಷದಿಂದ ಸೋದೆಯಲ್ಲಿ ಪಂಚ ವೃಂದಾವನವನ್ನು ನಿರ್ಮಾಣಮಾಡಿಸಿ ಕಳಾ ತುಂಬಿರುವುದರಿಂದ ಯಾವುದೋ ದೇವಕಾರ್ಯನಿರ್ವಾಹಕ್ಕಾಗಿ ಮಾಡಿದ್ದಾರೆಂದು ಗೊತ್ತಾಗುತ್ತೆ. ಆದ್ದರಿಂದ ಪ್ರಪಂಚದಲ್ಲಿ ಅನ್ಯತ್ರ ಇಲ್ಲದ ವೈಚಿತ್ರ್ಯವು ಈ ವೃಂದಾವನದಲ್ಲಿದೆ. ಸ್ವವೃಂದಾವನದ ಸುತ್ತಲೂ ನಾಲ್ಕು ಸಣ್ಣ ವೃಂದಾವನಗಳು. ಮಧ್ಯೆ ತಮ್ಮ ಪ್ರಧಾನ ವೃಂದಾವನ. ಅದರಲ್ಲಿ ನಾಲ್ಕು ಕಡೆ ಹನುಮ, ಭೀಮ, ಮಧ್ವ, ವಾದಿರಾಜರ ಮೂರ್ತಿಗಳು; ಹಾಗೆ ರಾಮ, ಕೃಷ್ಣ, ವ್ಯಾಸ, ಹಯಗ್ರೀವ ಮೂರ್ತಿಗಳು.

ನಾಲು ಸಣ್ಣ ವೃಂದಾವನಗಳಲ್ಲಿ ಮತ್ಸ್ಯಾದಿ ದಶಮೂರ್ತಿಗಳು; ಹೀಗೆ ಪ್ರತಿಮೆ ಕೆತ್ತಿಸಿದ್ದಾರೆ. ಎದುರಿಗೆ ದಿವ್ಯ ಬಾಮಾಯಣ ಪ್ರತಿಮೆ. ವೃಂದಾವನದ ದಕ್ಷಿಣದಲ್ಲಿ 1616 ರಲ್ಲಿ ವೇದ ವೇದ್ಯರ ವೃಂದಾವನ ಮತ್ತು ಅಲ್ಲೇ ಶ್ರೀ ಅಣು ವೃಂದಾವನಾಖ್ಯಾನ ಶಿಲಾ 1640 ರಲ್ಲಿ ಕ್ರಮವಾಗಿ ಸ್ಥಾಪಿತವಾಗಿವೆ. ದಕ್ಷಿಣದಲ್ಲಿ ಸ್ವಲ್ಪ ಮೇಲ್ಗಡೆ ಉನ್ನತ ಪ್ರದೇಶದಲ್ಲಿ ಸ್ವಪ್ರತಿಷ್ಠಿತ ತ್ರಿವಿಕ್ರಮಸ್ವಾಮಿ ಲಕ್ಷ್ಮಿದೇವಿಯರ ಗುಡಿ; ಆ ತ್ರಿವಿಕ್ರಮಸ್ವಾಮಿ ಬದರೀ ದೇಶದಿಂದ ಶ್ರೀಪೂರ್ಣಪ್ರಜ್ಞರ ಕೃಪೆಯಿಂದ ಪ್ರಾಪ್ತವಾಗಿ ಭೂತರಾಜರಿಂದ ಕಾಶೀಮಾರ್ಗದಿಂದ ತರಲ್ಪಟ್ಟದ್ದು. ಆ ದೇವರ ಉತ್ಸವ ಭರ್ಜರಿಯಾಗಿ ವೈಭವದಿಂದ ಅದ್ಯಾಪಿ ಪ್ರತಿವರ್ಷವೂ ಫಾಲ್ಗುಣದಲ್ಲಿ 10 ದಿನ ನಡೆಯುತ್ತೆ. ಮತ್ತು ತಮ್ಮ ವೃಂದಾವನದ ಬಹಿರ್ಭಾಗದಲ್ಲಿ ತಮಗೆ ಹತ್ತಿರದಲ್ಲಿ ಭೂತರಾಜರ ಸ್ಥಾನ. [ಈ ಭೂತರಾಜರಿಗೆ ಹರಿಕೆ ಸೇವೆಗಳು ಪ್ರತಿದಿನ ನಡೆಯುತ್ತವೆ. ಭಾವಿರುದ್ರರೆಂದು ಐತಿಹ್ಯ ವಿದೆ. ಇವರು ದೇವತೆಗಳೆಂದು ಧರ್ಮಸ್ಥಳದಲ್ಲಿ ಗುರುರಾಜರ ಜೀವನ ಕಾಲದಲ್ಲಿ ನಡೆದ ಕಥ ತಿಳಿದರೆ ಗೊತ್ತಾಗುತ್ತೆ. ಧರ್ಮಸ್ಥಳದ ಸಮೀಪಕ್ಕೆ ಗುರುರಾಜರು ಸಂಚಾರ ಕ್ರಮದಲ್ಲಿ ಬಂದಿದ್ದಾಗ ಆ ಊರಿನವರು ತಮ್ಮ ಸ್ಥಳಕ್ಕೂ ಬಂದು ಭಿಕ್ಷೆ ಸ್ವೀಕರಿಸಬೇಕೆಂದು ಪ್ರಾರ್ಥಿಸಿದರು. “ಅಣ್ಣಪ್ಪ ಭೂತಾದಿ ಪಿಶಾಚಿಗಳ ಊರು ಇದು. ನಾವು ಬರುವುದಿಲ್ಲ” ಎಂದು ಗುರುರಾಜರು ಹೇಳಲು ನೀವು ಬೇಕಾದ ದೇವತೆಯನ್ನು ಇಲ್ಲಿ ಪ್ರತಿಷ್ಠಿಸಿ ನಮ್ಮ ಊರಿನಲ್ಲಿ ಭಿಕ್ಷೆ ತೆಗೆದು ಕೊಳ್ಳಬೇಕೆಂದು ಅವರು ಬಲಾತ್ಕರಿಸಿದರು. ಶ್ರೀಗುರುರಾಜರು ಕೃಪೆಮಾಡಿ ಭೂತರಾಜರಿಂದ ವಂಜುನಾಥೇಶ್ವರನನ್ನು ತರಿಸಿ ಅಲ್ಲಿ ತಂತ್ರಸಾರೋಕ್ತ ಪ್ರತಿಷ್ಠೆ ಮಾಡಿ ಅದರ ಶಿರಸ್ಸಿನಲ್ಲಿ ನರಸಿಂಹ ಸಾಲಿಗ್ರಾಮ ತಂತ್ರೋಕ್ತ ಪೂಜೆಗೆ ಏರ್ಪಡಿಸಿ, ಭೂತರಾಜರ ಪೂಜೆಗೂ ಏರ್ಪಡಿಸಿ, ಆ ಊರನ್ನು ದೇವತೆಗಳ ಸ್ಥಳವನ್ನಾಗಿ ಮಾಡಿ. ಅನ್ನದಾನ ಏರ್ಪಡಿಸಿ ತಾವೂ ಭಿಕ್ಷೆ ಸ್ವೀಕರಿಸಿದರು, ಇದರಿಂದ ಭೂತರಾಜರೂ ದೊಡ್ಡ ದೇವತೆಗಳೆಂದೇ ಗೊತ್ತಾಗುತ್ತೆ. ಅವರ ಮಂತ್ರ, ವಾದಿರಾಜ ಗುರುದೃಷ್ಟ. ಅವರ ಸ್ತುತಿಯಲ್ಲಿ “ಭಾವಿತ್ರಿನಯನ ಪದ ಭಾಜಂ” ಎಂದಿದೆ. ಇಂಥ ಉಪಾಸನೆಗೆ ಅವರು ಫಲ ಕೊಡುತ್ತಿದ್ದಾರ. ವಾ.ಗು.ಚ. IV 27 ] ಸ್ವಲ್ಪ ದೂರದಲ್ಲಿ - ಕೋಶಮಾತ್ರದಲ್ಲಿ – ಗಹನ ತಪೋವನ, ಶಾಲ್ಮಲೀನದಿ ಪ್ರವಾಹದಿಂದ ಪವಿತ್ರವಾದದ್ದು. ಅಲ್ಲಿ ಗುರುರಾಜರು ಪ್ರತ್ಯಕ್ಷ ಹಯಗ್ರೀವ ದೇವರಿಗೆ ನೈವೇದ್ಯ ಸಮರ್ಪಣೆ ಮಾಡುತಿದ್ದ ಸ್ಥಳ ಇತ್ಯಾದಿ. ವೃಂದಾವನ ಮಂದಿರದ ಪಶ್ಚಿಮ ಭಾಗದಲ್ಲಿ - ಹಿಂದುಗಡೆ - ದಿವ್ಯ ಧವಳಗಂಗಾನಾಮಕ ಸರೋವರ. ಅದರ ಸುತ್ತಲೂ ಪ್ರಾಣದೇವರ, ರುದ್ರದೇವರ, ಗೋಪಾಲಕೃಷ್ಣ ದೇವರ ಗುಡಿಗಳು. ಆ ಸರೋವರದಲ್ಲಿ ಗಂಗಾದಿ ಸರ್ವತೀರ್ಥಗಳ ಸನ್ನಿಧಾನವೆಂದು ಆಖ್ಯಾನಾಗಮವಿದೆ. ಮತ್ತು ಅದರಲ್ಲಿ 33 ಕೋಟಿ ದೇವತೆಗಳ ಸನ್ನಿಧಿ ಉಂಟು. ಆಗ್ನೇಯ ಮೂಲೆ ಭೂತರಾಜರಿಗೆ ಸ್ನಾನಕ್ಕೆ ಮೀಸಲಾದ ಘಟ್ಟ. ಅಲ್ಲಿ ಅಕ್ರಮವಾಗಿ ಸ್ನಾನಕ್ಕೆ ಇಳಿದವರಿಗೆ ಪ್ರತ್ಯಕ್ಷ ಶಿಕ್ಷೆ ಈಗಲೂ ನಡೆಯುತ್ತೆ. ಇಂಥ ಅತ್ಯದ್ಭುತ ವೃಂದಾವನ ಗುರುರಾಜರೇ ಬುದ್ಧಿಪೂರ್ವಕವಾಗಿ ರಚನೆ ಮಾಡಬೇಕಾದರೆ ದೇವಕಾರ್ಯವಿರಬೇಕೆನ್ನಿಸುತ್ತೆ. ಬುದ್ಧಿಪೂರ್ವಕ ವೃಂದಾವನ ರಚನೆ ಮಾಡಿಸಿದವರು ನಂತರ ಒಬ್ಬಿಬ್ಬರು. ಇತರರು ಈ ವಿಷಯಕ್ಕೆ ಗಮನ ಕೊಡೋದಿಲ್ಲ. ಅಂದಮೇಲೆ ಇಂಥ ವೃಂದಾವನ ವೈಲಕ್ಷಣ್ಯವು ಸನ್ನಿಧಾನ ವಿಶೇಷಕ್ಕೆ ಸೂಚಕವೇ. ವಿಜಯೇಂದ್ರ ಸ್ವಾಮಿಗಳ ವಿಷಯದಲ್ಲಿ ಸ್ವರೂಪಬೋಧಕ ಪ್ರಮಾಣಗಳು, ಐತಿಹ್ಯ,

ದಾಸರಪದ ಇವು ಇಲ್ಲ. ಅವರು ಕಶ್ಯಪ ಋಷ್ಯಂಶ ದೇವತೆಗಳೆಂದು ಅವರ ಮಠೀಯರಲ್ಲಿ ನಂಬಿಕೆ ಇದೆ. ಪ್ರಮಾಣವಿಲ್ಲದೆ ಋಜುತ್ವಾರೋಪ ಮಾಡಿ ಉಪಾಸನೆ ಮಾಡಿದರೆ ಬ್ರ.ಸೂ.ಭಾ. III 3-57 ರಲ್ಲಿ ಪ್ರತ್ಯವಾಯವು ಉಕ್ತವಾಗಿದೆ:- "ಸಮತ್ವಾದ್ವಾ ಉತ್ತಮತ್ವಾದ್ವಾ ನಾಂಗದೇವಾದ್ಯುಪಾಸನಂ ಉಪಸಂಹಾರ್ಯಂ | ಸಮಾನಾಂ ವಿಷಮಾಪೂಜಾ ವಿಷಮಾನಾಂ ಸಮಾತಥಾ" ಹೀಗೆ ವಿವಕ್ಷಿತ ಅಸದೃಶ ಅದ್ಭುತ ವೈಲಕ್ಷಣ್ಯವು ಶ್ರೀ ವಿಜಯೇಂದ್ರ ಸ್ವಾಮಿಗಳ ವೃಂದಾವನದಲ್ಲಿ ಅಸಿದ್ಧವೇ.

## 19. ಒಂಭತ್ತನೇ ಅನುಮಾನ ಪರೀಕ್ಷೆ :

ಪುಟ 10-11 ಉಕ್ತಿ: "ಭಗವತ್ಪಾದರು ರಚಿಸಿದ ದ್ವೈಮಾಸಿಕ ಪರ್ಯಾಯವನ್ನು ದ್ವೈವಾರ್ಷಿಕ ಉತ್ಸವವನ್ನಾಗಿ ಪರಿವರ್ತಿಸಿದ್ದು ಋಜುತ್ವ ಸಾಧಕ ಹೇತುವಾಗುವುದಿಲ್ಲ. ವ್ಯಾಪ್ತಿಹೀನ ಅನುಮಾನವಾಗುತ್ತೆ. ಆಸಿದ್ಧಿಯೂ ಇದೆ. ಹೇಗೆಂದರೆ ಶ್ರೀಮಧ್ವಾಚಾರ್ಯರೇ ದ್ವೈವೈವಾರ್ಷಿಕ ಪರ್ಯಾಯೋತ್ಸವವನ್ನೇ ರಚಿಸಿದರೆಂದು ಕೆಲವರು ಹೇಳುತ್ತಾರೆ".

ಪ್ರತ್ಯುಕ್ತಿ: ಪ್ರಬಲ ಪ್ರಮಾಣವಿರುದ್ಧವಾದ್ದರಿಂದ ಈ ಮೇಲ್ಕಂಡ ಖಂಡನೆಯು ದುಷ್ಟವೇ. ಯಾರೋ ಕೆಲವರು ಹೇಳಿದಮಾತ್ರಕ್ಕೆ ಅಶೋಕನು ತುರುಕನೆಂದುಮ ಸಿದ್ಧವಾಗುವುದಿಲ್ಲ. ಅಬಾಧಿತವಾಗಿ ಪ್ರಮಿತವಾಗಬೇಕು. ಪ್ರಕೃತ ಆಸಿದ್ಧಿ ಯಂತೂ ಇಲ್ಲ. ವಾ.ಗು.ಚ. (1645) IV 49-51 "ಮಾಸದ್ವಿತಯ ಪೂಜಾಂ ಮಧ್ವಪ್ರಕಲ್ಪಿತಾಂ ‖ ವರ್ಷದ್ವಿತಯ ಪರ್ಯಂತಾಂ ಕಲ್ಪಯಾಮಾಸ ಸನ್ಮತಿಃ ‖ ಇತ್ಯಾದಿ" (ಎಂದರೆ "ಶ್ರೀಮದಾಚಾರ್ಯರು ಎರಡು ತಿಂಗಳಿನ ಪರ್ಯಾಯವನ್ನು ರಚಿಸಿದ್ದರು. ಪೂರ್ಣಬುದ್ಧಿಯುಳ್ಳ ವಾದಿರಾಜರು ಅದವನ್ನು ಎರಡು ವರ್ಷಗಳ ಪರ್ಯಾಯವನ್ನಾಗಿ ಬದಲಾಯಿಸಿದರು. ಮತ್ತು ಅದರಿಂದ ಯತಿಗಳ ಸಂಚಾರಕ್ಕೆ ಸೌಕರ್ಯವನ್ನು ಕಲ್ಪಿಸಿದರು. ಹಾಗೆ ಪ್ರತ್ಯೇಕ ಮಠಗಳನ್ನು ಅಷ್ಟ ಯತಿಗಳಿಗೂ ಕಲ್ಪಿಸಿಕೊಟ್ಟರು. ಆಲಾಗಾಯ್ತು ಶ್ರೀಕೃಷ್ಣ ಪರ್ಯಾಯೋತ್ಸವ ಸಂಭ್ರಮವು ಅತ್ಯಂತ ವಿಜೃಂಭಣೆಯಿಂದ ನಡೆದು ಪರಮಾಶ್ಚರ್ಯಜನಕವಾಗಿದೆ" ಎಂದು ಹೇಳಲ್ಪಟ್ಟಿದೆ). ಇದು ಪ್ರತ್ಯಕ್ಷದರ್ಶಿಗಳ, ಅಥವಾ ಪ್ರತ್ಯಕ್ಷ ದರ್ಶಿಗಳನ್ನು ಕೇಳಿ ತಿಳಿದವರ ಸಾಕ್ಷ್ಯ.

ಕಿಂಚ ಉಡುಪಿಯ ಅಷ್ಟಮಠಕ್ಕೆ ಸೇರಿದ ಐತಿಹ್ಯಜ್ಞಾನಿಗಳೆಲ್ಲರೂ ಯತಿಗಳೂ ಸಹ, ದ್ವೈವಾರ್ಷಿಕ ಪರ್ಯಾಯ ಕ್ರಮವು ವಾದಿರಾಜ ಗುರುಕೃತವೆಂದೇ ತಿಳಿದಿದ್ದಾರೆ. ಶ್ರೀನಾರಾಯಣ ತಂತ್ರಿಗಳು ಕಾಣಿಯೂರುಮಠದ ಪರ್ಯಾಯ ಕಾಲದಲ್ಲಿ (1965) ರಚಿಸಿದ ಉಡುಪಿ ಮಹಾತ್ಮ್ಯೆ ಎಂಬ ಉತ್ತಮ ಗ್ರಂಥದಲ್ಲೂ ಹಾಗೆಯೇ ಇದೆ.

ಬೆಂಗಳೂರು ಪಟ್ಟಣದಲ್ಲಿ ಆಂಗ್ಲ ಭಾಷೆಯಲ್ಲಿ (10-12-69) ಮುದ್ರಿತವಾದ "ವಿಜ್ಞಾಪನಾ ಪತ್ರಿಕಾ" ದಲ್ಲಿ "Paryaya or Rotation of worShip for two yearS by the Swamiji of each mutt waS arranged by Sri Vadiraja Tirtha". ಪರ್ಯಾಯ ಕ್ರಮವು ಶ್ರೀವಾದಿರಾಜ ರಚಿತ ಎಂದು ಹೇಳಲ್ಪಟ್ಟಿದೆ. ಈ ಪತ್ರಿಕೆಯು ಐವತ್ತು ಅರವತ್ತು

ವಿದ್ವಾಂಸರಿಂದ ಪ್ರಕಾಶಿತವಾದದ್ದು. ಭಂಡಾರಕೇರಿ ಮಠದ ಶ್ರೀ ಶ್ರೀಗಳವರ ಸ್ವಾಗತ ಸಮಾರಂಭ ನಿರ್ವಾಹಕ್ಕಾಗಿ ಪ್ರಕಾಶಿತವಾದದ್ದು.

ಯುಕ್ತಿಯೂ ಹಾಗೇ ಇದೆ. ವಾದಿರಾಜ ಗುರುಗಳು ದ್ವೈವಾರ್ಷಿಕ ಪರ್ಯಾಯ ಪೂಜೆಯನ್ನು ನಾಲ್ಕು ಸಲ ಅನುಷ್ಠಾನಮಾಡಿ ಐದನೆಯ ಪರ್ಯಾಯವನ್ನು (1596-1598ರಲ್ಲಿ) ಶ್ರೀ ವೇದವೇದ್ಯತೀರ್ಥರ ಕೈಯಿಂದ ಉಡುಪಿಯಲ್ಲಿ ಮಾಡಿಸಿದರೆಂದು VI 51-53 ವಾ.ಗು.ಚ. ಗ್ರಂಥದಲ್ಲಿ ನಿರೂಪಿಸಲ್ಪಟ್ಟಿದೆ: “ಏವಂ ಶ್ರೀಕೃಷ್ಣದೇವಸ್ಯ ಪರ್ಯಾಯಾರ್ಚನ ಮಂಜಸಾ। ಚತುರ್ವಾರಮನುಷ್ಠಾಪ್ಯ ಸಜ್ಜನಾನುದ್ಧದ್ಧರಂ ಬಭೌ॥51॥ ತಚ್ಛಿಷ್ಯೋ ವೇದ ವೇದ್ಯಾಖ್ಯೋ ವೃದ್ಧೋ ಭೂತ್ವಾತ್ವಾಸ್ತ್ವಖಿದ್ಯತ ॥ ಪರ್ಯಾಯ ಪೂಜಾ ನಮಮೇತ್ಯಂತರಂಗ ವಿದಾಂ ವರಃ ॥ ವಾದಿರಾಜಃ ಸ್ವಶಿಷ್ಯಂ ತಂ ಪರ್ಯಾಯೇ ಪಂಚಮೇಽತ್ರಹಿ॥ ತ್ವಾಮಾವಿಶ್ಯಾಚರಿಷ್ಯಾಮಿ ಬಹಿಃ ಸೋದಾಪುರೇ ಸ್ಥಿತಃ ॥ ಇತ್ಯಾಜ್ಞಾಪ್ಯಾಗತಃ ಸೋದಾಂ...॥” ಇಂಥ ಪಂಚಮ ಪರ್ಯಾಯ ಕಳೆದ ಎರಡು ವರ್ಷಗಳ ಮೇಲೆ 1600 ರಲ್ಲಿ ವೃಂದಾವನ ಪ್ರವೇಶಮಾಡಿದ್ದಾರೆ. ತಥಾಚ ಐದನೇ ಪರ್ಯಾಯ ಸೋದೆಯಲ್ಲಿ 1596-98; ಪ್ರಥಮ ಪರ್ಯಾಯ 1532-34. ಸನ್ಯಾಸವು 1488ರಲ್ಲೇ ಆಯಿತು. ವಾಗೀಶತೀರ್ಥಗುರುಗಳು ಸ್ವಲ್ಪ ವರ್ಷಗಳ ಕಾಲಾನಂತರ ವೃಂದಾವನಸ್ಥರಾದರು. ಆದ್ದರಿಂದ ದ್ವೈವಾರ್ಷಿಕ ರೀತಿಯು ಮೊದಲಿನಿಂದಲೂ ಇದ್ದಿದ್ದರೆ 1516ರಲ್ಲಿ ಒಂದು ಪರ್ಯಾಯ; 1500-1502 ರಲ್ಲಿ ಒಂದು ಪರ್ಯಾಯ ಹೀಗೆ ಗುರುರಾಜರಿಗೆ ಏಳು ಪರ್ಯಾಯ; 1500 ರಲ್ಲಿ ವಾಗೀಶತೀರ್ಥರೇ ಇದ್ದಿದ್ದರೆ, ಆರು ಪರ್ಯಾಯ ಶ್ರೀಕೃಷ್ಣ ಪೂಜಾಧಿಕಾರ ಪ್ರಾಪ್ತವಾಗುತ್ತಿತ್ತು. ಅದು ಹಾಗಾಗಲಿಲ್ಲ. ಐತಿಹ್ಯ ಮತ್ತು ಅನೇಕ ಪ್ರಮಾಣಗಳಿಂದಲೂ ಶ್ರೀ ಶ್ರೀಗಳವರು ಐದು ಪರ್ಯಾಯ ಪೂಜೆಗಳನ್ನೇ ನಡೆಯಿಸಿದರು. ಆದ್ದರಿಂದ 1532ನೇ ವರ್ಷದ ಹಿಂದೆಯೇ ಇವರು ಬೇರೆ ಪರ್ಯಾಯ ಪದ್ಧತಿಯನ್ನನುಸರಿಸಲಾರಂಭಿಸಿದರೆಂದು ನಿಶ್ಚಿತವಾಗುತ್ತೆ. 1518ರಲ್ಲಿ ಕಾಣಿಯೂರು ಮಠದವರ ಪ್ರಥಮವು ದ್ವೈವಾರ್ಷಿಕ ಪರ್ಯಾಯ ಒದಗಿ 1530ರಲ್ಲಿ ಶೀರೂರು ಮಠದವರು ಪ್ರಥಮ ದ್ವೈವಾರ್ಷಿಕೊತ್ಸವ ಆರಂಭಿಸಿ 1532ರಲ್ಲಿ ಸೋದೆಮಠದವರಿಗೆ ದ್ವೈವಾರ್ಷಿಕದ ಪ್ರಥಮ ಪರ್ಯಾಯ ಪೂಜಾಧಿಕಾರವನ್ನು ವಹಿಸಿಕೊಟ್ಟರು ಎಂಬ ನಂಬಿಕೆ ಇದೆ. ಆದ್ದರಿಂದ 1518 ನೇ ವರ್ಷದ ಹಿಂದಿನಕಾಲದ ಚರಿತ್ರೆ ಪರಾಮರ್ಶೆಮಾಡಿದರೆ ಉಡುಪಿ ಮಠೀಯರು ಯಾರೂ ಶಿವಮೊಗ್ಗೆ ಪಟ್ಟಣದ ಉತ್ತರ ದೇಶಕ್ಕೆ ಸಂಚಾರ ಬಂದಿದ್ದಕ್ಕೆ ಗುರುತಿಲ್ಲ.

ಈ ಹಿಂದೆ ಪ್ರಮಾಣವಾಗಿ ಉದಾಹೃತವಾದ ಪ್ರಾಚೀನ ಪತ್ರಿಕಾ “ಗುರುರಾಜರ ಮಹಾತ್ಮ್ಯೆಗಳು” ಎಂಬುದರಲ್ಲೂ, “ಸರ್ವಜ್ಞರು ಮಾಡಿದ ಯತಿಗಳ ಪರ್ಯಾಯ ಎರಡುವರ್ಷ ಮಾಡಿದ್ದು” ಎಂದು ಗುರುರಾಜರ ಮಹಿಮೆಗಳಲ್ಲಿ ಒಂದು ಮಹಿಮೆಯನ್ನಾಗಿ ಉಲ್ಲೇಖಿತವಾಗಿದೆ.

ಕಿಂಚ ಪೂರ್ವಪಕ್ಷದವರು ನಮೂದಿಸಿರುವ ಮದ್ರಾಸಿನ ಕೋಶಾಗಾರದ ಗ್ರಂಥೋಕ್ತಿಯು ಸ್ಪಷ್ಟವಾಗಿಲ್ಲ. ಅರ್ಥವೇ ಆಗದ ಆ ಲೇಖವನ್ನು ನಿರವಕಾಶ ಪ್ರಮಾಣವನ್ನಾಗಿ ತೆಗೆದುಕೊಳ್ಳಲಾಗುವುದಿಲ್ಲ. ಇದವರಮೇಲೆ ಬಹು ಪ್ರಮಾಣ

ವಿರೋಧವೂ ಇದೆ. ಆ ಮದ್ರಾಸಿನ ಗ್ರಂಥವು ಕೇವಲ ಭ್ರಾಂತಿಜನಕವೆಂದು ವಿಮರ್ಶೆಮಾಡಿದವರು ಹೇಳಿದ್ದಾರೆ. ಅವರ ಸಾಕ್ಷಿ ಪತ್ರವನ್ನು ಪೂರ್ವಪಕ್ಷಿಯ ಹಸ್ತಕ್ಕೆ ಕೊಡಲಾಗಿದೆ.

## 20. ಹತ್ತನೇ ಅನುಮಾನ ವಿನ್ಯಾಸ:

**ಪುಟ 10-16 ಉಕ್ತಿ:**

"ಸ್ವಚ್ಛಂದ ಮೃತ್ಯುತ್ವಕ್ಕೆ ಋಜುತ್ವ ನಿಶ್ಚಾಯಕತ್ವವಿಲ್ಲ. ಋಜುಭಿನ್ನಶಂತನು ಭೀಷ್ಮಾದಿಗಳಲ್ಲಿ ವ್ಯಭಿಚಾರವಿದೆಯಾದ್ದರಿಂದ, ಏಕಾದಶ ಸ್ಕಂಧತಾತ್ಪರ್ಯದಲ್ಲಿ ಅದು ಯೋಗಪ್ರಾಪ್ಯವೆಂದು ಮಾತ್ರ ಹೇಳಲ್ಪಟ್ಟಿದೆ".

ಪ್ರತ್ಯುಕ್ತಿ : ಶ್ರೀಮದಾಚಾರ್ಯರು ಬಾಳೆಹಣ್ಣನ್ನು ತಿಂದಿದ್ದನ್ನು ಹೇಗೋ ಹಾಗೆ, ಅನುಮಾನವನ್ನು ಆಗಮಾನುಸಾರಿಯಾಗಿ ಯೋಚಿಸಿ ನೋಡಿದರೆ ಗುರುರಾಜರ ಭೋಜನಾದಿ ಕಾರ್ಯದಿಂದಲೂ ನಿಶ್ಚಯ ಹುಟ್ಟುತ್ತೆ. ವಾದಿ ರಾಜಗುರುಗಳು ಋಜುಗಳೇ, ಇವರು ದೊಡ್ಡವರು ರುದ್ರಾದಿಗಳಲ್ಲಿ ಒಬ್ಬರಲ್ಲ ಎಂಬ ಐತಿಹ್ಯ ಸಿದ್ಧರಾಗಿ, ಸ್ವೇಚ್ಛಾಮೃತ್ಯುತ್ವಶಕ್ತಿ ತೋರಿಸಿದ್ದರಿಂದ ಎಂಬ ಸಾಮಾನ್ಯ ವ್ಯಾಪ್ತಿಯ ಪರಿಶೇಷಾನುಮಾನಕ್ಕೆ ಬಾಧಕವಿಲ್ಲ. (ವಿಮನತಃ ಋಜುರೇವ, ಮಹಾನ್ ಅಯಂ ರುದ್ರಾದ್ಯನ್ಯತಮೋನೇತಿ ಐತಿಹ್ಯ ಸಿದ್ಧತ್ವೇಸತಿ, ಪ್ರಕಟಿತ ಸ್ವೇಚ್ಛಾಮೃತ್ಯುಕತ್ವಾದಿತಿ ಸಾಮಾನ್ಯ ಪರಿಶೇಷಸ್ಯ ಸಾಧುತ್ವಾತ್) ಐತಿಹ್ಯ, ಆಖ್ಯಾನ, ಕೀರ್ತನೆ ಮುಂತಾದುವುಗಳಿಂದ ಋಜುತ್ವಜ್ಞಾನವನ್ನು ಹೊಂದಿದ ನಿರ್ಮಲ ಮನಸ್ಕನಾದ ಅಧಿಕಾರಿಗೆ ವಾದಿರಾಜ ಗುರುಕೃತ ಅದ್ಭುತಗಳೆಲ್ಲದರಲ್ಲೂ ಪುಟ 54 ರಲ್ಲಿ ತೋರಿಸಿದಂತೆ ಅವರ ಋಜುಸ್ತತ್ವವೇ ಸ್ಮರಣೆಗೆ ಬರುತ್ತೆ. ಸುದೃಢ ನಿಶ್ಚಯವು ಹುಟ್ಟುತ್ತೆ. (ವಾ.ಗು.ಚ. 9-15) ದೃಷ್ಟಾಂತಗಳು: ಋಜುಪಸದಸ್ಥ ವೇದವೇದ್ಯ ಗುರುತ್ವವು (9-16); ಭಾವಿ ರುದ್ರಪದವಿಯೋಗ್ಯ ಭೂತರಾಜೋದ್ಧಾರ; ಸೋದಾಕ್ಷೇತ್ರದಲ್ಲಿ ಮಾಡಿರುವ ಅದ್ಭುತ ದೇವ, ಸರೋವರ, ವೃಂದಾವನಾದಿ ಪ್ರತಿಷ್ಠೆಗಳು; ಸ್ವಹಸ್ತದಿಂದ ನಿತ್ಯವೂ ಸಾಕ್ಷಾದ್ಧಯವದನನಿಗೆ ನೈವೇದ್ಯ ಸಮರ್ಪಣೆ; ದೇವರಿಂದ ಗುರುರಾಜಾಲಿಂಗನ ಪೂರ್ವಕ ಸಾಕ್ಷಾತ್ ಸ್ವೀಕಾರ; ವಾ.ಗು.ಚ. ಆಖ್ಯಾನಾದಿ ಪ್ರತಿಪಾದ್ಯತ್ವ ಮತ್ತು ಸ್ವಚ್ಛಂದ ಮೃತ್ಯುತ್ವವೂ ರುದ್ರಾದಿಗಳನ್ನು ಮೀರಿದ ಈ ಋಜುವಿಗೆ ಏನು ಆಶ್ಚರ್ಯವೆಂದು ದಾರ್ಢವನ್ನೇ ಉಂಟುಮಾಡುತ್ತವೆ. ವೃತ್ತರತ್ನ ಸಂಗ್ರಹವಲ್ಲಿ ಗುರುರಾಜರನ್ನು ನೋಡಿ ಬರೆದ ಶ್ಲೋಕಗಳಿವೆ. ಪುಟ 52ರಲ್ಲಿ ಕೆಲವು ಉದಾಹೃತವಾಗಿವೆ: ಅವುಗಳ ತಾತ್ಪರ್ಯ ಬರೆಯಲಾಗಿದೆ: III 4 ವಾದಿರಾಜರು ಕಲ್ಲುಕುಟುಕರಿಂದಲೂ ಅತಿ ಪ್ರಯತ್ನ ಮಾಡಿ ಭೇದಿಸಲಶಕ್ಯವಾದ ಆ ಶಿಲೆಯನ್ನು ತಮ್ಮ ಪಾದದಿಂದ ಅಲ್ಪ ಪ್ರಯತ್ನದಿಂದ ಮುಟ್ಟಿದರು. ಆ ಕಲ್ಲು ಹೋಳಾಗಿ ಹೋದದ್ದನ್ನು ನೋಡಿ ಜನರಿಗೆ ಆಶ್ಚರ್ಯವಾಯಿತು. III 5: ಒಬ್ಬ ಕಲ್ಲುಕುಟುಕನು ಎತ್ತಿದ ಕಲ್ಲು ನಿಲ್ಲಲಾರದೆ ಮೇಲಿಂದ ಜನರ ಮೇಲೆ ಬೀಳುತ್ತಿದ್ದುದನ್ನು ನೋಡಿ ಭಕ್ತಿಯಿಂದ ಗುರುರಾಜರನ್ನು ನಂಬಿ "ಬೀಳಬೇಡ, ಗುರುರಾಜರಾಣೆ" ಎಂದು ಆಜ್ಞೆ ಮಾಡಿ ಆ ಕಲ್ಲನ್ನು ನಿಲ್ಲಿಸಿ ಬಿಟ್ಟನಲ್ಲವೇ. I 7-8 : ವಾದಿರಾಜರನ್ನು ನೋಡದ ಕಣ್ಣು ಕಣ್ಣಲ್ಲ; ವರ್ಣಿಸಿ ಹೊಗಳದ ನಾಲಗೆ ನಾಲಗೆಯಲ್ಲ; ಅವರ ಅಂಗ ಪ್ರತ್ಯಂಗ ಚೇಷ್ಟಾಗಳನ್ನು ನೋಡಿ ಸಜ್ಜನವರ್ಗವು ಆಶ್ಚರ್ಯ ತುಂಬಿದ್ದಾಗಿ ಇತರ ಕೆಲಸವನ್ನು ಮರೆತು ಅವರ ಸನ್ನಿಧಾನದಲ್ಲಿ ಆಸಕ್ತವಾಗುತ್ತೆ. ಅಂಥ ಗುರುವನ್ನು

ಯಾರು ಸೇವಿಸುವುದಿಲ್ಲ? ॥ 40: ಚಕ್ರಧರನಾದ ಶ್ರೀಹರಿಗೆ ವಾದಿರಾಜರಿಂದ ಯಾವ ಸೇವೆಯು ಮಾಡಲ್ಪಟ್ಟಿತೋ ಅದು ಪ್ರಾಯಶಃ ಭೂಮಿಯಲ್ಲಿ ಚಕ್ರ ರ್ತಿಗಳಿಂದಲೂ ಮಾಡಲ್ಪಟ್ಟಿಲ್ಲ. ॥ 48-49ರಲ್ಲಿ ಪಾಂಡವರ ಸಾಮ್ಯ ಕೊಟ್ಟಿದ್ದಾರೆ. ವ್ಯಾಸ ಭಾರ್ಗವ ಕೃಷ್ಣ ರೂಪದಿಂದ ಇಂದ್ರಪ್ರಸ್ಥಸ್ಥ ಜನರನ್ನು ಶ್ರೀಹರಿ ಸುಖಪಡಿಸುತ್ತಿದ್ದಂತೆ ತ್ರಿವಿಕ್ರಮ ವರಾಹ ಹಯವದನ ರೂಪಗಳಿಂದ ವಾದಿರಾಜರ ಸೇವೆ ಸ್ವೀಕರಿಸುತ್ತಾ ಸೋದಾ ಪುರಸ್ಥ ಜನರನ್ನು ಸುಖಭರಿತರನ್ನಾಗಿ ಮಾಡುತ್ತಿದ್ದಾನೆ. ॥ 9ರಲ್ಲಿ ಮಧ್ವಪ್ರೀತಿ ಸಾಮ್ಯ ಕೊಟ್ಟಿದ್ದಾರೆ. ಶ್ರೀಹರಿ ಮಧ್ವಾಚಾರ್ಯರಲ್ಲಿ ಪ್ರೀತಿಯಿಂದ ದ್ವಾರಕೆಯಿಂದ ಕೃಷ್ಣ ರೂಪದಿಂದ ಉಡುಪಿಗೆ ಓಡಿಬಂದನು. ಆ ಕೃಷ್ಣಭಕ್ತ ವಾದಿರಾಜರಲ್ಲಿ ಪ್ರೀತಿಯಿಂದ ತ್ರಿವಿಕ್ರಮ ರೂಪದಿಂದ (ವಾ.ಗು.ಚ. 5-40 ಬದರಿಯಿಂದ) ಓಡಿಬಂದನು. ತಾನಾಗಿ ಒಲಿದುಬಂದು ಸಾಮ್ಯ ಸೂಚಿಸಿದ್ದಾನೆ. ॥ 5 ಮಹಿಮೆ ಭೀಮನ ಸಾಮ್ಯ ಸೂಚಿಸುತ್ತೆ. ಶಂತನು ಮುಂತಾದ ಯೋಗಿಗಳಿಗೆ ಇದು ಶಕ್ಯವೆಂಬಲ್ಲಿ ನಾನು ಪ್ರಮಾಣ ಕಂಡಿಲ್ಲ. ಮಹಿಮೆ ಏನೆಂದರೆ: ಜಪ ಮಾಡುತ್ತಿದ್ದ ವಾದಿರಾಜರನ್ನು ಕುರಿತು ಹರಿದುಬಂದ ಸರ್ಪವು ಅವರನ್ನು ಸುತ್ತಿಕೊಂಡು ಅವರ ಅವಯವಗಳ ಮೇಲೆ ಆಟವಾಡುತ್ತಾ ಇದ್ದರೂ ಅದನ್ನು ನೋಡಿದ ವಾದಿರಾಜರು ಸ್ವಲ್ಪವಾದರೂ ಅಲ್ಲಾಡಲಿಲ್ಲ. ಭೀತರೂ ಆಗಲಿಲ್ಲ. ಅದರಿಂದ ಸಮಾಧಿ ಸಂಸ್ಥರನ್ನು ಮೀರಿಸಿದ್ದಾರೆ. । 47 ರಾಜಧಾನಿಯಲ್ಲಿ ರಾಜಸಭೆಯಲ್ಲಿ ಬಹು ವಿದ್ವಜ್ಜನರೊಂದಿಗೆ ಪ್ರಸಂಗ ಸಂಗತಿಯಿಂದ ನಾನಾ ಶಾಸ್ತ್ರಗಳ ಮಾತಾಡಿ ರಾಜನನ್ನು ತುಂಬಾ ಸಂತೋಷಪಡಿಸಿ "ಪ್ರಸಂಗಾಭರಣತೀರ್ಥರು" ಎಂಬ ಬಿರುದನ್ನು ಪಡೆದರು. । 48-53ರ ವರ್ಣನೆ ಹದಿನೈದನೇ ಸರ್ಗ ಮಧ್ವವಿಜಯದ ಶ್ಲೋಕಗಳ ಸ್ಮಾರಕ: "ವಾದಿರಾಜರ ವಾಗಮೃತವು, ಅವರ ಮುಖದ ವಿನೋದ, ಅಟ್ಟಹಾಸ, ಮಂದನಗೆ, ಸುಸ್ವರಗಳಿಂದ ಯುಕ್ತವಾಗಿ ಶಾಸ್ತ್ರ ರಹಸ್ಯವನ್ನು ಸಪ್ರಮಾಣವಾಗಿ ಪ್ರತಿಪಾದಿಸುವುದು, ಸಂಪ್ರದಾಯಾನುಗುಣ, ತತ್ವ ನಿರ್ಣಯಭರಿತ, ನಿಃಸಂಶಯವಾಗುವಂತೆ ನುಡಿದದ್ದು, ಪಂಡಿತಾಗ್ರ್ಯರಿಂದಲೂ ನಿಷೇಧಿಸಲ್ಪಡಲು ಅನರ್ಹವಾದದ್ದು, ಪ್ರತಿ ಪ್ರಶ್ನೆಗಳಿಗೆಲ್ಲಾ ಉತ್ತರಗರ್ಭಿತವಾದದ್ದು, ಹೇಳುವಾಗ ಮನೋಹರವಾಗಿ ಶಿರಃಕಂಪಯುಕ್ತವಾದದ್ದು, ಸಭಿಕರಿಗೆ ಆನಂದ ತುಂಬತಕ್ಕದ್ದು, ಅರಳಿದ ಶ್ರೋತ್ರ, ಮುಖಕಾಂತಿಯುಕ್ತ ಕಣ್ಣುಗಳಿಂದ ಸಹಿತವಾಗಿ ನುಡಿದದ್ದು, ಕೇಳಿದಮೇಲೆ ಮೈ ರೋಮಾಂಚ ಹುಟ್ಟಿಸತಕ್ಕದ್ದು, ಸಭಿಕರ ಕಿವಿ ಮನಸ್ಸು ಎಲ್ಲವನ್ನೂ ತಮ್ಮ ಶರೀರದ ಕಡೆಗೆ ಆಕರ್ಷಿಸತಕ್ಕದ್ದು, ಸುಲಭವಾಗಿ ಗೊತ್ತಾಗತಕ್ಕದ್ದು, ಸಜ್ಜನರಿಗೆ ಪುಣ್ಯಪ್ರದವಾದದ್ದು. ಹರಿವಾಯುಗಳ ಕಾರುಣ್ಯ ಸಮುದ್ರದ ದೆಸೆಯಿಂದ ಪ್ರಕಾಶಿತವಾದ ಅವರ ಉಪನ್ಯಾಸ ಲಕ್ಷ್ಮಿಯು ಯಾವನಿಗೆ ಆನಂದ ಪ್ರದವಾಗುವುದಿಲ್ಲ? ಪಾವನವಾದ ಹರಿಯ ಅದ್ಭುತ ಕಥೆಯನ್ನು ಹೇಳಿ ಪರಮಪಾವನ ಹರಿ ಸಾಮಿಪ್ಯ ಸುಖವನ್ನು ಜನರಿಗೆ ತಂದುಕೊಡುವ, ಅದರಲ್ಲೂ ಪಂಡಿತಶ್ರೇಷ್ಠರ ಸಭೆಯಲ್ಲಿ ತಮ್ಮ ವಿದ್ವತ್ಪೂರ್ಣವಾಗಮೃತವನ್ನು ಶ್ರಾವಕರಿಗೆಲ್ಲಾ ಪಾನಮಾಡಿಸತಕ್ಕ ಈ ಜ್ಞಾನಿಶ್ರೇಷ್ಠರನ್ನು ನನ್ನಂಥವನು ಹೇಗೆ ವರ್ಣನೆ ಮಾಡಿಯಾನು? । 55: ಈ ದುಷ್ಟ ಜನಭರಿತ ಕಲಿಯುಗದಲ್ಲಿ ಮಧ್ವ ಸಿದ್ಧಾಂತವನ್ನು ಪ್ರಕಾಶಮಾಡುತ್ತಾ ಅಲ್ಲಿ ಅಲ್ಲಿ ದುರ್ವಾದಿಗಳನ್ನು ದಮನ ಮಾಡಲಿಕ್ಕೆ ವಾದಿರಾಜರಲ್ಲದೆ ಯಾರು ಸಮರ್ಥರು? । 40-41: ಭಕ್ತಿ ಪಾಶಗಳಿಂದ ದೃಢವಾಗಿ ಬಂಧಿಸಿ ಚಣಕಾದಿಗಳನ್ನು ಸಮರ್ಪಿಸಿದರೆ ಅದನ್ನು ತಿನ್ನಲು

ಬಂದ ಹಯವದನಸ್ವಾಮಿಯನ್ನು ತನ್ನ ಹೆಗಲಮೇಲೆ (ಹನುಮಂತನಂತೆ) ಧರಿಸುತ್ತಾರಲ್ಲಾ. ಏನಾಶ್ಚರ್ಯ? ಹಯವದನ ಸ್ವಾಮಿಯನ್ನು ಪೂರ್ತಿಯಾಗಿ ಆಶ್ರಯಿಸಿ ವಿಜ್ಞಾನಾಸ್ತ್ರದಿಂದ ವಾಗ್ಬಾಣಗಳನ್ನು ಬಿಟ್ಟು ವಾದಿಗಳನ್ನು ಗೆಲ್ಲುತ್ತಾ ವಾದಿರಾಜರು ಅಂತಃಶತ್ರುಗಳನ್ನೂ, ಬಾಹ್ಯ ಶತ್ರುಗಳನ್ನೂ ಗೆದ್ದಿದ್ದಾರೆ. ಇತ್ಯಾದಿ ಅನೇಕ ಮಹಿಮೆಗಳು ನೋಡಿ ಬರೆದಿರುವ ಗ್ರಂಥಗಳಲ್ಲೇ ಕಂಡಿವೆ. ಇವಲ್ಲಿ ಕೆಲವಂತೂ ಶಂತನುವಂಥ ಯೋಗಿಗಳಿಗೂ ಮೀರಿದ ಶಕ್ತಿ ಕಾರ್ಯ. ಗುರುರಾಜರ ವಿಷಯದಲ್ಲಿ ಹರಡಿರುವ ಐತಿಹ್ಯಾದಿಗಳ ಹಿನ್ನೆಲೆಯಲ್ಲಿ ಈ ಮಹಿಮೆ ತಿಳಿದರೆ ಋಜುತ್ವ ನಂಬಿಕೆ ಬರುವುದಿಲ್ಲವೇ? ಬಂದದ್ದು ದೃಢವಾಗುವುದಿಲ್ಲವೇ? ವಾಯುದೇವರ ಆವೇಶದಿಂದ ಅನೇಕ ಅದ್ಭುತಗಳು ಮಂತ್ರಾಲಯ ಸ್ವಾಮಿಗಳಲ್ಲೂ ಕಂಡಿವೆ. "ನಹಿ ಪಕ್ಷೇ ಪಕ್ಷಸಮೇವಾವ್ಯಭಿಚಾರ ಚೋದನಾ". ವಾ.ಗು.ಚ. ಮುಂತಾದ ಆಗಿನ ಕಾಲದಲ್ಲೇ ಬರೆದ ಗ್ರಂಥಗಳಲ್ಲೂ, ಜಂಖಂಡಿ ಆಚಾರ್ಯರೇ ಮುಂತಾದ ಅನ್ಯ ಮಠೀಯರು ಬರೆದ ಗ್ರಂಥಗಳಲ್ಲೂ ಹೀಗೆಯೇ ವರ್ಣನೆ ಇದೆ. ಹೀಗೆ ಆದರ ಪೂರ್ವಕವಾದ ಆಗಮಾವಲೋಕನೆಯಿಂದ ಗುರುರಾಜರ ಮಹಾತ್ಮ್ಯೆಯು ಅನಿತರ ಸಾಧಾರಣವೆಂದೇ ತೋರುತ್ತೆ. ತ.ನಿ.ಟೀ. ಪುಟ 3 ಜಯತೀರ್ಥರು ಹೇಳಿದ್ದಾರೆ: "ಯಾರು ಯಾವ ವಿಷಯದಲ್ಲಿ ಆದರವುಳ್ಳವರೋ ಅವರಿಗೇ ಆ ವಸ್ತುವು, ಇತರರಿಗೆ ಅವ್ಯಕ್ತವಾಗಿದ್ದರೂ, ಸ್ಪಷ್ಟವಾಗಿ ಕಾಣುತ್ತೆ, ಅನಾದರವುಳ್ಳವರಿಗೆ ಕಾಣುವುದಿಲ್ಲ." ಇದರ ಮೇಲೆ ಪೂರ್ವಪಕ್ಷಿಗಳು ಅನುಮಾನ ರಚಿಸಿ ನಮ್ಮ ವಾದಕ್ಕೆ ಏನು ವಿರೋಧ ಹೇಳಿದ್ದಾರೆ? ಏಕೆಂದರೆ, "ಕೇವಲ ಪ್ರತ್ಯಕ್ಷದಿಂದ, ಆಗಮರಹಿತ ಸ್ವೇಚ್ಛಾಮೃತಿ ಮುಂತಾದ ಯುಕ್ತಿಯಿಂದ ಅನೃಜುತ್ವವನ್ನು ನಿರ್ಣಯಿಸಲಾಗುವುದಿಲ್ಲ; ಹಾಗೇ ನಿರ್ಣಯಿಸಿದರೆ ಪದ್ಮನಾಭತೀರ್ಥರು, ಅಕ್ಷೋಭ್ಯತೀರ್ಥರು ವಿಷ್ಣುತೀರ್ಥಾದಿಗಳೇ ಟೀಕಾಚಾರ್ಯರಿಂದ ಅಧಮರು; ವ್ಯಾಸತೀರ್ಥರು ಟೀಕಾಚಾರ್ಯರ ದೆಸೆಯಿಂದಲೂ ದಾಸಗುಪ್ತರು ಸೂಚಿಸುವಂತೆ ದೊಡ್ಡವರೇ; ಇತ್ಯಾದಿ ಅನೇಕ ಅತಿಪ್ರಸಂಗ ಬರುತ್ತೆ; ಹಾಗೆಯೇ ಆಗಮರಹಿತವಾಗಿ ಕೇವಲ ಪ್ರತ್ಯಕ್ಷ ಮಹಿಮೆದರ್ಶನ ಮತ್ತು ಯುಕ್ತಿಗಳಿಂದ ಹನುಮ, ಭೀಮ, ಮಧ್ವ, ವೇದವೇದ್ಯಾದಿಗಳ ಋಜುತ್ವವನ್ನೂ ನಿರ್ಣಯಿಸಲಾಗುವುದಿಲ್ಲ." ಇಂಥ ನಮ್ಮ ವಾದಕ್ಕೆ ಪೂರ್ವಪಕ್ಷಿಯು ಅವಿವಕ್ಷಿತ ಅನುಮಾನಗಳನ್ನು ರಚನೆಮಾಡಿ ಅವು ನಿರ್ಣಾಯಕವಲ್ಲವೆಂದು ಖಂಡನೆ ಮಾಡಿದರೆ ಋಜುತ್ವವಾದಿಗಳಿಗೆ ಯಾವ ಗಂಟು ಹೋಯಿತು? **[ತತ್ವೋದ್ಯೋತ ಟೀಕ ಪು 30: "ಪ್ರಮಾಣ ಸಿದ್ದಾರ್ಥ ವಿಷಯೇ ತರ್ಕಸ್ಯ ಬಾಧಕತ್ವಮೇವನಾಸ್ತಿ" ಎಂದಿದೆ].**

ಋಜುತ್ವ ವಾದವನ್ನು ವಿಪರೀತಾನುವಾದ ಮಾಡಿ ಖಂಡನಾಭಾಸ ಮಾಡಿ ನಿರ್ಮೂಲ ಪ್ರಶ್ನೆ ಪುಂಜಗಳಿಂದ ಗ್ರಂಥವನ್ನು ತುಂಬಿಸಿರುವುಮ ಅವರ ಪರತಸ್ತ್ವವಾದಾಗ್ರಹವನ್ನು ವ್ಯಕ್ತಮಾಡುತ್ತೆ. ಹಾಗೆ ಪ್ರಶ್ನಿಸಿದರೆ ಯಾವ ಮಠದ ದೇವರೂ ಆಚಾರ್ಯ ಕರಾರ್ಚಿತವೆಂದೂ, ಯಾವ ಮಹಾ ಪುರುಷನೂ ತನ್ನ ತಂದೆ ತಾಯಿಗಳ ಸಂಗದಿಂದಲೇ ಜನಿಸಿದನೆಂದೂ ಸ್ಪಷ್ಟವಾಗಿ ತೋರಿಸುವುದಕ್ಕಾಗುವುದಿಲ್ಲ. ಈ ಅತಿಪ್ರಸಂಗವು ಪ್ರಾಮಾಣ್ಯಕ್ಕೆ ಸ್ವತಸ್ತ್ವ ಒಪ್ಪಿ, ಬಾಧಕಾಭಾವ ವಿಮರ್ಶೆಯಿಂದ ನಿರ್ಣಯ ಮಾಡಿದರೇನೇ ಹೋಗುತೆ. ಪೂರ್ವಪಕ್ಷಿಗಳು ಹಾಗೆ ಮಾಡಿಲ್ಲ. ದುರಾಗ್ರಹ ಲವಣ ಸಮುದ್ರದಲ್ಲಿ ಮುಳುಗಿದ್ದಾರೆ. ಅನ್ಯಥಾ "ಯಾರು ಸ್ವಚ್ಛಂದ ಮೃತ್ಯುವೋ ಅವರು

ಋಜು" ಎಂಬ ವ್ಯಾಪ್ತಿಯನ್ನು ಯಾವ ಋಜುತ್ವವಾದಿ ಒಪ್ಪುತ್ತಾನೆ? ಇವರಾದರೋ ಹಾಗೆ ಅನುವಾದಮಾಡಿ ಖಂಡಿಸಿ, ಋಜುತ್ವ ಖಂಡನೆಯಾಯಿತೆಂದು ತಿಳಿದಿದ್ದಾರೆ. ಸಿದ್ಧಾಂತಿಗಳ ಆಶಯವೇನೆಂದರೆ ವಾದಿರಾಜ ಮುನಿಗಳು ಸ್ವಸ್ವರೂಪಾವಿಷ್ಕಾರ ಮಾಡಬಾರದೆಂಬ ವಿಧಿಯನ್ನನುಸರಿಸಿ ಬಹು ಹರಿಗುರು ಸೇವೆಯನ್ನು ಮಾಡಿ 120ನೇ ವರ್ಷದಲ್ಲೂ 50ನೇ ವರ್ಷದವರಂತೆ ಓಡಾಡಿಕೊಂಡಿದ್ದು ನಂತರ ದೇವಕಾರ್ಯ ವಿಶೇಷ ಸಾಧನೆಗಾಗಿಯೂ, ಮುಂದಿನ ಭಕ್ತಜನ ಉದ್ಧಾರಕ್ಕಾಗಿಯೂ, ವೃಂದಾವನದಲ್ಲಿ ವಾಸಮಾಡಲಿಚ್ಛಿಸಿ ಅತ್ಯುಕ್ತದೇದಿಂದ ವೃಂದಾವನದಲ್ಲಿ ಸ್ಥಿತರಾಗಿ ತಮಗೆ ಮರಣಾಭಾವ ಸಿದ್ಧಿಯುಂಟೆಂದೂ ಪ್ರಕಟಿಸಿದರು. ವೃಂದಾವನದಲ್ಲಿ ಸ್ಥಿತರಾದ ಮೇಲೆ ದೇವಕಾರ್ಯ ಸಿದ್ಧಿಗಾಗಿಯೇ ಈಷತ್ ಸ್ವರೂಪಾವಿಷ್ಕಾರವನ್ನು ಮಾಡಲಿಚ್ಛಿಸಿ ಯಾರೂ ಮಾಡದಿರುವ ಅತ್ಯದ್ಭುತ ವೈಖರಿಯಿಂದಲೇ ಅಸಾಧಾರಣ ಯೋಗಶಕ್ತಿಯನ್ನು ತೋರಿಸಿ, ಅಜ್ಞ ವಿಪ್ರನಿಗೆ ತತ್ಕಾಲಿಕ ವಾಕ್ಛಕ್ತಿ ಕೊಟ್ಟು ಅವನ ಮೂಲಕ ಆಖ್ಯಾನ ಗ್ರಂಥವನ್ನು ಪ್ರಕಾಶಪಡಿಸಿ, ವಿವಾದ ಬರಬಾರದೆಂದು ಅಣುವೃಂದಾವನಾಖ್ಯಾನದಲ್ಲಿ ಕರ್ತೃ, ರಚನಾದಿ ಕ್ರಮವನ್ನು ಆಗಲೇ ಶಿಲಾಶಾಸನ ಮಾಡಿಸಿಬಿಟ್ಟರು. ಹೀಗಿರುವಲ್ಲಿ ಅವರ ಮಹಿಮೆಗಳನ್ನು ಈ ಹಿನ್ನೆಲೆಯಲ್ಲಿ ಮನನ ಮಾಡಬೇಕು. ಮೇಲೆ ಹೇಳಿದ್ದಕ್ಕೆಲ್ಲಾ ಬಹು ವಿಧ ಪ್ರಮಾಣಗಳು ಜಾಗರೂಕವಾಗಿವೆ. ಶುಷ್ಕಾನುಮಾನ ಮಾಡಿದರೆ "ಅನೃಜುತ್ವವೂ ಹೀಗೆ ಸಿದ್ಧಿಸುವುದಿಲ್ಲ, ಏನೂ ತಿಳಿಯದೇ ಏಕ ಬರೆಯುತ್ತಿ?" ಎಂಬ ಆಪಾದನೆಯು ಪೂರ್ವಪಕ್ಷದ ಮೇಲೆಯೂ ಅವರ ನ್ಯಾಯದಿಂದಲೇ ಬರುವುದು ಸತ್ಯ.

## 21. ಹನ್ನೊಂದನೇ ಅನುಮಾನ ರಚನೆ :

### ಪುಟ 10-19 ಉಕ್ತಿ:

"ಋಜುತ್ವ ಚಂದ್ರೋದಯಕಾರರು "ಋಜುತ್ವವು ಶ್ರೀ ವಾದಿರಾಜನಿಷ್ಠವು, ಅವರಲ್ಲಿದೆ ಎಂದು ಪ್ರಮಾಣ ಪ್ರಮಿತವಾದ್ದರಿಂದ, ಪ್ರತಿಪಕ್ಷ ಮಠಸ್ಥಿತ ಮೂಲರಾಮ ಪ್ರತಿಮೆಯಂತೆ; ಯಾವುದು ಎಲ್ಲಿದೆ ಎಂದು ಪ್ರಮಾಣ ಪ್ರಮಿತವೋ ಅದು ಅಲ್ಲಿರುತ್ತದೆ" ಎಂಬ ಸಾಮಾನ್ಯ ಮುಖವ್ಯಾಪ್ತಿಯುಕ್ತಾನುಮಾನದಿಂದ ಋಜುತ್ವ ಸಾಧಿಸಲು ಯತ್ನಿಸುತ್ತಾರೆ. ಅದು ಸರಿಯಲ್ಲ. ಪ್ರಮಾಣ ಪ್ರಮಿತತ್ವ ಹೇತುವೇ ಅಸಿದ್ಧ........ಮತ್ತು ದೃಷ್ಟಾಂತವೂ ಸಾಧ್ಯವೈಕಲ್ಯ ಯುಕ್ತವಾಗಿದೆ. ಮೂಲರಾಮ ಪ್ರತಿಮೆ ಉತ್ತರಾದಿ ಮಠದಲ್ಲಿಲ್ಲ ಎಂದು ಹೇಳುವವರು ಪ್ರಮಾಣಪ್ರಮಿತವಾಗಿ ಪ್ರತಿಮೆಅಲ್ಲಿದೆ ಎಂದು ಒಪ್ಪುವುದಿಲ್ಲವಷ್ಟೆ." ಎಂದು ಹೇಳಿದ್ದಾರೆ.

ಪ್ರತ್ಯುಕ್ತಿ: ಋಜುತ್ವ ಚಂದ್ರೋದಯೋಕ್ತ ಅನುಮಾನವು ಆಗಮಾನುಸಾರಿಯಾಗಿದೆ.**[ಇದನ್ನು ಹೇಳಿ ಬರೆಯಿಸಿದ ಶ್ರೀವಿಶ್ವಾಧೀಶತೀರ್ಥರು ವಿಕ್ಟೋರಿಯಾ ರಾಣಿಯಿಂದ ಬಿರುದು ಪಡೆದ ಅಸದೃಶ ಪ್ರಸಿದ್ಧ ವಿದ್ವಾಂಸರು. ಪುಟ 24 ಕೀರ್ತನ ಮಂಜರೀ ಶ್ರೀವಿಶ್ವೇಂದ್ರತೀರ್ಥ ಶ್ರೀಮಚ್ಚರಣ ವಿರಚಿತ. "ವಿಶ್ವಾಧೀಶ್ವರನವಿಪೆ। ಗುರುವರ್ಯ ವಿಶ್ವಪ್ರಿಯ ಶಿಷ್ಯರ ॥ಪ॥ ಆಂಗ್ಲದೇಶದ ರಾಣಿಯು ನಿಮ್ಮಯ। ಶಾಸ್ತ್ರಸಂಘದ ಮಹಿಮೆಯನು| ಆಂಗ್ಲೆಯ ಜನರಿಂದ ತಿಳಿದು ತಾ ಬಹುಮಾನ | ಆಂಗ್ಲೇಯ ಭಾಷೆಯೊಳಿತ್ತಳಾದರದಿ॥" ಶ್ರೀ ಸೋದಾವಾದಿರಾಜ ಮಠ, ಉಡುಪಿ 1955.]** ಆ ಆಗಮಗಳಲ್ಲಿ ಕೆಲವನ್ನು ಅವರೇ ಕೊಟ್ಟಿದ್ದಾರೆ. ಈ ಗ್ರಂಥದ ಅಧ್ಯಾಯ 5ರಿಂದ 12ರವರಿಗೆ ಅವೆಲ್ಲವನ್ನೂ ನಾವೂ

ನಿರ್ದೇಶಿಸಿದ್ದೇವೆ. ಮೂಲಪ್ರಮಾಣಾವಿರೋಧವೂ ಪ್ರದರ್ಶಿತವಾಗಿದೆ. ಆದ್ದರಿಂದ ಪ್ರಮಾಣ ಪ್ರಮಿತತ್ವ ಹೇತುವಿಗೆ ಅಸಿದ್ಧಿ ಶಂಕೆ ಆರೋಪಿಸುವುದು ಸರಿಯಲ್ಲ. ಸೀತೆಯೇ ಹುಟ್ಟಿಲ್ಲವಲ್ಲಾ ರಾಮನು ಹೇಗೆ ಸೀತಾಪತಿ ಎಂದು ಕೇಳಿದಂತಾಗುತ್ತೆ.

ಪ್ರತ್ಯಕ್ಷಾಗಮಾನುಸಾರಿ ಯುಕ್ತಿಯೂ ಋಜುತ್ವ ಸಾಧಕವೇ. ಹೇಗೆಂದರೆ ಅನೃಜುತ್ವಕ್ಕೆ ಸಾಧಕ ಪ್ರಮಾಣವಿಲ್ಲ. ಪ್ರಮಾಣ ವಿರೋಧವೂ ಇದೆ. ತಥಾಚ ಅನೃಜುತ್ವ ಸುಳ್ಳಾದಮೇಲೆ ಪರಿಶೇಷ ಪ್ರಮಾಣದಿಂದ ಋಜುತ್ವವನ್ನೇ ವಾದಿರಾಜರಲ್ಲಿ ಒಪ್ಪಬೇಕು. ಋಜುತ್ವ ಪ್ರತಿಪಾದಕ ಪ್ರಮಾಣಗಳೂ ಅಧಿಕವಾಗಿವೆ, ಪರಸ್ಪರ ಸಂವಾದರೂಪವಾಗಿಯೂ ಇವೆ ಎಂದು ಹಿಂದೆ ತೋರಿಸಲ್ಪಟ್ಟಿದೆ. ಆದ್ದರಿಂದ ವಾದಿರಾಜ ಋಜುತ್ವವು ಅಬಾಧಿತವು, ಹೇತು ಅಸಿದ್ಧವಲ್ಲ. ದೃಷ್ಟಾಂತದಲ್ಲಿ ಸಾಧನ ವೈಕಲ್ಯವೂ ಇಲ್ಲ. "ಪ್ರತಿಪಕ್ಷ ಮಠಸ್ಥಿತ ಮೂಲರಾಮನಂತೆ" ಎಂದು ದೃಷ್ಟಾಂತವನ್ನು ವಿಶೇಷಣ ಸಹಿತವಾಗಿ ಕೊಟ್ಟಿರುವುದರಿಂದ ಯಾವ ಉತ್ತರಾದಿ ಮಠಸ್ಥರು ತಮ್ಮ ಮಠದಲ್ಲಿ ಮೂಲರಾಮ ಪ್ರತಿಮೆ ಇದೆ ಎಂದು ಒಪ್ಪಿದ್ದಾರೋ ಅವರ ವಿವಕ್ಷೆಯಿಂದಲೇ ಈ ದೃಷ್ಟಾಂತವು ಕೊಡಲ್ಪಟ್ಟಿದೆ ಎಂದು ಸೂಚಿತವಾಗಿದೆ. ಆದ್ದರಿಂದ ಅನ್ಯವಿವಕ್ಷೆಯಿಂದ ಸಾಧನ ವೈಕಲ್ಯ ಚೋದನೆ ಮಾಡುವುದು ಛಲ. ಸಂಪ್ರತಿಪನ್ನ ದಿಗ್ವಿಜಯರಾಮ ಮುಂತಾದ ದೃಷ್ಟಾಂತವನ್ನು ಊಹಿಸಿಕೊಂಡು ಅನುಮಾನವನ್ನು ಅರ್ಥಮಾಡಿಕೊಳ್ಳುವುದು ಸುಲಭವೇ ಆಗಿದೆ. ಸಾಮಾನ್ಯ ವ್ಯಾಪ್ತಿಗೆ ದೃಷ್ಟಾಂತವು ಸುಲಭವಾಗಿ ಸಿಕ್ಕುತ್ತೆ. ಆದ್ದರಿಂದ ಈ ಋಜುತ್ವ ಚಂದ್ರೋದಯದ ಅನುಮಾನ ಅಖಂಡ್ಯ.

ಹೀಗೆ ಹನ್ನೊಂದು ಅನುಮಾನ ಪರೀಕ್ಷೆ ಮಾಡಿದ್ದಾಯಿತು. ಪೂರ್ವಪಕ್ಷದವರ ಅನುಮಾನ ವಿನ್ಯಾಸವು ಆಭಾಸರೂಪವೇ. ಅವರು ಋಜುತ್ವವು ನಿತ್ಯಾತೀಂದ್ರಿಯವು ಎಂದು ಒಪ್ಪಿಯೂ ಶುಷ್ಕಯುಕ್ತಿಗಳನ್ನು ಕಲ್ಪನೆಮಾಡಿ ಖಂಡಿಸಿದ್ದಾರೆ. "ಅಬದ್ಧಂ ಪರಿತ್ವಾ ಕುಚೋದ್ಯೇನ ಪರಿಹರತಿ" ಎಂಬ ನ್ಯಾಯವನ್ನು ಅನುಸರಿಸದಂತಾಯಿತು. ಸಾಧಕ ಆಗಮಗಳನ್ನೆಲ್ಲಾ ವಿರೋಧಿ ಪ್ರಮಾಣ ತೋರಿಸದೇ ಶಂಕಿಸಿರುವುದರಿಂದಲೂ, ಇವರ ವಾದ ರೀತಿಯು ಆಭಾಸವೇ. ಪ್ರಮಾಣವಿಲ್ಲದಿದ್ದರೂ, ಅನೃಜುತ್ವದಲ್ಲಿ ದೀಕ್ಷೆಯನ್ನು ವ್ಯಕ್ತಮಾಡಿರುವುದರಿಂದಲೂ, ಇವರ ಖಂಡನೆಯು ಆಭಾಸವು, ಋಜುತ್ವಕ್ಕೆ ಸಾಧಕ ಪ್ರಮಾಣ ಬಾಹುಳ್ಯವಿದ್ದರೂ, ಅನುಗ್ರಾಹಕ ಪ್ರಮಾಣವೇ ಅದಕ್ಕಿಲ್ಲ ಎಂದು ಸುಳ್ಳು ಬರೆದಿದ್ದಾರೆ. ಕೊನೆಯದಾಗಿ ಛಲರೀತಿಯಿಂದ ಅವಿವಕ್ಷಿತ ಅನುಮಾನಗಳನ್ನು ಖಂಡನೆಮಾಡಿ, ಋಜುತ್ವವು ಪ್ರಮಾಣ ಹೀನವೆಂದು ವಾದಿಸಿರುವುದೂ ಇವರ ವಾದದ ಆಭಾಸತೆಗೆ ನಿದರ್ಶನ.

**ಇನ್ನು ಆಗಮ ನಿರಾಸ ಪ್ರಕರಣ:**

**22 ಪುಟ 11-5 ಉಕ್ತಿ:**

ಋಜುತ್ವ ಸಾಧಕವಾಗಿ ಉದಾಹರಿಸಲ್ಪಟ್ಟಿರುವ ಆಗಮಗಳೆಲ್ಲವೂ ಪ್ರಕ್ಷಿಪ್ತವೇ. ಅಧಿಕೃತ ಮೂಲಕೊಶಗಳಲ್ಲಿ ಇಲ್ಲದಿರೋಣ, ಶ್ರೀವ್ಯಾಸರಾಜ ಪ್ರಭೃತಿಗಳಿಂದ ಉದಾಹರಿಸಲ್ಪಡದಿರೋಣ, ಭಗವತ್ಪಾದಾನುಕ್ತಾರ್ಥ

ಪ್ರತಿಪಾದನೆ ಮಾಡೋಣ, ಅನುವ್ಯಾಖ್ಯಾನ, ಪ್ರಮೇಯ ಮುಕ್ತಾವಳೀ, ಸುಮಧ್ವವಿಜಯ ವ್ಯಾಖ್ಯಾನಾದಿ ವಿರುದ್ಧ ಇತ್ಯಾದಿ ಕಾರಣಗಳು ಹಾಗೆ ಹೇಳಲು ಕಾರಣವು.

**ಪ್ರತ್ಯುಕ್ತಿ :**

ಅ) ಪೂರ್ವಪಕ್ಷ ಗ್ರಂಥದ ಮೇಲ್ಕಂಡ ವಿಚಾರ ರೀತಿಯೇ ಮಧ್ವಶಾಸ್ತ್ರ ವಿರುದ್ಧ. ಅದು ಹೇಗೆಂಬುದು ಸುಧಾ II 1-4 ರಲ್ಲಿ ಟೀಕಾಚಾರ್ಯರಿಂದ ಸ್ಪಷ್ಟವಾಗಿ ಹೇಳಲ್ಪಟ್ಟಿದೆ. "ಅಪ್ರಾಮಾಣ್ಯ ಪ್ರಯೋಜಕ ವೆಂದು ಸಾಧಿಸಲು ಹೇಳಿದ (ಪ್ರಕ್ಷಿಪ್ತತ್ವಾದಿ) ವಿರೋಧವಾದರೂ ಪ್ರತ್ಯಕ್ಷ ಸಿದ್ಧದ್ದವಾದ ಪ್ರಮಾಣ ವಿರೋಧವಾಗಿರಬೇಕು; ಅಥವಾ ಆಗಮ ಸಿದ್ಧವಾದ ಪ್ರಮಾಣ ವಿರೋಧವಾಗಿರಬೇಕು. ಆದರೆ ಅನುಮಾನ ವಿರೋಧ ಹೇಳಬಾರದು" ಎಂದಿದೆ. ಈ ಪೂರ್ವಪಕ್ಷಿಯಾದರೋ ಪ್ರಕ್ಷಿಪ್ತತ್ವಾದಿ ಯುಕ್ತಿಯನ್ನು ಕಲ್ಪನೆಮಾಡಿ, ಋಜುತ್ವ ಪ್ರತಿಪಾದಕ ಪ್ರಮಾಣಗಳೆಲ್ಲಾ ದುರಾಗಮಗಳೆಂದು ಸಾರಲು ಯತ್ನಿಸಿದ್ದಾರೆ. ಇದು ಮಧ್ವ ಶಾಸ್ತ್ರಕ್ಕೆ ವಿರುದ್ಧವಾದ್ದರಿಂದ ಕುಮಾರ್ಗ. ಪ್ರಕೃತ ಪ್ರತ್ಯಕ್ಷಕ್ಕೆ ಅವಕಾಶವಿಲ್ಲದಿದ್ದರೆ ಪ್ರಬಲತರ ಆಗಮವನ್ನೇ ಕೊಟ್ಟು ಋಜುತ್ವಾಗಮವನ್ನು ಉರುಳಿಸಬೇಕು. "ಆಗಮೇನಾಗಮಸ್ಯೈವ ವಿರೋಧೇ ಯುಕ್ತಿರಿಷ್ಯತೇ" ಎಂದು ನ್ಯಾಯವಿದೆ. ಅದಾಗದಿದ್ದರೆ ಋಜುತ್ವವನ್ನೇ ಅಂಗೀಕರಿಸಲಿ. ಕುಮಾರ್ಗಕ್ಕೆ ಇಳಿಯಬಾರದು. ಅಷ್ಟೇ ಅಲ್ಲ, ಇವರ ಪ್ರಕ್ಷಿಪ್ತತ್ವ ಹೇತುವೂ, ತತ್ಸಂಬಂಧಿ ಇತರ ಮೂರು ಯುಕ್ತಿಗಳೂ ಅಪ್ರಯೋಜಕವೇ. ಅನುವ್ಯಾಖ್ಯಾನ ವಿರೋಧಿ ಎಂಬ ನಾಲ್ಕನೆಯದು ಅಸಿದ್ಧ. ಅನುವ್ಯಾಖ್ಯಾನಾದಿ ಮೂಲಶಾಸ್ತ್ರಗಳಲ್ಲಿ ಎಲ್ಲೂ ವಾದಿರಾಜ ಗುರುಗಳು ಋಜುಗಳಲ್ಲ ಎಂದು ಹೇಳಿಲ್ಲ.

ಆ) ಕಿಂಚ 'ಪ್ರಕ್ಷಿಪ್ತ' ವೆಂದರೇನು? ಈ ಋಜುತ್ವ ಬೋಧಕ ವಾಕ್ಯಗಳು ಇಲ್ಲವೇ ಇಲ್ಲ ಎಂದರ್ಥವೇ? ಬೇರೆಯವರಿಂದ ರಚಿತವಾಗಿ ಯೋಜಿತವಾಗಿವೆ ಎಂದರ್ಥವೇ? ಮೊದಲನೆಯದಲ್ಲ. ವೇದವೇದ್ಯ ಸಂಪ್ರದಾಯಾದಿ ಏಳು ಎಂಟು ಪ್ರಮಾಣಗಳೂ ಪ್ರತ್ಯಕ್ಷಾದಿ ಪ್ರಮಾಣ ಸಿದ್ಧವಾಗಿವೆ. ಎರಡನೆಯ ಅರ್ಥವೂ ಸರಿಯಲ್ಲ. ಏಕೆಂದರೆ II 1-2 ಸುಧೋಕ್ತ ರೀತಿಯಿಂದ ತದ್ಧಿ ಬಲವತ್ಪ್ರಮಾಣ ವಿರೋಧತಃ ಕಲ್ಪನೀಯಂ" ಪ್ರಬಲ ಪ್ರಮಾಣ ವಿರೋಧ ಕಂಡು ಇಂಥವರಿಂದ ಪ್ರಕ್ಷಿಪ್ತ ಎಂಬ ದೋಷವಿದೆ ಎಂದು ಕಲ್ಪಿಸಬೇಕು. ದೃಷ್ಟಾಂತ, ರಾಮಾಯಣ ವಿಶೇಷವು ವಾಲ್ಮೀಕಿ ಕೃತವಲ್ಲ; ಏಕೆಂದರೆ ಪಂಪ ಕವಿ ರಚಿತ ಎಂದು ಪ್ರಮಾಣವಿರುವುದರಿಂದ. ಪ್ರಕೃತದಲ್ಲಿ, ಋಜುತ್ವ ಸಾಧಕ ಪ್ರಮಾಣಗಳು ಅನ್ಯಕೃತವೆಂದು ಪ್ರಮಾಣವಿಲ್ಲ. ವೇದವೇದ್ಯ ಸಂಪ್ರದಾಯ ವೇದವೇದ್ಯರೇ ತೋರಿಸಿದ್ದು. ಆಖ್ಯಾನ ವಾದಿರಾಜಕೃತ; ವಾ.ಗು.ಚ. ವೇದನಿಧಿ ಶಿಷ್ಯಕೃತ; ವಿಶ್ವಪ್ರಿಯವಿಲಾಸ ಸೇತುಮಾಧವಾಚಾರ್ಯ ಕೊಚ್ಚಿ ರಂಗಪ್ಪಾಚಾರ್ಯಕೃತ; ಇತ್ಯಾದಿ. ಋಜುತ್ವ ಬೋಧಕ ಪ್ರಮಾಣಗಳು ಅನ್ಯಕೃತವಾದರೂ ಅವಕ್ಕೆ ವೇದತ್ವ, ಪುರಾಣತ್ವಗಳು ಹೋಗುತ್ತವೆಯೇ ಹೊರತು ನಿಯಮೇನ ಪ್ರಾಮಾಣ್ಯ ಹಾನಿಯಾಗುತ್ತೆ ಎಂದು ಪ್ರಮಾಣವಿಲ್ಲ. ಆದ್ದರಿಂದ ಗ್ರಂಥಕಾರರು ಪೂರ್ವೋಕ್ತ ಋಜುತ್ವ ಸಾಧಕ ಏಳೆಂಟು ಪ್ರಮಾಣಗಳು "ಅವು ಪ್ರಾಮಾಣ್ಯವಿಲ್ಲದ ಪ್ರಕ್ಷಿಪ್ತಗಳು" ಎಂದು ಶಾಸ್ತ್ರಾದಿ ಪ್ರಮಾಣ ಕೊಡಬೇಕು. ಅದು ಅಸಾಧ್ಯ.

ಆಖ್ಯಾನವು ಋಜುಗಳಾದ ವಾದಿರಾಜರಿಂದ ರಚಿತವೆಂದು ಆ ಕಾಲದಲ್ಲೇ (1640) ಶಿಲಾಶಾಸನವಾಗಿರುವ "ವಾದಿರಾಜಾಖ್ಯಯತಿನಾ" ಇತ್ಯಾದಿ ಪುಟ 80ರಲ್ಲಿ ಉದಾಹರಿಸಿರುವ ಎರಡು ಶ್ಲೋಕಗಳಿಂದ ಗೊತ್ತಾಗುತ್ತೆ. ಇದಕ್ಕೆ ಯುಕ್ತಿ ವಿರೋಧ ತರದೇ, ಆಗಮ ವಿರೋಧ ತೋರಿಸಲಿ. ಕರ್ಣಾಟಕ ಪದ್ಯಗಳು ತತತ್ಜ್ಞಾನಿ ಕೃತವಾಗಿ ಅನ್ಯಕೃತತ್ವ ಶಂಕಾರಹಿತವಾಗಿವೆ. ಇನ್ನೂ ಬಹು ಜನರ ಭಜನೆಗೆ ಕಾರಣವಾಗಿವೆ. ಪ್ರಾಚೀನ ಗ್ರಂಥೋದಾಹೃತವಾಗಿ ಪರಂಪರೆಯಿಂದ ಬಂದಿವೆ. ಇವಕ್ಕೆ ಯುಕ್ತಿಯಿಂದ ಅಲಗಳೆಯದೆ ಪ್ರಮಾಣವಿರೋಧ ತೋರಿಸಲಿ ಅನ್ಯಥಾಪರತಸ್ತ್ವರೀತಿಯಾಗುತ್ತೆ. ಬ್ರಹ್ಮಾಂಡ ಪುರಾಣಾದಿ ವಾಕ್ಯಗಳು, ಋಜುತ್ವ ಚಂದ್ರೋದಯ, ವಾ.ಗು.ಚ., ಋಜುತ್ವ ವಿರೋಧಿ ಕಪೋಲ ಚಪೇಟಿಕಾ ಮುಂತಾದ ಹಿಂದಿನ ಗ್ರಂಥಗಳಲ್ಲಿ ಅವು ಉದಾಹೃತವಾಗಿವೆ. ಆ ಗ್ರಂಥಗಳಿಗೂ ಪರತಸ್ತ್ವರೀತಿಯಿಂದ ಯುಕ್ತಿ ವಿರೋಧ ತೋರಿಸದೇ, ಪ್ರತಿಪ್ರಮಾಣ ತೋರಿಸಿ ಕೃತಕತ್ವ ಸಾಧಿಸಲಿ. ಆಗಮಕ್ಕೆ ವಿರೋಧವಾಗಿ ಕೇವಲ ಯುಕ್ತಿ ಏನು ಮಾಡೀತು.

ಇ) ಇನ್ನು ಎಲ್ಲಾ ಅಧಿಕೃತ ಕೋಶಗಳಲ್ಲಿಲ್ಲ, ಎಂಬ ಯುಕ್ತಿಯೂ ಅಬದ್ಧವೇ. ಸರ್ವ ಕೋಶಗಳಲ್ಲೂ ಈ "ಕೀರ್ತನೆಗಳಿಲ್ಲ" ಎಂದು ತೋರಿಸಲು ಸಾಧ್ಯವಿಲ್ಲ. ರಾಜಶಾಸನದಿಂದ ಸರ್ವಗ್ರಂಥ ಸಂಗ್ರಾಹಕಾಧಿಕೃತ ಕೋಶಗಳು ನಮ್ಮ ದೇಶದಲ್ಲಿ ಈ ಕಾಲಪರ್ಯಂತ ಇಲ್ಲ. ವಾದಿರಾಜಗುರು ವಿಷಯಕ ಬಹು ಗ್ರಂಥಗಳು ಪ್ರಾಯಶಃ ಭೀಮಸೇತು ಮುನಿವೃಂದ ಮಠೀಯ ಕೋಶದಲ್ಲಿ ಕಾಣುತ್ತವೆ. ಆಖ್ಯಾನವು ಉಡುಪಿ ಮಠಗಳಲ್ಲಿ ಯಾವಾಗಲೂ ಇತ್ತು, ಈಗಲೂ ಇದೆ["ಮಾರ್ತಿಕ ಗರ್ವ ನಿರ್ವಾಪಣ" ಎಂಬ ಸಣ್ಣ ಪುಸ್ತಕದಲ್ಲಿ (1885) ಆಖ್ಯಾನವು ಒಂದೇ ರೀತಿ ಬರೆಯಲ್ಪಟ್ಟಿಲ್ಲ. ಒಬ್ಬೊಬ್ಬರ ಮನೆ ಪುಸ್ತಕದಲ್ಲಿ ಒಂದೊಂದು ರೀತಿ ವ್ಯತ್ಯಾಸವಿದೆ ಎಂದು ಆಪಾದಿಸಲ್ಪಟ್ಟಿದೆ. ಆದು ಹಾಗಿಲ್ಲ. 1925 ರಲ್ಲಿ ಪ್ರಿಂಟಾಗಿರುವುದೂ ಬರದ ಪುಸ್ತಕಗಳೂ ಹೋಲುತ್ತವೆ. ವ್ಯತ್ಯಾಸ ಅತ್ಯಲ್ಪ. ಆಖ್ಯಾನದ ವಿಷಯದಲ್ಲಿ "ಪ್ರಾಮಾಣ್ಯ ಬೋಧಿನೀ" ಸಹ 1834 ರಲ್ಲಿ ಹುಟ್ಟಿಕೊಂಡಿದೆ. ಆಗಲೇ ಎರಡು ವ್ಯಾಖ್ಯಾನಗಳೂ ಆಗಿವೆ. ಆಖ್ಯಾನ ಗ್ರಂಥ ಹುಟ್ಟಿದ ಕಾಲದಿಂದಲೇ ಅದೊಂದು ಮಂತ್ರತುಲ್ಯಕೃತಿ ಎಂದು ತಿಳಿದು ಬಂತಾದ್ದರಿಂದ ಹೆಚ್ಚಾಗಿ ವ್ಯತ್ಯಾಸ ಹೊಂದಲಿಲ್ಲ. ಆನುಪೂರ್ವಿ ರಕ್ಷಿತವಾಗಿಯೇ ಇದೆ. ] ಐತಿಹ್ಯವು ಸೊದೆಮಠದಲ್ಲಿ ಪ್ರವೃತ್ತವಾಗಿ ಅನುಷ್ಠಿತವಾಗಿ ಒಂದೇ ರೀತಿ ಇದೆ. ವಾ.ಗು.ಚ. ಗ್ರಂಥವು ಮಠದಲ್ಲಿ ಇರುತ್ತೆ. ಅದರಲ್ಲಿರುವ ಪುರಾಣ ವಾಕ್ಯಗಳು ಋಜುತ್ವ ಚಂದ್ರೋದಯಾದಿಗಳಲ್ಲಿ ಉದಾಹೃತವಾಗಿವೆ. ಹೇಗೆ ಶ್ರೀಮದಾಚಾರ್ಯರು ಅಧಿಕೃತ ಕೋಶವಿಲ್ಲದಿದ್ದರೂ ಬ್ರಹ್ಮಾಂಡ ಪುರಾಣಾದಿ ವಾಕ್ಯಗಳನ್ನು ಉದಾಹರಿಸಿದ್ದಾರೋ, ಹಾಗೆ ರಾಮಚಂದ್ರ ಪಂಡಿತರೂ, ವೇದನಿಧಿಗಳ ಅಜ್ಞೆಯಿಂದ ಆ ಪುರಾಣ ವಾಕ್ಯಗಳನ್ನು ಉದ್ಧಾರ ಮಾಡಿ ಉದಾಹರಿಸಿದ್ದಾರೆ [ಮಾರ್ತಿಕ ಗರ್ವ ನಿರ್ವಾಪಣದಲ್ಲಿ ಇದೇ ದೊಡ್ಡ ಯುಕ್ತಿ: "ಅನೇಕ ಪುರಾಣ ಪುಸ್ತಕಗಳನ್ನು ನಾವು ತರಿಸಿ ನೋಡಿದೆವು. ಅವುಗಳಲ್ಲಿ ಈ ಉದಾಹೃತವಾಕ್ಯ ಕಾಣಲಿಲ್ಲ. ಆದ್ದರಿಂದ ಇವು ಪ್ರಕ್ಷಿಪ್ತ; ಒಂದು ವೇಳೆ ಒಂದು ಪುಸ್ತಕದಲ್ಲಿ ಕಂಡರೂ ಬಹು ಪುಸ್ತಕಗಳಲ್ಲಿ ಇಲ್ಲದ್ದರಿಂದ ಆ ಒಂದು ಪುಸ್ತಕದ ವಾಕ್ಯವೇ ಪ್ರಕ್ಷಿಪ್ತ" ಎಂದು ಆಪಾದಿಸಿದ್ದಾರೆ. ಆ ಯುಕ್ತಿ ಸರಿಯಲ್ಲ. ಆಗ್ನೇಯ ಪುರಾಣ ಕಾವೇರಿ ಮಹಾತ್ಮ್ಯೆ, ಹರಿವಂಶದ ಶೇಷಧರ್ಮ ಮುಂತಾದುವು ಆ ಮೂಲ

ಪುರಾಣದಲ್ಲಿ ಕಾಣುವುದಿಲ್ಲ. ಎಲ್ಲಾ ಪುಸ್ತಕಗಳನ್ನು ತರಿಸಿ ನೋಡುವುದೇ ಅಸಾಧ್ಯ, ರಾಮಚಂದ್ರ ಪಂಡಿತರು ಉಪಯೋಗಿಸಿದ್ದ ಪುಸ್ತಕ ತರಿಸಿ ನೋಡಬೇಕಾಗಿತ್ತು. ಆ ವಾಕ್ಯ ಪ್ರಕ್ಷಿಪ್ತ ಎನ್ನಲು ಪ್ರಬಲ ಪ್ರಮಾಣ ಬೇಕು. ವೇದನಿಧ್ಯಾದಿ ಯೋಗಿಗಳು ಪುರಾಣಕಲ್ಪಕರಲ್ಲ. ಅನೃಜುತ್ವ ಬೋಧಕ ವಾಕ್ಯವಿಲ್ಲದೆ ಸುಮ್ಮನೆ ಸಂದೇಹ ಪಡಲು ಕಾರಣವೇ ಇಲ್ಲ. ಒಂದು ಪುಸ್ತಕದಲ್ಲಿದ್ದರೆ ನಂಬಬಾರದು ಎನ್ನುವುದೂ ಸರಿಯಲ್ಲ. ಮಧ್ವವಿಜಯದಲ್ಲಿ ಹೇಳಿದಂತೆ ಆಚಾರ್ಯರು ಹೇಳಿದ ವಾಕ್ಯ ಒಂದು ಪುಸ್ತಕದಲ್ಲೇ ಇತ್ತು, “ವೇದೇ ರಾಮಾಯಣೇ ಚೈವ” ಎಂಬ ವಾಕ್ಯ ಕಲ್ಕತ್ತೆಯಲ್ಲಿ ಪ್ರಿಂಟಾದ ಒಂದು ಪುಸ್ತಕದಲ್ಲಿದೆ, ನಮ್ಮ ಸೀಮೆಯ ಪುಸ್ತಕಗಳಲ್ಲಿಲ್ಲ” ಎಂದು ಶ್ರೀಭಂಡಾರಕೇರಿ ಸ್ವಾಮಿಗಳು ಹೇಳಿದರು.] ಬಾಧಕ ಆಗಮವಾಕ್ಯ ಕಾಣದೆ ಅವೆಲ್ಲಾ ಕಲ್ಪಿತ ಎಂದು ಶಂಕಿಸುವುದು ಪರತಸ್ತ್ವ ರೀತಿ. ಜ್ಞಾನಿಪದಗಳು ಪರಂಪರೆಯಿಂದ ಬಂದಿವೆ. ಅನೇಕರು ಕಂಠಪಾಠ ಮಾಡಿದ್ದಾರೆ. ಅಧಿಕೃತ ಕೋಶದಲ್ಲಿದ್ದರೆಷ್ಟು ಬಿಟ್ಟರೆಷ್ಟು? ಆ ಅಪ್ರಯೋಜಕ ಯುಕ್ತಿ ತರಬಾರದು. ಅನೇಕ ಪದಗಳು ಪಾವೆಂಜೆ ಗುರುರಾಯರಿಂದ ಉಡುಪಿಯಲ್ಲಿ ಮುದ್ರಿತವಾಗಿವೆ. ಅನೇಕ ಲಿಖಿತ ಪುಸ್ತಕಗಳಲ್ಲೂ ಸಿಗುತ್ತವೆ. ಇನ್ನು ವಿಶ್ವಪ್ರಿಯವಿಲಾಸ ಗ್ರಂಥಗಳೆರಡೂ ಮಠದಲ್ಲಿವೆ. ಅದರಲ್ಲಿ ಕೊಚ್ಚಿ ರಂಗಪ್ಪಾಚಾರ್ಯಕೃತ ವಿಶ್ವಪ್ರಿಯವಿಲಾಸವು 1889ರಲ್ಲಿ ಮುದ್ರಿತವಾದದ್ದು. ಅವರ ಪ್ರಪೌತ್ರ ಡಾ|| ಬಿ. ಎನ್. ಕೆ. ಶರ್ಮಾ ಇವರಲ್ಲಿ ಇನ್ನೂ ಕೆಲವು ಪ್ರತಿ ಉಳಿದಿವೆ ಎಂದು ನನ್ನಿಂದ ಶ್ರುತವಾಗಿದೆ. ಅವರ “ವಾದಿರಾಜ ಗುರ್ವಷ್ಟಕ” ಸೋದೆ ಮಠದಲ್ಲೂ ಇದೆ. ವಿಶ್ವಪ್ರಿಯ ಜೀವನ ಚರಿತ್ರೆಯೇ ಮುಂತಾದ ಅನುಮಾನ ಪ್ರಮಾಣಗಳು "ಆಚಾರಶ್ಚೈವ ಸಾಧೂನಾಂ" ಎಂಬ ಆಗಮಾನುಸಾರಿ. ಅವು ಕೋಶದಲ್ಲಿರಬೇಕಾಗಿಲ್ಲ. ಜ್ಞಾನಿಗಳಾದ ಅವರ ಸಫಲ ಜೀವನವನ್ನು ಪರಾಮರ್ಶೆ ಮಾಡಿದರೆ ವಾದಿರಾಜ ಗುರುಗಳ ಋಜುತ್ವ, ಆಖ್ಯಾನ ಪ್ರಮಾಣ್ಯ ಇವೆರಡೂ ಖಚಿತವಾಗುತ್ತವೆ.

ಪುರಾಣ ವಾಕ್ಯಗಳನ್ನು ಶೋಧನೆಮಾಡುವ ಕೆಲಸದಲ್ಲಿ ನಾನು ಪ್ರವೃತ್ತನಾಗಲಿಲ್ಲ. ಏಕೆಂದರೆ ಶ್ರೀ ಆಚಾರ್ಯರು ಉದಾಹರಿಸಿರುವ ದ್ವೈತ ಮತೋಪಯೋಗಿ ಅನೇಕ ವಾಕ್ಯಗಳು ಕೆಲವಲ್ಲಿ ವ್ಯತ್ಯಸ್ತವಾಗಿ ಸಿಗುತ್ತೆ, ಕೆಲವಲ್ಲಿ ಸಿಗುವುದೇ ಇಲ್ಲ. ಎಲ್ಲಾ ಪುರಾಣ ವಾಕ್ಯಗಳೂ ಸಿಗುತ್ತವೆ ಎಂಬ ಪೂರ್ವಪಕ್ಷದ ಮಾತು ಸುಳ್ಳು, ಕೊನೆಗೆ “ಪ್ರಥಮೋ ಹನುಮಾನ್ನಾಮ” ಎಂಬ ಪುರಾಣ ವಾಕ್ಯವನ್ನು ಅವೈಷ್ಣವರು ಮುದ್ರಿಸಿರುವ ಪುರಾಣ ಗ್ರಂಥಗಳಲ್ಲಿ ತೋರಿಸಲಿ, ನನ್ನ ಅಭಿಪ್ರಾಯವೇನೆಂದರೆ ಋಜುತ್ವ ಪ್ರತಿಪಾದಕ ಗ್ರಂಥೋದಾಹೃತ ಪುರಾಣ ವಾಕ್ಯಗಳೆಲ್ಲಾ ಪ್ರಾಮಾಣಿಕಗಳೇ. ಅಲ್ಲಲ್ಲಿ ದೇಶೀಯ ಪುರಾಣ ಗ್ರಂಥಗಳನ್ನು ಶೋಧಿಸಿದರೆ ಸಿಕ್ಕೇ ಸಿಗುತ್ತವೆ. ಸಿಕ್ಕದಿದ್ದರೆ ಹಿಂದಿನ ಕಾಲದಲ್ಲಿ (1640ರಲ್ಲಿ) ಬರೆದಿಟ್ಟಿದ್ದ ಪುಸ್ತಕಗಳಲ್ಲಿತ್ತು ಎಂಬುದಕ್ಕೆ ವಿರೋಧವೇನು? ವೇದನಿಧ್ಯಾದಿ ಗುರುಗಳು ಭ್ರಾಂತರಲ್ಲ. ಸ್ಮೃತಿಕಲ್ಪಕರಲ್ಲ. ಈಗ ಆ ವಾಕ್ಯಗಳು ಸಿಗದಿದ್ದ ಮಾತ್ರಕ್ಕೆ ಹೋಗುವುದೇನು? ತದ್ಭಿನ ಅನೇಕ ಪ್ರಮಾಣಗಳಿಂದ ವಾದಿರಾಜ ಋಜುತ್ವ ಸಿದ್ಧವಾಗುವುದಿಲ್ಲವೇ? ನಾವೆಲ್ಲಾ ಟೀಕಾಚಾರ್ಯರು ಇಂದ್ರಾಂಶ, ರಾಘವೇಂದ್ರ ಸ್ವಾಮಿಗಳು ಪ್ರಹ್ಲಾದಾಂಶ, ಎಂದು ಸುದೃಢವಾಗಿ ನಂಬಿದ್ದೇವೆ. ಅದಕ್ಕೆ ಎಷ್ಟು ಪ್ರಮಾಣವಿದೆ? ಒಂದೊಂದೇ ಪ್ರಮಾಣ ಸಾಕು. ಬಾಧಕ ಪ್ರಮಾಣ ಕಾಣದ ವಾದಿಯು ಆಗ್ರಹ ಮಾತ್ರದಿಂದ ಪರತಸ್ತ್ವ ರೀತಿಯಿಂದ ಪ್ರಶ್ನಿಸಿದರೆ ನೂರು

| |
|---|
| ಪ್ರಮಾಣಗಳಾದರೂ ಸಾಲದು. ಆದ್ದರಿಂದ ಯಾವ ಗ್ರಂಥದಲ್ಲೂ ಈ ವಾಕ್ಯಗಳು ಸಿಗುವುದಿಲ್ಲವೆಂಬ ವಾದವು ವಿಶ್ವಾಸಾನರ್ಹವು. ಆ ಸಾವಿರಾರು ಗ್ರಂಥಗಳ ಪರೀಕ್ಷೆಗೆ ಒಂದು ಸಮಿತಿಯೇ ಆಗಬೇಕು. ಶ್ರೀ ಸತ್ಯಪರಾಕ್ರಮ ತೀರ್ಥರು ಆ ಪ್ರಮಾಣಗಳನ್ನು ತಿರಸ್ಕರಿಸಬಾರದೆಂದು ತೀರ್ಮಾನ ಮಾಡಿರುವ ನಿರೂಪ ವಿಷಯ ಹಿಂದೆ ಹೇಳಲ್ಪಟ್ಟಿರುತ್ತೆ. |
| ಇನ್ನು ಕರ್ಣಾಟಕ ಪದಗಳು ಸರ್ವ ಕೋಶಗಳಲ್ಲೂ ಅನುಪಲಬ್ಧವಾಗಿದ್ದರೆ ಶ್ರೀ ಸೋದೆ ಮಠದ ಶ್ರೀಪಾದಂಗಳವರು ಅವೆಲ್ಲವನ್ನೂ ಹೇಗೆ ಸಂಗ್ರಹಿಸಿ "ಶ್ರೀವಾದಿರಾಜ ಗುರುವರ ಕೀರ್ತನ ಮಂಜರೀ" ಗ್ರಂಥವನ್ನು ಪ್ರಕಟಿಸಿದರು? |
| ಈ) ಇನ್ನು ವ್ಯಾಸರಾಜ ಪ್ರಭೃತಿಗಳು ಉದಾಹರಿಸಿಲ್ಲವೆಂಬ ಹೇತುವು ಅಪ್ರಯೋಜಕ ಹೇತುವು. 1539ರಲ್ಲಿಯೇ ಗತಿಸಿದ್ದ ಅವರಿಗೆ ಪ್ರಸಕ್ತಿ ಬರಲಿಲ್ಲ. ಅವರು ನೋಡಲಿಲ್ಲ, ಉವಾಹರಿಸಲಿಲ್ಲ ಎಂದು ನಂಬಬಹುದು. 1539ರಲ್ಲಿ ಶ್ರೀವ್ಯಾಸರಾಜರ ವೃಂದಾವನಾನಂತರ 61 ವರ್ಷಗಳ ಮೇಲೆ ಗುರುರಾಜರ ವೃಂದಾವನ ಪ್ರವೇಶ. ಅನಂತರ ಐತಿಹ್ಯ, ವಾ.ಗು.ಚ., ಆಖ್ಯಾನ, ಪದಾದಿ ಪ್ರಮಾಣಗಳ ಪ್ರವೃತ್ತಿ, ವಾ.ಗು.ಚ.ದಲ್ಲಿ ಮೊದಲು ಪುರಾಣ ವಾಕ್ಯಗಳು ಕಾಣುತ್ತವೆ. ಅದಕ್ಕೆ ಹಿಂದಿನ ಕಾಲಗಳಲ್ಲಿ ಆ ವಾಕ್ಯಗಳನ್ನೆಲ್ಲಾ ಶೋಧನೆ ಮಾಡಿ ಪ್ರಕಟಿಸುವುದಕ್ಕೆ ಯಾವ ಪ್ರಸಂಗ ಬಂದಿತ್ತು? ವ್ಯಾಸರಾಜಾದಿಗಳು ತಮ್ಮ ಪಾಠ ಪ್ರವಚನ ಬಿಟ್ಟು 61 ವರ್ಷದ ಮೇಲೆ ವೃಂದಾವನ ಪ್ರವೇಶ ಮಾಡುವ ಒಬ್ಬರ ಸ್ವರೂಪವನ್ನು ನಿಶ್ಚಯಿಸಿ, ರಾಜಸ ತಾಮಸ ಪುರಾಣಾದಿಗಳೆಲ್ಲವನ್ನೂ ನೋಡಿ ಆ ವಾಕ್ಯ ಸಂಗ್ರಹಿಸಿ ಪ್ರಚಾರ ಪಡಿಸಬೇಕಾಗಿತ್ತೆಂಬ ಪೂರ್ವಪಕ್ಷದ ಆಗ್ರಹವು ಲೋಕಾನುಭವ ವಿರುದ್ಧ. ಇದರ ಮೇಲೆ ಅವರು ಯಾರ ಜೀವನ ಚರಿತ್ರೆಯನ್ನೂ ಬರದೇ ಇಲ್ಲ. ಅಂಥ ಮೀಮಾಂಸೆಯನ್ನೇ ಮಾಡಿಲ್ಲ. ತಮಗೆ ಪರಿಚಿತರಾದ ಕನಕ, ಪುರಂದರದಾಸರು, ವಿಜಯೀಂದ್ರ ತೀರ್ಥರು, ಶಿಷ್ಯರಾದ 24 ಯತಿಗಳು, ರಾಜರುಗಳು ಇಂಥವರ ಸ್ವರೂಪ ವಿಷಯದಲ್ಲೂ ವ್ಯಾಸರಾಜಾದಿಗಳ ಯಾವ ಉಲ್ಲೇಖವೂ ಇಲ್ಲ. ಇಂಥ ಅನುಕ್ತಿಯು ವಸ್ತುಸತ್ವಕ್ಕೆ ಲಿಂಗವಲ್ಲ. ವಿರೋಧೋಕ್ತಿಯೇ ಗಮನಾರ್ಹ. ಅಪರೋಕ್ಷ ಜ್ಞಾನಿಗಳ ವಿರುದ್ಧೋಕ್ತಿ ಒಂದೂ ಇಲ್ಲ. ಸಾವಕಾಶ ಅನುಕ್ತಿಯು ಅಸಾಧಕವೆಂದು ಹಿಂದೆ ತೋರಿಸಿಯಾಗಿದೆ. |
| 1600 ಕ್ಕಿಂತ ಮುಂಚೆಯೇ ಗುರುರಾಜ ವಿಷಯಕ ಪುರಾಣ ವಾಕ್ಯಗಳ ಪ್ರಕಾಶಕ್ಕೆ ಪ್ರಾಯಶಃ ಗುರುರಾಜರ ಪ್ರಾಪಂಚಿಕ ಪ್ರತ್ಯಕ್ಷ ಚರಿತ್ರೆಯೇ ಪ್ರತಿಬಂಧಕವಾಗಿತ್ತೆಂದೂ ಊಹಿಸಬಹುದು. ಸಾಮಾನ್ಯವಾಗಿ ಮಹಾತ್ಮರು ಆಡಂಬರದ ಜೀವನ ನಡೆಸಿ, ಮನುಷ್ಯರ ಮನಸ್ಸನ್ನು ಕೆರಳಿಸಿ, ಇವರು ಯಾವ ದೇವಾಂಶ ಕಂಡುಹಿಡಿದು ಪ್ರಚಾರಮಾಡಬೇಕೆಂಬ ಉತ್ಸಾಹವನ್ನು ಪ್ರಚೋದನೆ ಮಾಡುವುದಿಲ್ಲ. ಅದರಲ್ಲೂ ಪೂರ್ವಕಾಲದ ಮಹಾತ್ಮರು ಬೂದಿಮುಚ್ಚಿದ ಕೆಂಡದಂತಿದ್ದು, ತಾವು ಯಾವ ಸೇವೆಗಾಗಿ ಹುಟ್ಟಿದ್ದಾರೋ ಆ ಕಾರ್ಯವನ್ನು ಚೆನ್ನಾಗಿ ನೆರವೇರಿಸಿ, ಪುನಃ ಶಕ್ತಿಯನ್ನು ಮುಚ್ಚಿಕೊಂಡು, ತಮ್ಮ ಸ್ವರೂಪ ಹೇಳದೆ ಇತರ ಶಿಷ್ಯರಿಂದಲೂ ಹೇಳಿಸದೆ, ಅನಹಂಕೃತಿಯಿಂದ ಜೀವನ ಕಳೆಯುವ ಸ್ವಭಾವದವರು. ಅದರಿಂದ ಹರಿಪ್ರೀತಿ ಹೆಚ್ಚು, ಹನುಮ, ಭೀಮರೇ ಹಾಗೆ ಮಾಡಿದ್ದಾರೆ. ಇವರು ಯಾರು ತಿಳಿದುಬಿಡಬೇಕೆಂದು ಯಾರಿಗೂ ಉತ್ಸಾಹ ಹುಟ್ಟಿಸುತ್ತಿರಲಿಲ್ಲ. ಗುರುರಾಜರೂ ಕೂಡ "ಮಾನುಷಂಚ" |

ಎಂಬ ಧರ್ಮವನ್ನು ಅನುಷ್ಠಾನ ಮಾಡುತ್ತಾ ತಮ್ಮ ಜೀವನ ಕಾಲದಲ್ಲಿ ಸ್ವಸ್ವರೂಪವನ್ನು ಆವಿಷ್ಕಾರ ಹೊಂದಿಸಲಿಲ್ಲ. ತಮ್ಮ ವರ ಪಡೆದಿದ್ದ ಲಕ್ಷ್ಮೀಪತಿ ಎಂಬ ಶಿಷ್ಯನಿಗೂ ಕೂಡ ತಮ್ಮ ವೃಂದಾವನ ಪ್ರವೇಶಾ ನಂತರವೇ ಸ್ವಪ್ನದಲ್ಲಿ ಅವನ ಮತ್ತು ತಮ್ಮ ಸ್ವರೂಪವನ್ನು ತಿಳಿಸಿ ವರವನ್ನು ಸಫಲ ಮಾಡಿದ್ದಾರೆ; ಗುರುರಾಜ ಸ್ವರೂಪ ಜ್ಞಾನಿಗಳು ಕನಕಾದಿಗಳು ಆಗ ಇದ್ದರೂ ಕೆಲವರು ಮೊದಲೇ ತೀರಿಹೋದರು; ಕೆಲವರು ಸ್ವರೂಪದ ವಿಚಾರ ಗೋಪ್ಯವಾಗಿರಬೇಕು, ಪ್ರಕಾಶ ಮಾಡಿದರೆ ಗುರುರಾಜರಿಗೆ ಕೋಪಬರಬಹುದೆಂದು, ಹೇಳಿಲ್ಲವೆಂದು ತಿಳಿಯಬಹುದು. ಇತರ ಪಂಡಿತರು ಸ್ವರೂಪ ವಿಷಯದಲ್ಲಿ ಈಗಿನಂತೆ ಉದಾಸೀನರಾಗಿದ್ದು ಪಾಠ ಪ್ರವಚನರತರಾಗಿದ್ದುಬಿಟ್ಟರು. ಅನಂತರ ಭಾವಿ ದಾಸ ಭಕ್ತರು ಮಾತ್ರ ಅಂಥ ಕಾರ್ಯರಹಿತರಾಗಿದ್ದರಾದ್ದರಿಂದ ಲೋಕೋಪಕಾರಕ್ಕೋಸ್ಕರ ತೀರ್ಥ ಕ್ಷೇತ್ರಾದಿ ಮಹಿಮೆಗಳನ್ನೂ, ದಿವಂಗತರಾವ ದೇವಾಂಶರ ಸ್ವರೂಪ ಮಹಿಮೆಗಳನ್ನೂ, ಹಾಡಿ ಕೊಂಡಾಡಿ ಜನರಿಗೆ ಅನುಗ್ರಹಿಸಿದರು. ಅವರು ಗುರುರಾಜರ ಸ್ವರೂಪವನ್ನು ಹೇಳಿಯೇ ಇದ್ದಾರೆ. ಹಾಗೆಯೇ ಶಿಷ್ಯರಾಗಿದ್ದುದರಿಂದಲೂ, ಪ್ರಾಯಶಃ ಗುರುರಾಜರ ಜೀವನ ಕಾಲದ ಆಜ್ಞೆಯಿಂದಲೂ, ಉದ್ರಿಕ್ತ ಭಕ್ತಿಯಿಂದಲೂ ಶ್ರೀ ವೇದವೇದ್ಯರು ಸ್ವಗುರು ಸ್ವರೂಪವನ್ನು "ಭಾವಿಹನುಮಚ್ಚಕ್ರವರ್ತಿನ್..." ಇತ್ಯಾದಿ ಬಿರುದಾವಳಿಯನ್ನು ಉದ್ಘೋಷಣೆ ಮಾಡಿಸಿ ಪೂಜಾ ಸಂಪ್ರದಾಯ ವಿಶೇಷವನ್ನು ಮಠದಲ್ಲಿ ಸ್ಥಾಪಿಸಿ ಪ್ರಕಟಿಸಿದರು. ಇದರಂತೆ ಶ್ರೀಜಯತೀರ್ಥರ ಶಿಷ್ಯರಾದ ಶ್ರೀವ್ಯಾಸತೀರ್ಥರು ಗುರುಗಳು ಸ್ವಲೋಕಕ್ಕೆ ತೆರಳಿಬಿಟ್ಟಾಗ ಆ ಗುರುಗಳ ಸ್ವರೂಪವನ್ನು "ಶ್ರೀಮಾನಿಂದ್ರಃ ಸುಧೀಮಾನ್" ಇತ್ಯಾದಿ ರೀತಿಯಾಗಿ ಸಣ್ಣ ಕಾವ್ಯಮಾಡಿ ಬೋಧಿಸಿದರು. ಇತರರು ಹಾಗೆ ಯಾರೂ ಮಾಡಿಲ್ಲ. ಹೆಚ್ಚಾಗಿ ದಾಸಭಕ್ತರ ಉಪಕಾರಗಳಿಂದಲೇ ನಾವೆಲ್ಲರೂ ಜಯತೀರ್ಥರು ಇಂದ್ರರೆಂದೂ, ವ್ಯಾಸರಾಜರೂ, ರಾಘವೇಂದ್ರಸ್ವಾಮಿಗಳೂ ಪ್ರಹ್ಲಾದಾಂಶ, ವಾದಿರಾಜತೀರ್ಥರು ಋಜುಗಣಸ್ಥರು, ರಘೂತ್ತಮ ತೀರ್ಥರು ನಿರ್ಋತಿ ದೇವಾಂಶ, ಶ್ರೀಶ್ರೀಪಾದರಾಜರು ಧ್ರುವಾಂಶ ಇತ್ಯಾದಿ ರೀತಿಯಾಗಿ ಪುರಾಣ ವಾಕ್ಯವಿದ್ದುದಕ್ಕಿಂತ ಹೆಚ್ಚಾಗಿ ಅತಿಶಯ ಸುದೃಢ ನಿಶ್ಚಯ ಹೊಂದಿದ್ದೇವೆ. ವೃಂದಾವನದ ಪ್ರವೇಶಾನಂತರ ಕಾಲದ್ದೆ ಅವರ ಉಕ್ತಿ, ಇಂಥವರೂ ಕೂಡ ಪದ್ಮನಾಭತೀರ್ಥರು, ವಿಷ್ಣು ರ್ಥರು, ಅಕ್ಷೋಭ್ಯತೀರ್ಥರು, ಅಷ್ಠ ಮಠದ ಎಂಟು ಜನ ಸ್ವಾಮಿಗಳು ಮುಂತಾದವರ ಸ್ವರೂಪ ಪ್ರಕಾಶ ಪಡಿಸಿಲ್ಲ. ಎಷ್ಟು ಪ್ರಕಾಶಪಡಿಸಿದ್ದಾರೋ ಅಷ್ಟರಲ್ಲಿ ದೃಢ ನಿಶ್ಚಯವಿದೆ. ಇಂಥ ನಿಜ ಪುರಂದರ ದಾಸಾದಿಗಳ ಉಕ್ತಿ ಗುರುರಾಜರ ಋಜುತ್ವ ಸಾಧಕವೇ. ದೇವರ ದಯದಿಂದ ಇದು ಸಂದೇಹ ಜನಕವಲ್ಲ. ಕೆಲವು ಜ್ಞಾನಿಗಳು ಒಂದು ರೀತಿ, ಇನ್ನು ಕೆಲವರು ಇನ್ನೊಂದು ರೀತಿ, ಹೀಗೆ ಬರೆದಿಲ್ಲ. ವಾ.ಗು.ಚ. ಗ್ರಂಥ, ಜಂಖಂಡಿ ಆಚಾರ್ಯರೇ ಮುಂತಾದವರ ಉಕ್ತಿ ಇವೆಲ್ಲಾ ಪ್ರಕಾಶಕ್ಕೆ ಬಂದವು. ಪುರಾಣವಾಕ್ಯಗಳೂ ಪ್ರಕಾಶವಾದವು. ಆದ್ದರಿಂದ ತುಂಬ ಹಿಂದಿನ ವ್ಯಾಸ ತೀರ್ಥಾದಿಗಳಿಂದ ಅನುಕ್ತಿ, ಅನುದಾಹೃತತ್ವ ಎಂಬ ಹೇತುಗಳು ಕೇವಲ ಅಪ್ರಯೋಜಕಗಳು.

ಉ) ಇನ್ನು ಭಗವತ್ಪಾದರಿಂದ ಅನುಕ್ತಾರ್ಥವನ್ನು ಬೋಧಿಸುವುದು ಪ್ರಾಮಾಣ್ಯ ವಿರೋಧಿ ಎಂಬ ಹೇಳಿಕೆಯೂ ಸರಿಯಲ್ಲ. ಮಧ್ವ ವಿಜಯೋಕ್ತ ಮಹಿಮೆ, ಅನೇಕ ವ್ಯಾಖ್ಯೇಯ ಗ್ರಂಥೋಕ್ತ ತೀರ್ಥಾದಿಗಳ ಮಹಿಮ ಇವೆಲ್ಲವೂ

| |
|---|
| ಅಪ್ರಮಾಣವಾಗಬೇಕಾದೀತು. ಇದರ ಮೇಲೆ ಸಂಕ್ಷೇಪತಃ, ಸಾಮಾನ್ಯತಃ, ಅಸ್ಪಷ್ಟತಃ, ಅವಿರುದ್ಧ ಆಗಮ ಪ್ರಾಮಾಣ್ಯ ಸಮರ್ಥನ ರೂಪತಃ ಇತ್ಯಾದಿ ಯಾವುದೋ ಒಂದು ರೀತಿಯಲ್ಲಿ ಆಚಾರ್ಯರು ಮೋಕ್ಷೋಪಯೋಗಿ ಸರ್ವವನ್ನೂ ಹೇಳಿದ್ದಾರೆ. ಸರ್ವಪ್ರಕಾರದಿಂದಲೂ ಅವರು ಹೇಳದಿರುವುದನ್ನು ಇನ್ನು ಯಾವ ಇತರ ಜ್ಞಾನಿಯೂ ಹೇಳಿಯೇ ಇಲ್ಲ. ಹಾಗೆ ಇದ್ದರೂ ಹೇಗೆ ಟೀಕಾಚಾರ್ಯರು ಆಚಾರ್ಯರುಕ್ತ ವ್ಯಾಖ್ಯಾನಕರ್ತರೋ, ಹೇಗೆ ಚಂದ್ರಿಕಾಚಾರ್ಯರು "ಅನುಕ್ತ" ಮೀಮಾಂಸಾ ಸೂತ್ರ ವ್ಯಾಖ್ಯಾನಾದಿ ಕರ್ತರೋ, ಹೇಗೆ ವಿಜಯದಾಸಾದಿಗಳು "ಅನುಕ್ತ" ತೀರ್ಥಮಹಿಮಾ, ಉಡುಪಿ, ಬದರಿ, ತಿರುಪತಿ, ಮಂತ್ರಾಲಯಾದಿ ವೃಂದಾವನ ಮಹಿಮೆಗಳನ್ನು ಕೀರ್ತನೆಗಳಿಂದ ಕೊಂಡಾಡಿ ಜನರನ್ನು ಉದ್ಧರಿಸಿದರೋ; ಮತ್ತು ಹೇಗೆ ವೇದ ಪುರಾಣಾದಿಗಳು ಆಚಾರ್ಯರಿಂದ "ಅನುಕ್ತ"ವಾದ ಇನ್ನೂ ಅನಂತ ಅರ್ಥಗಳಿಂದ ತುಂಬಿವೆಯೋ, ಹಾಗೆ ಸ್ವಾಪ್ನ ವೃಂದಾವನಾಖ್ಯಾನಾದಿ ಗ್ರಂಥ ಸಮುದಾಯಗಳೂ ಆಚಾರ್ಯರಿಂದ ಸ್ಪಷ್ಟ ರೀತಿಯಿಂದ "ಅನುಕ್ತ" ವಾದ ವಿಷ್ಣು ಭಕ್ತರ ಮಹಿಮೆಗಳನ್ನು ವರ್ಣನೆ ಮಾಡಿ ಜನರನ್ನು ಆನಂದ ಸಮುದ್ರದಲ್ಲಿ ಮುಳುಗಿಸುತ್ತವೆ. ಶ್ರೀಮದಾಚಾರ್ಯೋಕ್ತವಾದಕ್ಕೆ ವಿರುದ್ಧೋಕ್ತಿಯೇ ಅಪ್ರಮಾಣವು, ನಿಂದ್ಯವು, ಹೇಯವು, ಅವಿರುದ್ಧವಾದ ಸ್ಪಷ್ಟ, ವಿಸ್ತೃತ, ವಿಶೇಷ ವರ್ಣನೆಗಳು ಅಪ್ರಮಾಣಗಳಲ್ಲ. |
| ಕಿಂಚ ಪೂರ್ವಪಕ್ಷಿಗಳ ನಿಯಮವು ಅವರಿಗೇ ಆತ್ಮಘಾತರೂಪವಾಗಿದೆ. ಭಗವತ್ಪಾದರಿಂದ "ಅನುಕ್ತ"ವಾದ ವಾದಿರಾಜಾನೃಜುತ್ವವನ್ನು ಅವರ ಗ್ರಂಥವು ಬೋಧಿಸುವುದರಿಂದ ಅದು ಅಪ್ರಮಾಣವೂ ಅನುಪಾದೇಯವೂ ಆಗಿದೆ ಎಂದು ನಿಶ್ಚಯಿಸಬಹುದಷ್ಟೆ. |
| ಉ) 'ಅನುವ್ಯಾಖ್ಯಾನ ವಿರುದ್ಧತ್ವ'ವೆಂಬ ದೋಷವೂ ಪೂರ್ವ ಪಕ್ಷದ ಗ್ರಂಥಕ್ಕೆ ಅಂಟಿಕೊಂಡಿರುವ ದೋಷ, ಋಜುತ್ವ ಬೋಧಕ ಆಗಮಗಳಲ್ಲಿ ಅದಿಲ್ಲ. ಪರೋಕ್ತ ಹೇತುವಿಗೆ ಅಸಿದ್ಧಿ ಬಂತು. ಕಿಂಚ III 3-29 ಅನುವ್ಯಾಖ್ಯಾನೋಕ್ತ ಜ್ಞಾನಿಲಕ್ಷಣ, ನಿರ್ಣಯೋಕ್ತ ಋಜು ಲಕ್ಷಣ ಮತ್ತು ತಾರತಮ್ಯಾನುಸಂಧಾನದ ಆವಶ್ಯಕತೆ. II 1-2 ಅನುವ್ಯಾಖ್ಯಾನೋಕ್ತ ಪ್ರಾಮಾಣ್ಯಸ್ವತಸ್ತ್ವಲಕ್ಷಣ; ಅಲ್ಲೇ ಹೇಳಲ್ಪಟ್ಟ ಶುಭಾಗಮದ ಆವಶ್ಯಕತೆ "ಸದ್ಭಿರಾಗಮ ಏವೈಕಃ ಪ್ರಯೋಜ್ಯೋsಭೀಷ್ಟ ಸಿದ್ಧಯೇ" ಇತ್ಯಾದಿ ವಚನಗಳು; III 4-41 "ಪ್ರತ್ಯಕ್ಷಮುಪಪತ್ತಿಶ್ಚ ಬಹವಶ್ಚಾಗಮಾ ಯದಿ\| ವಿರುದ್ಧ್ಯಂತೇ ನ ಚಾರ್ಥೋಽಸ್ತಿ; III 4-4, "ಅಪರೀಕ್ಷಿತ ದೃಷ್ಟಿಸ್ತು ಕಸ್ಮಿನ್ ಅರ್ಥೇ ನ ವಿದ್ಯತೇ" ಎಂಬ ವಾಕ್ಯ; "ನಾವಾಕ್ಯಾಯುಕ್ತಿರಿಷ್ಯತೇ" ಎಂಬ ಭಾಷ್ಯ ವಾಕ್ಯ ಇತ್ಯಾದಿ ಬಹು ಪ್ರಮಾಣಗಳಿಗೆ ವಿರುದ್ಧವಾಗಿ ಆ ವಾಕ್ಯಗಳನ್ನು ಅಲಕ್ಷಿಸಿ ಪೂರ್ವಪಕ್ಷಗ್ರಂಥ ಪ್ರವೃತ್ತವಾಗಿದೆ. "ಲಿಂಗಾಲ್ಲಾತವ್ಯಃ" ಎಂಬ ಅನುವ್ಯಾಖ್ಯಾನದ ಉಕ್ತಿಯಾಗಲಿ, ಅವರ ವ್ಯಾಖ್ಯಾನಗಳಾಗಲಿ ವಾದಿರಾಜತೀರ್ಥರು ಅನೃಜುಗಳು ಎಂದು ಬೋಧಿಸುವುದಿಲ್ಲ. ಹೇಗೋ ಒಂದು ರೀತಿಯಿಂದ ಒಂದು ಅರ್ಥಮಾಡಿ ಅದರ ಆರ್ಥಿಕಾರ್ಥವು ವಾದಿರಾಜ ಲಾತವ್ಯತ್ವಕ್ಕೆ ವಿರೋಧಿಯು ಎಂದರೆ ಅದು ಸರಿಯಲ್ಲ. "ಯಶ್ಚಾರ್ಥಾದರ್ಥೋ ನ ಹಿ ಸ ಚೋದನಾರ್ಥಃ" ಎಂದು ಪ್ರಮಾಣವಿದೆ. ಆರ್ಥಿಕಾರ್ಥವು ವಿಶೇಷ ಪ್ರಮಾಣದ ಆಧಾರವಿಲ್ಲದೆ ಇದ್ದರೆ ಗ್ರಾಹ್ಯವಲ್ಲ ಎಂದು ಟೀಕೆಯೂ ಹೇಳುತ್ತೆ. ಶಾಸ್ತ್ರದ ಯಾವ ಸ್ಪಷ್ಟ ಅಥವಾ ವಿಶೇಷ ವಾಕ್ಯವೂ ಋಜುತ್ವ ಶಾಸ್ತ್ರಕ್ಕೆ ವಿರೋಧಿಯಾಗಿಲ್ಲ. ಹೀಗೆ ಋಜುತ್ವಾಗಮಗಳಿಗೆ ಅಪ್ರಾಮಾಣ್ಯ ಪ್ರಯೋಜಕತ್ವ ತೋರಿಸಲು |

| |
|---|
| ಮಾಡಿದ ಪ್ರಕ್ಷಿಪ್ತ ಸಾಧನೆ ಮತ್ತು ಅದರ ಸಾಧನೆಗಾಗಿ ರಚಿಸಿದ ನಾಲ್ಕು ನಿರಾಧಾರ ಯುಕ್ತಿಗಳು ಇವೆಲ್ಲಾ ಅನುಪಯುಕ್ತಗಳೂ, ದುಷ್ಟವೂ ಆಗಿವೆ. |
| ಕಿಂಚ 197-198 ಪುಟಗಳಲ್ಲಿ ತೋರಿಸಿದ ರೀತಿಯಲ್ಲಿ ಗುರುರಾಜರ ವಿಷಯದಲ್ಲಿ ಅನಂತ ಅನಾದಿ ಶ್ರುತಿಗಳೇ ಅವರ ಮಹಿಮೆಯನ್ನು ವರ್ಣಿಸುತ್ತೆಂದು ಹೇಳಬಹುದು. ವೇದಗಳನ್ನು ವಾಯುಪರವಾಗಿ ವ್ಯಾಖ್ಯಾನಿಸುವುದರಲ್ಲಿ ಕರ್ಮನಿರ್ಣಯ ವಚನಗಳು ಸಾಧಕಗಳಾಗಿವೆ: "ರೂಢಿಯೊಗೌ ವಿನಾಕಶ್ಚಿನ್ನೈವಾರ್ಥೋ ವೇದಗೋ ಭವೇತ್ ‖ ತತ್ರಾಪಿ ಯೌಗಿಕೊ ಮುಖ್ಯಃ ಸರ್ವತ್ರಾಸ್ತಿ ಸ ವೈದಿಕೇ‖ ಅನವಸ್ಥಾ ನಿವೃತ್ಯರ್ಥಂ ಯೌಗಿಕೇ ರೂಢಿಕಲ್ಪನಾ‖ ಜ್ಞಾತೇ ವಿಶೇಷ ವಿಜ್ಞಾನಂ ವ್ಯವಹಾರೋಪಿ ರೂಢಿತಃ" ‖ ಎಂದು ಬ್ರಹ್ಮತರ್ಕವಿದೆ. (ವೇದದಲ್ಲಿ ಮುಖ್ಯವಾಗಿ ಯೌಗಿಕಾರ್ಥ ಮಾಡುವಾಗ ನಿರ್ಣಯಕ್ಕೆ ಸಹಾಯವಾಗುವಂತೆ ರೂಢಿಪ್ರಾಪ್ತಾರ್ಥವನ್ನು ಗೌರವಿಸಬೇಕು ಎಂದು ತಾತ್ಪರ್ಯ) "ನಚ ಕಾರಣಂ ಕಿಂಚಿದ್ವಾಚನಿಕಾನಾಂ ಬಹೂನಾಮಪ್ಯರ್ಥಾನಾಂ ತ್ಯಾಗೇ‖ ಪ್ರತೀಯಮಾನೇತು ವಿರೋಧೇ ಅನ್ಯರ್ಥಃ ಸ್ವೀಕಾರ್ಯೊ ವಾಚನಿಕ ಏವ ‖ ಸೋಪಿ ವಾಚನಿಕ ಏವೇತ್ಯಪಿ ತತ ಏವ ಸಿದ್ಧ್ಯತಿ ‖ ........ ಮುಖ್ಯಾರ್ಥಾನಾಂ ಚ ಸರ್ವೇಷಾಂ ತಾರತಮ್ಯಂ ಚ ವಿದ್ಯತೇ ‖ ತತ್ತನ್ಮುಖ್ಯಾ ವಿರೋಧೇನ ತದನ್ಯಾರ್ಥಸ್ಯ ಸಂಗ್ರಹಃ" ‖ ಎಂದೂ ಹೇಳಿದ್ದಾರೆ. (ಒಂದು ಸೂಕ್ತಕ್ಕೆ ವಚನ ಶಕ್ತಿಯಿಂದಲೇ ಮುಖ್ಯಾರ್ಥವಾಗಿ ಎರಡೂ ಮೂರೂ ಅರ್ಥಗಳು ಪ್ರತೀಯಮಾನವಾದರೆ, ಆ ಎರಡು ಮೂರನ್ನೂ ಅದರ ಅರ್ಥವಾಗಿಯೇ ಸ್ವೀಕರಿಸಬೇಕು; ಎಂದು ತಾತ್ಪರ್ಯ. ಪ್ರಕೃತ ಇಂದ್ರ ಸೂಕ್ತಕ್ಕೆ ಅಥವಾ ಬಳಿತ್ಥಾ ಸೂಕ್ತಕ್ಕೆ ವಾಯುಪರವಾಗಿಯೂ[ಋಕ್ಸಂಹಿತೆಯು ಅದರ ಕ್ರಮವನ್ನು ತೋರಿಸಿದೆ] ಲಾತವ್ಯ ದೇವತಾ ಪರವಾಗಿಯೂ ಅರ್ಥಗಳು ಪ್ರತೀತವಾದರೆ ಆ ಅಧಿಕಾರಿಯು ಎರಡನ್ನೂ ಸ್ವೀಕರಿಸಬೇಕು ಎಂದು ಭಾವ). |
| ಬೃ. ಭಾಷ್ಯ III 3 "ಪವಮಾನಾ ಇತಿ ಪ್ರೋಕ್ತಾಃ ಮುಖ್ಯ ವಾಯುತ್ವ ಯೋಗಿನಃ\| ಅನಾದಿಕಾಲ ಸಂಬಂಧಾ ಯೋಗ್ಯತಾ ಸಾ ಪ್ರಕೀರ್ತಿತಾ‖........ದ್ವಾತ್ರಿಂಶಲ್ಲಕ್ಷಣೈಃ ಸಮ್ಯಗ್ಯುಕ್ತಾ ವಾಯುತ್ವ ಯೋಗ್ಯಕಾಃ\| ........ತಸ್ಮಾದ್ವಾಯುತ್ವ ಯೋಗ್ಯೈರ್ಹಿ ಯೇಷಾಂ ಲೋಕಾಃ ಪ್ರಕೀರ್ತಿತಾಃ‖ ತೇಷಾಮ ಲೋಕಂ ಶಂಕಾ ಚ ನೈವ ಕಾರ್ಯಾಕದಾಚನ\| ಯಸ್ಮಾನ್ನಾರಾಯಣಸ್ಯಾತು ಪ್ರಿಯಾಃ ಪ್ರಾಣತ್ವಯೋಗಿನಃ ಇತ್ಯಾದಿ ಮಹಾಸಂಹಿತಾಯಾಂ." (ಪವಮಾನ ಎಂಬ ಹೆಸರು ವಾಯುದೇವರಿಗೆ ಇರುವಂತೆ ಭಾವಿ ವಾಯುಪದ ಯೋಗ್ಯರಿಗೂ ಇದೆ. ಅವರೂ 32 ಲಕ್ಷಣವುಳ್ಳ ಉತ್ತಮ ದೇಹಯುಕ್ತರು, ಅವರುಗಳು ಯಾರ ವಿಷಯದಲ್ಲಿ ಒಲಿಯುತ್ತಾರೋ ಅವರಿಗೆ ಕೆಟ್ಟ ಲೋಕವಾಗುವ ಶಂಕೆಯೇ ಇಲ್ಲ. ಏಕೆಂದರೆ ಆ ವಾಯುಪದ ಯೋಗ್ಯರು ನಾರಾಯಣನಿಗೆ ಅತಿ ಪ್ರಿಯರು. ಎಂದು 'ಮಹಾಸಂಹಿತೆ'ಯಲ್ಲಿದೆ. ಇದರಿಂದ ಪವಮಾನ ಸೂಕ್ತವು ಅವರುಗಳ ಮಹಿಮೆಯನ್ನು ಹೊಗಳುತ್ತೆ ಎಂದು ಸಿದ್ಧವಾಗುತ್ತೆ. ಲಾತವ್ಯರೂ ಪವಮಾನರೇ. ಛಾಂ.ಭಾ. 4-22: "ದೇವಾವ ಮಂತಾಹಿ ತಮೊಯಾಂತ್ಯಸಂಶಯತೋ ಯತಃ\| ಅತ ಇಂದ್ರಂ ಪ್ರಜಾಪಾಖ್ಯಂ ವಿಷ್ಣುಂ ಮೃತ್ಯುಂಚ ಸರ್ವದಾ\| ಶರಣಂ ಗತೋಹಮಿತಿ ಧ್ಯಾಯೇತ್ಸರ್ವತ್ರ |

ಸರ್ವದಾ| ....ಯಸ್ಮಾದ್ವಾಯುಪದೇ ಯೋಗ್ಯಾ ಬಹವಶ್ಚೇಂದ್ರ ನಾಮಕಾಃ | ಅತ ಇಂದ್ರೇ ದದಾನೀತಿ ಸ್ಮೃತಿಃ ಪ್ರಾಣಸ್ಯ ಯುಜ್ಯತೇ ‖ ಇತಿ ಸಾಮ ಸಂಹಿತಾಯಾಂ‖" 4-5 "ಗುಹ್ಯಾದೇಶಾ ಬ್ರಹ್ಮ ಪದೇಯೋಗ್ಯಾಃ ಬ್ರಹ್ಮಣಾ ಸಹ | ಸರ್ವ ಗುಹ್ಯೋಪದೇಷ್ಟಾರಃ ಸರ್ವೇಷಾಂ ಗುರುವೋ ಹಿತೇ ‖" 5-10. "ಋಜವೋ ಬ್ರಹ್ಮ ಮುಖ್ಯಾಹಿ ಸುಪರ್ಣಃ ಶೇಷ ಏವ ಚ | ಸರಸ್ವತೀ ಸುಪರ್ಣೀ ಚ ವಾರುಣೀ ಸಾಧ್ಯನಾಮಕಾಃ" ಎಂದೂ ಹೇಳಲ್ಪಟ್ಟಿದೆ. (ದೇವತೆಗಳನ್ನು ಅವಮಾನ ಮಾಡುವವರು - ಎಂದರೆ ಅವರಲ್ಲಿ ಕಮ್ಮಿ ಗುಣ ತಿಳಿಯುವವರೂ ದ್ರೋಹಮಾಡುವವರೂ - ತಮಸ್ಸಿಗೆ ಬೀಳುತ್ತಾರೆ. ಆದ್ದರಿಂದ ದುರ್ಗತಿ ಪರಿಹಾರಕ್ಕಾಗಿ ಇಂದ್ರ, ವಿಷ್ಣು, ಮೃತ್ಯುನಾಮಕರನ್ನು ಶರಣು ಹೊಂದಬೇಕು. "ಇಂದ್ರ" ಎಂದರೆ ಎಲ್ಲಾ ವಾಯುಪದಯೋಗ್ಯರು ಎಂದರ್ಥ. ತಥಾಚ ಪ್ರಾಣದೇವರೂ ಅವರ ಪದವಿಗೆ ಬರುವವರೂ ಶರಣು ಹೊಂದಲ್ಪಡಬೇಕು) ಎಂದಿದೆ. ಇದರಿಂದಲೂ 'ಇಂದ್ರ' ಸೂಕ್ತಾದಿಗಳು ಪ್ರಾಣದೇವರ ಮತ್ತು ಲಾತವ್ಯಾದಿಗಳ ಮಹಿಮಾ ಬೋಧಕವೇ ಆಗಿವೆ ಎಂದಿದೆ. ಅವರು 'ಸಾಧ್ಯ' ನಾಮಕರು ಎಂದೂ ಇದೆ. ಮ.ತಾ.ನಿ. 32-80ರಲ್ಲಿ 'ಋಜುವೋ ನಾಮ ಯೇ ದೇವಾಃ ದೇವಾನಾಮಪಿ ದೇವತಾಃ' ಎಂಬಲ್ಲೂ ವೇದ ಪ್ರತಿಪಾದ್ಯತ್ವರೂಪ ದೇವತ್ವವು ಎಲ್ಲಾ ಋಜುಗಳಿಗೂ ಅಂಗೀಕೃತವಾಗಿದೆ. ಹೀಗೆ ಸಾಧ್ಯ, ಇಂದ್ರ, ಪವಮಾನ, ಹೋತಾ, ಉದ್ಗತಾ ಮುಂತಾದ ಅನಂತ ವೈದಿಕನಾಮ ಇರುವುದಕ್ಕೆ ಸೂಚಕವಾದದ್ದು "ದೇವಾನಾಮಪಿ ದೇವತಾಃ" ಎಂಬ ವಿಶೇಷಣ. ಇವರು ಅಗ್ನಿ ಸೂಕ್ತ, ಇಂದ್ರಸೂಕ್ತ ಮುಂತಾದ (ಸ್ತೋತ್ತಮ ವರ್ಜ) ಅನಂತ ಸೂಕ್ತ ಪ್ರತಿಪಾದ್ಯರೆಂದು ಹೇಳಬಹುದು. ಋಕ್ಸಂಹಿತೆಯ ವ್ಯಾಖ್ಯಾನ ಶ್ಲೋಕಗಳು ಬಳಿತ್ತಾ ಸೂಕ್ತಾರ್ಥ ತಿಳಿಯುವುದರಲ್ಲಿ ಉಪಬೃಂಹಣ ರೂಪವಾಗಿವೆ.

ಪುಟ 9ರಲ್ಲಿ ತೋರಿಸಿದಂತೆ "ಮಂತ್ರಾದಿವದ್ವಾ ಅವಿರೋಧಃ" III 3-58 ಎಂಬ ಸೂತ್ರಭಾಷ್ಯ ಟೀಕೆಯಲ್ಲಿ ವಾಯುದೇವರ ವಿದ್ಯೆಯೂ, ಪೂಜೆಯೂ, ಅವರ ಸಮರಿಗೂ ಪ್ರತಿಪಾದಕವಾಗುತ್ತೆ, ಯುಕ್ತವಾಗುತ್ತೆ ಎಂಬಲ್ಲಿ ಒಂದು ನ್ಯಾಯವನ್ನು ಉಪಪಾದಿಸಿದ್ದಾರೆ. ಏನೆಂದರೆ ತೇಷುತದ್ಗುಣಿತ್ವಾದಿತಿ ಭಾವಃ ಎಂದು ಹೇಳಿ ಋಗ್ಭಾಷ್ಯದ ಎರಡು ಮೂರು ಶ್ಲೋಕಗಳನ್ನು ಪ್ರಮಾಣವನ್ನಾಗಿ ಟೀಕಾಚಾರ್ಯರೇ ಉದಾಹರಿಸಿದ್ದಾರೆ. ಉಕ್ತಂ ಚೈತತ್‖ ದೇವತಾ ಸರ್ವ ವಿದ್ಯಾನಾಂ........ಪೃಥಗಿತಿ" ಎಂದು ಪುಟ11 ರಲ್ಲಿ ನೋಡಬಹುದು. ಮ.ತಾ.ನಿ. 18-28 ರಲ್ಲಿ ವಾಯುದೇವರೊಬ್ಬರೇ ವೈಷ್ಣವ ಧರ್ಮದಲ್ಲಿ ನಿಶ್ಚಲವಾಗಿ ಸ್ಥಿತರಾದವರು. ಪರಶುಕ್ಲತ್ರಯದಲ್ಲಿ ಸೇರಿದವರು ಎಂದಿದೆ. ಅಲ್ಲಿ ವಾಯುದೇವರೆಂದರೆ ಸರ್ವ ಋಜುಗಳನ್ನು ಸಂಗ್ರಹಿಸಿಕೊಳ್ಳಬೇಕು. "ಅವರಿಗೂ ಆ ಗುಣಗಳುಂಟು" ಎಂಬ ನ್ಯಾಯದಿಂದ, ಋಗ್ಭಾಷ್ಯ ವಚನಗಳಿಂದ, ಸರ್ವ ಋಜುಗಳೂ ಪೂರ್ವ ಪ್ರಸಿದ್ಧ ವರ್ಜ ಸರ್ವವೇದ ಪ್ರತಿಪಾದ್ಯತ್ವ ಮಹಿಮೆ ಉಳ್ಳವರೇ.

ಯದ್ಯಪಿ ಲಾತವ್ಯರು 'ವಿಶ್ವ'ನಾಮಕ ಹರಿ ಸೇವಕರು; ಕೃಷ್ಣ ಸೇವಕರು; ವ್ಯಾಸಸೇವಕರು; ಎಂದು ಹೇಳುವ ಸ್ಪಷ್ಟ ಪದಗಳು ಸೂಕ್ತದಲ್ಲಿಲ್ಲ. ಹಾಗೆ ಇಂದ್ರಸೂಕ್ತವು ಪಾರ್ವತೀ ಮಹಿಮೆಯನ್ನೂ ರುದ್ರದೇವರ, ಮಹಿಮೆಯನ್ನು ಸ್ಪಷ್ಟ ಪದಗಳಿಂದ ತೋರಿಸುವುದಿಲ್ಲ. ಅದೇ ಸೂಕ್ತವು ಹೇಗೆ ಷಣ್ಮಹಿಷಿಯರನ್ನು, ಗರುಡ, ಶೇಷ, ಲಕ್ಷ್ಮ್ಯಾದಿ ಬಹು ದೇವತೆಗಳನ್ನು ನಿರವಕಾಶ ಪ್ರತಿಪತ್ತಿ ಬರುವಂತೆ ಬೋಧಿಸುತ್ತವೆಯೋ ಎಂಬ ಪ್ರಕಾರವು ಸುಲಭವಾಗಿ

ಗೊತ್ತಾಗುವುದಿಲ್ಲ. ಆದರೆ III 3-8 ರಲ್ಲಿ [ಯದ್ಯಪಿ ಟೀಕಾಚಾರ್ಯರು ಆ ಸೂತ್ರ ಭಾಷ್ಯದಲ್ಲಿ ಅವರವರ ಮಂತ್ರವು ಉತ್ತಮರನ್ನು ಪ್ರತಿಪಾದಿಸಬಹುದು ಎಂದು ವ್ಯಾಖ್ಯಾನ ಮಾಡಿದ್ದಾರೆ. ಆ ವಿಷಯಕ್ಕೆ ಹೇಳಿದ ನ್ಯಾಯವು ಸಮಾನರ ವಿಷಯಕ್ಕೂ ಅನ್ವಯಿಸುತ್ತೆ. ಭಾವಿ ಮಹಾತ್ಮರಿಗೂ ಅನ್ವಯಿಸುತ್ತೆ ಎಂದು ಇಲ್ಲಿ ನಾನು ಅತಿದೇಶ ಮಾಡಿರುತ್ತೇನೆ.] ಟೀಕಾಚಾರ್ಯರೇ ಅದನ್ನೆಲ್ಲಾ ಒಪ್ಪಿಯೇ ತೀರಬೇಕೆಂದು ಅಪ್ಪಣೆ ಕೊಡಿಸಿ ಬಿಟ್ಟಿದ್ದಾರೆ. ಆ ವೇದವ್ಯಾಖ್ಯಾನ ರೀತಿಯು ಸಾಮಾನ್ಯರಿಗೆ ತಿಳಿಯಲು ಕಷ್ಟವಾದರೂ, ತತ್ತನ್ನಿಯಾಮಕರಾದ ದೇವತೆಗಳಿಗೆ ತತ್ತನ್ನಿಯಮ್ಯರ ಮಹಿಮೆ ಉಂಟೆಂದು ಸಂಕ್ಷೇಪತಃ ತಿಳಿಯಲು ನಾವು ಸಮರ್ಥರೇ. ಪ್ರಕೃತದಲ್ಲಿ ಬೃಹನ್ನಾರದೀಯ ವಚನ, ಋಕ್ಸಂಹಿತಾ ವಚನಗಳು ಬಳಿತ್ಥಾಸೂಕ್ತವನ್ನು ಲಾತವ್ಯಪರತಯಾ ವ್ಯಾಖ್ಯಾನ ಮಾಡಿವೆ. ಸ್ಪಷ್ಟ ಜ್ಞಾನ ಹುಟ್ಟುತ್ತೆ. ನಂಬಿಕೆ ಬರುತ್ತೆ.

ವಾಯುದೇವರೇ ಹನುಮಂತ, ಭೀಮ, ಪೂರ್ಣಪ್ರಜ್ಞರಾಗಿ ಆವತರಿಸಿದರೆಂದು ಬಳಿತ್ಥಾ ಸೂಕ್ತ ಉದಾಹರಿಸಿ ಸತ್ತತ್ವ, ಮುಂತಾದ ಉಪಬೃಂಹಣ ಸಹಾಯದಿಂದ, "ತತ್ರಾಪಿ ಯೌಗಿಕೊ ಮುಖ್ಯಃ" ಎಂಬ ವೇದವ್ಯಾಖ್ಯಾನದ ನ್ಯಾಯದಿಂದಲೂ ಶಾಸ್ತ್ರದಲ್ಲಿ ಸಮರ್ಥಿಸಲ್ಪಟ್ಟಿದೆ. ಹಾಗೆ ಬೃಹನ್ನಾರದೀಯಾದ್ಯುಪಬೃಂಹಣ ಸಹಾಯದಿಂದ ಸೂಕ್ತವು ಲಾತವ್ಯದೇವರ ಪರವೂ ಆಗಿದೆ ಎಂದು ತೋರಿಸಬಹುದು. ಏವಂಚ ಲಾತವ್ಯಾದಿ ಋಜುಗಳಿಗೆ ಪೂರ್ವ ಪ್ರಸಿದ್ಧ ವರ್ಜವೇದಪ್ರತಿಪಾದ್ಯತ್ವ, ಬಳಿತ್ಥಾದಿ ಸೂಕ್ತ ಪ್ರತಿಪಾದ್ಯತ್ವ, ಸಮಪೂಜೆ ಮುಂತಾದ್ದೆಲ್ಲವನ್ನೂ ಒಪ್ಪಿದರೆ ಪ್ರಮಾಣ ವಿರೋಧವೇನೂ ಇಲ್ಲ. ಅದರಲ್ಲೂ ಲಾತವ್ಯರ ವಿಷಯದಲ್ಲಿ ಸ್ಪಷ್ಟ ಸಹಾಯಕ ಪ್ರಮಾಣವೇ ಇವೆ. ಆದ್ದರಿಂದ ಈಗ ನಾವು ಕೇಳುತ್ತೇವೆ. 'ಶ್ರೀವಾದಿರಾಜ ತೀರ್ಥರು ಋಜುವಲ್ಲ ಎಂದು ಆಗ್ರಹ ಮಾಡುವ ಪೂರ್ವಪಕ್ಷಿಗಳಿಗೆ ಪ್ರಮಾಣವಲ್ಲದೆ? ಋಜುತ್ವ ಒಪ್ಪಿದರೆ ಬಾಧಕ ತೋರಿಸುವ ವಾಕ್ಯವು ತಾನೇ ಎಲ್ಲಿದೆ? ಋಜುಗಣಕ್ಕೆ ಸೇರಿದ ಜ್ಞಾನಿಗಳನ್ನು ಕಂಡು, ಆಗಮ ವಿಚಾರ ಮಾಡದೆ, ಜಘನ್ಯ ಪ್ರಮಾಣವಾದ ಪ್ರತ್ಯಕ್ಷ ಮಾತ್ರದಿಂದ ಅನೃಜು ಎಂದು ನಿಶ್ಚಯಿಸಿದರೆ, ಟೀಕಾಚಾರ್ಯರು ಹೇಳಿದಂತೆ "ಮಿಥ್ಯೋಪಾಸನಸ್ಯ ಅನರ್ಥ ಹೇತುತ್ವಾತ್" (3-3-60 ತ.ಪ್ರ.) ಪ್ರತ್ಯವಾಯ ಬರುತ್ತೆ. ಇದಕ್ಕೆ ಪರಿಹಾರವೇನು? "ಯಸ್ಯ ದೇವೇ ಪರಾಭಕ್ತಿಃ ಯಥಾ ದೇವೀ ತಥಾಗುರೌ" | ತಾರತಮ್ಯೇನ ತದ್ಭಕ್ತೇಷ್ವಪಿ ಭಕ್ತಿರ್ವಿನಿಶ್ಚಯಾತ್ ‖ ಕರ್ತವ್ಯಾ" (3-4-6 ಅನು); "ಸರ್ವೋತ್ತಮತ್ವಸ್ಯಾ ಜ್ಞಾನಾದ್ವಿಷ್ಣೋರಂಧಂತಮೋ ಭವೇತ್ ‖ ತದ್ದೇಷಾತ್ಕಿಮುವಕ್ತವ್ಯಂ ಬ್ರಹ್ಮಾದಿದ್ವೇಷತೋಪಿವಾ ‖ ತಾರತಮ್ಯಾ ಪರಿಜ್ಞಾನಾದನುತ್ಥಾನಂ ತಮೋ ಭವೇತ್ ಇತ್ಯಾದಿ ಪ್ರಮಾಣಗಳಿಗೆ ಅನೃಜುತ್ವವಾದಿಗಳು ಏನು ಸಮಾಧಾನ ಕೊಡಲು ಸಾಧ್ಯವಿದೆ?

## 23. ಆಗಮ ಪರೀಕ್ಷೆ:

**ಪುಟ 12-15**

ಉಕ್ತಿ :

| | |
|---|---|
| “ಶ್ರೀ ವ್ಯಾಸರಾಜ, ರಘೂತ್ತಮ, ರಾಘವೇಂದ್ರಾದಿಗಳ ಜ್ಞಾನಿತ್ವ ವಿಷಯದಲ್ಲಿ ಅವರ ಗ್ರಂಥಗಳೇ ಪ್ರಮಾಣಗಳು. ಇಂಥ ದೊಡ್ಡ ಗ್ರಂಥಕಾರರು ಗುಣವಿರೋಧಿಗಳಾಗಲಾರರು. ಅಂಥವರು ಈ ಬ್ರಹ್ಮಾಂಡ ಬ್ರಹ್ಮವೈವರ್ತಾದಿ ವಾಕ್ಯಗಳನ್ನು ಏತಕ್ಕೆ ಉದಾಹರಿಸಲಿಲ್ಲ? ಪ್ರಮಾಣಸಿದ್ಧ ಭಾವಿಸಮೀರರ ವಿಷಯದಲ್ಲಿ ಅವರಿಗೆ ಔದಾಸೀನ್ಯವು ಯುಕ್ತವಲ್ಲ. ಅವರು ಉದಾಸೀನರಲ್ಲವೆಂದು ಒಪ್ಪಿದಮೇಲೆ ಅವರು ಉದಾಹರಿಸದಿರುವ ಈ ವಾಕ್ಯಗಳು ಕೃತಕವೆಂದೇ ಹೇಳಬೇಕೆಂದು ಸಂಶಯ ಬರುತ್ತೆ.” |
| ಪ್ರತ್ಯುಕ್ತಿ: ಪೂರ್ವಪಕ್ಷ ಗ್ರಂಥದ 5-1 "ಅಶ್ವತ್ಥಾಮಾದಿಗಳಲ್ಲೂ ಅಜ್ಞಾನಾದಿಗಳು ಕಂಡಿವೆ” ಇತ್ಯಾದಿ ವಾಕ್ಯಗಳಿಗೆ ವಿರುದ್ಧವಾದುದು ಮೇಲ್ಕಂಡ ಮಾತು, ಈ ದೋಷಕ್ಕೆ 'ವ್ಯಾಹತಿ' ಎಂದು ಹೆಸರು. |
| ಕಿಂಚ ಇದು ಅದೃಷ್ಟ ಕಲ್ಪನಾಯುಕ್ತ ಶುಷ್ಕ ತರ್ಕ ವಿಶೇಷವೇ. ಹೇಗೆಂದರೆ ಮೇಲ್ಕಂಡ ಜ್ಞಾನಿಗಳು ಸ್ವಸ್ವರೂಪವನ್ನಾಗಲೀ, ಅನ್ಯಜ್ಞಾನ ಜನರ ಸ್ವರೂಪವನ್ನಾಗಲೀ ಹೇಳಿಲ್ಲ. ಅವರು ಅಪರೋಕ್ಷ ಜ್ಞಾನಿಗಳಿಂದೂ ಅವರ ಗ್ರಂಥಕರಣ ಲಿಂಗದಿಂದ ನಿರ್ಣಯಿಸಬಹುದೆಂಬ ಪೂರ್ವಪಕ್ಷೋಕ್ತಿ ಸರಿಯಿಲ್ಲ. ವ್ಯಾಸರಾಜಾದಿಗಳಿಗೆ ಅಪರೋಕ್ಷತ್ವ ಕಲ್ಪನೆ, ಅವರಿಗೆ ಸರ್ವದಾ ಅನ್ಯಸ್ವರೂಪಾವಿಷ್ಕಾರದಲ್ಲಿ, ತತ್ರಾಪಿ ಮುಂದೆ ವೃಂದಾವನ ಪ್ರವೇಶಿಸುವ ಗುರುರಾಜರ ಸ್ವರೂಪ ಪ್ರಕಾಶನದಲ್ಲಿ, ಅದು ವೇದ ವಿರುದ್ಧವಾಗಿದ್ದರೂ ಉತ್ಸಾಹದಿಂದ ಪ್ರವೃತ್ತಿ ಕಲ್ಪನೆ; ಅವರಿಗೂ ಪ್ರಕಟನೆ ಮಾಡಬೇಕೆಂಬ ಉತ್ಸಾಹ ಜನಕ ಶಾಸ್ತ್ರ ವಿಧಿಸದ್ಭಾವ ಕಲ್ಪನೆ, ಅವರಿಗೆ ಆ ಕಾರ್ಯ ಮಾಡಲು ಪ್ರಸಂಗ ಪ್ರಾಪ್ತಿ ಕಲ್ಪನೆ; ನಂತರ ವಿವಕ್ಷಿತ ಪುರಾಣ ವಾಕ್ಯಗಳೆಲ್ಲಾ ಸಿಕ್ಕಿ ಅವರ ಪ್ರಯತ್ನದ ಸಾಫಲ್ಯ ಕಲ್ಪನೆ - ಹೀಗೆ ಕಲ್ಪನಾಗೌರವ ತಪ್ಪಿದ್ದಲ್ಲ. ಇದರ ಮೇಲೆ ಭವಿಷ್ಯಕಾಲದಲ್ಲಿ (61 ವರ್ಷದ ಮೇಲೆ) ವೃಂದಾವನಸ್ಥರಾಗುವ ವ್ಯಕ್ತಿ ಸ್ವರೂಪವನ್ನು ತಿಳಿದು ಪ್ರಕಟಿಸುವ ಕಾರ್ಯವನ್ನು ಇದುವರೆಗೆ ಯಾರೂ ಮಾಡಿಲ್ಲ. ವ್ಯಾಸರಾಜರು 1539ರಲ್ಲೂ, ಭಾವಬೋಧಕಾರರು 1595ರಲ್ಲೂ ವೈಕುಂಠಕ್ಕೆ ಪ್ರಯಾಣ ಮಾಡಿದರು. ಶ್ರೀ ರಾಘವೇಂದ್ರತೀರ್ಥರು ಐತಿಹ್ಯಾದಿಗಳಿಂದಲೂ, ಜ್ಞಾನಿ ದಾಸರುಗಳಿಂದಲೂ ಜ್ಞಾತ ವಿಷಯದಲ್ಲಿ ತಾವು ಹೆಚ್ಚಾಗಿ ಹೇಳಬೇಕಾಗಿಲ್ಲವೆಂದು ಸುಮ್ಮಗಿದ್ದರೆಂದು ತಿಳಿಯಬಹುದು. ಇದರ ಮೇಲೆ ಅವರೂ ಸಹ ವೈಷ್ಣವ ಜ್ಞಾನಿಗಳ ಅಂಶಾವತರಣ ವಿಷಯದ ಯಾವ ಪುಸ್ತಕವನ್ನೂ ಬರೆದಿಲ್ಲ. ಅಂಥ ಪ್ರಸಕ್ತಿ ಬರಲೇ ಇಲ್ಲ. ಕೊನೆಗೆ ಈ ಯಾವ ಜ್ಞಾನಿಗಳೂ ಟೀಕಾಚಾರ್ಯರ, ಪದ್ಮನಾಭತೀರ್ಥರ, ವಿಷ್ಣುತೀರ್ಥಾದಿಗಳ, ಅಷ್ಟಮಠೀಯ ಮೂಲ ಪುರುಷರ, ಆಥವಾ ಕನಕ, ಪುರಂದರ ದಾಸಾದಿಗಳ ಸ್ವರೂಪವರ್ಣನೆ ಕೆಲಸಕ್ಕೆ ಕೈಹಾಕಿಲ್ಲ. ಹಿಂದಿನ ಯುಗದಲ್ಲೂ ಕೂಡ ಹನುಮಂತನ ಸ್ವರೂಪವನ್ನೂ, ಭೀಮನ ಸ್ವರೂಪವನ್ನಾಗಲೀ ಆ ಕಾಲದ ಯಾವ ಜ್ಞಾನಿ ಪ್ರಕಾಶ ಮಾಡಿದ್ದಾನೆ? ಯೋಚಿಸಿ ನೋಡಿ. ಆದ್ದರಿಂದ 1645 ರಲ್ಲಿ ಉದಾಹೃತ ಪುರಾಣ ವಾಕ್ಯಗಳನ್ನು ಜ್ಞಾನಿಜನರು ಮೊದಲೇ ಉದಾಹರಿಸದೇ ಇದ್ದುದರಿಂದ ಆ ವಾಕ್ಯಗಳು ಕೃತಕವೆಂದು ಶಂಕಿಸುವುದಾದರೆ ಅತಿಪ್ರಸಂಗ ಬರುತ್ತೆ, ಅದೃಷ್ಟ ಕಲ್ಪನೆ ಬರುತ್ತೆ. ಪೂರ್ವಪಕ್ಷಗಳ ವಿಚಾರ ಸರಣಿ ಎಲ್ಲಾ ಪರತಸ್ತ್ವರೀತಿ, ಹೇತು ಅಪ್ರಯೋಜಕವೇ, ಅನುಕೂಲ ತರ್ಕಹೀನ. “ವಿಮತ ವಾಕ್ಯಗಳು ಕಲ್ಪಿತಗಳು, ಪ್ರಾಚೀನ ಪಂಡಿತರಿಂದ ಉದಾಹೃತವಾಗಿಲ್ಲವಾದ್ದರಿಂದ” ಎಂಬ |

ಅನುಮಾನಕ್ಕೆ ಪಂಡಿತ ಪ್ರಭೃತ್ಯನರ್ಹತ್ವ ಅಥವಾ ಅಪ್ರಾಮಾಣಿಕತ್ವ = ಪ್ರಮಾಣವಿರುದ್ಧತ್ವ, ಎಂಬ ಉಪಾಧಿ ಇದೆ. ಹನುಮಂತನ ವಿಷಯದಲ್ಲಿ, ಭೀಮನ ವಿಷಯದಲ್ಲಿ ವ್ಯಭಿಚಾರವಿದೆ. ಪಂಡಿತ ಜ್ಞಾನಿಗಳು ಈ ವಿಷಯದಲ್ಲಿ ಪ್ರಸಕ್ತರಾಗಲ್ಲಿಲ್ಲವಾಗಿ ಅಥವಾ ಸುಗೋಪ್ಯವೆಂದು ತಿಳಿದು ಆ ವಿಚಾರ ದೂರಮಾಡಿದವರಾಗಿ, ಅನ್ಯತ್ರ ಪಾಠ ಪ್ರವಚನದಲ್ಲಿ ಆಸಕ್ತರಾಗಿ, ಬ್ರಹ್ಮಾಂಡಾದಿ ಪುರಾಣವಾಕ್ಯ ಸಂಗ್ರಹ ಮಾಡಲಿಲ್ಲ; ಅಪ್ರಸಿದ್ಧ ಸಂಹಿತಾಗಳನ್ನೂ ಹುಡುಕಲಿಲ್ಲ. ಆ ವಿಷಯದಲ್ಲಿ ಏನೂ ಬರೆಯಲೇ ಇಲ್ಲ ಎಂದು ನಿಶ್ಚಯಿಸುವುದು ಸ್ವರಸವಾಗಿದೆ. ಜ್ಞಾನಿಗಳಾದ ದಾಸರು ಆ ಕಾರ್ಯವನ್ನು ನಿರ್ವಹಿಸಿರುವುದು ಎಲ್ಲರಿಗೂ ಗೊತ್ತಾಗಿರುವಂತೆ ಅವರಿಗೂ ತಿಳಿದಿತ್ತು ಎಂದು ಸಹ ನಾವು ಊಹಿಸಬಹುದು. **(1645)** ರಲ್ಲಿ ವಾ.ಗು.ಚ. ಬರೆದವರು ಋಜುತ್ವ ಪ್ರಕಾಶಕ್ಕೆ ಹೊರಟಿದ್ದರಿಂದ ದೇಶದೇಶದ ಸರ್ವ ಗ್ರಂಥಗಳನ್ನೂ ಗುರೂಪದೇಶಾನುಸಾರ ನೋಡಿ ಪ್ರಮಾಣ ಸಂಗ್ರಹಮಾಡಿ ಪ್ರಚಾರ ಮಾಡ ಬೇಕಾಯಿತು. ನಂತರ **1870**ರ ಮೇಲೆ ಕೋಲಾಹಲ ಕಲಹಗಳು ಹುಟ್ಟಿ ಕೊಂಡಿದ್ದರಿಂದ ಅವರೂ ಆಗಿನ ಕಾಲದಲ್ಲಿ ಉಪಲಬ್ಧ ಸರ್ವ ಪುಸ್ತಕಗಳನ್ನೂ ನೋಡಿ ಕೃತಕವನ್ನು ಬಿಟ್ಟು ಪುರಾಣಗಳ ಸಾತ್ವಿಕ ಭಾಗಗಳನ್ನು ಊರ್ಜಿತ ಪಡಿಸಿಕೊಳ್ಳಬೇಕಾಯಿತು. ಆದರೆ ಶ್ರೀ ವ್ಯಾಸತೀರ್ಥಾದಿಗಳ ಕಾಲದಲ್ಲಿ ಇಂಥ ಪ್ರಸಕ್ತಿ ಬರಲಿಲ್ಲ. ಅವರುಗಳ ಅಪ್ರವೃತ್ತಿ, ಅನುದಾಹರಣೆ, ಅನುಕ್ತಾದಿಗಳು ಅನೃಜುತ್ವಕ್ಕೆ ಸಾಧಕವಲ್ಲ.

ಪೂರ್ವಪಕ್ಷ ಗ್ರಂಥದವರು ವ್ಯಾಸತೀರ್ಥರ ಮೌನಕ್ಕೆ ಇನ್ನೂ ಅಂಥ ಪಂಡಿತೋತ್ತಮರ ಅನುಕ್ತಿಗೆ, ಅನೃಜುತ್ವಕ್ಕೆ ಸಾಧಕವಾಗುವಂತೆ ಆಧಾರ ರಹಿತ ಕುಯುಕ್ತಿ ಕಲ್ಪನೆ ಮಾಡುವುದಕ್ಕಿಂತ, ತದ್ವಿರುದ್ಧವಾಗಿ ಆ ಭಗವಂತರಾದ ವಾದಿರಾಜಯತಿಗಳನ್ನು ನೋಡಿದ ಕೂಡಲೇ ಆ ಜ್ಞಾನಿಜನರಿಗೆ ಅವರ ಸ್ವರೂಪ ಮಹತ್ವವು ಹೇಗೋ ಒಂದು ರೀತಿಯಲ್ಲಿ ಹೊಳೆದು ತಮ್ಮ ಪ್ರತಿಭೆಯಿಂದಲೂ ಸಾಮಾನ್ಯ ಲಕ್ಷಣ ಜ್ಞಾನದಿಂದಲೂ, ಅವರ ಋಜುತ್ವ ಸಂಭಾವನೆಯನ್ನೇ ಹೊಂದಿ, ಇಂಥ ವಿಷಯದಲ್ಲಿ ಗೋಪ್ಯ ರಕ್ಷಣವು ವಿಧ್ಯುಕ್ತ ಧರ್ಮವಾದ್ದರಿಂದ, ಮಧ್ವವಿಜಯಕಾರರು ವಿಷ್ಣು ತೀರ್ಥರ ಸ್ವರೂಪ ರಹಸ್ಯ ಬಚ್ಚಿಟ್ಟಂತೆ, ಅವರ ಗಾಂಭೀರ್ಯ, ಮೌನ, ವಚನ ಪೂಜೆಗಳಿಂದ ಅವರನ್ನು ಸತ್ಕರಿಸಿ, ಹೆಚ್ಚಿಗೆ ವ್ಯವಹಾರ ಮಾಡದೆ ಸುಮ್ಮಗಿದ್ದರು ಎಂದು ಕಲ್ಪಿಸುವುದು ಉತ್ತಮ. ಅದಕ್ಕೆ ವ್ಯಾಸತೀರ್ಥರು ತಮ್ಮ ಸಂತೋಷವನ್ನು ಇಬ್ಬರ ವಿಷಯದಲ್ಲಿ ಮಾತ್ರ ವ್ಯಕ್ತಿಮಾಡಿ ಕೀರ್ತನೆ ರಚಿಸಿದ್ದಾರೆ. "ದಾಸರೆಂದರೆ ಪುರಂದರ ದಾಸರಯ್ಯಾ" ಇತ್ಯಾದಿ ರೀತಿಯಾಗಿ ಪುರಂದರ ದಾಸರನ್ನು ಕೊಂಡಾಡಿದ್ದಾರೆ. ಇನ್ನೊಂದು ಕೀರ್ತನೆಯಲ್ಲಿ "ವಾದಿಗಳೆಲ್ಲರನೇ ಗೆದ್ದ ವಾದಿಧೀರನೇ.... ನಿನಗೆಣೆಗಾಣೇ" ಎಂದು ಅರ್ಥಗರ್ಭಿತ ಪದಗಳಿಂದ ವಾದಿರಾಜ ಮುನಿಗಳನ್ನು ಕೊಂಡಾಡಿದ್ದಾರೆ. ಇವರಿಬ್ಬರ ವಿಷಯದಲ್ಲೂ ಅವರಿಗೆ ವಿಲಕ್ಷಣ ವಿಶ್ವಾಸವಿತ್ತೆಂದು ಐತಿಹ್ಯವಿದೆ. ಗುರುರಾಜರು ಬಂದು ಕುಳಿತ ಮೇಲೆಯೇ ಪ್ರವಚನವನ್ನು ಆರಂಭಿಸುತ್ತಿದ್ದರು. ತಮ್ಮ ಅಶಕ್ತತಯಲ್ಲಿ ಅವರನ್ನೇ ತಮ್ಮ ಮಠೀಯ ದೇವಪೂಜೆಗೆ ನಿಯೋಗಿಸಿದರು. ಭೋಜನಾ ನಂತರ ವಾದಿರಾಜರು ಹೊರಟು ಹೋದರೆಂದು ಕೇಳಿದಾಗ ಕೋಪಹೊಂದಿ ಶಪಿಸಲಿಲ್ಲ. ಸಂತೋಷದಿಂದಲೇ "ವಾದಿರಾಜರೂ ಹೋದರು ವ್ಯಾಸರೂ ಹೋದರು" ಎಂದು ಹೇಳಿ ಸುಖವಾಗಿಯೇ ಇದ್ದರು. ಆದ್ದರಿಂದ ಗೋಪ್ಯ

ವನ್ನು ತಿಳಿದಿದ್ದು “ರಹಸ್ಯ ಬಯಲಾದರೆ ದೇವತೆಗಳು ಹೋಗಿಯೇ ಬಿಡುತ್ತಾರೆ” ಎಂಬ ಶಾಸ್ತ್ರೀಯ ನಂಬಿಕೆಯಿಂದ ಗಾಂಭೀರ್ಯತಾಳಿ ಸುಮ್ಮನಿದ್ದು ಬಿಟ್ಟರು, ಎಂದು ಕಲ್ಪಿಸುವುದೇ ಶ್ರೇಷ್ಠವು. ಅವ್ಯಕ್ತವ್ಯತ್ವದಿಂದಲೇ ಅನುಕ್ತಿ, ಅನುದಾಹರಣೆ, ಋಜುತ್ವಾಸತ್ವದಿಂದಲ್ಲ ಎಂದು ಇಟ್ಟುಕೊಳ್ಳೋಣ. ವಾದಿರಾಜ ಮುನಿಗಳನ್ನು ಸಾಕ್ಷಾತ್ ನೋಡಿ ವರ್ಣಿಸಿರುವ ಶ್ರೀರಘುನಾಥಾಚಾರ್ಯರ ವೃ.ರ.ಸಂ. 1 36-37; III 2, 13, 16, 26, 27, 33, 43 ಶ್ಲೋಕಗಳನ್ನು ನೋಡಿದರೆ ಗುರುರಾಜರು ಅಸದೃಶರೆಂದು ಮನಸ್ಸಿಗೆ ಬರುತ್ತೆ, III 37 ರಲ್ಲಿ “ಅಶಕ್ಯಂ ಯಸ್ಯ ಮಹಾತ್ಮ್ಯಂ ಸ್ವನ್ಯಜಾಗರಣೆ ಸ್ಥಿತಂ | ಸುಗೋಪ್ಯಂ ತನ್ನೋಚ್ಯತೇ ತಂತ್ರಪ್ರತ್ಯಯಾ ಪೂರ್ತಿತೋಜನೆ” ಎಂದು ಹೇಳಿದ್ದಾರೆ". (ಗುರುರಾಜರ ಮಹಿಮೆ ಇನ್ನೂ ತುಂಬ ಗೋಪ್ಯವಾದುದು ಇದೆ. ಹೇಳಲು ಸಾಧ್ಯವಿಲ್ಲ. ಏಕೆಂದರೆ ಜನರಿಗೆ ಶಾಸ್ತ್ರದಲ್ಲಿ ನಂಬಿಕೆ ಸಾಲದು ಎಂದರ್ಥ.) ಆದ್ದರಿಂದ ತಿಳಿದು ಸುಮ್ಮಗಿದ್ದರು ಎಂದೇ ನಂಬಿರೋಣ:

## 24: ಆಗದು ವಿಚಾರ :

**ಪುಟ 12-20 ಉಕ್ತಿ :** ಋಜುತ್ವ ವಾದಿಗಳಿಂದ ಉದಾಹೃತ ಆಗಮಗಳಲ್ಲಿ ಒಂದಾದ ಋಕ್ಸಂಹಿತಾ ವಾಕ್ಯದಲ್ಲಿ “ಲಾತವ್ಯರೇ ದ್ವಿಜರೂಪದಿಂದ ರುಕ್ಮಿಣೀ ಪತ್ರವನ್ನು ಶ್ರೀಕೃಷ್ಣನ ಸಮೀಪಕ್ಕೆ ಒಯ್ದರು, ಎಂದು ಹೇಳಲ್ಪಟ್ಟಿದೆ. ಆದರೆ ಆ ವಿಷಯ ಭಗವತ್ಪಾದರಿಂದ ಉಕ್ತವಾಗಿಲ್ಲ” ಇತ್ಯಾದಿ ಪ್ರತ್ಯುಕ್ತಿಃ ಸತ್ಯ. ಶ್ರೀಮದಾಚಾರ್ಯರು ಸ್ಪಷ್ಟವಾಗಿ ಅನೇಕ ವಿಷಯಗಳನ್ನು ಹೇಳಿಲ್ಲ. ಆದರೆ ಪುರಾಣ ಭಾಗಗಳು ಅವಿರುದ್ಧವಾಗಿದ್ದರೆ ಪ್ರಮಾಣವೇ ಎಂದು ಹೇಳಿದ್ದಾರೆ. ಹಾಗೆ ಅವರೂ ಅನೇಕ ಬ್ರಹ್ಮಾಂಡ ಪುರಾಣಗಳ ವಾಕ್ಯಗಳನ್ನು ಉದಾಹರಿಸಿದ್ದಾರೆ. ಈ ಗುಂಪಿಗೇ ಋಕ್ಸಂಹಿತೆ ಸೇರಿದೆ. ಋಗ್ಭಾಷ್ಯದಲ್ಲಿ ಋಕ್ಸಂಹಿತೆಯು ಪ್ರಮಾಣವೆಂದೂ ಹೇಳಿದ್ದಾರೆ. ಆದ್ದರಿಂದ ರುಕ್ಮಿಣೀ ಪತ್ರವನ್ನು ಶ್ರೀಕೃಷ್ಣನಿಗೆ ಒಯ್ದವರು ಲಾತವ್ಯರು ಎಂಬ ಋಕ್ಸಂಹಿತೆಯ ಮಾತನ್ನು ನಂಬಬಹುದು. ಎಲ್ಲಾ ದೇವತೆಗಳೂ ಆ ಅವತಾರ ಕಾಲದಲ್ಲಿ ಸಾಧನೆಗಾಗಿ ಹುಟ್ಟಿದ್ದಾರೆಂದೂ 'ಪ್ರಕಾಶ ಸಂಹಿತೆ' ಶ್ಲೋಕ 868 ಹೇಳುತ್ತೆ. ಜಗನ್ನಾಥದಾಸರು 'ವಾದಿರಾಜ' ಎಂಬ ಪದದಲ್ಲಿ ಲಾತವ್ಯರೇ ರುಕ್ಮಿಣೀ ಸಂದೇಶವನ್ನು ಕೃಷ್ಣನಿಗೆ ತಲುಪಿಸಿದರೆಂದು ಹೇಳಿದ್ದಾರೆ. ಆಚಾರ್ಯರ ಗ್ರಂಥಗಳಲ್ಲಿ ರಾಧಾ ದೇವಿಯರ ವಿಷಯ ಇಲ್ಲ. ಹಾಗೇ ಸತ್ಯನಾರಾಯಣ, ಪದ್ಮನಾಭಾದಿ ಭಗವದ್ರೂಪಗಳ ಪೂಜಾ ವಿಷಯ, ಋಜುದ್ವಿಶತಕ, ರುದ್ರಪದಯೋಗ್ಯ, ಇಂದ್ರ ಪದಯೋಗ್ಯಾದಿಗಳ ಅವತಾರ, ವಾಸಪ್ರಕಾರಾದಿಗಳು ಹೇಳಲ್ಪಟ್ಟಿಲ್ಲ: ಭವಿಷ್ಯೋತ್ತರ ಪುರಾಣೋಕ್ತ ವೇದವತಿಯು ಯಾರು, ವಿಷ್ಣುತೀರ್ಥ, ಪದ್ಮನಾಭ ತೀರ್ಥಾದಿಗಳ ಸ್ವರೂಪವೇನು ಇವೊಂದೂ 'ಸ್ಪಷ್ಟತಃ' ಹೇಳಲ್ಪಟ್ಟಿಲ್ಲ. ಆದರೂ ಅವು ಯಾವುವೂ ಅಪ್ರಾಮಾಣಿಕವಲ್ಲ. ಪ್ರಮಾಣ ವಿರುದ್ಧತ್ವವೇ ಅಪ್ರಾಮಾಣ್ಯದಲ್ಲಿ ಪ್ರಯೋಜಕವೆಂದು ಆಚಾರ್ಯರ ಸಿದ್ಧಾಂತವಿದೆ, ಎಂದು ಹಿಂದೆ ತೋರಿಸಲಾಗಿದೆ. ಪ್ರಕೃತ ಶ್ರೀಮದಾಚಾರ್ಯರು ಆ ದ್ವಿಜವರನು ಅನೃಜುವೆಂದು ಹೇಳಿಲ್ಲ. ಅದಕ್ಕೆ ಬದಲಾಗಿ 'ದ್ವಿಜೋತ್ತಮಂ' ಎಂದರೆ ಗರುಡೋತ್ತಮನು ಎಂದು ಅರ್ಥ ಸೂಚಿಸುವ ಪದ ಪ್ರಯೋಗ ಮಾಡಿದ್ದಾರೆ. ಋಕ್ಸಂಹಿತಾದಿ ಪುರಾಣಗಳಲ್ಲಿ ಅವರು ಲಾತವ್ಯರೆಂದೇ ವಿಸ್ತೃತ ಕಥೆ ಸ್ಪಷ್ಟವಾಗಿ ಹೇಳಲ್ಪಟ್ಟಿದೆ. ಸ್ಕಾ.ವೃಂ.ಆ. VII 31-33 ಶ್ಲೋಕಗಳಲ್ಲಿ ದ್ವಿಜವರ್ಯಕೃತ ರುಕ್ಮಿಣೀ ಸೇವಾಕಾರ್ಯಕ್ಕೆ ಪರಾಮರ್ಶವಿದೆ. ಅಪೂರ್ವ ವಿಷಯಾಂತರವೂ

| |
|---|
| ಹೇಳಲ್ಪಟ್ಟಿದೆ : "ವೈದ್ಯನಾದ ಈ ಸ್ವಾಮಿ ಧನ್ವಂತರಿಯು ಚೈದ್ಯಶಾಪವೆಂಬ ರೋಗವನ್ನು ನನಗೆ ತಪ್ಪಿಸಿ ಆಶ್ಚರ್ಯ ಕಾರ್ಯವನ್ನು ಮಾಡಿದನು. ನನ್ನ ಜನಿಮೃತಿಗಳನ್ನು ನಿವಾರಿಸಿದನು. ಶ್ರೀಕೃಷ್ಣ ಸೇವೆಯಿಂದ ಪರಮಾನುಗ್ರಹ ಸಂಪಾದನೆ ಎಂಬ ಯೋಗವನ್ನು ಆ ಸ್ವಾಮಿ ನನಗೆ ತಂದು ಕೊಟ್ಟನು" ಎಂದಿದೆ. ರುಕ್ಮಿಣೀ ವಿವಾಹದ ವೃತ್ತಾಂತವನ್ನು ಶ್ರೀಕೃಷ್ಣನಿಗೆ ನಿರೂಪಿಸಿ ಅವನನ್ನು ಕುಂಡಿನ ನಗರಕ್ಕೆ ಕರೆದು ತಂದು ತನ್ನ ವಿವಾಹ ವಿಘ್ನ ಮಾಡಿದವನು ಆ ಪುರೋಹಿತ ಬ್ರಾಹ್ಮಣ ಕುಮಾರನೆಂದು ಶಿಶುಪಾಲನು ತಿಳಿದು "ಅವನಿಗೆ ಮದುವೆಯೇ ಆಗದಿರಲಿ" ಎಂದು ಶಪಿಸಿದನು. ಬ್ರಾಹ್ಮಣ ಕುಮಾರನಿಂದ ಪೂಜಿತನಾದ ಧನ್ವಂತರಿಯು "ಆ ಅವಿವಾಹ ಶಾಪ ನಿನಗೆ ಮುಂದಿನ ಜನ್ಮದಲ್ಲಿ ನೀನು ಹುಟ್ಟಿದಾಗ ವಾದಿರಾಜ ನಾಮಕನಾಗಿ ಯತ್ಯಾಶ್ರಮದಲ್ಲಿ ಕಳೆದು ಹೋಗಲಿ, ಶಾಪವನ್ನು ಅನುಭವಿಸಿದ್ದಕ್ಕೆ ರುಕ್ಮಿಣೀವಲ್ಲಭ ಕೃಷ್ಣ ಸೇವೆ, ಭಕ್ತಿವೃದ್ಧಿ ಮುಂತಾದ ಸಾಧನೆಯಾಗಿ ಆನಂದವೃದ್ಧಿಗೆ ಕಾರಣವಾಗಲಿ" ಎಂದು ನಿರೂಪಿಸಿ ಬಿಟ್ಟನು. ಇಂದ್ರನು ಊರ್ವಶೀ ಶಾಪ ಅರ್ಜುನನಿಗೆ ಹಿಂಸೆಯಾಗದಂತೆ ತಿದ್ದಿ ಬಿಟ್ಟಂತೆ, ಧನ್ವಂತರೀ ಸ್ವಾಮಿಯು ದ್ವಿಜವರನಿಗೆ ಅನುಗ್ರಹಿಸಿದನು. ಹಾಗೇ ಆಯಿತು, ಎಂದೂ ಶಾಸ್ತ್ರಾವಿರುದ್ಧ ವೃತ್ತಾಂತವು ಹೇಳಲ್ಪಟ್ಟಿದೆ. ಇವಕ್ಕೆಲ್ಲಾ ಶ್ರೀಮದಾಚಾರ್ಯರ ಶಾಸ್ತ್ರ ವಿರೋಧ ಕಾಣದಿದ್ದರೂ ಅಪ್ರಾಮಾಣ್ಯ ಕಲ್ಪನೆ ಮಾಡುವುದು ಅನುಚಿತವೇ. ವಿರೋಧವಿಲ್ಲದಿದ್ದರೂ ಖಂಡನೆ ಮಾಡುವುದು ಪ್ರಾಮಾಣ್ಯ ಪರತತ್ವರೀತಿ. |
| ಕಿಂಚ ಋಗಾದಿ ಹತ್ತು ಮೂಲ ಶಾಸ್ತ್ರಗಳಲ್ಲಿ ಆಚಾರ್ಯರಿಂದ ಸ್ಪಷ್ಟವಾಗಿ ಅನುಕ್ತವಾದ ಅನೇಕ ವಾಕ್ಯಗಳಿವೆ, ಅನೇಕ ಕಥೆಗಳಿವೆ, ಅನೇಕ ಪ್ರಮೇಯಗಳಿವೆ. ಆಚಾರ್ಯರ ಶಾಸ್ತ್ರವು ಅವೆಲ್ಲದರ ಸಂಕ್ಷೇಪವು. ಸಂಕ್ಷೇಪವು ಪ್ರಮಾಣವು, ವಿಸ್ತೃತೋಕ್ತಿಯು ಅಪ್ರಮಾಣವು ಎಂದು ಎಲ್ಲಾದರೂ ಆಗುತ್ತೆಯೇ? ಅದರಲ್ಲೂ ಅದರ ಸಂಗ್ರಹವು ಪ್ರಮಾಣವು, ಅದೇ ವಿಸ್ತಾರ ಕಥೆಯು ಸುಳ್ಳು ಎಂದು ಹೇಗೆ ಹೇಳುವುದಕ್ಕಾಗುತ್ತೆ? ಮಹಾಭಾರತವು ಅಪ್ರಮಾಣವು, ಭಾರತ ತಾತ್ಪರ್ಯ ನಿರ್ಣಯವು ಪ್ರಮಾಣವು ಎಂದು ಹೇಳಿದರೆ ಹೇಗೆ ಸರಿಯಾಗುತ್ತೆ? ಅದರಲ್ಲೂ ಆಚಾರ್ಯರೇ ಮಹಾಭಾರತವು ಪ್ರಮಾಣವು, ಎಂದು ಒಪ್ಪಿರುವುದರಿಂದ ಅವರ ಮಾತಿಗೇ ವಿರೋಧ ಬರುತ್ತೆ. ಆದ್ದರಿಂದ ಈ ಹತ್ತು ಶಾಸ್ತ್ರದಲ್ಲಿರುವುದೂ ಇವಕ್ಕೆ ಅವಿರುದ್ಧವಾದ ಇತರ ಶಾಸ್ತ್ರಗಳ ಪ್ರತಿಪಾದ್ಯವೂ ಪ್ರಮೇಯವೇ. ಅನ್ಯಥಾ ಇಲ್ಲ. ಆದ್ದರಿಂದ ಬೃಹನ್ನಾರದೀಯ, ಋಕ್ಸಂಹಿತಾ ವಚನಗಳೂ ಮಾನ್ಯವೇ. ಋಗ್ಭಾಷ್ಯದಲ್ಲೂ ಸರ್ವವೇದಗಳಲ್ಲಿ ಶಕ್ರಾಂತ ದೇವತೆಗಳು "ಯಥಾಯೋಗಂ ಯಥಾನ್ಯಾಯಂ" ಪ್ರತಿಪಾದ್ಯರೆಂದು ಹೇಳಿ, "ಋಕ್ಸಂಹಿತಾಯಾಂ ಸ್ವಾಧ್ಯಾಯೇ ನಿರುಕ್ತೇ ವ್ಯಾಸನಿರ್ಮಿತೇ \| ಪ್ರವೃತ್ತೇ ಚೈತದಖಿಲ ಮುಕ್ತಂ ಹಿ ಪ್ರಭುಣಾ ಸ್ವಯಂ ‖ ...ದೇವತಾ ತಾರತಮ್ಯಂ ಚ ಸರ್ವೋತ್ಕೃಷ್ಟಂ ಚ ಕೇಶವಂ \| ಜ್ಞಾತ್ವೈವಮುಚ್ಯತೇ ಹ್ಯಸ್ಮಾನ್ನಾನ್ಯಥಾತು ಕಥಂಚನ" ಎಂದು ಆಚಾರ್ಯರೇ ಬರೆದಿದ್ದಾರೆ. ಆಚಾರ್ಯರೇ ಒಪ್ಪಿರುವ [ಋಕ್ಸಂಹಿತೆಯ ಪುಸ್ತಕದಲ್ಲಿ ಈ ವಾಕ್ಯ ತೋರಿಸಿ ಎಂದು ಕೇಳುವುದೂ ಸರಿಯಲ್ಲ, 1640 ರಲ್ಲಿ ಯಾವ ಪುಸ್ತಕದ ಯಾವ ಪುಟದಿಂದ ಈ ವಾಕ್ಯಗಳನ್ನು ಉದ್ಧಾರಮಾಡಿದ್ದಾರೆಂಬುದು ಈಗ ತಿಳಿಯಲು ಶಕ್ಯವಿಲ್ಲ. ಶ್ರೀಮದಾಚಾರ್ಯರೂ ಯಾವ ಯಾವ ಗ್ರಂಥಗಳ ಯಾವ ಭಾಗದ ದೆಸೆಯಿಂದ ವಾಕ್ಯ ಉದ್ಧಾರ ಮಾಡಿದ್ದಾರೆ? ಆ ಗ್ರಂಥ ಎಲ್ಲಿ, ಯಾರು ಬರೆದಿದ್ದು, ಈಗ ಎಲ್ಲಿಡಲ್ಪಟ್ಟಿದೆ? ಇತ್ಯಾದಿ ಪ್ರಶ್ನೆಗಳಿಗೆ ಉತ್ತರ |

ಸಾಧ್ಯವಿಲ್ಲ. ಮತ್ತು ಮಾರ್ತಿಕ ಗರ್ವನಿರ್ವಾಪಣದಲ್ಲಿ ಹೇಳಿದಂತೆ ಅನೇಕ ಪುಸ್ತಕ ತೋರಿಸಬೇಕು, ಒಂದೇ ಪುಸ್ತಕದಲ್ಲಿದ್ದರೆ ಪ್ರಕ್ಷಿಪ್ತ ಎನ್ನಬೇಕು ಎಂದು ಕಲ್ಪಿಸಿದರೂ ಅನ್ಯಾಯವೇ ಸರಿ. ಇವೆಲ್ಲಾ ಶಂಕಗಳು ಪ್ರಾಮಾಣ್ಯ ಪರತಸ್ತ್ವ ರೀತಿ ಎಂದು ದ್ವೈತ ಶಾಸ್ತ್ರದ ಸಿದ್ಧಾಂತ. ವೇದಾದಿ ಗ್ರಂಥಗಳೇ ಅದರ್ಶನ ಹೊಂದಿದರೆ, ಆಚಾರ್ಯರ ಶಾಸ್ತ್ರವೇ ಕಲ್ಪಿತ ಎಂದೂ ಶಂಕೆಯು ಬರಬೇಕಾದೀತು.] ಋಕ್ಸಂಹಿತೆಯನ್ನು ಅಪ್ರಮಾಣ ಎಂದು ಅಲ್ಲಗಳೆಯುವುದು ಸರಿಯಲ್ಲ.

ಕಿಂಚ ಆ ದ್ವಿಜವರನು ದ್ವಾರಕೆಗೆ ಬಂದಾಗ ಶ್ರೀಕೃಷ್ಣನಿಂದ ಹೇಗೆ ಆಲಿಂಗಿತನಾದನು ಇತ್ಯಾದಿಗಳನ್ನು ಭಾಗವತದಿಂದ ತಿಳಿದು ಯುಕ್ತಿ ವಿನ್ಯಾಸ ಮಾಡಿದರೆ ಅವರ ಋಜುತ್ವವು ಸಂಭಾವಿತವೇ ಆಗುತ್ತೆ. ಅಧ್ಯಾಯ 9 ಶ್ಲೋಕ 186 ವೆಂಕಟೇಶ ಮಾಹಾತ್ಮ್ಯೆಯಲ್ಲಿ ಹೀಗಿದೆ: "ಯಥಾತ್ವಯಾ ಕೃತಂ ಕರ್ಮ ತಥಾ ಪೂರ್ವಂ ಕಪೀಶ್ವರಃ || ಸೀತಾ ನಿಮಿತ್ತಂ ಯಃ ಕರ್ಮ ಕೃತವಾನ್ ಮಾರುತಾತ್ಮಜಃ |" (ಹೇ ಶುಕಮುನಿಯೇ ! ನೀನು ಈಗ ಎಂಥ ಕರ್ಮ ಮಾಡಿದ್ದೀಯೊ, ಅಂಥ ಕಾರ್ಯವನ್ನು ಸೀತಾ ನಿಮಿತ್ತವಾಗಿ ಹಿಂದೆ ಮಾರುತ ಪುತ್ರನು ಮಾಡಿದ್ದನು) ಹೀಗೆ ಹೇಳಿ ಹನುಮಂತನನ್ನು ಆಲಿಂಗಿಸಿಕೊಂಡಂತೆ ವಾಯ್ವಾವಿಷ್ಟ ಶುಕಾಚಾರ್ಯರನ್ನು ಆಲಿಂಗಿಸಿಕೊಂಡಿದ್ದಾನೆ. ಆದ್ದರಿಂದ ಇಂಥ ಭಗವದಾಲಿಂಗನವಾಗಬೇಕಾದರೆ ಆ ದ್ವಿಜಕುಮಾರರು ವಾಯುದೇವರೋ, ತತ್ಸಮಾನರೋ, ಅಥವಾ ತದಾವಿಷ್ಟ ರುದ್ರದೇವರೋ ಆಗಿರಬೇಕು. ಕಿಂಚ ಲಕ್ಷ್ಮೀನಾರಾಯಣರ ಮಧ್ಯದಲ್ಲಿ ಸಂದೇಶ ಹರಣಾದ್ಯುತ್ತಮ ವ್ಯಾಪಾರ ಮಾಡಬೇಕಾದರೆ ಆ ಕಾರ್ಯಕ್ಕೆ ಋಜುಗಳೇ ಯೋಗ್ಯರಾದವರು. ಕಿಂಚ ದ್ವಿಜೋತ್ತಮ ಶಬ್ದಕ್ಕೆ ಅನ್ಯಾರ್ಥ ತೋರಿದರೆ, ಬಾಧಕವಿಲ್ಲದಿದ್ದರೆ, ಅದನ್ನು ಸ್ವೀಕರಿಸಬೇಕೆಂಬಲ್ಲಿ || 1-13 ಬ್ರ.ಸೂ.ಭಾ. ವಚನವಿದೆ: "ಯತ್ರಾನ್ಯವಾಚಕತ್ವೇಪ್ಯವಿರೋಧಃ ತತ್ರಾನ್ಯದಪ್ಯಮುಖ್ಯತ ಯೋಚ್ಯತೇ" ಎಂದು ಸಾಧಕ ವಾಕ್ಯವಿದೆ. ಕರ್ಮ ನಿರ್ಣಯದಲ್ಲೂ "ನಚ ಕಾರಣ0 ಕಿಂಚಿದ್ವಾಚನಿಕಾನಾಂ ಬಹೂನಾಮಪ್ಯರ್ಥಾನಾಂ ತ್ಯಾಗೇ" ಎಂದಿದೆ. ಆದ್ದರಿಂದ "ದ್ವಿಜವರ" ಪದಕ್ಕೆ ಅನ್ಯಾರ್ಥವನ್ನೂ ಮಾಡಬಹುದು. ಋಕ್ಸಂಹಿತಾ, ದಾಸರಪದ ಮತ್ತು ಆಖ್ಯಾನದಲ್ಲಿ ಸ್ಪಷ್ಟೋಕ್ತಿಯಿರುವುದರಿಂದ ಅತಿಪ್ರಸಂಗವಿಲ್ಲ. ಯುಕ್ತಿಯುಕ್ತ ವಿಶೇಷ ವಚನ ಬಲದಿಂದ ನಿರ್ಣಯ ಮಾಡುವುದು ಯುಕ್ತವಾಗಿದೆ. ಆದ್ದರಿಂದ ಆಚಾರ್ಯರ ಅನುಕ್ತಿಯ ಆಧಾರದಿಂದ ಸೂಕ್ತ, ಪುರಾಣಾದಿ ವಾಕ್ಯಗಳಿಗೆ ಕೃತಕತ್ವ ಶಂಕಾ ಮಾಡುವುದು ಯುಕ್ತವಲ್ಲ.

## 25. ಆಗಮ ವಿಚಾರ :

**ಪುಟ 13-3 ಉಕ್ತಿ :**

ಸಮಸ್ತ ಶಾಸ್ತ್ರಾರ್ಥ ನಿರ್ಣಯಕಾರರಾದ ಆಚಾರ್ಯರು "ಅತ್ರೈವ ಸರ್ವ ನಿರ್ಣಯಾಃ; ಸಮಸ್ತ ಶಾಸ್ತ್ರಾರ್ಥ ವಿನಿರ್ಣಯೋಯಂ" ಎಂದು ಅನೇಕಸಲ ಭಾರತ ತಾತ್ಪರ್ಯ ನಿರ್ಣಯವನ್ನು ಹೊಗಳಿ ಅಂಥ ಗ್ರಂಥದಲ್ಲಿ ಇಂಥ ವಾದಿರಾಜ ಋಜುತ್ವವನ್ನು ಅದರಲ್ಲೂ ಸ್ಪಷ್ಟ ಪುರಾಣೋಕ್ತ ವಿಷಯವನ್ನು ಏಕೆ ಉದ್ಘಾಟನೆ ಮಾಡಲಿಲ್ಲ?" ಪ್ರತ್ಯುಕಿ: "ಸಮಸ್ತ ಶಾಸ್ತ್ರಾರ್ಥ ವಿನಿರ್ಣಯಃ" ಎಂದಿದ್ದಾರೆಯೇ ಹೊರತು "ಸಮಸ್ತ ಶಾಸ್ತ್ರಾರ್ಥ ಅನುವಾದಕಃ" ಎಂದು

ಹೇಳಿಲ್ಲ. ಋಗಾದಿ ವೇದಗಳೂ, ಪಂಚಮ ವೇದವೂ, ತದನುಸಾರಿಯೂ ಪ್ರಮಾಣವೆಂದು ಹೇಳಿ, ಸಂಗ್ರಹವಾಗಿ ಅದನ್ನು ಅನುವಾದಮಾಡಿ, ಎಲ್ಲಿ ಸಂಶಯ ಪ್ರಸಕ್ತವಾಯಿತೋ ಅಲ್ಲಿ ನಿರ್ಣಯ ಹೇಳಿ ಸಂಶಯ ಪರಿಹರಿಸುವುದು ಸಾಂಪ್ರದಾಯಿಕವೇ, ಕ್ವಚಿತ್ ಸೂಕ್ಷ್ಮ ವಿಷಯಗಳ ಅವಕ್ತವ್ಯತ್ವ ನಿಮಿತ್ತದಿಂದಲೂ ಕೆಲವು ವಿಷಯಗಳ ಅನುಕ್ತಿಯು ಯುಕ್ತವೇ. ದೃಷ್ಟಾಂತ ಸ್ವಾನುಯಾಯಿ ವಿಷ್ಣುತೀರ್ಥ, ಪದ್ಮನಾಭತೀರ್ಥಾದಿ ಭಕ್ತರ ಸ್ವರೂಪ, ಆದ್ದರಿಂದ ಮೂಲಶಾಸ್ತ್ರದ ಸರ್ವ ಪ್ರಮೇಯಗಳೂ ಸ್ಪಷ್ಟವಾಗಿ ನಿರ್ಣಯದಲ್ಲಿದೆ ಎಂದು ತಿಳಿಯಕೂಡದು. ಸಂಗ್ರಹರೂಪವಾಗಿ, ಸಾಮಾನ್ಯತಃ, ಅಸ್ಪಷ್ಟತಃ, ಇದೆ ಎಂದೇ ತಿಳಿಯಬೇಕು. "ಪ್ರತ್ಯಕ್ಷೇಣ ವಿರೋಧತಃ ನ ಬ್ರಹ್ಮತಾಂ ವದೇದ್ವೇದೋ ಜೀವಸ್ಯ ಹಿ ಕಥಂಚನ' ಇತ್ಯಾದಿ (ಅನು. I 1-1) ಪ್ರಮಾಣಾನುಸಾರ ಹೇಗೆ ಪ್ರತ್ಯಕ್ಷ ವಿರೋಧ ಬರುವುದಿಲ್ಲವೋ ಹಾಗೆ ಆಚಾರ್ಯರ ವಾಕ್ಯಗಳಿಗೆ ಅರ್ಥಮಾಡಬೇಕು. ನಿರ್ಣಯ ಗ್ರಂಥದಲ್ಲಿಯೇ ಸಾಕ್ಷಾತ್ತಾಗಿ ಎಲ್ಲವನ್ನೂ ಹೇಳಿದ್ದಾರೆ ಎಂದು ಅರ್ಥ ಮಾಡಬಾರದು. ಆದರೆ ನಿರ್ಣಯದಲ್ಲೇ ಋಗಾದಿ ಮೂಲಪ್ರಮಾಣೋಕ್ತವಾದದೆಲ್ಲಾ ಸಂಗ್ರಾಹ್ಯವೇ ಎಂದು (I 30, 31, 32, 33, 42, 47) ನಿರ್ಣಯಿಸಿರುವುದರಿಂದ ಆ ಮೂಲಶಾಸ್ತ್ರದ ಪ್ರಮೇಯಗಳನ್ನೆಲ್ಲಾ ಬೇರೆ ಪ್ರಕಾರದಿಂದ ಒಪ್ಪಿಕೊಂಡಂತಾಯಿತು. ಸಾಕ್ಷತಾಗಿ ಜಯತೀರ್ಥಾದಿಗಳ, ವಿಷ್ಣುತೀರ್ಥ, ಹೃಷೀಕೇಶತೀರ್ಥಾದಿಗಳ ಸ್ವರೂಪವನ್ನು ಹೇಳಿಲ್ಲ, ವಿಜಯದಾಸಾದಿಗಳ ರಾಘವೇಂದ್ರತೀರ್ಥಾದಿಗಳ ಮೂಲ ರೂಪವನ್ನು ಹೇಳಿಲ್ಲ. ರಾಮಾನುಜ, ನಿಂಬಾರ್ಕ, ವಲ್ಲಭ, ಭಾಸ್ಕರ, ಚೈತನ್ಯ, ರಾಮಕೃಷ್ಣ, ವಿವೇಕಾನಂದಾದಿಗಳ ಸ್ವರೂಪ ಹೇಳಿಲ್ಲ. ಮೂವತ್ತುಮೂರು ಕೋಟಿ ದೇವತೆಗಳ ಹೆಸರು, ಅವರ ಪತ್ನಿಯರ ಸಹಿತ ಅವರ ಅವತಾರಗಳು, ಸತ್ಯನಾರಾಯಣ, ರಾಧಾದೇವಿಯವರ ಸ್ವರೂಪ, ಇತ್ಯಾದಿ ಅನೇಕ ವಿಷಯಗಳನ್ನು ಹೇಳಿಲ್ಲ. ಲಕ್ಷ್ಮೀದೇವಿಯವರು .ಅವತರಿಸುವಾಗ ಇನ್ನು ಯಾವ ದೇವತೆಗಳು ಮತ್ತು ಸ್ತ್ರೀದೇವಿಯರು ಅವರ ಸೇವಾರ್ಥವಾಗಿ ಅವತರಿಸುವರೆಂಬುದನ್ನು ತಿಳಿಸಿಲ್ಲ. ಹಾಗಿದ್ದರೂ "ಸಮಸ್ತ ಶಾಸ್ತ್ರಾರ್ಥ ವಿನಿರ್ಣಯೊ ಅಯಂ" ಎಂದು ತಮ್ಮ ಗ್ರಂಥವನ್ನು ಪ್ರಶಂಸೆಮಾಡಿಯೂ ಇದ್ದಾರೆ. ವಿದ್ವಾಂಸರು ವಿರೋಧವನ್ನು ಪರಿಹರಿಸಬೇಕು. ನಿರ್ಣಯದಲ್ಲಿ ಅನುಕ್ತವಾದುದೆಲ್ಲಾ ಸುಳ್ಳು ಎಂದು ನಿಶ್ಚಯಿಸಬಾರದು. ಹಾಗೆ ಮಾಡಿದರೆ ನಿರ್ಣಯಾನುಕ್ತ ಅನೇಕ ಮೂಲ ದಶಶಾಸ್ತ್ರೋಕ ತತ್ವಗಳೂ, ವೈಷ್ಣವಪುರಾಣ ಭಾಗೋಕ್ತ ಅನೇಕ ಪ್ರಮೇಯಗಳೂ, ಬ್ರಹ್ಮಸೂತ್ರೋಕ್ತ ಅನೇಕ ಪ್ರಮೇಯಗಳೂ ಸುಳ್ಳೆಂದು ಹೇಳಬೇಕಾಗಿ ತತ್ವ ವಿಪ್ಲವವೇ ಆಗಿ ಹೋಗುತ್ತೆ. ಸ್ವೋಕ್ತಿ (ಮ.ತಾ.ನಿ. I 30-33, 42, 47) ವಿರೋಧದಿಂದ ವ್ಯಾಹತಿಯೂ ಬರುತ್ತೆ. ನಿರ್ಣಯದಲ್ಲಿ ಅನುಕ್ತವಾದದು ಮೂಲಶಾಸ್ತ್ರದಲ್ಲಿ ಇಲ್ಲವೇ ಇಲ್ಲ ಎನ್ನಲಾಗುವುದಿಲ್ಲ. ಹಾಗೆ ಹೇಳಿದರೆ ಪ್ರತ್ಯಕ್ಷ ವಿರೋಧ ಬರುತ್ತೆ, ಭಾಗವತಸ್ಥ ಜನಲೋಕವಾದ, ಶ್ರುತಿಗೀತಾದಿಗಳು ಭಾರತ ನಿರ್ಣಯದಲ್ಲಿ ಹೇಳಲ್ಪಟ್ಟಿಲ್ಲ. ಆದರೆ ಭಾಗವತ ತಾತ್ಪರ್ಯದಲ್ಲಿ ಅವಕ್ಕೆ ಪ್ರಾಮಾಣ್ಯ ಒಪ್ಪಿ ಸರ್ವಜ್ಞರೇ ವ್ಯಾಖ್ಯಾನ ಮಾಡಿದ್ದಾರೆ. ಹಾಗೆಯೇ ಅನೇಕ ಕ್ಷೇತ್ರ ಮಹಿಮಾದಿಗಳು, ತೀರ್ಥಮಹಿಮಾದಿಗಳು, ಹರಿಭಕ್ತ ಚರಿತ್ರೆಗಳು, ಏಕಾದಶ್ಯಾದಿ ವ್ರತಮಹಾತ್ಮೆಗಳು ನಿರ್ಣಯದಲ್ಲಿ ಹೇಳಲ್ಪಡದಿದ್ದರೂ ನಿರ್ಣಯದಿಂದಲೇ ಪ್ರಮಾಣವೆಂದು ಪರಿಗೃಹೀತವಾದ ಮೂಲಶಾಸ್ತ್ರಗಳಲ್ಲಿ ಹೇಳಲ್ಪಟ್ಟಿವೆ. ಅವುಗಳ ಭಾಗವು ಆಚಾರ್ಯರಿಂದಲೇ ಉಪನಿಷದ್ಭಾಷ್ಯ, ಭಾಗವತತಾತ್ಪರ್ಯ,

ಋಗ್ಭಾಷ್ಯ, ಗೀತಾಭಾಷ್ಯ, ಕೃಷ್ಣಾಮೃತಮಹಾರ್ಣವ, ಜಯಂತೀನಿರ್ಣಯ, ಯತಿಪ್ರಣವಕಲ್ಪಾದಿಗಳಲ್ಲಿ ವ್ಯಾಖ್ಯಾತವಾಗಿದೆ. ಆದ್ದರಿಂದಲೇ "ಇಲ್ಲೇ ಸಮಸ್ತ ನಿರ್ಣಯಗಳಿವೆ" ಎಂಬ ತಾತ್ಪರ್ಯನಿರ್ಣಯದ ಆಚಾರ್ಯರ ಉಕ್ತಿಗೆ ಯೋಗ್ಯಾರ್ಥವನ್ನು ಮಾಡಬೇಕು. "ಅನುಮಾಯಾಃ ವಿರೋಧಶ್ಚೇತ್ಪ್ರತ್ಯಕ್ಷೇಣಾಗಮೇನವಾ ಸೈವಾ ಪ್ರಮಾಣತಾಂ ಗಚ್ಛೇದಾಗಮದ್ವಿಟ್ ತಥಾಕ್ಷಜಂ ‖" ಎಂದು ಬೃ. ಭಾ. ವಚನವಿದೆ. ಪೂರ್ವಪಕ್ಷ ಗ್ರಂಥಕಾರರ ಕೃತಕತ್ವಾದಿ ಯುಕ್ತಿಯನ್ನೇ ತ್ಯಾಗ ಮಾಡಬೇಕು.

ಟೀಕಾಚಾರ್ಯರು ಈ ಸಂದೇಹವನ್ನು ಹೀಗೆ ಪರಿಹರಿಸಿರುತ್ತಾರೆ: "ಅನುಕ್ತಂ ಪಂಚಭಿರ್ವೇದೈಃ ನವಸ್ತ್ವಸ್ತಿಕುತಶ್ಚನ" ಎಂದರೆ ಭಾರತಾದಿಗಳಲ್ಲಿ ಸರ್ವವೂ ಹೇಳಲ್ಪಟ್ಟಿದೆ ಎಂದಿದೆ; ಆದರೆ ಇದು ಪ್ರತ್ಯಕ್ಷ ವಿರುದ್ಧ, ತತ್ಪ್ರತ್ಯಕ್ಷ ವಿರುದ್ಧಾರ್ಥೇನಾಗಮಸ್ಯಾಪಿ ಮಾನತಾ" ಇತ್ಯಾದಿ III 4-6 ಅನುವ್ಯಾಖ್ಯಾನದಲ್ಲಿದೆ; ಆದ್ದರಿಂದ ಬೇರೆ ಅರ್ಥ ಮಾಡಬೇಕು. ಬೇರೆ ಅರ್ಥ ಹೇಗೆ ಮಾಡಬೇಕೆಂದರೆ "ಅನುಕ್ತಮಿತಿ" ಭಗವದ್ಗುಣಾದಿ ಕಂಚ ಸಾಮಾನ್ಯತಃ ತದುಕ್ತಮೇವೇತ್ಯದೋಷಃ" ಎಂದು II 1-16 ತತ್ವಪ್ರಕಾಶಿಕೆಯಲ್ಲಿ ಹೇಳಿದ್ದಾರೆ. (ಭಗವದ್ಗುಣಾದಿ ಪ್ರಮೇಯವು ಸಾಮಾನ್ಯ ರೂಪದಿಂದ ಹೇಳಲ್ಪಟ್ಟಿದೆಯಾದ್ದರಿಂದ ಪ್ರತ್ಯಕ್ಷ ವಿರೋಧರೂಪ ದೋಷವಿಲ್ಲ ಎಂದರ್ಥ. ಮ.ತಾ.ನಿ. XXXII 136, ಶ್ಲೋಕದಲ್ಲೂ 'ಕಿಂಚಿದಾಹ' ಎಂದಿದೆ. ಅಭಿನವ ಚಂದ್ರಿಕಾದಲ್ಲಿ "ಪಂಚಭಿರ್ವೇದೈರನುಕ್ತಮತೀಂದ್ರಿಯಂ ಕುತಶ್ಚನ ಅನುಮಾನಾದೇಃ ನಾಸ್ತಿನ ಸಿದ್ಧ್ಯತೀತ್ಯರ್ಥಃ" ಎಂದಿದೆ. (ಕೇವಲಾನುಮಾನದಿಂದ ಭಾರತದಲ್ಲಿಲ್ಲದ ಅತೀಂದ್ರಿಯ ವಿಷಯಗಳನ್ನು ಸಾಧಿಸಲಾಗುವುದಿಲ್ಲ ಎಂದರ್ಥ) ಇದರಿಂದ ಆಗಮವಿಲ್ಲದೆ ಅನುಮಾನ ಪ್ರಯೋಗಗಳಿಂದ ಅನೃಜುತ್ವ ಸಾಧನೆಯಾಗಲಿ, ಋಜುತ್ವ ಖಂಡನೆಯಾಗಲಿ ಶಕ್ಯವಾಗುವುದಿಲ್ಲವೆಂದು ಭಾವ.

ತಥಾಚ ಟೀಕಾಕಾರರ ಸಮಾಧಾನವೇನೆಂದರೆ "ಸರ್ವ ನಿರ್ಣಯಗಳೂ ತಾತ್ಪರ್ಯ ನಿರ್ಣಯದಲ್ಲಿ ಉಕ್ತವಾಗಿವೆ ಎಂದರೆ, ಭಗವದ್ಗುಣಾದಿ ಮುಖ್ಯ ವಿಷಯಗಳು ಸಾಮಾನ್ಯತಃ ಉಕ್ತವಾಗಿವೆ ಎಂದು ಅರ್ಥ. ಎಂದರೆ ಭೀಮನ ಚರಿತ್ರೆ ಹೇಳಿದ್ದರಿಂದ ಬ್ರಹ್ಮಾದಿ ವಾದಿರಾಜಾದಿ ಸರ್ವ ಋಜುಗಳ ಚರಿತ್ರೆಯೂ ಉಕ್ತಪ್ರಾಯವಾಯಿತು. ದುರ್ಯೋಧನ ದೃಷ್ಟಾಂತದಿಂದ ಕಲಿಯ ಅವತಾರ ರೂಪಗಳೂ, ಇತರ ದೈತ್ಯಜನ ಚರಿತ್ರೆಗಳೂ ಹೇಳಲ್ಪಟ್ಟಂತಾಯಿತು. ಶೇಷನ ಕಥೆಯಿಂದ ಗರುಡ ಮತ್ತು ರುದ್ರಾದಿ ಶೇಷಸಮರ ಚರಿತ್ರೆಯೂ ಹೇಳಿದಂತಾಯಿತು. ಕೃಷ್ಣ ರಾಮರುಗಳ ಚರಿತ್ರೆ ಹೇಳಿದ್ದರಿಂದ, ಶ್ರೀಹರಿಯ ಅನಂತ ರೂಪಗಳ ಹಾಗೂ ವೇಂಕಟೇಶ, ವಿಠ್ಠಲಾದಿ ಎಲ್ಲ ಭಗವದ್ರೂಪಗಳ ಚರಿತ್ರೆಯನ್ನೂ ಹೇಳಿದಂತಾಯಿತೆಂದು ಭಾವಿಸಬೇಕು. ಗುಣಗಳೂ ಹೀಗೆ ಸ್ವಸಮಾನ ಗುಣೋಕ್ತಿಯಿಂದ ಹೇಳಲ್ಪಟ್ಟಂತಾಯಿತು. ಹೀಗೆ ಸದೃಷ್ಟಾಂತವಾಗಿ ಸರ್ವ ಪ್ರಧಾನ ವಿಷಯಗಳಲ್ಲೂ ನಿರ್ಣಯಗಳು ಹೇಳಲ್ಪಟ್ಟಿವೆ. ವಿಶೇಷ ರೂಪದಿಂದ ಹೇಳಲ್ಪಟ್ಟಿಲ್ಲ. ಒಬ್ಬೊಬ್ಬರ ಚರಿತ್ರೆಯನ್ನೂ ಹೇಳಿದರೆ ಗ್ರಂಥಾನಂತ್ಯವಾಗುತ್ತೆ. ಈಗ ಹೇಳಲ್ಪಟ್ಟ ರೀತಿಯಲ್ಲಿ ಪಂಡಿತಾಚಾರ್ಯಾದಿಗಳ ಚರಿತ್ರೆಯೂ, ಹನುಮದಧೀನ ಸುಗ್ರೀವಾಂಗದಾದಿಗಳ ಸ್ವರೂಪ ವರ್ಣನೆಯಿಂದ ಕಥಿತವಾಗಿದೆ ಎಂದು ತಿಳಿಯಬೇಕು. ಜರಾಸಂಧ, ರುಗ್ಮಿ, ಏಕಲವ್ಯ ಶಿಶುಪಾಲಾದಿಗಳ ಕಥಾವ್ಯಾಜದಿಂದ ಪುಂಡರೀಕಪುರಿ, ಭಾಸ್ಕರ, ಭಟ್ಟ, ಪ್ರಭಾಕರಾದಿ ಪೂರ್ವಪಕ್ಷಿಗಳ ಕಥೆಯು ಉಕ್ತಪ್ರಾಯವೇ.

ಪಾಂಡವ ಸೇನೆಯು ದೇವಾಂಶ ಜನಭರಿತ, ಕೌರವ ಸೇನೆಯು ಹೆಚ್ಚಾಗಿ ಮುಕ್ತಿ ಯೋಗ್ಯ ಜನಯುಕ್ತವಾದದ್ದೆಂದು ಹೇಳಿರುವುದರಿಂದ, ನಮ್ಮಗಳ ಸ್ವರೂಪವೂ ಉಕ್ತಪ್ರಾಯವೇ.

ಹೀಗೆ ಸಾಮಾನ್ಯ ರೂಪದಿಂದ ದೃಷ್ಟಾಂತ ಕೊಟ್ಟು ಸರ್ವವೂ ಉಕ್ತವಾಗಿದೆ ಎಂದರ್ಥ. ಆದ್ದರಿಂದ ಸ್ಪಷ್ಟವಾಗಿ ನಿರ್ಣಯದಲ್ಲಿಯೇ ಸರ್ವಪ್ರಮೇಯಗಳೂ ಉಕ್ತವಾಗಿವೆ ಎಂಬ ಕಲ್ಪನೆಯು ಪ್ರಮಾಣ ವಿರುದ್ಧ ಪ್ರತ್ಯಕ್ಷ ವಿರುದ್ಧವಾದ್ದರಿಂದ ಆ ಕಲ್ಪನೆಯು ಉಪೇಕ್ಷಣೀಯವೇ. ಆದ್ದರಿಂದ ಋಕ್ಸಂಹಿತಾದಿ ವಾಕ್ಯಗಳಿಗೆ ಕೃತಕತ್ವ ಪ್ರಸಕ್ತಿಯಾಗಲೀ, ಅಪ್ರಾಮಾಣ್ಯ ಪ್ರಸಕ್ತಿಯಾಗಲೀ ಇಲ್ಲ.

ಕಿಂಚ ಋಗಾದಿ ಹತ್ತು ಶಾಸ್ತ್ರಕ್ಕೂ ತದವಿರುದ್ಧ ಶಾಸ್ತ್ರಕ್ಕೂ ಸಹ ವ್ಯಾಖ್ಯಾನ ರೂಪದಿಂದ ಉದ್ಧಾರಕವಾದ ಮ.ತಾ.ನಿರ್ಣಯ ಗ್ರಂಥವು, ಸ್ವಮೂಲ ಋಗಾದಿಗಳಲ್ಲಾಗಲಿ, ಋಗಾದ್ಯನುಕೂಲ ಇತರ ಗ್ರಂಥಗಳಲ್ಲಾಗಲಿ, ಮಧ್ಯೆ ಕಂಡ ಸಂಶಯ ಪರಿಹರಿಸಿ, ಅವುಗಳ ತಾತ್ಪರ್ಯ ತೋರಿಸಿ, ಅವುಗಳಲ್ಲಿ ಹೇಳಲ್ಪಟ್ಟಂತೆ ಅನುಷ್ಠಾನಮಾಡಿ ಯೋಗ್ಯನು ಮೋಕ್ಷವನ್ನು ಹೊಂದಲೆಂದು ಸಹಾಯ ಮಾಡತಕ್ಕದ್ದೆ, ಸಾಧನ ಮಾರ್ಗ ಪ್ರದರ್ಶಕವಾದದ್ದೇ. ಅಂಥದು ಋಕ್ಸಂಹಿತಾದಿ ಮೂಲ ಶಾಸ್ತ್ರ ಭಾಗದ ವಾಕ್ಯಗಳಿಗೇ ಅಪ್ರಾಮಾಣ್ಯ ಹೇಳಿ ಹೇಗೆ ಘಾತಕವಾದೀತು? ಆದ್ದರಿಂದಲೂ ಸಂಹಿತೆಗಾಗಲೀ, ಬೃಹನ್ನಾರದೀಯಾದಿ ವಾಕ್ಯಗಳಿಗಾಗಲೀ ಅಪ್ರಾಮಾಣ್ಯ ಶಂಕಿಸುವುದು ಯುಕ್ತವಲ್ಲ. ಬಾಧಕವಿಲ್ಲದೆ, ಪ್ರಮಾಣ ಸಿದ್ಧವಾದುದನ್ನು ತ್ಯಜಿಸುವುದು ಸರಿಯಲ್ಲ ಎಂಬ ನ್ಯಾಯವನ್ನು ಅವಲಂಬಿಸಬೇಕು.[ಹಾಗೆ ಅವಲಂಬಿಸಿ ಟೀಕಾಚಾರ್ಯರೇ, ಪ್ರಕ್ಷಿಪ್ತವೆಂದು ಸಿದ್ಧವಾದ 'ವಿಮತಂ ಸಕರ್ತೃಕಂ ಇತ್ಯಾದಿ ಎರಡು ತ.ನಿ. ವಾಕ್ಯಕ್ಕೂ, ಕೊನೆಯ ತತ್ತ್ವೋದ್ಯೋತದ ಮಂಗಳ ಶ್ಲೋಕಗಳಿಗೂ ಪ್ರಾಮಾಣ್ಯ ಒಪ್ಪಿ ವ್ಯಾಖ್ಯಾನ ಮಾಡಿದ್ದಾರೆ] ಅದೇ ಪ್ರಾಮಾಣ್ಯ ಸ್ವತತ್ತ್ವದ ಮರ್ಯಾದೆ.

## 26. ಆಗಮ ವಿಚಾರ:

**ಪುಟ 13-6 ಉಕ್ತಿ :**

"ಆ ಲಾತವ್ಯಾದಿ ಜನರ ವಿಷಯದಲ್ಲಿ ಅನುಕ್ತಿ ದೋಷವನ್ನು ಸಹಿಸಲಾರದೇ ಆ ಗುರುಶ್ರೇಷ್ಠರಾದರೂ ಅದರ ನಿವಾರಣೆಗೆ ಹೇಗೆ ಯತ್ನ ಮಾಡದೇ ಇದ್ದಾರು? ಇದರ ಮೇಲೆ ಇದರಲ್ಲಿ ಸ್ವಲ್ಪವೂ ಗೋಪ್ಯವಾದದ್ದಿಲ್ಲ."

**ಪ್ರತ್ಯುಕ್ತಿ :**

ಪೂರ್ವೋದಾಹೃತ ಪ್ರಮಾಣ ವಾಕ್ಯದಿಂದಲೇ ಸಮಾಧಾನ ಆಗುತ್ತೆ. ಲಾತವ್ಯ, ಗವ್ಯ, ವಕ್ತವ್ಯ ಮುಂತಾದ ಋಜು ಜನರ ಚರಿತ್ರೆಗಳೂ "ಸಾಮಾನ್ಯತಃ" ಉಕ್ತವಾಗಿಯೇ ಇದೆ. "ಭಾರತೇ ಸಾರ ಸಂಗ್ರಹಃ" ವಾಯುರ್ಹಿ ಬ್ರಹ್ಮತಾಮೇತಿ ತಸ್ಮಾದ್ಬ್ರಹ್ಮೈವ ಸಸ್ಮೃತಃ" ಎಂದು ನಿರ್ಣಯದಲ್ಲೇ (II 152-154) ಆ ಅನ್ಯಜನರ ವಿಷಯದಲ್ಲಿ ಸಂಗ್ರಹ ಕ್ರಮವು ಸೂಚಿತವಾಗಿದೆ. I 117-126 ಶ್ಲೋಕಗಳಲ್ಲಿ ತೃಣಾದಿ ಚತುರ್ಮುಖಾಂತ ಸರ್ವ ಮುಕ್ತಿಯೋಗ್ಯರ ಚರಿತ್ರೆಗಳೂ ಸಂಗೃಹೀತವಾಗಿವೆ. ವಿಶೇಷಾಕಾರವಾಗಿ ಪ್ರಾತಸ್ವಿಕರೂಪದಿಂದ ಅವರವರ ಸಾಧನೆಗಳೂ ಅವತಾರಾದಿಗಳೂ ಉಕ್ತವಾಗಿಲ್ಲ. ವಿಶೇಷಾಕಾರವಾಗಿ ಸರ್ವ ಭಗವದ್ಗುಣಗಳೂ ಕೂಡ ವರ್ಣಿತವಾಗಿಲ್ಲ. ಸ್ಪಷ್ಟತಃ,

ವಿಸ್ತಾರದಿಂದ ತತ್ತನ್ನಾಮ ಹಿಡಿದು ವಿಶೇಷ ರೀತಿಯಲ್ಲಿ ಚರಿತ್ರೆ ಹೇಳಿದರೆ ಗ್ರಂಥಬಾಹುಳ್ಯವಾಗುತ್ತೆ. ಮತ್ತು ಮುಂದೆ ಹುಟ್ಟುವ ಕೆಲವರ ವಿವರ ಸ್ಪಷ್ಟವಾಗಿ ತಿಳಿಸಿಬಿಟ್ಟರೆ, ಅವರಿಗೆ ಸಾಧನ ಹಾನಿ ಪ್ರಸಂಗವಿದೆ; ದುರ್ಜನರಿಗೆ ದ್ವೇಷಸಾಧನೆ ಮಾಡಲು ಅವರ ವಿರುದ್ಧವಾಗಿ ತಂತ್ರ ನಡೆಸಲು ಅವಕಾಶ ಕೊಟ್ಟಂತಾಗುತ್ತೆ; ಗೋಪ್ಯ ವಿಶೇಷಗಳೆಂದು ವಿಹಿತವಾದ ವಿಷಯಗಳಲ್ಲೂ ಆವಿಷ್ಕಾರವು ಮಾಡಲ್ಪಟ್ಟಂತಾಗುತ್ತೆ. ಹೀಗೆ ಬಹು ಕಾರಣಗಳಿಂದ ಸ್ಪಷ್ಟವಾಗಿ ವಾದಿರಾಜಾದಿಗಳ ಚರಿತ್ರೆಯು ನಿರ್ಣಯ ಭಾರತಗಳಲ್ಲಿ ಕಂಡಿಲ್ಲ.

“ನ ಚಾತ್ರ ಕಿಂಚದ್ಗುಹ್ಯಮಸ್ತಿ” (ಇದರಲ್ಲಿ ಗೋಪ್ಯವೇನೂ ಇಲ್ಲ.) ಎಂಬ ಪೂರ್ವಪಕ್ಷೋಕ್ತಿಯು ಸುಳ್ಳು. ಅದು ಪ್ರಮಾಣ ವಿರುದ್ಧವು. “ಮಾನುಷಂಚ ಸ್ವಾಧ್ಯಾಯ ಪ್ರವಚನೇ ಚ” ಎಂದು ತೈತ್ತಿರೀಯ ಶ್ರುತಿ ಇದೆ. ಮ.ತಾ.ನಿ. XI 42-44 ವಾಕ್ಯಗಳಲ್ಲಿ “ನ ಧರ್ಮೊ ದೇವತಾನಾಂ ಜ್ಞಾತ ವಾಸಶ್ಚಿರಂ ನೃಷು” ಎಂದಿದೆ. 14-4ರಲ್ಲಿ 13-8 ಮುಂತಾದ ಆರು ಶ್ಲೋಕಗಳಲ್ಲೂ ಜ್ಞಾನಿ ದೇವತೆಗಳು ಸ್ವದೇವತ್ವಾದಿಗಳನ್ನು ಮುಚ್ಚಿಕೊಂಡು ಸಾಮಾನ್ಯ ಮನುಷ್ಯರಂತೆ ಇರುವುದೇ ಅವರಿಗೆ ಧರ್ಮವೆಂದಿದೆ. “ಧರ್ಮೋಹಿ ಸರ್ವ ವಿದುಷಾಮಪಿ ದೇವತಾನಾಂ ಪ್ರಾಪ್ತೇ ನರೇಷು ಜನನೇ ನರವತ್ಪ್ರವೃತ್ತಿಃ । ಜ್ಞಾನಾದಿಗೂಹನಮುತಾಧ್ಯಯನಾದಿರತ್ರ ॥” “ಪ್ರಜಾಯತೇ ಹಿ ಯತ್ಕುಲೇ ಯಥಾಯುಗಂ ಯಥಾವಯಃ । ತಥಾ ಪ್ರವರ್ತನಂ ಭವೇದ್ದಿವೌಕಸಾಂ ಸಮುದ್ಭವೇ” ॥ ಇತ್ಯಾದಿಗಳಲ್ಲಿ ಗುಹ್ಯಧರ್ಮಗಳ ಗೋಪನವೇ ಸರಿ ಎಂದು ಅನೇಕ ಪ್ರಮಾಣಗಳಿವೆ. ಶ್ರೀಮದಾಚಾರ್ಯರ ಆಚಾರವೂ ಈ ವಿಷಯದಲ್ಲಿ ಪ್ರಮಾಣವಾಗಿದೆ. “ಆಚಾರಶ್ಚೈವ ಸಾಧೂನಾಂ” ಎಂದು ಕೃ.ಮಹಾರ್ಣವ ವಾಕ್ಯವಿದೆ. ಶ್ರೀಮದಾಚಾರ್ಯರು ತಮ್ಮ ತಂದೆ ತಾಯಿಗಳ, ವಿಷ್ಣುತೀರ್ಥ ನಾಮಕ ತಮ್ಮಂದಿರ, ಪಂಡಿತಾಚಾರ್ಯ ಪದ್ಮನಾಭಾದಿ ಶಿಷ್ಯರ ಸ್ವರೂಪವನ್ನೂ ಪ್ರಕಟಿಸಿಲ್ಲವಷ್ಟೆ, ಸುಮಧ್ವವಿಜಯ XV 113 ರಲ್ಲಿ ವಿಷ್ಣು ತೀರ್ಥರ ಮೇಲೆ ಶ್ರೀಮದಾಚಾರ್ಯರು ಎಂಥ ಪ್ರಸಾದವನ್ನು ಮಾಡಿದರೆಂಬುದೂ ಗೋಪ್ಯವೆಂದೇ ಹೇಳಲ್ಪಟ್ಟಿದೆ. ಆದರೂ ದೇವಕಾರ್ಯ ಸಾಧನೆಗಾಗಿಯೇ ಶ್ರೀಹರಿಯಾಜ್ಞೆಯಿಂದ ಶ್ರೀಮದಾಚಾರ್ಯರು ತಮ್ಮ ಮಧ್ಯವಯಸ್ಸಿನಲ್ಲಿ ಸ್ವಸ್ವರೂಪವನ್ನು ಆವಿಷ್ಕರಿಸಿದರು. ಆದ್ದರಿಂದಲೇ ನೂರು ವರ್ಷ ಸಹ ಇಲ್ಲಿ ಇರಲಿಲ್ಲ. ಬಾಲ್ಯದಲ್ಲಿ ಮೋಹಕವಾಗಿಯೇ ವರ್ತಿಸಿದರು. ಭೀಮಸೇನ ಹನುಮಂತರೂ ಕೂಡ ಸ್ವಸ್ವರೂಪ ಹೇಳಿಕೊಳ್ಳಲಿಲ್ಲ. ಆದ್ದರಿಂದ ಶ್ರೀಮದಾಚಾರ್ಯರ ಆವಿಷ್ಕಾರವು ಅಪವಾದ ರೂಪವು. ಸ್ವಗ್ರಂಥ ಪ್ರಾಮಾಣ್ಯ ಸಿದ್ಧಿರೂಪ ಮಹಾ ಪ್ರಯೋಜನಕ್ಕಾಗಿ ದೇವರಿಂದಲೇ ಆಜ್ಞಾಪಿಸಲ್ಪಟ್ಟು ಮಾಡಿದ್ದು. ಇತರ ದೇವತೆಗಳು ಯಾವ ಕಾರ್ಯಕ್ಕಾಗಿ ಅವತಾರವೋ ಅದನ್ನು ತಿಳಿದು ಉತ್ಸಾಹದಿಂದ ಮಾಡಿಬಿಟ್ಟು ಇತರ ಕಾರ್ಯಗಳಲ್ಲಿ “ಮೂಕಬಧಿರರಂತಿಪ್ಪರೋ ನೋಳ್ಪಜನರಿಗೆ” ಎಂದು ಹೇಳಿರುವಂತೆ, ಅಲ್ಪ ಪ್ರಜ್ಞೆ ಉಳ್ಳವರಂತೆ ಕಾಣಿಸಿ ಕೊಳ್ಳುತ್ತಾ ಸ್ವೇಷ್ಟ ಭಗವದುಪಾಸನೆಯನ್ನು ಮಾಡಿಕೊಂಡಿರುತ್ತಾರೆ. ವಾದಿರಾಜಗುರುಕೃತ ಲಕ್ಷಾಲಂಕಾರ ಅವತಾರಿಕೆಯಲ್ಲಿ “ಅಹಂತು ಮಾನುಷಃ ಕುರ್ಯಾಂ ಮಹಾಕಾರ್ಯೆ ಕಥಂ ಮತಿಂ” ಇತ್ಯಾದಿ ವಾಕ್ಯಗಳಿರುವುದರಿಂದ ಅವರೂ ಈ ವಿಧವಾದ ಗೋಪ್ಯವನ್ನೇ ಪ್ರಕಟಿಸಿದ್ದಾರೆ. ಇವರುಗಳ ಸ್ವರೂಪವು ಗೋಪ್ಯವಾದ್ದರಿಂದಲೇ, ಕನ್ನಡ ಕೀರ್ತನಕಾರ

| |
|---|
| ಜ್ಞಾನಿಗಳೂ ಕೂಡ ಹಿಂದೆ ಹೇಳಿದಂತೆ ವ್ಯಾಸರಾಜಾದಿಗಳ ವೃಂದಾವನಾನಂತರವೇ ಅವರ ಸ್ವರೂಪವನ್ನು ಜನತೆಗೆ ಪ್ರಕಾಶಪಡಿಸಿದ್ದಾರೆ. ಅವರು ಇರುವಾಗ ಪ್ರಕಟಿಸಿಲ್ಲ. ದೇವತೆಗಳು ಹನುಮಂತನನ್ನು ಅನುಸರಿಸಿ ಹುಟ್ಟಿದರು; ದೇವತೆಗಳು ಭೀಮನನ್ನು ಅನುಸರಿಸಿ ಹುಟ್ಟಿದರು; ಹಾಗೆ ಮಧ್ವಗುರುಗಳನ್ನು ಅನುಸರಿಸಿ ಹುಟ್ಟಿದರೆಂದು ಸಾಮಾನ್ಯ ನ್ಯಾಯವನ್ನು ನಿರ್ಣಯಾದಿಗಳಲ್ಲಿ ಶಾಸ್ತ್ರಕಾರರು ಪ್ರಕಟೀಕರಿಸಿದ್ದಾರೆ. ವ್ಯಾಸತೀರ್ಥರು ಪ್ರಹ್ಲಾದರು ಜಯತೀರ್ಥರು ಇಂದ್ರರು ಇತ್ಯಾದಿ ವಿಶೇಷ ರೀತಿಯಿಂದ ಹೇಳಿದ್ದರೆ ಅವತರಿಸಿದ ದೇವತೆಗಳಿಗೆ ಪುಣ್ಯ ಹಾನಿಯಾಗುತ್ತಿತ್ತು, ಗರ್ವವೃದ್ಧಿ ಸಂಭವವಿತ್ತು, ದೇವಕಾರ್ಯ ಭಂಗವೇ ಆಗುತ್ತಿತ್ತೋ ಏನೋ, ಮತ್ತು ಅಯೋಗ್ಯಾದಿಗಳಿಗೂ ಕೂಡ ಅವರಲ್ಲಿ ಭಕ್ತಿ ಬಂದು ದೇವಕಾರ್ಯ ವಿಲೋಪವೂ ಆಗಿ ಸರ್ವ ಅನರ್ಥಕ್ಕೂ ಅವಕಾಶವಾಗುತ್ತಿತ್ತು. ಆದ್ದರಿಂದ ದೇವತೆಗಳ ಅವತಾರಾದಿಗಳು ರಹಸ್ಯವೇ. "ಇದರಲ್ಲಿ ಏನೂ ಗುಹ್ಯವಿಲ್ಲ" ಎಂಬುದು ಪ್ರಮಾಣ ವಿರುದ್ಧ. |
| ಹಾಗಾದರೆ ಗುರುರಾಜರು ಸ್ವಾಪ್ನ ವೃಂದಾವನಾಖ್ಯಾನದಲ್ಲಿ, ರಾಘವೇಂದ್ರ ಸ್ವಾಮಿಗಳು ಸ್ವಾಪ್ನ ಸೂಚನೋಪದೇಶಾದಿಗಳಿಂದ ಸ್ವವೃಂದಾವನ ಪ್ರವೇಶಾನಂತರ ಸ್ವಸ್ವರೂಪವನ್ನು ಏತಕ್ಕೆ ಪ್ರಕಟಮಾಡಿಕೊಂಡಿದ್ದಾರೆ ಎಂದರೆ ದೇವಕಾರ್ಯ ವಿಶೇಷ ಸಾಧನೆಗಾಗಿಯೇ ವಾದಿರಾಜ ಗುರುಗಳು ಹಾಗೆ ಮಾಡಿದ್ದಾರೆಂದು ಹಿಂದೆ III ಅಧ್ಯಾಯದಲ್ಲಿ ಹೇಳಲಾಗಿದೆ. ಆಖ್ಯಾನದಲ್ಲೇ ಈ ವಿಷಯ ಸೂಚಿತವಾಗಿದೆ. ಇನ್ನು ರಾಘವೇಂದ್ರ ಸ್ವಾಮಿಗಳೂ ಕೂಡ "ಭೋಗೇನ ಪುಣ್ಯಂ" ಇತ್ಯಾದಿ ಭಾಗವತೋಕ್ತ ನರಸಿಂಹಸ್ವಾಮಿಯ ಆಜ್ಞಾರೀತಿಯಿಂದ ಸ್ವಭಕ್ತರಿಗೆ, ಅವರಿಂದ ಸೇವೆ ಮಾಡಿಸಿಕೊಂಡು ಸ್ವಪುಣ್ಯಾತಿಶಯಾಂಶ ದಾನಮಾಡಿ ಉದ್ಧರಿಸುವುದಕ್ಕೂ, ಮಧ್ವತತ್ವದಲ್ಲಿ ಸಜ್ಜನರಿಗೆ ನಂಬಿಕೆ ಹುಟ್ಟಿಸಿ ದ್ವೈತತತ್ವ ಸೇವಾ ಜನಿತ ಆನಂದಾನುಭವ ಮಾಡುವುದಕ್ಕೂ ವೃಂದಾವನ ಪ್ರವೇಶಾನಂತರ ಹಾಗೆ ಪ್ರಕಟಿಸಿದ್ದಾರೆಂದು ಐತಿಹ್ಯವಿದೆ. ಆದ್ದರಿಂದಲೇ "ಪ್ರಹ್ಲಾದೋ ನಿತ್ಯಭಕ್ತಿಮಾನ್" ಎಂದು VII 19-12 ತಾತ್ಪರ್ಯವೇ ಇದೆ. ಎಂಥೆಂಥ ದೇವತೆಗಳಿಂದ ಅಸಾಧ್ಯ ಕಾರ್ಯವನ್ನೂ ಮಾಡಲಿಕ್ಕೆ ಸಮರ್ಥರೆಂದು ಅನೇಕರಿಗೆ ಪ್ರತ್ಯಕ್ಷಾನುಭವ ಕೂಡ ಇದೆ. |
| ಆದರೂ ಸ್ವಜೀವನ ಕಾಲದಲ್ಲಿ ಸ್ವರೂಪಾಚ್ಛಾದನೆ ಮಾಡಿಕೊಂಡೇ ಜ್ಞಾನಿಗಳು ಬದುಕಿದ್ದಾರೆ. ಅವರುಗಳ ಸ್ವರೂಪ ವಿಷಯ ಗೋಪ್ಯವೇ. ಆದ್ದರಿಂದ ದೊಡ್ಡವರ ವಿಷಯದಲ್ಲಿ ನಿರ್ಣಯ ಗ್ರಂಥದಲ್ಲಿ "ವಿಶೇಷತಃ ಅನುಕ್ತಿ"ಯು ಭೂಷಣವೇ. ಆದರೂ ಸಾಮಾನ್ಯಾಕಾರದಿಂದ ಉಕ್ತಿಯೂ ಇದೆ. ಸಾಮಾನ್ಯ ರೂಪವಾಗಿ ಹೇಳಿದ್ದರಿಂದ ಅನೇಕ ಸಮಾನ ಜನರ ಕಥೆಯನ್ನು ಸಂಗ್ರಹವಾಗಿ ಸೂಚಿಸಿ ಭಕ್ತರ ಮಹಿಮೆ ಹೇಳಿದಹಾಗಾಗುತ್ತೆ. |
| ಕಿಂಚ ಮತ್ಸ್ಯ ಕೂರ್ಮಾದಿ ದೇವರೂಪಗಳ ಅನಂತ ಚರಿತ್ರೆಗಳನ್ನೂ ವಿಶೇಷತಃ ಹೇಳಲು ಒಂದು ಗ್ರಂಥಕ್ಕೆ ಸಾಧ್ಯವೂ ಅಲ್ಲ. ಅನೇಕ ಋಜು, ಜನರ ಚರಿತ್ರೆಗಳೂ ಹಾಗೇ ಅನಂತವಾಗಿಯೇ ಇವೆ. ಕೆಲವು ಅವಕ್ತವ್ಯವೂ ಆಗಿವೆ. ಆದ್ದರಿಂದ ಶ್ರೀಸರ್ವಜ್ಞಾಚಾರ್ಯರು ನಿರ್ಣಯದಲ್ಲಿ ಎಲ್ಲ ವಕ್ತವ್ಯವನ್ನೂ ಹೇಳಿಲ್ಲ ಎಂದು ಅವರ ಮೇಲೆ ದೋಷಾಪಾದನೆ ಮಾಡುವುದು ಅಸಾಧುವೇ. ಈಚಿನ ಗ್ರಂಥಕಾರರಾದ ವಾದಿರಾಜ ವ್ಯಾಸರಾಜಾದಿಗಳು ಆ |

ಅನುಕ್ತಿಯನ್ನು ಸಹಿಸಿಕೊಂಡಿರುವುದೂ ಕೂಡ ಹರಿಪ್ರೀತಿದ್ವಾರಾ ಆನಂದೊನ್ನಾಹ" ರೂಪ ಫಲಕ್ಕೆ ಕಾರಣವಾಗುತ್ತೆ. ಆದ್ದರಿಂದ ಅವರುಗಳ ಮೇಲೆ ದೋಷಾಪಾದನೆ ಮಾಡುವುದೂ ಅಸಾಧುವೇ. ಪ್ರಸಂಗರೂಪದಿಂದ ಮಾಡಿದರೆ 'ವಿಪರ್ಯಯೇ ಪರ್ಯವಸಾನ' ಶಕ್ಯವಲ್ಲ. ಋಜುತ್ವವು ಅವಶ್ಯ ವೇದ್ಯವೂ ಅಲ್ಲ. ಸಾಮಾನ್ಯತಃ ವಕ್ತವ್ಯವೂ ಅಲ್ಲ ಎನ್ನುವುದು ಆಖ್ಯಾನಾದಿ ಬಹು ಪ್ರಮಾಣ ವಿರುದ್ಧ.

## 27. ಆಗಮ ವಿಚಾರ:

**ಪುಟ 13-7 ಉಕ್ತಿ:**

"ಋಕ್ಸಂಹಿತಾದಿ ವಾಕ್ಯಗಳಲ್ಲಿ ಲಾತವ್ಯರು ಅವ್ಯವಹಿತೋತ್ತರ ಕಲ್ಪದ ವಾಯುದೇವರೆಂದೂ, ಅವರೂ ಬಳಿಕ್ತಾದಿ ಸೂಕ್ತ ಪ್ರತಿಪಾದ್ಯರೆಂದೂ - ಈ ಎರಡು ವಿಷಯ ನಿರೂಪಿಸಲ್ಪಟ್ಟಿದೆ. ಅದರಲ್ಲಿ ಮೊದಲನೆಯದು ಪ್ರಮಾಣ ವಿರುದ್ಧ. ಎರಡನೆಯದು ಅಪ್ರಾಮಾಣಿಕ" ಇತ್ಯಾದಿ.

**ಪ್ರತ್ಯುಕ್ತಿ:**

ಈ ಖಂಡನೆಯು ಋಕ್ಸಂಹಿತಾ ಸ್ವರೂಪದ ಅಜ್ಞಾನ ಮೂಲಕವಾದುದು. ಪ್ರಕಾಶಸಂಹಿತೆಯಂತೆ ಋಕ್ಸಂಹಿತಾದಿಗಳೂ ಪರಮಸಾತ್ವಿಕ ಪ್ರಮಾಣಗಳು. ಅವುಗಳಲ್ಲಿ ಹೇಳಿದ್ದೆಲ್ಲಾ ಮೂಲ ಪ್ರಮಾಣಾವಿರುದ್ಧವು. ಛಾಂದೋಗ್ಯ ಭಾಷ್ಯ ಮಾಡುವಾಗ ಸಾಮಸಂಹಿತೆಯನ್ನೂ, ತೈತ್ತಿರೀಯ ಭಾಷ್ಯ ಮಾಡುವಾಗ ಯಜುಃಸಂಹಿತೆಯನ್ನೂ, ಋಗ್ವೇದ ವ್ಯಾಖ್ಯಾನ ಮಾಡವಾಗ ಋಕ್ಸಂಹಿತೆಯನ್ನೂ ಪ್ರಮಾಣವನ್ನಾಗಿ ಆಚಾರ್ಯರು ಉದಾಹರಿಸಿದ್ದಾರೆ. ಭಾಗವತದ ಹನ್ನೆರಡನೆಯ ಸ್ಕಂಧದ ಆರನೆಯ ಅಧ್ಯಾಯದಲ್ಲಿ ಈ ಸಂಹಿತೆಗಳು ಹೇಗೆ ವೇದವ್ಯಾಸರಿಂದ ನಾಲ್ಕು ವೇದಗಳಿಂದ ಅಭಿವ್ಯಕ್ತವೋ ಆ ಪ್ರಕಾರವು ನಿರೂಪಿತವಾಗಿದೆ. ಋಕ್ಸಂಹಿತೆಯು ಋಗ್ವೇದದಿಂದ ಉಧೃತವಾಗಿ ಪೈಲಮುನಿಗಳಿಗೆ ಉಪದಿಷ್ಟವಾಯಿತು. ಪೈಲರು ತಮಗೆ ಪ್ರಾಪ್ತವಾದುದನ್ನು ಪುನಃ ಎರಡು ಶಾಖೆಗಳನ್ನಾಗಿ ವಿಭಾಗಿಸಿ ಇಂದ್ರಪ್ರಮಿತಿ, ಬಾಷ್ಕಲ ಎಂಬ ಶಿಷ್ಯರಿಗೋಸ್ಕರ ಉಪದೇಶ ಮಾಡಿದರು. ಬಾಷ್ಕಲರು ತಮಗೆ ಉಪದಿಷ್ಟವಾದುದನ್ನು ಪುನಃ ನಾಲ್ಕು ವಿಭಾಗ ಮಾಡಿ ಬೋಧ್ಯ, ಯಾಜ್ಞವಲ್ಕ್ಯ, ಪರಾಶರ, ಅಗ್ನಿಮಿತ್ರರಿಗೆ ಒಬ್ಬೊಬ್ಬರಿಗೆ ಒಂದೊಂದು ಉಪದೇಶ ಮಾಡಿದರು. ಇಂದ್ರಪ್ರಮಿತಿಯೂ ಕೂಡ ಸ್ವಲಬ್ದ ಸಂಹಿತೆಯನ್ನು ಮಾರ್ಕಂಡೇಯರಿಗೂ, ಆ ಮಾರ್ಕಂಡೇಯರು ಅದನ್ನು ವೇದಮಿತ್ರರಿಗೂ, ಆ ವೇದಮಿತ್ರರು ಸೌಭರ್ಯಾದಿಗಳಿಗೂ ಉಪದೇಶ ಮಾಡಿ ಪ್ರವರ್ತಿಸಿದರು. ವೇದಮಿತ್ರರು ತಮ್ಮ ಪುತ್ರ ಶಾಕಲ್ಯನಿಗೆ ಪಾಠ ಮಾಡಿಸಿದರು. ಶಾಕಲ್ಯರು ತಾನು ಅಧ್ಯಯನ ಮಾಡಿದ್ದನ್ನು ಪಂಚಧಾ ವಿಭಾಗಿಸಿ ಐದು ಶಿಷ್ಯರಿಗೆ ಒಂದೊಂದು ಭಾಗದಂತೆ ಉಪದೇಶಿಸಿದರು. ಶಾಕಲ್ಯ ಶಿಷ್ಯನಾದ ಜಾತೂಕರ್ಣ್ಯನೂ ನಾಲ್ಕು ಜನರಿಗೆ ಉಪದೇಶಿಸಿದನು. ಬಾಷ್ಕಲ ಪುತ್ರನಾದ ಬಾಷ್ಕಲಿಯೂ ವಾಲಖಿಲ್ಯಾ ನಾಮಕ ಸ್ವಲಬ್ದ ಸಂಹಿತಾ ಭಾಗವನ್ನು ಆನೇಕ ಶಿಷ್ಯರಿಗೆ ಉಪದೇಶಿಸಿದನು. ಹೀಗೆ ಋಕ್ಸಂಹಿತೆಯು ಬಹು ಶಾಖಾರೂಪದಿಂದ ವಿಭಾಗಿಸಲ್ಪಟ್ಟು ಪ್ರವರ್ತಿತವಾಗಿ ಅಲ್ಲಿ-ಅಲ್ಲಿ ಮೆರೆಯುತ್ತಿದೆ. ಈ ಸಂಹಿತೆಯಲ್ಲಿ ಪ್ರಾಯಶಃ ಸರ್ವ ಋಜುಗಳ ಸ್ವರೂಪ, ಅವತಾರ, ಅವತಾರಕಾರ್ಯಗಳೂ

| | |
|---|---|
| ವರ್ಣಿಸಲ್ಪಟ್ಟಿವೆ. ಯಜುಃಸಂಹಿತೆಯೂ ಋಜುಗಳ ಮಹಿಮೆಯನ್ನು ನಿರೂಪಿಸತಕ್ಕದ್ದೇ. ಹೀಗೆ ಸ್ಥಿತವಾದ ಋಕ್ಸಂಹಿತೆಯ ವೇದಾರ್ಥಭಾಗದ ನಿರವಕಾಶ ಚತುರ್ದಶ ಶ್ಲೋಕಗಳು ವಾ.ಗು.ಚ. ಅಷ್ಟಮ ಬಿಂದುವಿನಲ್ಲಿ ಉದಾಹೃತವಾಗಿವೆ. ಋಜುತ್ವ ಚಂದ್ರೋದಯದಲ್ಲಿ ಇಪ್ಪತ್ತುಮೂರು [ಈ ಎರಡು ಗ್ರಂಥಗಳ ವಾಕ್ಯೋದಾಹರಣೆಯಲ್ಲಿ ಸ್ವಲ್ಪ ವೈಚಿತ್ರ್ಯ ಇದೆ. ಇಪ್ಪತ್ತು ಮೂರು ಶ್ಲೋಕಗಳೂ ಋಕ್ಸಂಹಿತಾ ಶ್ಲೋಕಗಳೆಂದೇ ತೋರುತ್ತೆ. ಸಂಗತಿ, ಅರ್ಥೈಕ್ಯ ಆಗಿದೆ. ಆದರೂ ವಾ.ಗು.ಚ. ಗ್ರಂಥದಲ್ಲಿ ಅವುಗಳ ಮಧ್ಯೆ 2 1/2 ಶ್ಲೋಕಗಳನ್ನು ಉದಾಹರಿಸಿಲ್ಲ. ಇನ್ನು 6 1/2 ಶ್ಲೋಕಗಳನ್ನು ಉದಾಹರಿಸಿ ಅವನ್ನು ಬೃಹನ್ನಾರದೀಯ ಶ್ಲೋಕಗಳೆಂದು ನಿರ್ದೇಶ ಮಾಡಿದ್ದಾರೆ. ಆದರೆ ಋಜುತ್ವ ಚಂದ್ರೋದಯದಲ್ಲಿ ಅವು ಋಕ್ಸಂಹಿತ ಶ್ಲೋಕಗಳೆಂದೇ ಗಣಿಸಲ್ಪಟ್ಟಿವೆ.] ಶ್ಲೋಕಗಳು ಉದಾಹೃತವಾಗಿವೆ. ಇವು ನಿತ್ಯ ನಿರ್ದೋಷ ವೇದವಾಕ್ಯಾನುಸಾರಿಯಾಗಿ ವೇದವ್ಯಾಸ ರಚಿತವಾಗಿ ನಿಃಸಂಶಯ ಜ್ಞಾನಜನಕವಾಗಿವೆ. ಇಂಥ ಋಕ್ಸಂಹಿತಾವಾಕ್ಯಗಳಿಗೆ ಪದ್ಮನಾಭತೀರ್ಥಾದಿಗಳ ವಾಕ್ಯವು ವಿರೋಧವಾಗಿ ಬಂದರೆ, ಆ ಪದ್ಮನಾಭತೀರ್ಥಾದಿಗಳ ವಾಕ್ಯವೇ ಅಪ್ರಮಾಣವಾಗುತ್ತೆ. ಸಂಹಿತಾವಾಕ್ಯವು ಅಪ್ರಮಾಣವಾಗುವುದಿಲ್ಲ. ವೇದಕ್ಕೂ ಪುರಾಣ ವಾಕ್ಯಕ್ಕೂ ವಿರೋಧ ಬಂದರೆ ಆ ಪುರಾಣ ವಾಕ್ಯವೇ ಅಪ್ರಮಾಣವೆಂದು ನಿಶ್ಚಯಿಸಬೇಕು. ಹೀಗೆ 3-4-4, ಅನುವ್ಯಾಖ್ಯಾನದಲ್ಲೇ ಇದೆ. ಮ.ತಾ.ನಿ. I 31, 46, 48 ರಲ್ಲೂ ಸ್ಮೃತಿಸಂಹಿತಾದಿಗಳಿಗೆ ವಿರೋಧಿಯಾದ ತಾಮಸ ಪುರಾಣವಾಕ್ಯ ಅಥವಾ ಅನ್ಯ ಮನುಷ್ಯ ವಾಕ್ಯವೂ ಅಪ್ರಮಾಣವೆಂದೇ ಉಕ್ತವಾಗಿದೆ. ಆದ್ದರಿಂದ ಮೂಲ ಸಂಹಿತೆಗೆ ವಿರುದ್ಧವಾದರೆ ಪದ್ಮನಾಭತೀರ್ಥರ ವಾಕ್ಯವೇ ಅಪ್ರಮಾಣವಾಗುತ್ತೆಂದು ಕೈಮುತ್ಯ ನ್ಯಾಯ ಸಿದ್ಧವಾಗಿದೆ. |
| ಆದರೆ ಪ್ರಕೃತದಲ್ಲಿ ಋಕ್ಸಂಹಿತಾ ವಾಕ್ಯಕ್ಕೂ ಪದ್ಮನಾಭತೀರ್ಥರ ವಾಕ್ಯಕ್ಕೂ ವಿರೋಧವೇ ಇಲ್ಲವಾದ್ದರಿಂದ ಅವರ ವಾಕ್ಯಗಳು ಅಪ್ರಮಾಣವಲ್ಲ. ಪದ್ಮನಾಭಾರ್ಯರ ವಾಕ್ಯಗಳು ವ್ಯಧಿಕರಣಗಳು (ಭಿನ್ನ ವಿಷಯಕವಾದುವು). ಋಕ್ಸಂಹಿತಾ ವಾಕ್ಯಗಳು "ಲಾತವ್ಯ ನಾಮಕರು ಭಾವಿ ವಾಯುದೇವರು; ಆ ಋಜುಶ್ರೇಷ್ಠರು ಪ್ರಥಮಾವತಾರದಲ್ಲಿ ಸತ್ಯಲೋಕಸ್ಥ ವಿಶ್ವನಾಮಕ ಹರಿಯನ್ನು ಪಾಠಪ್ರವಚನಾದಿ ಮಧುರ ವಾಕ್ಯಗಳಿಂದ ಸೇವಿಸಿದರು; ದ್ವಿತೀಯಾವತಾರದಲ್ಲಿ ರುಕ್ಮಿಣಿ ಪತ್ರವನ್ನು ಕೃಷ್ಣನಿಗೆ ತಂದುಕೊಟ್ಟು ಜರಾಸಂಧ ಶಿಶುಪಾಲಾದಿಗಳ ಸೈನ್ಯನಾಶಕ್ಕೆ ಕಾರಣರಾದರು; ತೃತೀಯಾವತಾರದಲ್ಲಿ ವಾದಿರಾಜಯತಿಗಳಾಗಿ ಅವತರಿಸಿ ಮಧ್ವಶಾಸ್ತ್ರ ಪ್ರಚಾರವನ್ನು ಸಿದ್ಧಿಪ್ರದವಾದ ರೀತಿಯಲ್ಲಿ ಮಾಡಿದರು. ಹೀಗೆ ಬಳಿತ್ಥಾಸೂಕ್ತವೂ ಇವರನ್ನು ಪ್ರತಿಪಾದಿಸುತ್ತದೆ" ಎಂದು ಹೇಳುತ್ತವೆ. |
| ಪದ್ಮನಾಭತೀರ್ಥರ ಟೀಕೆಯಲ್ಲಿ "ಇನ್ನೂರು" ಋಜುಗಳಿದ್ದಾರೆ. ಅದರಲ್ಲಿ ಚತುರ್ಮುಖ ಬ್ರಹ್ಮದೇವರೂ ಸೇರಿ ಅವರ ಹಿಂದಿನ ನೂರು ಜನರು ಸ್ವಯೋಗ್ಯಪೂರ್ಣ ಅಪರೋಕ್ಷವುಳ್ಳವರು. ಇನ್ನು ಹಿಂದಿನ ನೂರು ಜನರು ಸ್ವಯೋಗ್ಯಪೂರ್ಣ ಅಪರೋಕ್ಷ ಹೊಂದಿಲ್ಲ. ಅವರಲ್ಲಿ ಬ್ರಹ್ಮದೇವರ ದೆಸೆಯಿಂದ ಹಿಂದಿನ ನೂರಒಂದನೆಯವರು ಸ್ವಯೋಗ್ಯ ಪೂರ್ಣ ಅಪರೋಕ್ಷ ಹೊಂದಿದಾಗ ತಮ್ಮ ಪೂರ್ವದಲ್ಲಿರುವ ಋಜು ಶತಕದ ಗುಂಪನ್ನು ಬಿಟ್ಟು ಮುಂದಿನ |

ಶತಕದ ಮೊದಲನೆಯವರಾಗಿ ತೇರ್ಗಡೆ ಹೊಂದಿ ಕಲ್ಕಿ ನಾಮಕರಾಗಿ ಬ್ರಹ್ಮದೇವರ ಹಿಂದಿನ ನೂರನೆಯವರಾಗಿ ಹುಟ್ಟುತ್ತಾರೆ. ಆಗ ಅವರನ್ನು 'ಲಾತವ್ಯರು' ಎಂದರೆ ಮೊದಲನೆ ನೂರರ ಗುಂಪಿನಿಂದ ಎರಡನೆ ನೂರಿನ ಗುಂಪಿಗೆ ತರಲ್ಪಟ್ಟವರು; ಶಿಷ್ಯರಿಂದ ಇನ್ನು ಮೇಲೆ ಉಪಾಸಿತರಾಗಿ ಪ್ರವಚನಾದಿ ಕಾರ್ಯರತರು; ಗೂಢ ತಪಸ್ಸು ಮಾಡುವ ನಿಯಮರಹಿತರು" ಎಂದು ಕೊಂಡಾಡಲ್ಪಡುತಾರೆ. ಪೂರ್ಣಾಪರೋಕ್ಷ ಹೊಂದಿ ಕೃತಕೃತ್ಯರಾದ ಆ ಋಜುಗಳು ಹೀಗೆ ಲಾತವ್ಯ ಎಂದು ಕರೆಯಲ್ಪಡುವ ಪದವನ್ನು ಅಲಂಕರಿಸಿ "ಉಗ್ರತಪಾ" ನಾಮಕ ಭಾವಿ ರುದ್ರ ಪದಯೋಗ್ಯರಿಂದ ಸೇವಿತರಾಗಿ ಅವರಿಗೆ ವಿಷ್ಣುಶಾಸ್ತ್ರವನ್ನು ಉಪದೇಶ ಮಾಡುತ್ತಾರೆ ಎಂದು ಹೇಳಲ್ಪಟ್ಟಿದೆ. ಹೀಗೆ ಭಿನ್ನ ವಿಷಯಕವಾದುದರಿಂದ ವಿರೋಧವೇ ಇಲ್ಲ.

ಇಲ್ಲಿ ಶಂಕೆ ಏನೆಂದರೆ - 'ವಾಮನ ಪುರಾಣದಲ್ಲಿ ದ್ವಿತೀಯ ಋಜು ಶತಕದ ಪ್ರಥಮ ಋಜುವಿಗೆ 'ಕಲ್ಕಿ' ಎಂಬ ನಾಮವು ಹೇಳಲ್ಪಟ್ಟಿದೆ. ಇಲ್ಲಿ ಪದ್ಮನಾಭತೀರ್ಥರಿಂದ ಅವರನ್ನೇ 'ಲಾತವ್ಯ' ಎಂದು ನಿರ್ದೇಶಮಾಡಿ ಆ ನಾಮದ ಅರ್ಥವು ಹೇಳಲ್ಪಟ್ಟಿದೆ. ಆದ್ದರಿಂದ ಸಂಶಯವು ಬರುತ್ತೆ." ಎಂದರೆ ಸತ್ಯವೇ. ಆದರೆ ಪ್ರಶ್ನೆ ಮಾಡುವುದಕ್ಕೆ ಬೇಕಾದ ವಿರೋಧ ಕಂಡಿಲ್ಲ. "ಮುಂದಿನ ಕಲ್ಪದಲ್ಲಿ ವಾಯುದೇವರಾಗುವರು ಈ ಕಲ್ಪದಲ್ಲಿ ಲಾತವ್ಯರೆಂದು ಕರೆಯಲ್ಪಡುವುದಿಲ್ಲ" ಎಂದು ಪದ್ಮನಾಭತೀರ್ಥರು ಬರೆದಿದ್ದರೆ ವಿರೋಧ ಬಂದು ಸಂಶಯದಿಂದ ಪ್ರಶ್ನೆ ಮಾಡಬಹುದಾಗಿತ್ತು. ಅಥವಾ "ದ್ವಿತೀಯ ಋಜು ಶತಕದಲ್ಲಿ ಪ್ರಥಮ ಋಜುಗಳು ಲಾತವ್ಯರಾದರು; ತೊಂಭತ್ತೆಂಟನೆಯ ಋಜುಗಳಿಗೆ ಲಾತವ್ಯರೆಂಬ ಹಸರಿಲ್ಲ" ಎಂದು ಹೇಳಿದ್ದರೂ ವಿರೋಧ ಬರುತ್ತಿತ್ತು. ಪದ್ಮನಾಭತೀರ್ಥರು ಹಾಗೆಲ್ಲಾ ಬರೆದಿಲ್ಲ. ಆದ್ದರಿಂದ ವಿರೋಧವಿಲ್ಲದೇ ಇರುವುದರಿಂದ "ಪ್ರಮಾಣ ವಿರುದ್ಧ" ಎಂದು ಹೇಳಿದ್ದು ತಪ್ಪೇ.

ಆದರೂ ದ್ವಿತೀಯ ಶತಕದ ಪ್ರಥಮ ಋಜುವಿಗೆ "ಕಲ್ಕಿ" ಎಂಬ ಹೆಸರಿದ್ದು "ಲಾತವ್ಯ" ಎಂಬ ಹೆಸರು ಹೇಗೆ ಬಂತು ಎಂದರೆ ಅವರಿಗೆ "ಲಾತವ್ಯ" ಎಂಬ ಹೆಸರು ಯೌಗಿಕವು. ಹಾಗೆ ತೋರಿಸಲು ಸುಧಾ ಗ್ರಂಥದಲ್ಲಿ "ಆದಾತವ್ಯಃ" ಎಂದು ವ್ಯುತ್ಪತ್ತಿಯು ಕೊಡಲ್ಪಟ್ಟಿದ. ತಥಾಚ ಅವರಿಗೆ ಜನ್ಮತಃ, ರೂಢಿಯಿಂದ ಬಂದ ಹೆಸರು 'ಕಲ್ಕೀ' ಎಂಬುದು. ಅದು ಪ್ರಧಾನ ಹೆಸರು. ಅವರಿಗೆ ಕಾರ್ಯ ವಿಶೇಷದಿಂದ ಪದಪ್ರಾಪ್ತವಾಗಿ ಅವರೇ 'ಲಾತವ್ಯ' ಎಂಬ ಯೌಗಿಕ ಹೆಸರುಳ್ಳವರೂ ಆದರು. ಹೀಗೆ ಅವರಿಗೆ ಎರಡು ಹೆಸರನ್ನೂ ಒಪ್ಪಿದ್ದರಲ್ಲಿ ವಿರೋಧವೇನೂ ಇಲ್ಲ. ಪ್ರಧಾನ ವಾಯುದೇವರ ದೆಸೆಯಿಂದ ಅವ್ಯವಹಿತ ಪೂರ್ವಕಲ್ಪದ ಋಜುಗಳು ಜನ್ಮತಃ ಲಾತವ್ಯ ಎಂಬ ರೂಢಿ ಪ್ರಾಚುರ್ಯದ ಹೆಸರುಳ್ಳವರು. ಲಾತವ್ಯ ಎಂಬುದು ಅವರ 'ಪದ'ದ ಹೆಸರಲ್ಲ. ಬ್ರಹ್ಮತ್ವವು ಪದವು. ವಾಯುತ್ವವೆಂದೂ ಪದವಿದೆ. ಇತರ ಹಿಂದಿನ 97 ಋಜುಗಳಿಗೆ ಪದವಿಲ್ಲ. ಆದರೆ ಬ್ರಹ್ಮದೇವರ ಹಿಂದಿನ ನೂರನೆಯವರಾದ 'ಕಲ್ಕಿ' ನಾಮಕ ಋಜುವಿಗೆ 'ಲಾತವ್ಯ' ನಾಮಕ ಪದವೂ ಉಂಟು. ಇದರಿಂದ 'ಪರಿಮಳ' ಗ್ರಂಥದ ವಿರೋಧವೂ ತಪ್ಪಿತು. 'ಪರಿಮಳ'ದಲ್ಲಿ ನೂರನೆಯ ಋಜುವಿಗೆ 'ಲಾತವ್ಯ' ಎಂದೂ ಹೆಸರಿದೆ ಎಂದು ಹೇಳಿದ್ದಾರೆಯೇ ಹೊರತು, ರೂಢಿ ಪ್ರಾಪ್ತವಾದ ಜನ್ಮನಾಮ 'ಲಾತವ್ಯ' ಎಂದು ಅವರಿಗೆ ಇದೆ ಎಂದು ಬರೆದಿಲ್ಲ. 'ನಾಮ' ಪದವು ಸಾವಕಾಶವು. ಜನ್ಮನಾಮಕ್ಕೂ ಉಂಟು, ಯೌಗಿಕ ಗುಣ ಬೋಧಕ ನಾಮಕ್ಕೂ ಉಂಟು. ಆದ್ದರಿಂದ ಸಂಶಯಕ್ಕೆ ಪರಿಹಾರವಿದೆ.

ಇನ್ನು 'ಕಲ್ಕಿ' ಎಂಬ ಹೆಸರನ್ನು ಮೊದಲನೇ ಋಜುವಿಗೂ 'ಲಾತವ್ಯ' ಎಂಬ ಪ್ರಚುರ ರೂಢಿಪ್ರಾಪ್ತ ಜನ್ಮನಾಮವನ್ನು ತೊಂಭತ್ತೆಂಟನೆಯ ಋಜುವಿಗೂ ನಿರ್ದೇಶ ಮಾಡಿರುವ 'ವಾಮನ ಪುರಾಣ' ವಾಕ್ಯವು 1645 ಕ್ರಿಸ್ತಾಬ್ದದಲ್ಲಿ ವಾ.ಗು.ಚ. ಗ್ರಂಥಕಾರರಿಂದ ಉದಾಹರಿಸಲ್ಪಟ್ಟಿದೆ. ಅದೇ ವಾಮನ ಪುರಾಣ ವಾಕ್ಯವು ಪುನಃ 1875 ಕ್ರಿಸ್ತಾಬ್ದದಲ್ಲಿ ಭಿನ್ನ ದೇಶಸ್ಥರಾದ, ಅಮುದ್ರಿತ ವಾ.ಗು.ಚ. ಗ್ರಂಥ ನೋಡದ, ಜಗನ್ನಾಥದಾಸರಿಂದ ತಮ್ಮ "ಹರಿಕಥಾಮೃತಸಾರ"ದಲ್ಲಿ ಉದಾಹೃತವಾಗಿದೆ. ಇಬ್ಬರು ಗ್ರಂಥಕರ್ತರೂ ಭಿನ್ನ ಭಿನ್ನ ತತ್ತದ್ದೇಶೀಯ ಲಿಖಿತ ವಾಮನ ಪುರಾಣ ಗ್ರಂಥಗಳನ್ನು ನೋಡಿ ಈ ವಾಕ್ಯಗಳನ್ನು ಆರಿಸಿಕೊಂಡಿದ್ದಾರೆಂದು ನಿಶ್ಚಯಿಸಬಹುದು. ಉಭಯ ಗ್ರಂಥಕಾರರ ಆರಿಕೆಯಲ್ಲೂ ಪ್ರಥಮ ಋಜುವಿನ ಹೆಸರು "ಕಲ್ಕಿ", ತೊಂಭತ್ತೆಂಟನೆಯ ಋಜುವಿನ ಹೆಸರು "ಲಾತವ್ಯ" ಎಂಬುದು. ಪ್ರಥಮ ಋಜುವಿಗೆ 'ಕಲ್ಕಿ', ಎಂಬ ರೂಢನಾಮದ ಜೊತೆಗೆ ವಿಶೇಷಾಪರೋಕ್ಷ ಹೊಂದಿ ಪರೀಕ್ಷಾ ವಿಜಯ ಪ್ರಯುಕ್ತ 'ಲಾತವ್ಯ' ಎಂಬ ಪದನಾಮವೂ ಅವರಿಗೆ ಬರಲಿಲ್ಲ ಎಂದು ವಾಮನ ಪುರಾಣ ಹೇಳಿಲ್ಲ. ಇತರ ಯಾವ ಪ್ರಮಾಣವೂ ಹೇಳಿಲ್ಲ. ಆದ್ದರಿಂದ ಯಾವ ಪ್ರಮಾಣ ವಿರೋಧವೂ ಇಲ್ಲದ್ದರಿಂದ ಈ ಕೋಲಾಹಲವನ್ನು ನಿಲ್ಲಿಸಬಹುದು. ಉಭಯ ಗ್ರಂಥಕಾರರ ರೀತಿಯಿಂದಲೂ 98ನೆಯ ಋಜುಗಳು "ಲಾತವ್ಯ"ರು. ಆ 'ಲಾತವ್ಯ' ನಾಮವು ಅವರಿಗೆ ಕೇವಲ ಜನ್ಮತಃ ಪ್ರಾಪ್ತ ಹೆಸರು. ಕಾರ್ಯವಿಶೇಷ ಸಾಧನೆಮಾಡಿ ಬಂದದ್ದಲ್ಲ.

"ಪ್ರಮೇಯಮುಕ್ತಾವಳಿ"ಯ ಕರ್ಣಾಟಕ ಭಾಷಾವಾಕ್ಯವು ಪೂರ್ವಪಕ್ಷಿಗಳಿಂದಲೇ ಉದಾಹೃತವಾಗಿದ್ದರೂ, ನಮ್ಮಿಂದ ನಿರೂಪಿತವಾದ ನಿಶ್ಚಯಕ್ಕೇ ಸಾಧಕವಾಗಿದೆ. "ಒಬ್ಬ ಋಜುವಿಗೆ ನೂರು ಕಲ್ಪ ಸಾಧನವಾಯಿತೋ ಆತನು "ಲಾತವ್ಯ" ಎನ್ನಿಸಿಕೊಳ್ಳುತ್ತಾನೆ. ಆ ಲಾತವ್ಯ ಪದದಲ್ಲಿ ವಿಶೇಷಾಪರೋಕ್ಷವಾಗುತ್ತದೆ. ಆ ಮೇಲೆ 98 ಕಲ್ಪ ಸಾಧನೆ ಮಾಡಲಿಕ್ಕೆ "ವಾಯುಪದ" ಪ್ರಾಪ್ತವಾಗುತ್ತದೆ" ಎಂದಿದೆ. ತಥಾ ಚ 'ಕಲ್ಕಿ' ನಾಮಕ ಋಜುವಿಗೆ ಸನ್ಮಾನ ವಿಶೇಷ ರೂಪವಾಗಿ ಲಾತವ್ಯ ನಾಮಕ ಹೆಸರೂ ಪದವಿಯೂ ಬಂತು ಎಂದು ಹೇಳಲು ಅಡ್ಡಿಯಿಲ್ಲ. ಆದ್ದರಿಂದ ಋಕ್ಸಂಹಿತಾ ವಾಕ್ಯಕ್ಕೆ ಟೀಕಾ ವಿರೋಧವೇನೂ ಬಂದಿಲ್ಲ. 98ನೆಯ ಋಜುವಿಗೆ "ಲಾತವ್ಯ" ಎಂಬ ಹೆಸರಿರುವುದೇ ಅಪ್ರಾಮಾಣಿಕವೆಂಬ ಪೂರ್ವಪಕ್ಷಿಗಳ ಕಲ್ಪನೆಯು ನಿರಾಧಾರ ಕಲ್ಪನೆ. ವಾಮನ ಪುರಾಣ ವಾಕ್ಯಕ್ಕೂ ವಿರುದ್ಧ. ವಾ.ಗು.ಚ. ಹರಿಕಥಾಮೃತ ಸಾರಗಳಿಗೂ ವಿರುದ್ಧ. ಪ್ರಥಮ ಋಜುವಿಗೆ ಲಾತವ್ಯನಾಮ ಬಂದ ಮೇಲೆ 98ನೆಯವರಿಗೆ ಲಾತವ್ಯ ನಾಮ ಕೂಡುವುದಿಲ್ಲ ಎಂಬುದು ಪ್ರಮಾಣ ವಿರುದ್ಧ ಆರ್ಥಿಕ ಕಲ್ಪನಾ. ಕಲ್ಪಕ ಪ್ರಮಾಣವೇ ಇಲ್ಲ. ತ.ಪ್ರ., III 1-3 ಪುಟ 138 "ಆರ್ಥಿಕ ಕಲ್ಪನಾಯಾಶ್ಚ ವಿಶೇಷ ಪ್ರಮಾಣಮಂತರೇಣ ಅಸಂಭವಾತ್" ಎಂದಿದೆ. ವಿಶೇಷ ಪ್ರಮಾಣವಿಲ್ಲದೆ ಆರ್ಥಿಕ ಕಲ್ಪನೆ ಮಾಡಕೂಡದೆಂದಿರುವುದರಿಂದ ಪುರಾಣೋಕ್ತ "ಲಾತವ್ಯ" ನಾಮವು 98ನೆಯ ಋಜುವಿಗೆ ಜನ್ಮತಃ ಪ್ರಾಪ್ತವಾದುದು ಯುಕ್ತವೇ ಆಗುತ್ತೆ. ಪ್ರಮಾಣ ವಿರೋಧವಿಲ್ಲವಾದ್ದರಿಂದ ಗ್ರಾಹ್ಯವೇ.

ಕಿಂಚ ಪ್ರಮಾಣವಿರುದ್ಧ ವಿಷಯ ಪ್ರತಿಪಾದಕವಾದ್ದರಿಂದ ಋಕ್ಸಂಹಿತಾ ವಾಕ್ಯವು ಕೃತಕವೆಂಬ ಪೂರ್ವಪಕ್ಷಿಗಳ ನಿಶ್ಚಯವೂ ಅಸಾಧುವೇ. ಪುರಾಣಗಳಲ್ಲಿ ಪರಸ್ಪರ ವಿರೋಧವೂ ಶ್ರುತಿವಿರೋಧವೂ ಅಲ್ಲಲ್ಲಿ ಪ್ರಮಿತವಾಗಿದೆ. [ಭಾಗ.ತಾ X 16-23 ಶ್ರೀದಾಮಾ ಕೃಷ್ಣಮುವಾಹ.] ಪುರುಷ ವ್ಯತ್ಯಾಸ, ದೇಶ ವ್ಯತ್ಯಾಸ, ಕಾಲ ವ್ಯತ್ಯಾಸ,

ಪ್ರಾತಿಲೋಮ್ಯಾದಿಗಳೂ ಪ್ರಮಿತವೇ ಆಗಿವೆ. ಮ.ತಾ.ನಿ. IX 128, 130, 133, 135ರಲ್ಲಿ ಆಚಾರ್ಯರೇ ಒಪ್ಪಿದ್ದಾರೆ: "ತ್ರಿಭಾಷಾಂ ಯೋನಜಾನಾತಿರೀತೀನಾಂ ಶತಮೇವ ಚ । ವ್ಯತ್ಯಾಸಾದೀನ್ ಸಪ್ತಭೇದಾನ್ ವೇದಾದ್ಯರ್ಥಂ ತಥಾವದೇತ್ ॥ ಸ ಯಾತಿ ನಿರಯಂ ಘೋರಮನ್ಯಥಾ ಜ್ಞಾನ ಸಂಭವಂ" ॥139॥ ಎಂದು ಅಪ್ಪಣೆ ಕೊಡಿಸಿದ್ದಾರೆ. ಪುರಾಣಗಳಲ್ಲೇ ಅಪ್ರಮಾಣ ವಾಕ್ಯಗಳಿವೆ. ಆ ವಿಷಯದಲ್ಲಿ ಸ್ಕಾಂದ ಪುರಾಣದ ಲಿಂಗ ಮೂಲಾನ್ವೇಷಣ ಕಥೆಯೇ ದೃಷ್ಟಾಂತ. ಆದರೂ ಆ ಪುರಾಣ ವಾಕ್ಯಗಳೆಲ್ಲಾ ಕೃತಕವೆಂದು ಯಾರೂ ಹೇಳಿಲ್ಲ. ಹೇಳಲು ಶಕ್ಯವೂ ಅಲ್ಲ. ವಾಲ್ಮೀಕಿ ರಾಮಾಯಣದಲ್ಲಿ ಸರ್ವವೂ ಪ್ರಾಮಾಣಿಕವಾಗಿಲ್ಲ. ದೃಷಾಂತ, ರಾವಣನಿಂದ ಸೀತಾಪಹಾರವಾಯಿತೆಂದಿದೆ. ಆದರೂ ಆ ಗ್ರಂಥವು ಕೃತಕವಲ್ಲ. ಭವಿಷ್ಯೋತ್ತರ ವೇಂಕಟೇಶ ಮಾಹಾತ್ಮ್ಯೆಯಲ್ಲಿ ಸೀತಾಪಹರಣವು ಪ್ರಮಾಣ ವಿರುದ್ಧವಾಗಿಯೇ ಕಥಿತವಾಗಿದೆ. ಆದರೂ ಆ ವಾಕ್ಯಗಳು ಕೃತಕವೆಂದು ಯಾರೂ ಕಲ್ಪಿಸಿಲ್ಲ. ಪ್ರಕೃತ ಋಕ್ಸಂಹಿತಾ ವಾಕ್ಯಕ್ಕಾಗಲಿ ವಾಮನಪುರಾಣಾದಿ ವಾಕ್ಯಕ್ಕಾಗಲೀ ಪ್ರಮಾಣಾಂತರ ವಿರೋಧವೂ ಇಲ್ಲ. ಆದ್ದರಿಂದ ಸಂಹಿತಾ ವಾಕ್ಯಕ್ಕೆ ಕೃತಕತ್ವ ಕಲ್ಪನವು ಅಯುಕ್ತವು ಮತ್ತು ಸಾಹಸಕಾರ್ಯವೇ ಸರಿ. ಯುಕ್ತಿಯಿಂದ ಆಗಮವನ್ನು ತಿರಸ್ಕರಿಸಲು ಯತ್ನಿಸಿದರೆ ಆ ಯುಕ್ತಿಯು ಪ್ರಮಾಣ ವಿರೋಧವೆಂದು ಪರಿಗ್ರಹಿಸಲ್ಪಡುವುದಿಲ್ಲ. ಮತ್ತೇನೆಂದರೆ ಬಾಧಿತ ಯುಕ್ತಿ, ದುರ್ಯುಕ್ತಿ, ದುಸ್ತರ್ಕ ಎಂದು ನಿಂದಿಸಲ್ಪಡುತ್ತೆ. ಬೃ.ಭಾ. (ಪುಟ 61) ಪ್ರಮಾಣವಿದೆ. "ಅನುಮಾಯಾ ವಿರೋಧಶ್ಚೇತ್ಪ್ರತ್ಯಕ್ಷೇಣಾಗಮೇನವಾ ॥ ಸೈವಾ ಪ್ರಮಾಣತಾಂಗಚ್ಛೇತ್ ಆಗಮದ್ವಿಟ್ ತಥಾಕ್ಷಜಂ.... ಸರ್ವತ್ರಾನಿವಾರ್ಯತ್ವಾಚ್ಚ ಪ್ರತ್ಯನುಮಾನಸ್ಯ ॥ ನಿರ್ಣಯಸ್ತ್ವಾಗಮೇನೈವ ನಾನುಮಾ ಆಗಮ ವರ್ಜಿತಾ ॥ ಕ್ವಚಿನ್ನಿರ್ಣೇತಿ ಹೇತುಃ ಸ್ಯಾದತಃ ಶಾಸ್ತ್ರಾದ್ವಿನಿರ್ಣಯಃ॥ ಇತಿ ಭಾರತೇ" ಎಂದಿದೆ.

ಆ) ಎರಡನೆಯದು ಅಪ್ರಾಮಾಣಿಕವು.... ಬಳಿತ್ಥಾಸೂಕ್ತ ಲಾತವ್ಯ ಪ್ರತಿಪಾದಕವಂಬಲ್ಲಿ ಸ್ವಲ್ಪವೂ ಪ್ರಮಾಣವಿಲ್ಲ. ಈ ವಿಷಯದಲ್ಲಿ ಋಜುತ್ವವಾದಿಗಳು "ವಿರೋಧಃ ಕರ್ಮಣೀತಿ ಚೆನ್ನಾನೇಕ ಪ್ರತಿಪತ್ತೇರ್ದರ್ಶನಾತ್" । 3-27 ಸೂತ್ರ ಭಾಷ್ಯಾದಿಗಳನ್ನು ಉದಾಹರಿಸಲು ಉಪಪಾದಿಸಿರುವುದು ಅತ್ಯಂತಾಸಂಗತವೇ" ಎಂದು ಪೂರ್ವಪಕ್ಷಿಗಳು 155ನೇ ಪುಟದಲ್ಲಿ ಹೇಳಿರುವುದೂ ಅಯುಕ್ತವೇ. ಬಳಿತ್ಥಾಸೂಕ್ತವು ಕೇವಲ ಒಬ್ಬ ವಾಯುದೇವತೆಯನ್ನೂ ಪ್ರತಿಪಾದಿಸುವುದಿಲ್ಲ. ಮತ್ತೇನೆಂದರೆ ಅನೇಕ ಋಜುಗಳನ್ನು ಪ್ರತಿಪಾದಿಸುತ್ತೆ. ಹಾಗೇ ಇಂದ್ರಸೂಕ್ತವು ಅನೇಕೇಂದ್ರ ಪದಯೋಗ್ಯ ಜೀವ ಪ್ರತಿಪಾದಕ; ರುದ್ರಸೂಕ್ತವು ಅನೇಕ ರುದ್ರ ಪದ ಯೋಗ್ಯರ ಪ್ರತಿಪಾದಕವೂ ಹೌದು; ಅಗ್ನಿ ಸೂಕ್ತವು ಅನೇಕಾಗ್ನಿ ದೇವತೆಗಳ ಪ್ರತಿಪಾದಕವೂ ಆಗಿದೆ. ಹೀಗೆ ಋಜುತ್ವ ಚಂದ್ರೋದಯದಲ್ಲಿ ಹೇಳಿದೆ. ಹಾಗಾದರೆ ಅನೇಕ ವಾಯು, ಆನೇಕ ಶೇಷ, ಅನೇಕ ಇಂದ್ರ, ಅನೇಕ ಅಗ್ನಿಗಳಿದ್ದಾರೆ ಎಂಬಲ್ಲಿ ಪ್ರಮಾಣವೇನು ಎಂದು ಪ್ರಶ್ನೆ ಬಂದರೆ "ನಚ ವಿರೋಧಃ ಕರ್ಮಣೀತಿ ಚೇನ್ನ.. ಇತ್ಯಾದಿ ಸೂತ್ರ ಭಾಷ್ಯಸಿದ್ಧತ್ವಾದಿತಿ" ಎಂದು । 3-27 ಸೂತ್ರಭಾಷ್ಯವನ್ನು ಉತ್ತರರೂಪವಾಗಿ ಋಜುತ್ವ ಚಂದ್ರೋದಯಕಾರರು ಉದಾಹರಿಸಿದ್ದಾರೆ.

ಅರ್ಥ:

"ಇಂದ್ರಾಯ ಸ್ವಾಹಾ" ಎಂದು ಈಗಿನ ಅರ್ಥಿಯು ಹೋಮಮಾಡಿದರೆ ಇಂದ್ರನಾಮಕ ಈಗಿನ ಪದಾರೂಢ ದೇವತೆಯು ಆ ಹೋಮವನ್ನು ಸ್ವೀಕರಿಸುತ್ತಾನೆ; ಈ ಇಂದ್ರನು ಬ್ರಹ್ಮಕಲ್ಪಾಂತದಲ್ಲಿ ನಿವೃತ್ತನಾದರೆ ಇನ್ನೊಬ್ಬ ಇಂದ್ರಪದವೀ ಯೋಗ್ಯ ಜೀವನು ಅವನ ಸಮಾನ ಸ್ವಭಾವ ಗುಣವುಳ್ಳವನು ಆ ಪದವಿಯನ್ನು ಹೊಂದಿ ಆ ಅಧಿಕಾರಾನುಸಾರ ತಾನೂ ಇಂದ್ರನಾಮವುಳ್ಳವನಾಗಿ "ಇಂದ್ರಾಯ ಸ್ವಾಹಾ" ಎಂದು ಅರ್ಥಿಗಳಿಂದ ದತ್ತವಾದ ಹೋಮವನ್ನು ಸ್ವೀಕರಿಸುತ್ತಾನೆ; ಆತನೂ ನಿವೃತ್ತನಾದರೆ ಮತ್ತೊಬ್ಬ ಅವನ ಸಮಾನನು ಇಂದ್ರನಾಗುತ್ತಾನೆ; ಹೀಗೆ ಅನೇಕರು ಇದ್ದಾರೆ ಎಂದು ಆ ಸೂತ್ರದಲ್ಲಿ ಹೇಳಲ್ಪಡುತ್ತೆ. ತಥಾಚ ಈಗಿನ ಅಧಿಕಾರೀಂದ್ರ, ಮುಂದಿನ ಅನೇಕ ಅಧಿಕಾರಿ ಇಂದ್ರರೂ ಆ ಇಂದ್ರ ಸೂಕ್ತಕ್ಕೆ ಪ್ರತಿಪಾದ್ಯ ವಿಷಯರೇ ಆಗಿದ್ದಾರೆ. ಕಾಲಿಕ ಭೇದದಿಂದ ಆಯಾಯ ಭಿನ್ನಭಿನ್ನ ಇಂದ್ರರಿಂದ ತತ್ತತ್ಕಾಲದ ಯಾಗದ ಹೋಮ ಸ್ವೀಕಾರಾದಿ ಗುಣ ವ್ಯಕ್ತಿಯಾಗುತ್ತೆ. ಆದ್ದರಿಂದ ಬಳಿತ್ಥಾಸೂಕ್ತವೂ ಈಗಿನ ವಾಯುದೇವರ ಗುಣಗಳನ್ನೂ ಆ ಪದವಿಯೋಗ್ಯ ಇತರ ಎಲ್ಲರ ಗುಣಗಳನ್ನೂ ಹೊಗಳುವುದರಿಂದ ಅನೇಕ ವಾಯುನಾಮಾರ್ಹ ಚೇತನ ವಿಷಯಕವೆಂದು ಸಿದ್ಧವಾಗುತ್ತೆ. "ವಿರೋಧಃ ಕರ್ಮಣಿ" ಇತ್ಯಾದಿ ಸೂತ್ರೋದಾಹರಣವು ಅಸಂಗತವಲ್ಲ. ವಾಯು, ರುದ್ರ, ಇಂದ್ರಾದಿ ಪದವೀಯೋಗ್ಯರು ಅನೇಕರಿದ್ದಾರೆಂದು ತಿಳಿಯಲೇ ಬೇಕಾಗಿದೆ.

ಕಿಂಚ ಬಳಿತ್ಥಾಸೂಕ್ತಕ್ಕೆ "ಮಂತ್ರಾದಿವದ್ವಾ ಅವಿರೋಧಃ" ಎಂಬ ಬ್ರ.ಸೂ.ಭಾ. III 5-8 ರಲ್ಲಿ ಹೇಳಿದ ನ್ಯಾಯದಿಂದ ವಾಯುದೇವರು ಮತ್ತು ತತ್ಸಮಾನ ಗುಣಸಂಪನ್ನ ಸರ್ವಚೇತನರ ಪರವಾಗಿ ಅರ್ಥಮಾಡಿ ಸ್ತುತಿಸಿದರೆ ಯಾವ ಪ್ರಮಾಣ ವಿರೋಧವೂ ಇಲ್ಲ, ಎಂದು ಪುಟ 9ರಲ್ಲಿ ತೋರಿಸಿಯಾಗಿದೆ.

ಹೀಗಿರುವಲ್ಲಿ ಬಳಿತ್ಥಾಸೂಕ್ತವು ಲಾತವ್ಯ ಪ್ರತಿಪಾದಕವಲ್ಲ ಎಂಬ ಪೂರ್ವಪಕ್ಷಿಗಳ ದುರ್ವಾದವು ಹೇಯವೇ. ಅದರ ದೋಷವೇನೆಂದರೆ ಪ್ರಮಾಣವಿಲ್ಲದೆ ಆರ್ಥಿಕ ಕಲ್ಪನೆ. ಬಳಿತ್ಥಾ ಸೂಕವು ವಾಯು ಪ್ರತಿಪಾದಕವೆಂದು ವಚನವಿರುವುದರಿಂದ ಅದು ಲಾತವ್ಯ ಪ್ರತಿಪಾದಕವಲ್ಲ ಎಂದು ಅವರು ವಾದಿಸಿದ್ದಾರೆ. ಈ ಮನೆಯಲ್ಲಿ ಕೃಷ್ಣರಾಯರಿರುವುದರಿಂದ ಅದರಲ್ಲಿ ರುಕ್ಮಿಣೀದೇವಿ ಇಲ್ಲ ಎಂದು ವಾದಿಸಿದ ಹಾಗಾಯಿತು. ಬಳಿತ್ಥಾಸೂಕ್ತವು ವಾಯುಭಿನ್ನ ಸಮಾನರನ್ನೂ ವಾಯುವಿಗಿಂತ ಉತ್ತಮರನ್ನೂ ಪ್ರತಿಪಾದಿಸುವುದಿಲ್ಲವೆಂದು ಕಲ್ಪನೆ ಮಾಡಿದರೆ ನಿರ್ಮೂಲ ಆರ್ಥಿಕ ಕಲ್ಪನೆಯಾಗಿ ಪ್ರಮಾಣ ವಿರೋಧ ಬರುತ್ತೆ. ಪೂರ್ವದಲ್ಲಿ ತೋರಿಸಿದ ಋಕ್ಸಂಹಿತಾ ವಚನವೂ ಋಗ್ಭಾಷ್ಯ ವಚನವೂ ವಿರೋಧಿಗಳು. "ಆರ್ಥಿಕ ಕಲ್ಪನೆಯನ್ನು ವಿಶೇಷಪ್ರಮಾಣದ ಬಲವಿಲ್ಲದೆ ಮಾಡಲೇಕೂಡದು" ಎಂಬ ತತ್ವಪ್ರಕಾಶಿಕಾ ವಚನವೂ ವಿರೋಧಿಸುತ್ತೆ.

ಅನುವ್ಯಾಖ್ಯಾನದಲ್ಲೂ "ಶಾಸ್ತ್ರೋಕ್ತ ವಸ್ತುನಶ್ಚೈವ ವ್ಯತ್ಪತ್ತಿಃ ಶಾಸ್ತ್ರಲಿಂಗತಃ" ಎಂದರೆ ಶಾಸ್ತ್ರೋಕ್ತ ಲಿಂಗ ಮತ್ತು ಪ್ರಕಾರಗಳಿಂದಲೇ ತಿಳಿಯಬೇಕೆಂದು ಹೇಳಲ್ಪಟ್ಟಿದೆ. ಇತಿಹಾಸ ಪುರಾಣಾದಿಗಳೆರಡರಿಂದಲೂ ವೇದವನ್ನು ಸರಿಯಾದ ಅರ್ಥದಲ್ಲಿ ನಯಿಸಬೇಕು; ವೇದವು ಇತಿಹಾಸಾದ್ಯವಿರೋಧ ವಾಗುವಂತೆ ಯೋಜನೆ ಮಾಡಲ್ಪಡಬೇಕು, ಎಂದು ಗೀತಾಭಾಷ್ಯದಲ್ಲೂ ಇದೆ. ಹೀಗಿರುವುದರಿಂದ ಋಕ್ಸಂಹಿತೆಯಲ್ಲಿರುವ ಬಳಿತ್ಥಾಸೂಕ್ತದ

ಅರ್ಥವು ತುಂಬ ಮಾನ್ಯವೇ. ಪ್ರಮಾಣ ಒಂದೂ ಇಲ್ಲದೆ ವಾ.ಗು.ಚ. ಮುಂತಾದ ಗ್ರಂಥಕಾರರಿಗೆ ನರಕದಾಯಕ ಶ್ರುತಿಸ್ಮೃತಿ ಕಲ್ಪಕತ್ವ ದೋಷವನ್ನು ಆರೋಪಿಸಬಾರದು. ವೇದಾದಿ ಶಾಸ್ತ್ರವೇ ವೇದ ವ್ಯಾಖ್ಯಾನವನ್ನು ಹೇಗೆ ಮಾಡುತ್ತೆ ಎನ್ನ ಕೂಡದು. ಅಲ್ಲಲ್ಲಿ ಮಾಡಿದೆ ಎಂದು ಸರ್ವಜ್ಞಾಚಾರ್ಯರೇ ತೋರಿಸಿದ್ದಾರೆ. ತತ್ವನಿರ್ಣಯ, ಋಗ್ಭಾಷ್ಯ, ತೈತ್ತಿರೀಯ ಭಾಷ್ಯಾದಿಗಳಲ್ಲಿ ಋಕ್ಸಂಹಿತಾ ಯಜುಃಸಂಹಿತಾದಿ ಮಂತ್ರಗಳಿಂದ ವೇದವಾಕ್ಯ ವ್ಯಾಖ್ಯಾನ ಕಂಡಿದೆ. ಇದರ ಮೇಲೆ ಮಾಡಿದ ಅರ್ಥಕ್ಕೆ ಪ್ರಮಾಣ ವಿರೋಧ ಇಲ್ಲದ ಮೇಲೆ ಕಲಹಕ್ಕೆ ಕಾರಣವೇನು? ಬಳಿತ್ಥಾಸೂಕ್ತವು ಅನ್ಯಋಜುಗಳನ್ನು ಪ್ರತಿಪಾದಿಸುತ್ತೆ ಎಂದು ಹೇಳಿದರೆ ಪ್ರಮಾಣ ವಿರೋಧ ಇಲ್ಲ. ಛಾಂದೋಗ್ಯ ಭಾಷ್ಯ 4-22 "ವಾಯುಪದಯೋಗ್ಯರು ಅನೇಕರು ಇಂದ್ರನಾಮಕರು;" ಆದ್ದರಿಂದ 'ಇಂದ್ರನಿಗೆ ಕೊಡುತ್ತೇನೆ' ಎಂದರೆ ಪ್ರಾಣನಿಗೆ ಅನ್ವಯಿಸುತ್ತೆ. ಐಶ್ವರ್ಯವುಳ್ಳವನಾದ್ದರಿಂದ ಸ್ವರ ಪ್ರತಿಪಾದ್ಯ ವಾಯುವು ಇಂದ್ರನೇ, ಇತ್ಯಾದಿ ವಚನಾನುಸಾರವಾಗಿ ಮತಿ, ಪೃಕ್ಷ, ದಶಪ್ರಮತಿ ಮುಂತಾದ ಪದಗಳು ವಾಯು ಸಮಾನರಲ್ಲಿ 'ಇಂದ್ರ' ಪದದಂತೆ ಅನ್ವಯಿಸಲ್ಪಡಲು ಶಕ್ಯವೇ. ವೇದಾರ್ಥ ಮಾಡುವ ಕಾಲದಲ್ಲಿ ಯೋಗಕ್ಕೆ (ಅವಯವಾರ್ಥಕ್ಕೆ) ಪ್ರಾಧಾನ್ಯ ಕೊಡಬೇಕು ಎಂದು ಕರ್ಮನಿರ್ಣಯದಲ್ಲಿ ಆಚಾರ್ಯರು ಕೊಟ್ಟಿರುವ ಪ್ರಮಾಣದಿಂದಲೂ ಸಿದ್ಧವಾಗುತ್ತೆ. ಹೀಗೆ ಬಹು ಕಾರಣಗಳಿಂದ ಬಳಿತ್ಥಾ ಸೂಕ್ತವು ಋಜುಗಣಸ್ಥ ವಾದಿರಾಜಗುರು ಪ್ರತಿಪಾದಕವೆಂದೇ ತೀರ್ಮಾನಿಸಬಹುದು.

"ಉಭಯವಚನಾದವಿರೋಧಃ" ಎಂಬ ಗೀತಾಭಾಷ್ಯೋಕ್ತನ್ಯಾಯಾನುಸಾರವಾಗಿಯೂ ಬಳಿತ್ಥಾಸೂಕವು ವಾಯುದೇವರನ್ನೂ ಲಾತವ್ಯದೇವರನ್ನೂ ಪ್ರತಿಪಾದಿಸುತ್ತೆಂದು ಪುಟ 198ರಲ್ಲಿ ತೋರಿಸಿದ್ದೇವೆ. ವಾಯು ಪ್ರತಿಪಾದಕವೆಂದೂ ವಾಕ್ಯವಿದೆ. ಲಾತವ್ಯ ಪ್ರತಿಪಾದಕವೆಂದೂ ವಾಕ್ಯವಿದೆ. ಆದ್ದರಿಂದ ಉಭಯ ಪ್ರತಿಪಾದಕವೆಂದು ಒಪ್ಪಿದರೆ ಬಾಧಕವಿಲ್ಲ. ಇಷ್ಟು ಬಗೆಯಾಗಿ ಹೇಳಿದರೂ ಬಳಿತ್ಥಾಸೂಕ್ತವು ವಾದಿರಾಜಗುರು ಪ್ರತಿಪಾದಕವಲ್ಲವೆಂದರೆ ಆ ಪೂರ್ವಪಕ್ಷಿಯು ಪ್ರಾಮಾಣ್ಯ ಪರತಸ್ತ್ವ ರೀತಿಯನ್ನೇ ಅವಲಂಬಿಸಿದಂತಾಗುತ್ತೆ. ಹಾಗೆ ನಿರ್ಮೂಲ ಶಂಕೆ ಮಾಡುವುದು ಉಚಿತವಲ್ಲ. ಹೀಗೆ "ಎರಡನೆಯದು ಅಪ್ರಾಮಾಣಿಕ" ವೆಂಬ ಪೂರ್ವಪಕ್ಷೋಕ್ತಿಯೂ ಸುಳ್ಳೇ ಆಯಿತು.

## 28 ಆಗಮ ವಿಚಾರವು:

**ಪುಟ 15-25 ಉಕ್ತಿ :**

"ವಾಯುದೇವರ ಪ್ರವೇಶ ಪರ್ಯಂತ ಲಾತವ್ಯರು ಗರ್ಭದಲ್ಲಿದ್ದು ಹೋಗುತ್ತಾರೆ, ಎಂದು ಋಕ್ಸಂಹಿತಾದಿ ವಚನಗಳಲ್ಲಿದೆ. ಅದು ವಿಶ್ವಪತಿ ತೀರ್ಥಿಯ, ಛಲಾರೀಯ, ಸುಮಧ್ವವಿಜಯ ಟೀಕಾ ವಿರುದ್ಧವಾಗಿದೆ. ಆದ್ದರಿಂದ ಆ ಋಕ್ಸಂಹಿತಾದಿ ವಾಕ್ಯಗಳಿಗೆ ಪ್ರಮಾಣ ವಿರುದ್ಧತ್ವವೇ ಇದೆ" ಇತ್ಯಾದಿ.

**ಪ್ರತ್ಯುಕ್ತಿ :**

ಋಕ್ಸಂಹಿತಾ ಸ್ವರೂಪಾಜ್ಞಾನವೇ ಈ ಉಕ್ತಿಗೆ ಕಾರಣವು. ಋಕ್ಸಂಹಿತೆಯು ಅನಾದಿ ಶ್ರುತಿಮೂಲವಾದ ಬಾದರಾಯಣ ಕೃತ ಸ್ಮೃತಿಯು. ಅಂಥ ಸಂಹಿತೆಗೆ ವಿರೋಧ ಬಂದರೆ ವಿಶ್ವಪತಿತೀರ್ಥರ ವಾಕ್ಯ, ಛಲಾರೀಯ ವಾಕ್ಯ

ಮತ್ತು ರಾಜಸ ತಾಮಸ ಪುರಾಣವಾಕ್ಯವೂ ಕೂಡ ಅಪ್ರಮಾಣವೆಂದೇ ತೀರ್ಮಾನಿಸಬೇಕು. ನಿರ್ದೋಷ ಸಂಹಿತೆಯು ಬಾಧಿತವಾಗುವುದಿಲ್ಲ. ಪೂರ್ವ ಪ್ರಕರಣದಲ್ಲಿ ಪ್ರಮಾಣ ಕೊಡಲ್ಪಟ್ಟಿದೆ.

ಪ್ರಕೃತದಲ್ಲಿ ಪೂರ್ವಪಕ್ಷಿಗಳಿಂದ ಸೂಚಿತವಾದ ವಿಶ್ವಪತಿ ವ್ಯಾಖ್ಯಾನ ಹೊರತು, ಭಾವಪ್ರಕಾಶಿಕಾದಿಗಳ ವಾಕ್ಯಗಳು ಸಂಹಿತೆಗೆ ಅವಿರುದ್ಧವೇ. ಹೇಗೆಂದರೆ

(i) ಪರಂ=ಅನ್ಯಂ ಶತ್ರುಂ ಚ ಎಂದು ನಾರಾಯಣ ಪಂಡಿತಾಚಾರ್ಯರ ಭಾವ ಪ್ರಕಾಶಿಕಾ ವಚನವಿದೆ. ಅನ್=ಭಿನ್ನರಾದ ಸೇವಾರ್ಥವಾಗಿ ಸ್ಥಿತರಾದ ಲಾತವ್ಯರನ್ನೂ, ತತ್ಸೇವಾರ್ಥವಾಗಿ ಸ್ಥಿತನಾದ ಸುಮತಿ ನಾಮಕನನ್ನೂ; ಶತ್ರುಂ=ಮಣಿಭದ್ರನಾಮಕ ದೈತ್ಯನನ್ನೂ, ಯಥಾಯೋಗ್ಯವಾಗಿ ಹೊರಗೆ ಕಳಿಸಿದರು ಎಂಬ ಯೋಜನೆಯು ಉಚಿತವಾಗಿದೆ. ಶ್ರೀಶ್ರೀ ಪ್ರದ್ಯುಮ್ನತೀರ್ಥ ಶ್ರೀಚರಣರು ಜೀರ್ಣವಾದ ಒಂದು ಪದ್ಮಪುರಾಣ ಪುಸ್ತಕದ ಒಂದು ಭಾಗದಲ್ಲಿ ಈ ಕಥೆಯನ್ನು ಅವರು ಐವತ್ತು ವರ್ಷಗಳ ಹಿಂದೆ ಶ್ರೀರಂಗಪಟ್ಟಣದಲ್ಲಿದ್ದಾಗ ಅಲ್ಲಿನ ಭಕ್ತರ ಮುಂದೆ ಪುರಾಣಪಾಠ ಹೇಳಿದ್ದರಂತೆ. ದೈತ್ಯನ ಹೆಸರು ಮಣಿಭದ್ರ ಎಂದಿತ್ತೆಂದು ಸ್ಮೃತಿ ಇದೆ ಎಂದು ಹೇಳಿದರು.

ii) ಶ್ರೀ ವಿಶ್ವಪತಿತೀರ್ಥರ ವ್ಯಾಖ್ಯಾನದಲ್ಲಿ ಪೂರ್ವೋಕ್ತ ಕಥೆಯು ಸೂಚಿಸಲ್ಪಟ್ಟು ಖಂಡಿಸಲ್ಪಟ್ಟಿಲ್ಲ. ಆದರೆ "ಹಾಗಾದರೆ ದೇಹಕ್ಕೆ ಹೇಗೆ ಮೂವತ್ತೆರಡು ಲಕ್ಷಣಗಳಾದವು?" ಎಂದು ಶಂಕಿಸಿಕೊಂಡು "ಸ್ವಸಂಪರ್ಕದಿಂದಲೇ ಸಂಪೂರ್ಣ ಲಕ್ಷಣ ಹೊಂದಿದ" ಎಂಬ ಪ್ರಮಾಣರಹಿತ ಕಲ್ಪನೆಯನ್ನು ಮಾಡಿದ್ದಾರೆ. ಆ ವ್ಯಾಖ್ಯಾನವು ಸ್ವಾರಸಿಕವಲ್ಲ. ಏಕೆಂದರೆ ಅಧ್ಯಾಹಾರವು ಮೂಲ ಮಧ್ವವಿಜಯ ವಾಕ್ಯಕ್ಕೆ ವಿರುದ್ಧವಾಗುತ್ತೆ. ಮಧ್ವವಿಜಯ ಮೂಲದಲ್ಲಿ "ಸಂಪೂರ್ಣ ಲಕ್ಷಣ ಚಣಂ ಪರಮ ಸುಂದರ ಮಂದಿರಂ ತತ್ ರಾಜೇವ ಪ್ರವಿವೇಶ" ಎಂದಿದೆ. ವಾಯುದೇವರು ಆ ಮಂದಿರ ಪ್ರವೇಶ ಮಾಡುವುದಕ್ಕಿಂತ ಮೊದಲೇ ಆ ಗರ್ಭ ಮೂವತ್ತೆರಡು ಲಕ್ಷಣ ಪೂರ್ಣವಾಗಿತ್ತು ಎಂದು ಬೋಧವಾಗುತ್ತೆ. "ತಮ್ಮ ಸಂಪರ್ಕದಿಂದಲೇ ಮೂವತ್ತೆರಡು ಲಕ್ಷಣ ಮಾಡಿಕೊಂಡು" ಎಂಬ ಅರ್ಥಕ್ಕೆ ವಿಶೇಷ ವಚನ ಸಹಾಯಬೇಕು ಅಂಥ ಪ್ರಮಾಣಾಂತರವು ವಿಶ್ವಪತಿತೀರ್ಥರಿಂದ ಉದಾಹೃತವಾಗಿಲ್ಲ. ಆದ್ದರಿಂದ ಆ ವ್ಯಾಖ್ಯಾನವು ಅಷ್ಟು ತೃಪ್ತಿಕರವಲ್ಲ.

iii) ತ.ಪ್ರ, III 1-20 ಗುರ್ವರ್ಥದೀಪಿಕೆಯಲ್ಲಿ (ಪುಟ 130) ಹೀಗಿದೆ: "ಗರ್ಭೇ ಪೂರ್ವಸಿದ್ಧಮೇವ ಶರೀರಂ ಕೇಚಿತ್" ಎಂಬಲ್ಲಿ ಹೇಗೆ ಮಧ್ವಾವತಾರದಲ್ಲಿ ಮುಖ್ಯವಾಯುವೋ ಎಂಬ ಉದಾಹರಣೆ ತಿಳಿಯಬೇಕು. ವಾಯುದೇವರ ಯೋಗ್ಯತಾನುಸಾರ ಮೂವತ್ತೆರಡು ಲಕ್ಷಣ ಉಳ್ಳ ತನದಿಂದ ತಾಯಿಯ ಶರೀರದಲ್ಲಿ ಗರ್ಭಗತ ದುಃಖಾನುಭವಜನಕ ಜೀವಾಂತರ ಪ್ರವೇಶದಿಂದ ಪರಿಣತವಾದ ದೇಹವನ್ನು ಪ್ರವೇಶಿಸಲು ಸಂಕಲ್ಪಿಸಿ, ಆ ಜೀವನನ್ನು ಹೊರಕ್ಕೆ ಕಳುಹಿಸಿ ವಾಯುದೇವರು ತಾನೇ ಈ ದೇಹಕ್ಕೆ ಅಭಿಮಾನಿಗಳಾಗಿ ಹೊಕ್ಕರು ಎಂದು ಭಾವ" ಎಂದಿದೆ. ಇದರಿಂದ ಸ್ವಸಂಪರ್ಕದಿಂದ ದೇಹವು 32 ಲಕ್ಷಣ ಪಡೆಯಿತು ಎಂಬ ವಿಶ್ವಪತಿತೀರ್ಥೀಯ ಕಲ್ಪನೆಯು ಅಂಗೀಕರಿಸಲ್ಪಟ್ಟಿಲ್ಲ.

| |
|---|
| ಇದರ ಮೇಲೆ ಇಲ್ಲಿಯೇ (ಪುಟ 130) ಪಾದ ಟಿಪ್ಪಣಿ ಇದೆ. "ಇಲ್ಲಿ ಅನೇಕ ಕೋಶಗಳಲ್ಲಿ "ಅನುಭವಿಸುವ" ಎಂಬ ಪಾಠವಿದೆ. ಕೆಲವು ಕೋಶಗಳಲ್ಲಿ "ಅನುಭವಜನಕ" ಎಂಬ ಪಾಠವೂ ಇದೆ. ಅವೆರಡೂ ಸಮಂಜಸವೇ. ಹೇಗೆಂದರೆ "ಮೂವತ್ತೆರಡು ಲಕ್ಷಣದ ದೇಹವು ಇತರರಿಗೆ ಅಯೋಗ್ಯವಾದರೂ, ನನಗೆ ಬೇಕೆಂದು ವರ ಪಡೆದ ದೈತ್ಯನೊಬ್ಬನು ತಾನು ಪಡೆದ ವರ ಫಲವಾದ ಗರ್ಭಜ ದುಃಖಾನುಭವ ಮಾಡಲು ಆ ಗರ್ಭದಲ್ಲಿ ಇದ್ದನೆಂದೂ, ಆ ದೈತ್ಯನಿಗೆ ದುಃಖಾನುಭವ ಜನಕರಾಗಿ ಶರೀರ ನಿಯಾಮಕತನದಿಂದ ಒಬ್ಬರು ಋಜುಗಣಸ್ಥರು ಶ್ರೀಮದಾಚಾರ್ಯರ ಪ್ರವೇಶ ಪರ್ಯ0ತ ಅಲ್ಲಿದ್ದರೆಂದೂ, ಪುರಾಣಾಂತರದ ವಾಕ್ಯಾನುಸಾರ ಎರಡೂ ಸರಿಯೆಂದು ಸಹಾನುಭೂತಿ ಯುಕ್ತ ವಾಚಕರಿಂದ ತಿಳಿಯಲ್ಪಡಬೇಕು" ಎಂದಿದೆ. |
| ಇಲ್ಲಿ ಪುರಾಣಾಂತರದ ವಾಕ್ಯ ಯಾವುದೆಂದರೆ ಸ್ಕಾಂದವು. ಆ ವಚನಗಳು ಋಜುತ್ವ ಚಂದ್ರೋದಯದಲ್ಲೂ, ಋಜುತ್ವ ಮಂಡನದಲ್ಲೂ ಉದಾಹೃತವಾಗಿವೆ. "ವಿಶುದ್ಧ ಪಾಜಕ ಕ್ಷೇತ್ರದಲ್ಲಿ ಅನಂತೇಶ್ವರ ಪೂಜಕನಾದ ವಿಶುದ್ಧಾತ್ಮನೂ ವ್ರತನಿಷ್ಠಿತನೂ ಆದ ಬ್ರಾಹ್ಮಣನೊಬ್ಬನು ಇರುವನು. ವೇದವತ್ಯಾಖ್ಯ ಭಾರ್ಯೆಯಲ್ಲಿ ಅವನ ದೆಸೆಯಿಂದ ಜಗತ್ಪತಿ ಪ್ರಾಣದೇವರು ಹುಟ್ಟುವರು. ಯದುಪುತ್ರೀ ಕುಂತಿಯಲ್ಲಿ ಹೇಗೆ ಭೀಮನು ಸ್ಪರ್ಶಮಾತ್ರದಿಂದ ಹುಟ್ಟಿದನೋ, ಹಾಗೆ ಮಧ್ವರೂಪದಿಂದ ಹುಟ್ಟುವರು. ಅದೇ ಶರೀರವು 32 ಲಕ್ಷಣವುಳ್ಳದ್ದು ಲಾತವ್ಯ ಋಜುವಿಗೆ ಪ್ರತಿ ಮಧ್ವಾವತಾರ ಕಾಲದಲ್ಲೂ ವಾಯು ಪ್ರವೇಶ ಪರ್ಯಂತ ಇರಲು ಕ್ಲೃಪ್ತವಾದದ್ದು. ಆ 32 ಲಕ್ಷಣವುಳ್ಳ ಗರ್ಭಸ್ಥ ಶರೀರದಲ್ಲಿದ್ದು ಲಾತವ್ಯರು ಸೇವೆಮಾಡಿ ಅನಂತರ ವಾಯು ಪದವಿಯನ್ನು ಹೊಂದಲು ಅರ್ಹರಾಗುತ್ತಾರೆ. ಅವರೇನೇ ಕಾಲಾಂತರದಲ್ಲಿ 'ವಾದಿರಾಜ' ರಾಗಿ ಅವತರಿಸುವರು. ಆ ಶರೀರವು ಮೂಲ ರಜೋಧಿಕ ಸತ್ವದಿಂದ ನಿರ್ಮಿತವಾದುದು. ಪಿತೃ ಮಾತೃ ಶುಕ್ಲಾದಿಗಳಿಂದ ಯಾವಾಗಲೂ ಹುಟ್ಟಿದ್ದಲ್ಲ ಎಂದಿದೆ. ಈ ಸ್ಕಾಂದ ಪ್ರಮಾಣವು ಋಕ್ಸಂಹಿತಾ ವಾಕ್ಯಗಳಿಗೆ ಸಮಾಖ್ಯಾ ರೂಪವಾಗಿದೆ. |
| iv) ಇನ್ನು ಛಲಾರೀಯ ವ್ಯಾಖ್ಯಾನದಲ್ಲಿ "ಸ್ವಸಂಪರ್ಕದಿಂದಲೇ" ಎಂಬ ಕಲ್ಪನೆ ಇಲ್ಲ. ಲಾತವ್ಯರು ಗರ್ಭದಲ್ಲಿರಲಿಲ್ಲ ಎಂದು ನಿಷೇಧ ವಾಕ್ಯವಿಲ್ಲ. ಕೇವಲ ದೈತ್ಯ ನಿಷ್ಕಾಸನದ ಕಥೆ ಇದೆ. ಅದು ಹೇಗೆ ಋಕ್ಸಂಹಿತಾ ವಾಕ್ಯಕ್ಕೆ ವಿರೋಧವಾಗುತ್ತೆ? ಭಾವಾಭಾವಗಳಿಗಷ್ಟೇ ಸಾಕ್ಷಾದ್ವಿರೋಧವು. ಆದ್ದರಿಂದ ಋಕ್ಸಂಹಿತಾ ಮತ್ತು ಸ್ಕಾಂದ ವಚನಗಳು ಪ್ರಬಲವು. ಛಲಾರೀಯ ಟೀಕೆಯು ಆ ಪ್ರಬಲ ವಚನಗಳಿಗೆ ಅವಿರುದ್ಧವಾಗಿದೆ. ವಿಶ್ವಪತಿ ಟೀಕೆಯು ಮಾತ್ರ ವಿರುದ್ಧವಾದ್ದರಿಂದ ಉಪೇಕ್ಷಣೀಯವೆಂದು ಸಿದ್ಧಿಸುತ್ತೆ. |
| 5) ಇಷ್ಟೇ ಅಲ್ಲ, ಬಹು ವರ್ಷದ ಹಿಂದೆ ಬರೆದು, ಅಮುದ್ರಿತವಾಗಿರುವ "ವಾದಿರಾಜ ಋಜುತ್ವ ಸಾಧನೆ" ಎಂಬ ಹಸ್ತಲಿಖಿತ ಗ್ರಂಥ ಭಾಗದಲ್ಲಿ ಇನ್ನೊಂದು ಅಪೂರ್ವ ವಿಷಯ ಸಂಗ್ರಹೀತವಾಗಿದೆ: "ಪೂರ್ವೋದಾಹೃತ ಸ್ಕಾಂದಪುರಾಣದಲ್ಲಿ ಮೂವತ್ತೆರಡು ಲಕ್ಷಣಯುಕ್ತ ಶರೀರದಲ್ಲಿ ಶ್ರೀಮದಾಚಾರ್ಯರ ಆಗಮನ ಪರ್ಯಂತ ಲಾತವ್ಯರ ಪ್ರವೇಶವಾಗಿತ್ತು. ಅನಂತರ ಜೀವದ ನಿರ್ಗಮನವು ಹೇಳಲ್ಪಟ್ಟಿದೆ. ಪ್ರಮಾಣಾಂತರದಲ್ಲಿ ಆ ಗರ್ಭದಲ್ಲಿ ಮಣಿಭದ್ರನ, ಹಾಗೂ ಸುಮತಿನಾಮಕ ಒಬ್ಬಾನೊಬ್ಬ ರುದ್ರಪದಯೋಗ್ಯ ಜೀವನ ವಾಸವಿತ್ತೆಂದು ಹೇಳಲ್ಪಟ್ಟಿದೆ. |

ಆದ್ದರಿಂದ ಸ್ಕಾಂದಗತ ವಾಕ್ಯಾರ್ಥವು ಅಪ್ರಮಾಣವೆಂದು ಶಂಕಿಸಕೂಡದು. ಒಂದೇ ಗೃಹದಲ್ಲಿ ಅನೇಕರು ಇರುವಂತೆ, ದೌಪದೀ ಶರೀರದಲ್ಲಿ ಇತರರ ಆವಾಸವಿದ್ದಂತೆ, ಲಾತವ್ಯಾವಿಷ್ಟ ಶರೀರದಲ್ಲಿ ಇನ್ನಿಬ್ಬರ ಆವಾಸಸ್ಥಾನವೂ ಯುಕ್ತವೇ .... .ಪ್ರಕೃತದಲ್ಲಿ ಲಾತವ್ಯ ಸೇವಾರ್ಥವಾಗಿ ಸುಮತಿ ಪ್ರವೇಶವೂ, ಬ್ರಹ್ಮದೇವರ ವರದ ದೆಸೆಯಿಂದ ಮಣಿಭದ್ರನ ಪ್ರವೇಶವೂ ನ್ಯಾಯವಾದ್ದರಿಂದ ವಿರೋಧಲೇಶವೂ ಇಲ್ಲ" **[ಈ ವಿವರ ಸುಮಾರು 1875 ರಲ್ಲಿ ಯಾರೋ ವಿದ್ವಾಂಸರಿಂದ ಕನ್ನಡದಲ್ಲಿ ರಚಿತವಾದ ಹನ್ನೆರಡು ಪುಟದ ಪುಸ್ತಕದಲ್ಲಿದೆ. ಸದರೀ ಪ್ರಾಚೀನ ಆಮುದ್ರಿತ ಪುಸ್ತಕವನ್ನು ಶ್ರೀ ಆರ್. ಗೋವಿಂದರಾಯರು ತಮ್ಮ 22ನೇ ನಂಬರ್ ನೋಟುಬುಕ್ಕಿನಲ್ಲಿ ಬರೆದುಕೊಂಡಿದ್ದಾರೆ. ಆ ನೋಟುಬುಕ್ಕಿಗೆ 'Contdential recordS pertaining to Sode Sri Vadiraja Mutt No. 22", ಎಂದು ಹೆಸರಿಟ್ಟಿದ್ದಾರೆ. ಆ ಪುಸ್ತಕದ 103 ನೇ ಪುಟದಲ್ಲಿ ಈ ವಿವರ ಬರೆಯಲ್ಪಟ್ಟಿದೆ. ]** ಎಂದಿದೆ. ಹೀಗೆ ಪ್ರಮಾಣ ಪ್ರಮಿತವಾದುದೆಲ್ಲಾ ಸಂಗ್ರಾಹ್ಯವೇ. ಆದರೆ ಪೂರ್ವಪಕ್ಷಗ್ರಂಥಕಾರರ ರೀತಿಯು ಪ್ರಾಬಲ್ಯ ದೌರ್ಬಲ್ಯಗಳನ್ನು ವಿಪರೀತವಾಗಿ ಕಲ್ಪಿಸಿರುವುದರಿಂದ ಹಾಸ್ಯಾಸ್ಪದವಾಗಿದೆ. ಋಕ್ಸಂಹಿತೆಯು ಸ್ವಭಾವತಃ ಪ್ರಬಲವಾದ ಸಾತ್ವಿಕ ಸ್ಮೃತಿಯು.

## 29.ಆಗಮ ವಿಚಾರ :

**ಪುಟ 16-13 ಉಕ್ತಿ :**

"ಸ್ಥಾಪಯಿಷ್ಯತಿ ಮಚ್ಛಾಸ್ತ್ರಂ" ಎಂದು ಹೇಳಲ್ಪಟ್ಟಿರುವುದು ಜಯತೀರ್ಥ, ವ್ಯಾಸತೀರ್ಥರಲ್ಲಿ ವ್ಯಭಿಚರಿತವಾಗಿದೆ. "ವಾದಿರಾಜಯತಿರ್ಭೂತ್ವಾ ಚೈತದ್ವಿಸ್ತಾರಯಿಷ್ಯತಿ" ಎಂಬ ಶಾಸ್ತ್ರ ವಿಸ್ತಾರಕತ್ವವು ಜಯತೀರ್ಥರಲ್ಲಿ ಅತಿಶಯವಾಗಿ ಕಂಡಿದೆ. ಅವರಿಗೇ "ಟೀಕಾಕಾರಾಃ" ಎಂಬ ಪ್ರಸಿದ್ಧಿ. ಗುರುರಾಜರೇ ಸ್ಪಷ್ಟವಾಗಿ ತೀರ್ಥ ಪ್ರಬಂಧದಲ್ಲಿ "ಮಾಧ್ವಗ್ರಂಥಾನ್ ಸ್ವಬಂಧೂನಿವ............ ಜಯಮುನಿರಸಕೃದ್ವೀಕ್ಷರೇಮೇ ಕೃತಾರ್ಥಃ" ಎಂದು ಅವರ ಮಧ್ವಶಾಸ್ತ್ರ ವಿಸ್ತಾರಕತೆಯ ಕೃತಾರ್ಥತೆಯನ್ನು ಹೊಗಳಿದ್ದಾರೆ. ಗುರುರಾಜರಿಗೆ ಆ ರೀತಿಯ ಪ್ರತೀತಿಯೇ ಇಲ್ಲ. ಇವರ ಸಮಾನತೆಯೂ ಈಷದತಿಶಯತೆಯೂ ವ್ಯಾಸರಾಜರಲ್ಲಿ ಇದ್ದೇ ಇದೆ. ಹೀಗೆ ಅಸಿದ್ಧ ಬೋಧಕವಾದ ಈ (ಬ್ರಹ್ಮವೈವರ್ತ) ವಾಕ್ಯಕ್ಕೆ ಪ್ರಾಮಾಣಿಕತ್ವವು ಹೇಗೆ? ಇತ್ಯಾದಿ.

**ಪ್ರತ್ಯುಕ್ತಿ:**

ಮೇಲ್ಕಂಡ ಪ್ರಮಾಣವು ಬ್ರಹ್ಮವೈವರ್ತದ ಚತುರ್ಮುಖ ವಚನವು. ಆ ವಾಕ್ಯಗಳಲ್ಲಿ "ಯಾರು ಕೃಷ್ಣನನ್ನು ಪೂಜಿಸುತ್ತಾರೋ ಅವರು ಋಜುವು; ಯಾರು ವಿಷ್ಣು ಶಾಸ್ತ್ರವನ್ನು ಸ್ಥಾಪನೆ ಮಾಡುತ್ತಾರೋ ಅವರು ಋಜುವು" ಎಂದು ವ್ಯಾಪ್ತಿಯು ಬೋಧಿಸಲ್ಪಟ್ಟಿಲ್ಲ. 'ತಾಯಿಯು ಕ್ಷೀರಾನ್ನ ಭೋಜನ ಮಾಡಿಸುತ್ತಾಳೆ' ಎಂಬ ವಾಕ್ಯಕ್ಕೆ ಯಾರು ಕ್ಷೀರಾನ್ನ ಭೋಜನ ಮಾಡಿಸುತ್ತಾಳೆಯೋ ಅವಳು ತಾಯಿ ಎಂದು ವ್ಯಾಪ್ತಿ ಬೋಧಿಸುವುದರಲ್ಲಿ ತಾತ್ಪರ್ಯವಿಲ್ಲ. ಮತ್ತೇನೆಂದರೆ ತಾಯಿಯು ಮಾಡಿದ ಪ್ರಾಮಾಣಿಕ ಕಾರ್ಯವನ್ನು ಆ ವಾಕ್ಯವು ವರ್ಣಿಸುತ್ತೆ. ಹಾಗೆ ಇಲ್ಲೂ "ಯಾವ ಋಜುಗಳೆಂದು ಪ್ರಸಿದ್ಧರಾದ ವಾದಿರಾಜ ಯತಿಗಳೋ ಅವರು ಅನೇಕ ದೇವಕಾರ್ಯಗಳನ್ನು ಮಾಡುತ್ತಾರೆ.

ನಿತ್ಯವೂ ವ್ಯಾಸಸೇವೆಯನ್ನು ಮಾಡುತ್ತಾರೆ. ಕೃಷ್ಣನನ್ನು ಪೂಜಿಸುತ್ತಾರೆ. ಸಚ್ಛಾಸ್ತ್ರವನ್ನು ಸ್ಥಾಪನೆ ಮಾಡುತ್ತಾರೆ" ಎಂದು ಅನೇಕ ಮಹಿಮೆಗಳು ಹೇಳಲ್ಪಟ್ಟಿವೆ. ಆದ್ದರಿಂದ ಸಮಕಾಲಿಕ ಇತರರಿಂದಲೂ, ಪ್ರಾಚೀನರಿಂದಲೂ; ಅವರವರ ಕಾಲದಲ್ಲಿ ಯಥೇಷ್ಟಶಾಸ್ತ್ರ ಸ್ಥಾಪನೆಯಾಗಿದ್ದರೂ ಅಲ್ಲಿ ವ್ಯಭಿಚಾರ ಪ್ರಸಕ್ತಿ ಇಲ್ಲ. ಮತ್ತೇನೆಂದರೆ ಭೂಭಾರ ಹರಣಾದಿಗಳನ್ನು ಮಾಡಿದ ಭೀಮನು ತನ್ನ ಸಮಾನಕಾಲದ ಅರ್ಜುನಾಶ್ವತ್ಥಾಮಾದಿಗಳಿಂದ ಕೂಡಿಕೊಂಡೇ ಶತ್ರುಗಳನ್ನು ಸಂಹರಿಸಿದನು. ಹಾಗೆ ವಾದಿರಾಜರು ತಮ್ಮ ಕಾಲದಲ್ಲಿದ್ದ ಇತರ ಯತ್ಯಾದಿಗಳಿಂದ ಕೂಡಿಕೊಂಡೇ ತತ್ವ ಪ್ರಚಾರ ಮಾಡಿದರೆಂದು ಪುರಾಣ ವಾಕ್ಯದ ತಾತ್ಪರ್ಯವು. ಪ್ರಿಂಟಾಗಿರುವ "ರೂಪ್ಯಪೀಠ ಮಾಹಾತ್ಮ್ಯ" ಗ್ರಂಥದಲ್ಲಿ ಹಾಗೆ ದೇವತೆಗಳು ಅನೇಕರು ಜೊತೆಜೊತೆಯಾಗಿ ಹುಟ್ಟಿ ತತ್ವ ಪ್ರಚಾರಸೇವೆ ಮಾಡಿದ್ದಾರೆಂದು ಸಮ್ಮತಿಯೂ ಇದೆ. "ತಂ ಮಧ್ವ ಮಾರುತಂ ಸರ್ವೇ ಪರಿವಾರತಯಾ ಸದಾ । ಸಂಸೇವಿತುಂ ಸುರಾಭೂಮಾವವತೇರುರತಿಶ್ರುತಂ" **(ಪುಟ 215 ಅಧ್ಯಾಯ 20 ಶ್ಲೋಕ 46)** ಎಂದು ವಾಕ್ಯವಿದೆ. ಶ್ರೀವಿಷ್ಣುತೀರ್ಥರು, ಶ್ರೀಪದ್ಮನಾಭತೀರ್ಥರು, ಶ್ರೀತ್ರಿವಿಕ್ರಮಪಂಡಿತಾಚಾರ್ಯರು, ಶ್ರೀಜಯತೀರ್ಥರು, ಶ್ರೀವ್ಯಾಸರಾಜರು ಕೂಡ ತಮ್ಮ ತಮ್ಮ ಜೀವನ ಕಾಲದಲ್ಲಿ ಯಥಾಶಕ್ತಿ ತತ್ವಸ್ಥಾಪನೆ ಕಾರ್ಯವನ್ನು ಮಾಡಿದವರೇ.

ಇವರೆಲ್ಲರಿಗೂ ಈಚಿನ ಕಾಲದವರು ವಾದಿರಾಜ ಗುರುಗಳು. ಕ್ರಿಸ್ತಾಬ್ದ 1518 ಪರ್ಯಂತ ವಾದಿರಾಜ ಗುರುಗಳು ವಿಶೇಷತಃ ಉಡುಪಿ ಪಟ್ಟಣವನ್ನು ಬಿಟ್ಟು ದೂರ ಸಂಚರಿಸಲಿಲ್ಲ. ಆಗ ದ್ವೈಮಾಸಿಕ ಪರ್ಯಾಯ ಕಾಲ. 1532-34ರಲ್ಲಿ ಅವರ ಪ್ರಥಮ ಪರ್ಯಾಯ ಪೂಜೆಯಾದ ನಂತರ, ಅಥವಾ ಮೊದಲೇ, ವ್ಯಾಸರಾಜ ದರ್ಶನ, ಕಾಶೀಯಾತ್ರಾದಿಗಳನ್ನು ಮಾಡಿದ್ದಾರೆ. 1534ರಲ್ಲಿ ವ್ಯಾಸರಾಜರು ಅತಿ ವೃದ್ಧರು. 1539ರಲ್ಲಿ ವೃಂದಾವನಸ್ಥರೇ ಆದರು. ಆದ್ದರಿಂದ ಅವರಿಬ್ಬರ ಸಾಧನಕಾಲವು ಭಿನ್ನಭಿನ್ನವೇ. ಶ್ರೀರಘೂತ್ತಮತೀರ್ಥರು ಸಮಕಾಲದವರೇ. ಆದರೂ ಅವರಿಬ್ಬರೂ ಸಂಗತರಾಗಿ ಯಾವುದಾದರೂ ದಿಗ್ವಿಜಯ ಕಾರ್ಯಮಾಡಿದ್ದು ಗೊತ್ತಾಗಿಲ್ಲ. ಅವರಿಬ್ಬರೂ ಮಧ್ವಶಾಸ್ತ್ರ ಪ್ರಚಾರ ಮಾಡಿಯೇ ಇದ್ದಾರೆ. ಶ್ರೀ ವಿಜಯೀಂದ್ರತೀರ್ಥರೂ ಅತ್ಯದ್ಭುತವಾಗಿ ಮಾಡಿದ್ದಾರೆ. ಒಂದು ಕಾಲದಲ್ಲಿ ಒಬ್ಬನೇ ಮಾನ್ಯ ಪಂಡಿತನಿಂದ ಮಧ್ವಸಿದ್ಧಾಂತವು ವಿಸ್ತರಿಸಲ್ಪಡಬೇಕೆಂದು ಯಾವ ಪ್ರಮಾಣವೂ ಇಲ್ಲ. ಮೂರು ನಾಲ್ಕು ಮಂದಿ ಅಸದೃಶ ಶೂರರು, ನಾಲ್ಕೈದು ಜನ ಗಣ್ಯ ವಿದ್ವಾಂಸರು, ಅನೇಕ ಪಂಡಿತರು ಅಲ್ಲಲ್ಲಿ ಹುಟ್ಟಿದವರು ಇವರೆಲ್ಲರೂ ಸೇರಿ ಭಿನ್ನಭಿನ್ನ ದೇಶಗಳಲ್ಲಿ ತತ್ವ ಪ್ರಚಾರ ಮಾಡುತ್ತಾರೆಂದು ತಿಳಿದರೆ ಲೋಕಾನುಭವಕ್ಕೂ ಇತಿಹಾಸಕ್ಕೂ ಅವಿರುದ್ಧವಾಗಿರುತ್ತೆ. ತಥಾಚ ಇತರ ದೇವಾಂಶದವರೂ ಈ ಶಾಸ್ತ್ರ ಸ್ಥಾಪನಕಾರ್ಯದಲ್ಲಿ ಸಹಾಯಕರಾಗಿದ್ದರೂ ಕೂಡ ಗುರುರಾಜರಿಗೆ ಪ್ರಮಾಣಸಿದ್ಧಶಾಸ್ತ್ರ ಸ್ಥಾಪಕತ್ವವು ತಪ್ಪಿಹೋಗುವುದಿಲ್ಲ. ಹೇಗೆ ಶೂರ ಕಪಿಸೇನೆಯೊಂದಿಗೇ ಹನುಮಂತನು ರಾಮಕಾರ್ಯ ಸಾಧಕನೋ, ಬಹು ಶೂರ ಭಾತ್ರಾದಿ ಯುಕ್ತನಾಗಿಯೇ ಭೀಮನು ಕೃಷ್ಣ ಕಾರ್ಯ ಸಾಧಕನೋ, ಮತ್ತು ಬಲರಾಮಾದಿಗಳಿದ್ದುದರಿಂದ ಭೂಭಾರಹರಣ ಕಾರ್ಯದಲ್ಲಿ ಹರಿಸೇವಾಂಗತ್ವವು ಭೀಮನಿಗೂ ತಪ್ಪಿಲ್ಲವೋ, ಹಾಗೆ ವಾದಿರಾಜ ಗುರುಗಳಿಗೂ ಕೂಡ ತಮ್ಮ ಕಾಲದಲ್ಲಿ ಅಲ್ಲಲ್ಲಿ ಇತರ ಜ್ಞಾನಿಗಳು ಇದ್ದರೂ ಕೂಡ ವ್ಯಾಸಸೇವಾಂಗತ್ವವು ಯುಕ್ತವೇ ಆಗುತ್ತೆ.

| |
|---|
| ಅದರಲ್ಲೂ ಸ್ವಲ್ಪ ವಿಶೇಷವಿದೆ. ಆ ವಿಶೇಷವನ್ನು "ವಿಸ್ತಾರಯಿಷ್ಯತಿ" ಎಂಬ ಪಾದ್ಮವಾಕ್ಯ ಮತ್ತು "ಸ್ತಾಪಯಿಷ್ಯತಿ....ತೇನಕ್ಷೇಮೋ (ಮೋಕ್ಷೋ ಎಂದು ಪಾಠಾಂತರ) ಭವೇದ್ದಿವಃ" ಎಂಬ ಬ್ರಹ್ಮವೈವರ್ತ ವಾಕ್ಯಗಳು ಸೂಚಿಸುತ್ತವೆ. ದೇಶದೇಶ ಸಂಚಾರದಿಂದ, ಮಹಾತ್ಮ್ಯ ಬಾಹುಳ್ಯ ಪ್ರಕಟನದಿಂದ, ವಾದಿಜಯದಿಂದ, ಅನೇಕ ಸರಳ ಶೈಲೀ ಲಿಖಿತ ಗ್ರಂಥಗಳಿಂದ, ನರ್ತನ ಕೀರ್ತನಾದಿ ದಾಸಕಾರ್ಯಗಳಿಂದಲೂ ಸರ್ವದೇಶೀಯ ಅಧಿಕಾರಿ ಜನರಿಗೂ ಅವರವರ ಮನಸ್ಸಿನಲ್ಲಿ ತತ್ತದ್ಯೋಗ್ಯ ಹರಿಗುರು ಭಕ್ತಿಗಳನ್ನು ವಾದಿರಾಜ ಗುರುಗಳು ತಮ್ಮ ಅನುಗ್ರಹದಿಂದ ಹುಟ್ಟಿಸುತ್ತಾರೆಂದು ಪಾದ್ಮ ವಾಕ್ಯಾರ್ಥ. ಭಕ್ತಿ ದಾರ್ಢ್ಯಪ್ರದವಾದ ಅಂಥ ಋಜುಗಣಸ್ತರ ಉಪದೇಶಗಳಿಂದ ಆಶ್ರಿತ ಅಧಿಕಾರಿಗಳಿಗೆ ಅಪರೋಕ್ಷ ಜ್ಞಾನಪ್ರಾಪ್ತಿರೂಪಕ್ಷೇಮ ಅಥವಾ ಮೋಕ್ಷವು ಉಂಟಾಗುವುದೆಂದು ಬ್ರಹ್ಮವೈವರ್ತ ಶ್ಲೋಕದ ಅರ್ಥ. ಅನ್ಯ ಗುರೂಪದೇಶಕ್ಕಿಂತ ಅಧಿಕ ಫಲಪ್ರದವು ಋಜುಗುರುಗಳ ಉಪದೇಶವೆಂದು ಪ್ರಮಾಣವಿದೆ: "ಅತೋ ಬ್ರಹ್ಮಪದೇ ಯೋಗ್ಯಾಃ ಜೀವಾಃ ಹಂಸಾಃ ಪ್ರಕೀರ್ತಿತಾಃ । ತೇಷಾಂ ಪರಂಪರಾ ಪ್ರಾಪ್ತಂ ಹ್ಯೈಜ್ಞಾನಂ ನಿಯಮೇನತು ॥ ತೇ ಮುಚ್ಯಂತೇ ನ ಚೈವಾನ್ಯೇ ಗುರುಬ್ರಹ್ಮಯತೋನ್ಯಣಾಂ॥" ಎಂದು ಶ್ರುತಿಗೀತಾ ತಾತ್ಪರ್ಯವಿದೆ. ಬೃ.ಭಾ. ಪುಟ 35ರಲ್ಲೂ "ತಸ್ಮಾದ್ವಾಯುತ್ವ ಯೋಗ್ಯರ್ಹಿ ಯೇಷಾಂ ಲೋಕಾಃ ಪ್ರಕೀರ್ತಿತಾಃ ॥ ತೇಷಾಮಲೋಕ ಶಂಕಾಚ ನೈವಕಾರ್ಯಾ ಕದಾಚನ॥ ಯಸ್ಮಾನ್ನಾರಾಯಣಸ್ಯಾತಿ ಪ್ರಿಯಾಃ ಪ್ರಾಣತ್ವ ಯೋಗಿನಃ ॥" ಎಂದು ಮಹಾಸಂಹಿತಾ ವಚನವಿದೆ. ಈ ರೀತಿಯ ಮಧ್ವಮತ ಸ್ಥಾಪನೆಯು ಅನ್ಯರಿಂದ ಶಕ್ಯವಲ್ಲ. ಇಂಥವರಿಂದ ಆಗುವ ಪ್ರಚಾರವೂ ಅನ್ಯರಿಂದ ಮಾಡಲ್ಪಡಲು ಶಕ್ಯವಲ್ಲ. ಆ ಋಜುಗಣಸ್ಥರ ಮೋಹಕ ಉಪದೇಶಗಳಿಂದ ಬೇರೆ ಕಂಡರೂ ಅದೇ ಸಿದ್ಧಾಂತ. ಮೇಲ್ಕಂಡ ಪ್ರಮಾಣದಲ್ಲಿ "ಮತವಿಸ್ತಾರ" ಮಾಡಿದರೆಂದರೆ ಶಾಲೆಯಲ್ಲಿ ಅಥವಾ ಸಾರ್ವಜನಿಕ ಸಭೆಯಲ್ಲಿ ಪ್ರಸಿದ್ಧ ಅಧ್ಯಾಪಕನೊಬ್ಬನು ಉಪನ್ಯಾಸ ಮಾಡಿದಂತೆ ಬೋಧಿಸಿದರೆಂದು ಮಾತ್ರ ಅರ್ಥವಲ್ಲ. ಸಿದ್ಧಿ ಪ್ರಾಪ್ತಿಯಾಗುವಂತೆ ಪ್ರಾಪ್ತ ಶಿಷ್ಯರಿಗೆ ತತ್ತದ್ಯೋಗ್ಯ ರಹಸ್ಯೋಪದೇಶಾನುಗ್ರಹಗಳನ್ನು ಮಾಡಿ ಅವರಿಗೆ ಯೋಗ್ಯ ಶಾಸ್ತ್ರ ಗ್ರಂಥಗಳ ಜ್ಞಾನ ಮಾಡಿಕೊಟ್ಟು ಉದ್ಧರಿಸಿದರೆಂದರ್ಥ. ಸಫಲವಾಗುವಂತೆ ಸಾಕ್ಷಾತ್ತಾಗಿಯೋ ಸ್ವಶಿಷ್ಯ ಮೂಲಕವಾಗಿಯೋ ಉಪದೇಶ ಮಾಡೋಣವೆಂಬ ಪ್ರಚಾರವು ಅನ್ಯರಿಂದ ಇಷ್ಟು ಮಟ್ಟಿಗೆ ಶಕ್ಯವಲ್ಲ. |
| ಆದ್ದರಿಂದ ವಾದಿರಾಜ ಗುರುಗಳ ಕಾರ್ಯಗಳಲ್ಲಿ ಎಲ್ಲದರಲ್ಲೂ ಇತರರಲ್ಲಿ ಕಾಣದ ಅಸಾಧಾರಣ ಮಹಿಮಯು ಇದ್ದೇ ಇದೆ. ಅವರ ಮಠದ ಶ್ಯಾನುಭೋಗನೇ ಮುಂದಿನ ಜನ್ಮದಲ್ಲಿ ಜಗನ್ನಾಥದಾಸರು. ಆದ್ದರಿಂದ "ಗುರುವರರು ಅಂಥ ಪ್ರಚಾರ ಮಾಡಿದರೆಂಬ ಪ್ರತೀತಿಯೇ ಇಲ್ಲ; ತತ್ಸಮಾನ ಅಥವಾ ಹೆಚ್ಚಿನ ಕಾರ್ಯವು ವ್ಯಾಸರಾಜರಿಂದಲೂ ಆಗಿದೆ" ಎಂಬ ಪೂರ್ವಪಕ್ಷ ಗ್ರಂಥದ 17ನೇ ಪುಟದ ವಾಕ್ಯವನ್ನು ಒಪ್ಪುವುದಕ್ಕಾಗುವುದಿಲ್ಲ. ಪ್ರತೀತಿಯೂ ಇದೆ. ಪ್ರಚಾರಾಧಿಕ್ಯವೂ ಇದೆ ಎಂಬಲ್ಲಿ ಆ ಕಾಲದ ಗುರುರಾಜ ದ್ರಷ್ಟ್ರು ವಚನಗಳೇ ವೃತ್ತರತ್ನ ಸಂಗ್ರಹದಲ್ಲಿವೆ. I 5, 7, 8, 14, 16, 21, 36, 37, 43, 45-53 ಮತ್ತು I 55 "ಕಲೌದುಷ್ಟ ಜನಾಕೀರ್ಣೋ ವರ್ಧಯನ್ ಮಧ್ವ ದರ್ಶನಂ । ವಾದಿರಾಜಂ ವಿನಾ ಕೋನ್ಯೋ ದುಷ್ಟಾನ್ ದಮಯಿತುಂ ಕ್ಷಮಃ" ॥ ಮತ್ತು I 56, 62, 66, II 4, 26, 33-34, 40. III |

3, 13, 16, 21, 25-26, 31, 33, 37, 41, 43-44, 51, 52, 56 ಶ್ಲೋಕಗಳು ಅವಶ್ಯ ಪಠ್ಯಗಳು, ವಾ.ಗು.ಚ. ಗ್ರಂಥದ VIII 24-27 ಶ್ಲೋಕಗಳೂ ಶ್ರೀಗುರುರಾಜಕೃತ ಶಾಸ್ತ್ರ ಪ್ರಚಾರ ಕಾರ್ಯವನ್ನು ಸ್ಪಷ್ಟ ಪಡಿಸುತ್ತವೆ. ಅಲ್ಲದೆ ವಾದಿರಾಜ ಗುರುಗಳ ಕಾಲದಲ್ಲೇ ಅವರಷ್ಟು ಸಾಮರ್ಥ್ಯವುಳ್ಳ ಜ್ಞಾನಿಗಳು ಮತ್ತೊಬ್ಬರಿದ್ದರೆಂದು ರತ್ನಸಂಗ್ರಹಕಾರರು ಒಪ್ಪಿಲ್ಲ. ವಿಶ್ವತೋಮುಖ ಮಹಿಮೆಯುಳ್ಳವರಾಗಿ ತಪಸ್ಸು, ವಿದ್ಯಾ, ವಿರಕ್ತಿ, ಗ್ರಂಥ ಕರ್ತೃತ್ವಾದಿ ಸರ್ವಗುಣ ಸಹಿತರಾಗಿ ನೂರು ವರ್ಷಕ್ಕಿಂತ ಅಧಿಕ ಕಾಲ ಅಸಹಾಯ ಶೂರರಾಗಿ ಕೃಷ್ಣ ಪೂಜೆಮಾಡಿಕೊಂಡು, ಸಿದ್ಧಶಿಷ್ಯ ಪ್ರಶಿಷ್ಯಯುಕ್ತರಾಗಿ ವೇದಾಂತ ಸಾಮ್ರಾಜ್ಯದಲ್ಲಿ ಸಾರ್ವಭೌಮರಂತೆ ವಿರಾಜಮಾನರಾಗಿದ್ದವರು ವಾದಿರಾಜರು. ಸ್ವಾ.ವೃಂ.ಆ. XXII 6-11 ಶ್ಲೋಕಗಳಲ್ಲಿ ಇತರ ಜ್ಞಾನಿಗಳ ದೆಸೆಯಿಂದ ಋಜುಗಳಿಗಿರುವ ಅತಿಶಯವು ವರ್ಣಿಸಲ್ಪಟ್ಟಿದೆ. ಇತರ ಪಂಡಿತರು ಉಪಕ್ರಮಾದಿ ಲಿಂಗಗಳಿಂದ ವಾಕ್ಯಾರ್ಥವನ್ನು ನಿರ್ಣಯಿಸುತ್ತಾರೆ. ದಿವ್ಯದೃಷ್ಟಿಯಿಂದ ವಾಕ್ಯಗಳ ವಿವಕ್ಷಿತ ತಾತ್ಪರ್ಯ ತಿಳಿದು ಉಪಕ್ರಮಾದಿ ಲಿಂಗಗಳಿಂದಲೂ ಇತರ ಸಾಧಕ ಪ್ರಮಾಣಗಳಿಂದಲೂ ಅರ್ಥ ನಿರ್ಣಯವನ್ನು ಜನರಿಗೆ ತಿಳಿಯುವಂತೆ ಋಜುಗಳು ಮಾಡುತ್ತಾರೆ. ಆ ರೀತಿಯ ಸೌಭಾಗ್ಯಾತಿಶಯವು ಗುರುರಾಜರ ಗ್ರಂಥಗಳಲ್ಲಿ ಅಲ್ಲಲ್ಲಿ ಕಾಣುತ್ತೆ.

ಇಷ್ಟಾದರೂ ಯಾರಿಗಾದರೂ ಚಾರಿತ್ರಿಕವಾದ ಅವರ ಆಧಿಕ್ಯದಲ್ಲಿ ಸಂಶಯವೇ ಒದಗಿದರೆ, ಆಗಲೂ ಗಮನೀಯವಾದ ಒಂದು ವಿಷಯ ಇದೆ. ತಪಸ್ವಿಗಳ ತಾರತಮ್ಯವು ಸ್ಥೂಲಪ್ರಜ್ಞರಾದ ನಮ್ಮಿಂದ ಕ್ವಚಿತ್ ತಿಳಿಯಲು ಸಾಧ್ಯವಿಲ್ಲ. ಹೇಗೆಂದರೆ ಜ್ಞಾನಿಗಳೆಂದು ಸುಪ್ರಸಿದ್ಧರಾದ ಶ್ರೀರಾಘವೇಂದ್ರ ಸ್ವಾಮಿಗಳು ವಿಮಾನಾರೂಢರಾಗಿ ಸ್ವರ್ಗಕ್ಕೆ ತೆರಳುತ್ತಿದ್ದ ಶ್ರೀ ಕೃಷ್ಣ ದ್ವೈಪಾಯನ ಯತಿಗಳನ್ನು ಕಂಡು ಎದ್ದು ನಿಂತು ನಮಸ್ಕರಿಸಿದರೆಂದು ಐತಿಹ್ಯವಿದೆ. ಚರಿತ್ರೆಯನ್ನು ಓದಿದರೆ ಶ್ರೀರಾಘವೇಂದ್ರಸ್ವಾಮಿಗಳ ದೆಸೆಯಿಂದ ಆಧಿಕಸ್ವರೂಪ ಶಕ್ತಿಜ್ಞಾನಾದಿಗಳನ್ನು ಶ್ರೀಕೃಷ್ಣದ್ವೈಪಾಯನ ಯತಿಗಳು ತೋರಿಸಿದರೆಂದು ಗೊತ್ತಾಗುವುದಿಲ್ಲ. ಆದರೂ ಅವರೇ ಸ್ವರೂಪೋತ್ತಮರು ಎಂದು ಶ್ರೀ ರಾಯರ ನಮಸ್ಕಾರದಿಂದ ನಿರ್ಧರಿಸಬೇಕಾಗಿ ಬಂದಿದೆ. ಬೃಹದ್ಭಾಷ್ಯ ಪ್ರಮಾಣ ನೋಡಿದರೂ ಆಗಮದಿಂದಲೇ ದೇವತಾ ಋಷಿ ತಾರತಮ್ಯವು ಸ್ಫುಟವಾಗಿ ತಿಳಿಯಲ್ಪಡತಕ್ಕದ್ದೆಂದಿದೆ. ಆಗಮ ಸಹಾಯಹೀನವಾದ ಯಾವುದಾದರೂ ಕಾರ್ಯಾನುಮಾನವು ಸ್ವರೂಪನಿರ್ಣಯ ವಿಷಯದಲ್ಲಿ ಅಸಮರ್ಥವೇ ಸರಿ. ಜಯತೀರ್ಥ ಗುರುಗಳೇ ಟೀಕಾ ರಚಿಸಿ ಸಚ್ಛಾಸ್ತ್ರವನ್ನು ಅಲಂಕಾರಯುಕ್ತವನ್ನಾಗಿ ಮಾಡಿದರು. ವಿಷ್ಣುತೀರ್ಥರ ಹಾಗೆ ಶಾಸ್ತ್ರಸೇವೆಯನ್ನು ಮಾಡಲಿಲ್ಲ. ಪದ್ಮನಾಭತೀರ್ಥರ ಮತ್ತು ಪಂಡಿತಾಚಾರ್ಯರ ಟೀಕೆಗಳೂ ಸ್ವಲ್ಪವಾದುವುಗಳೇ. ಆದರೂ ಅವರುಗಳೂ ಸಚ್ಛಾಸ ಸ್ಥಾಪಕರೇ ಎಂದು ಪ್ರಮಾಣವಿದೆ. ಯಾವ ಯಾವ ಕಾಲದಲ್ಲಿ ಹೇಗೆ ಹೇಗೆ ಏನು ಕಾರ್ಯ ಮಾಡುವುದರಿಂದ ಹರಿಗುರುಗಳು ಪ್ರಸನ್ನರಾಗುತ್ತಾರೋ ಆಗಾಗ, ಹಾಗೆ ಹಾಗೆಯೇ ಅಂಥ ಕಾರ್ಯವನ್ನ, ದೇವಮನುಷ್ಯರು ಮಾಡಿ ಶ್ರೀಹರಿಯ ಪ್ರೀತಿಯನ್ನು ಗಳಿಸುತ್ತಾರೆ. “ನಾನ್ಯ ವಿಹಿತಂ ಬುಧಾಃ” ಎಂದು ಪ್ರಮಾಣವೇ ಇದೆ. ಆದ್ದರಿಂದ ಬಾಹ್ಯ ಚರಿತ್ರೆ

| |
|---|
| ಅನಿರ್ಣಾಯಕವಾದರೂ ಶಾಸ್ತ್ರದಿಂದಲೇ ತಾರತಮ್ಯ ನಿಶ್ಚಯಿಸಬೇಕು. ನಮ್ಮ ಸ್ವಕಪೋಲ ಯುಕ್ತಿಗಳಿಂದಲೂ, ಕಲ್ಪಿತ ಅಳತೆ ಕೋಲುಗಳಿಂದಲೂ, ಜ್ಞಾನಿ ಜನರ ಪರಿಮಿತಿಯನ್ನು ವಿಪರೀತವಾಗಿ ನಿಶ್ಚಯಿಸಿದರೆ, ತತ್ವವಿಪ್ಲವವೇ ಆಗಿಹೋಗುತ್ತೆ. ಉಪಜೀವ್ಯಾಗಮ ವಿರೋಧವೂ ಪ್ರಾಪ್ತವಾಗುತ್ತೆ. ಬೃ.ಭಾ. V 8 "ವಿಷ್ಣು, ಶ್ರೀದೇವೀ, ಇತ್ಯಾದಿ ಚೇತನರಿಗೆ ಗುಣತಾರತಮ್ಯ ವ್ಯತ್ಯಾಸವಾಗಿ ಹೇಳೋಣ, ಇವೆಲ್ಲಾ ತತ್ವವಿಪ್ಲವಗಳು. ತತ್ವವಿಪ್ಲವವನ್ನು ಬ್ರಾಹ್ಮಣ ಮಾಡಿದರೆ ಅವನು ನಾಲಿಗೆ ಕೀಳಿಸಬೇಕು" ಎಂದಿದೆ. ಮ.ತಾ.ನಿ. I 80-81: "ಮೋಕ್ಷ, ಜ್ಞಾನ, ಮುಕ್ತಿಯಲ್ಲಿ ಭೋಗ ಸಹ ಕ್ರಮವಾಗಿ ಉತ್ತಮರ ಪ್ರಸಾದದಿಂದ ನೀಚರಿಗಾಗುತ್ತೆ....... ಅನ್ಯಥಾ ಇಲ್ಲ. ಆದ್ದರಿಂದ ತಾರತಮ್ಯ ತಿಳಿದು ಶ್ರೀಹರಿ ಸರ್ವೋತ್ತಮತ್ವ ತಿಳಿದು ಆಚರಿಸಬೇಕು. ಅದನ್ನು ಬಿಟ್ಟು ಯಾರಿಗೂ ಮುಕ್ತಿಯಾಗುವುದಿಲ್ಲ" ಎಂದಿದೆ. ಪ್ರಕೃತದಲ್ಲಿ ಮೋಕ್ಷ ಹೇತುಭೂತಜ್ಞಾನ ಜನಕ ಉಪದೇಶವನ್ನು ಅನೇಕರಿಗೆ ಮಾಡಿ ಶಾಸ್ತ್ರ ಪ್ರಚಾರ ಕಾರ್ಯವನ್ನು ವಾದಿರಾಜ ಗುರುಗಳು ಆ ಕಾಲದಲ್ಲಿ ಅವತರಿಸಿದ್ದ ಎಲ್ಲರಿಗಿಂತ ಹೆಚ್ಚಾಗಿ ಮಾಡಿ, ಹರಿಗುರು ಸೇವೆ ಪೂರ್ಣಮಾಡಿದ್ದಾರೆಂದು ಪ್ರಮಾಣಭಾವ ವ್ಯಕ್ತವಾಗಿಯೇ ಇದೆ. ಐತಿಹ್ಯವೂ ಹಾಗೆಯೇ ಇದೆ. "ತೇನ ಮೋಕ್ಷೋ ಭವೇದ್ಧಿವಃ" ಎಂಬ ಬ್ರಹ್ಮವೈವರ್ತ ವಚನವು ಅವರ ಉಪದೇಶವು ಮೋಕ್ಷ ಪ್ರಾಪಕವೆಂದೇ ಹೇಳುತ್ತೆ. ಆದ್ದರಿಂದ ಹಿಂದೆಯೇ ಪ್ರಮಾಣ ಕೊಟ್ಟಂತೆ ಮಹಾತ್ಮರ ಸ್ವರೂಪ ಶ್ರೈಷ್ಟ್ಯವನ್ನು 'ಯಥಾ ಶಾಸ್ತ್ರಂ' ತಿಳಿಯಬೇಕು. ನಿರ್ಮೂಲಶಂಕೆ ಮಾಡಬಾರದು. ಹನ್ನೆರಡನೇ ಅಧ್ಯಾಯದಲ್ಲಿ ಹೇಳಿದ ಕೊಚ್ಚಿ ರಾಜನ ಕಥೆಯೂ ಗುರುರಾಜರ ಸಂಪ್ರದಾಯದ ಮಾಹಾತ್ಮ್ಯದಲ್ಲಿ ಪ್ರಾಶಸ್ತ್ಯವನ್ನೇ ಸೂಚಿಸುತ್ತೆ (ಕೋ.ರಂ. I 14-17). |
| ಪುರಾಣ ವಾಕ್ಯಗಳಿಗೆ ಕಲ್ಪಿತತ್ವಾಪಾದನೆಯು ಸ್ಪಷ್ಟ ಪ್ರಮಾಣವಿಲ್ಲದೆ ಮಾಡಲ್ಪಡಲೇ ಕೂಡದು. ಪುರಾಣ ವಾಕ್ಯೋಕ್ತ ವಿಷಯಗಳು ಒಮ್ಮೊಮ್ಮೆ ಬಾಧಿತವಾಗಿಯೇ ಇರುತ್ತವೆ. ಆದರೂ ಆ ವಾಕ್ಯಗಳು ಕೃತಕ, ಪ್ರಕ್ಷಿಪ್ತ ಎನ್ನುವಹಾಗಿಲ್ಲ. ದೃಷ್ಟಾಂತ: ಲಿಂಗಮೂಲಾನ್ವೇಷಣ ಕಥಾ. ಭಾರತದಲ್ಲೂ, ಕೃಷ್ಣನು ಶಿವನನ್ನು ಕುರಿತು ತಪಸ್ಸು ಮಾಡಿದನೆಂದು ಇದೆ. ಅದು ಪ್ರಕ್ಷಿಪ್ತವಲ್ಲವೆಂದು ಆಚಾರ್ಯರೇ ವ್ಯಾಖ್ಯಾನಿಸಿದ್ದಾರೆ. "ಭಕ್ಷಿತೇಪಿ ಲಶುನೇ ನಶಾಂತೋ ವ್ಯಾಧಿಃ" ಎಂಬ ಗಾದೆಯಂತೆ ಅಪ್ರಾಮಾಣ್ಯ ತೋರಿಸಿದರೂ ಪ್ರಕ್ಷಿಪ್ತತ್ವ ಸಾಧ್ಯವಾಗುವುದಿಲ್ಲ. ಸ್ಪಷ್ಟವಾದ ಕಲ್ಪಿತತ್ವ ಸಾಧಕಪ್ರಮಾಣ ಇಲ್ಲವಾದ್ದರಿಂದ ಋಕ್ಸಂಹಿತಾ ಬ್ರಹ್ಮವೈವರ್ತಾದಿ ವಚನಗಳು ಬಾದರಾಯಣ ಕೃತವೆಂದೇ ನಂಬಬಹುದು. |
| **30. ಆಗಮ ವಿಚಾರ:** |
| **ಉಕ್ತಿ:** |
| ಪುಟ 17-3 "ಹೀಗೆ ಋಜುತ್ವವಾದಿಗಳಿಂದ ಉದಾಹರಿಸಲ್ಪಟ್ಟಿರುವ ಆಗಮವಾಕ್ಯಗಳು ಆಭಾಸಗಳೇ ಎಂದು ಸಿದ್ಧಿಸುತ್ತೆ, ಅಂಥ ಕಲ್ಪಿತ ಪ್ರಮಾಣಗಳಿಂದ ಪ್ರಮೇಯ ವ್ಯವಸ್ಥೆಯು ಆಗುವುದಿಲ್ಲವಷ್ಟೆ, ಆದ್ದರಿಂದ ಆಗಮಗಳಿಂದ ಗುರುರಾಜ ಋಜುತ್ವವು ಸಿದ್ಧಿಸುವುದೇ ಇಲ್ಲ". |
| **ಪ್ರತ್ಯುಕ್ತಿ :** |

ನಮ್ಮಿಂದ ಪೂರ್ವೋಕ್ತ ರೀತಿಯಲ್ಲಿ, ಒಂದು ಪ್ರಮಾಣ ವಾಕ್ಯಕ್ಕೂ ಪೂರ್ವಪಕ್ಷದವರ ಆಪಾದನೆಯು ಲಗ್ನವಾಗಲಿಲ್ಲವಾದ್ದರಿಂದ ಋಜುತ್ವವಾದಿಗಳು ಉದಾಹರಿಸಿದ ಯಾವ ಪ್ರಮಾಣವೂ ಆಭಾಸವಲ್ಲ, ಕಲ್ಪಿತ ಪ್ರಕ್ಷಿಪ್ತವೂ ಅಲ್ಲ. ಹೀಗಿದ್ದರೂ ಋಜುತ್ವ ಸಾಧಕ ಪ್ರಮಾಣವೇ ಇಲ್ಲವೆನ್ನುವುದಾದರೆ "ಅಹೋ ಮೊಹಸ್ಯ ಮಾಹಾತ್ಮ್ಯಂ" ಎಂದೇ ಹೇಳಬೇಕು. ಇವರ ದುರಾಗ್ರಹಕ್ಕೆ ಏನೆಂದು ಹೇಳಬೇಕು. ಗುರುರಾಜರು ಅನೃಜು ಎನ್ನುತ್ತಾರೆ. ಪ್ರಮಾಣವಿಲ್ಲವೆನ್ನುತ್ತಾರೆ. ಇಂಥ ದೇವತೆ ಎಂಬುದೂ ತಿಳಿಯದೆನ್ನುತ್ತಾರೆ. ಆದರೂ ಜ್ಞಾನಯೋಗಿಗಳು ಎನ್ನುತ್ತಾರೆ. ತನ್ನ ವಾದಕ್ಕೆ ಪ್ರಮಾಣ ಕಾಣದ ಮೇಲೆ ವಿರುದ್ಧವಾದಿಗಳ ಸಂಗಡ ಹೋರಾಟ ಮಾಡದೆ ಏಕೆ ಸುಮ್ಮನಿರಬಾರದೆಂದರೆ ಉತ್ತರವನ್ನು ಕೊಡಲಾರರು. ಅದೇ ಟೀಕಾಚಾರ್ಯರು ಕಥಾಲಕ್ಷಣ ಟೀಕೆಯಲ್ಲಿ ಮಾಡಿರುವ ಉಪದೇಶ: "ನದೀ ತೀರದಲ್ಲಿ ಐದು ಹಣ್ಣಿದ್ದವು ಎಂಬ ಲೌಕಿಕನ ವಾಕ್ಯಕ್ಕೆ ಪ್ರತಿವಾದಿಯು ಪ್ರಮಾಣ ಕೇಳಿದರೆ ಏನು ಹೇಳಬೇಕು? ಅವನ ವಾಕ್ಯವನ್ನೇ ಹೇಳಿ ಆ ಲೌಕಿಕನ ವಾಕ್ಯವೇ ಪ್ರಮಾಣವೆನ್ನಲಾಗುವುದಿಲ್ಲ. ಋಗಾದಿಗಳಲ್ಲಿ ಸೇರಿಲ್ಲವಾದ್ದರಿಂದ ಆಗಮವಾಗುವುದಿಲ್ಲ. ಪ್ರಮಾಣಾಂತರವಿಲ್ಲವಲ್ಲಾ ಎಂದು ಶಂಕಿಸಿದರೆ ಟೀಕಾಚಾರ್ಯರು ಹೇಳುತ್ತಾರೆ. ಆ ಲೌಕಿಕನ ವಾಕ್ಯವು ಉಭಯರಿಗೂ ಪ್ರಮಾಣವೆಂದು ಸಮ್ಮತವೋ, ಅಸಮ್ಮತವೋ? ಅಸಮ್ಮತವಾದರೂ ಅದಕ್ಕೆ ಪ್ರಾಮಾಣ್ಯವನ್ನು ಸಾಧಿಸಲು ಶಕ್ಯವೋ ಆಶಕ್ಯವೋ? ಅದಕ್ಕೆ ಪ್ರಾಮಾಣ್ಯ ಸಾಧಿಸಲು ಅಶಕ್ಯವಾದರೆ ಸುಮ್ಮನೆ ಕೂಡಬೇಕು. ಉಪಾಯವಿಲ್ಲವಾದ್ದರಿಂದ ಮುಂದಕ್ಕೆ ವಾದ ಮಾಡಬಾರದು. ಪ್ರಾಮಾಣ್ಯ ಸಾಧಿಸಲು ಶಕ್ಯ ಅಥವಾ ಆ ಲೌಕಿಕನ ವಾಕ್ಯವು ಇಬ್ಬರಿಗೂ ವಿಶ್ವಾಸಾರ್ಹವೆಂದರೆ, ಅದನ್ನೇ ಹೇಳಿ ಆ ವಾಕ್ಯ ಪ್ರಾಮಾಣ್ಯವನ್ನು ಸಾಧಿಸಬೇಕು" ಎಂದಿದ್ದಾರೆ. ಪ್ರಕೃತ ವಾದಿರಾಜ ಗುರುಗಳು ಋಜುಗಳಲ್ಲ ಎಂಬ ಲೌಕಿಕನ ವಾಕ್ಯಕ್ಕೆ ಋಜುತ್ವವಾದಿಗಳು ಪ್ರಾಮಾಣ್ಯ ಒಪ್ಪಿಲ್ಲ. ಆ ವಾಕ್ಯಕ್ಕೆ ಪ್ರಾಮಾಣ್ಯ ಸಾಧಿಸಲು ಪೂರ್ವಪಕ್ಷಿಗಳಿಗೆ ಶಕ್ಯವಿಲ್ಲ. ಪ್ರಮಾಣಹೀನನಾಗಿ ಪರಖಂಡನೆಯಲ್ಲಿ ದುರಾಗ್ರಹಿಯಾಗಿ ವಾದಮಾಡಿದರೆ ಅನರ್ಥವನ್ನೇ ಹೊಂದಬೇಕಾಗುತ್ತೆ,

**ಭಾಗ VII 14-8 "ಅಪ್ರಯೋಜನ ಪಕ್ಷವನ್ನು ಅವಲಂಬಿಸಬಾರದು" ಎಂದಿದೆ. ಆ ನ್ಯಾಯದಿಂದಲೂ ಅನೃಜುತ್ವವಾದವು ತಿರಸ್ಕಾರಕ್ಕೆ ಅರ್ಹವಾದುದು.**

**ಕಿಂಚ II ಅಧ್ಯಾಯ ಗೀತಾಭಾಷ್ಯದಲ್ಲಿ "ಸರ್ವರಿಂದಲೂ ಆದರದಿಂದ ಗೌರವಿಸಲ್ಪಟ್ಟ ಒಂದು ಮತವನ ವಿರುದ್ಧ ಪ್ರಮಾಣ ತೋರಿಸದೆ ಖಂಡಿಸುವುದು ಶಕ್ಯವಲ್ಲ. ಹಾಗಾದರೆ ಶಶವಿಷಾಣವಿದೆ ಎಂಬ ಮತವೂ ಸಿದ್ಧಿಸಬೇಕಾಗುತ್ತೆ ಎನ್ನಕೂಡದು. ಶಶವಿಷಾಣ ಸದ್ಭಾವದಲ್ಲಿ ಪ್ರಮಾಣವಿಲ್ಲ. ಪೂರ್ವೋಕ್ತ ಸರ್ವಾದೃತ ಮತಕ್ಕೆ ಅನೇಕ ಜನರ ಅಭಿಮತಿ ಎಂಬುದೇ ಪ್ರಮಾಣವಾಗಿದೆ. ಆದ್ದರಿಂದ ಪ್ರತಿಪ್ರಮಾಣ ತೋರಿಸಿಯೇ ಅದನ್ನು ಖಂಡಿಸಬೇಕು. ಅನ್ಯಥಾ ಸರ್ವವಾದ ವ್ಯವಹಾರಗಳೂ ಅಸಾಧ್ಯವಾಗುತ್ತವೆ." ಎಂದ ಶ್ರೀ ಸರ್ವಜ್ಞಾಚಾರ್ಯರೇ ಬರೆದಿದ್ದಾರೆ. ಆದ್ದರಿಂದ ವಾದಿರಾಜ ಸ್ವಾಮಿಗಳು ಋಜುಗಳು; ಶ್ರೀ ರಾಘವೇಂದ್ರ ಸ್ವಾಮಿಗಳು ಪ್ರಹ್ಲಾದದೇವರು; ಟೀಕಾ ಚಾರ್ಯರು ಇಂದ್ರದೇವರು - ಇತ್ಯಾದಿ ರೀತಿಯಾಗಿ ಬಹುಜನರಿಂದ ಆದರಿಸಲ್ಪಟ್ಟ ಕೀರ್ತನೆ, ಐತಿಹ್ಯ ಮುಂತಾದ ಪ್ರಮಾಣಗಳಿಗೆ ನಿರವಕಾಶ ವಿರುದ್ಧ ಪ್ರಮಾಣವಿಲ್ಲದೆ ಖಂಡಿಸಿ ಅನುಮಾನ ಮಾಡುವುದು ಅಯುಕ್ತವು. "ನ ಚಾ ವಿರೋಧೇ ಪ್ರಸಿದ್ಧಃ ಪರಿತ್ಯಜ್ಯತೇ" ಎಂದು I 1-1 ಬ್ರ.ಸೂ. ಭಾಷ್ಯದ ನ್ಯಾಯವನ್ನು ಅನುಸಂಧಾನ ಮಾಡಿದರೂ ಪ್ರಸಿದ್ಧವಾದ ವಾದಿರಾಜಋಜುತ್ವ ವಾದವು ವಿರುದ್ಧ ಪ್ರಮಾಣ ಹೀನವಾಗಿರುವುದರಿಂದ ಮಾನ್ಯವೇ.**

ಅದರಲ್ಲಿಯೂ ಪುಟ 123ರಲ್ಲಿ ಪ್ರಮಾಣ ಕೊಟ್ಟಿರುವಂತೆ, ಅಭಿಜ್ಞರೂ ತಪಸ್ವಿಗಳೂ ಆದ ಅನೇಕ ವಿಷ್ಣು ಭಕ್ತರು ಆದರಿಸಿರುವ ವಾದವನ್ನು ನಿರವಕಾಶ ವಿರೋಧಿ ಪ್ರಮಾಣ ಕಾಣದೆ ಯಾರೂ ನಿರಾಕರಿಸಬಾರದು. ಭಾಗ. ತಾ. VII 1-9 ರಲ್ಲಿ "ಪರೋಕ್ಷತಃ ಲೋಕಜ್ಞಾನ ಮತ್ತು ವೇದಾಂತ ತತ್ವಜ್ಞಾನವುಳ್ಳವರಾದರೂ ಸದ್ವೈಷ್ಣವ ಸ್ನೇಹಹೀನರಾದರೆ ತಪ್ಪದೆ ತಮಸ್ಸನ್ನು ಹೊಂದುತ್ತಾರೆ. ಅವರಿಗೆ ಏನು ಮಾಡಿದರೂ ಯಾವ ಕಾಲಕ್ಕೂ ಅಪರೋಕ್ಷ ಜ್ಞಾನವಾಗುವುದಿಲ್ಲ" ಎಂದಿದೆ. IV 4 ಅನುವ್ಯಾಖ್ಯಾನದಲಿ "ವಿಷ್ಣುಭಕ್ತರಲ್ಲಿ ಭಕ್ತಿಹೀನತೆ ಎಂಬುವುದು ಒಂದು ಭಕ್ತಿದೋಷವೇ" ಎಂದಿದೆ. ಮ.ತಾ.ನಿ. I-113. "ತದ್ಭಕ್ತದ್ವೇಷವೂ ಹರಿದ್ವೇಷವೇ ಎಂದಿದೆ. ಭಾಗ.ತಾ. XI 21-22 "ಅಧರ್ಮಾಜ್ಞಾನ ರೂಪದಿಂದ ಕಲಿಗ್ರಸ್ತನಾದ ದೇಹಿಗೆ ಸದ್ವೈಷ್ಣವರಲ್ಲಿ ತಡೆಯಲಿಕ್ಕೆ ಅಶಕ್ಯವಾದ ಕ್ರೋಧವು ಹುಟ್ಟಿ ಅದರಿಂದ ತಮಸ್ಸಿಗೇ ಬೀಳಿಸಲ್ಪಡುತ್ತಾನೆ" ಎಂದಿದೆ. ದೇವಪೂಜಾ ಪದ್ಧತಿಯಲ್ಲಿ "ವೈಷ್ಣವ ದ್ವೇಷಕ್ಕೆ ಕಾರಣವಾದ ನನ್ನಲ್ಲಿರುವ ಪಾಪವನ್ನು ಸುಟ್ಟು ಬಿಡು, ಹೇ ಮಾಧವ " ಎಂದಷ್ಟೆ ಇವೆ. ಸುಳ್ಳು ಬರೆಯುವುದರಿಂದ ಬರಬಹುದಾದ (ಸ್ವಾ.ಆ. III 48, 53, 89 ಮತ್ತು V -1) ಗುರುರಾಜರ ನಿಂದಾಫಲವೂ ಅನಿಷ್ಟವೇ.

## 31. ಆಗಮ ವಿಚಾರ : ಪುಟ 17-6

**ಉಕ್ತಿ :**

"ಯದ್ಯಪಿ ಅಪೌರುಷೇಯತ್ವ ಪ್ರಭಾವದಿಂದ ವೇದವೂ, ವೇದಗೃಹೀತತ್ವ ನಿಮಿತ್ತದಿಂದ ಇತಿಹಾಸ ಪುರಾಣಗಳೂ, ಅತೀಂದ್ರಿಯಾರ್ಥಗಳಲ್ಲಿ ಪ್ರಮಾಣಗಳಾದ ಆಗಮಗಳು. ಆದರೂ ಅವುಗಳು ಈಗ ಹಾಳಾಗಿ ಹೋಗಿರುವುದರಿಂದ ದುರಾಗಮಗಳೂ ಪ್ರಕ್ಷೇಪಿತವಾಗಿರುವುದರಿಂದ ಅವುಗಳಲ್ಲಿ ಶ್ರುತಿ ಯಾವುದು ಅಶ್ರುತಿ ಯಾವುದು ಎಂಬ ನಿರ್ಣಯ ವಿಷಯದಲ್ಲಿ ಮನುಷ್ಯರು ಸಮರ್ಥರೇ ಅಲ್ಲ. "ಉತ್ಸನ್ನಾಃ ಪ್ರಾಯಶಃ ಸರ್ವೇ" ಎಂದು ಭಗವತ್ಪಾದರ ಉಕ್ತಿಯೇ ಇದೆ. ಆದ್ದರಿಂದ ಸರ್ವ ಸಂಪ್ರತಿಪನ್ನವಾದ ಶ್ರುತಿ ಇತಿಹಾಸ ಪುರಾಣಗಳಿಗೇ ಪ್ರಾಮಾಣ್ಯ ಒಪ್ಪಬೇಕು. "ಸರ್ವಾಭಿಮತಸ್ಯ ಪ್ರಮಾಣಂ ವಿನಾ ನಿಷೇದ್ಧುಂ ಅಶಕ್ಯತ್ವಾತ್ । ನಚ ಸಿದ್ಧರಪ್ರಾಮಾಣಿಕ ಸ್ಯೇತಿ ಚೇನ್ನ। ಸರ್ವಾಭಿಮತೇರೇವ ಪ್ರಮಾಣತ್ವಾತ್ । ಅನ್ಯಥಾ ಸರ್ವ ವಾಚಿಕ ವ್ಯವಹಾರಾಸಿದ್ದೆಶ್ಚೇ" ಎಂಬ ಭಗವತ್ಪಾದರ ವಚನವೇ ಈ ವಿಷಯದಲ್ಲಿ ಪ್ರಮಾಣ. ಪೂರ್ವಾಚಾರ್ಯರು ಪರಿಗ್ರಹಿಸಿರುವ ಆಗಮಾನುಸಾರಿಯಾದ ಸಂಶೋಧಿತ ನೂತನ ವಾಕ್ಯಗಳಿಗೂ ಪ್ರಾಮಾಣ್ಯ ಯುಕ್ತವಾಗಿದೆ. ಪ್ರಕೃತದಲ್ಲಿ ವಾದಿರಾಜ ಋಜುತ್ವವನ್ನು ಸಾಧಿಸಲು ಇಚ್ಛಿಸುವವರಿಂದ ಉದಾಹೃತ ಆಗಮಗಳಿಗೆ ಅಂಥ ಸಂಪ್ರತಿಪತ್ತಿ ಇಲ್ಲದುದರಿಂದ ಹಿಂದೆ ತೋರಿಸಿದ ರೀತಿಯಲ್ಲಿ ಪ್ರಮಾಣ ವಿರುದ್ಧತ್ವವಿದೆಯಾದ್ದರಿಂದಲೂ ಅವುಗಳಿಂದ ಋಜುತ್ವ ಸಿದ್ಧಿಯಾಗುವುದಿಲ್ಲವೆಂದು ನಿಶ್ಚಯಿಸಲ್ಪಡುತ್ತೆ."

**ಪ್ರತ್ಯುಕ್ತಿ :**

ಇದೊಂದು ವಿಲಕ್ಷಣ ಪೂರ್ವಪಕ್ಷ. ಇದರಲ್ಲಿ ಗ್ರಂಥಕಾರರು ತಿಳಿದೋ ತಿಳಿಯದೆಯೋ, ತನ್ನ ಒಂದು ಸ್ವಕಪೋಲ ಕಲ್ಪಿತ ನ್ಯಾಯದಿಂದ ಮಧ್ವಮತವನ್ನೂ, ಮಧ್ವಾಚಾರ್ಯರ ವಾದ ರೀತಿಯನ್ನೂ ಸಹ ಖಂಡಿಸಿರುತ್ತಾರೆ. ಬೌದ್ಧ, ಹೂಣರಿಗೂ ಸಹ ಮಾಧ್ವ ಗ್ರಂಥಗಳ ಖಂಡನ ಪ್ರಕಾರವನ್ನು ಬೋಧಿಸಿದ್ದಾರೆ. ಇದೆಲ್ಲಾ ಹೇಗೆ ಅಯುಕ್ತವೆಂದರೆ -

ಮ.ತಾ.ನಿ 1-30 "ಋಗಾದಿಗಳು ನಾಲ್ಕು, ಪಂಚರಾತ್ರ, ಭಾರತ, ಮೂಲರಾಮಾಯಣ, ಬ್ರಹ್ಮಸೂತ್ರಗಳು ಸ್ವತಃ ಪ್ರಮಾಣವೆನ್ನಿಸುತ್ತವೆ" ಎಂದು ಆಚಾರ್ಯರು ಹೇಳಿದ್ದಾರೆ. ಋಗಾದಿಗಳು ಪ್ರಕ್ಷೇಪ ವಿಕ್ಷೇಪಗಳಿಂದ ನಷ್ಟವೇ ಆಗಿ ಹೋಗಿದ್ದರೆ ಅವುಗಳಿಗೆ ಇಲ್ಲಿ ಸ್ವತಃ ಪ್ರಾಮಾಣ್ಯವನ್ನು ಏತಕ್ಕೆ ಹೇಳಬೇಕಾಗಿತ್ತು? ಮೂಲಭೂತ ಶುದ್ಧ ಋಗಾದಿಗಳೇ ಇಲ್ಲದ ಮೇಲೆ ಮುಂದಿನ ಶ್ಲೋಕದಲ್ಲಿ "ಅವಿರುದ್ಧಂತು ಯತ್ವಸ್ಯ ಪ್ರಮಾಣಂ ತಚ್ಚ ನಾನ್ಯಥಾ" (ಎಂದರೆ ಮೂಲ ಋಗಾದಿಗಳಿಗೆ ಅವಿರುದ್ಧವಾದುದೆಲ್ಲವೂ ಪ್ರಮಾಣವೆನ್ನಿಸುತ್ತದೆ) ಎಂದು I - 31 ರಲ್ಲಿ ಆಚಾರ್ಯರೇ ಬರೆಯಲು ಅವಸರವೆಲ್ಲಿಂದ ಬಂತು? ಏಕೆಂದರೆ ಮೂಲಶಾಸ್ತ್ರ ಹಾಳಾಗಿದ್ದ ಮೇಲೆ ತಾವು ಬರೆಯುವ ಇನ್ನೊಂದು ಗ್ರಂಥಕ್ಕೆ ಆ ಮೂಲ ಶಾಸ್ತ್ರದ ಅವಿರೋಧವನ್ನು ನಿರ್ಣಯಿಸುವುದು ಹೇಗೆ ಸಾಧ್ಯ? ಆಚಾರ್ಯರ ವಾಕ್ಯಗಳು ಪರಸ್ಪರ ವಿರುದ್ಧವೆಂದು ಹೇಳಿದಹಾಗಾಗಲಿಲ್ಲವೇ ?

ಹೀಗೆಯೇ ಮ.ತಾ.ನಿರ್ಣಯದ ದ್ವಿತೀಯಾಧ್ಯಾಯದಲ್ಲಿರುವ "ಕ್ವಚಿದ್ಗ್ರಂಥಾನ್ ಪ್ರಕ್ಷಿಪಂತಿ, ಉತ್ಸನ್ನಾಃ ಪ್ರಾಯಶಃ ಸರ್ವೆ, ಕೋಟ್ಯಂ ಶೋಪಿ ನ ವಿದ್ಯತೇ" (ಜನರು ತಮ್ಮ ಕಲ್ಪಿತ ಗ್ರಂಥಗಳನ್ನು ಮೂಲಶಾಸ್ತ್ರಕ್ಕೆ ಸೇರಿಸಿಬಿಡುತ್ತಾರೆ; ಪ್ರಾಯಶಃ ಎಲ್ಲಾ ತೆಗೆದು ಹಾಕಲ್ಪಟ್ಟುಹೋಗಿವೆ; ಕೋಟ್ಯಂಶವೂ ಇಲ್ಲ) ಇತ್ಯಾದಿ ವಾಕ್ಯಗಳಿಗೆ ಸರ್ವಮೂಲ ಶಾಸ್ತ್ರಗಳೂ ಸ್ವರೂಪ ಧ್ವಂಸ ಹೊಂದಿವೆ ಎಂದು ಅರ್ಥಮಾಡಿದರೆ, ನಿರ್ಣಯ ಪ್ರಥಮಾಧ್ಯಾಯದಲ್ಲೂ ಅನುವ್ಯಾಖ್ಯಾನ ಭಾಷ್ಯಾದಿಗಳಲ್ಲೂ "ಋಗಾದಿಗಳೇ ಸರ್ವೋತ್ತಮ ಮೂಲ ಪ್ರಮಾಣಗಳು" ಎಂದು ಪ್ರಯತ್ನಪೂರ್ವಕವಾಗಿ ಏತಕ್ಕೆ ನಿರ್ಣಯಿಸಿದರು? ನಷ್ಟ ಗ್ರಂಥಗಳನ್ನೇ ಪ್ರಧಾನವಾಗಿ ಚರ್ಚಿಸಿ ಅವೇ ಸರ್ವೋತ್ತಮ ಪ್ರಮಾಣ, ಇತರ ಗ್ರಂಥ ಪ್ರಾಮಾಣ್ಯ ನಿರ್ಣಯ ಕಾರ್ಯದಲ್ಲಿ ಅವುಗಳು ಪ್ರಧಾನ ಆಧಾರಗಳು, ಸಹಕಾರಿ ಕಾರಣಗಳು, ಅವು ಮೋಕ್ಷ ಹೇತು ಭೂತ ತತ್ವಜ್ಞಾನಜನಕ ಉತ್ತಮ ಸಾಧನಗಳು, ಅವುಗಳಲ್ಲಿ ಅಪ್ರಾಮಾಣ್ಯ ಶಂಕೆಯನ್ನು ಹೊಂದಬಾರದು" ಎಂದು ನಿರ್ಣಯಗಳನ್ನು ಮಾಡಲು ಕಾರಣವೇನಿತ್ತು? ಆ ಶಾಸ್ತ್ರಗಳೆಲ್ಲಾ ಹೋಗಿಬಿಟ್ಟಿದ್ದರೆ, "ಸರ್ವದಾ ಮೂಲ ಶಾಸ್ತ್ರಗಳಿಂದ ಪರಮಾತ್ಮನನ್ನು ಉಪಾಸನೆ ಮಾಡಬೇಕು; "ಸರ್ವದೈನಮುಪಾಸೀತ, ಶ್ರುಣುಯಾದ್ಯಾವದಜ್ಞಾನಂ, ಶ್ರವಣಾದಿ ವಿನಾ ನೈವ ಕ್ಷಣಂ ತಿಷ್ಠೇದಪಿ ಕ್ವಚಿತ್, ಶ್ರವಣಂ ಮನನಂ ಚೈವ ಕರ್ತವ್ಯಂ ಸರ್ವ ದೈವಹಿ, ನಹಿ ವೇದಂ ವಿನಾಬ್ರಹ್ಮವೇದ್ಯಂ, ಧರ್ಮಾಶ್ಚ ತದ್ಗತಾಃ, ತಚ್ಛಾಸ್ತ್ರಗಮ್ಯ ಏವೈಕೋಮೋಕ್ಷದೋಭವತಿ, ಸ್ಫುಟಂ, ಸಚ್ಛಾಸ್ತ್ರಮಭ್ಯಸೇನ್ನಿತ್ಯಂ ದುಃಶಾಸ್ತ್ರ0 ತುಪರಿತ್ಯಜೇತ್" ಇತ್ಯಾದಿ ವಿಧಿಗಳಿಗೆ ಯಾವ ಸಾರ್ಥಕ್ಯವು ತಾನೇ ಇರುತ್ತೆ? ಆದ್ದರಿಂದ "ದೋಷೋ ವ್ಯಾಹತಿರೇವಾಸ್ತಿ ನೃಶೃಂಗಾಸ್ತಿತ್ವ ಸಾಧನೇ ‖ ಯತ್ರ ವ್ಯಾಹತತಾ ನಾಸ್ತಿ ಕೊತಿಸಂಗೋऽಸ್ಯ ಸಾಧನೇ" ‖ ಎಂದು ಅನು III 2-1 ಹೇಳಿದ ರೀತಿಯಲ್ಲಿ ಆಚಾರ್ಯೋಕ್ತಿಗಳಿಗೆ ಪರಸ್ಪರ ವ್ಯಾಹತಿ ದೋಷವಿಲ್ಲ ಎಂದು ತೋರಿಸುವಂತೆ ವಾಕ್ಯಾರ್ಥವನ್ನು ಮಾಡಬೇಕು. ಸರ್ವಜ್ಞಾಚಾರ್ಯರು ಸುಳ್ಳು ಬರೆದಿಲ್ಲ, ವ್ಯಾಹತ ಭಾಷಿಗಳೂ ಅಲ್ಲ.

ಗು.ದೀ. ಸುಧಾ ಪುಟ 38 ರಲ್ಲಿ ವಾದಿರಾಜ ಗುರುಗಳು ಹೇಳಿದ್ದಾರೆ: "ಶಬ್ದಕ್ಕೆ ಅರ್ಥವಿದೆ ಎಂದ ಮಾತ್ರಕ್ಕೆ ವಿದ್ಯಮಾನಕ್ಕೆ ವಿಪರೀತವಾಗಿ ವಾಕ್ಯ ತಾತ್ಪರ್ಯ ಹೇಳಿ ಅರ್ಥ ಸ್ವರೂಪವನ್ನೇ ಅಪಲಪಿಸಿಬಿಡುವುದು ಸರಿಯಲ್ಲ.

ಹಾಗೆ ಮಾಡಲು ಯತ್ನಿಸಿದರೆ "ಗಂಗಯಾಂ ಘೋಷಃ" ಎಂಬಲ್ಲಿ 'ಗಂಗಾ ಪ್ರವಾಹದೊಳಗೇ ಹಳ್ಳಿ ಇದೆ' ಎಂದು ಅರ್ಥ ಮಾಡಬೇಕಾಗುತ್ತೆ; "ಸಿಂಹೋ ದೇವದತ್ತಃ" ಎಂಬ ವಾಕ್ಯಶ್ರವಣ ಮಾಡಿದ ದೇವದತ್ತನ ಪತ್ನಿಯು ಮನೆಯನ್ನು ಬಿಟ್ಟು ಭೀತಿಯಿಂದ ಓಡಿಹೋಗಬೇಕಾಗುತ್ತೆ. ಆದ್ದರಿಂದ ಬೋಧ್ಯವಸ್ತುವು ಹೇಗಿರುವುದೋ ಅದನ್ನು ನೋಡಿಕೊಂಡು ಅದರ ಸ್ವರೂಪಕ್ಕೆ ವ್ಯತ್ಯಾಸ ಹಾನಿಗಳು ಬರದಂತೆ, ಅದನ್ನು ಪ್ರತಿಪಾದಿಸುವ ವಾಕ್ಯಕ್ಕೆ ಮುಖ್ಯ ವೃತ್ತಿಯಿಂದಲೋ, ಅಮುಖ್ಯ ವೃತ್ತಿಯಿಂದಲೋ ಯೋಗ್ಯಾರ್ಥವನ್ನು ಮಾಡಬೇಕು, ವೇದಗಳ ವಾಕ್ಯಗಳಿಗೂ ಕೂಡ ಉಪಪತ್ತಿಗಳಿಗೆ ಅನುಸಾರವಾಗಿ ಅವಿರುದ್ಧ ಅರ್ಥವನ್ನು ತಿಳಿಯಬೇಕು." ತ.ಪ್ರ, ಪುಟ 38 ಗುರ್ವರ್ಥ ದೀಪಿಕೆಯಲ್ಲೂ ಹಾಗೆ ಹೇಳಿದೆ: "ಶ್ರುತೇರಪಿ ಯುಕ್ತ್ಯಾಸ್ವಾರ್ಥಸಾಧಕತ್ವಾತ್." ಆದ್ದರಿಂದ ಎಲ್ಲಿ ವಾಕ್ಯ ಪ್ರತಿಪಾದ್ಯಾರ್ಥವನ್ನು ನೋಡಲು ಶಕ್ಯವೋ ಅಂಥ ಸಂದರ್ಭದಲ್ಲಿ ಆ ಅರ್ಥವನ್ನು ಪ್ರತ್ಯಕ್ಷ ಕಂಡೇ ಸಂದಿಗ್ಧ ವಾಕ್ಯಗಳಿಗೆ ಅರ್ಥವನ್ನು ಭಾಷ್ಯಕಾರರು ಮಾಡಬೇಕು. ಅನ್ಯಥಾ III 3-1 ಅನುವ್ಯಾಖ್ಯಾನೋಕ್ತ ನಿರ್ಣಯವು ವಂಧ್ಯಾಪುತ್ರನಿಗೋ ಮೃತಪುತ್ರನಿಗೋ ವೃತ್ತಿ ಕಲ್ಪಿಸಲು ಮಾಡಿದ ಯತ್ನದಂತೆ ನಿಷ್ಫಲವಾಗುತ್ತೆ.

ಆ ನಿರ್ಣಯ ರೀತಿ ಯಾವುದೆಂದರೆ: "ಸತ್ಸಿದ್ಧಾಂತ ಇತಿ ಜ್ಞೇಯೋ ನಿರ್ಣೀತೋ ಹರಿಣಾಸ್ವಯಂ । ಏತದ್ವಿರೋಧಿಯತ್ಸರ್ವಂ ತಮಸೇ ಅಂಧಾಯ ಕೇವಲಂ ॥ ಅಂಧಂ ತಮೋ ವಿಶಂತೀತಿ ಪ್ರಾಹ ಶ್ರುತಿರಪಿ ಸ್ಫುಟಂ । ಇತ್ಯೇವ ಶ್ರುತಯೋಽಶೇಷಾಃ ಪಂಚರಾತ್ರಮಥಾಖಿಲಂ । ಮೂಲ ರಾಮಾಯಣಂ ಚೈವ ಭಾರತಂ ಸ್ಮೃತಯೋಽಖಿಲಾಃ । ವೈಷ್ಣವಾನಿ ಪುರಾಣಾನಿ ಸಾಂಖ್ಯ ಯೋಗೌ ಪರಾವಪಿ । ಬ್ರಹ್ಮ ತರ್ಕಶ್ಚ ಮಿಮಾಂಸೇತ್ಯನಂತಃ ಶಬ್ದ ಸಾಗರಃ ॥ ಅನಂತಾ ಯುಕ್ತಯಶ್ಚೈವ ಪ್ರತ್ಯಕ್ಷಾಗಮ ಮೂಲಕಾಃ । ಪ್ರತ್ಯಕ್ಷಮೈಶ್ವರಂ ಚೈವ ರಮಾದೀನಾಮಶೇಷತಃ । ಮುಕ್ತಾನಾಮಪ್ಯಮುಕ್ತಾನಾಂ ಏತಮೇವಾರ್ಥ ಮುತ್ತಮಂ । ಅನಾವಕಾಶ ರಹಿತಂ ಪ್ರಕಾಶಯತಿ ಸಾದರಂ ॥ ... ಅಸಂಶಯೇನ ತತ್ವಸ್ಯ ನಿರ್ಣಯೇ ಬ್ರಹ್ಮದರ್ಶನಂ ॥ ಅತೋ ಯಥಾತ್ಮ ಶಕ್ತ್ಯೈವ ಶ್ರವಣಂ ಮನನಂ ತಥಾ ॥" ಎಂದು ಸಮನ್ವಯ ಮಾಡಿ ಸರ್ವ ಶಾಸ್ತ್ರಗಳ ಸೇವೆಯನ್ನು ಸದಾ ಮಾಡುತ್ತಿರಬೇಕೆಂದು ವಿಧಿಸಿದ್ದಾರೆ. (ಅರ್ಥ: ಸತ್ಸಿದ್ಧಾಂತವೇನೆಂಬುದು ಶ್ರೀಹರಿಯಿಂದಲೇ ಸಾಕ್ಷಾನ್ನಿರ್ಣಯಿಸಲ್ಪಟ್ಟಿದೆ. ಅದಕ್ಕೆ ವಿರೋಧಿಯಾದುದೆಲ್ಲಾ ಅಂಧತಮಸ್ಸಿಗೆ ಕಾರಣವಾಗುತ್ತೆ. "ಅಂಧಂ ತಮಃ ಪ್ರವಿಶಂತಿಯೇ ಅವಿದ್ಯಾಂ ಉಪಾಸತೇ" ಎಂದು ಶ್ರುತಿಯೇ ಇದೆ. ಆದ್ದರಿಂದ ಅಶೇಷ ಶ್ರುತಿಗಳು, ಎಲ್ಲಾ ಪಂಚರಾತ್ರ, ಮೂಲರಾಮಾಯಣ ಭಾರತಗಳು, ಎಲ್ಲಾ ಸ್ಮೃತಿಗಳೂ, ವೈಷ್ಣವ ಸಾತ್ವಿಕ ಪುರಾಣಗಳು, ಕಪಿಲ ದೇವ ರಚಿತ ಸಾಂಖ್ಯ, ದತ್ತದೇವ ರಚಿತ ಪರಯೋಗಶಾಸ್ತ್ರ, ಬ್ರಹ್ಮತರ್ಕ, ಮೀಮಾಂಸಾ ಶಾಸ್ತ್ರ ಹೀಗೆ ಅನಂತಶಬ್ದ ಸಮುದ್ರವೂ, ಅನಂತ ಆಗಮ ಪ್ರತ್ಯಕ್ಷ ಮೂಲಕ ಯುಕ್ತಿಗಳೂ, ಈಶ್ವರ ಪ್ರತ್ಯಕ್ಷವೂ, ರಮಾದಿ ಮುಕ್ತರ ಪ್ರತ್ಯಕ್ಷವೂ, ಅಮುಕ್ತ ಜ್ಞಾನಿ ಪ್ರತ್ಯಕ್ಷವೂ ಇದೇ ಸತ್ತತ್ವವನ್ನು ನಿರವಕಾಶವಾಗಿ ಮಹಾತಾತ್ಪರ್ಯ ರೂಪದಿಂದ ಬೋಧಿಸುತ್ತವೆ.... ಹೀಗೆ ನಿಸ್ಸಂಶಯವಾಗಿ ಶಾಸ್ತ್ರ ಮಥನದಿಂದ ತತ್ವನಿರ್ಣಯವಾದರೆ ಪರಬ್ರಹ್ಮ ಸಾಕ್ಷಾತ್ಕಾರವಾಗುತ್ತೆ..... ಆದ್ದರಿಂದ ಸ್ವಯೋಗ್ಯ ಆತ್ಮಶಕ್ತಿಯಿಂದ ಶಾಸ್ತ್ರ ಶ್ರವಣ ಮನನಗಳನ್ನು ಮಾಡಬೇಕು, ಎಂದು ತಾತ್ಪರ್ಯ.) ಸಕಲ

| |
|---|
| ಶಾಸ್ತ್ರಗಳೂ ನಷ್ಟವಾಗಿ ಹೋಗಿದ್ದರೆ ಈ ಸಮನ್ವಯ ಕಾರ್ಯವನ್ನು ಭಗವತ್ಪಾದರು ಏಕೆ ಕರ್ತವ್ಯ ಎಂದು ವಿಧಿಸಿದರು? ಸರ್ವದಾ ಶ್ರವಣಾದಿ ಸೇವೆ ಮಾಡಿಕೊಂಡಿರಬೇಕೆಂಬ ವಿಧಿಯೂ ವಿರುದ್ಧವೇ ಆಗುವುದಿಲ್ಲವೇ? ಆದ್ದರಿಂದ ಶಾಸ್ತ್ರದ ಸರ್ವನಾಶ ಆಗಿಹೋಗಿದೆ ಎಂದು ತಿಳಿಯಬಾರದು, ಸೇವಿಸಲ್ಪಡುವ ಪ್ರಮಾಣಗಳಲ್ಲಿ ಸ್ವಲ್ಪ ಭಾಗ ಪ್ರಕ್ಷೇಪಾದಿಗಳಿಂದ ಹಾಳಾಗಿದ್ದರೂ ಬಹು ಭಾಗವು ಅದರಲ್ಲೂ ಟೀಕಾಚಾರ್ಯರೇ ಮುಂತಾದ ಮುಂದಿನವರಿಗೆ ಅಪರೋಕ್ಷ ಜ್ಞಾನ ಹುಟ್ಟಲಿಕ್ಕೆ ಎಷ್ಟು ಬೇಕೋ ಅಷ್ಟೆಲ್ಲಾ ಇದ್ದೇ ಇದೆ. ಆದ್ದರಿಂದಲೇ ಅವರೆಲ್ಲಾ ಜ್ಞಾನಿಗಳಾಗಿದ್ದಾರೆ, ಎಂದು ಅಂಗೀಕರಿಸಬೇಕು. ನಮ್ಮಗಳ ಅಪರೋಕ್ಷ ಜ್ಞಾನಾರ್ಥವಾಗಿ ಎಷ್ಟು ಬೇಕೋ ಅದೂ ಉಪಲಭ್ಯವೇ ಎಂದೂ ತಿಳಿಯಬೇಕು. ಅದು ಕೈಮುತ್ಯಸಿದ್ಧ. |
| ಇವೆಲ್ಲವನ್ನೂ ಅನಾದರಿಸಿ "ಋಜುತ್ವ ವಿಚಾರ" ಗ್ರಂಥಕರ್ತರು "ಸರ್ವಾಭಿಮತೇರೇವ ಪ್ರಮಾಣತ್ವಾತ್" ಎಂಬ ॥ ಗೀತಾಭಾಷ್ಯದ ವಾಕ್ಯಕ್ಕೆ ಉಭಯಪಕ್ಷದ ಬಹುಜನರಿಂದ ಸಮ್ಮತಿ ಪೂರ್ವಕವಾಗಿ ಅಂಗೀಕರಿಸಲ್ಪಟ್ಟ ವಾಕ್ಯವೇ ಪ್ರಮಾಣ" ಎಂಬ ದುರರ್ಥವನ್ನು ಕಲ್ಪಿಸಿ ಅತೀಂದ್ರಿಯ ವಿಷಯಗಳಲ್ಲಿ ನಾಸ್ತಿಕ, ಮ್ಲೇಚ್ಛ, ಹೂಣಾದಿ ಜನರ ವಾಕ್ಯಗಳಿಗೂ ಪ್ರಾಮಾಣ್ಯ ನ್ನು ಸಂಪಾದಿಸಿ ಕೊಟ್ಟಿರುತ್ತಾರೆ. ಹೆಚ್ಚು ಹೇಳಬೇಕಾದುದೇನು? "ಶಾಸ್ತ್ರವು ನಷ್ಟವಾಗಿ ಹೋಗಿದೆ. ಆದ್ದರಿಂದ ಕ್ರಿಸ್ತ, ತುರುಷ್ಕ, ಬೌದ್ಧಾದಿ ಬಹು ಜನ ಪರಿಗ್ರಹೀತ ವಾಕ್ಯಗಳಿಂದಲೇ ರಾಮ, ಕೃಷ್ಣ ವ್ಯಾಸಾದಿಗಳ ಪರಬ್ರಹ್ಮತ್ವವನ್ನೂ, ಮಧ್ವಾಚಾರ್ಯರ ವಾಯುತ್ವವೇ ಮುಂತಾದ ಇತರ ಪ್ರಮೇಯಗಳನ್ನೂ ನಿರ್ಣಯಿಸಬೇಕು ಎಂದು ಸೂಚಿಸಿಬಿಟ್ಟಿದ್ದಾರೆ. ಋಜುತ್ವವಾದಿಗಳು ಪ್ರಮಾಣವೆಂದು ಒಪ್ಪಿದ ವಾಕ್ಯಗಳ ಆಭಾಸತ್ವವು ಹೇಗೆ ಸಾಧ್ಯವೆಂದು ಚಿಂತಿಸಿ, ತತ್ಸಿದ್ಧಿಗಾಗಿ ಮಾಡಿದ ಮಹಾಪ್ರಯತ್ನದ ಫಲವೇ ಈ ಪ್ರಜ್ಞಾವಾದ. ಈ ದುಷ್ಟ ವಾದವನ್ನು ನೋಡಿಕೊಂಡು ಪೂರ್ವೋಕ್ತ ಪರಕೀಯರೂ ಕೂಡ ಹೀಗೆ ಹೇಳಬಹುದು : "ನಾವು ವೇದಾದಿಗಳನ್ನು ಪ್ರಮಾಣವೆಂದು ನಂಬುವುದಿಲ್ಲ. ಅವೆಲ್ಲಾ ವಂಚಕರಿಂದ ಮಾಡಲ್ಪಟ್ಟವು. ಯಾವುದೋ ಕಾಲದ ಗಾಳಿ ಮಾತುಗಳು. ನೀವು ದ್ವೈತಿಗಳು ಈಗಿನ ಕಾಲದ ನಮಗೆ ಸಮ್ಮತವಾಗುವ ಸಂಪ್ರತಿಪನ್ನ ವಾಕ್ಯಗಳಿಂದ ಈಶ್ವರಾದಿ ನಿಖಿಲ ತತ್ವಗಳನ್ನು ಸಾಧಿಸಿ ಕೊಡಿ" ಎಂದು ಅವರು ಕೇಳಬಹುದು. |
| "ಋಜುತ್ವ ವಿಚಾರ" ಗ್ರಂಥಕಾರರ ಯುಕ್ತಿಯೂ ಸ್ವಾತ್ಮಘಾತಕವೇ. ಹೇಗೆಂದರೆ ಇದು ಅವರ ಮಾತಿನ ಭಾವ: "ಭಾರತಾದಿ ಲೌಕಿಕಾಗಮಗಳಾಗಲಿ, ವೇದಾದಿ ಅಲೌಕಿಕಾಗಮಗಳಾಗಲಿ, ಸರ್ವವೂ ಪ್ರಕ್ಷೇಪ, ವಿಕ್ಷೇಷ, ಸಂವರಣ, ಪ್ರತಾರಣಾದಿಗಳಿಂದ ಹೋಗಿಬಿಟ್ಟಿವೆ. 'ಕೋಟ್ಯಂಶವೂ ಇಲ್ಲ' ಎಂಬ ಆಚಾರ್ಯೋಕ್ತಿಯಂತೆ ಈಗ ನಿಮ್ಮಿಂದ ಬ್ರಹ್ಮಾಂಡ, ಬ್ರಹ್ಮವೈವರ್ತ, ಬೃಹನ್ನಾರದ, ಪಾದ್ಮ, ವಾಮನ, ಸ್ಕಂದ, ಋಕ್ಸಂಹಿತಾ ಎಂಬ ಹೆಸರಿನಿಂದ ಉದಾಹರಿಸಲ್ಪಡುವ ವಚನಗಳೆಲ್ಲವೂ ಕಿಲ್ಪಿತಗಳು; ಅವು ನಿಜವಾಗಿ ಆ ಪುರಾಣಾದಿಗಳಿಗೆ ಸೇರಿಯೇ ಇಲ್ಲ. "ಉತ್ಸನ್ನಾಃ ಪ್ರಾಯಶಃ ಸರ್ವೆ" ಎಂದು ಸ್ಪಷ್ಟ ಆಚಾರ್ಯರ ವಚನವಿದೆ. ಇನ್ನು ಸ್ವಾ.ವೃಂ.ಆ., ಕರ್ಣಾಟಕ ಪದಗಳೂ ಕಲ್ಪಿತಗಳೇ ಎಂದು ಏತಕ್ಕೆ ಹೇಳಬಾರದು? ಅವು ಬರೆಯಲ್ಪಡುತ್ತಿರುವಾಗ ಅವನ್ನು ನೋಡುವುದಕ್ಕೆ ಯಾರು ಹತ್ತಿರ ಕುಳಿತಿರುತಿದ್ದರು? ವಿಶ್ವಪ್ರಿಯವಿಲಾಸಾದಿಗಳೂ ಕಲ್ಪಿತವೇ. ಅವು ಕಲ್ಪಿತವಲ್ಲವೆಂದು ಪ್ರಮಾಣವೆಲ್ಲಿ? ಆದ್ದರಿಂದ |

ಈಗ ವಿವಾದ ಬಂದರೆ, ಸರ್ವವಾದಿ ಸಂಪ್ರತಿಪನ್ನ ವಾಕ್ಯಗಳನ್ನು ಉದಾಹರಿಸಿ ಋಜುತ್ವ ಸಾಧಿಸಬೇಕು. ಗೀತಾ ಭಾಷ್ಯದಲ್ಲೂ ಹಾಗೆ ಹೇಳಿದೆ. ಅನ್ಯಥಾ ಕೃತಕತ್ವಶಂಕೆ ಹೋಗುವುದಿಲ್ಲ. ತಥಾಚ ಋಜುತ್ವಕ್ಕೆ ಪ್ರಮಾಣವೆಲ್ಲಿ?" ಇದು ಪೂರ್ವಪಕ್ಷಿಗಳ ವಾದ.

ಇದಕ್ಕೆ ಉತ್ತರವಿದೆ. ಏನೆಂದರೆ, ಪೂರ್ವಪಕ್ಷಿಗಳ ಈ ಮಾತೆಲ್ಲಾ ಛಲ ಪ್ರಕ್ರಿಯೆಗೆ ಸೇರಿದ್ದು. ಇದು ದುರ್ವಾದ. ಇದು ನಿರ್ಮೂಲ. ಶಾಸ್ತ್ರ ಘಾತಕ. ಸರ್ವಪ್ರಮಾಣಗಳೂ ಹೀಗೆ ನಷ್ಟವಾಗಿದ್ದರೆ ಹೇಗೆ ಭಗವಂತರಾದ ಭಾಷ್ಯಕಾರರು ನಷ್ಟಗಳೇ ಆದ ಶ್ರುತಿಸ್ಮೃತಿ ಪುರಾಣ ಸಾಮಸಂಹಿತಾದಿ ವಾಕ್ಯಗಳನ್ನು ಉದಾಹರಿಸಿ, ನಷ್ಟವೇ ಆಗಿ ಹೋದ ಶ್ರುತಿಸ್ಮೃತಿ ಪುರಾಣಾದಿಗಳ ನಿರ್ಣಯವನ್ನೂ, ಸಮನ್ವಯವನ್ನೂ ರಚಿಸಿ, ದ್ವೈತಸಿದ್ಧಾಂತವು ಸ್ಥಾಪಿತವಾಯಿತೆಂದರು? ಆ ನಿರ್ಣಯ ಕಾರ್ಯಕ್ಕಾಗಿ ಉದಾಹರಿಸಲು ಅವರಿಗೆ "ಸಂಪ್ರತಿಪನ್ನ" ವಾಕ್ಯಗಳು ಎಲ್ಲಿದ್ದವು? "ಅವರ ವಿಷಯದಲ್ಲಿ ಹಾಗೆ ಹೇಳಕೂಡದು. ಮಧ್ವಗುರುಗಳು ಅವತಾರ ಪುರುಷರು, ಇಪ್ಪತ್ತಕಿಂತ ಹೆಚ್ಚಾಗಿ ದೇಹಲಕ್ಷಣ ಸಂಪನ್ನರಾದ ಮಂತ್ರದ್ರಷ್ಟ್ರು ಪುರುಷರು ಅವರು. ಅವರು ಕೆಟ್ಟು ಹೋದ ಮತ್ತು ಕೆಡದಿದ್ದ ವೇದ ಭಾಗಗಳನ್ನು ತಮ್ಮ ದಿವ್ಯದೃಷ್ಟಿಯಿಂದ ತಿಳಿದು, ಶ್ರುತಿ ಸ್ಮೃತಿ ಪುರಾಣ ಭಾರತ ಪಂಚರಾತ್ರ ಸಂಹಿತಾ ರಾಮಾಯಣಾದಿಗಳಲ್ಲಿ ಪ್ರಕ್ಷಿಪ್ತ ಭಾಗಗಳನ್ನು ದೂರಮಾಡಿ ಗ್ರಂಥಗಳನ್ನು ಶೋಧಿಸಿ ಅವುಗಳು ಸಾಧನಕ್ಕನುಕೂಲವಾಗುವಂತೆ ಶುದ್ಧ ಪಾಠಗಳನ್ನು ಬರೆಯಿಸಿ, ವಿಶುದ್ಧವಾದಂಥ ದೇವಮಾನ್ಯ ಶ್ರುತಿ ಸ್ಮೃತಿ ಭಾರತ ಪುರಾಣ ರಾಮಾಯಣ ಸಂಹಿತೆಗಳಿಂದಲೇ ವಾಕ್ಯಗಳನ್ನು ಉದಾಹರಿಸಿ, ಹಾಗೆ ವಿಶೋಧಿತವಾದ ಮೂಲ ಶಾಸ್ತ್ರಗಳನ್ನೇ ಸಮನ್ವಯ ಮಾಡಿ, ನಿರ್ಣಯಗಳನ್ನು ಬರೆದು ವ್ಯಾಖ್ಯಾನ ದ್ವಾರಾ ಅವುಗಳ ನಿಜಮತವನ್ನು ಪ್ರಕಾಶಪಡಿಸಿ ತಮ್ಮ ದ್ವೈತ ಸಿದ್ಧಾಂತವನ್ನು ಸ್ಥಾಪಿಸಿದ್ದಾರೆ. ಅವರು ನೋಡಿ ಸರಿಮಾಡುವುದಕ್ಕೆ ಮೊದಲಿದ್ದ ಸ್ಥಿತಿಯನ್ನು ಕೋಟ್ಯಂಶವೂ ಇಲ್ಲ" ಎಲ್ಲವನ್ನೂ ದುರ್ಜನರೂ, ಭ್ರಾಂತರೂ, ಪ್ರಮತ್ತರೂ ಕೆಡಿಸಿಬಿಟ್ಟಿದ್ದಾರೆ," ಎಂದು ನಿರ್ಣಯದಲ್ಲಿ ವರ್ಣಿಸಿದ್ದಾರೆ. ತಾವು ಪಾಠಕ್ಕೆ ಇಟ್ಟುಕೊಂಡು ಉದಾಹರಿಸಿರುವ ಪುರಾಣಾದಿಗಳೂ ಕುಲಗೆಟ್ಟುಹೋಗಿವೆ ಎಂದರ್ಥವಲ್ಲ" ಎಂದು ಹೇಳುವುದಾದರೆ ಅಂಥ ಸಮಾಧಾನವು ಸ್ವಲ್ಪ ಸಾಧುವೇ. ಅನ್ಯಥಾ ಭಾಷ್ಯಕಾರರಿಗೆ ಸ್ವಕ್ರಿಯಾ ವಿರೋಧ ದೋಷಬಂದೀತು. ಉಪಯೋಗಿಸುವ ಗ್ರಂಥಗಳೆಲ್ಲಾ ಕೆಟ್ಟು ಹೋಗಿದೆ ಎಂದು ಹೇಳಿ ಅವನ್ನೇ ಉಪಯೋಗಿಸಿದರೆ ಹಾಲು ಕೆಟ್ಟು ಹೋಗಿದೆ ಎಂದು ಹೇಳಿ ಅದನ್ನೇ ಕುಡಿದಂತೆ ಸ್ವಕ್ರಿಯಾ ವಿರೋಧವೇ ಬರುತ್ತೆ.

ಆದ್ದರಿಂದಲೇ ಶ್ರೀ ವಾದಿರಾಜ ಗುರುಗಳು "ಕೋಟ್ಯಂಶೋಪಿ ನ ವಿದ್ಯತೇ" ಎಂಬ ನಿರ್ಣಯ ವಾಕ್ಯಕ್ಕೆ ಬೇರೆ ಯೋಗ್ಯ ವ್ಯಾಖ್ಯಾನವನ್ನು ಮಾಡಿದ್ದಾರೆ: "ಸರ್ವೇ ಮೂಲರಾಮಾಯಣಾದಯಃ ಕೋಟಿಭ್ಯಃ ಅಂಶಃ ಶತಸಹಸ್ರಲಕ್ಷಾದಿ ಸಂಖ್ಯಾಕ ಇತ್ಯರ್ಥಃ" ಎಂದು ಭಾವ ಪ್ರಕಾಶಿಕೆಯಲ್ಲಿ ಬರೆದಿದ್ದಾರೆ. ಇದರ ಭಾವವೇನೆಂದರೆ ವೇದ ಭಾರತ, ಪುರಾಣ ಸಂಹಿತಾ ಗ್ರಂಥಗಳು ಸಂಪೂರ್ಣವಾಗಿ ನಷ್ಟವಾಗಿಲ್ಲ; ಪ್ರತ್ಯಕ್ಷ ಸಿದ್ಧವಾಗಿರುವುದರಿಂದ; ಮೂಲಾನುವಾದ ಮಾಡದೇ ಭಾರತಾದಿಗಳ ತಾತ್ಪರ್ಯವನ್ನು ಸರ್ವಜ್ಞಾಚಾರ್ಯರೇ 'ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ'

| |
|---|
| ಮಾಡಿಯೂ ಇದ್ದಾರೆ. ಮೂಲವು ಶುದ್ಧವಾಗಿರುವುದರಿಂದಲೇ ಹಾಗೆ ಮಾಡಿದರು, ಮತ್ತು ಭಾರತ ವಾಕ್ಯಗಳಿಂದಲೇ ಸಿದ್ಧಾಂತ ನಿರೂಪಣವನ್ನೂ ಮಾಡಿದ್ದಾರೆ. ಆ ಕಾರಣದಿಂದಲೂ ಲಕ್ಷ ಭಾರತವು ನಷ್ಟವಾಗಿಲ್ಲವೆಂದಾಯಿತು, ಹಾಗೆ ಪ್ರತ್ಯಕ್ಷ ಸಿದ್ಧ ಪುರಾಣ ವಾಕ್ಯಗಳಿಂದಲೇ ಕೃಷ್ಣಾಮೃತಮಹಾರ್ಣವದಲ್ಲಿ ಬಹುತತ್ವಗಳನ್ನು ನಿರೂಪಿಸಿರುತ್ತಾರೆ. ಭಾಗವತ ವಿಷಯದಲ್ಲಾದರೋ ಶ್ರುತಿಗೀತಾದಿ ಭಾಗಗಳಲ್ಲಿ ಶ್ಲೋಕಗಳೆಲ್ಲವನ್ನೂ ಉದಾಹರಿಸಿ ವ್ಯಾಖ್ಯಾನಮಾಡಿ ಅನುಗ್ರಹಿಸಿದ್ದಾರೆ; ಎಂದರೆ ಪ್ರಕ್ಷೇಪ ವಿಕ್ಷೇಪಗಳನ್ನು ತಿಳಿದು ಸಾಧುಪಾಠವನ್ನು ಒದಗಿಸಿಬಿಟ್ಟಿದ್ದಾರೆ. ಇತರ ಭಾಗಗಳಲ್ಲಿ ಸಮಗ್ರ ತಾತ್ಪರ್ಯ ರಚಿಸಿ ಅಪಪಾಠಗಳನ್ನು ಅಡ್ಡಗಟ್ಟಿ ಸಾಧುಪಾಠವನ್ನು ಸ್ಥಿರಪಡಿಸಿಬಿಟ್ಟಿದ್ದಾರೆ. ಉಪನಿಷದಾದಿಗಳ ವಿಷಯದಲ್ಲಿ ವ್ಯಾಖ್ಯಾನ ಮಾತ್ರದಿಂದಲೇ ಪಾಠ ರಕ್ಷಣೆ ಮಾಡಿದ್ದಾರೆ. ಬ್ರಹ್ಮಸೂತ್ರಗಳನ್ನು ಉದಾಹರಿಸಿಯೇ ವ್ಯಾಖ್ಯಾನ ಮಾಡಿ ಸೂತ್ರಗಳು **564** ಎಂದು ತೋರಿಸಿದ್ದಾರೆ. ಗ್ರಂಥಗಳ ಕೋಶವನ್ನೇ ಎತ್ತಿನ ಮೇಲಿಟ್ಟುಕೊಂಡು ಪ್ರವಾಸ ಕಾಲದಲ್ಲೂ ರಕ್ಷಿಸಿದ್ದಾರೆ. ಅನೇಕ ಗ್ರಂಥಗಳನ್ನು ಆಚಾರ್ಯ ಶಿಷ್ಯರು, ಶಂಕರ ಭಟ್ಟರು, ರಕ್ಷಿಸಿಕೊಂಡಿದ್ದರೆಂದೂ ಶ್ರುತವಾಗಿದೆ. ಹೀಗೆ ಪ್ರಮಾಣಗಳನ್ನು ಬದುಕಿಸಿದರು. ಹಾಳಾಗಿ ಹೋದದ್ದು ಹೋಗಲಿ ಎಂದು ಬಿಡಲಿಲ್ಲ ಎಂದು ಸಿದ್ಧವಾಗುತ್ತೆ,. |
| ಆದ್ದರಿಂದ ಎಲ್ಲಾ ಮೂಲ ಪ್ರಮಾಣಗಳೂ ಧಟವಸ್ತವಾಗಿವೆ ಎಂದು ತಿಳಿಯುವುದು ಭ್ರಾಂತಿ. ಭಾಗವತವು ವಿಶೇಷ ಕಲುಷೀಕೃತವಾಗಿತ್ತು. ಕೆಲವು ಮೂಲರಾಮಾಯಣ ಸಂಹಿತಾದಿಗಳು, ದೇಶಾಂತರಕ್ಕೆ ಹೋದವು. ಭಾರತ ಪುರಾಣಾದಿಗಳೂ, ಕೆಲವು ವೇದ ಭಾಗಗಳೂ, ಸಂಹಿತೆಗಳೂ ಉಳಿದುಕೊಂಡವು. ಅನಂತವೇದ, **100** ಕೋಟಿ ರಾಮಾಯಣ, **100** ಕೋಟಿ ಪಂಚರಾತ್ರ, **50** ಕೋಟಿ ಬ್ರಹ್ಮತರ್ಕಾದಿ ಸಮುದಾಯದಲ್ಲಿ ಕೋಟ್ಯಂಶ ಮಾತ್ರ ಉಳಿದ ಹಾಗಾಯಿತು, ಕೋಟ ಗ್ರಂಥಗಳಲ್ಲಿ ಲಕ್ಷ ಲಕ್ಷ ಗ್ರಂಥಗಳಲ್ಲಿ ಸಹಸ್ರದಂತೆ ನಷ್ಟವಾಗಿದ್ದವು. ಸಹಸ್ರ ಗ್ರಂಥಗಳಲ್ಲಿ ನೂರು ಪ್ರಕ್ಷೇಪಾದಿಗಳಿಂದ ನಷ್ಟವಾಗಿತ್ತು. ಅವೆಲ್ಲವೂ ಪರೀಕ್ಷಿಸಿ ಸಂಶೋಧಿಸಿ ಪ್ರಕಟಿಸಲ್ಪಡಬೇಕಾದ ಸ್ಥಿತಿಯಲ್ಲಿದ್ದವು. ಆ ಕಾರ್ಯವನ್ನೇ ಭಗವತ್ಪಾದರು ಸಂಕ್ಷೇಪತಃ ಮಾಡಿದ್ದಾರೆ ಎಂದು ಗೊತ್ತಾಗುತ್ತೆ. “ನಾನು ಭಗವತ್ಪ್ರೇರಣೆಯಿಂದ ಸಜ್ಜನ ಸಹಾಯಾರ್ಥವಾಗಿ ಜ್ಞಾನಮಾರ್ಗ ತೋರಿಸಲು ಬಂದಿದ್ದೇನೆ. ಭಾಗವತ, ಸೂತ್ರ ಪ್ರಸ್ಥಾನ, ಋಗಾದಿ ಈಶಾವಾಸ್ಯಾದಿ ವೇದ ಪ್ರಸ್ಥಾನ, ಗೀತಾದಿ ಭಾರತ ಪ್ರಸ್ಥಾನ ಇವೆಲ್ಲಾ ನನ್ನಿಂದ ಪುನರುಜ್ಜೀವಿತವಾಗಿವೆ. ಇತರ ಗ್ರಂಥಗಳೂ ಸಂಶೋಧಿತವಾಗಿವೆ, ನನ್ನ ಕೋಶದಲ್ಲೇ ಇವೆ” ಎಂದು ಮ.ತಾ.ನಿರ್ಣಯ ಕೊನೆ ಅಧ್ಯಾಯದಲ್ಲಿ ಆಚಾರ್ಯರು ಸೂಚಿಸಿಬಿಟ್ಟಿದ್ದಾರೆ. ಎಲ್ಲವೂ ನಷ್ಟವಾಗಿ ಹೋಗಿದ್ದರೆ ಇವರೇನು ನಿರ್ಣಯ ಮಾಡಬೇಕು? ಏತಕ್ಕೆ ತಾನೇ ಮಾಡಬೇಕು? ಭೂಲೋಕದಲ್ಲಿ ಶಾಸ್ತ್ರವೇ ಇಲ್ಲದ ಮೇಲೆ, ವ್ಯಾಖ್ಯೆಯವೇ ಇಲ್ಲದ ಮೇಲೆ, ವ್ಯಾಖ್ಯಾನವು ಏತಕ್ಕೆ? ಆ ವ್ಯಾಖ್ಯಾನಕ್ಕೆ ಪ್ರಾಮಾಣ್ಯ ನಿರ್ಣಯವು ಹೇಗಾಗುತ್ತೆ? ವ್ಯಾಖ್ಯಾನ ವ್ಯಾಖ್ಯೇಯಗಳ ಸಾಮಂಜಸ್ಯ ದರ್ಶನವು ಹೇಗೆ ಸಾಧ್ಯ? ಈ ಪ್ರಶ್ನೆಗಳಿಗೆ ಉತ್ತರ ಸಾಧ್ಯವಾಗುವುದಿಲ್ಲವಾದ್ದರಿಂದ ಶ್ರೀ ಗುರುರಾಜರೇ ಬರೆದಿರುವಂತೆ ಅನಂತ ಗ್ರಂಥಗಳಲ್ಲಿ ಕೋಟಿ, ಕೋಟಿಯಲ್ಲಿ |

ಲಕ್ಷ, ಲಕ್ಷದಲ್ಲಿ ಸಾವಿರ, ಸಾವಿರದಲ್ಲಿ ನೂರು ಗ್ರಂಥ ಹೀಗೆ ಹಾಳಾಗಿ ಹೋಗಿ ಇತರ ಭಾಗ ಮಾತ್ರ ಉಳಿದಿದೆ; ಬಹು ಪ್ರಮೇಯ ಪ್ರತಿಪಾದಕ ಭಾಗಗಳು ಉತ್ಪಾದಿತವಾಗಿವೆ ಎಂದು ಮಾತ್ರ ಅರ್ಥ.

ಆದ್ದರಿಂದಲೇ ಭಗವಾನ್ ಆಚಾರ್ಯರು ನಿಜವಾದ ಶಾಸ್ತ್ರವಾಕ್ಯಗಳನ್ನು ಪರಿತ್ಯಾಗ ಮಾಡಿ 'ಸಂಪ್ರತಿಪನ್ನವಾಕ್ಯ' ಗಳನ್ನು ಸೇರಿಸಿಕೊಂಡು ಅವುಗಳಿಂದ ಶಾಸ್ತ್ರ ಸಿದ್ಧಾಂತವನ್ನು ಮಾಡಿದರೆಂದು ತಿಳಿಯಕೂಡದು. ಆಚಾರ್ಯರು ಉದಾಹರಿಸಿರುವ ಶ್ರುತಿ ಸ್ಮೃತಿಗಳು ಸಂಪ್ರತಿಪನ್ನ ವಾಕ್ಯಗಳಲ್ಲ. ಅದರೆ ಅವು ವೇದ, ಸೂತ್ರ, ರಾಮಾಯಣ, ಭಾರತ, ಸಾತ್ವಿಕಪುರಾಣ, ಮತ್ತು ತದನುಸಾರಿ ಸಂಹಿತಾವಾಕ್ಯ ಸಮುದಾಯದಿಂದ ಆರಿಸಲ್ಪಟ್ಟವು. ವ್ಯಾಸಾದಿ ಶಿಷ್ಟಾಭಿಮತವಾದ ಆ ಮೂಲಶಾಸ್ತ್ರವು ಎಲ್ಲಿಯಾದರೂ ಪ್ರಕ್ಷೇಪಾದಿಗಳಿಂದ ಅಶುದ್ಧವಾಗಿದ್ದರೆ, ಅದರಲ್ಲಿ ಅವರು ವೇದವ್ಯಾಸ ಸಮ್ಮತ ಅನಾದಿ ಕಾಲೀನ ಶುದ್ಧ ಪಾಠವನ್ನೇ ಉದಾಹರಿಸಿ ವ್ಯಾಖ್ಯಾನ ಮಾಡಿದ್ದಾರೆಂದು ಭಾಗವತ ತಾತ್ಪರ್ಯಾದಿ ಅಧ್ಯಯನ ಶೀಲರಿಗೆ ತಿಳಿದೇ ಇದೆ. ಹೀಗೆ ಮಧ್ವಗುರುಗಳ ಕೃಪೆಯಿಂದ ಶಾಸ್ತ್ರಗಳು ಹೇಗೆ ಮನುಷ್ಯ ಸಾಧನೋಪಯೋಗಿಗಳಾಗಬಹುದೋ ಹಾಗೆ ಶೋಧಿತಗಳಾಗಿ ಭರತಖಂಡದಲ್ಲಿ ಉಳಿಸಲ್ಪಟ್ಟಿವೆ. ಹೋದ ಭಾಗವು ಹಾನಿದಾಯಕವಾದರೂ, ಉಳಿದ ಭಾಗವು ಸಾಧನಕೆ ಸಾಕಾಗುವಷ್ಟು ಇದ್ದು ಆಚಾರ್ಯರಿಂದಲೂ ಶೋಧಿತವಾಗಿದೆ ಎಂದೇ ಅಂಗೀಕರಿಸಬೇಕು. ಶ್ರೀಮಧ್ವಾಚಾರ್ಯರ ಅದರ್ಶನಾನಂತರ ಅವರ ಕೋಶದಲ್ಲಿದ್ದ ಅನೇಕ ಶೋಧಿತ ಗ್ರಂಥಗಳಂತೂ ಅದರ್ಶನ ಹೊಂದಲಿಲ್ಲ. ಅವು ಇಲ್ಲಿಯೇ ಉಳಿದಿವೆಯಾದ್ದರಿಂದ ಅವುಗಳ ಪೈಕಿ ಅಥವಾ ಆ ಕಾಲದಲ್ಲಿ ಅಲ್ಲಲ್ಲಿ ಉಪ ಲಬ್ಧವಾದ ಗ್ರಂಥಗಳ ಪೈಕಿ ಋಕ್ಸಂಹಿತಾ ವಾಮನ ಪುರಾಣಾದಿಗಳನ್ನು ಶ್ರೀವೇದನಿಧಿ ತೀರ್ಥಾದಿಗಳು ಸಂಗ್ರಹಿಸಿ, ಅಲ್ಲಿನ ಪ್ರಮಾಣ ಶ್ಲೋಕಗಳನ್ನು ಲೋಕಕ್ಕೆ ತೋರಿಸಿದರೆಂದೂ, ಅವರ ಶಿಷ್ಯರ ವಾ.ಗು.ಚ. ಗ್ರಂಥದಲ್ಲಿ ಆ ಶ್ಲೋಕಗಳು ಉದಾಹೃತವಾಗಿವೆ ಎಂದೂ ತಿಳಿಯಲು ಅಡ್ಡಿ ಇಲ್ಲ. ಶ್ರೀಮದಾಚಾರ್ಯರ ಅನುಗ್ರಹದಿಂದ ಶಾಸ್ತ್ರಗಳು ಸುರಕ್ಷಿತವಾಗಿ ಬದುಕಿದವೇ ಹೊರತು ಹಾಳಾಗಲಿಲ್ಲ. ಶ್ರವಣಾದಿ ಸಾಧನೆಗಳಿಗೆ ಅವು ಸಿಕ್ಕಿ ಅನುಕೂಲಿಸಿದವು. ಅದರಿಂದಲೇ ಶ್ರವಣಾದಿಗಳು ಸಾಧ್ಯವಾಗಿ ಅನೇಕರು ಅಪರೋಕ್ಷಜ್ಞಾನ ಹೊಂದಿದರು ಎಂದು ಚರಿತ್ರೆಯೇ ತೋರಿಸುತ್ತೆ. ಆದ್ದರಿಂದ ಬ್ರಹ್ಮಾಂಡ, ವಾಮನ, ಬ್ರಹ್ಮವೈವರ್ತಾದಿ ವಾಕ್ಯಗಳಿಗೆ ಕೃತಕತ್ವ ಶಂಕೆ ಮಾಡಿರುವುದು ಅಯುಕ್ತವು, ನಿಷ್ಕಾರಣವು ಎಂದು ನಿಶ್ಚಯಿಸಬಹುದು. ಅವು ಪ್ರಮಾಣ ವಾಕ್ಯಗಳೇ.

"ಸರ್ವ ಸಂಪ್ರತಿಪನ್ನ ವಾಕ್ಯ"ಗಳನ್ನು ಸಿದ್ಧಪಡಿಸಿ, ಶ್ರೀಮದಾಚಾರ್ಯರು ಎಲ್ಲರ ರುಜುವನ್ನು ಪಡೆದು, ಅವುಗಳನ್ನು ಪ್ರಮಾಣವೆಂದು ತಾವು ಒಪ್ಪಿ, ಅವುಗಳನ್ನೇ ತಮ್ಮ ಗ್ರಂಥಗಳಲ್ಲಿ ಉದಾಹರಿಸಿ, ಸಿದ್ಧಾಂತ ಸ್ಥಾಪಿಸಿದರೆಂಬುದು ಹುಚ್ಚರ ಮಾತು. ಆಚಾರ್ಯರು ಉದಾಹರಿಸಿರುವ ವಾಕ್ಯಗಳೆಲ್ಲಾ ಶಾಸ್ತ್ರದ ವಾಕ್ಯಗಳು. ಆದರೆ ಅವಕ್ಕೆ ಸರ್ವಸಂಪ್ರತಿಪತ್ತಿ ಇಲ್ಲವೇ ಇಲ್ಲ. ಅಪ್ಪಯ್ಯದೀಕ್ಷಿತರೇ ಮುಂತಾದ ಅದ್ವೈತಿಗಳೇ ಮುಂತಾದವರು ಅವರು ಉದಾಹರಿಸಿರುವ ವಾಕ್ಯಗಳು ಕಲ್ಪಿತವೆನ್ನುತ್ತಾರೆ. ಬಳಿತ್ಥಾಸೂಕ್ತವೂ ಯಾಸ್ಕಾದಿಗಳಿಂದ ಅಗ್ನಿಪರವೆಂದು

ಅಂಗೀಕೃತವಾಗಿದೆ. ಆಚಾರ್ಯೋದಾಹೃತ ವಾಕ್ಯಗಳೆಲ್ಲಾ ಪ್ರಮಾಣಗಳು, ವ್ಯಾಖ್ಯಾನಗಳೆಲ್ಲಾ ಸಾಧುಗಳು, ಎಂದೂ ಸರ್ವಸಂಪ್ರತಿಪತ್ತಿ ಇಲ್ಲದ್ದರಿಂದ ಈ ಪೂರ್ವಪಕ್ಷ ಗ್ರಂಥಕಾರರು ದ್ವೈತಮತವನ್ನೇ ಖಂಡಿಸಿದಂತಾಯಿತು.

ಸಂಪ್ರತಿಪನ್ನ ಶ್ರುತೀತಿಹಾಸ ಪುರಾಣಾದಿಗಳನ್ನೇ ಪ್ರಮಾಣವನ್ನಾಗಿ ಉದಾಹರಿಸಬೇಕೆಂಬುದು ಇವರ ಸ್ವಕಪೋಲಕಲ್ಪಿತ ನ್ಯಾಯ. ಆ ನ್ಯಾಯವನ್ನು ಒಪ್ಪಿದರೆ ಪುರುಷ ಸೂಕ್ತಾದಿ ಕೆಲವು ಮಾತ್ರ ಸಂಪ್ರತಿಪನ್ನ ಶ್ರುತಿ; ಗೀತಾದಿ ಮಾತ್ರ ಸಂಪ್ರತಿಪನ್ನ ಸ್ಮೃತಿ; ಪದ್ಮ ಪೂರ್ವಾರ್ಧವು ಸಂಪ್ರತಿಪನ್ನ ಪುರಾಣ; ಎಂದ ಶಠರು ಹೇಳಿದರೆ, ಅಂಥ ಗ್ರಂಥಗಳಿ0ದ ದ್ವೈತ ಸಿದ್ಧಾಂತ ಸ್ಥಾಪಿಸಿ ರಕ್ಷಿಸಲು ಹೇಗೆ ಸಾಧ್ಯವಾಗುವುದು? ಅಸಂಪ್ರತಿಪನ್ನವಾದ ಅನಂತ ವೇದ, ಆಗಮ, ಸಂಹಿತಾ, ಮೂಲರಾಮಾಯಣ ಬ್ರಹ್ಮತರ್ಕ ಮುಂತಾದ ಗ್ರಂಥಗಳಿಗೆ ಅಪ್ರಾಮಾಣ್ಯ ಪ್ರಸಂಗವನ್ನು ಹೇಗೆ ತಪ್ಪಿಸುವುದು? ತತ್ರಾಪಿ ಮಂತ್ರ ದ್ರಷ್ಟ್ರು ಆಚಾರ್ಯರು ಉದಾಹರಿಸಿರುವ ಅನೇಕ ಅಪ್ರಸಿದ್ಧ ಶ್ರುತಿ ಸ್ಮೃತಿ ವಾಕ್ಯಗಳಿಗೆ ಏನು ಗತಿ?

ಕಿಂಚ ಸಂಪ್ರತಿಪತ್ತಿ ಎಂಬ ಸಾಧಕ ಗುಣ ಸಾಪೇಕ್ಷವಾಗಿ ವಾಕ್ಯ ಪ್ರಾಮಾಣ್ಯವನ್ನು ನಿಯತವಾಗಿ ನಿಶ್ಚಯಿಸುವುದಾದರೆ ಪ್ರಾಮಾಣ್ಯ ಪರತಸ್ತ್ವವನ್ನೇ ಒಪ್ಪಿದಂತಾಯಿತು. ವೇದಾದಿ ಅನಂತ ಗ್ರಂಥಗಳ ಪ್ರಾಮಾಣ್ಯವು ಸಂಪ್ರತಿಪತ್ತಿ ಎಂಬ ಗುಣಕ್ಕೆ ಅಧೀನವಾಗಿ ಪ್ರಮಾಣವೆಂದು ಸಿದ್ಧವಾಗಬೇಕೇ? ಬೌದ್ಧಾದಿಗಳ ದುಷ್ಟ ಗ್ರಂಥಗಳು ವಿಚಾರರಹಿತ ಜನರ ಸಂಪ್ರತಿಪತ್ತಿಯನ್ನು ಪಡೆದ ಮಾತ್ರಕ್ಕೆ ಪ್ರಮಾಣವೆಂದು ಕರೆಯಲ್ಪಡಬೇಕೇ? **"ಪ್ರಾಮಾಣ್ಯಂ ಸ್ವತಃ"** ಎಂಬ ಆಚಾರ್ಯರ ಸಿದ್ಧಾಂತವನ್ನು ತ್ಯಜಿಸಬೇಕೇ? ಪ್ರಮಾಣ ಬಾಧಿತ ಪದ್ಮಪೂರ್ವಾರ್ಧಾದಿ ಗ್ರಂಥಗಳಿಗೆ "ಸಂಪ್ರತಿಪತ್ತಿ"ಯು ಪ್ರಾಮಾಣ್ಯ ದಾನವನ್ನು ಮಾಡಲಾರದು. ಪೂರ್ವಪಕ್ಷಿಗಳು ಕಲ್ಪಿಸಿರುವ ಸಂಪ್ರತಿಪತ್ತಿಯು ನಿಯತ ಪ್ರಾಮಾಣ್ಯ ಸಾಧಕ ಲಿಂಗವಲ್ಲ. ಶಬ್ದವು ತನ್ನ ಸಹಜ ಶಕ್ತಿಯಿಂದಲೇ ಯಥಾರ್ಥಜ್ಞಾನ ಹುಟ್ಟಿಸುತ್ತೆ. ಬಾಧಕ ಕಂಡರೆ ಅದು ಅಪ್ರಮಾಣ, ದೋಷಗ್ರಸ್ತವೆಂದು ನಿರಾಕರಿಸಲ್ಪಡುತ್ತೆ; ತಾತ್ಪರ್ಯ ತಿಳಿಯದೆ ಅಪ್ರಾಮಾಣ್ಯ ಶಂಕೆ ಬಂದರೆ ವೇದಾನುಸಾರಿತ್ವ, ಪ್ರಮಾಣಾವಿರುದ್ಧತ್ವಾದಿ ಅನೇಕ ಉಪಾಯಗಳಲ್ಲಿ ಯಾವುದಾದರೂ ಉಪಾಯದಿಂದ ಶಂಕೆ ಪರಿಹರಿಸಲ್ಪಡುತ್ತೆ. ವೇದವಾದರೂ ಹಾಗೆಯೇ, ಮನುಷ್ಯ ಗ್ರಂಥವಾದರೂ ಅಷ್ಟೆ. ಟೀಕಾಚಾರ್ಯರೇ ತ.ನಿ. ಟೀಕೆಯಲ್ಲಿ ಹೇಳಿದ್ದಾರೆ: **"ತಥಾಚ ಶಬ್ದಾದೇವಾನ್ವಯ ನಿಶ್ಚಯೋ । ಅಪ್ರಾಮಾಣ್ಯ ಶಂಕಾ ನಿವೃತ್ತಿಮಾತ್ರಂ ಉಪಾಯಾಂತರೇಣೇತಿ ಲೋಕವೇದಯೋಃ ಸಮಾನಮೇವೇತಿ ॥"**

ಹಾಗಿದ್ದರೆ ಪೂರ್ವಪಕ್ಷಿಗಳು ಉದಾಹರಿಸಿರುವ ಗೀತಾಭಾಷ್ಯ ವಾಕ್ಯಕ್ಕೆ ಸರಿಯಾದ ಅರ್ಥವೇನೆಂದರೆ ಹೇಳಲ್ಪಡುತ್ತೆ: ಆ ವಾಕ್ಯ ಗೀತಾಭಾಷ್ಯ ದ್ವಿತೀಯಾಧ್ಯಾಯದಲ್ಲಿದೆ. ದೇಹಾತ್ಮತ್ವಾದಿ ದುರ್ವಾದಗಳನ್ನು ಖಂಡಿಸುತ್ತಾ ವೇದ ಪ್ರಾಮಾಣ್ಯ ತೋರಿಸಲು ಯತ್ನ ಮಾಡುತ್ತಿರುವ ಆಚಾರ್ಯರು "ವೇದ ಪ್ರಾಮಾಣ್ಯ ಒಪ್ಪದಿದ್ದರೆ ಸರ್ವವಾದ್ಯಭಿಮತ ಧರ್ಮಾಧರ್ಮಗಳೇ ಸಿದ್ಧವಾಗುವುದಿಲ್ಲವೆಂದು" ಹೇಳಿದರು. ಅದನ್ನು ಒಪ್ಪದೇ ಪ್ರತಿಪಕ್ಷಿಯು ವೈಯಾತ್ಯದಿಂದ "ನಾನು ಧರ್ಮವಿದೆ ಎಂದೇ ಒಪ್ಪುವುದಿಲ್ಲ; ಅದು ತಿಳಿಯಲಿಕ್ಕೇ ಶಕ್ಯವಿಲ್ಲ. ಧರ್ಮವೆಲ್ಲಿದೆ" ಎಂದೇ ಹೇಳಿದನು. ಅದಕ್ಕೆ

ಉತ್ತರರೂಪವಾಗಿ ಸರ್ವಜ್ಞಾಚಾರ್ಯರು "ಹಾಗೆ ಹೇಳಕೂಡದು. "ಸರ್ವಾಭಿಮತಸ್ಯ ಪ್ರಮಾಣಂ ವಿನಾ ನಿಷೇದ್ದುಂ ಅಶಕ್ಯತ್ವಾತ್" (ಎಲ್ಲರಿಂದ ಗೌರವವಾಗಿ ಆದರಿಸಲ್ಪಟ್ಟ ಮತವನ್ನು ಅಥವಾ ವಾದವನ್ನು ಬಾಧಕ ಪ್ರಮಾಣವಿಲ್ಲದೆ ನಿರಾಕರಿಸುವುದು ಶಕ್ಯವಲ್ಲವಾದ್ದರಿಂದ). ಹಾಗೆ ಹೇಳಿದರೆ ಶಶವಿಷಾಣದಂಥ ಅಪ್ರಾಮಾಣಿಕಕ್ಕೂ ಸಿದ್ಧಿಯಾದೀತು ಎನ್ನ ಕೂಡದು. ಸರ್ವಾಭಿಮತಿಯೇ ಪ್ರಮಾಣವಾಗಿರುತ್ತೆ. (ಶಶವಿಷಾಣಕ್ಕೆ ಪ್ರಮಾಣವೇ ಇಲ್ಲ) ಸರ್ವಾಭಿಮತಿಯು ಪ್ರಮಾಣವಲ್ಲ ಎನ್ನುವುದಾದರೆ ಸರ್ವವಾಚಿಕ ವ್ಯವಹಾರವೂ ನಿಂತು ಹೋಗಬೇಕಾದೀತು.. ನಾನು ಕೇಳಿದೆ ಎನ್ನುವುದು ನಿನಗೆ ತಿಳಿಯಲು ಶಕ್ಯವಿಲ್ಲ.........ಧರ್ಮ ಬೋಧಕ ಪ್ರಮಾಣವು ರಚಿತವೆನ್ನುವುದಾದರೆ ಆ ಧರ್ಮ ಪ್ರಮಾಣಕರ್ತನಿಗೆ ಅಜ್ಞಾನಾದಿ ದೋಷಗಳು ಏಕಿಲ್ಲವೆಂದು ಶಂಕೆ ಬರುತ್ತೆ........ ಅನಾದಿಕಾಲ ಪರಿಗ್ರಹ ಸಿದ್ಧವಾದ್ದರಿಂದ. ಆದ್ದರಿಂದ ಶ್ರುತಿಗೆ ಪ್ರಾಮಾಣ್ಯ ಯುಕ್ತವಾಗಿದೆ. ಆದ್ದರಿಂದ ಕುತರ್ಕಗಳಿಂದ ಪಂಡಿತನು ಭ್ರಮೆ ಹೊಂದಬಾರದು ಎಂದು. ಇದು ಅರ್ಥ: ಕೆಲವು ದುರ್ವಾದಿಗಳು ಧರ್ಮವೇ ಇಲ್ಲ, ಅಧರ್ಮವೂ ಇಲ್ಲ ಸ್ವರ್ಗ ನರಕಾದಿ ಅತೀಂದ್ರಿಯ ಲೋಕಗಳೂ ಇಲ್ಲ ಎಂದು ಹೇಳುತ್ತಾರೆ. ಅವರು ಹಾಗೆ ಪ್ರತಿಜ್ಞೆ ಮಾಡಿ ಸರ್ವಾಭಿಮತಸ್ಯ =ಒಂದು ಮತಕ್ಕೆ ಸೇರಿದ ಎಲ್ಲಾ ಅಧಿಕಾರಿ ಜನರಿಂದಲೂ, ದೇವರ್ಷಿಗಳಿಂದಲೂ ಆದರ ಶ್ರದ್ಧೆಗಳಿಂದ ಧರ್ಮಸದ್ಭಾವದಲ್ಲಿ ಸಮೀಚೀನ ಜ್ಞಾನ ಜನಕಗಳೆಂದು ಗೌರವಿಸಲ್ಪಟ್ಟ "ಸತ್ಯ ಹೇಳು, ಧರ್ಮಮಾಡು, ಮಾತೃದೇವೋ ಭವ, ಪಿತೃ ದೇವೋ ಭವ, ಸ್ವಾಧ್ಯಾಯಾನ್ನಪ್ರಮದಃ" ಇತ್ಯಾದಿ ವೇದವಾಕ್ಯಗಳ ಅಥವಾ "ಸ್ವರ್ಗಕಾಮನು ಯಾಗ ಮಾಡಬೇಕು" ಮುಂತಾದ ಐತಿಹ್ಯ ಪರಂಪರೆಯಿಂದ ಪ್ರಾಪ್ತ ವಾಕ್ಯಗಳ ನಿಷೇಧವನ್ನಾಗಲಿ, ತಿರಸ್ಕಾರವನ್ನಾಗಲಿ ಮಾಡುವುದು ಯುಕ್ತವಲ್ಲ. ಆ ಬಹುಜನರ ಗೌರವ ಪೂರ್ವಕವಾದ ಅಭಿಮತಿಯ ಅವರ ನಂಬಿಕೆ ಅಥವಾ ವಾದಕ್ಕೆ ಪ್ರಮಾಣವು. ಬಹು ಜನರಿಂದ ಆದೃತವಾದ ವೇದ ಐತಿಹ್ಯಾದಿ ರೂಪ ಆಗಮಕ್ಕೂ ಕೂಡ ಸ್ವತಃ ಪ್ರಾಮಾಣ್ಯ ಇದ್ದೇ ಇದೆ. ಪ್ರಬಲ ಪ್ರಮಾಣ ವಿರೋಧ ತೋರಿಸಿಯೇ ಅಂಥ ಸ್ವತಃ ಪ್ರಮಾಣ ವಾದದ ಬಹುಜನ ಅಧಿಕಾರಿಗಳಿಂದ ಉದಾಹೃತ ವಾಕ್ಯದಲ್ಲಿ ಅಪ್ರಾಮಾಣ್ಯ ಶಂಕಿಸಬೇಕು. 'ಧರ್ಮವು ಇಲ್ಲವೇ ಇಲ್ಲ' ಎಂದು ನಿರವಕಾಶವಾಗಿ ಪ್ರತಿಪಾದಿಸುವ ಪ್ರಬಲಪ್ರಮಾಣಾಂತರವಿಲ್ಲದೆ, ಬಹುಮಾನ್ಯಜನರಿಂದ ಆದೃತವಾದ ಧರ್ಮ ಉಂಟೆಂಬ ವಾದದ ಖಂಡನೆಯನ್ನು ಮಾಡಬಾರದು. ಅದರಲ್ಲೂ ಆ ಬಹುಜನಾಭಿಮತ ವಾಕ್ಯವು ಅನಾದಿಕಾಲದಿಂದ ಶಿಷ್ಟ ಪರಿಗೃಹೀತವಾದ ಐತಿಹ್ಯ ಸಿದ್ಧವಾಕ್ಯವಾಗಿದ್ದರೆ ಅದು ಅಚಾಲ್ಯವೇ, ಧರ್ಮಬೋಧಕವಾದ ಆ ಅನಾದಿ ಐತಿಹ್ಯವು ಈಗಿನವರಿಂದ ಕಲ್ಪಿತವೆಂದು ಹೇಳಲಾಗುವುದಿಲ್ಲ. ಆ ಅಕಲ್ಪಿತ ಐತಿಹ್ಯಕ್ಕೇ 'ವೇದ' ವೆಂದು ಹೆಸರು. ಹೀಗೆ ಆಚಾರ್ಯರ ವಾಕ್ಯತಾತ್ಪರ್ಯವು ಇರುತ್ತೆ. ಕೆಲವರು ವಾದಿಗಳು, ಕೆಲವರು ಪ್ರತಿವಾದಿಗಳು, ಹೀಗೆ ಉಭಯ ಪಕ್ಷದವರಿಂದ ಅಂಗೀಕೃತ ಸಂಪ್ರತಿಪನ್ನ ವಾಕ್ಯವು ಪ್ರಮಾಣವು ಎಂದು ಆಚಾರ್ಯರ ವಾಕ್ಯಗಳ ಅರ್ಥವಲ್ಲ. ಅಂಥ "ಸಂಪ್ರತಿಪನ್ನವಾಕ್ಯ"ಗಳ ಉಪಯೋಗದಿಂದ ಜಲ್ಪ, ವಿತಂಡಾರೂಪ ಚರ್ಚೆಗಳು ಕೆಲವು ಸಂದರ್ಭಗಳಲ್ಲಿ ಅನುಮತವಾಗಿವೆ. ಆದರೂ ಸಂಪ್ರತಿಪನ್ನ ವಾಕ್ಯವು ಪ್ರಮಾಣವ, ಅಸಂಪ್ರತಿಪನ್ನ ವಾಕ್ಯವು ಅಪ್ರಮಾಣವು ಎಂದು ವ್ಯಾಪ್ತಿ ಇಲ್ಲ. ಬೌದ್ಧಾದಿ ಜನರ ಆಗಮದಲ್ಲಿ ವ್ಯಾಪ್ತಿಗೆ ವ್ಯಭಿಚಾರವೇ ಇದೆ. ಶ್ರೀಮದಾಚಾರ್ಯರಿಂದ

ಉದಾಹೃತವಾದ ವಾಕ್ಯಗಳಲ್ಲೂ ಸರ್ವ ವಾದಿ ಸಂಪ್ರತಿಪತ್ತಿ ಇಲ್ಲವಾದ್ದರಿಂದ ಅವುಗಳಿಗೆ ಅಪ್ರಾಮಾಣ್ಯ ಹೇಳಬೇಕಾಗುತ್ತೆ. ಅನುವ್ಯಾಖ್ಯಾನ, ಸುಧಾ, ಚಂದ್ರಿಕಾ, ಪರಿಮಳಾದಿ ಟಿಪ್ಪಣಿ ಮುಂತಾದ ದಿವ್ಯಗ್ರಂಥಗಳಿಗೆಲ್ಲಾ ಅಪ್ರಾಮಾಣ್ಯ ಒಪ್ಪಬೇಕಾಗುತ್ತೆ. ಆದ್ದರಿಂದ ಸಂಪ್ರತಿಪತ್ತಿಯು ವಾಕ್ಯ ಪ್ರಾಮಾಣ್ಯಕ್ಕೆ ಪ್ರಯೋಜಕವಲ್ಲ.

ಹಾಗಿದ್ದರೆ ವಾಕ್ಯಪ್ರಾಮಾಣ್ಯಕ್ಕೆ- ಸಂಶಯ ಪರಿಹಾರಕ್ಕೆ - ನಿಯತ ಪ್ರಯೋಜಕವು ಯಾವುದೆಂದರೆ, ಪುಟ 34ರಲ್ಲಿ ತೋರಿಸಿದಂತೆ **"ಪಿಪೀಲಿಕಾ ಲಿಪಿಶ್ಚಾಪಿ ಪ್ರಮಾಣಮವಿರೋಧತಃ"** ಎಂದು ಅನುವ್ಯಾಖ್ಯಾನ ವಾಕ್ಯವಿದೆ. ಪ್ರಬಲ ಪ್ರಮಾಣ ವಿರೋಧಾಭಾವವೇ ಪ್ರಾಮಾಣ್ಯ ಪ್ರಯೋಜಕವಂದೆ ಸಿದ್ಧಾಂತ. ಮ.ತಾ.ನಿ. I 30 ರಲ್ಲಿ ಆಚಾರ್ಯರು ಋಗಾದಿ ಮೂಲಪ್ರಮಾಣಗಳನ್ನು ಸ್ವತಃ ಪ್ರಮಾಣಗಳನ್ನಾಗಿ ಹೇಳಿ **"ಅವಿರುದ್ಧಂತು ಯತ್ತ್ವಸ್ಯ ಪ್ರಮಾಣಂ ತಚ್ಚ ನಾನ್ಯಥಾ । ಏತದ್ವಿರುದ್ಧಂ ಯತ್ತು ಸ್ಯಾನ್ನ ತನ್ಮಾನಂ ಕಥಂಚನ"** ಎಂದು ಸ್ಪಷ್ಟವಾಗಿ ಇದೇ ಪ್ರಮೇಯ ಹೇಳಿದ್ದಾರೆ. ಅನುವ್ಯಾಖ್ಯಾನದ III 4-41 ರಲ್ಲಿ "ಪ್ರತ್ಯಕ್ಷ, ಅನುಮಾನ, ಬಹು ಆಗಮಗಳು ಸಹ ವಿರುದ್ಧವಾದಲ್ಲಿ ಆ ವಾಕ್ಯೋಕ್ತ ವಿಷಯವು ಅಸತ್ಯ ಎಂದರೆ, ಆ ವಾಕ್ಯ ಅಪ್ರಮಾಣ" ಎಂದಿದ್ದಾರೆ. ಮ.ತಾ.ನಿ. XXII 82 ರಲ್ಲಿ "ಒಂದು ವಾಕ್ಯೋಕ್ತ ವಿಷಯದಲ್ಲಿ ಮೂರು ಪ್ರಮಾಣಗಳೂ ವಿರೋಧಿಸದೆ ಕಲೆತು ಇದ್ದಮೇಲೆ ಅದು 'ಪೂರ್ಣ ಪ್ರಮಾಣ" ಎಂದು ಹೇಳಿದ್ದಾರೆ. ಹೀಗೆ ಶಾಸ್ತ್ರಸಿದ್ಧ ಮಾನದಂಡದಿಂದ ಎಂದರೆ ಪ್ರಾಮಾಣ್ಯ ನಿರ್ಣಾಯಕ ಗುಣ (ಪ್ರಮಾಣಾವಿರೋಧ) ಇದೆಯೇ ಇಲ್ಲವೇ ನೋಡಿಕೊಂಡು ಋಜುತ್ವವಾದಿಗಳಿಂದ ಉದಾಹೃತವಾದ ವಾಕ್ಯಗಳ ಪ್ರಾಮಾಣ್ಯಾ-ಪ್ರಾಮಾಣ್ಯಗಳನ್ನೂ, ಹಾಗೆಯೇ ಕೃತಕತ್ವಾಕೃತಕತ್ವಾದಿಗಳನ್ನೂ ವಿಚಾರಪೂರ್ವಕವಾಗಿ ನಿರ್ಣಯಿಸಬೇಕು. ಹಾಗೆ ವಿಚಾರ ನಡೆಸಿದರೆ ಆ ವಾಕ್ಯಗಳು ಅಕೃತಕವು, ನಿಃಶಂಕ ಪ್ರಾಮಾಣ್ಯ ಯುಕ್ತವು ಎಂದೇ ಸಿದ್ಧವಾಗುತ್ತವೆ; ಏಕೆಂದರೆ "ಪ್ರಮಾಣವಿರೋಧಾಭಾವಾತ್"; ಅವು ಮೂಲಪ್ರಮಾಣಗಳಿಗೆ ಅವಿರುದ್ಧವಾಗಿವೆ. ಪ್ರಬಲ ವಿರೋಧ ಅವಕ್ಕೆ ಇಲ್ಲ.

ಪ್ರಕೃತದಲ್ಲಿ ಋಜುತ್ವ ಬೋಧಕ ಐತಿಹ್ಯ, ಋಕ್ಸಂಹಿತಾದಿ ಆಗಮ, ಕನ್ನಡ ಹಾಡು, ವಾ.ಗು.ಚ., ಆಖ್ಯಾನ, ವಿಶ್ವಪ್ರಿಯವಿಲಾಸಾದಿ ಶಬ್ದ ರಾಶಿಗಳಿಗೆ ವಿರೊಧಿ ಆಗಮಗಳಿಲ್ಲವೆಂದು ಮಾತ್ರವೇ ಅಲ್ಲ. ಮತ್ತೇನೆಂದರೆ ಅಪ್ರಾಮಾಣ್ಯಶಂಕೆ ಪರಿಹಾರದಲ್ಲಿ ಘನ ಉಪಾಯಗಳೆನಿಸಿದ ಶಿಷ್ಟ ಪರಿಗೃಹೀತತ್ವ, ಸಂವಾದ, ಫಲೋಪಲಬ್ಧಿ, ಆಪ್ತಿಮೂಲತ್ವ, "ವಿರುದ್ಧ ಪಕ್ಷಕ್ಕೆ ಬಾಧಕ ದೋಷವಿದೆ, ಸಾಧಕ ಆಗಮವಿಲ್ಲ" ಎಂಬ ಯುಕ್ತಿ, ಸುಧಾ ಗ್ರಂಥೋಕ್ತ ನಿರ್ದೋಷತ್ವ ಯುಕ್ತಿ, ಪ್ರಮಾಣ ಬಹುತ್ವ, ಅಭಿಮತ ಪ್ರತಿಮಾ ಪರೀಕ್ಷೆಯಿಂದ ಲಕ್ಷಣ ಸದ್ಭಾವಲಿಂಗ, ಇತ್ಯಾದಿ ಅನೇಕ ಗುಣಗಳಿಂದಲೂ ಅವು ಉತ್ತಮ ಪ್ರಮಾಣವೆಂದೇ ಪ್ರಸಿದ್ಧವಾಗಿವೆ. ಹಾಗೇ ದೊಡ್ಡವರ ಅನುಭವವಿದೆ.

ಹಾಗಿದ್ದ ಪಕ್ಷದಲ್ಲಿ ವೇದದಲ್ಲಾಗಲಿ ಪುರಾಣಗಳಲ್ಲಾಗಲಿ ಗೂಢವಾಗಿ ಪ್ರವಿಷ್ಟವಾಗಿರುವ ಕೃತಕ ವಾಕ್ಯಗಳನ್ನು ಕಂಡುಹಿಡಿದು ನಿಶ್ಚಯಿಸುವುದು ಹೇಗೆ? ವಿರೋಧಿ ಪ್ರಮಾಣ ದರ್ಶನದಿಂದ ಎನ್ನುವುದಾದರೆ - ಚೌರ್ಯ ತನಿಖೆಯಿಂದ ಚೋರನನ್ನು ಕಂಡುಹಿಡಿಯುವಂತೆ - ಅದು ಕಷ್ಟಸಾಧ್ಯ ಕೆಲಸ ಎಂದು ಆಶಂಕೆ ಬಂದರೆ, ತತ್ವನಿರ್ಣಯ ಟೀಕೆಯನ್ನು ಓದಿ ಅದರಲ್ಲಿ ಹೇಳಿದಂತೆ ವಿಚಾರ ಮಾಡಿರೆಂದು ಪೂರ್ವಪಕ್ಷಿಗಳಿಗೆ ಹೇಳಬೇಕು. ಜನತೆಯ ಕಣ್ಣಿಗೆ ಮಣ್ಣೆರಚಲು ಸಾಧ್ಯವಿಲ್ಲ. **"ಉಕ್ತಂ ಹಿ ವೇದ ದ್ರಷ್ಟೄಣಾಂ ಲಕ್ಷಣಾನಿ ಬ್ರಹ್ಮಾಂಡ ಪುರಾಣೇ -**

ವಿಂಶಲಕ್ಷಣತೋಽನೂನಃ ತಪಸ್ವೀ ಬಹುವೇದವಿತ್ ॥ ವೇದ ಇತ್ಯೇವ ಯಂ ಪಶ್ಯೇತ್ ಸ ವೇದೋಜ್ಞಾನ ವರ್ಶನಾತ್" ಎಂದು ತತ್ವನಿರ್ಣಯ ವಚನವಿದೆ. ಇಪ್ಪತ್ತು ಮತ್ತು ಅದರ ಮೇಲ್ಪಟ್ಟ ದೇಹ ಲಕ್ಷಣ ಉಳ್ಳ ಜ್ಞಾನಿಗಳು ತಪಸ್ಸಿನ ಸಾಮರ್ಥ್ಯದಿಂದ ವಾಕ್ಯಕೃತಕತ್ವವನ್ನು ನಿರ್ಣಯಿಸುತ್ತಾರೆಂದಿದೆ. ಅಂಥವರು ಋಕ್ಸಂಹಿತಾ ಮತ್ತು ಪುರಾಣ ವಿಷಯಗಳಲ್ಲೂ ನಿರ್ಣಯಿಸುತ್ತಾರೆ. ಮಧ್ವವಿಜಯದ ಐದನೇ ಸರ್ಗದಲ್ಲಿ ದೃಷ್ಟಾಂತವೂ ಇದೆ. ಅಂಥ ಜ್ಞಾನಿ ಸಿಗದಿದ್ದರೆ ವಿವಾದಾಸ್ಪದ ವಾಕ್ಯವು ಕೃತಕವೆಂಬಲ್ಲಿ ಕೃತಕ ಪ್ರತಿಪಾದಕ ಪ್ರಮಾಣಗಳನ್ನೇ ಹುಡುಕಿ ಸಂಗ್ರಹಿಸಬೇಕು. ಸೌರಪುರಾಣದ ಮಧ್ವಾವತಾರದ ಎರಡು ಅಧ್ಯಾಯಗಳು ಪ್ರಕ್ಷಿಪ್ತವೆಂದು ಬಿಜಾಪುರದ ಕೋರ್ಟಿನಲ್ಲಿ ತೀರ್ಮಾನಿತವಾಗಿದೆಯೆಂದು ಉಡುಪಿ ವಿದ್ವಾನ್ ಸೀತಾರಾಮಾಚಾರ್ಯರು - ಶ್ರೀ ಸತ್ಯಧ್ಯಾನತೀರ್ಥರ ಶಿಷ್ಯರು - 20-30 ವರ್ಷ ಬಿಜಾಪುರದಲ್ಲಿ ಪ್ರವಚನ ಮಾಡಿಕೊಂಡಿದ್ದವರು -ನನಗೇ ಹೇಳಿ ಬರೆಯಿಸಿದರು. ಇಂಥ ಕೃತಕತ್ವ ನಿರ್ಣಾಯಕ ಪ್ರಮಾಣ ಒಂದೂ ಸಿಕ್ಕದಿದ್ದರೆ ಆ ವಾಕ್ಯವು ಸತ್ಯವಾಗಿ ಆ ಪುರಾಣಕ್ಕೇ ಸೇರಿದ್ದೆಂದೇ ತಿಳಿಯಬೇಕು. ಕೆಲವು ಮುದ್ರಿತ

ಕೋಶಗಳಲ್ಲಿ ಅವು ಪ್ರಿಂಟಾಗಿಲ್ಲವಾದ ಮಾತ್ರಕ್ಕೆ ಆ ವಾಕ್ಯಗಳಿಗೆ ಕೃತಕತ್ವ ನಿಶ್ಚಯ ಮಾಡುವುದು ಸಾಹಸವೇ ಸರಿ. "ವೇದೇರಾಮಾಯಣೇ ಚೈವ" ಎಂಬ ಶ್ಲೋಕವು ಕಲ್ಕತ್ತೆಯಲ್ಲಿ ಪ್ರಿಂಟಾದ ಪುಸ್ತಕದಲ್ಲಿ ಮಾತ್ರ ಉಪಲಬ್ಧವಾದ ವಿವರ ತಿಳಿಸಲಾಗಿದೆ.

ಪ್ರಕೃತ ಗುರುರಾಜ ಋಜುತ್ವ ವಿಷಯದಲ್ಲಿ ಬಹು ಪ್ರಮಾಣಗಳಿವೆ. ಶ್ರೀರಾಘವೇಂದ್ರ ತೀರ್ಥರು ಪ್ರಹ್ಲಾದದೇವರೇ ಎಂಬಲ್ಲಿ, ಶ್ರೀಜಯತೀರ್ಥರು ಇಂದ್ರರೇ ಎಂಬಲ್ಲಿ, ಶ್ರೀ ಶ್ರೀಪಾದರಾಜರು ಧ್ರುವದೇವತೆಯೇ ಎಂಬಲ್ಲಿ, ಶ್ರೀ ರಘೋತ್ತಮತೀರ್ಥರು ನೈಋತ್ಯ ದೇವತೆಯೇ ಎಂಬಲ್ಲಿ ದೊರಕಿರುವುದಕ್ಕಿಂತ ಹೇರಳ ದಾಯರ್ಥದಾಯಕ ಪ್ರಮಾಣಗಳಿವೆ. ಶ್ರೀರಾಘವೇಂದ್ರ ಸ್ವಾಮಿಗಳಿಗೆ ಹೇಗೋ ಹಾಗೆ, ಶ್ರೀ ವಾದಿರಾಜಸ್ವಾಮಿಗಳಿಗೊಸ್ಕರವೂ ಒಂದು ಮಾನ್ಯ ಮಾಧ್ವಮಠವು ಒಂದು ಸಂಪ್ರದಾಯವನ್ನಾರಂಭಿಸಿ ಅವರ ಮೂಲ ಸ್ವರೂಪವನ್ನು ಮಠದಲ್ಲಿ ನಿತ್ಯವೂ ಉದ್ಘೋಷಿಸಿ ಪರಾಕ್ ಹೇಳುತ್ತಿದೆ. ಇವರಿಗೋಸ್ಕರ ಸ್ವಪ್ನಸಮುದ್ರದಿಂದ 22 ಅಧ್ಯಾಯಗಳ ಗ್ರಂಥಚಂದ್ರನು ಅದ್ಭುತರೀತಿಲ್ಲಿ ಅವತರಿಸಿ ದಿಗಂತವಾಗಿ ಅವರ ದೇವತಾ ಮೂಲರೂಪವನ್ನು ಬೆಳಗಿರುತ್ತಾನೆ. ಇವರಿಗೋಸ್ಕರ ರಾಜಾಧಿರಾಜರಿಂದ ಸುವರ್ಣರತ್ನಾಭಿಷೇಕ ವೈಭವ ಹೊಂದಿದ ಮಾಧ್ವ ಪಂಡಿತರತ್ನ ಪರಮಹಂಸರು ಪಾದಚಾರಿಗಳಾಗಿ ರಾಜಧಾನಿಗಳಲ್ಲೆಲ್ಲಾ ತೀರ್ಥಕ್ಷೇತ್ರಗಳಲ್ಲೆಲ್ಲಾ ಸಂಚರಿಸಿ ಅಲ್ಲಲ್ಲಿ ಶಿಷ್ಯ ಮಂಡಲಿಗೆ ಗುರುರಾಜರ ಮೂಲ ದೇವತಾತ್ವವನ್ನು ಉಪದೇಶಿಸಿ ತದರ್ಥವಾಗಿಯೇ ಜೀವನವನ್ನು ಸಾಗಿಸಿರುತ್ತಾರೆ. ಇವರಿಗೋಸ್ಕರ ಜಂಖಂಡಿ ವಾದಿರಾಜಾಚಾರ್ಯರಂಥ ಭಿನ್ನ ಮಠಸ್ಥ ಅನೇಕ ಮಾಧ್ವರಾದ್ಧಾಂತ ಧರಣೀಧರದಿಗ್ಗಜಗಳು ಮಠೀಯ ಉಪದ್ರವಗಳನ್ನೂ ಲಕ್ಷಿಸದೆ, ತಮ್ಮ ಪರಮಾಯುಷ್ಯವನ್ನೆಲ್ಲಾ ಅವರ ಮೂಲ ದೇವತಾ ವೈಭವ ಪ್ರಕಟನೆಗಾಗಿಯೇ ಮೀಸಲಾಗಿಟ್ಟು ಜೀವಿಸಿದ್ದಾರೆ. ಇಂಥವೆಲ್ಲಾ ವಾದಿರಾಜ ಗುರುಗಳಿಗೋಸ್ಕರ ನಡೆದಿರುವುದರಿಂದ ಪ್ರಬಲ ಐತಿಹ್ಯ, ಪ್ರಬಂಧ, ಜ್ಞಾನಿ ವಚನ, ಪುರಾಣಾದಿಗಳೆಂಬ ಅನೇಕ ಪ್ರಮಾಣಗಳ ಮಧ್ಯದಲ್ಲಿ ಕೆಲವು ಪುರಾಣ ವಾಕ್ಯಗಳು ಕಾಲ

ಬಲದಿಂದ ಕಾಣದೇ ಹೋದರೂ ವಾದಿರಾಜ ಗುರುಗಳ ಋಜುತ್ವ ನಿಶ್ಚಯವು ಅಸಾಧ್ಯವಾಗುವುದಿಲ್ಲ. ಉಳಿದಿರುವ ನಿರ್ದೋಷ ಐತಿಹ್ಯ, ಕೀರ್ತನ, ಆಖ್ಯಾನಾದಿಗಳಿಂದಲೇ ಭಕ್ತರಿಗೆ ಸ್ವಾಪ್ನಾದ್ಯನುಭವಗಳುಂಟಾಗಿ ಶಂಕಾ ಅಕಳಂಕಿತ ನಿಶ್ಚಯವು ಅನೇಕರಿಗೆ ಆಗಿರುವುದು ಸರ್ವರಿಗೂ ಪ್ರಸಿದ್ಧವಾಗಿದೆ. ಒಂದೇ ದೀಪದಿಂದಲೂ ಮೇಜಿನ ಮೇಲಿನ ಪುಸ್ತಕವು ಕಾಣುತ್ತೆ. ದೀಪಶತಕದಿಂದ ಪುಸ್ತಕದ ಸತ್ಯತೆಗೆ ಶೋಭಾಧಿಕ್ಯವೇನೂ ಆಗುವುದೆಂದು ಅನುಭವದಲ್ಲಿಲ್ಲ. ಹಾಗಿದ್ದರೂ ಪುರಾಣ ಪ್ರಮಾಣಗಳೆಂಬ ವಜ್ರಗಳನ್ನು, ನಾಗರತ್ನಗಳನ್ನು ಶೋಧಿಸಿ ಪ್ರಯಾಸಪಟ್ಟು ಕಂಡುಹಿಡಿಯುವಂತೆ, ವಾ.ಗು.ಚ. ಮುಂತಾದ ಗ್ರಂಥವನದಿಂದ ಸಂಗ್ರಹಿಸಿ ಅವುಗಳ ಉಜ್ವಲ ಕಾಂತಿಯಲ್ಲೂ ಕಣ್ಣುಬಿಟ್ಟು ನೋಡುವ ಅಧಿಕಾರಿಗಳಿಗೆ ವಾದಿರಾಜ ಋಜುತ್ವ ತತ್ವವು ಸ್ಫುಟವಾಗಿ ಕಾಣುತ್ತದೆಂದೂ, ಎಲ್ಲಾ ಪ್ರಮಾಣಗಳೂ ಕೃತಕವೆಂಬ ಶಂಕೆಯು III 44 ಸುಧೆಯಲ್ಲಿ ಹೇಳಿರುವಂತೆ ನಿಸ್ಸಾರವೆಂದೂ ಹೇಳಿ ಈ ಪ್ರಕರಣವನ್ನು ಮುಗಿಸುತ್ತೇನೆ. "ಅತಃ ಕುತರ್ಕೈರ್ಧೀರಸ್ತತ್ರ ನ ಮುಹ್ಯತಿ" ಎಂಬ ಗೀತಾ ಭಾಷ್ಯಸ್ಥ ಸರ್ವಜ್ಞರ ವಚನವೇ ಋಜುತ್ವವಾದಿ ಭಕ್ತರಿಗೆ ಶರಣವಾಗಿದೆ.

## 32. ಆಗಮ ವಿಚಾರ :

**ಪುಟ 17-21 ಉಕ್ತಿ:**

"ವಸ್ತುತಃ ಸದಾಗಮಗಳಲ್ಲಿ ವಾಯು ಭಿನ್ನ ಋಜುಗಳ ಅವತಾರ ಶ್ರುತವಾಗಿಲ್ಲವಾದ್ದರಿಂದಲೂ, ಬ್ರಹ್ಮದೇವರಿಗೆ ಅವತಾರವಿಲ್ಲವಾದ್ದರಿಂದಲೂ, ಹನುಮ ಭೀಮ ಮಧ್ವ ಭಿನ್ನ ವಾದಿರಾಜರ ಋಜುತ್ವ ಸಂಭಾವನೆಯೂ ಉಪಪನ್ನವಾಗುವುದಿಲ್ಲ. ಇನ್ನು ಅದು ಸಾಧನಾರ್ಹವೆಂಬುದು ಹೇಗೆ ಸಿದ್ಧವಾದೀತು" ? ಇತಿ.

**ಪ್ರತ್ಯುಕಿ :**

ವಾಯುಭಿನ್ನ ಋಜುಗಳಿಗೆ ಅವತಾರವಿಲ್ಲವೆಂಬಲ್ಲಿ ಪ್ರಮಾಣವಿಲ್ಲ. ಪ್ರಕಾಶಸಂಹಿತೆಯಲ್ಲಿ ಸಾಮಾನ್ಯತಃ ಸರ್ವದೇವತೆಗಳಿಗೂ ಅವತಾರ ಉಂಟೆಂದು ಶ್ರುತವಾಗಿದೆ. ಶ್ಲೋಕ 868 "ಸರ್ವೆ ಸುರಾಃ ಪದಸ್ತಾಶ್ಚ ರಾಮಕೃಷ್ಣಾವತಾರಯೋಃ ॥ ಜಾತಾಭೂಮೌ ಉಪಾಸ್ಯೇಶಂ ಪುನರ್ಮೂಲ ಸ್ವರೂಪಕೈಃ ॥ ಏಕೇ ಭವಂತ್ಯಪಿ ಸುರಾಃ ಭಾವಿನಃ ಪ್ರಾಯಶೋತ್ರತು ॥ ಸ್ವಸಾಧನೈಕನಿರತಾಃ ದೇವದಾಸಾದಯೋಽಪಿಚ ॥ ಸಾಂಶಾನಿರಂಶಾಶ್ಚ ತಥಾ ಸ್ವಸ್ವಸಾಧನ ತತ್ಪರಾಃ ॥ ನಿಧಯಶ್ಚ ನಿಷೇಧಾದ್ಯಾಃ ಆತ್ರತ್ಯಾನಾಂ ಭವಂತಿಹಿ" ॥ ಎಂದಿದೆ. ವಾ.ಗು.ಚ. ಅಧ್ಯಾಯ VIII ಪುಟ 45 "ಆಪರೋಕ್ಷ ವಿಶೇಷೇಣ ಸಂಯುತಾ ಬ್ರಹ್ಮ ಪೂರ್ವಕಾಃ ॥ ಕಲ್ಪ್ಯಂತಾ ಋಜವಃ ಪ್ರೋಕ್ತಾಃ ಪ್ರಾರಬ್ಧ ಫಲಭೋಗಿನಃ ॥ ಬ್ರಹ್ಮಣೋನಾವತಾರೋಸ್ತಿ ಶತಮಧ್ಯೆ ಪರಾಜ್ಞಯಾ॥ ವಾಯುಮಾರಭ್ಯ ಕಲ್ಪ್ಯಂತಾಜನಿಮಂತೋಽತ್ರ ಭಾರತೇ ॥ ಹನುಮದ್ಭೀಮಮಧ್ವಾಖ್ಯರೂಪೋ ವಾಯುರ್ಭವಿಷ್ಯತಿ॥ ಸ್ವಯಂವರ ಸಮುದ್ಯೋಗೇ 'ರುಕ್ಮಿಣೀ ಪತ್ರಮಾದರಾತ್ ॥ ಕೃಷ್ಣಾಯಾದಾದ್ಗೃಹಿತ್ವಾ ಯೋಽಹ್ಯಂತಃ ಪುರಗತೋ ದ್ವಿಜಃ ॥ ಸರ್ವಾದೃಷ್ಟಸ್ತದೈವಾಯ ಮೃಜುರ್ಲಾತವ್ಯ ನಾಮಕಃ ॥ ವಾಯುಸ್ಥಾನ ಸಮಾರೋಹ ಯೋಗ್ಯೋಽಯಂ

ಯತಿರೂಪವಾನ್॥ ಆಕಲ್ಪಂ ಬ್ರಹ್ಮಣಃ ಕೃಷ್ಣ ಪ್ರಸಾದಸ್ಯೇಕ ಭಾಜನಂ ॥ ಕೃಷ್ಣಾರ್ಚಕೋ ಯತಿರ್ಭೂತ್ವಾ ವಾದಿರಾಜೋ ವದಿಷ್ಯತಿ ॥ ಶ್ರೀರುಕ್ಮಿಣೀಶವಿಜಯಂ ಕಲೌಕೃಷ್ಣ ಪ್ರಸಾದಭಾಕ್ ॥ ಇತಿ ವಾಮನೇ" ॥ ಎಂದಿದೆ. ಮತ್ತು ಬೃಹದ್ಭಾಷ್ಯ III 3 (ಪುಟ 36)ರಲ್ಲಿ ಯುಕ್ತಿಸೂಚಕ ವಾಕ್ಯಗಳಿವೆ. "ಪವಮಾನಾ ಇತಿ ಪ್ರೋಕ್ತಾ ಮುಖ್ಯವಾಯುತ್ವಯೋಗಿನಃ । ಪ್ರಸ್ತಾವಕಾಲೇ ಪ್ರಸ್ತೋತುಂ ಯೋಗ್ಯೋ ವಾಯುಪದಸ್ಯ ಯಃ ॥ ಜಪೇದ್ಯಜೂಂಷಿ.........ದ್ವಾತ್ರಿಂಶಲ್ಲಕ್ಷಣೈಃಸಮಗ್ಯುಕ್ತಾ ವಾಯುತ್ವ ಯೋಗ್ಯಕಾಃ ॥ ........ಏವಂ ವಿದ್ವಾಯು ಪದಯೋಗೋದ್ಗಾತಾರ ಏವತು ॥ ಯದಾಭವೇ ಯಸ್ತೇಷು ತದಾಯಾಜೀತು ವೃಣುಯಾದ್ವರಂ ॥ ಆತ್ಮನೋಯಾಜಿನೇವಾಪಿ ಹ್ಯುದ್ಗಾತ್ವೈವಂ ವಿಧೋಯದಿ ॥ ಆಗಾಯೇತ್ತದ್ಭವೇನ್ನಾತ್ರಕಾರ್ಯಾಭೀಷ್ಟೇ ವಿಚಾರಣಾ । ........ತಸ್ಮಾದ್ವಾಯುತ್ವಯೋಗ್ಯೈರ್ಹಿಯೇಷಾಂ ಲೋಕಾಃ ಪ್ರಕೀರ್ತಿತಾಃ॥ ತೇಷಾಮಲೋಕ ಶಂಕಾ ಚ ನೈವ ಕಾರ್ಯಾಕದಾಚನ ॥ ........ಏಷ ಉದ್ಗಾತೇತಿ ವಾಯುತ್ವ ಯೋಗ್ಯಃ" ಎಂದಿದೆ. ಇಲ್ಲಿ ವಾಯುಪದ ಯೋಗ್ಯರಿಗೆ ಯಾಗದಲ್ಲಿ ಪ್ರಸ್ತೋತ, ಉದ್ಗಾತ, ಎಂಬ ಋತ್ವಿಕ್ಕಾರ್ಯಗಳನ್ನು ಕೊಡಬೇಕೆಂದಿದೆ. ಅವರು ಭಾರತದಲ್ಲಿ ಉತ್ಪತ್ತಿ ಹೀನರಾಗಿದ್ದರೆ ಭಾಷ್ಯಸ್ಥ ಈ ವರ್ಣನೆಗಳು ವಿರುದ್ಧವಾಗುವುವು. ವಾಯುಪ ಯೋಗ್ಯ ಉದ್ಗಾತೃವನ್ನೇ ಪಡೆಯಬೇಕೆಂಬ ಉಪದೇಶವೂ ವಿರುದ್ಧವಾಗುವುದು. ಆದ್ದರಿಂದ ಅಶ್ರವಣಾನುಮಾನವು ಬಾಧಿತವೇ.

ಇದರ ಮೇಲೆ ಶ್ರವಣಾಭಾವವು ಆಗಮ ಸಹಾಯಹೀನ ಲಿಂಗವು. ಅಂಥ ಲಿಂಗದಿಂದ ಋಜುತ್ವ ಪ್ರತಿಪಾದಕ ಆಗಮಗಳಿಗೆ ವಿರೋಧೋದ್ಭಾವನೆಯು ಆಯುಕ್ತವು. ಸರ್ವ ಗ್ರಂಥಗಳಲ್ಲೂ ಅವತಾರಾಶ್ರವಣವು ಲಿಂಗವೆಂದರೆ ಸುಳ್ಳು. ಅನಂತವೇದ, ಶತಕೋಟಿ ಪಂಚರಾತ್ರಾಗಮ, ಪಂಚಲಕ್ಷ ಪುರಾಣಾದಿಗಳಲ್ಲಿ ಶ್ರವಣಾಭಾವವು ಪೂರ್ವಪಕ್ಷಿಗಳಿಂದ ಆಪಾದಿಸಲ್ಪಡಲು ಸಾಧ್ಯವಿಲ್ಲ. ಆಖ್ಯಾನ, ಕರ್ಣಾಟಕಪದ, ವಾಮನಪುರಾಣ, ಋಕ್ಸಂಹಿತಾದಿಗಳಲ್ಲಿ ಶ್ರೂಯಮಾಣತ್ವವೇ ಕಂಡಿದೆ. ಗೀತಾಭಾಷ್ಯ II ರಲ್ಲಿ "ನ ಚ ಪ್ರಮಾಣ ಸಿದ್ಧಸ್ಯಾನ್ಯತ್ರಾದೃಷ್ಟ್ಯಾಯಾ ಅಪಹ್ನವೋ ಯುಕ್ತಃ " ಎಂದು ಉಕ್ತವಾಗಿದೆಯಾದ್ದರಿಂದ ಒಂದು ಗ್ರಂಥದಲ್ಲಿ ಇಲ್ಲದ ಮಾತ್ರಕ್ಕೆ ಎಲ್ಲೂ ಇಲ್ಲ ಎಂದು ವಾದಿಸಬಾರದು. ಮತ್ತೇನೆಂದರೆ ಲಾತವ್ಯರು ಭೂಮಿಯಲ್ಲಿ ಅವತಾರವಿಲ್ಲದವರು ಎಂಬ ವಚನ ತೋರಿಸಬೇಕು. ಅಂಥ ವಚನವಿಲ್ಲ. ಅಷ್ಟೇ ಅಲ್ಲ, ವಾಮನ ಪುರಾಣದಲ್ಲಿ ವಿರುದ್ಧ ವಚನವೇ ಇದೆ. ಮೇಲೆ ಉದಾಹೃತವಾಗಿದೆ. ಪುಟ 285ರಲ್ಲಿ ಉದಾಹೃತ ಪುರಾಣವಚನವು ಅವರು ಹುಟ್ಟಿರಬಹುದೆಂದೂ ಸೂಚಿಸುತ್ತದೆ. ಆದ್ದರಿಂದ ಲಾತವ್ಯಾದಿ ದೇವತೆಗಳ ಅವತಾರವು ಸಂಭಾವಿತವೇ. ಶ್ರವಣಾಭಾವ ರೂಪ ದುಸ್ತರ್ಕವನ್ನು ನಂಬಿ ವಾಮನ ಪುರಾಣ ಆಖ್ಯಾನಾದಿಗಳಿಗೆ ಅಪ್ರಾಮಾಣ್ಯವನ್ನಾಪಾದಿಸಿದರೆ ಅನ್ಯೋನ್ಯಾಶ್ರಯ ಬರುತ್ತೆಯ ಪ್ರಾಮಾಣ್ಯಸ್ವತಸ್ತ್ವ ನಿರಾಕರಣೆ ಮಾಡಿದಂತೆಯೂ ಆಗುತ್ತೆ.

**33. ಆಗಮ ವಿಚಾರ : ಪುಟ 18-4**

ಉಕ್ತಿ :

"ಕಪಿಂಜಲಾಧಿಕರಣ ನ್ಯಾಯಪ್ರಯೋಗದಿಂದ ಋಜುತ್ರಯಾವತಾರ ಸಿದ್ಧಿಯಾಗುವುದಿಲ್ಲ".

ಪ್ರತ್ಯುಕ್ತಿ:

ಇದು ಅನುಕ್ತೋಪಾಲಂಭ. ಯಾವ ವಿದ್ವಾಂಸನೂ ಕಪಿಂಜಲಾಧಿಕರಣ ನ್ಯಾಯವನ್ನನುಸರಿಸಿ ಸರ್ವದಾ ಸಂಸಾರದಲ್ಲಿ ಮೂರು ಜನ ಋಜು ದೇವತೆಗಳೇ ಸಾಧನ ಭೂಮಿಯಲ್ಲಿ ಅವತರಿಸುತ್ತಾರೆಂದು ಆಗಲಿ, ಏಕಾದಶರುದ್ರ, ದ್ವಾದಶಾದಿತ್ಯಾದಿ ದೇವತೆಗಳಲ್ಲಿ ಮೂವರೇ ಅವತರಿಸುತ್ತಾರೆಂದಾಗಲಿ, ಮೂರು ಜನ ಶೇಷಪದವೀ ಅರ್ಹ ದೇವತೆಗಳು, ಹಾಗೆ ಮೂವರು ಗರುಡ ಇಂದ್ರಾದಿಗಳು ಹುಟ್ಟುತ್ತಾರೆ, ಮೂವರೇ ಕಾಮರು, ಸೂರ್ಯರು, ಚಂದ್ರರು ಹುಟ್ಟುತ್ತಾರೆ, ಆ ಪದವೀ ಯೋಗ್ಯ ಇತರರು ಆಗ ಅವತರಿಸುವುದಿಲ್ಲವೆಂದಾಗಲೀ ಹೇಳಿ ಪ್ರಮಾಣ ಕೊಟ್ಟಿಲ್ಲ. ಅನುಮಾನ ರಚಿಸಿಲ್ಲ. ಹಾಗೆ ಹೇಳಿದರೆ ಅದೃಷ್ಟ ಕಲ್ಪನೆಯೇ ಆಗುತ್ತೆ. ಚತುರ್ಮುಖ, ಗರುಡ ಮುಂತಾದ ಅವತಾರ ಹೀನರಿಗೂ ಅವತಾರವನ್ನು ಒಪ್ಪಬೇಕಾದೀತು. ಹೀಗೆ ವಾದಿಸುವವರು ಅಜ್ಞರೇ ಸರಿ.

ಕೆಲವರು ಈ ನ್ಯಾಯವನ್ನು ಅನುಸರಿಸಿ ಎಲ್ಲಾ ಋಜುಗಳೂ, ಉಪಾಸಿಸಲ್ಪಡಲು ಅರ್ಹರೇ ಆದರೂ, ಮೂವರು ಮಾತ್ರ ಕರ್ತವ್ಯತಯಾ ಉಪಾಸ್ಯರೆಂದು ಹೇಳುತ್ತಾರೆ. ಅದಕ್ಕೂ ಪ್ರಮಾಣವಿಲ್ಲ. ಹನನಪ್ರಕರಣದಲ್ಲಿ ಒಂದು ಮಿತಿ ಇರಬೇಕಂದು ಅಂಗೀಕೃತವಾದ ಆ ನ್ಯಾಯವನ್ನು ಸಮೃದ್ಧಿದಾಯಕ ಮೋಕ್ಷ ಸಾಧಕ ಉಪಾಸನೆಯಲ್ಲಿ ಅನ್ವಯಿಸಿದರೆ ಬಹೂಪಾಸನೆಯಲ್ಲಿ ಶಕ್ತ ಬಲಿಷ್ಠ ಯೋಗ್ಯಾಧಿಕಾರಿಗಳಿಗೂ ಫಲಹ್ರಾಸವೇ ಉಂಟಾಗಿ ಹೋಗುತ್ತೆ. ಆದ್ದರಿಂದ "ಅಥೋಯಥಾತ್ಮ ಶಕ್ತ್ಯೈವ ಶ್ರವಣಂ ಮನನಂ ತಥಾ" ಎಂಬ ಭಾಷ್ಯ ಪ್ರಮಾಣಾನುಸಾರ, ಯಥಾಶಕ್ತಿ ಬಹು ಋಜುಗಳ ಉಪಾಸನೆಯೇ ಒದಗಿದರೆ ಮಾಡಲ್ಪಡಬೇಕು ಎಂದು ವಿಧಿ ತಾತ್ಪರ್ಯ ತಿಳಿಯಬೇಕು. ವಾ.ಗು.ಚ ಗ್ರಂಥದಲ್ಲೂ, ಹರಿಕಥಾಮೃತಸಾರದಲ್ಲೂ ಬಹುಫಲಪ್ರದವಾದದ್ದರಿಂದ ನೂರು ಜನ ಋಜುಗಳ ಹೆಸರು ಉಪಾಸನಾರ್ಥವಾಗಿ ಕೊಡಲ್ಪಟ್ಟಿದೆ. ವಾದಿರಾಜ ಗುರುಗಳ ಉಪಾಸನೆಯು ಯುಕ್ತವೆಂಬಲ್ಲಿ ಮೊದಲೇ ಪ್ರಮಾಣ ಕೊಟ್ಟಾಗಿದೆ. ಇತರ ಋಜುಗಳೂ ಯಥಾ ಸಂಭವಂ ಮಾನ್ಯರೇ. ಶಕ್ತಿ ಇದ್ದರೆ ಸರ್ವರೂ ಮನೆಗೆ ಬಂದ ಒದಗಿದಲ್ಲಿ ಸರ್ವರೂ ನಿತ್ಯವೂ ಪೂಜ್ಯರೇ. ಗೋವುಗಳು ನೂರಿದ್ದರೂ ನಾವು ಪೂಜಿಸುವುದಿಲ್ಲವೇನು ?

ಪ್ರಕೃತ ಋಜುತ್ವವಾದಿಗಳು ಹೇಳದಿದ್ದ ಕುತ್ಸಿತ ವಾದಗಳನ್ನೆಲ್ಲಾ ಪೂರ್ವಪಕ್ಷ ರಚನೆಯಲ್ಲಿ ಸೇರಿಸಿಕೊಂಡು ಖಂಡಿಸಿದ್ದರಿಂದ ಪೂರ್ವಪಕ್ಷ ಗ್ರಂಥಕಾರರಿಗೆ ಅನೃಜುತ್ವ ವಾದದಲ್ಲಿ ಅಧಿಕ ಆಗ್ರಹವಿದೆ ಎಂದು ವ್ಯಕ್ತವಾಗುತ್ತೆ. ಇಲ್ಲಿಗೆ ಆಗಮ ನಿರಾಸಪ್ರಕರಣ ಮುಗಿಯಿತು.

ಇನ್ನು ಪ್ರತ್ಯಕ್ಷಾದಿ ಪ್ರಮಾಣ ವಿರೋಧ ಪ್ರದರ್ಶನ : ತಥಾಹಿ :

**34. ಪ್ರತ್ಯಕ್ಷ ವಿರೋಧ ವಿಚಾರ : ಪುಟ 19-1**

ಉಕ್ತಿ :

| |
|---|
| "ವಿರುದ್ಧ ಪ್ರಮಾಣಗಳೂ ಇರುವುದರಿಂದ ವಾದಿರಾಜ ಮುನಿಗಳಿಗೆ ಋಜುತ್ವ ಉಂಟೆಂದು ನಿಶ್ಚಯಿಸಲಾಗುವುದಿಲ್ಲ. ಹೇಗೆಂದರೆ: ಯದ್ಯಪಿ ನಮ್ಮ ಪ್ರತ್ಯಕ್ಷಕ್ಕೆ ಋಜುತ್ವ ನಿಷೇಧದಲ್ಲಿ ಶಕ್ತಿ ಇಲ್ಲದಿದ್ದರೂ ವ್ಯಾಸರಾಜ ವಿಜಯೇಂದ್ರಾದಿ ಸಮಕಾಲಿಕರ ಪ್ರತ್ಯಕ್ಷಾಭಾವವು ಆ ವಿಷಯದಲ್ಲಿ ಇದ್ದೇ ಇದೆ" – ಇತಿ. |
| ಪ್ರತ್ಯುಕ್ತಿ: |
| ಇಲ್ಲಿ "ವ್ಯಾಸರಾಜಾದಿಗಳ ಪ್ರತ್ಯಕ್ಷಾಭಾವವೇ ಇದೆ" ಎಂದು ಹೇಳಿದ್ದರಿಂದ ಯಾವ ಪ್ರಮಾಣ ಹೇಳಿದಂತಾಯಿತು? ಪ್ರತ್ಯಕ್ಷಾಭಾವವು ಪ್ರತ್ಯಕ್ಷ ಅಥವಾ ಆಗಮ ಪ್ರಮಾಣದಲ್ಲಿ ಸೇರುವುದಿಲ್ಲ. ಪ್ರತ್ಯಕ್ಷ ವಿರೋಧವಾಗುವುದಿಲ್ಲ ಮತ್ತು ಅನುಮಾನವೆಂದರೆ ಪಂಚಮ್ಯಂತ ಹೇತುವಾಕ್ಯವಿರಬೇಕು. ಅದು ಇಲ್ಲ. ಆದ್ದರಿಂದ ಪೂರ್ವಪಕ್ಷವವರ ಈ ಮಾತಿನಿಂದ ಯಾವ ಪ್ರಮಾಣ ವಿರೋಧವನ್ನೂ ಹೇಳಿದಂತಾಗಲಿಲ್ಲ. ಅಲ್ಲದೆ ಇವರಿಂದ ಈಗ ಉದ್ದಿಷ್ಟವಾದುದು ಪ್ರತ್ಯಕ್ಷ ವಿರೋಧವು. ಅದಂತೂ ಇವರ ಈ ವಾಕ್ಯಗಳಿಂದ ಪ್ರತಿಪಾದಿತವಾಗಿಲ್ಲ. |
| "ವ್ಯಾಸರಾಜಾದಿಗಳಿಗೆ ವಾದಿರಾಜ ಗುರುಗಳನ್ನು ನೋಡಿ ಅನೃಜುತ್ವ ಪ್ರತ್ಯಕ್ಷವೇ ಹುಟ್ಟಿತು. ಆ ವಿಷಯದಲ್ಲಿ ಆಗಮವಿಲ್ಲ. ಅನುಮಾನದಿಂದ ಅವರಿಗೆ ಅನೃಜುತ್ವ ಪ್ರತ್ಯಕ್ಷ ಉಂಟಾಗಿತ್ತೆಂದು ಸಾಧಿಸಲ್ಪಡುತ್ತೆ. ಆ ಅನುಮಾನವೇನಂದರೆ ವ್ಯಾಸರಾಜಾದಿಗಳ "ಅನುಕ್ತಿ". ಹೀಗೆ ಅನುಮಿತ ಅನೃಜುತ್ವ ಪ್ರತ್ಯಕ್ಷವು ಪ್ರಮಾಣವು" ಎಂದು ವಿವಕ್ಷಿತವಾದರೆ ಅದೂ ಕೂಡುವುದಿಲ್ಲ. ಅನುಕ್ತನುಮಾನವು ದುರನುಮಾನವೆಂದು ಚತುರ್ಥಾಧ್ಯಾಯದಲ್ಲಿ ತೋರಿಸಲ್ಪಟ್ಟಿದೆ. ಅನುಕ್ತಿ ಹೇತುವು ಶ್ರೀ ವ್ಯಾಸತೀರ್ಥರಿಗೆ ಋಜುತ್ವ ಪ್ರತ್ಯಕ್ಷವಿತ್ತೆಂಬಲ್ಲಿಯೇ ಉತ್ತಮ ಸಾಧಕವೆಂದೂ ಇಲ್ಲೇ 23ನೇ ಪ್ರಕರಣಾದಿಗಳಲ್ಲಿ ನಿರೂಪಿತವಾಗಿದೆ. ಕಿಂಚ ವ್ಯಾಸರಾಜಾದಿಗಳಿಗೂ ಅಶ್ವತ್ಥಾಮಾದಿ ಯೋಗಿಗಳಿಗೂ ಅಜ್ಞತ್ವ ಭ್ರಾಂತಿತ್ವಾದಿಗಳು ಸಂಭಾವಿತವೆಂದೂ ತಾನೇ ಒಪ್ಪಿ ಈಗ ಅವರು ಒಬ್ಬರನ್ನು ನೋಡಿ ಏನೂ ಹೇಳದೆ ಸುಮ್ಮಗಿದ್ದರೆಂಬ ಅನುಕ್ತಿ ಲಿಂಗದಿಂದ ಒಂದು ಅತೀಂದ್ರಿಯ ಪ್ರಮೇಯವೇ ಸಿದ್ಧಿಸುತ್ತೆಂದು ಹೇಳುವ ವಾದಿಯು ಹೇಗೆ ಹಾಸ್ಯಾಸ್ಪದನಾಗುವುದಿಲ್ಲ? ವ್ಯಾಹತಿ ದೋಷದಿಂದ ಹೇಗೆ ಮುಕ್ತ ನಾಗುತ್ತಾನೆ? ಇದೂ ಸಹ ಹಿಂದೆ ತೋರಿಸಿಯಾಗಿದೆ. |
| 'ಕಿಂಚ ನಿಜಪುರಂದರ ವಿಠಲರ "ಕಂಡೇ ಕಂಡೇ ರಾಜರ ಕಂಡೇ" ಎಂಬ ಉಲ್ಲೇಖದಲ್ಲೂ, ಇತರ ಪದಗಳಲ್ಲೂ ವಾದಿರಾಜಗುರುಗಳಲ್ಲಿ ಋಜುಸ್ಥತ್ವವೇ ಪ್ರಮಿತವಾಗಿದೆ. "ವಾದಿರಾಜೋಯತಿರ್ಭೂತ್ವಾ ಚೈತದ್ವಿಸ್ತಾರಯಿಷ್ಯತಿ" ಎಂಬ ಪುರಾಣವಾಕ್ಯವೂ ಗುರುರಾಜರ ಋಜುತ್ವವನ್ನೇ ಹೊಗಳಿದೆ. "ಮಮಾಪಿ ಜೀವೋತ್ತಮತ್ವಂ ಶ್ರುತ್ವಾ ಸರ್ವೆ ಮಮ ಪ್ರಿಯಾಃ । ಗರ್ವ0 ಹಿತ್ವಾಪ್ರದಾಸ್ಯಂತು ಗುರ್ವಂತರ್ಯಾಮಿಣಃಕರಂ" ಎಂಬ ಆಖ್ಯಾನ ವಾಕ್ಯವೂ ಋಜುತ್ವವನ್ನೇ ಬೋಧಿಸುವುದರಿಂದ ಅನುಕ್ತಿಯಿಂದ ಅನೃಜುತ್ವ ಸಾಧಕ ಅನುಮಾನವು ಬಾಧಿತವಾಗಿಯೇ ಇದೆ. |
| ವ್ಯಾಸರಾಜಾದಿಗಳಿಗೆ ಅತಿರೊಹಿತ ಯೋಗಿತ್ವ ಕಲ್ಪನೆ, ಬುಭುತ್ಸಾ ಕಲ್ಪನೆ, ಪ್ರಯತ್ನ ಕಲ್ಪನೆ, ಪ್ರಸಕ್ತಿಕಲ್ಪನೆ, ಋಜುತ್ವಾದರ್ಶನದಿಂದಲೇ ಅವರ ಅನುಕ್ತಿ ಅನುಲ್ಲೇಖಾದಿಗಳು ಎಂಬ ಕಲ್ಪನೆ, ಇತ್ಯಾದಿ ರೀತಿಯಿಂದ ಕಲ್ಪನಾಗೌರವವು ಸ್ಪಷ್ಟವಾಗಿದೆ. ದೃಷ್ಟಾಂತವು ಯಾವುದೂ ಇಲ್ಲ. ಆದ್ದರಿಂದ ಹೆಚ್ಚು ಹೇಳಬೇಕಾದ್ದೇನು? ಈ |

ವಿಷಯ ಸಂಶಯ ಪ್ರಸಕ್ತಿ ವ್ಯಾಸರಾಜಾದಿಗಳಿಗೆ ಬಂದು, ಅವರು ಧ್ಯಾನ ಮಾಡಿ ಹೇಳುತ್ತೇನೆಂದು ನಿಶ್ಚಯಿಸಿ ಪ್ರವೃತ್ತರಾಗಿ, ಧ್ಯಾನಾನಂತರ "ಇವರು ಋಜುಗಳಲ್ಲ, ಇಂಥ ದೇವತೆಗಳು" ಎಂದು ಕಂಡು ಹೇಳಿ ಅಥವಾ ಬರೆದಿದ್ದರೆ ವಾದಿರಾಜರ ಅನೃಜುತ್ವವು ಅಂಗೀಕಾರಾರ್ಹವಾಗುತ್ತಿತ್ತು. ಅನುಕ್ತಿ ಲಿಂಗಕ್ಕೆ ಇಂಥ ಸಾಧ್ಯ ಸಾಧಿಸಲು ಸಾಮರ್ಥ್ಯವಿಲ್ಲ. ಅನೃಜುತ್ವಾ ಪ್ರತ್ಯಕ್ಷ ಸಾಧನೆಯು ಕಲ್ಪನಾ ಗೌರವವನ್ನು ಹೊಂದಿದೆ. ಆದ್ದರಿಂದ ವಾದಿರಾಜ ಗುರುಗಳು ಋಜುಗಳೆಂಬಲ್ಲಿ ಪ್ರತ್ಯಕ್ಷ ವಿರೋಧವು ಅಸಿದ್ಧವೇ.

## 35. ಪ್ರತ್ಯಕ್ಷ ವಿರೋಧ ವಿಚಾರ: ಪುಟ 19-4

**ಉಕ್ತಿ:**

"ವ್ಯಾಸರಾಜಾದಿಗಳಿಗೆ ಅನೃಜುತ್ವ ಪ್ರತ್ಯಕ್ಷವಾಗಿದೆ" ಎಂದರೆ ಯೋಗಾದಿ ಪ್ರತ್ಯಕ್ಷವು ಅನಿಶ್ಚಾಯಕವೆಂದು ಹೇಳುವ ಟೀಕಾವಾಕ್ಯ ವಿರೋಧ ಬರುವುದಿಲ್ಲವೇ ಎಂದರೆ ಇಲ್ಲ. ಅದು ನಿತ್ಯಾತೀಂದ್ರಿಯಾರ್ಥ ವಿಷಯದಲ್ಲಿ ಮಾತ್ರ ಆಗಮಾಸಿದ್ಧ ಯೋಗಿ ಪ್ರತ್ಯಕ್ಷವು ಪ್ರವೃತ್ತಿಹೀನವಾದ್ದು, ಅಸಾಧಕವು ಎಂಬ ತಾತ್ಪರ್ಯವುಳ್ಳದ್ದು" ಇತಿ.

**ಪ್ರತ್ಯುಕ್ತಿ:**

ಇಲ್ಲೂ ಅಪ್ರಾಮಾಣಿಕ ಕಲ್ಪನೆಯೇ. ಹೇಗೆಂದರೆ ಋಜುತ್ವವು ನಿತ್ಯಾತೀಂದ್ರಿಯವೇ ಎಂದು ನಾವೂ ಹೇಳಿದ್ದೇವೆ, ಅವರೂ ಒಪ್ಪಿದ್ದಾರೆ. "ಋಜುತ್ವಸ್ಯಚ ನಿತ್ಯಾತೀಂದ್ರಿಯತ್ವಾತ್" (ಪುಟ 7) ಎಂದಿದೆ. ಹಾಗಿದ್ದರೂ ಇಲ್ಲಿ ಅದಕ್ಕೆ ಪ್ರತ್ಯಕ್ಷತ್ವ ಸಾಧನವು ವ್ಯಾಹತವೇ. ಕಿಂಚ ಆಗಮಸಿದ್ಧ ಯೋಗಿಗಳ ಪ್ರತ್ಯಕ್ಷವು ಪ್ರವೃತ್ತಿ ಸಮರ್ಥವು. ಆಗಮಾಸಿದ್ಧ ಯೋಗಿಗಳ ಪ್ರತ್ಯಕ್ಷವು ಪ್ರವೃತ್ತಿ ರಹಿತವು ಎಂದು ಯೋಗಿ ಪ್ರತ್ಯಕ್ಷ ದ್ವೈವಿಧ್ಯ ಕಲ್ಪನೆಯು ಅಪ್ರಾಮಾಣಿಕವು. ಇದರ ಮೇಲೆ ವ್ಯಾಸರಾಜಾದಿಗಳು ಪೂರ್ವಪಕ್ಷದವರ ಅಭಿಪ್ರಾಯದಲ್ಲೇ ಆಗಮಾಸಿದ್ಧಯೋಗಿಗಳೇ ಆಗಿರಬೇಕು. ಆಗಮಾಸಿದ್ಧ ಯೊಗಿಗಳಿಗೆ ಅಪ್ರವೃತ್ತಿ, ಅಸಾಧಕತ್ವ, ಆಗಮ ಸಿದ್ಧಯೋಗಿಗಳಿಗೆ ಪ್ರವೃತ್ತಿ ಸಾಧಕತ್ವ ಎಂಬುದು ಅದೃಷ್ಟ ಕಲ್ಪನೆ. ಸಿದ್ಧಾಂತವೇನೆಂದರೆ ಆಗನ ಸಹಾಯವಿಲ್ಲದೆ ಯಾವ ವಿಧವಾದ ಯೋಗಿ ಪ್ರತ್ಯಕ್ಷವೂ ಧರ್ಮಾಧರ್ಮಾದಿ ನಿಶ್ಚಯವನ್ನು ನಮಗೆ ಮಾಡಿಕೊಡಲಾರದು. ಹಾಗೆ ಆಗಮ ಸಹಾಯವಿಲ್ಲದೆ ವ್ಯಾಸರಾಜಾದಿಗಳ ಯೋಗಜ ಪ್ರತ್ಯಕ್ಷವೂ ವಾದಿರಾಜ ಗುರುಗಳ ಋಜುತ್ವ ವಿಷಯದಲ್ಲಿ ಪ್ರವರ್ತಿಸಿ ನಿರ್ಣಯವನ್ನು ನಮಗೆ ಬೋಧಿಸಲು ಶಕ್ತವಲ್ಲ. ಅದಕ್ಕೆ ಈ ಕಾರ್ಯದಲ್ಲಿ ಪ್ರವರ್ತರಾದ ವಿಜಯದಾಸರು ತಮ್ಮ ಸುಳಾದಿಯಲ್ಲಿ ಬ್ರಹ್ಮಾಂಡ ಪುರಾಣರೂಪ ಆಗಮ ಸಹಾಯವಿದೆ ಎಂದು ಸೂಚಿಸಿದ್ದಾರೆ. ಆಗಮವಿಲ್ಲದೆ ಅವರ ಯೋಗಿ ಪ್ರತ್ಯಕ್ಷವಿದೆ ಎಂದು ಸಿದ್ಧವಾಗುವುದಿಲ್ಲ. ಅನುಮಾನದಿಂದ ಅವರ ಆಗಮ ಸಾಧಿಸುವುದು, ಆ ಆಗಮದಿಂದ ಅವರಿಗೆ ಪ್ರತ್ಯಕ್ಷವಾಗಿದೆ ಎಂದು ಸಾಧಿಸುವುದು, ಆ ಪ್ರತ್ಯಕ್ಷವೂ ಅನೃಜುತ್ವ ಪ್ರತ್ಯಕ್ಷವೆಂದು ನಿಶ್ಚಯಿಸುವುದು ಇವೆಲ್ಲಾ ದುಸ್ತರ ಕಲ್ಪನಾ ಗೌರವವೇ ಸರಿ.

ಹಾಗಿದ್ದರೆ ಯೋಗಿ ಪ್ರತ್ಯಕ್ಷವು ಮಾಧ್ವಜನತೆಯಲ್ಲಿ ಎಲ್ಲೂ ಪ್ರಮಾಣವಾಗಿ ಅಂಗೀಕೃತವಾಗಿಯೇ ಇಲ್ಲವೇ ಎಂದರೆ ಆಗಿದೆ - ಜಯತೀರ್ಥರ ಮಹಿಮ, ರಾಘವೇಂದ್ರಸ್ವಾಮಿಗಳ ದೇವತ್ವ, ಇತ್ಯಾದಿಗಳು ವಿಜಯದಾಸಾದಿಗಳ

ಕೀರ್ತನೆಗಳಿಂದ ನಮಗೆ ತಿಳಿದಿದೆ. ಅವರುಗಳ ಯೋಗಿಪ್ರತ್ಯಕ್ಷದಲ್ಲಿ ಮಾಧ್ವಜನತೆಗೆ ಅಚಾಲ್ಯ ನಂಬಿಕೆ ಇದೆ. ಈ ಪ್ರಕ್ರಿಯಾ ವಿಶೇಷವು ವಿದ್ಯಾಧಿಕರಣಾನುವ್ಯಾಖ್ಯಾನ ಸುಧೆಗಳಲ್ಲಿ ನಿರೂಪಿತವಾಗಿದೆ. ಕನಕ, ಪುರಂದರದಾಸ, ವಿಜಯ ದಾಸಾದಿಗಳಂತೆ, ವಾದಿರಾಜತೀರ್ಥರು, ರಾಘವೇಂದ್ರತೀರ್ಥರು, ರಘೋತ್ತಮತೀರ್ಥರಂತೆ ಯಾವ ಯೋಗಿಗಳು ಬಹುಕಾಲ ನಮ್ಮ ಸಂಗಡ ಸಮೀಪದಲ್ಲೇ, ಮಧ್ಯೇ ಯಾವ ಭೀತಿ ಸಂಶಯ ಜನಕವಾದ ಅನಿಷ್ಟ ಕಾರ್ಯವನ್ನೂ ಮಾಡದೇ ಸಮಾಜೋಪಕಾರಕರಾಗಿ ವ್ಯವಹರಿಸುತ್ತಾರೋ, ಅಂಥವರ ವಿಷಯದಲ್ಲಿ ಅವರ ಪ್ರತ್ಯಕ್ಷ ಪವಾಡಾದಿ ದರ್ಶನದಿಂದಲೂ ಸಹ ದೃಢತನ ನಂಬಿಕೆ ಹುಟ್ಟಹೋಗುತ್ತೆ. ಅವರು ಹೇಳಿರುವ ಭವಿಷ್ಯಗಳು ನಿಜವಾಗಿವೆ. ಶಾಪ-ವರಗಳು ಫಲಿಸಿವೆ. ಅಂತೂ ಅವರ ಮಾತು ಪ್ರಮಾಣ. ಬೇರೆ ವೇದಾದಿ ಪ್ರಮಾಣಗಳನ್ನು ಅವರ ವಿಷಯದಲ್ಲಿ ಅಥವಾ ಅವರು ಹೇಳಿರುವ ವಿಷಯದಲ್ಲಿ ನಾವು ಕೋರುವುದಿಲ್ಲ. ಹಾಗಿದ್ದರೂ ಅವರ ಸ್ವಷ್ಟ ನಿರವಕಾಶೋಕ್ತಿಯೇ ಋಜುತ್ವಾನೃಜುತ್ವ ಸಾಧಕ. ಅವರ ಅನುಕ್ತಿಯು ಅಸಾಧಕವೇ. ಪ್ರಕೃತದಲ್ಲಿ ದಾಸರಾದ ಅಪರೋಕ್ಷ ಜ್ಞಾನಿಗಳು ಗುರುರಾಜರ ಋಜುತ್ವವನ್ನೇ ಅಂಗೀಕರಿಸಿದ್ದಾರೆ. ಅನೃಜುತ್ವ ತಿರಸ್ಕರಿಸಿದ್ದಾರೆ. ವ್ಯಾಸತೀರ್ಥರ ದೇವರನಾಮವೂ ಋಜುತ್ವಕ್ಕೆ ಸೂಚಕವೇ. ತಥಾಚ ವಾದಿರಾಜ ಮುನಿಗಳು ಋಜುಗಳು ಎಂಬ ಮತಕ್ಕೆ ಜ್ಞಾನಿಪ್ರತ್ಯಕದ ವಿರೋಧವಿಲ್ಲ. ವ್ಯಾಸತೀರ್ಥರಿಗೆ ಋಜುತ್ವ ಪ್ರತ್ಯಕ್ಷವೇ ಇದ್ದಿರಬಹುದು ಎಂಬಲ್ಲಿ ಯುಕ್ತಿಯೂ ಹಿಂದೆ 23ನೇ ಪ್ರಕರಣದಲ್ಲಿ ನಿರೂಪಿತವಾಗಿದೆ. ಗುರುರಾಜರ ವಿಷಯದಲ್ಲಿ ಅನೃಜುತ್ವ ಪ್ರತ್ಯಕ್ಷವು ಅಲೀಕವೇ-ಸದಾಭಾವ ಪ್ರತಿಯೋಗಿ ಎಂದರ್ಥ.

### 36. ಪ್ರತ್ಯಕ್ಷ ವಿಚಾರ : ಪುಟ 19-7

**ಉಕ್ತಿ:**

"ಇಲ್ಲಿ ಶಂಕೆ: ಋಜುತ್ವವು ನಿತ್ಯಾತೀಂದ್ರಿಯ ಧರ್ಮವಾದ್ದರಿಂದ, ಅವರ ಸ್ವರೂಪಭೂತ ಧರ್ಮವಾದ್ದರಿಂದ ಹೇಗೆ ಪ್ರತ್ಯಕ್ಷವಾಗುತ್ತೆ ಎಂದರೆ ಸತ್ಯ. ಆದರೂ ಋಜುತ್ವ ಗಮಕ ಲಿಂಗಗಳು ಅವರ ದೇಹದಲ್ಲಿದ್ದು ಪ್ರತ್ಯಕ್ಷ ವಿಷಯವಾಗುವುದರಿಂದ ಋಜುತ್ವಕ್ಕೆ ಅಯೋಗಿ ಪ್ರತ್ಯಕ್ಷ ಗಮ್ಯತ್ವವೂ ಸಿದ್ಧವಾಗುತ್ತೆ. ಮೂವತ್ತೆರಡು ಲಕ್ಷಣ ಹೊಂದಿರೋಣ, ಅನನ್ಯ ಸಾಧಾರಣ ಕಾರ್ಯಕಾರಿತ್ವ ಇತ್ಯಾದಿ ಋಜುತ್ವ ಲಕ್ಷಣಗಳು ಶಾಸ್ತ್ರಗಳಲ್ಲಿ ಉಕ್ತವಾಗಿವೆ. ರಾಮಾಯಣ ಭಾರತಾದಿಗಳಿಂದ ಹನುಮ ಭೀಮ ಮಧ್ವರೂಪ ವಾಯ್ವವತಾರಗಳಲ್ಲಿ ಕಂಡಿದೆ. ವಾಲ್ಮೀಕಿ ರಾಮಾಯಣದಲ್ಲೂ ಹನುಮಂತನಿಗೆ ರಾಮ ಭಿನ್ನ ಸಮಕಾಲೀನರ ದೆಸೆಯಿಂದ ಆಧಿಕ್ಯವೇ ಹೇಳಿದೆ. ಭೀಮಸೇನ ದೇವರ ಆಧಿಕ್ಯವು ಯುಧಿಷ್ಠಿರಾದಿ ಸಾತ್ವಿಕರಿಂದಲೂ, ದರ್ಯೋಧನಾದಿ ತಮೋಯೋಗ್ಯರಿಂದಲೂ ಅನುಭೂತವೆಂದು ಮ.ತಾ.ನಿ. II ಅಧ್ಯಾಯದಲ್ಲಿ "ವಿರಾಟಪರ್ವಗಂ ಚಾಪಿ........ಕ್ರಮಾದೇವ ಪ್ರಕೀರ್ತಿತಾಃ" ಶ್ರೀ ಭಗವತ್ಪಾದರಿಂದಲೇ ಉಪಪಾದಿತವಾಗಿದೆ. ಋಜುಗಳಿಗೆ ಅವತಾರಗಳಲ್ಲಿಯೂ ದ್ವಾತ್ರಿಂಶಲಕ್ಷಣೋಪೇತತ್ವವು ಮ.ತಾ.ನಿ. XII 174 ಮತ್ತು XXX 130ನೇ ಶ್ಲೋಕಗಳಲ್ಲಿ ಹೇಳಲ್ಪಟ್ಟಿದೆ. ಅಂಥ ತೇಜೋರೂಪದ ಊಹನವಾಗಲಿ, ಅನ್ಯರಿಂದ ಅದೃಷ್ಟತ್ವವೇ ಆಗಲಿ ಯುಕ್ತವಲ್ಲ. ಮೇಘದಲ್ಲಿ ಲೀನನಾದ ಸೂರ್ಯನ ಪ್ರಕಾಶವೂ ಇತರ ತೇಜೋ

ಸಮುದಾಯಕ್ಕಿಂತಲೂ ಶ್ರೇಷ್ಠವೇ ಆದ ರೀತಿಯಲ್ಲಿ ಋಜುಗಳ ದೇಹದ ತೇಜಃ ಪ್ರಕಾಶವು ಊಹನಾ ಶಕ್ಯವು, ಪಂಡಿತಾಚಾರ್ಯರಿಂದ ತತ್ವಪ್ರದೀಪ(ಪುಟ 17)ದಲ್ಲಿ "ಪ್ರತ್ಯಕ್ಷಮೇವ ಚೈತಲಕ್ಷಣಂ ದೃಶ್ಯತೇ ಭಗವತಿ ಭಾಷ್ಯಕಾರೇ" ಇತಿ.

ಪ್ರತ್ಯುಕ್ತಿ:

ಈ ಪೂರ್ವಪಕ್ಷವೆಲ್ಲವೂ ಈ ಮೇಲ್ಕಂಡ ವಾಕ್ಯಗಳ ಅನುವಾದ ಪೂರ್ವಕವಾಗಿ ದ್ವಿತೀಯಾಧ್ಯಾಯದಲ್ಲಿ (ಪುಟ 16-20) ಖಂಡಿಸಲ್ಪಟ್ಟಿದೆ. ಋಜುತ್ವದ್ಯೋತಕ ಲಿಂಗವು ಆಯೋಗಿ ಪ್ರತ್ಯಕ್ಷಗಮ್ಯವಲ್ಲ. ಅಪರೀಕ್ಷಿತ ಪ್ರತ್ಯಕ್ಷಗಮ್ಯವೂ ಅಲ್ಲ. ದೃಷ್ಟಾಂತಗಳೆಲ್ಲಾ ಹಾಗೆಯೇ ಇವೆ. ಹನುಮದ್ಭೀಮ ಮಧ್ವರ ಋಜುತ್ವವು ಸಾಮಾನ್ಯ ಜನರಿಂದ ಅದೃಷ್ಟವೇ. ಹಾಗೆ ವಾದಿರಾಜ ಗುರುಗಳ ದೇಹ ಮೂವತ್ತೆರಡು ಲಕ್ಷಣಗಳನ್ನು ವಾದಿರಾಜರೇ ತಿಳಿದಿದ್ದರು. ವೇದವೇದ್ಯರು - ಅವರ ಶಿಷ್ಯರು ಸಹ ತಿಳಿದಿದ್ದರು. ಇತರರು ತಿಳಿದಿರಲಿಲ್ಲವೆಂದೇ ಹೇಳಬೇಕು. ಲಕ್ಷಣಗಳು ಸೂಕ್ಷ್ಮ, ಸಾಮಾನ್ಯ ಜನರಿಂದ ಅಜ್ಞೇಯವೇ.

ನಿತ್ಯಾತೀಂದ್ರಿಯ ವಿಷಯಗಳಲ್ಲಿ ಸಾಮಾನ್ಯ ಪ್ರತ್ಯಕ್ಷದಿಂದ ನಿಶ್ಚಯವು ಹುಟ್ಟುವುದಿಲ್ಲ. ಶ್ರೀಕೃಷ್ಣನ ಲಕ್ಷಣಯುಕ್ತ ದೇಹವನ್ನು ಜನರೇ ನೋಡಿದರೂ ಕೂಡ ಅವನ ರೋದನ, ಅಂಬೆಗಾಲಿಡೋಣ, ಭೋಜನ, ವಸನ ಮುಂತಾದ ಕಾರ್ಯದರ್ಶನದಿಂದ ಜನರಿಗೆ ಮೋಹವೇ ಉಂಟಾಯಿತು. ಮಧ್ವಾವತಾರ ದರ್ಶನ ಮಾಡಿದವರಿಗೂ "ಸರ್ವಂ ತದಸ್ಯ ಪವನಸ್ಯ ವಿಡಂಬನಂ ಹಿ" ಎಂದು ಹೇಳಿರುವಂತೆ ಅವರ ಆಟಪಾಟ ಲೀಲೆಗಳನ್ನು ನೋಡಿ ಮೋಹವೇ ಉಂಟಾಯಿತು. ಪಿತ್ರಾದಿಗಳು ಕೂಡ "ವಿಮನೀಕೃತ"ರಾಗಿ ಕ್ವಚಿತ್ ವೈಮನಸ್ಯವನ್ನು ಹೊಂದಿಬಿಟ್ಟರೆಂದು (ಮ.ವಿ. V 23) ಶ್ರುತವಾಗಿದೆ. ಆದ್ದರಿಂದ ಲಕ್ಷಣಗಳನ್ನು ನೋಡಿ ಋಜುತ್ವ ನಿಶ್ಚಯವನ್ನು ಸಾಮಾನ್ಯರು ಮಾಡಬಹುದೆಂಬುದು ಸುಳ್ಳೇ. ಸಾಧ್ಯವೇ ಇಲ್ಲವೆಂದು ನಿಶ್ಚಯಿಸಬಹುದು. ಅನನ್ಯಕಾರಿತ್ವ ಧರ್ಮವೂ ಅಂಥದೇ, ಪುಟ 20 ರಲ್ಲಿ ಹೇಳಿದಂತೆ ಶ್ರೀಮಧ್ವಶಾಸ್ತ್ರಜ್ಞಾನಾನುಗ್ರಹವಿಲ್ಲದಿದ್ದರೆ ರಾವಣ ವಧೆ ವಿಷಯದಲ್ಲಿ ಹನುಮಂತನ ಅಶಕ್ತಿ, ಬ್ರಹ್ಮಾಸ್ತ್ರ ಬದ್ಧತೆ, ಭೀಮನು ಅಜಗರಗ್ರಸ್ತನಾಗಿ ನಿಂತಿದ್ದು, ಬಾಲವಾಸುದೇವನ ರೋದನ, ಅಂಬೆಗಾಲಿಡೋಣ, ಅಕ್ಷರ ಕಲಿಯೋಣ ಇತ್ಯಾದಿಗಳಿಂದ ಮಿಥ್ಯಾಜ್ಞಾನ ಹುಟ್ಟಿ ಅನನ್ಯಕಾರಿತ್ವವು ಜ್ಞಾತವೇ ಆಗುವುದಿಲ್ಲ. ತಮ್ಮ ಮಧ್ಯ ವಯಸ್ಸಿನ ಅನಂತರ ಮಧ್ವಗುರುಗಳು ತಮ್ಮ ಸಾಮರ್ಥ್ಯವನ್ನು ತಮ್ಮ ಮಾತಿನಿಂದಲೇ ಪ್ರಕಟಿಸಿದರು. ಅಲ್ಲಿಯವರಿಗೆ ಮಧ್ವಾವತಾರ ಸಹಿತ ಇತರ ವಾಯ್ವಾವತಾರಗಳೂ ಕೂಡ, ಲಾತವ್ಯರ ವಾದಿರಾಜಾವತಾರವೂ ಸಹ, 'ಮಾನುಷಂ ಚ' ಎಂಬ ಶ್ರುತಿ, 'ಪ್ರತ್ಯಕ್ಷೇ ಭೂತೇಷು ದೇವೇಷು' (18-15); 'ಧರ್ಮೋ ಹಿ ಸರ್ವವಿದುಷಾಮಪಿ ದೇವತಾನಾಂ' (14-3); 'ಪ್ರಜಾಯತೇ ಹಿ ಯತ್ಕುಲೇ' (13-9); ಇತ್ಯಾದಿ ನಿರ್ಣಯ ಶ್ಲೋಕಗಳಲ್ಲಿ ಉಕ್ತ ಸ್ವರೂಪಗೂಹನವನ್ನೇ ಅನುಷ್ಠಾನ ಮಾಡಿರುತ್ತವೆ. ಬೃ.ಭಾ.ದಲ್ಲೂ 'ನೀಚಾದಪ್ಯುತ್ತಮಾ ಜ್ಞಾನಂ ಶೃಣುಯುರ್ಲೀಲಯಾ ಕ್ವಚಿತ್' ಇತ್ಯಾದಿ ಬಹ್ಮತರ್ಕ ವಚನವನ್ನು ಶ್ರೀಮದಾಚಾರ್ಯರೇ ಉದಾಹರಿಸಿದ್ದಾರೆ. ಆ ವಾಕ್ಯವೂ ದ್ವಿತೀಯಾಧ್ಯಾಯದಲ್ಲಿ ತೋರಿಸಲ್ಪಟ್ಟಿದೆ. ತಥಾಚ ಸೈಂಧವರುದ್ಧನಾದ್ದರಿಂದ, ಯಕ್ಷ ಪ್ರಭಾವದಿಂದ

ಮೂರ್ಛಿತನಾದ್ದರಿಂದ, ಜರಾಸಂಧನನ್ನು ಕೊಂದಿದ್ದರೂ ಭೀಮಸೇನನು ಋಜು ಎಂದು ಮ.ತಾ. ನಿರ್ಣಯ ಸಹಾಯವಿಲ್ಲದೆ ತಿಳಿಯಲು ಶಕ್ಯವಾಗುವುದಿಲ್ಲ. ಹಾಗೆಯೇ ವಾದಿರಾಜ ಗುರುಕೃತ ಪರ್ಯಾಯ ವ್ಯವಸ್ಥೆ, ಶೈವಗುರು ಧಿಕ್ಕಾರ, ಇತ್ಯಾದಿ ಅನಿತರ ಸಾಧಾರಣ ಕಾರ್ಯಸಮಾಪ್ತಿಯೂ, ಆಖ್ಯಾನ, ಐತಿಹ್ಯ, ಪುರಾಣ ವಚನಾದಿ ಆಗಮ ಸಹಾಯದಿಂದಲೇ ಋಜುತ್ವ ವ್ಯಂಜಕವೆಂದು ತಿಳಿಯಬೇಕು. ಅನ್ಯಥಾ ಇಲ್ಲ. ಏಕೆಂದರೆ ಕದಾಚಿತ್ ಜ್ವರಗ್ರಸ್ತತ್ವ, ನೀಚ ಗುರುಗಳಲ್ಲಿ ವಿದ್ಯಾಭ್ಯಾಸ, ವರ್ಷವರ್ಷಕ್ಕೆ ಜ್ಞಾನವೃದ್ಧಿ ದರ್ಶನಾದಿಗಳಿಂದ ಮೋಹವೇ ಬಂದು ಹೋಗುತ್ತೆ.

ಹಾಗಿದ್ದರೆ ಸ್ವವೃನ್ದಾವನ ಪ್ರವೇಶವಾದ ಮೇಲೆ ವಾದಿರಾಜ ಮುನಿಗಳು ಏತಕ್ಕೆ ಸ್ವಸ್ವರೂಪವನ್ನು ಸ್ವಾಪ್ನವೃನ್ದಾವನಾಖ್ಯಾನ ರಚಿಸಿ ಪ್ರಕಟಿಸಿದರು, ಎಂದರೆ ಪ್ರಥಮಾಧ್ಯಾಯದಲ್ಲಿ ಹಿಂದೆ ತೋರಿಸಿದಂತೆ ದೇವಕಾರ್ಯಸಿದ್ಧಿಗಾಗಿ, ವಿಪ್ರ ಮತ್ತು ಅವನ ಮಿತ್ರಾದಿ ಸ್ವಭಕ್ತರ ಮತ್ತು ಅಸ್ಮದಾದಿಗಳ ಅನುಗ್ರಹಕ್ಕೋಸ್ಕರ, ತಥಾಚ ಮಾನುಷ ಪ್ರತ್ಯಕ್ಷಾನುಮಾನಗಳ ಸಾಮರ್ಥ್ಯದಿಂದ ಋಜುತ್ವವಾಗಲಿ, ಋಜುತ್ವದ್ಯೋತಕ ಸೂಕ್ಷ್ಮ ಲಕ್ಷಣಗಳಾಗಲಿ, ಅಸಾಧಾರಣ ಕಾರ್ಯಕಾರಿತ್ವವೇ ಆಗಲಿ ನಿಶ್ಚಯವಾಗಿ ತಿಳಿಯಲ್ಪಡಲು ಶಕ್ಯವಲ್ಲ. ಭಾಷ್ಯಕಾರರ ಋಜುತ್ವಾದಿಗಳೂ ಕೂಡ ಸಾಮಾನ್ಯ ಪ್ರತ್ಯಕ್ಷಾದಿಗಳಿಂದ ತಿಳಿಯಲ್ಪಡಲಿಲ್ಲವೆಂದು ಹಿಂದೆ ನಿರೂಪಿತವಾಯಿತು.

**37. ಪ್ರತ್ಯಕ್ಷ ವಿಚಾರ : ಪುಟ 20-6**

**ಉಕ್ತಿ :**

“ವ್ಯಾಸರಾಜ ಪ್ರತ್ಯಕ್ಷಾಸಿದ್ಧತ್ವವು ಹೇಗೆ ತಿಳಿಯಲ್ಪಡುತ್ತೆ ಎಂದರೆ ಅವರ ಗ್ರಂಥಗಳಿಂದಲೇ ಎಂದು ಹೇಳುತ್ತೇವೆ. ಅವರ ಗ್ರಂಥಗಳಲ್ಲಿ ಗುರುರಾಜ ಋಜುತ್ವ ನಿಷೇಧಕ ವಾಕ್ಯಗಳಿಲ್ಲ ಎಂದರೆ ನಿಜ, ಆದರೂ ಅವರಿಗೆ ಪ್ರತ್ಯಕ್ಷಾಭಾವವು ಇತ್ತೆಂದು ನಿಶ್ಚಯಿಸಲ್ಪಡಲೇ ಬೇಕಾಗುತ್ತೆ. ಹೇಗೆಂದರೆ: ಋಜುಗಳು ಸರ್ವದಾ ಪೂಜನೀಯರೇ, ಆದ್ದರಿಂದ ತಮ್ಮ ಗ್ರಂಥದಲ್ಲಿ ವ್ಯಾಸತೀರ್ಥರು ವಾದಿರಾಜ ಪ್ರಾರ್ಥನಾರೂಪ ಮಂಗಳವನ್ನು ರಚಿಸಿಯೇ ರಚಿಸುತ್ತಿದ್ದರು, ಆದರೆ ರಚಿಸಿಯೇ ಇಲ್ಲ. ಆದ್ದರಿಂದ ವಾದಿರಾಜ ಗುರುಗಳು ಋಜುಗಳಲ್ಲ. ಹೀಗೆ ಅನುಮಾನವಿದೆ....ಅನನ್ಯ ಸಾಧಾರಣ ಕಾರ್ಯಕಾರಿತ್ವವಾದರೋ ಇತಿಹಾಸ ವಿರುದ್ಧವು. ವ್ಯಾಸಾರ್ಯಾದಿಗಳಲ್ಲೇ ಅವರ ದೆಸೆಯಿಂದ ಅಧಿಕ ಮಹತ್ವದ ಕಾರ್ಯಕಾರಿತ್ರ ದೃಷ್ಟವಾಗಿರುವುದರಿಂದ” ಇತಿ.

**ಪ್ರತ್ಯುಕ್ತಿ :**

ಈ ಪ್ರಕರಣದಲ್ಲಿ ತುಂಬ ಔದ್ಧತ್ಯದಿಂದ ಪೂರ್ವಪಕ್ಷದವರು ಅನುಮಾನಾಭಾಸ ರಚಿಸಿದ್ದಾರೆ. ಈ ತರ್ಕಕ್ಕೆ ಕಲ್ಪನಾಗೌರವವು ಹಿಂದೆ ಪ್ರಕರಣ 10ರಲ್ಲಿಯೇ ಉಪಪಾದಿತವಾಗಿದೆ. ಅನುಮಾನವೂ ವ್ಯಾಪ್ತಿಹೀನವೆಂದು ತೋರಿಸಿಯಾಗಿದೆ. ಈ ತರ್ಕಾನುಮಾನಗಳೆರಡೂ ಆಗಮ ಬಾಧಿತವಾಗಿವೆ. "ಅಧಿಕಾರಿಷು ಸರ್ವೇಷು ಚೋತ್ತಮೋಹಂ ನ ಸಂಶಯಃ|” “ಯೋ ಮಾಂ ದೇವಂ ವಿಜಾನಾತಿ ಋಜುಸ್ಥಂ ಪುಣ್ಯಕೃನ್ನರಃ || ಸಯಾತಿ ನಿಲಯಂ ಪುಣ್ಯಂ ಯಗದ್ಗತ್ವಾ ನ ನಿವರ್ತತೇ" ಇತ್ಯಾದಿ ಆಖ್ಯಾನ ವಾಕ್ಯವಿರೋಧವಿದೆ. ವಿಜಯ ದಾಸಾದಿಗಳ ಕೀರ್ತನೆಗಳ ವಿರೋಧವಿದೆ. ಆ ವಾಕ್ಯಗಳಿಗೇ ಅಪ್ರಾಮಾಣ್ಯ ಹೇಳುತ್ತೇವೆ ಎನ್ನಲಾಗುವುದಿಲ್ಲ. ಪುರಾಣ, ಐತಿಹ್ಯ

ಕೀರ್ತನಾದಿಗಳು ಆಖ್ಯಾನ ವಾಕ್ಯಗಳಿಗೆ ಸಂವಾದ ರೂಪವಾಗಿವೆ. ವಾಕ್ಯಪ್ರಾಮಾಣ್ಯವೂ ಸಹ “ಸ್ವತಃ” ಸಿದ್ಧವಾಗಿದೆ, ಬಾಧಕ ಪ್ರಮಾಣವು ಎಲ್ಲೂ ಇಲ್ಲ. ದ್ವೇಷಿಗಳ ನಿರಾಧಾರ, ದುರ್ಬಲ ವಾಕ್ಯಗಳಿಗೆ ಬಾಧಕತ್ವ ಶಕ್ತಿ ಇಲ್ಲ. ಸ್ಮೃತ್ಯನವಕಾಶಾಧಿಕರಣ ನ್ಯಾಯದಿಂದಲೂ ಋಜುತ್ವಾಗಮಕ್ಕೆ ಪ್ರಾಬಲ್ಯ ಯುಕ್ತ.

ಇನ್ನು ಋಜುಗಳು ಸರ್ವಗುರುಗಳು, ಸರ್ವದಾ ಸರ್ವರಿಂದ, ವಾದಿರಾಜಗುರುಗಳ ದೆಸೆಯಿಂದ ನಲವತ್ತು ವರ್ಷ ವೃದ್ಧರಾದ ವ್ಯಾಸತೀರ್ಥರಿಂದಲೂ ಸಹ, ಗ್ರಂಥಾರಂಭದಲ್ಲೂ ಮಂಗಳ ನಮಸ್ಕಾರ ಪೂರ್ವಕವಾಗಿ ಪೂಜನೀಯರು ಎಂದು ಏನು ಹೇಳಲ್ಪಟ್ಟಿತೋ ಅದು ಸರಿಯಲ್ಲ. ಅದು ಲೋಕ, ವೇದವಿರುದ್ಧ, ಮಧ್ಯಗೇಹಭಟ್ಟರು, ಜ್ಯೇಷ್ಠ ಯತಿಗಳು ಮುಂತಾದವರು ಮಧ್ವಾಚಾರ್ಯರಿಗೆ ನಮಸ್ಕರಿಸುತ್ತಿರಲಿಲ್ಲ. ಹಾಗೆ ವಯೋವೃದ್ಧರೂ ಗುರುಗಳೂ ಎನ್ನಿಸಿದ ವ್ಯಾಸತೀರ್ಥರು ವಾದಿರಾಜ ಮುನಿಗಳಿಗೆ ನಮಸ್ಕಾರಾದಿಗಳನ್ನು ಮಾಡಲಿಲ್ಲವೆಂದು ತಿಳಿಯಬಹುದು. ಕಿಂಚ ಅನಾವಿಷ್ಕಾರ ಪೂರ್ವಕ 'ಮಾನುಷಾನುಷ್ಠಾನ' ತತ್ಪರವಾಗಿರುವುದು ಭೀಮಾದಿಗಳಲ್ಲಿ ಕಂಡಂತೆ ವಾದಿರಾಜ ಗುರುಗಳಲ್ಲೂ ಇದ್ದುದರಿಂದ, ವ್ಯಾಸತೀರ್ಥಾದಿಗಳು ಆ ತೆರೆಯನ್ನು ಕಡಿದು ಸ್ವರೂಪವನ್ನೇ ನೋಡಿ ತದನುಗುಣವಾದ ಆಚರಣೆಯನ್ನು ಮಾಡುತ್ತಿದ್ದರೆಂದು ಕಲ್ಪಿಸಲು ಕಾರಣವಿಲ್ಲ. ಋಜುತ್ವವು ವ್ಯಾಸತೀರ್ಥರಿಗೆ ತಿಳಿದಿದ್ದರೆ ಅದರ ಖ್ಯಾಪನವು ಅವರಿಂದ ಕರ್ತವ್ಯವಲ್ಲವೇ? ಎಂಬ ಪ್ರಶ್ನೆಯೂ ಅನುಚಿತ. ಅದು ಕರ್ತವ್ಯವಲ್ಲ. ಭೂಲೋಕದಲ್ಲಿ ದೇವತ್ವ ಋಜುತ್ವಾದಿಗಳು ಗೋಪ್ಯವು, ಪ್ರಚಾರಕ್ಕೆ ಅರ್ಹವಲ್ಲ ಎಂದು ಪ್ರಮಾಣವಿದೆ. ಸ್ವರೂಪ ಪ್ರಕಟವಾದರೆ ಹೋಗಿಯೇ ಬಿಡುತ್ತಾರೆಂದೂ ಪ್ರವಾದವಿದೆ. ಅಂಥ ಗೋಪ್ಯ ಪ್ರಮೇಯವಾದ್ದರಿಂದ ಋಜುತ್ವವು ವ್ಯಾಸತೀರ್ಥಾದಿಗಳಿಂದ ವಕ್ತವ್ಯವಲ್ಲ. ಆದ್ದರಿಂದ ವ್ಯಾಸತೀರ್ಥಾದಿಗಳ ಅನುಕ್ತಿಯು ದೋಷವೂ ಅಲ್ಲ. ಅನೃಜುತ್ವ ಸಾಧಕವೂ ಅಲ್ಲ. ಅವರು ಕನಕ, ಪುರಂದರದಾಸ, ವಿಜಯೇಂದ್ರತೀರ್ಥಾದಿಗಳ ವಿಷಯದಲ್ಲೂ ಹಾಗೇ ಗೋಪ್ಯವನ್ನು ಹೊರಗೆಹಾಕಿಲ್ಲ. ಹೀಗೆ ಪೂರ್ವಪಕ್ಷದ ತರ್ಕವು ದುಷ್ಟವಾದ್ದರಿಂದ ಋಜುತ್ವ ವಿಷಯದಲ್ಲಿ ಪ್ರತ್ಯಕ್ಷ ವಿರೋಧವಿಲ್ಲ.

ಹೀಗೆಯೇ ಅನನ್ಯ ಸಾಧಾರಣ ಕಾರ್ಯಕಾರಿತ್ವವು ಅನ್ಯರಲ್ಲಿ ಹೆಚ್ಚಾಗಿ ಪ್ರಮಿತವಾಗಿದೆ ಎಂದು ಹೇಳಿದ್ದೂ ಸರಿಯಲ್ಲ. ಆ ವಿಷಯದಲ್ಲಿ ಪ್ರಮಾಣವಿಲ್ಲ. ಇಷ್ಟಾದರೂ ಅನನ್ಯ ಸಾಧಾರಣ ಕಾರ್ಯಕಾರಿತ್ವವು ವ್ಯಾಸರಾಜರಲ್ಲೂ, ವಿಜಯೀಂದ್ರತೀರ್ಥರಲ್ಲೂ ಹೆಚ್ಚು ಕಾಣುತ್ತೆ ಎಂದರೆ ನಮಗೆ ಇಷ್ಟಾಪತ್ತಿ, ಮೋಹಕ ವ್ಯಾಪಾರ ಸಂಭವದಿಂದ ಇದರ ನಿರ್ಣಯ ಆಗಮ ದಿಂದಲೇ ಆಗಬೇಕು; ಚಾರಿತ್ರಿಕ ಪ್ರತ್ಯಕ್ಷ ಸಂಗತಿಗಳು ನಿರ್ಣಾಯಕವಲ್ಲವೆಂಬುದೇ ನಮ್ಮ ವಾದ. 'ಶಕ್ತಾಪಿನಕುರ್ವಂತಿ ಯದನ್ಯವಿಹಿತಂಬುಧಾಃ' ಇತಿ ಬ್ರಾಹ್ಮೇ ಎಂದೂ ಇದೆ. ಆಗಮ ಪ್ರಮಾಣಗಳು ಮಾತ್ರ ವಾದಿರಾಜರು ಋಜುಗಳೇ, ಇವರು ಮಾಡಿದ ಯುಕ್ತಿಮಲ್ಲಿಕಾದಿ ರಚನೆ, ಶೈವಜಯಾದಿಗಳು ಅನಿತರ ಸಾಧಾರಣಗಳೆಂದೇ ನಿರೂಪಿಸುತ್ತವೆ. ಇಪ್ಪತ್ತುಮೂರನೆಯ ಪ್ರಕರಣದಲ್ಲಿ ಉದಾಹೃತವಾದ ರತ್ನಸಂಗ್ರಹ ಶ್ಲೋಕಗಳನ್ನು (III 33, 41, 43; I 55) ವಿಮರ್ಶಿಸಿದರೆ ಗುರುರಾಜರ ಅನೇಕ ಕಾರ್ಯಗಳು ಅದ್ಭುತವೆನ್ನಿಸುತ್ತೆ. ವಾ.ಗು.ಚ. V 30-35 ಸಹ ಹಾಗೆ ಸೂಚಿಸುತ್ತೆ. ಋಜುವಲ್ಲದ ಇನ್ನಾವ ಯತಿಯು ಮಧ್ವಗುರುಗಳು ಮಾಡಿದ್ದ

ವ್ಯವಸ್ಥೆಯನ್ನು ಬದಲಾಯಿಸಿ, ಅದರ ಸ್ಥಳದಲ್ಲಿ ಆ ಕಾಲಾನುಗುಣವಾಗಿ ಹೆಚ್ಚು ಉಪಯೋಗವಾಗುವ ಬೇರೆ ಪೂಜಾದಿ ವ್ಯವಸ್ಥೆ ಮಾಡಿ ಮಧ್ವಗುರುಗಳಿಗೂ, ಇತರ ಎಲ್ಲಾ ಯತಿಗಳಿಗೂ ಸಂತೋಷವನ್ನೂ ಹುಟ್ಟಿಸಿ, ಹರಿವಾಯು ಪ್ರಸಾದವನ್ನು ಸಂಪಾದಿಸಲು ಸಮರ್ಥನು? ಪಲ್ಲಕ್ಕಿಯ ಒಂದು ಭಾಗದಲ್ಲಿ ಭೂತರಾಜರು ಹೊರುವವರು, ಹಿಂದಿನ ಭಾಗದಲ್ಲಿ ಮಠದ ಸೇವಕರು - ಹೀಗೆ ಪಲ್ಲಕ್ಕಿ ವಾಹನದಲ್ಲಿ ಸಂಚರಿಸುವ ಮಾಹಾತ್ಮ್ಯೆಯು ಇನ್ನಾರಲ್ಲಿ ಶ್ರುತವಾಗಿದೆ? ವಾ.ಗು.ಚ. V 56-58: "ಇತಿ ಭಾವಿ ಸಮೀರೋಸೌ ವಾದಿರಾಜೋ ಅದ್ಭುತ ಕ್ರಿಯಃ | ಲೋಕಾನುಗ್ರಹಮಾತೇನೇ ಶ್ರೀಮಧ್ವಮತ ವರ್ಧಕಃ | ಅಮೋಘ ಬಹುಳ ಗ್ರಂಥೈಃ ಶತಾಧಿಕಸುಸಂಖ್ಯಯಾ || ಅಮಾನುಷ ಕ್ರಿಯಾಭಿಶ್ಚ ಲೋಕೋಪಕೃತಿಭಿರ್ಯತಿಃ || ಮಧ್ವಸ್ಯ ಗುರು ಸಮ್ರಾಜೋ ಯುವರಾಜಾಯಿತಃ ಕೃತೀ" || ಎಂದು ವರ್ಣಿಸಲ್ಪಟ್ಟಿದ್ದಾರೆಯಷ್ಟೆ. ಮಧ್ವಾಚಾರ್ಯರು ಮಹಾರಾಜರಾದರೆ ಇವರು ಯುವರಾಜರು ಎಂದು ತಾನೇ ವರ್ಣಿಸಲ್ಪಟ್ಟಿದ್ದಾರೆ. ಆ ಕಾಲದ ಆ ಕವಿಗಳ ದೃಷ್ಟಿಯಲ್ಲಿ ಇನ್ನಾರೂ ಸದೃಶರಿಲ್ಲವೆಂದು ತಾನೇ ಅದರ ಭಾವ, ವೃನ್ದಾವನಾಖ್ಯಾನದಲ್ಲೂ ಸಹ "ಕೋವಾ ಮತ್ಸದೃಶೋಯತಿಃ" ಎಂದು ಗುರುರಾಜರ ಸ್ವಂತ ಮಾತೇ ಇದೆ.

ವೃನ್ದಾವನಾಖ್ಯಾನಕ್ಕೆ ಅನ್ಯಕೃತಕತ್ವವನ್ನು ಏತಕ್ಕೆ ಹೇಳಬಾರದು? ಎನ್ನ ಕೂಡದು. ಆ ಗ್ರಂಥೋಕ್ತ ವಿಷಯವು ಅನ್ಯರಿಗೆ ತಿಳಿದ ವಿಷಯವೇ ಅಲ್ಲ. ಕಿಂಚ ಆಖ್ಯಾನದಲ್ಲೂ, ವಾ.ಗು.ಚ ಗ್ರಂಥದಲ್ಲೂ, ಎರಡು ವಿಶ್ವಪ್ರಿಯವಿಲಾಸಗಳಲ್ಲೂ ಶ್ರೀಮುಷ್ಣಾಚಾರ್ಯಾದಿಗಳ ವ್ಯಾಖ್ಯಾನಗಳಲ್ಲೂ, ವೃನ್ದಾವನಾಚಾರ್ಯರ ಪ್ರಕರಣ ವಿಭಾಗ ವಾದಿರಾಜಾಚಾರ್ಯಾದಿಗಳ ಉಪನ್ಯಾಸಾದಿಗಳಲ್ಲೂ ಅದು ಆ ಮಹಾಪುರುಷರಿಂದಲೇ ಕೃತವೆಂದು ಅಂಗೀಕೃತವಾಗಿದೆ. ಮೇಲಾಗಿ ಶ್ರೀಪೇಜಾವರ ಮಠದ ಪುಸ್ತಕ ಕೋಶದಲ್ಲಿ ಶ್ರೀ ವೇದನಿಧಿತೀರ್ಥರು ಬರೆಸಿದ ಸ್ವಾ.ವೃಂ. ಆಖ್ಯಾನದ ಪ್ರತಿ ಇದೆ ಎಂದೂ ಗೊತ್ತಾಗಿದೆ. ಬರೆದವರ ಹೆಸರು ಕೃಷ್ಣನೆಂದಿದೆ. ಅ.ವಿ. 223 ನಂಬರು. ಅಂಥ ಪ್ರಾಚೀನ ಗ್ರಂಥವಿದ್ದರೂ ಅನ್ಯಕೃತವೆಂದು ಹೇಗೆ ಹೇಳಲಾಗುತ್ತೆ? ಅ. 7 ಪುಟ 80-97 ಗಳಲ್ಲಿ ಕೃತಕವಲ್ಲ, ನಿರ್ದೋಷ ಗ್ರಂಥ ಎಂಬುದು ಉಪಪಾದಿಸಲ್ಪಟ್ಟಿದೆ. ಆ ಗ್ರಂಥ ಪ್ರಾಮಾಣ್ಯವೂ ಸಮರ್ಥಿತವಾಗಿದೆ. ಸ್ವಪ್ನದಲ್ಲಾದರೂ ಬ್ರಾಹ್ಮಣೋಪದಿಷ್ಟ ವಾಕ್ಯವು ಪ್ರಮಾಣವು. ಉಪದೇಶ ಮಾಡಿದ ಬ್ರಾಹ್ಮಣರಾದರೋ ಪರಶುಕ್ಲತ್ರಯ ಪ್ರವಿಷ್ಟರಾದ ವಾದಿರಾಜಗುರುಗಳೇ. ಅಪ್ರಾಮಾಣ್ಯ ಕಾರಣ ದೋಷಗಳು ಯಾವುವೂ ಅದರಲ್ಲಿ ಕಾಣುವುದಿಲ್ಲ. ಲೇಖಕರು ಪ್ರಾಮಾಣಿಕರೇ, ಗ್ರಂಥೋಕ್ತ ಪ್ರಮೇಯಗಳೂ ಶಾಸ್ತ್ರಾನುಸಾರಿಯಾಗಿವೆ. ವೇದವೇದ್ಯರ ಸಂಪ್ರದಾಯ, ಕರ್ಣಾಟಕ ಗೀತಿಕಾದಿಗಳು ಸಂವಾದವಾಗಿವೆ. ಆ ಗ್ರಂಥೋಕ್ತ ಭವಿಷ್ಯಗಳ ಫಲೋಪಲಬ್ಧಿ, ಅದರ ಪಾರಾಯಣಾದಿ ರೂಪ ಸೇವೆಯಿಂದ ಆಗುವ ಸರ್ವಾಭೀಷ್ಟ ಪ್ರಾಪ್ತಿರೂಪ ಫಲಸಂವಾದ, ಪ್ರೇಕ್ಷಾವಚ್ಚಿಷ್ಟ ಪರಿಗೃಹೀತತ್ವ ಯುಕ್ತಿಗಳಿಂದ ಅದರ ಪ್ರಮಾಣ್ಯವು ದೃಢೀಕೃತವಾಗಿದೆ. ಅಂಥ ಗ್ರಂಥವು ಹೇಗೆ ಪ್ರತಾರಕ ವಾಕ್ಯದಂತೆ ನಿರಾಕರಿಸಲ್ಪಡಲು ಅರ್ಹವಾಗಿದೆ? ತಥಾಚ ವಾದಿರಾಜ ಋಜುತ್ವ ವಿಷಯದಲ್ಲಿ ಯಾವ ಪ್ರತ್ಯಕ್ಷ ವಿರೋಧವೂ ಇಲ್ಲ. ಹೆಚ್ಚು ಮಾತಾಡುವವರ ಬಾಯಿ ಮುಚ್ಚಿಸಲು ಗುರುರಾಜರ ಪ್ರತಿಮೆಯೇ ಪ್ರತ್ಯಕ್ಷ ಸಿದ್ಧವಾಗಿದೆ. ಅದರ ಪರೀಕ್ಷೆ ನಡೆಯಲಿ.

ಅನುಮಾನ ವಿರುದ್ಧತ್ವವು ಮುಂದೆ ವಿಚಾರ್ಯವಾಗಿದೆ.

**38. ಅನುಮಾನ ಪ್ರಕರಣ : - ಪುಟ 21-3**

ಉಕ್ತಿ:

"ವಿಮತವಾದಿರಾಜರು ಋಜುವಲ್ಲ. ಮಧ್ವ ಜೀವನ ಸದೃಶ ಚರಿತ್ರಕತ್ವರಹಿತರಾದ್ದರಿಂದ, ಸಂಪ್ರತಿಪನ್ನದಂತೆ, ಆ ವಿಷಯ ಹಿಂದೆ ಉಪಪಾದಿತವೇ ಆಗಿದೆ" ಎಂಬುದು ಅನುಮಾನ.

ಪ್ರತ್ಯುಕ್ತಿ:

ಈ ಅನುಮಾನಾಭಾಸವು ಹಿಂದೆ ಹತ್ತನೇ ಪ್ರಕರಣದಲ್ಲಿ ಖಂಡಿಸಲ್ಪಟ್ಟಿದೆ. ಈಗ ಇಲ್ಲಿ ಕೇವಲಾನುಮಾನ ಪ್ರಯೋಗ ಮಾಡಿ ಆಗಮೋಕ್ತ ಪ್ರಮೆಯ ನಿರಾಕರಣೆ ಮಾಡುವ ಯತ್ನವು ಮೌಢ್ಯಮೂಲಕವೆಂದು ತೋರಿಸಲ್ಪಡುತ್ತೆ. ಆಗಮಾನುಗ್ರಹ ರಹಿತವಾದ ಅನುಮಾನವು ಅತೀಂದ್ರಿಯ ವಿಷಯಗಳಲ್ಲಿ ಸಾಧನ ಬಾಧನಾಸಮರ್ಥವು ಎಂದು ದ್ವೈತಸಿದ್ಧಾಂತ, ಪೂರ್ವ ಪಕ್ಷಿಗಳೂ ತಮ್ಮ ಗ್ರಂಥದ 7 ನೇ ಪುಟದಲ್ಲಿ ಆ ನ್ಯಾಯ ಒಪ್ಪಿದ್ದಾರೆಂದು ಹನ್ನೊಂದನೇ ಪ್ರಕರಣದಲ್ಲಿ ತೋರಿಸಲಾಗಿದೆ. ಅನು । 1-3 ಶಾಸ್ತ್ರ ಯೋನಿತ್ವಾಧಿಕರಣದಲ್ಲಿ ಈ ಪ್ರಮೇಯ ನಿರ್ಣಿತವಾಗಿದೆ. "ನಾವೇದವಿನ್ನ ತರ್ಕೇಣ ಮತಿರಿತ್ಯಾದಿ ವಾಕ್ಯತಃ ॥ ತರ್ಕೋ ಜ್ಞಾಪಯಿಂತು ಶಕ್ತೋ ನೇಶಿತಾರಂ ಕಥಂಚನ ॥....ವಸ್ತುತ್ವಾತುರಗಃ ಶೃಂಗೀ ಪುಷ್ಪವತ್ವಂ ಸುತ್ಯೈರ್ಯುತಾ ॥। ಚಿತ್ರಿಣೀಚ ರಸ: ಷಷ್ಠೋ ಸೋತ್ತರೋ ಭವೇತ್ ॥" ಎಂದು ಪ್ರಮಾಣವಿದೆ. ॥ 1-4 ಅನುವ್ಯಾಖ್ಯಾನದಲ್ಲೂ "ಆಗಮಾನುಗ್ರಹಾಭಾವೇ ನ ತರ್ಕಃ ಸ್ಯಾತ್ಪ್ರತಿಷ್ಠಿತಃ" ಎಂದಿದೆ. ಅಲ್ಲಿ ನ್ಯಾಯಸುಧಾ: "ತರ್ಕವು ಆಗಮ ಸಹಾಯವಿಲ್ಲದಿದ್ದರೆ ಅಸಾಧಕವಾದ್ದರಿಂದಲೇ ಹೀಗೆಯೇ ಅನುಮಾನ ಮಾಡಬೇಕು, ಅನ್ಯಥಾ ಮಾಡಬಾರದು ಎಂದು ವ್ಯವಸ್ಥೆ ಇಲ್ಲದಿರುವುದರಿಂದ" (ಯಾವ ನಿರ್ಣಯವೂ ಶಕ್ಯವಲ್ಲ.) ಹಾಗೆ ಪ್ರಮಾಣವಿದೆ. 'ಉಪಾಧಿ, ಪ್ರತಿಪಕ್ಷಗಳು ಯಾವ ಅನುಮಾನಕ್ಕೆ ತಾನೇ ಹೇಳಲು ಅಸಾಧ್ಯ. ಇದರಿಂದ-ಇಷ್ಟು ಹೇಳಿದಂತಾಯಿತು. ವಾದಿ ಹೇಳಿದ್ದಕ್ಕೆ ಪ್ರತ್ಯನುಮಾನವು ಇರುವುದಾದರೆ ಆ ಪ್ರತ್ಯನುಮಾನವು ಪ್ರಮಾಣಾನುಗ್ರಹ ರಹಿತವೇ ಅಥವಾ ಪ್ರಮಾಣವನ್ನೇ ಮೂಲವಾಗಿ ಉಳ್ಳದ್ದೇ? ಆದ್ಯ ಪಕ್ಷದಲ್ಲಿ ಆ ಅನುಮಾನವು ಸ್ವಯಂ ನಿರಾಧಾರವಾಗಿ ಅಳ್ಳಾಡುತ್ತಿರುವಾಗ ಹೇಗೆ ತಾನೇ ವಾದಿಯ ಪಕ್ಷವನ್ನು ಪ್ರತಿರೋಧ ಮಾಡಲು ಸಮರ್ಥವಾದೀತು? ಜಿಂಕೆ ಮರಿಯು ಹುಲಿಯನ್ನು ಎದುರಿಸಲು ಅಶಕ್ತವಷ್ಟೇ. ಆದರಿಂದ ಅಂಥ ದುರ್ಬಲ ಅನುಮಾನವು ವಾದಿ ಹೇಳಿದ ಪ್ರಮಾಣದಿಂದಲೇ ಬಾಧಿಸಲ್ಪಡುತ್ತೆ. ದ್ವಿತೀಯ ಪಕ್ಷದಲ್ಲಿ ಅಂಥ ಆಗಮ ಮೂಲವಾಗಿ ಉಳ್ಳ ಅನುಮಾನವು ಪ್ರಮಾಣವೇ ಆಗುತ್ತೆ. ವಾದ್ಯುಕ್ತಿಗೆ ವಿರೋಧವಾದರೆ ಅದನ್ನು ಬಾಧಿಸಲು ಸಮರ್ಥವೂ ಆಗುತ್ತೆ" ಎಂದಿದೆ.

ಪೂರ್ವೋಕ್ತ ಪ್ರಮಾಣಗಳಿಂದ 'ಋಜುತ್ವ ವಿಚಾರ ಗ್ರಂಥದಲ್ಲಿರುವ" "ವಿಮತೋ ವಾದಿರಾಜಃ" ಮುಂತಾದ ಶುಷ್ಕಾನುಮಾನಗಳು ಅಸಾಧಕಗಳು, ಅವಕ್ಕೆ ಉಪಾಧಿ ಇದೆ. ಪ್ರತಿಪಕ್ಷಾನುಮಾನ ವಿರೋಧವಿದೆ. "ವಾದಿರಾಜ ಮುನಿಗಳು ಋಜುಗಳೇ, ಮಧ್ವಾಚಾರ್ಯರಂತೆ ಅಚ್ಛಿನ್ನ ಹರಿಭಕ್ತರಾದ್ದರಿಂದ, ಭೀಮವತ್" ಎಂಬುದು

ಪ್ರತ್ಯನುಮಾನ, ಪ್ರತ್ಯನುಮಾನವು ಆಗಮಾನುಗ್ರಹ ಯುಕ್ತವಾದ್ದರಿಂದ ಪ್ರಬಲವಾಗಿ ಪೂರ್ವಪಕ್ಷದ ಶುಷ್ಕಾನುಮಾನವನ್ನು ಬಾಧಿಸುತ್ತದೆ. ಆ ಶುಷ್ಕಾನುಮಾನವು ಋಜುತ್ವ ಸಾಧಕ ಆಗಮಗಳನ್ನು ಬಾಧಿಸಲು ಅಸಮರ್ಥವು. ಪೂರ್ವಪಕ್ಷದವರಿಗೆ ಆಗಮ ಸಹಾಯ ಒಂದೂ ಇಲ್ಲ ಎಂದು ಹಿಂದೆ ತೋರಿಸಿಯಾಗಿದೆ. ಆದ್ದರಿಂದ ಆ ಅನುಮಾನಗಳು ಅಸಾಧಕ. "ಮಧ್ಯಜೀವನ ಸದೃಶ ಚರಿತ್ರಕತ್ವಾಭಾವಾತ್" ಎಂಬ ಹೇತುವು ಅಪ್ರಯೋಜಕ. ಹನುಮಂತ, ಭೀಮಸೇನರುಗಳಲ್ಲಿ ವ್ಯಭಿಚಾರಿಯಾಗುತ್ತೆ. "ಅಚ್ಚಿನ್ನ ಭಕ್ತಿಮತ್ವಾಭಾವಃ" ಎಂಬ ಉಪಾಧಿ ಇದೆ. ಆಖ್ಯಾನಾದಿ ಉಪಜೀವ್ಯಾಗಮ ವಿರೋಧವೂ ಸ್ಪಷ್ಟ. ಆದ್ದರಿಂದ ಆಗಮರಹಿತಾನುಮಾನದಿಂವ ಋಜುತ್ವ ಸಾಧಕ ಪ್ರಮಾಣ ಖಂಡನೆಯು ಆಯುಕ್ತವು. ಅದು ಮೀಮಾಂಸಾ ಶಾಸ್ತ್ರ ರೀತಿಯಲ್ಲ.

ಕಿಂಚ "ಮಧ್ವಜೀವನ ಸದೃಶ ಚರಿತ್ರಕತ್ವಾಭಾವ ಪ್ರಯುಕ್ತ" ಎಂಬ ಹೇತುವಿಗೆ ಅರ್ಥವೇನು? ಮಧ್ವಾಚಾರ್ಯರಂತೆ ಆಚಾರಾದಿಗಳನ್ನು ಮಾಡುವುದಿಲ್ಲ ಎಂದರ್ಥವಾದರೆ ಅಸಿದ್ಧಿ. ಮತ್ತು ಮಧ್ವವೈಸಾದೃಶ್ಯ ಭೀಮಸೇನ ಮತ್ತು ಹನುಮಂತರಲ್ಲಿ ಕಂಡಿರುವ ಪ್ರಯುಕ್ತ ಅವರಿಗೂ ಋಜುತ್ವವಿಲ್ಲವೆನ್ನಬೇಕಾಗುತ್ತೆ. ಮಧ್ವ ದೃಶ ಜ್ಞಾನ, ಭಕ್ತಿ ವೈರಾಗ್ಯ, ತಪಃ, ಪ್ರತಿಭಾ, ವಿಷ್ಣು ಸೇವಾಸಕ್ತ್ಯಾದಿ ಗುಣವಿಲ್ಲದ ಪ್ರಯುಕ್ತ ಎಂದರ್ಥವಾದರೆ, ಹೇತುವಿಗೆ ಅಸಿದ್ಧಿಯೇ ಹೇಳಲ್ಪಡುತ್ತೆ, ಋಜುಜೀವರಿಗೆ ಪರಸ್ಪರ ಸಾಮ್ಯವು ಧರ್ಮಗ್ರಾಹಕಮಾನಸಿದ್ಧವಾಗಿರುವುದರಿಂದ ಅಸಿದ್ಧಿಯು ಯುಕ್ತವೇ. ಪೂರ್ವೋಕ್ತ ಆಗಮಗಳಿಂದ ಅನುಮಾನವು ಬಾಧಿತವೂ ಆಗಿದೆ. (ವಿ.ತ.ನಿ. P.513 Mad. Edn.)

ಅನುಮಾನ : ಪುಟ 21-5 (ಅ) ವಿಮತರು ಋಜುಭಿನ್ನ ರೇ, ಮಧ್ವ ಜೀವನ ವಿರುದ್ಧ ಚರಿತ್ವಕತ್ವದಿಂದ, ಸಂಪ್ರತಿಪನ್ನರಂತೆ ಎಂಬ ಪೂರ್ವಪಕ್ಷದವರ ಅನುಮಾನದಲ್ಲೂ, ವಿರುದ್ಧವೆಂದರೆ ಆಟಪಾಠ ವೈಸಾದೃಶ್ಯಾದಿ ವಿವಕ್ಷೆ ಇದ್ದರೆ ಹನುಮಂತ ದೇವರಲ್ಲಿ ಹೇತುವಿಗೆ ವ್ಯಭಿಚಾರವಿದೆ, ವಿರುದ್ಧ ಪದದಿಂದ ನ್ಯೂನ ಜ್ಞಾನಾದಿ ಯುಕ್ತತ್ವವೆಂಬ ಅರ್ಥ ವಿವಕ್ಷಿತವಾದರೆ ಹೇತುವಿಗೆ ಅಸಿದ್ಧಿ ಬರುತ್ತೆ. ಪ್ರಮಾಣಬಾಧವೂ ತಪ್ಪಿದ್ದಲ್ಲ. (ತ.ನಿ.ಪು. 513 Mad.Ed.).

ಈ ಸಂದರ್ಭದಲ್ಲಿ ಪೂರ್ವಪಕ್ಷಿಗಳ ಮಾತಿದೆ. ಪುಟ 21-6 -ಮಧ್ವ ಜೀವನ ವಿರುದ್ಧ ಚರಿತ್ರೆಗಳೆಂದರೆ ಗರ್ಭವಾಸಯುಕ್ತ ಜನನ ಶ್ರವಣ, ವಿಷ್ಣುಭಿನ್ನ ರುದ್ರ, ನಂದೀಶ್ವರಾದಿ ನಮನ, ವ್ಯಾಸರಾಜ ವಾಗೀಶಾದಿಗಳ ಶಿಷ್ಯತ್ವ ವಹಿಸಿ ವೇದವ್ಯಾಸಭಿನ್ನ ಶಿಷ್ಯತ್ವ ಪ್ರಾಪ್ತಿ, ಟೀಕಾಚಾರ್ಯರ ಗ್ರಂಥ ವ್ಯಾಖ್ಯಾತೃತ್ವ ಮುಂತಾದುವು. ಇದಕ್ಕೆ ಪ್ರತ್ಯುಕ್ತಿ: ಅತೀಂದ್ರಿಯ ವಿಷಯದಲ್ಲಿ ಆಗಮ ಸಹಾಯ ಹೀನವಾದ್ದರಿಂದ, ಪ್ರಮಾಣ ಜಘನ್ಯವಾದ ಈ ಪ್ರತ್ಯಕ್ಷ ಪ್ರಾಪ್ತ ಅನುಮಾನಾಭಾಸಗಳು ಸಾಧಕಗಳಲ್ಲ. ಇವೇ ಧರ್ಮಿಗ್ರಾಹಕ ಆಗಮ ಬಾಧಿತಗಳಾಗಿ ಮೋಹಕ ಲೀಲಾದಿ ವ್ಯಾಪಾರಗಳೆಂದು ಪರ್ಯಾವಸಾನ ಹೊಂದುವುವು. ಅಂಥ ವಿರೋಧಗಳು ಋಜುತ್ವ ಭಂಜಕಗಳಲ್ಲ. ಹನುಮಂತನು ಋಜುವಷ್ಟೆ. ಅಂಥವನು ಹತ್ತು ತಿಂಗಳು ಅಂಜನಾದೇವಿಯ ಗರ್ಭದಲ್ಲಿ ವಾಸ ಮಾಡಿದನೆಂದು ಭವಿಷ್ಯೋತ್ತರ ಪುರಾಣ ವೇಂಕಟೇಶ ಮಾಹಾತ್ಮ್ಯದಲ್ಲಿದೆ: "ಮುನೀನಾಮ ಭವೇದ್ಧರ್ಷೋ ವಾಯೋರ್ಗರ್ಭಸಮುದ್ಭವಃ ॥80॥ ಅಂಜನಾ ದಶಮಾಸಾಂತೇ ಸುಷುವೇ ಪುತ್ರಮುತ್ತಮಂ" ॥ ಶ್ರೀ ಕೃಷ್ಣದೇವರೂ

ಕೂಡ ದೇವಕೀ ದೇವಿಯ ಗರ್ಭದಲ್ಲಿ ಹತ್ತು ತಿಂಗಳು ಪೂರ್ತಿಯಾಗಿ ವಾಸಮಾಡಿದ್ದಾನೆ. ಅವನಿಗೇ ಗರ್ಭವಾಸಾದಿಗಳ ದುಃಖಾದಿಗಳಿಲ್ಲವೆಂದರೆ ಎಲ್ಲಾ ಋಜುಗಳಿಗೂ ಅದು ಪ್ರಮಿತವಾಗಿದೆ. ತಥಾಚ "ಗರ್ಭವಾಸ ಮಾಡಿ ದುಃಖಪಟ್ಟಿದ್ದರಿಂದ" ಎಂಬ ಹೇತುವಿಗೆ ಅಸಿದ್ಧಿ ಬಂತು. 'ಗರ್ಭವಾಸ ಮಾಡಿದ್ದರಿಂದ' ಎಂದಿಷ್ಟೇ ಹೇತುವಾದರೆ ವ್ಯಭಿಚಾರ ಬಂತ.

ಹೀಗೆಯೇ ವಿಷ್ಣು ಭಿನ್ನರ ನಮನವು ಮಧ್ವಾಚಾರ್ಯರಿಂದಲೂ ಕೃತವಾಗಿದೆ. ಮಧ್ವವಿಜಯ V 48 "ತತೋ ನಿವೃತಃ ಪರಮೇವ ಪೂರುಷಂ ಪ್ರಣಮ್ಯ ನಾನಾಯತನೇಷು ಸಂಚರನ್" ಎಂಬ ಶ್ಲೋಕದ ವಿಶ್ವಪತಿವ್ಯಾಖ್ಯಾನದಲ್ಲಿ 'ನಾನಾಯತನೇಷು' ಎಂದರೆ 'ದುರ್ಗಾ, ಶಿವ, ಸ್ಕಂದಾದಿಗಳ ನಾನಾ ದೇವಸ್ಥಾನಗಳಲ್ಲಿ ಸರ್ವೋತ್ತಮ ಪುರುಷನನ್ನೇ........ ನಮಸ್ಕರಿಸಿ' ಎಂದಿದೆ. ಇದರಿಂದ ಆ ಪ್ರತಿಮೆಗಳಿಗೆಲ್ಲಾ ನಮಸ್ಕರಿಸುತ್ತಾ ಆ ನಮಸ್ಕಾರಗಳು ಅಲ್ಲಿ ರುವ ಅಂತರ್ಯಾಮಿ ಹರಿಗಾಗಲಿ ಎಂದು ಅನುಸಂಧಾನ ಮಾಡಿದರು ಎಂದರ್ಥವಾಗುತ್ತೆ. ತಥಾಚ ಹೇತುವಿಗೆ ಮಧ್ವಗುರುಗಳ ನಮಸ್ಕಾರಾದಿಗಳಲ್ಲಿ ವ್ಯಭಿಚಾರ, ಹನುಮಂತನೂ ಅಷ್ಟದಿಕ್ಪಾಲಕರಿಗೆ ನಮಸ್ಕರಿಸಿದ್ದಾನೆಂದು ರಾಮಾಯಣದಲ್ಲಿದೆ. ಭೀಮಸೇನನೂ ಧೃತರಾಷ್ಟ್ರ, ಭೀಷ್ಮ, ಕೃಪ, ದ್ರೋಣ, ಯುಧಿಷ್ಠಿರ, ದೌಮ್ಯಾದಿಗಳನ್ನು ನಮಸ್ಕರಿಸಿದ್ದಾನೆ. ಆ ಕಾರ್ಯಗಳಲ್ಲಿ ಈ ಹೇತುವಿಗೆ ವ್ಯಭಿಚಾರ ಬರುತ್ತೆ. "ಪ್ರತ್ಯಕ್ಷೀ ಭೂತ ದೇವೇಷು ಬಂಧುಜ್ಯೇಷ್ಠೇಷು ವಾನತಿಂ ‖ ಮರ್ಯಾದಾಸ್ಥಿತಯೇಽಶಾಸದ್ಭಗವಾನ್ ಪುರುಷೋತ್ತಮಃ" ‖ ಇತ್ಯಾದಿ 18-15 ನಿರ್ಣಯ ವಚನ ಪ್ರಕಾರ ಅನುಸಂಧಾನ ವಿಶೇಷದಿಂದ ನಮನ ಮಾಡಿದ್ದಾರೆ, ವ್ಯಭಿಚಾರವಿಲ್ಲ ಎಂದರೆ ಅದು ಸರ್ವ ಋಜು ವಿಷಯದಲ್ಲೂ ಸಮಾನವು. ಆಗ ಹೇತುವಿಗೆ ಅಸಿದ್ಧಿಯೇ ಬಂತು.

ವಾದಿರಾಜ ಮುನಿಗಳಿಗೆ ಹೇಗೆ ವಾಗೀಶ ಶಿಷ್ಯತ್ವವೋ ಹಾಗೆ ಮಧ್ವಗುರುಗಳಿಗೂ ಅಚ್ಯುತ ಪ್ರೇಕ್ಷಾಚಾರ್ಯಾದಿಗಳ ಶಿಷ್ಯತ್ವವು ಮತ್ತು ವರ್ಷ ಪೂರ್ತಿ ಗುರೂಪಸತ್ತಿಯ ಪ್ರಮಿತವಾಗಿದೆ. ಭೀಮಸೇನನಿಗೂ ಕೃಪ, ದ್ರೋಣ, ದೌಮ್ಯಾದಿ ಶಿಷ್ಯತ್ವವು ಭಾರತದಲ್ಲಿ ಸ್ಪಷ್ಟವಾಗಿ ಹೇಳಲ್ಪಟ್ಟಿದೆ. ಹೀಗೆ ವ್ಯಾಸ ಭಿನ್ನ ಶಿಷ್ಯತ್ವ ಹೇತುವಿಗೆ ವ್ಯಭಿಚಾರವಿದೆ. "ನರೇಷು ಜನನೇ ನರವತ್ಪ್ರವೃತ್ತಿ" ಎಂಬ ಪ್ರಮಾಣದಿಂದ ವ್ಯಭಿಚಾರ ವಿರೋಧ ಪರಿಹರಿಸಬಹುದೆಂದರೆ ವಾದಿರಾಜರ ವಿಷಯದಲ್ಲೂ ಅದು ಸಮಾನವೇ. ಆಗ ಹೇತುವಿಗೆ ಅಸಿದ್ಧಿ ದೋಷ ಬರುತ್ತೆ. ಆಗಮಗಳಲ್ಲಿ ವಾದಿರಾಜ ಗುರುಗಳೂ ಲೋಕ ರೀತಿಯಿಂದ ಅನ್ಯ ಶಿಷ್ಯತ್ವ ತೋರಿಸಿಕೊಂಡರೆಂದಿದೆ.

ನೀಚ ಕರ್ತೃಕ ಗ್ರಂಥಗಳಿಗೆ ವ್ಯಾಖ್ಯಾನ ಮಾಡಿದ್ದು ಲೀಲೆಯಿಂದ ಹರಿಪ್ರೀತಿಗಾಗಿ ಮಾಡಿದ್ದೆಂದು ತಿಳಿಯಬೇಕು. ಹೇಗೆ ಲಕ್ಷ್ಮಣ, ಸುಗ್ರೀವಾದಿಗಳ ಸೇವೆಯನ್ನು ಹನುಮಂತನು ಮಾಡಿದನೋ, ಹೇಗೆ ಭೀಮನು ದ್ರುಪದನನ್ನು ಹಿಡಿಯುವ ಅರ್ಜುನನಿಗೆ ಸಹಾಯ ಮಾಡಿದನೂ, ಮತ್ತು ಹೇಗೆ ದ್ರೌಣಿ ಅಲಂಬುಸರ ಸಂಗಡ ಯುದ್ಧ ಮಾಡುವಾಗ ಅಸ್ತ್ರದೇವತಾ ಮಂತ್ರಗಳನ್ನು ಜಪಿಸಿ ಅಸ್ತ್ರಯುದ್ಧವನ್ನು ಮಾಡಿದನೋ, ಹೇಗೆ ಮಧ್ವಾಚಾರ್ಯರೂ ಮಾಯಾವಾದವನ್ನು ಅಭ್ಯಾಸಮಾಡಿ ಪ್ರವಚನ ಮಾಡಿದರೋ, ಹಾಗೆಯೇ ವಾದಿರಾಜ ಗುರುಗಳೂ ಮಾಡಿದ್ದಾರೆ. ಹೇತುವಿಗೆ ವ್ಯಭಿಚಾರ ಬಂತು. ಅನುಸಂಧಾನ ವಿಶೇಷದಿಂದ ಮಾಡಿದ್ದಾರಾದ್ದರಿಂದ ವ್ಯಭಿಚಾರವಿಲ್ಲವೆಂದರೆ

ವಾದಿರಾಜ ಗುರುಗಳ ವಿಷಯದಲ್ಲೂ ಅದು ಸಮವೇ. ನಿರನುಸಂಧಾನ ನಮನ ವ್ಯಾಖ್ಯಾನಾದಿ ಹೇತುವಿಗೆ ಅಸಿದ್ಧಿಯೇ ಬರುತ್ತ.

ಹೀಗೆ "ವಿರುದ್ಧ ಚರಿತ್ರವುಳ್ಳತನದಿಂದ" ಎಂಬ ಹೇತುವು ಅಪ್ರಯೋಜಕ, ಉಪಜೀವ್ಯಾಗಮ ವಿರುದ್ಧವೂ ಆಗಿದೆ. "ಅನ್ಯೇ ಭಾಗವತತ್ವೇಪಿ ಭಿನ್ನ ಧರ್ಮಾಃ ಕ್ವಚಿತ್ ಕ್ವಚಿತ್" ಎಂಬ XVIII ನಿರ್ಣಯ ವಾಕ್ಯಾನುಸಾರ ಇತರ ದೇವತೆಗಳೂ ಭೂಮಿಯಲ್ಲಿ ಹುಟ್ಟಿ ತಮ್ಮ ಭಿನ್ನ ಧರ್ಮತ್ವವನ್ನು ತೋರಿಸುತ್ತಿರುತ್ತಾರೆ; ಹನುಮದ್ಭೀಮ ಮಧ್ವರುಗಳೂ ಕೂಡ ಭಿನ್ನ ಭಕ್ತರೋ ಎಂಬಂತೆ ಭಗವದ್ಭಿನ್ನ ಸುಗ್ರೀವ ಯುಧಿಷ್ಠಿರ ಮಧ್ಯಗೇಹಾದಿಗಳ ಸೇವೆ ಮಾಡಿಕೊಂಡು ಬಾಲ್ಯಾದಿ ಸ್ವಭಾವಾನುಕರಣ ಮಾಡಿಕೊಂಡಿರುವುದೂ ಕಂಡುಬಂದಿರುತ್ತೆ. ಆದರೂ ಗುರುಕುಲ ವಾಸಮಾಡಿದ ಮಾಧ್ವ ಪಂಡಿತರು ಯಾವುದು ಸ್ವಾಭಾವಿಕ ಯಾವುದು ಔಪಾಧಿಕ ಎಂದು ತಿಳಿದು "ತಸ್ಮಾದೇಕೋ[ಇಲ್ಲಿ 'ವಾಯು' ಪದದಿಂದ ಸರ್ವ ಋಜುಗಳೂ, 'ಸರಸ್ವತೀ' ಪದದಿಂದ ಸರ್ವ ಋಜು ಪತ್ನಿಯರೂ ಗ್ರಾಹ್ಯರು.] ವಾಯುರೇವ ಧರ್ಮೇ ಭಾಗವತೇ ಸ್ಥಿತಃ ॥ ಲಕ್ಷ್ಮೀ ಸರಸ್ವತೀ ಚೇತಿ ಪರಶುಕ್ಲ ತ್ರಯಂ ಸ್ಮೃತಂ ॥" ಎಂಬ ಪ್ರಮಾಣಾರ್ಥವನ್ನು ಹೊಂದಿಸಿಕೊಂಡು, ಸರ್ವ ಋಜುಗಳೂ ಸರ್ವ ಅವತಾರಗಳಲ್ಲೂ ಔಪಾಧಿಕವಾಗಿ ನಾನಾ ಮೋಹಕ ವ್ಯಾಪಾರ ಯುಕ್ತರಾಗಿದ್ದರೂ; ವಸ್ತುತಃ ಅಭಿನ್ನ ಭಕ್ತರಾಗಿದ್ದು ಹರಿಸೇವೆ ಮಾಡುತ್ತಿರುತ್ತಾರೆಂದು ಸಿದ್ಧಾಂತ ತಿಳಿಯುತ್ತಾರೆ. ತಥಾಚ ವಾದಿರಾಜಾದಿಗಳ ಚರಿತ್ರೆಯಲ್ಲಿ ಆಪಾತತಃ ಪ್ರತೀತವಾಗುವ ವಿರೋಧ ಪರಿಹಾರವು ಶಕ್ಯವೆಂದೇ ಪಂಡಿತರು ತಿಳಿಯುತ್ತಾರೆ.

ಇದರ ಮೇಲೆ ಪುಟ 21-9 ರಲ್ಲಿ ಪೂರ್ವಪಕ್ಷಿಗಳು ಹೇಳುತ್ತಾರೆ: "ಧರ್ಮೋಹಿ ಸರ್ವ ವಿದುಷಾಮಪಿ ದೈವತಾನಾಂ ಪ್ರಾಪ್ತೇ ನರೇಷು ಜನನೇ ನರವತ್ಪ್ರವೃತ್ತಿಃ । ಜ್ಞಾನಾದಿ ಗೂಹನಮುತಾಧ್ಯಯನಾದಿರತ್ರ ।" ಎಂಬ ವಚನಾನುಸಾರ ವಾದಿರಾಜರು ನೀಚರಲ್ಲಿ ಅಧ್ಯಯನಾದಿಗಳನ್ನು ಮಾಡಿದ್ದು ಇತ್ಯಾದಿ ರೀತಿ ಪರಿಹಾರವಿದೆ ಎನ್ನ ಕೂಡದು. ಋಜುತ್ವಸಿದ್ಧವಾದ ಮೇಲೆ ಹೇಳುವ ಮಾತು ಅದು. ಅನ್ಯಥಾ ದೇವದತ್ತ ಕೃತ ಹರನಮಸ್ಕಾರವೂ ಋಜುತ್ವ ಗೂಹನಕ್ಕಾಗಿ ಮಾಡಿದ್ದೆಂದು ಅತಿಪ್ರಸಂಗ ಹೇಳಲು ಅವಕಾಶವಾಗುತ್ತೆ" ಇತಿ.

ಪ್ರತ್ಯುಕ್ತಿ:

ಈ ನಿರೂಪಣೆ ಸರಿಯಲ್ಲ. ಋಜುಗಳೆಂದು ಸರ್ವಾಭಿಮತರಾಗಿ ಬಹು ನೂರು ವರ್ಷಗಳಿಂದ ಪೂಜಿತರಾಗಿರುವ ವಾದಿರಾಜ ಗುರುಗಳ ವಿಷಯದಲ್ಲಿ ಅನೃಜುತ್ವವನ್ನು ಪ್ರಮಾಣ ಕೊಟ್ಟು ಸಾಧಿಸಿ ಕೊಟ್ಟ ಮೇಲೆ ಇಂಥ ಖಂಡನೆಯ ಮಾತನ್ನು ಬರೆಯಬೇಕು. ಎಲ್ಲರೂ ಹೀಗೆ ಐತಿಹ್ಯಾದಿ ಪ್ರಮಾಣಾಭಿಮತರಲ್ಲ, ಆದ್ದರಿಂದ ಅತಿ ಪ್ರಸಂಗವಿಲ್ಲ. ಅಲ್ಲದೆ ನಾವಂತೂ ಅನೇಕ ಅಧ್ಯಾಯಗಳಲ್ಲಿ ಪ್ರಮಾಣ ಕೊಟ್ಟಿರುತ್ತೇವೆ. ಅವುಗಳಿಗೆ ವಿರೋಧಿಯಾಗಿ ಒಂದಾದರೂ ಅನೃಜುತ್ವ ಸಾಧಕ ಆಗಮವನ್ನು ಪ್ರತಿಪಕ್ಷದವರು ಉದಾಹರಿಸಿಲ್ಲ. ನಾವು ಉದಾಹರಿಸಿರುವ ಸರ್ವ ಪ್ರಮಾಣಗಳಿಗೂ ಸ್ವಾಭಾವಿಕ ಪ್ರಾಮಾಣ್ಯ ಸ್ವತಸ್ಸ್ವಿದ್ಧೇ ಇದೆ. ಅದನ್ನು ನಿರಾಕರಿಸಿ ಅವೆಲ್ಲಾ ಆಭಾಸ ವೆಂದು ನಿಶ್ಚಯಿಸಿದರೇನೇ ಪರಾನುಮಾನಕ್ಕೆ ಬಾಧಕತ್ವ ಸಿದ್ಧಿ. ಶುಷ್ಕ ಪರಾನುಮಾನವು ನಿರವಕಾಶ ಬಾಧಕವೆಂದು

| |
|---|
| ಒಪ್ಪಿದರೇನೇ ಪೂರ್ವೋಕ್ತ ನಿರವಕಾಶ ಪ್ರಮಾಣಗಳಿಗೆ ಆಭಾಸತ್ವ ಪ್ರಾಪ್ತಿ - ಹೀಗೆ ಅನ್ಯೋನ್ಯಾಶ್ರಯ ಬರುತ್ತೆ. "ಋಜುತ್ವ ಸಿದ್ಧವಾದ ಮೇಲಿನ ಮಾತದು' ಎಂಬ ಪರಕೀಯರ ನಿರೂಪಣೆಯು ಪ್ರಾಮಾಣ್ಯ ಪರತಸ್ತ್ವಾನುಸಾರಿ. ಆದ್ದರಿಂದ ಪ್ರಮಾಣಸಿದ್ಧ ಋಜುತ್ವಕ್ಕೆ ಬಾಧಕ ಕಾಣದೆ ಅದನ್ನು ತಿರಸ್ಕರಿಸುವುದು ಯುಕ್ತವಲ್ಲ. ನಿರ್ಮೂಲಾನು ಮಾನಗಳಿಗೆ ವಿರೋಧಿತ್ವವನ್ನು ಶಾಸ್ತ್ರದಲ್ಲಿ ಒಪ್ಪಿಲ್ಲ. ಗೀ.ಭಾ. II ರ ವಾಕ್ಯ ಪುಟ 39 ರಲ್ಲಿ ತೋರಿಸಲ್ಪಟ್ಟಿದೆ. |
| ಆದ್ದರಿಂದ ಯಾವನೋ ಮೂಢ ಮಾಡಿದ ಹರವಂದನೆಯಲ್ಲಿ ಅತಿ ಪ್ರಸಂಗ ಬರುವುದಿಲ್ಲ. ಮೂಢ ಸಾಮಾನ್ಯನು 'ಇವನು ಮೂಢ'ನೆಂದೇ ಬಹುಕಾಲ ನಿಕಟ ವ್ಯವಹಾರದಿಂದ ಜ್ಞಾನಿಗಳಿಂದಲೂ ತಿಳಿಯಲ್ಪಟ್ಟಿದ್ದಾನೆ. 'ನಾನು ದಡ್ಡ' ಎಂಬ ಆ ಮೂಢನ ಸ್ವಂತ ಮಾತೂ ಅವನ ಜ್ಞಾನಾದಿ ವಿಷಯದಲ್ಲಿ ಪ್ರಬಲ ಮೂಲ ಪ್ರಮಾಣವಿರೋಧವಿಲ್ಲದ್ದರಿಂದ ಆಗಮವಾಗಿಯೇ ಇದೆ. ಸಾಮಾನ್ಯ ಜನರ ವಿಷಯದಲ್ಲಿ ಮಹಿಮಾಬೋಧಕ ಆಗಮವನ್ನೆಲ್ಲಿಂದ ತರಬೇಕು? ಆದ್ದರಿಂದ ಎಲ್ಲಿ ಪ್ರಮಾಣ ವಿಶೇಷವು ಜಾಗರೂಕವಾಗಿ ಬಾಧಕ ತನದಿಂದ ಮೇಲೆದ್ದು ಪ್ರವರ್ತಿಸಿಲ್ಲವೋ ಅಲ್ಲಿ ಮನುಷ್ಯನು ಮನುಷ್ಯನೇ. ಎಲ್ಲಿ ವಿಶೇಷ ಪ್ರಮಾಣವು ಮಹಿಮಾಬೋಧಕತನದಿಂದ ಶ್ರೀಕೃಷ್ಣ, ಮಧ್ವಗುರ್ವಾದಿಗಳ ವಿಷಯದಲ್ಲಿ ಹೇಗೊ ಹಾಗೆ ಪ್ರವರ್ತಿಸಿ ವಿಶೇಷಮಾಹಾತ್ಮ್ಯ ಸ್ವರೂಪಗಳನ್ನು ಬೋಧಿಸುತ್ತೆಯೋ, ಆಗ ಆತನು ದೇವಾಂಶ ಪುರುಷನು, ಸಾಮಾನ್ಯ ಮನುಷ್ಯನಂತೆ ಗೂಹನ ಶೀಲನು ಎಂದು ನಿಶ್ಚಯಿಸಲ್ಪಡುತ್ತೆ. ಮ.ತಾ.ನಿ. XXX 53-55ರಲ್ಲಿ ಹೇಳಲ್ಪಟ್ಟಂತೆ "ಜೀವರು ಮೂರು ವಿಧರಾಗಿದ್ದಾರೆ. ಬೇರೆ ರೀತಿಯಿಲ್ಲ. ಅದನ್ನೂ ತಾರತಮ್ಯವನ್ನೂ ಕೂಡ ದೈಹಿಕ ಮತ್ತು ಮಾನಸಿಕ ಲಿಂಗಗಳಿಂದ ತಿಳಿದುಕೊಳ್ಳಬೇಕು"; ಎಂದಿರುವುದರಿಂದ ವಿವಾದಾಸ್ಪದ ವ್ಯಕ್ತಿಯನ್ನು ಪರೀಕ್ಷಿಸಿ ಅವನು ಮುಕ್ತಿಯೋಗ್ಯನೇ ಅಲ್ಲವೇ ನಿಶ್ಚಯಿಸಬೇಕು. ಮುಕ್ತಿ ಯೋಗ್ಯನಾದರೆ ತಾರತಮ್ಯದಲ್ಲಿ ಯಾವ ಕಕ್ಷೆಯವನು ಎಂಬುದನ್ನೂ ತಿಳಿಯಬೇಕು. ಅಂಥ ಆಗಮ ಪ್ರಮಾಣಸಿದ್ಧನಾದವನ ವಿಷಯದಲ್ಲಿ ಪೂಜಾದಿಗಳನ್ನು ಮಾಡಬೇಕು. ಹೀಗೆ ಪ್ರಮಾಣ ಸಿದ್ಧತ್ವ -ಪ್ರಮಾಣಸಿದ್ಧತ್ವಾಭಾವರೂಪ ಭೇದವಿರುವುದರಿಂದ ಮೂಢನ ನಮಸ್ಕಾರದಲ್ಲಿ ಅತಿಪ್ರಸಂಗವಿಲ್ಲ. ಆ ಭೇದಜ್ಞಾನವು ಯಥಾಶಕ್ತಿ ದೀರ್ಘಪರೀಕ್ಷೆ ಮತ್ತು ಪ್ರಮಾಣೋಪಲಬ್ಧಗಳಿಂದಾಗುತ್ತೆ. ಅನ್ಯಥಾ ಇಲ್ಲ. ದೃಷ್ಟಾಂತ ಒಂದು ಜಂಬುಕವೂ ಇಂದ್ರನೆಂದು ಪ್ರಮಿತವಾಗಿದೆ ಎಂದು ಭಾಷ್ಯದಲ್ಲೇ ಹೇಳಿದೆ. ಪ್ರಕೃತ ವಾದಿರಾಜಗುರುಗಳ ವಿಷಯದಲ್ಲಿ ಐತಿಹ್ಯಾದಿ ಬಹು ಪ್ರಮಾಣಗಳು ದೊರಕಿ ಬಹುಕಾಲೀನ ಪರೀಕ್ಷೆಯೂ ಸಾಧ್ಯವಾಗಿ ನಂಬಿಕೆ ಬಂದಿದೆ. ಎಲ್ಲರ ವಿಷಯದಲ್ಲೂ ಹಾಗಾಗಿಲ್ಲ. |
| ಮತ್ತು ಪೂರ್ವಪಕ್ಷಿಗಳು ಹೇಳುತ್ತಾರೆ: ಪುಟ 21-14 "ಶ್ರೀ ಮಧ್ವಭಗವತ್ಪಾದರ ಮನುಷ್ಯತ್ವದಲ್ಲೂ ಎಲ್ಲರ ದೆಸೆಯಿಂದಲೂ ಭೇದವೇ ಕಂಡಿದೆ. ಪೂರ್ವೋಕ್ತ ಋಜುಭಿನ್ನ ಆಚರಣೆಯು ಅವರಲ್ಲಿ ದೃಷ್ಟವಾಗಿಲ್ಲ. ಸರ್ವಮೂಲದಲ್ಲೂ ರಮಾರಮಣಭಿನ್ನರಿಗೆ ನಮನವು ಕಂಡಿಲ್ಲ" ಇತಿ. |
| ಪ್ರತ್ಯುಕಿ : |
| ಇದು ಸುಳ್ಳು, ಅಸಿದ್ಧ. ಮಧ್ವರಾಜರೂ ದೀಕ್ಷಾಗುರುಗಳ `ಉಪಸತ್ತಿ ಮಾಡಿದರೆಂದು ಪ್ರಮಿತವಾಗಿದೆ. ಅಚ್ಯುತಪ್ರೇಕ್ಷಚಾರ್ಯರಿಗೆ ಸಾಷ್ಟಾಂಗ ಪ್ರಣಾಮ ಮಾಡಿದ್ದಾರೆ. ಮಧ್ವವಿಜಯ II 14 "ಸತಾಂ ಗುರುಃ ಕಾರಣ |

ಮಾನುಷಾಕೃತಿಃ ಯತಿಂ ಪ್ರಶಾಂತಂ ತಮುಪಾಸಸಾದ ಸಃ" ಎಂದಿದೆ. IV 40 "ಯಿಯಾಸತಿ ಸ್ವಸ್ತತಟಿನೀಂ ಮುಹುರ್ಮುಹುರ್ನಮತ್ಯನು ಜ್ಞಾರ್ಥಿನಿಭೂರಿಚೇತಸಿ" ಎಂದೂ ಇದೆ. V 10 ರಲ್ಲಿ "ಅವಂದತೋಪೇತ್ಯ ಗುರುಂ ಗರಿಷ್ಠಧೀಃ ಸರೂಪ್ಯಪೀಠಾಯತನೋತ್ತಮಸ್ಥಿ ತಂ" ಎಂದಿದೆ. ಹೀಗೆ ಹರಿಭಿನ್ನರಿಗೆ ನಮಸ್ಕಾರ ಮಾಡಿದ್ದಾರೆಂದು ಶ್ರುತವಾಗಿದೆ. ಆ ಗುರು ಸನ್ನಿಧಿಯಲ್ಲಿ ಗ್ರಂಥಾಭ್ಯಾಸವೂ ಆಯಿತೆಂದು IV 44 ರಲ್ಲಿದೆ. "ಗುರೋಃ ಸ್ವಶಿಷ್ಯಂ ಚತುರಂ ಚಿಕೀರ್ಷತಃ ಪ್ರಚೋದನಾಚ್ಛೋತುಮಿಹೋಪಚಕ್ರಮೇ ॥ ಅಥೇಷ್ಟಸಿದ್ಧಿಃ" ಇಷ್ಟಸಿದ್ಧಿ ಎಂಬ ಗ್ರಂಥ ಪಾಠವನ್ನು ಹೇಳಿಸಿಕೊಂಡಿದ್ದಾರೆ. III 41 "ಕ್ಷಿತಿ ಸುರಾಂಘ್ರ್ಯಭಿವಂದನಪೂರ್ವಕಂ ಸವಿದಧೇ ಅಧ್ಯಯನಂ ಛಲಮಾನುಷಃ" III 37 : "ಭುವನ ಭರ್ತುರಹೋ ಸ್ವ ನಿಗೂಹನಂ ಸುರಸಭಾಸುಕುತೂಹಲಮಾತನೋತ್" III 18 "ದ್ವಿಜವರೋಥ ಕದಾಚನ ಮಾತೃಕಾಃ ಕಿಲಸುತಂ ಪರಿಚಾಯಯತಿಸ್ಮತಂ." II 44 "ಪ್ರಾಗ್ರಿಂಖಣಂ....ಸರ್ವಂ ತದಸ್ಯ ಪವನಸ್ಯ ವಿಡಂಬನಂ ಹಿ." VII 23 "ಸುರಮಂದಿರ ವೃಂದಷ್ವಿಂದಿರಾರಮಣ ವಂದನ ಕೃತ್ಯಂ ॥ ಆಚರನ್" ಎಂಬಲ್ಲಿ ವಿಶ್ವಪತಿ ವ್ಯಾಖ್ಯಾನದಲ್ಲಿ "ಶೈವಾದಿ ನಾನಾ ಅಮರಾಲಯೇಷ್ವಪಿ ಕೇವಲಂ ಇಂದಿರಾಪತಿಂ" ಎಂದಿರುವುದರಿಂದ, ಸರ್ವಮೂಲದಲ್ಲೂ "ಗುರೂಂಶ್ಚಾನ್, ಗುರೂಂಶ್ಚಾಪಿ" ಎಂದು ನಮನ ನಿರ್ದೇಶವಿರುವುದರಿಂದ, ಆಗಿನ ಕಾಲದಲ್ಲಿ ಆ ಪದಗಳು ಅಚ್ಯುತಪ್ರೇಕ್ಷಾಚಾರ್ಯರಿಗೂ ಅನ್ವಯಿಸುವ ಸಂಭವವಿದ್ದುದರಿಂದ, ಸಾಕ್ಷಾತ್ತಾಗಿ ತಮ್ಮಿಂದಲೇ ತಮ್ಮ ವಾಯುತ್ವವು ಸ್ಪಷ್ಟವಾಗಿ ಪ್ರಕಟ ಮಾಡಲ್ಪಟ್ಟ ಹಿಂದಿನ ಕಾಲಗಳಲ್ಲೆಲ್ಲಾ ಭಗವಾನ್ ಆಚಾರ್ಯರೂ ಸಾಮಾನ್ಯ ಪುರುಷರಂತೆ ಬಹು ಮೋಹಕ ವ್ಯಾಪಾರಗಳನ್ನು ಮಾಡಿದ್ದಾರೆ ಎಂದು ತಿಳಿಯಲ್ಪಡುತೆ, ಆದ್ದರಿಂದ "ಎಲ್ಲರ ದೆಸೆಯಿಂದ ಭೇದವೇ ಕಂಡಿದೆ" ಎಂಬ ಪೂರ್ವಪಕ್ಷದವರ ಮಾತು ಹೇಗೆ ಸಮಂಜಸವಾಗುತ್ತೆ? ಈ ಪೂರ್ವಪಕ್ಷವು ನಿಸ್ಸಾರವು. ತಥಾಚ ನ್ರುದ್ಧ ಚರಿತ್ರವುಳ್ಳತನದಿಂದ" ಎಂಬ ಅನುಮಾನವೂ ವ್ಯಭಿಚಾರ, ಅಸಿದ್ಧಿ, ಬಾಧ ಮುಂತಾದ ದೋಷದುಷ್ಟ, ಆಗಮ ಸಹಾಯ ಹೀನವಾದ್ದರಿಂದ ದುಸ್ತರ್ಕವು. ವ್ಯಾಪ್ತಿ ಹೀನವಾದ್ದರಿಂದ ಹೇತುವಿಗೆ ಅಪ್ರಯೋಜಕತ್ವವೂ ಸ್ಪಷ್ಟವೇ. *

ಪುಟ 21-17 ರಲ್ಲಿ ಇಲ್ಲೇ ಮೂರನೆಯ ವಿಧವಾಗಿ ಅನುಮಾನೋಕ್ತಿ ಇದೆ :

"ಗುಹ್ಯಾದೇಶಾ ಬ್ರಹ್ಮಪದೇಯೇ ಯೋಗ್ಯಾ ದೇವತಾ ಗಣಾಃ ॥ ಸರ್ವೆ ಗುಹ್ಯೋಪದೇಷ್ಟಾರಃ ಸರ್ವೆಷಾಂ ಗುರುವೋ ಹಿತೇ" ಇತ್ಯಾದಿ ಆಗಮಗಳಲ್ಲಿ ಋಜುಜೀವರುಗಳಿಗೆ ಸರ್ವಗುರುತ್ವ, ಸರ್ವರಿಗೂ ಗುಹ್ಯೋಪದೇಷ್ಟೃತ್ವ, ಎಂಬ ಲಿಂಗಗಳು ಪ್ರಮಿತವಾಗಿವೆ. ಅಂಥ ಪ್ರಮಿತ ಲಿಂಗಗಳು ಗುರುರಾಜರಲ್ಲಿ ಕಂಡಿಲ್ಲ. ಆದ್ದರಿಂದಲೇ ಅವರ ಋಜುತ್ವ ವಿಷಯದಲ್ಲಿ ವಿಪ್ರತಿಪತ್ತಿಯೇ ಬಂದು ಹೋಗಿದೆ. ವ್ಯಾಸರಾಜ ವಿಜಯೇಂದ್ರಾದಿ ಸಮಕಾಲಿಕ ಮಹಾಪುರುಷರಿಗೆ ವಾದಿರಾಜರು ಗುರುವಾಗಿ ಉಪದೇಶ ಮಾಡಿರುವುದು ಅಶ್ರುತವೇ. ಅಷ್ಟೇ ಅಲ್ಲ. ವ್ಯಾಸರಾಜರ ಶಿಷ್ಯರೆಂದೇ ವಾದಿರಾಜರ ವಿಷಯದಲ್ಲಿ ಪ್ರಸಿದ್ಧಿ ಇರುವುದರಿಂದ ವಾದಿರಾಜ ಋಜುತ್ವವು ಪ್ರಮಾಣ ವಿರುದ್ಧವೇ? ಇತಿ.

ಪ್ರತ್ಯುಕ್ತಿ: ಈ ಮೇಲ್ಕಂಡ ಪೂರ್ವಪಕ್ಷದಲ್ಲಿ ಗ್ರಂಥಕಾರರು ಸ್ವಕಪೋಲ ಕಲ್ಪಿತ ಯುಕ್ತಿಗೆ ಆಧಾರವಾಗಿ "ಗುಹ್ಯಾದೇಶಾಃ" ಎಂಬ ಶ್ಲೋಕಕ್ಕೆ ಆಭಾಸಾರ್ಥವನ್ನು ಮಾಡಿದ್ದಾರೆ. "ವಿಮತ ವಾದಿರಾಜಗುರುಗಳು ಋಜುಗಳಲ್ಲ. ಅವರಲ್ಲಿ ಶ್ರುತ್ಯುಕ್ತ ಲಿಂಗವಾದ ಸರ್ವಗುರುತ್ವವು ಇಲ್ಲದುದರಿಂದ ಸರ್ವಗುಹ್ಯೋಪದೇಷ್ಟೃತ್ವವು [ಗುಹ್ಯಂ ಎಂದರೆ ಬ್ರಹ್ಮ ಎಂದರ್ಥ] ಇಲ್ಲದ್ದರಿಂದ, ಸಾಮಾನ್ಯನಂತೆ" ಎಂದು ಅನುಮಾನ ರಚಿಸಿದ್ದಾರೆ. ಛಾಂದೋಗ್ಯ ಭಾಷ್ಯೋದಾಹೃತ ವಾಕ್ಯಗಳು ಸಹಾಯಕ ಆಗಮಗಳೆಂದೂ ತೋರಿಸಿದ್ದಾರೆ. ಆದರೆ ಇದು ದುರನುಮಾನವೇ. ಹನುಮಂತನಲ್ಲೂ, ಭೀಮನಲ್ಲೂ, ಮಧ್ವಗುರುಗಳಲ್ಲೂ ಸರ್ವಗುರುತ್ವ ಕಂಡಿಲ್ಲವಾದ್ದರಿಂದ ಹೇತುವಿಗೆ ವ್ಯಭಿಚಾರವೇ. "ತತ್ಪ್ರತ್ಯಕ್ಷ ವಿರುದ್ಧಾರ್ಥೇನಾಗಮಸ್ಯಾಪಿಮಾನ್ಯತಾ" ಎಂದಿರುವುದರಿಂದ "ಗುಹ್ಯಾದೇಶಾಃ" ಇತ್ಯಾದಿ ಪ್ರಮಾಣಶ್ಲೋಕಕ್ಕೆ ಪ್ರತ್ಯಕ್ಷಾವಿರುದ್ಧವಾದ ಯೋಗ್ಯಾರ್ಥವನ್ನು ಮಾಡಬೇಕು. ಅಂಥ ಯೋಗ್ಯಾರ್ಥವು ಯಾವುದು? ಏಕೆಂದರೆ "ಆಭಾಸಕೋऽಸ್ಯ ಪವನಃ ಪವನಸ್ಯ ರುದ್ರಃ" ಎಂದು ರುದ್ರಗುರುತ್ವವೇ ಋಜುಗಳಿಗೆ ಪ್ರಮಿತವಾಗಿದೆ, ಸರ್ವಗುರುತ್ವವು ಕಂಡಿಲ್ಲ ಎಂದರೆ ಈ ಪ್ರಶ್ನೆಗೆ ಉತ್ತರವು ಅನುವ್ಯಾಖ್ಯಾನ (ವಿಕಲ್ಪಾಧಿಕರಣ)ದಲ್ಲಿದೆ. III 2-8 ಅನು: "ಗುರುರ್ಬ್ರಹ್ಮಾ ಅಖಿಲಾನಾಂ ಚ ವಿದ್ಯಾಚೈವ ಸರಸ್ವತೀ॥ ದೇವತಾ ಭಗವಾನ್ ವಿಷ್ಣುಃ ಸರ್ವೇಷಾಮಪಿ ವಿಶೇಷತಃ ॥ ತತ್ಪ್ರಸಾದೇನ ಮುಕ್ತಿಃ ಸ್ಯಾನ್ನಾನ್ಯಥಾತು ಕಥಂಚನ ॥ ಸ್ವೋತ್ತಮಾಸ್ತು ಕ್ರಮೇಣೈವ ಸರ್ವೇಷಾಂ ಗುರುವಃ ಸ್ಮೃತಾಃ ॥ ಉಪದೇಶೋ ಬ್ರಹ್ಮಣಸ್ತು ಸರ್ವೇಷಾಮೇವ ಮುಕ್ತಯೇ" ॥ ಎಂದಿದೆ. ಇಲ್ಲಿ ಸನ್ನ್ಯಾಯರತ್ನಾವಳೀ: ಇಹಲೋಕೇ ಪರಲೋಕೇವಾ ಚತುರ್ಮುಖಾದ್ಬ್ರಹ್ಮೋಪದೇಶಂ ಪ್ರಾಪ್ತ ಏವ ವಿಮುಚ್ಯತೇ" ಎಂದಿದೆ. ಇಲ್ಲೇ ನಯಚಂದ್ರಿಕೆಯಲ್ಲಿ "ಕಥಮನನ್ಯೋಪದೇಶಾದುತ್ಪನ್ನ ಜ್ಞಾನಾನಾಂ ಬ್ರಹ್ಮಾಗುರುರಿತ್ಯತ ಆಹ ॥ ಮುಕ್ತ ಯೇತು ಸರ್ವೇಷಾಮಪಿ ಬ್ರಹ್ಮಣಃ ಉಪದೇಶೋऽಪೇಕ್ಷಿತ ಏವ" ಎಂದಿದೆ. ಇದೇ ಗ್ರಂಥಭಾಗ ನ್ಯಾಯ ಸುಧೆಯಲ್ಲಿ "ನನ್ವಸ್ತು ವಿದ್ಯಾತ್ವಂ ವಿದ್ಯಾಭಿಮಾನಿತ್ವಾತ್ ಸರಸ್ವತ್ಯಾದೀನಾಂ ॥ ದೇವತಾತ್ವಂ ಚ ವಿದ್ಯಾಪ್ರತಿಪಾದ್ಯತ್ವಾದ್ವಿಷ್ಣೋಃ ॥ ಬ್ರಹ್ಮಣೋ ಗುರುತ್ವಂ ಕುತಃ ವಿದ್ಯೋಪದೇಷ್ಟೃತ್ವಂ ಹಿ ಗುರುತ್ವಂ ॥ ನ ಚ ಸರ್ವಾನ್ ಪ್ರತಿ ಬ್ರಹ್ಮಣಸ್ತದಸ್ತೀತತ ಆಹ "ಉಪದೇಶ" ಇತಿ ॥ ಇಹ ಜನ್ಮಾಂತರೇ ವಾ ಹಿರಣ್ಯಗರ್ಭೋಪದೇಶೇನ ವಿನಾ ನ ಕಸ್ಯಾಪಿ ಮುಕ್ತರಿತ್ಯತಸ್ತಸ್ಯಗುರುತ್ವಮುಪಪನ್ನಂ ॥ ತದಿತರೇಷಾಮಪ್ಯುತ್ತಮಾನಾಂ ವಿದ್ಯಾ ಸಂಪ್ರದಾಯ ಪ್ರವರ್ತಕತ್ವಾದ್ಗುರುತ್ವಂ" ಎಂದಿದೆ. ಏವಂ ಚ ರುದ್ರದೇವ ಜೀವರಿಗೆ ಸಾಕ್ಷಾದ್ಗುರುಗಳು; ಹಾಗೆ ಇತರ ಮುಕ್ತಿ ಯೋಗ್ಯರ ವಿಷಯದಲ್ಲೂ ಎಲ್ಲರಿಗೂ ಸಂಪ್ರದಾಯ ಪ್ರವರ್ತಕರಾಗಿ ಗುರುಗಳು, ಮತ್ತು ತಮ್ಮ ಜೊತೆಯಲ್ಲಿ ಮೋಕ್ಷಹೊಂದುವ ಕಲ್ಪದಲ್ಲಿ ತಮ್ಮ ಸಂಗಡ ಮುಕ್ತರಾಗುವ ಎಲ್ಲ ಜೀವರಿಗೂ ಮುಖ್ಯಾರ್ಥವಾಗಿ ಸಾಕ್ಷಾತ್ ಕದಾಚಿತ್ ಉಪದೇಶ ಮಾಡಿಯೇ ಮಾಡುತ್ತಾರೆ. ಹೀಗೆ ಉಭಯ ರೀತಿಯಲ್ಲಿ ಸರ್ವಗುರುತ್ವವು ಇದೆ. ಬೇರೆ ರೀತಿಯಾಗಿ ಕಲ್ಪನೆ ಮಾಡಿದರೆ ಬ್ರಹ್ಮದೇವರಿಗೇ ಋಜುತ್ವವಿಲ್ಲ ಎಂದು ಪ್ರಾಪ್ತವಾಗುತ್ತೆ. ಆದ್ದರಿಂದ ಛಾಂದೋಗ್ಯಭಾಷ್ಯದ

ಪ್ರಮಾಣಕ್ಕೆ ಹೀಗೆ ಅರ್ಥ ತಿಳಿಯಬೇಕು. ಆದ್ದರಿಂದ ಪೂರ್ವಪಕ್ಷದವರ ಅನುಮಾನಕ್ಕೆ ಹತ್ವೇಸಿದ್ಧಿ ಎಂಬ ದೋಷವೇ ಬಂತು. ಆಗಮ ಬಾಧಿತವೂ ಆಗಿದೆ. ಇತರ ದೋಷಗಳು ಹಿಂದೆ ಹೇಳಲ್ಪಟ್ಟಿವೆ. ಹೀಗೆ ಗುರುರಾಜ ಋಜುತ್ವವು ಯುಕ್ತಿ ವಿರುದ್ಧವೆಂಬ ಹೇಳಿಕೆಯು ಜಿಂಕೆ ಮರಿಯಿಂದ ಸಿಂಹವು ಹತವಾಯಿತೆಂದು ಹೇಳಿದಂತೆ ಆಯುಕ್ತವೇ ಸರಿ.

**ಇನ್ನು ಆಗಮ ವಿರುದ್ಧತ್ವ ನಿರೂಪಣೆಯ ರೀತಿ : 39 ಪುಟ 22-3**

ಉಕ್ತಿ : ಆಗಮ ವಿರುದ್ಧತ್ವವು ಹೇಗೆಂದರೆ :

ಪ್ರತ್ಯುಕ್ತಿ: ಪ್ರತಿಜ್ಞೆ ಏನೋ ಮನೋಹರವಾಗಿದೆ. ಆದರೆ ಮುಂದೆ ಆಗಮ ಒಂದನ್ನೂ ಉದಾಹರಿಸಿಲ್ಲವಾದ್ದರಿಂದ "ಆಗಮವಿಲ್ಲದ ಆಗಮ ವಿರುದ್ಧತ್ವವು" ಸ್ವಕ್ರಿಯಾ ವಿರೋಧದಲ್ಲಿ ಪರ್ಯವಸಾನವಾಗಿದೆ. ಆದ್ದರಿಂದ ಈ ಪ್ರತಿಜ್ಞೆಯು "ನಾನು ಮೂಕನು" ಎಂದು ವಕ್ತೃವಿನಲ್ಲಿ ಹೇಗೋ ಹಾಗೆ ವಿಪ್ರಲಂಭ ಅಥವಾ ಭ್ರಮ ಮೂಲಕ ಎಂದು ತಿಳಿಯಬೇಕು. ಗುರುರಾಜರ ಭಕ್ತರಿಗೆ ಮೋಸ ಮಾಡಬೇಕೆಂಬ ಭಾವವು ಗ್ರಂಥದ ಅನೇಕ ಭಾಗಗಳಲ್ಲಿ ಸ್ಪುಟವಾಗಿ, ವ್ಯಕ್ತವಾಗುತ್ತೆ.

**40. ಆಗಮ ವಿಚಾರ : ಪುಟ 22-4**

ಉಕ್ತಿ :

"ಆಗಮ ವಾಕ್ಯಗಳು ಅನಂತವಾಗಿರುವುದರಿಂದ, ಈಗ ಕಲಿಯುಗದಲ್ಲಿ ಬಹುಸದಾಗಮಗಳು ಉತ್ಸಾದಿತವಾಗಿರುವುದರಿಂದ, ಅವಶಿಷ್ಟ ಕೊಟ್ಯಂಶನ್ಯೂನಗಳಾದ ಶಾಸ್ತ್ರಗಳೂ ಕೂಡ ಪ್ರಕ್ಷೇಪಣಾದಿಗಳಿಂದ ವಿಲುಲಿತವಾಗಿ ಹೋದುದರಿಂದ ವ್ಯಾಕುಲಿತರಾದ ಸಮಸ್ತ ಸುಜನ ಸಮುದಾಯದ ಹೃದಯೋತ್ಸವಕ್ಕೋಸ್ಕರ ಶ್ರೀಹರಿಯಿಂದ ಆದಿಷ್ಟರಾಗಿ ಅವತಾರ ಮಾಡಿದ ಭಗವಾನ್ ಆನಂದತೀರ್ಥ ಮುನಿಗಳು ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯವೆಂಬ ಗ್ರಂಥರಾಜನನ್ನು ವಿರಚಿಸಿದರು. ಅವರಿಂದಲೇ ಹೇಳಲ್ಪಟ್ಟಿದೆ: "ಕಲಾವೇವಂ ವ್ಯಾಕುಲಿತೇ ನಿರ್ಣಯಾಯ ಪ್ರಚೋದಿತಃ | ಹರಿಣಾ ನಿರ್ಣಯಾನ್ ವಚ್ಮಿ ವಿಜಾನನ್ ತತ್ಪ್ರಸಾದತಃ ||" ಎಂದು ; "ಸಮಸ್ತ ಶಾಸ್ತ್ರಾರ್ಥ ವಿನಿರ್ಣಯೋಯಂ, ಅತ್ರೈವ ಸರ್ವನಿರ್ಣಯಾಃ, ವಿನಿರ್ಣಯೋ ನಾಸ್ತ್ಯಮುನಾ ವಿನಾಯದ್ವಿಪ್ರಸ್ಥಿತಾನಾಮಿವ ಸರ್ವ ವಾಚಾಂ" ಇತ್ಯಾದಿಗಳೂ ಇವೆ. ಆದ್ದರಿಂದ ಈ ಮ.ತಾ.ನಿ. ಗ್ರಂಥಕ್ಕೆ ಸರ್ವ ಗುಹ್ಯತಮ ವಿಷಯೋಪೇತತ್ವವೇ ಸಿದ್ಧಿಸುತ್ತದೆ. ಹೀಗಿರುವಲ್ಲಿ ಸರ್ವ ಗುಹ್ಯತನತ್ವ ನಿಮಿತ್ತದಿಂದ ಪ್ರತಿಪಾದಿಸಲ್ಪಡಬೇಕಾದ ನಿರ್ಣಯ ಗ್ರಂಥದಲ್ಲಿ ಅನುಕ್ತವಾದ ವಾದಿರಾಜ ಋಜುತ್ವಕ್ಕೆ ಸರ್ವಾಗಮವಿರುದ್ಧತ್ವವು ಹೇಗೆ ಘಟಿಸುವುದಿಲ್ಲ? ವಿಪಕ್ಷದಲ್ಲಿ (ಆಗಮ ವಿರುದ್ಧತ್ವವಿಲ್ಲವೆಂದರೆ ಭಗವತ್ಪಾದರಿಗೆ ಅನುಕ್ತಿರೂಪ ದೋಷ ಒಪ್ಪುವ ಪ್ರಸಂಗ ಬರುತ್ತೆ; ಅಥವಾ ಗುರುರಾಜ ಋಜುತ್ವಕ್ಕೆ ಅವಶ್ಯ ವೇದ್ಯತ್ವಾಭಾವವನ್ನಾದರೂ ಒಪ್ಪಬೇಕು. ಆದ್ದರಿಂದ ಉಭಯಥಾಪಿ ವಾದಿರಾಜ ಋಜುತ್ವಕ್ಕೆ ಅನುಪಾದೇಯತ್ವವೇ ಬಂತು" ಇತಿ.

ಪ್ರತ್ಯುಕ್ತಿ :

| |
|---|
| ಅ) ಇದಿಷ್ಟೂ ಆಗಮ ವಿರೋಧ ರೂಪವಲ್ಲ. “ವಿಮತ ಋಜುತ್ವವು ಆಗಮ ವಿರುದ್ಧವು, ನಿರ್ಣಯ ಗ್ರಂಥದಲ್ಲಿ ಆಚಾರ್ಯರಿಂದ ಅನುಕ್ತವಾಗಿರುವುದರಿಂದ ಎಂಬ ಅನುಮಾನವೇ ಇಲ್ಲಿ ಪೂರ್ವಪಕ್ಷಿಗಳಿಂದ ಉಕ್ತವಾಗಿದೆ. ಆದ್ದರಿಂದ ಆಗಮ ವಿರೋಧ ಪ್ರಕರಣದಲ್ಲಿ ಅನುಮಾನ ನಿರೂಪಣೆಯು ಅಸಂಗತವೇ. |
| ಆ) ಅನುಮಾನವಾದರೂ, ಸಾಮಾನ್ಯತಃ ಅನುಕ್ತತ್ವವು ಅಸಿದ್ಧವು ಸಾಮಾನ್ಯತಃ ಸರ್ವವೂ ಉಕ್ತವೆಂದೇ ಪ್ರಮಾಣವಿದೆ. ಟೀಕಾಚಾರ್ಯರೂ “ಸಾಮಾನ್ಯತಃ ತದುಕ್ತಮೇವೇತ್ಯ ದೋಷಃ” ಎಂದಿದ್ದಾರೆ. ವಿಶೇಷತಃ ಅನುಕ್ತಿಯು 'ಅಪ್ರಯೋಜಕ'. ಅಭ್ಯುಪಗಮ ವಾದದಿಂದ ಹೇತುವನ್ನು ಒಪ್ಪಿದರೂ ಅವಶ್ಯ ವೇದ್ಯತ್ವಾಭಾವವು ಸಿದ್ಧವಾಗಿ, ಅನೃಜುತ್ವವು ಅನುಮಾನದ ನಿಯತ ಫಲವಾಗುವುದಿಲ್ಲ. ಅವಶ್ಯ ವೇದ್ಯತ್ವಾಭಾವವೂ ಋಜುತ್ವ ವಾದಿಗಳಿಗೆ ಅನಿಷ್ಟವೇ ಎಂದರೆ, ಇಲ್ಲೂ ಪುನಃ ಅಭ್ಯುಪಗಮವಾದ ಮರ್ಯಾದೆಯಿಂದ ಒಂದು ಸಮಾಧಾನವಿದೆ. ವಿಷ್ಣುತೀರ್ಥರ ಸ್ವರೂಪ ಮಹತ್ವ, ಪದ್ಮನಾಭತೀರ್ಥಾದಿಗಳ ಸ್ವರೂಪ ಮಹತ್ವ, ವೇಂಕಟೇಶ ದೇವರ ಮಹಿಮೆ; ಉಡುಪಿ ಶ್ರೀಕೃಷ್ಣನ ಪೂಜ್ಯತ್ವ, ಅವಿದ್ಧೈಕಾದಶೀ ಅನುಷ್ಠಾನ, ರಾಘವೇಂದ್ರ ಸ್ವಾಮಿಗಳ ಪೂಜ್ಯತ್ವ ಇತ್ಯಾದಿ ಅನೇಕ ಪ್ರಮೇಯಗಳು ನಿರ್ಣಯದಲ್ಲಿ ವಿಶೇಷಾಕಾರವಾಗಿ ಹೇಳಲ್ಪಟ್ಟಿಲ್ಲ. ಅವೆಲ್ಲಾ ಅವಶ್ಯವೇದ್ಯವಲ್ಲವೆನ್ನುವುದಾದರೆ, ವೇದವೇದ್ಯರ ಮಹತ್ವವೂ, ವಾದಿರಾಜರ ಋಜುತ್ವವೂ ಅವುಗಳಂತೆ ಅವಶ್ಯ ವೇದ್ಯವಲ್ಲವಾದರೂ ಸಹ್ಯವೇ. ತಮ್ಮ ಕಾಲದಲ್ಲಿ ಅವಶ್ಯ ವೇದ್ಯತ್ವವಿದ್ಧಿಲ್ಲವೆಂದು ಶ್ರೀ ಆಚಾರ್ಯರು ಕೆಲವು ಪ್ರಮೇಯಗಳನ್ನು ಬಿಟ್ಟಿದ್ದಾರೆ; ಕೆಲವು ಅವಶ್ಯವೇದ್ಯ ಪ್ರಮೇಯಗಳನ್ನು ತಮ್ಮ ಇತರ ಗ್ರಂಥಗಳಿಂದ ತಿಳಿಯಬಹುದು, ಇಲ್ಲಿ ಸಾಮಾನ್ಯತಃ, ಸಂಕ್ಷೇಪದಿಂದ ಅವನ್ನೂ ಕೂಡ ಹೇಳಿದ್ದೇನೆಂದು ಬಿಟ್ಟದ್ದಾರೆ; ಅವಶ್ಯವೇದ್ಯ ಪ್ರಮೇಯಗಳಾದರೂ ಕೆಲವು ರಹಸ್ಯ ರೂಪವಾದ್ದರಿಂದಲೂ, ಕೆಲವು ಮುಂದೆ ವ್ಯಕ್ತವಾಗುವ ಪ್ರಮಾಣಗಳಿಂದ ತಿಳಿಯಲ್ಪಡುತ್ತವೆಂದೂ ಬಿಟ್ಟಿದ್ದಾರೆ ಹೀಗೆ ಅನೇಕ ಕಾರಣಗಳಿಂದ ಅವಶ್ಯ ವೇದ್ಯವಾದರೂ ವಾದಿರಾಜ ಋಜುತ್ವವು ನಿರ್ಣಯದಲ್ಲಿ ವಿಶೇಷತಃ ಸ್ಪಷ್ಟವಾಗಿ ಲಿಖಿತವಾಗಿಲ್ಲ ಎಂದು ಹೇಳಿದರೆ ತಾನೆ ಬಾಧಕವೇನು ? ಇವು ಯಾವುವೂ ಅಪ್ರಾಮಾಣಿಕವಾಗಲಿಲ್ಲ. ಆಗಮ ವಿರುದ್ಧಗಳೂ ಆಗಲಿಲ್ಲ. ಆಗಮ ವಿರೋಧ ಪ್ರಕರಣದಲ್ಲಿ ಈ ಅನುಮಾನ ರಚನೆಯು ಅಸಂಗತವೇ. ಹೆಚ್ಚು ಮೀಮಾಂಸೆಯು 25 ಮತ್ತು 26ನೇ ಪ್ರಕರಣಗಳಲ್ಲಿ ಮಾಡಲ್ಪಟ್ಟಿದೆ. ಎಷ್ಟು ಅವಶ್ಯ ವೇದ್ಯತ್ವವು ಈಗಿನ ಕಾಲದಲ್ಲಿ ವಾದಿರಾಜ ಋಜುತ್ವಕ್ಕಿದೆ ಎಂಬುದೂ ಪ್ರಥಮಾಧ್ಯಾಯದಲ್ಲಿ ನಿರೂಪಿತವಾಗಿದೆ. ಅದಕ್ಕೆ ಬಾಧಕವು ನಿರ್ಣಯದಲ್ಲಿಲ್ಲವೆಂದೂ ತೋರಿಸಲ್ಪಟ್ಟಿದೆ. |
| ಇ) ಕಿಂಚ ನಿರ್ಣಯೇತರ ಗ್ರಂಥಗಳೆಲ್ಲವೂ ಲುಪ್ತವಾಗಿವೆ ನಿರ್ಣಯ ಒಂದರಿಂದಲೇ ಮುಕ್ತಿ, ಇನ್ನು ಬೇರೆ ಶ್ರವಣ, ಮನನಗಳಿಲ್ಲ ಎಂಬ ಸೂಚನೆಯೂ ಸರಿಯಲ್ಲ. “ಪ್ರಮಾಣ ಗ್ರಂಥಗಳನ್ನು ರಕ್ಷಿಸು, ಮುಕ್ತಿ ಯೋಗ್ಯ ಜನರನ್ನು ಉಪದೇಶಕೊಟ್ಟು ರಕ್ಷಿಸು, ನೀನು ಸಂಕ್ಷಿಪ್ತ ರೀತಿಯಲ್ಲಿ ನಿರ್ಣಯಗಳನ್ನು ಗ್ರಂಥದಲ್ಲಿ ಹೇಳಿದರೂ, ಅದೇ ಗ್ರಂಥದಿಂದ ಪ್ರಮಾಣಗಳೆಂದು ತೋರಿಸಲ್ಪಟ್ಟ ಮೂಲ ಶಾಸ್ತ್ರ ಗ್ರಂಥಗಳಲ್ಲಿ ವಿಸ್ತಾರ ರೂಪದಿಂದ ಅಧಿಕಾರಿಗಳು ನಿನ್ನಿಂದ ಉಪದಿಷ್ಟ ತತ್ವಗಳನ್ನೇ ತಿಳಿದು ಪಠಿಸಿ ಮನನ ಮಾಡಿ ಜ್ಞಾನವನ್ನು ಹೊಂದಲಿ. ನಿನ್ನ ನಿರ್ಣಾಯಕ ಚಾತುರ್ಯವನ್ನು |

ನಿನ್ನ ಎಲ್ಲಾ ಗ್ರಂಥಗಳಲ್ಲೂ ಸಹ ನೋಡಿ ಅಧಿಕಾರಿಗಳು ಪ್ರಾಮಾಣ್ಯ ದಾರ್ಢ್ಯ ಹೊಂದಲಿ" ಎಂದೇ ದೇವರು ವಾಯು ದೇವರಿಗೆ ಆಜ್ಞಾಪಿಸಿದರೆಂದು ನಿರ್ಣಯ, ಮಧ್ವವಿಜಯಾದಿ ಪ್ರಮಾಣಾನುಸಾರವಾಗಿ ತಿಳಿಯಲ್ಪಡಬೇಕು. ಅನ್ಯಥಾ ಅಧಿಕಾರಿಗಳಿಗೆ ಸಾಧನ ವಿಲೋಪವೇ ಆಗಿಹೋಗುವ ಪ್ರಸಂಗ ಬರುತ್ತೆ. ಅಷ್ಟೇ ಅಲ್ಲ, ಮೂಲ ಶಾಸ್ತ್ರ ರಕ್ಷಣೆಯನ್ನೇ ಮಾಡಲು ಅಸಮರ್ಥರಾದ ಆಚಾರ್ಯರು ಮುಕ್ತಿಯೋಗ್ಯ ಜನರನ್ನೆಲ್ಲಾ ಪಾಪಮಾರ್ಗದಿಂದ ಬಿಡಿಸಿ ಸಮೀಚೀನ ವೈಷ್ಣವ ಸಿದ್ಧಾಂತಾನುಷ್ಠಾನ ಮಾರ್ಗದಲ್ಲಿ ಹೇಗೆ ಸ್ಥಾಪಿಸಬಲ್ಲರು ಎಂದು ಪ್ರಶ್ನೆ ಹುಟ್ಟುತ್ತೆ. ಇದೇ ಬಾಧಕ ತರ್ಕ. ಇದರಿಂದ ಶಾಸ್ತ್ರಗಳು ಲುಪ್ತವಾಗಿಲ್ಲ, ಬದುಕಿವೆ ಜನರ ಸಾಧನೆಗೆ ಸಿಕ್ಕುವಂತೆಯೇ ಇವೆ, ಎಂದೂ ಸಿದ್ಧವಾಗುತ್ತೆ.

ಈ) ನಿರ್ಣಯ ಒಂದೇ ಮುಕ್ತಿಗೆ ಸಾಕಾದರೆ ನಿರ್ಣಯೇತರ 36 ಗ್ರಂಥಗಳನ್ನೂ ನಿರ್ಣಯದಲ್ಲಿಲ್ಲದ ಅನೇಕ ಶಾಸ್ತ್ರಾರ್ಥಗಳನ್ನು ತುಂಬಿ ಏತಕ್ಕೆ ಬರೆದಿದ್ದಾರೆಂದು ಪ್ರಶ್ನೆ ಬರುತ್ತೆ. ಆದ್ದರಿಂದ ಸರ್ವ ಶಾಸ್ತ್ರಾರ್ಥಗಳನ್ನೂ ವಿಶೇಷಾಕಾರವಾಗಿ ಹೇಳುವುದು ಅಸಾಧ್ಯವಾದ್ದರಿಂದ ಸಾಮಾನ್ಯಾಕಾರವಾಗಿ ಹೇಳುವಾಗ ಸಂಕ್ಷೇಪ ರೂಪದಿಂದ ಹೇಳಿದ್ದಾರೆ. ಹಾಗೆ ಸಾಮಾನ್ಯಾಕಾರವಾಗಿ ಹೇಳುವಾಗ ವಿವಾದಾಸ್ಪದ ವಿಷಯದಲ್ಲಿ ತಿಳಿಯಲ್ಪಡಬೇಕಾದ ನಿರ್ಣಯಗಳನ್ನೂ ಶಾಸ್ತ್ರಾರ್ಥಗಳ ನಿರೂಪಣದ ಜೊತೆಯಲ್ಲಿಯೇ ಹೇಳಿದ್ದಾರೆ. ಕೆಲವು ವೇಳೆ ಯಾವುವನ್ನೂ ತಿಳಿಯದೇ ಇದ್ದರೆ ಮುಕ್ತಿಯೇ ಆಗುವುದಿಲ್ಲವೋ ಅಂಥ ನಿರ್ಣಯಗಳನ್ನು ಪ್ರತ್ಯೇಕವಾಗಿಯೂ ವ್ಯಕ್ತವಾಗಿ ತಿಳಿಸಿದ್ದಾರೆ. ಆದರೂ ವಿಶೇಷಾಕಾರವಾಗಿ ಶಾಸ್ತ್ರಾರ್ಥಗಳೆಲ್ಲವನ್ನೂ ತಿಳಿಯಬೇಕಾದರೆ ನಿರ್ಣಯದಲ್ಲೇ ಪ್ರಮಾಣವೆಂದು ಉಕ್ತವಾದ ಆ ಇತರ ಶಾಸ್ತ್ರ ಗ್ರಂಥಗಳನ್ನೂ, ಶ್ರೀಮದಾಚಾರ್ಯರ ಇತರ ಗ್ರಂಥಗಳನ್ನೂ ನೋಡಬೇಕು. ಮುಮುಕ್ಷುಗಳಿಗೆ ಸಾಮಾನ್ಯತಃ ಶಾಸ್ತ್ರಾರ್ಥ ಜ್ಞಾನವು ಸನಿರ್ಣಯವಾಗಿ ಆಗಲೇಬೇಕು, ಹಾಗೆಯೇ ತತ್ತದ್ಯೋಗ್ಯತಾನುಸಾರ ವಿಶೇಷಾಕಾರವಾಗಿಯೂ ಶಾಸ್ತ್ರಾರ್ಥ ಜ್ಞಾನವಾಗಬೇಕು. ಆದ್ದರಿಂದ ಆಚಾರ್ಯರು ಮಾಡಿರುವ ಮತ್ತು 'ಓದು' ಎಂದು ಹೇಳಿರುವ ಇತರ ಶಾಸ್ತ್ರ ಗ್ರಂಥಗಳನ್ನೂ ಗುರುಗಳ ದೆಸೆಯಿಂದ ಕಲಿಯಬೇಕು.

ಉ) ವಾದಿರಾಜ ಗುರುಗಳ ವಿಷಯವೂ "ಸಾಮಾನ್ಯತಃ" ನಿರ್ಣಯದಲ್ಲಿ ಉಕ್ತವಾಗಿದೆ ಎಂಬಲ್ಲಿ ನಿರ್ಣಯ ವಾಕ್ಯವೇ ಸಹಾಯಕವಾಗಿದೆ. "ಸಾಮಾನ್ಯತಃ ಉಕ್ತವಾಗಿದೆ" ಎಂಬುದರ ಅರ್ಥವೂ ನಿರ್ಣಯದಲ್ಲೇ ಕಂಡುಬರುತ್ತೆ. ಮ.ತಾ.ನಿ. ॥ 12 "ನಿರ್ಣಯಃ ಸರ್ವಶಾಸ್ತ್ರಾಣಾಂ ಸದೃಷ್ಟಾಂತೋಹಿ ಭಾರತೇ ॥ ಕೃತೋ ವಿಷ್ಣು ವಶತ್ವಂ ಹಿ ಬ್ರಹ್ಮಾದೀನಾಂ ಪ್ರಕಾಶಿತಂ ॥ ಯತಃ ಕೃಷ್ಣ ವಶೇ ಸರ್ವೆ ಭೀಮಾದ್ಯಾಃ ಸಮ್ಯಗೀರಿತಾಃ ।" ಎಂದಿದೆ. ಇದರ ಭಾವವೇನೆಂದರೆ "ಹೇಗೆ ಭೀಮನು ಕೃಷ್ಣ ಭಕ್ತೋತ್ತಮನೊ ಹಾಗೆ ಬ್ರಹ್ಮದೇವರೂ, ವಾದಿರಾಜಾದಿ ಋಜುಗಳೂ ಜೀವೋತ್ತಮರು, ಹರಿಯಲ್ಲಿ ಅಚ್ಛಿನ್ನ ಭಕ್ತರಾಗಿ ಭೀಮನಂತೆಯೇ ಇರುತ್ತಾರೆ" ಎಂದು. ಹೀಗೆ ಋಜುಗಳ ಮಾಹಾತ್ಮ್ಯ ಹೇಳಿದಂತಾಗಿದೆ. ಪ್ರಹ್ಲಾದನ ಮಹಿಮೆ ಹೇಳಿದ್ದರಿಂದಲೇ ಶ್ರೀರಾಘವೇಂದ್ರಸ್ವಾಮಿಗಳ ಮಹಿಮೆಯನ್ನೂ ಹೇಳಿದಂತಾಗಿದೆ. ಹಾಗೆ । 94 ರಲ್ಲೂ ಋಜ್ವಾದಿ ದೇವತೆಗಳ ಮಹಿಮೆಯನ್ನೂ "ಸಾಮಾನ್ಯತಃ" ಹೇಳಿದ್ದಾರೆ. "ಬ್ರಹ್ಮತ್ವ ಯೋಗ್ಯರು ಋಜುನಾಮಕ ದೇವಗಣಗಳು ಪ್ರತ್ಯೇಕವಾಗಿದ್ದಾರೆ. ಅವರಿಂದಲೇ ಆ ಪದವಿಯು ಪ್ರಾಪ್ಯವು. ಇತರರಿಂದ ಎಷ್ಟು ಸಾಧನೆಗಳಿಂದಲಾದರೂ ಅದು ಪ್ರಾಪ್ಯವಲ್ಲ..... ಹೀಗೆ ಸರ್ವ ದೇವತೆಗಳ ಪದಗಳಿಗೂ

| |
|---|
| ಯೋಗ್ಯರಾದ ಪ್ರತ್ಯೇಕ ಜೀವಗಣಗಳೇ ಇವೆ." ಹೀಗೆ ಇಲ್ಲಿ "ಜೀವಗಣ" ಪದದಿಂದ ಅಪದಸ್ತ 330 ಕೋಟಿ ಮೀರಿದ ಅನೇಕ ದೇವ ಚರಿತ್ರೆಗಳು ನಿರ್ಣಯದಲ್ಲಿ ಅವರ ಮಾನರ ವರ್ಣನೆಯಿಂದ ವರ್ಣಿಸಲ್ಪಟ್ಟಂತಾಯಿತು ಎಂದು ಸೂಚಿಸಿದ್ದಾರೆ. XXXII 79 ರಲ್ಲಿ "ಅತಿಮಾನ (ಅಹಂಕಾರ) ಮುಂತಾದ ದೋಷಗಳು ವಾಯುಪುತ್ರನಾದ ಭೀಮನಲ್ಲಿ ಎಲ್ಲಿರುತ್ತವೆ? ಅನಾದಿ ಕಾಲದಿಂದಲೂ ಸರ್ವದೋಷಹೀನರೂ, ಸರ್ವ ಜೀವಗಣಗಳ ದೆಸೆಯಿಂದ ಗುಣಾಧಿಕರೂ ಆದವರೆ ವಾಯುತ್ವವನ್ನು ಹೊಂದುತ್ತಾರೆ. ಋಜುನಾಮಕ ಯಾವ ದೇವತೆಗಳೊ ಅವರು ದೇವತೆಗಳಿಗೂ ದೇವತೆಗಳು. ಭೀಮನಲ್ಲಿ ಅಹಂಕಾರಾದಿ ದೋಷಗಳ ಅಭಾವವನ್ನು ಶ್ರೀಕೃಷ್ಣ ಕೂಡ ಹೇಳಿದ್ದಾನೆ" ಎಂಬ ವರ್ಣನೆಯಲ್ಲಿ ವಾದಿರಾಜಗುರುಗಳ ವಿಷಯದಲ್ಲೂ ಭೀಮ ದೃಷ್ಟಾಂತದಿಂದ ನಿರ್ದೋಷತ್ವವನ್ನು ತಿಳಿಯಬೇಕೆಂದು ತೋರಿಸಿ ಕೊಟ್ಟಿದ್ದಾರೆ. ಇವರಿಂದ ವೃನ್ದಾವನಾಖ್ಯಾನ ವಾಕ್ಯಗಳಲ್ಲಿ ಪ್ರಾಮಾಣ್ಯ ಬುದ್ಧಿ ದೃಢವಾಗುತ್ತೆ. |
| ಕಿಂಚ ನಿರ್ಣಯ ಗ್ರಂಥದಿಂದ ಅತಿ ಸಂಕ್ಷೇಪವಾಗಿ ತಿಳಿಯಲ್ಪಟ್ಟ ದಶಾವತಾರ ಚರಿತ್ರೆಯನ್ನು ಇತರ ದೇವತಾಚರಿತ್ರೆಗಳನ್ನು ಮತ್ತು ಸಮಸ್ತ ತತ್ವಗಳನ್ನು ಮೂಲಶಾಸ್ತ್ರದಿಂದಲೇ ವಿಸ್ತಾರವಾಗಿ ತಿಳಿಯಬೇಕು. ಶ್ರವಣ ಮನನಾದಿಗಳೆಂದರೆ ಗುರುಮುಖದಿಂದ ಮೂಲಶಾಸ್ತ್ರದ ಅರ್ಥಶ್ರವಣವು, ಅದರ ಮೇಲೆ ಯುಕ್ತ್ಯನುಸಂಧಾನಮಾಡಿ ಹೊಂದಿದ ನಿರ್ಣಯಗಳು; ಆ ಮೂಲ ಶಾಸ್ತ್ರಗಳು ಯಾವುವೆಂದರೆ "ಋಗಾದ್ಯಾ ಭಾರತಂ ಚೈವ" ಇತ್ಯಾದಿ ಶ್ಲೋಕೊಕ್ತ ಹತ್ತು ಶಾಸ್ತ್ರಗಳು; ಶ್ರವಣಕ್ಕೆ ಉಪದೇಷ್ಟೃ ಗುರುಬೇಕು; 'ಷಣ್ಣವತ್ಯಂಗುಲೋ ಯಸ್ತು' ಇತ್ಯಾದಿ ಶ್ಲೋಕೋಕ್ತ ಲಕ್ಷಣವುಳ್ಳವರು ಮುಖ್ಯಗುರುಗಳು; ಉತ್ತಮರಿಗೆ ವಿರೋಧ ಮಾಡಿ ಅಶ್ವತ್ಥಾಮರಿಗೂ ದುಃಖ ತಪ್ಪಲಿಲ್ಲ; ಆದ್ದರಿಂದ ಋಜುದೇವತೆಗಳಿಗೆ ವಿರೋಧ ಮಾಡಬಾರದು ಇತ್ಯಾದಿ ಪ್ರಮೇಯಗಳೆಲ್ಲಾ ಸ್ಪಷ್ಟವಾಗಿ ನಿರ್ಣಯದಲ್ಲೇ ಹೇಳಲ್ಪಟ್ಟಿವೆಯಾದ್ದರಿಂದ, ಮಧ್ವಾವತಾರವನ್ನೂ, ಭೀಮಾವತಾರವನ್ನೂ ಹೇಳಿದ್ದರಿಂದಲೇ, ಹಾಗೇ ಜ್ಞಾನಾದಿ ಧರ್ಮಗಳುಳ್ಳ ವಾದಿರಾಜಾದಿಗಳ ಅವತಾರಗಳೂ ಕಥಿತ ಪ್ರಾಯವೇ. I 123 ರಲ್ಲಿ ಅವರೇ ಮುಖ್ಯಗುರುಗಳು ಎಂದು ಉಕ್ತಪ್ರಾಯವಾಗಿದೆ. ಅವರಿಂದಾಗಲೀ ಮಧ್ವರಾಜರ ಅಥವಾ ವಾದಿರಾಜರ ಅನುಯಾಯಿಗಳಿಂದಾಗಲೀ ವೇದಾದಿ ಮೂಲಶಾಸ್ತ್ರವನ್ನು ಶ್ರವಣ ಮಾಡಬೇಕು. ಮೂಲ ಶಾಸ್ತ್ರವೇತಕ್ಕೆ ನಿರ್ಣಯ ಪಠನ ಮಾತ್ರದಿಂದ ಮುಕ್ತಿಯಾಗುತ್ತೆ; ಆಚಾರ್ಯರಿಂದಲೇ XXXII 180 ಶ್ಲೋಕದಲ್ಲಿ ಹಾಗೇ ಹೇಳಲ್ಪಟ್ಟಿದೆ ಎಂದು ಭ್ರಮಿಸಬಾರದು. ಆ ವಾದವು ಮ.ತಾನ., II 71-73; I 70-85; 104, 112-114 ಇತ್ಯಾದಿ ವಾಕ್ಯಗಳಿಗೆ ವಿರುದ್ಧ. ತಥಾಚ ಸರ್ವಪಂಚ ವೇದಗಳೂ ಗುರುರಾಜಾನುಗ್ರಹ ಸಂಪಾದನ ಪೂರ್ವಕವಾಗಿ ಪಠಿಸಲ್ಪಡಬೇಕು; ಸರ್ವ ಗುರುಗಳೂ ಯಥಾಶಕ್ತಿ ಸೇವಿಸಲ್ಪಡಲೇಕು; ಅವರು ಅಭ್ರಾಂತರಾಗಿ ಸ್ವೋತ್ತಮದ್ರೋಹರಹಿತರಾಗಿದ್ದರೆ ಅವರು ಅವಶ್ಯ ಸೇವ್ಯರು. ಹಾಗೆ ನಿರ್ಣಾಯೋಕ್ತ ಸೂತ್ರಪ್ರಸ್ಥಾನವನ್ನು ಗುರುಗಳಿಂದ ಶ್ರವಣಮಾಡಬೇಕು. "ವಚನ ಮಾತ್ರದ ದೆಸೆಯಿಂದ ನಿರ್ಣಯಾತ್ಮಕ ಶಾರೀರಕ ಶಾಸ್ತ್ರೋಕ್ತಿ ಪ್ರಬಲ" ಎಂದು ತೃತೀಯಾಧ್ಯಾಯ ಗೀತಾ ಭಾಷ್ಯದಲ್ಲಿದೆ. ವೈರಾಗ್ಯವನ್ನೂ ಸಂಪಾದಿಸಬೇಕು. ಏಕಾದಶ್ಯಾದಿ ವ್ರತವನ್ನು ಅನುಷ್ಠಾನ ಮಾಡಬೇಕು. III ಗೀತಾ ಭಾಷ್ಯದಲ್ಲಿ ಇನ್ನೂ ಸ್ಪಷ್ಟ ಆಚಾರ್ಯೋಕ್ತಿ ಇದೆ. ಅಲ್ಲಲ್ಲಿ (ಒಂದೊಂದು ಗ್ರಂಥದಲ್ಲಿ) ಹೇಳಿದ ಏಕದೇಶ ಮಾತ್ರದಿಂದ ಮುಕ್ತಿಯಾಗುವುದಿಲ್ಲ". |

ಆದ್ದರಿಂದ ಸರ್ವಶಾಸ್ತ್ರೋಕ್ತ ಗುಣೋಪಸಂಹಾರವು ಯಥಾಶಕ್ತಿ ಮಾಡಲ್ಪಡಬೇಕು. "ಅಪೌರುಷೇಯ ವೇದಗಳಲ್ಲೂ, ವಿಷ್ಣು ವೇದಗಳಲ್ಲೂ ಕೂಡ, ಸರ್ವತ್ರ ಯಾವ ಯಾವ ಗುಣಗಳು ಪ್ರೋಕ್ತವಾಗಿವೆಯೋ ಸಂಪ್ರದಾಯದಿಂದ ಯಾವುವು ಪ್ರಾಪ್ತವಾಗಿವೆಯೋ, ಅವೆಲ್ಲವುಗಳಿಂದಲೂ ಉಪಾಸನೆಮಾಡಿ ಅಪರೋಕ್ಷ ಹೊಂದಿದವರಿಗೇನೇ ಮುಕ್ತಿಯಾಗುತ್ತೆ, ಅನ್ಯಥಾ ಏನು ಮಾಡಿದರೂ ಆಗುವುದಿಲ್ಲ" ಎಂದಿದೆ. ಆದ್ದರಿಂದ, "ನಿರ್ಣಯವನ್ನು ಮೋಕ್ಷಸಾಧನೆಗೆ ತಿಳಿದರಾಯಿತು" ಎಂದು ಹೇಳಿದರೂ, ನಿರ್ಣಯೋಕ್ತ ಸರ್ವಪ್ರಮಾಣಗಳನ್ನೂ (I 30-37) ಅಧ್ಯಯನಮಾಡಿ ಅನುಷ್ಠಾನ ಮಾಡಬೇಕು; ಸರ್ವಶಾಸ್ತ್ರಗಳನ್ನೂ ಓದಬೇಕು ಎಂದು ಭಾವ; ಕೇವಲ ನಿರ್ಣಯಗ್ರಂಥ ಓದಿಬಿಟ್ಟರೆ ಮುಕ್ತಿಯಾಗಿ ಹೋಗುತ್ತೆಂದು ಅರ್ಥವಲ್ಲ. ಅನ್ಯಥಾ ನಿರ್ಣಯದಲ್ಲೇ II 9-11 ಶ್ಲೋಕಗಳಲ್ಲಿ ಭಾರತವನ್ನು ಹೊಗಳಿ ಅದನ್ನೇ ಸರ್ವ ಶಾಸ್ತ್ರೋತ್ತಮವೆಂದು ತಿಳಿದು ಸೇವಿಸಬೇಕೆಂದು ತೋರಿಸಿರುವುದು ಅಸಂಗತವಾಗುವುದು. ವ್ಯಾಖ್ಯಾನದಿಂದ ವ್ಯಾಖ್ಯೆಯವನ್ನೇ ನಾಶಮಾಡಿ, ಶಾಸ್ತ್ರಾರ್ಥ ನಿರ್ಣಯವಾಡಿ ಶಾಸ್ತ್ರವನ್ನೇ ಹಾಳು ಕುಪ್ಪೆಗೆ ಸೇರಿಸಿ, ಅವುಗಳು ಹೋದರೂ ಚಿಂತಿಲ್ಲ, ನನ್ನ ಈ ಸಣ್ಣ ನಿರ್ಣಯ ಓದಿಬಿಡಿ, ನಿಮಗೆ ಮುಕ್ತಿಯಾಗುತ್ತೆ ಎಂದು ಸರ್ವಜ್ಞಾಚಾರ್ಯರು ಹೇಳುತ್ತಾರೆಯೇ?

ಹಾಗಾದರೆ ಮಧ್ವಗುರುಗಳಾಗಲಿ, ವೇದವ್ಯಾಸರಾಗಲಿ ಭಾರತದಲ್ಲಿ ಅಥವಾ ನಿರ್ಣಯದಲ್ಲಿ ವಾದಿರಾಜಾವತಾರವನ್ನು ಸ್ಪಷ್ಟವಾಗಿ ಏಕೆ ಬರೆಯಲಿಲ್ಲ ಎಂದರೆ, ಇವೆಲ್ಲಾ ಗೋಪ್ಯ ವಿಷಯಗಳು, ಅದಕ್ಕೆ ಹೇಳಿಲ್ಲ ಎಂದು ತಿಳಿಯಬೇಕು. "ಯದತ್ರಾಸ್ತಿ ತದನ್ಯತ್ರ ಯನ್ನಾಸ್ತ್ಯತ್ರತದತ್ರನ್ಯತ್ರ ನ ಕುತ್ರಚನ" ಎಂದು ಪ್ರತಿಜ್ಞೆ ಮಾಡಿ ರಚಿತವಾದ ಸರ್ವಾರ್ಥಬೋಧಕ ಮಹಾಭಾರತದಲ್ಲೇ ಮಧ್ವಾವತಾರ ಹೇಳಿಲ್ಲ, ವಾದಿರಾಜಾವತಾರ ಹೇಳಿಲ್ಲ, ಜಯತೀರ್ಥರು ಟೀಕಾ ಮಾಡುತ್ತಾರೆ, ಪತಂಜಲಿ ವ್ಯಾಕರಣ ಭಾಷ್ಯ ಮಾಡುತ್ತಾರೆಂದು ಹೇಳಿಲ್ಲ; 1947 ರಲ್ಲಿ ಭಾರತದೇಶಕ್ಕೆ ಆಂಗ್ಲರ ದೆಸೆಯಿಂದ ಸ್ವಾತಂತ್ರ ಬರುತ್ತೆಂದು ಹೇಳಿಲ್ಲ. 1971 ರಲ್ಲಿ ಬಂಗ್ಲಾ ಸ್ವತಂತ್ರವಾಗುತ್ತೆಂದು ಹೇಳಿಲ್ಲ. ಗುಹ್ಯ ವಿಷಯಗಳನ್ನೆಲ್ಲಾ ಅಲ್ಲೊಂದು ಇಲ್ಲೊಂದು ಎಂಬಂತೆ ಭಿನ್ನಭಿನ್ನ ಗ್ರಂಥಗಳಲ್ಲಿ ಹೇಳುವುದೇ ಶಾಸ್ತ್ರ ಪದ್ಧತಿ. ಅನ್ಯಥಾ ಸಾಧನ ವಿಲೋಪಾದಿಗಳ ಪ್ರಸಂಗ ಬರುತ್ತೆ. ಅಥವಾ "ದ್ವೇಷಾಭಿವೃದ್ಧಿಂ ದ್ವಿಷತಾಂ ವಿಧಾತುಂ ವ್ಯಾಸಶ್ಚ ನ ಸ್ಪಷ್ಟಮಿದಂ ಪ್ರಮೇಯಂ II ಊಚೇನ ಚೇದ್ಭಗ್ತಜನೈರಗಮ್ಯಂ ಪಾಪೈರಸಾಧ್ಯಂ ತಮಆಪ್ನುಯಾತ್ಕಃ" II ಎಂಬ ರುಕ್ಮಿಣೀಶ ವಿಜಯ ಶ್ಲೋಕೊಕ್ತ ನ್ಯಾಯದಿಂದಲೂ, ಭಾರತ ಮತ್ತು ಅದರ ನಿರ್ಣಯಗಳಲ್ಲಿ ಅನೇಕ ಪ್ರಮೇಯಗಳ ಅಸ್ಪಷ್ಟೋಕ್ತಿಗೆ ಸಮಾಧಾನವನ್ನು ಊಹಿಸಬೇಕು. ಜ್ಞಾನಿಗಳು ವ್ಯರ್ಥ ಕರ್ಮಗಳನ್ನು ಮಾಡುವುದಿಲ್ಲ. ಅದರಲ್ಲೂ ಸರ್ವಜ್ಞರು ಮಾಡುವಂಥವರಲ್ಲ. ಅಲ್ಲದೆ 7500 ಗ್ರಂಥಾತ್ಮಕವಾದ 'ನಿರ್ಣಯ'ದಲ್ಲಿ ಹೇಗೆ ಸರ್ವಮೋಕ್ಷೋಪಯೋಗಿ ಪ್ರಮೇಯಗಳನ್ನೂ ಸ್ಪಷ್ಟವಾಗಿ ವಿಶೇಷತಃ ಹೇಳಲು ಶಕ್ಯವಾಗುತ್ತೆ? ಲಕ್ಷ ಗ್ರಂಥವಾದರೂ ಬೇಡವೇ? ಇದನ್ನು ಯೋಚಿಸಿದರೆ ಈ ಪೂರ್ವಪಕ್ಷದ ಪ್ರಶ್ನೆಯು ಕೇವಲ ಅಯುಕ್ತವೆಂದು ಸ್ಪಷ್ಟವಾಗುತ್ತೆ.

**41. ಆಗಮ ವಿಚಾರ : ಪುಟ 22-18**

**ಉಕ್ತಿ :**

“ಕಿಂಚ ಋಜುತ್ವವು ಅವಶ್ಯ ವೇದ್ಯವಾದ್ದರಿಂದ ಅದರ ಅಜ್ಞಾನದಿಂದ ಮೋಕ್ಷವೇ ಆಗದೇ ಹೋಗುವ ಪ್ರಸಂಗವಿದೆ.

ಹಾಗಾದಲ್ಲಿ “ತಸ್ಮಾದಯಂ ಗ್ರಂಥವರೋಅಖಿಲಾನಾಂ ಧರ್ಮಾದಿಮೋಕ್ಷಾಂತ ಪುಮರ್ಥ ಹೇತುಃ” (ಈ ಗ್ರಂಥ ಶ್ರೇಷ್ಠವು ಧರ್ಮಾದಿ ಮೋಕ್ಷಾಂತ ಸರ್ವ ಪುರುಷಾರ್ಥ ಕಾರಣವು) ಎಂದು ಕೊಟ್ಟಿರುವ ಹೇಳಿಕೆಯಲ್ಲಿ ಪ್ರತಿಜ್ಞಾಹಾನಿ ದೋಷಬರುತ್ತೆ. ಅವತಾರ ವೈಯರ್ಥ್ಯವೂ ಪ್ರಸಕ್ತವಾಗುತ್ತೆ. “ಆನಂದಯೇಃ ಸುಮುಖ ಭೂಷಿತ ಭೂಮಿಭಾಗಃ” ಎಂದು ತಾನೇ ಭಗವಂತನ ಅಪ್ಪಣೆ ಅವರಿಗಾಗಿರುವುದು” ಇತಿ.

**ಪ್ರತ್ಯುಕಿ:**

ಸತ್ಯವೇ. ಪೂರ್ವ ಪ್ರಕರಣಾಂತ್ಯದಲ್ಲಿ ಹೇಳಿದಂತೆ ಮೋಕ್ಷಾರ್ಥವಾಗಿ ಅವಶ್ಯ ವೇದ್ಯವಾದ ಅನೇಕ ಪ್ರಮೇಯಗಳು - ವಾದಿರಾಜ ಋಜುತ್ವ, ವಿಷ್ಣುತೀರ್ಥಾದಿಗಳ ಸ್ವರೂಪ, ಅವಿದ್ಧೈಕಾದಶ್ಯಾನುಷ್ಠಾನ, ಜಯಂತ್ಯನುಷ್ಠಾನ, ಅರ್ಚಿರಾದಿ ಮಾರ್ಗ, ಧೂಮಾದಿ ಮಾರ್ಗ, ಬಿಂಬೋಪಾಸನಾ ಪ್ರಕಾರ, ಸಾಂಖ್ಯಯೋಗಾದಿ ಶಾಸ್ತ್ರಗಳ ದೋಷ, ಕೃಷ್ಣ ಚೈತನ್ಯಾದಿ ಮತ ಪ್ರವರ್ತಕರ ಸ್ವರೂಪ, ಅನಿರುದ್ಧಾದಿ ವ್ಯೂಹೋಪಾಸನಾ ಪ್ರಕಾರ, ಅಷ್ಟ ಮಹಾಮಂತ್ರಗಳ ಜಪ ಪ್ರಕಾರ, ಮುಂತಾದವು-ನಿರ್ಣಯದಲ್ಲಿ ವಿಶಿಷ್ಯ ಸ್ಪಷ್ಟ ಹೇಳಿಲ್ಲ. ಕೊನೆಗೆ ವಿಟ್ಠಲ, ಶ್ರೀನಿವಾಸ ಕ್ಷೇತ್ರಗಳ ಮಹಿಮೆ, ಅನಂತೇಶ್ವರ, ಉಡುಪಿ ಕೃಷ್ಣರ ಮಹಿಮೆಯಾಗಲಿ ಹೇಳಲ್ಪಟ್ಟಿಲ್ಲ. ಗ್ರಂಥವಾದರೋ ಮೋಕ್ಷಾದಿ ಸರ್ವ ಪುರುಷಾರ್ಥ ಹೇತುವೆಂದೂ ಹೇಳಲ್ಪಟ್ಟಿದೆ. ಪಂಡಿತ ಜನರು ಈ ವಿರೋಧ ಪರಿಹಾರವನ್ನು ಮಾಡಬೇಕಾದ್ದೇ. 'ಸಾಮಾನ್ಯತಃ ತದುಕ್ತಮೇವೇತ್ಯದೋಷಃ” ಎಂದು ಟೀಕಾಚಾರ್ಯರು ಸಮಾಧಾನ ಹೇಳಿಬಿಟ್ಟಿದ್ದಾರೆ. “ಗ್ರಂಥ ಬಾಹುಳ್ಯ ಭೀತ್ಯೇದಂ ಸ್ಪಷ್ಟಂ ನಾಚಷ್ಟ ಸರ್ವವಿತ್” ಎಂದು ವಾದಿರಾಜ ಗುರುಗಳೂ ಟೀಕಾಚಾರ್ಯೋಕ್ತಿಗೆ ಪೋಷಕವಾಗಿಯೇ ಸಮಾಧಾನ ಹೇಳಿದ್ದಾರೆ. “ವಕ್ಷೇ ....ಸಂಕ್ಷೇಪಾತ್ಸರ್ವಶಾಸ್ತ್ರಾರ್ಥಂ ಭಾರತಾರ್ಥಾನುಸಾರತಃ” ಎಂದೂ, “ತಾತ್ಪರ್ಯ೦ ಶಾಸ್ತ್ರಾಣಾಂ ಸರ್ವೇಷಾಮುತ್ತಮೋತ್ತಮಂ ಮಯಾಪ್ರೋಕ್ತಂ” ಎಂದೂ ಇನ್ನೂ ಎರಡು ಪ್ರಕಾರದ ಸಮಾಧಾನವನ್ನು ನಿರ್ಣಯ ಗ್ರಂಥಕರ್ತರಾದ ಶ್ರೀಮದಾಚಾರ್ಯರೇ 32ನೇ ಅಧ್ಯಾಯದಲ್ಲಿ ಕೊಟ್ಟಿದ್ದಾರೆ. “ಸಂಕ್ಷೇಪ ರೂಪದಿಂದ ಋಜುಗಳೆಲ್ಲರ ಚರಿತ್ರೆಯೂ ಏಕಾದಷ್ಯಾನುಷ್ಠಾನ ರೀತಿಯೂ ನನ್ನಿಂದ ಉಕ್ತವೇ ಆಗಿದೆ. ನನ್ನಿಂದ ಉಕ್ತ ತಾತ್ಪರ್ಯವನ್ನನುಸರಿಸಿ ಮೂಲಶಾಸ್ತ್ರವನ್ನು ನೋಡಿದರೆ ಸಂಕ್ಷೇಪದಿಂದ ಹೇಳಿದ್ದು ವಿಸ್ತಾರದಲ್ಲಿ ಸ್ಪಷ್ಟವಾಗಿ ಗೊತ್ತಾಗುತ್ತೆ. ತಾತ್ಪರ್ಯಾನುಸರಿಸಿ ಮೂಲ ನೋಡುವುದರಿಂದ ಮೂಲದ ಯಥಾರ್ಥ ಜ್ಞಾನವೂ ವಿಸ್ತಾರವಾಗಿ ಸ್ಪಷ್ಟವಾಗಿ ತಿಳಿಯುತ್ತೆ. ಆದ್ದರಿಂದ ಆ ಪ್ರಮೇಯಗಳನ್ನೆಲ್ಲಾ ಇಲ್ಲೂ ಹೇಳಿದ ಪ್ರಾಯವಾಯಿತು. ಮೂಲಕ್ಕೆ ಅಪ್ರಾಮಾಣ್ಯ ಶಂಕೆ ನಿವಾರಿಸಿ ಅರ್ಥ ಹೇಳಿದಂತೆಯೂ ಆಯಿತು ಎಂದರ್ಥ. 32-179 ರಲ್ಲಿ “ ಆತ್ರೋದಿತಾಯಾಶ್ಚ ಕಥಾಃ ಸಮಸ್ತಾ ವೇದೇತಿಹಾಸಾದಿ ವಿನಿರ್ಣಯೋಕ್ತಾಃ” ಎಂದು ನಿರ್ಣಯದಲ್ಲೂ, "ವದೇತಿಹಾಸಾದಿ ವಿನಿರ್ಣಯಾಯ ಉಕ್ತಾಃ” ಎಂದು ನಿರ್ಣಯದ ಭಾವಪ್ರಕಾಶಿಕೆಯಲ್ಲೂ ಹೇಳಿದಂತೆ ನಿರ್ಣಯಕ್ಕೂ ಮೂಲಶಾಸ್ತ್ರಕ್ಕೂ ಸಂಕ್ಷೇಪ ವಿಸ್ತಾರ ಭಾವವೂ, ತಾತ್ಪರ್ಯ ಮೂಲ ವ್ಯಾಖ್ಯೆಯ ಭಾವವೂ ಗೊತ್ತಾಗಿ

ಸಂಬಂಧ ಆನುಗುಣ್ಯ ಜ್ಞಾನವೂ ಹುಟ್ಟುತ್ತೆ ಎಂದು ಅವರ ಭಾವ. ಹೀಗೆ ನಾಲ್ಕು ರೀತಿ ಸಮಾಧಾನವು ದೃಷ್ಟವಾಗಿದೆ. ಈ ನಾಲ್ಕರಲ್ಲೂ ತೃಪ್ತಿಯಾಗದಿದ್ದರೆ ಪೂರ್ವಪಕ್ಷ ಗ್ರಂಥಕಾರರು ಐದನೆಯ, ಆರನೆಯ, ಏಳನೆಯ ಸಮಾಧಾನಗಳನ್ನೂ ಹುಡುಕಲಿ, ಯಾರು ಬೇಡವೆನ್ನುತ್ತಾರೆ?

ಪ್ರಕೃತ ಟೀಕೋಕ್ತವಾದದ್ದನ್ನು ಒಪ್ಪಬೇಕಾದ್ದರಿಂದ, ವಾದಿರಾಜ ಗುರುಚರಿತ್ರೆಯು "ಸಾಮಾನ್ಯತಃ" ಎಂಬ ರೂಪದಿಂದ ನಿರ್ಣಯದಲ್ಲಿ ಹೇಳಲ್ಪಟ್ಟಿದೆ. ಬಳಿತ್ಥಾಸೂಕ್ತ, ಬ್ರಹ್ಮಾಂಡ ಪುರಾಣ, ತದನುಸಾರಿ ವೃನ್ದಾವನಾಖ್ಯಾನಾದಿಗಳಲ್ಲಿ ಸ್ಪಷ್ಟವಾಗಿ ನಾಮನಿರ್ದೇಶ ಪೂರ್ವಕ ವಿಸ್ತೃತವಾಗಿ ಹೇಳಲ್ಪಟ್ಟಿದೆ. ಸಂಕ್ಷಿಪ್ತ ನಿರ್ಣಯದ ನಿರೂಪಣೆಯನ್ನು ಮನಸ್ಸಿನಲ್ಲಿಟ್ಟುಕೊಂಡು, ವಿಸ್ತೃತಶಾಸ್ತ್ರ ನೋಡಿದರೆ ಇದರ ಸಂಬಂಧಿ ಸರ್ವ ಮೋಕ್ಷೋಪಯೋಗಿ ಪ್ರಮೇಯಗಳೂ ಮನಸ್ಸಿನಲ್ಲಿ ಆರೂಢವಾಗುತ್ತವೆ. ಅದರಿಂದ ಗುರುರಾಜಾದಿ ಋಜುಗಳಲ್ಲಿ ಭಕ್ತಿಯೂ ಹುಟ್ಟುತ್ತೆ, ತದನುಗುಣವಾಗಿ ಅನುಷ್ಠಾನ ಮಾಡಿ ಮುಕ್ತನಾಗುತ್ತಾನೆ, ಹೀಗೆ ನಿರ್ಣಯ ಗ್ರಂಥ ಮೋಕ್ಷ ಕಾರಣವಾಗುತ್ತೆಂದು ಹೇಳಬಹುದು.

ಅಥವಾ ಅವಶ್ಯಜ್ಞಾತವ್ಯ ಎಲ್ಲಾ ಮೋಕ್ಷೋಪಯೋಗಿ ಪ್ರಮೇಯಗಳನ್ನು ಸ್ಪಷ್ಟವಾಗಿ ನಿರವಕಾಶವಾಗಿ ಒಂದೇ ಸಣ್ಣ ಗ್ರಂಥದಲ್ಲಿ ಹೇಳಿದರೇನೇ ಅಧಿಕಾರಿಗೆ ತತ್ತದ್ಯೋಗ್ಯ ಮೋಕ್ಷೋಪಯೋಗಿ ಜ್ಞಾನವು ಹುಟ್ಟುತ್ತೆಎಂಬ ಪ್ರಮಾಣವಾಗಲಿ, ನಿಯಮವಾಗಲಿ ಇಲ್ಲವಾದ್ದರಿಂದಲೂ, ಹಾಗೆ ಸರ್ವವನ್ನೂ ಸಣ್ಣ ಗ್ರಂಥದಲ್ಲಿ ಹೇಳುವುದು ಅಸಾಧ್ಯವಾದ್ದರಿಂದಲೂ, ಒಂದು ವೇಳೆ ಹಾಗೆ ಸೂಚನಾಗರ್ಭಪದಗಳಿಂದ ವಾಕ್ಯರಚಿಸಿ ಸಕಲವನ್ನು ಹೇಳಿದರೂ ಅಂಥ ಗ್ರಂಥದ ದೆಸೆಯಿಂದ ಬಂದ ಜ್ಞಾನದಲ್ಲಿ ದಾರ್ಢ್ಯ ನ್ಯೂನತೆಯೇ ಆಗುವ ಪ್ರಸಂಗವಿರುವುದರಿಂದಲೂ, ಮನನಕ್ಕೆ ಅವಕಾಶ ತಪ್ಪುವುದರಿಂದಲು ಸರ್ವಜ್ಞಾ ಚಾರ್ಯರು ಹಾಗೆ ಯಾವ ಒಂದು ಗ್ರಂಥದಲ್ಲೂ ಸರ್ವಮೋಕ್ಷೋಪಯೋಗಿ ಪ್ರಮೇಯಗಳನ್ನೂ ಸ್ಪಷ್ಟವಾಗಿ ನಿರವಕಾಶವಾಗಿ ಅನ್ಯಗ್ರಂಥ ನಿರಪೇಕ್ಷವಾಗುವಂತೆ ಪ್ರತಿಪಾದಿಸಿಬಿಟ್ಟಿದ್ದಾರೆಂದು ಸಿದ್ಧಾಂತ ಮಾಡಬಾರದು. ಮತ್ತೇನೆಂದರೆ ಅತಿ ಮುಖ್ಯ ಪ್ರಮೇಯಗಳನ್ನು ಸ್ಪಷ್ಟವಾಗಿ ಹೇಳಿ ಇತರ ಮುಖ್ಯ ಪ್ರಮೇಯಗಳನ್ನು ಅಸ್ಪಷ್ಟತಃ, ಸಂಕ್ಷೇಪತಃ, ಸಾಮಾನ್ಯತಃ, ಮೂಲಶಾಸ್ತ್ರದ ನಿರವಕಾಶ ಭಾಗವನ್ನು ಸಂಕ್ಷೇಪಾನುವಾದ ಮಾತ್ರದಿಂದ, ಅಲ್ಲಿನ ಸಂದಿಗ್ಧ ಸಾವಕಾಶಭಾಗಾದಿಗಳನ್ನು ಸತಾತ್ಪರ್ಯವರ್ಣನ ರೂಪದಿಂದಲೇ ಪ್ರತಿಪಾದಿಸಿದ್ದಾರೆಂದು ಸಿದ್ಧಾಂತ ತಿಳಿಯಬೇಕು, ಹಾಗಾದರೆ ಇದೊಂದೇ ಗ್ರಂಥದಿಂದ ನಾಲ್ಕು ಪುರುಷಾರ್ಥಪ್ರಾಪ್ತಿ ಹೇಗೆಂದರೆ:

ಅ) ಈ ಒಂದು ಗ್ರಂಥವೇ ಹೊಗಳಿರುವ ಇತರ ಗ್ರಂಥಗಳನ್ನೂ ಇದೇ ನಿರ್ಣಯ ಗ್ರಂಥವೇ ತೋರಿಸುವುದರ ಮೂಲಕ ಕ್ರಮವಾಗಿ ಮೋಕ್ಷಕೊಡಿಸುತ್ತೆ ಎಂದು ಹಿಂದೆ ಗೀತಾಭಾಷ್ಯವಚನ ಪ್ರಮಾಣ ಕೊಡಲಾಗಿದೆ.

ಆ) ಇನ್ನೊಂದರ್ಥವೇನೆಂದರೆ ಈ ಗ್ರಂಥಾವೃತ್ತಿಶೀಲನಾದ, ಮನನಾಸಕ್ತ, ಗುರುದೇವತಾ ಭಕ್ತಿಯುಳ್ಳ ಅಧಿಕಾರಿಗೆ ಗುಹ್ಯದರ್ಶನಾದಿ ಭಾಷೆಗಳಲ್ಲಿ, ರೀತಿ ಶತಕಗಳಲ್ಲಿ ಪ್ರವೃತ್ತ ಮೂಲ ಶಾಸ್ತ್ರಗಳ ಅವಶ್ಯವೇದ್ಯಸೂಕ್ಷ್ಮ ಪ್ರಮೇಯಗಳು ತಾನಾಗಿ ಪ್ರತಿಭಾತವಾಗುತ್ತವೆ. ಪುನಃ ಪುನಃ ಭಕ್ತಿಯಿಂದ ಪಠಿಸುವವನಿಗೆ 'ಯಸ್ಯದೇವೇ" ಎಂಬ ಶ್ಲೋಕೋಕ್ತ ಭಕ್ತಿ

ಮಹಿಮೆಯಿಂದ ಅಪೇಕ್ಷಿತ ಕಾಮ್ಯಗಳೂ, ದ್ರವ್ಯಗಳೂ, ಅದೃಷ್ಟದ ಉಪಚಯದ್ವಾರಾ ಸಿದ್ಧಿಸುವಂತೆ, ನಿಷ್ಕಾಮ ಅಧಿಕಾರಿಗೆ ತದ್ಯೋಗ್ಯ ಸರ್ವಮೋಕ್ಷೋಪಯೋಗಿ ಪ್ರಮೇಯಗಳೂ ಇಲ್ಲಿ ಹೇಳದಿದ್ದರೂ, ಅದೃಷ್ಟಪಾಕದಿಂದ ಪ್ರತಿಭಾತವಾಗುತ್ತವೆ ಅಥವಾ ಅದನ್ನು ತಿಳಿದ ಗುರುಲಾಭವಾಗಿ ಆ ಗುರೂಪದೇಶದಿಂದ ಆ ಶಿಷ್ಯನ ಬಿಂಬರೂಪ, ಸೋಪಾಸ್ಯ ಗುರು ಮತ್ತು ಬಿಂಬ ಸ್ವರೂಪ ಮುಂತಾದ ಸರ್ವ ಅವಶ್ಯವೇದ್ಯ ವಿಷಯಕ ಜ್ಞಾನವೂ ಹುಟ್ಟಿ ವೇದಾದಿ ಇನ್ನೂ ಏನೇನು ಅವನಿಗೆ ತಿಳಿಯಬೇಕೊ ಅದೂ ತಿಳಿದು ಈ ಗ್ರಂಥದಿಂದಲೇ ಮೋಕ್ಷವಾಯಿತು ಎಂದು ಆತನ ಮನಸ್ಸಿಗೆ ಸಂತೋಷ ಬರುತ್ತೆ ಎಂದು ಇನ್ನೊಂದು ಸಮಾಧಾನವಿದೆ. I 104 ನಿರ್ಣಯ ವಚನವೇ ಇದನ್ನು ಸೂಚಿಸುತ್ತೆ. "ಯಸ್ಯದೇವೇ ಪರಾಭಕ್ತಿ: ಯಥಾದೇವೇ ತಥಾಗುರೌ | ತಸ್ಯೈತೇ ಕಥಿತಾಹ್ಯರ್ಥಾಃ ಪ್ರಕಾಶಂತೇ ಮಹಾತ್ಮನಃ ||" ಎಂದು ಶ್ರುತಿ ಇದೆ. ಇಲ್ಲಿ "ಮಹಾತ್ಮನಃ" ಎಂಬ ಹೇತುಗರ್ಭ ಪದಕ್ಕೆ ಗುರ್ವಾದಿಸೇವೆಯಿಂದ ಉತ್ಸಮ ಮನಸ್ಸುಳ್ಳ ಅಧಿಕಾರಿಗೆ ಎಂದರ್ಥ; ಮತ್ತು "ಕಥಿತಾಃ" "ಅಕಥಿತಾ ಅಪ್ಯರ್ಥಾಃ " ಎಂದು ಎರಡು ರೀತಿ ಪದಚ್ಛೇದದಿಂದ ಅರ್ಥ ತಿಳಿಯಬೇಕು. ಅಂಥ ಗುರ್ವಾದಿಭಕ್ತ ಅಧಿಕಾರಿಗೆ ಕ್ವಚಿದುಪದಿಷ್ಟ ಪ್ರಮೇಯಗಳು ಕಾಣುವುವು. ಕ್ವಚಿತ್ ಸ್ಪಷ್ಟವಾಗಿ, ವಿಶಿಷ್ಟ ಅನುಪದಿಷ್ಟ ಅರ್ಥಗಳೂ ಮೂಲಶಾಸ್ತ್ರದಲ್ಲಿದ್ದಂತೆ ಗುರ್ವನುಗ್ರಹದಿಂದ ಪ್ರತಿಭಾತವಾಗುತ್ತವೆ ಎಂದರ್ಥ. ಆದ್ದರಿಂದ ಅವನಿಗೆ ಮೋಕ್ಷಾಭಾವ ಪ್ರಸಂಗವಿಲ್ಲ. ನಿರ್ಣಯಕ್ಕೆ ಅನುಕ್ತತ್ವ ದೋಷವೂ ಇಲ್ಲ. "ಕಥಿತಾಃ ಉಪದಿಷ್ಟಾಃ ಅಕಥಿತಾಃ ಅತ್ರ ಕಂಠರವೇಣ ವಿಶೇಷತಃ ಅನುಕ್ತಾ ಅಪಿ ಪ್ರಮಾಣೈರ್ವಿವಕ್ಷಿತಾಃ ಸೂಚಿತಾರ್ಥಾಃ ಮೂಲ ಶಾಸ್ತ್ರಸ್ಥಾಃ ಪ್ರಕಾಶಂತೇ" ಎಂದು ಶ್ರೀವಿದ್ಯಾರತ್ನಾಕರ ತೀರ್ಥರ ವ್ಯಾಖ್ಯಾನವು ಶ್ರೀವಿದ್ಯಾವಾರಿಧಿತೀರ್ಥ ಸ್ವಾಮಿಗಳ ಮುಖತಃ ಶ್ರವಣಮಾಡಿ ಸಂಗೃಹೀತವಾದದ್ದು. ತಥಾಚ "ನಿರ್ಣಯದಲ್ಲಿ ಸೂಚನಾ ರೂಪದಿಂದ ಪ್ರತಿಪಾದಿಸಲ್ಪಟ್ಟ, ವಿಸ್ತೃತ ಮೂಲ ಶಾಸ್ತ್ರದಲ್ಲಿ ಸ್ಪಷ್ಟವಾಗಿ ನಿರೂಪಿತವಾದ ಎಲ್ಲಾ ಅವಶ್ಯವೇದ್ಯ ಪ್ರಮೇಯಗಳೂ ನಿರ್ಣಯ ಪಾಠಕನಿಗೆ ಗೋಚರಿಸುತ್ತವೆ ಎಂದು ಅರ್ಥಮಾಡಿದ್ದರಿಂದ ನಿರ್ಣಯಕ್ಕೂ ಮೂಲ ಶಾಸ್ತ್ರಕ್ಕೂ ಸೂಚಕ ಸೂಚ್ಯಭಾವ ಎಂಬ ಸಂಬಂಧಾಂತರವು ಪ್ರದರ್ಶಿತವಾದಂತಾಯಿತು. ಈ ಶ್ರೀಮದ್ರತ್ನಾಕರತೀರ್ಥರ ವ್ಯಾಖ್ಯಾನವು ಐದನೆಯ ಸಮಾಧಾನವೆನ್ನಬಹುದು

ಇ) ಪೂರ್ವ ಪ್ರಕರಣದಲ್ಲಿ ಹೇಳಿದಂತೆ ನಿರ್ಣಯ ಗ್ರಂಥವು ಋಗಾದಿ ವೇದಗಳನ್ನಾಗಲೀ, ತದವಿರುದ್ಧ ಪುರಾಣ, ಆಖ್ಯಾನ, ಕರ್ಣಾಟಕ ಕೀರ್ತನಾದಿ ಸದಾಗಮಗಳನ್ನಾಗಲಿ ತಿರಸ್ಕರಿಸಿಲ್ಲ. I 30-31 "ಅವಿರುದ್ಧಂತು ಯತ್ತಸ್ಯ ಪ್ರಮಾಣಂ ತಚ್ಚನಾನ್ಯಥಾ" ಎಂದಿದೆ. ಆದ್ದರಿಂದ ನಿರ್ಣಯ ಸಮ್ಮತ ಪ್ರಮಾಣಗಳಿಂದ ನಿರ್ಣಯೋಕ್ತರೀತಿಯಿಂದಲೇ ಪ್ರಮೇಯ ಶೋಧನೆ ಮಾಡಿದರೆ ವೇದವೇದ್ಯರ ಉಪದೇಶ, ಆಖ್ಯಾನ, ಜ್ಞಾನಿಪದವೇ ಮುಂತಾದುವುಗಳಿಂದ ತಿಳಿದ ಪ್ರಮೇಯಗಳೂ ಅಬಾಧಿತವೇ. ಪ್ರಮಾಣಗಳು ಹೇಳಿದಂತೆ ಉಪಾಸನೆ ಮಾಡಿದರೆ ಅವುಗಳೂ ಮೋಕ್ಷ ಫಲವನ್ನೇ ಕೊಡಿಸುವುವು. ಹೀಗೆ ನಿರ್ಣಯೋಕ್ತ ವಿಚಾರಪೂರ್ವಕವಾಗಿ ಮಾಡಲ್ಪಟ್ಟ ಯದೃಚ್ಛಾಲಬ್ಧ ಅನ್ಯ ಗ್ರಂಥ ವಿಚಾರಜನ್ಯ ಜ್ಞಾನವೂ ನಿರ್ಣಯಗ್ರಂಥ ಜನ್ಯವೆಂದೇ ಕರೆಯಲ್ಪಡಲು ಅರ್ಹವಾಗಿದೆ. ಹೀಗೆ ಸೂಕ್ಷ್ಮ ಬುದ್ಧಿಯಿಂದ I 30-31 ರಲ್ಲಿ ಸೂಚಿತ ರೀತಿಯಲ್ಲಿ, ನಿರ್ಣಯ, ನಿರ್ಣಯಾನುಮತ ಗ್ರಂಥ ಪಾಠಕರಿಗೆ

ವಾದಿರಾಜ ಋಜು ವಿಷಯಕ ಜ್ಞಾನಾಭಾವ ಪ್ರಸಂಗವಿಲ್ಲ. ಸರ್ವಥಾ ಅವರ ಹೆಸರನ್ನೇ ಕೇಳದಿರುವ ದೆಶೆಯಲ್ಲಿ, ವಿಶೇಷ ವಿಚಾರ ವಾಕ್ಯಾರ್ಥ ಶೋಧನಾದಿಗಳನ್ನು ಮಾಡದೇನೇ ಇರುವಾಗ ಕೆಲವರು ಮಹಾತ್ಮರುಗಳಿಗೂ ದೊಡ್ಡ ಪಂಡಿತರಿಗೂ ಕೂಡ ಋಜ ನಿಶ್ಚಯವು ಆಗದೆ ಈ ವಿಷಯದ ಪ್ರಸ್ತಾಪರಹಿತರಾಗಿಯೇ ಅವರು ಕೆಲವು ಕಾಲ ಇರಬಹುದು. ಆದರೆ ಸಾತ್ವಿಕಾದೃಷ್ಟ ಪಾಕದಿಂದಲೂ ನಿರ್ಣಯಾಭ್ಯಾಸದ ಪುಣ್ಯಾತಿಶಯದಿಂದಲೂ ಕಾಲವಿಶೇಷದಲ್ಲಿ 'ಪ್ರಸಕ್ತಿ ಬಂದೇ ಬಂದು ನಿರ್ಣಯೋಕ್ತ ರೀತಿಯಿಂದಲೇ ವಿಚಾರ ಪ್ರವೃತ್ತವಾಗಿ ಮೇಲ್ಕಂಡಂತೆ ಅವರಿಂದಲೂ ವಾದಿರಾಜ ಋಜುತ್ವ ನಿರ್ಣಯವು ಆದೃತವಾಗಿ ಉಪಾಸಿತವಾಗುವುದು. **XXX 55** "ತಾರತಮ್ಯಂ ಚ ವಿಜ್ಞೇಯಂ ಲಿಂಗೈರ್ದ್ಯೈಹಿಕ ಮಾನಸ್ಯೈಃ' ಎಂದಿರುವುದರಿಂದ, ರತ್ನ ಪರೀಕ್ಷಾ ಶಾಸ್ತ್ರಾನುಗ್ರಹೀತ ಪ್ರತ್ಯಕ್ಷದಿಂದ ರತ್ನಮೌಲ್ಯವನ್ನು ಶ್ರೇಷ್ಠಿಗಳು ತಿಳಿಯುವಂತೆ ಅಧಿಕಾರಿ ನಿರ್ಣಯಜ್ಞಾನಿಗಳು ವಾದಿರಾಜರ ಪ್ರತಿಮಾದರ್ಶನ ಮಾಡಿ, ಜೀವನ ಕಾರ್ಯಗಳನ್ನು ಪರೀಕ್ಷಿಸಿ, ತಮ್ಮ ತಪಃ ಪ್ರಭಾವದಿಂದಲೂ ಹರಿಗುರುಗಳ ಅನುಗ್ರಹ ಸಂಪಾದಿಸಿ, ವಾದಿರಾಜ ಗುರುಗಳ ಋಜುತ್ವ ತತ್ವವನ್ನು ಕಂಡು ಕೊಳ್ಳುತ್ತಾರೆ. ಆದ್ದರಿಂದ ಸುಪಕ್ವ ಅಧಿಕಾರಿ ಸಜ್ಜನರಿಗೆ ಜ್ಞಾನಾಭಾವ ಪ್ರಸಂಗವಿಲ್ಲ. ಮ.ತಾನಿ. **। 79** ರಲ್ಲಿ "ಮೊಕ್ಷೋ ಜ್ಞಾನಂಚ ಕ್ರಮಶಃ ಮುಕ್ತಿಗೋ ಭೋಗ ಏವ ಚ ॥ ಉತ್ತರೇಷಾಂ ಪ್ರಸಾದೇನ ನೀಚಾನಾಂ ನಾನ್ಯಥಾ ಭವೇತ್ । ಸರ್ವೇಷಾಂ ಚ ಹರಿರ್ನಿತ್ಯಂ ನಿಯಂತಾ ತತ್ವಶಾಃ ಪರೇ **॥80॥** ತಾರತಮ್ಯಂ ತತೋ ಜ್ಞೇಯಂ"॥........ ಎಂದಿವೆ. ಅಲ್ಲಿ ವಾದಿರಾಜೀಯ ಟೀಕಾ 'ತತಃ ತದರ್ಥಂ ಮೋಕ್ಷಾರ್ಥಂ' ಎಂದಿದೆ. ಈ ವಚನದಿಂದಲೇ ಆಖ್ಯಾನೋಕ್ತ ವಾದಿರಾಜ ಋಜುತ್ವವೂ ಮೋಕ್ಷಾರ್ಥಿಗಳಿಂದ ಜ್ಞೇಯವೆಂದು ಸಿದ್ಧಿಸುತ್ತೆ. ಛಾಂ.ಭಾ. **III 1** "ಮೋಕ್ಷಾವಾಪ್ತೋಹಿ ಕಾರಣಂ ॥ ತದ್ಭಕ್ತೇಷು ಕ್ರಮೇಣೈವ ರಮಾದೇಷುತ್ವನಂತರಂ" ॥ ಎಂದಿದೆ. [ತ.ಪ್ರದೀ. **372-3** ರಲ್ಲಿ ಪಂಡಿತಾಚಾರ್ಯರು ಇನ್ನೂ ಅನೇಕ ವಚನ ಉದಾಹರಿಸಿದ್ದಾರೆ.] ಪ್ರಮಾಣಗಳು ಸಿಕ್ಕದಿದ್ದರೆ ಉಪಾಯವಿಲ್ಲ. ಅನೇಕ ಜ್ಞಾನಿಗಳ ವಿಷಯದಲ್ಲಿ ಪ್ರಮಾಣಗಳು ಸಿಕ್ಕಿವೆ. ಬಾಧಕ ಕಂಡಿಲ್ಲ. ಆದ್ದರಿಂದ ಜಯತೀರ್ಥರ ಇಂದ್ರತ್ವವೂ, ರಾಘವೇಂದ್ರಸ್ವಾಮಿಗಳ ಪ್ರಹ್ಲಾದತ್ವವೂ, ಮತ್ತು ಅವರ ವಾಯ್ವಾವಿಷ್ಟತ್ವವೂ ತಿಳಿಯಲ್ಪಡಬೇಕು. ಪ್ರಮಾಣ ಸಿಕ್ಕಿದೆಯಾದ್ದರಿಂದ ವಾದಿರಾಜ ಗುರುಗಳ ಋಜುತ್ವವೂ ತಿಳಿಯಲ್ಪಡಬೇಕು.

"ವೇದಾಂಶ್ಚ ಪಂಚರಾತ್ರಾಣಿಸೇತಿಹಾಸ ಪುರಾಣಕಾನ್ ಜ್ಞಾತ್ವಾ ವಿಷ್ಣು ಪರಾನೇವ ಮುಚ್ಯತೇ ನಾನ್ಯಥಾ ಕ್ವಚಿತ್" ಎಂದು ನಿರ್ಣಯ ಗ್ರಂಥವೇ ಸರ್ವ ಶಾಸ್ತ್ರ ಶ್ರವಣ ಮನನ ಕಾರ್ಯವನ್ನೂ ವಿಧಾನ ಮಾಡಿರುವುದರಿಂದ ಯಥಾಶಕ್ತಿ ಸರ್ವ ಶಾಸ್ತ್ರಾಭ್ಯಾಸವೂ, ಆ ಸರ್ವ ಶಾಸ್ತ್ರಗಳಲ್ಲಿ ಉಪಲಬ್ಧ ಪ್ರಮೇಯ ಜ್ಞಾನವೂ ಮೋಕ್ಷೋಪಯೋಗಿಯೇ ಸರಿ. ಕೇವಲ ನಿರ್ಣಯ ಪಠನ ಮಾತ್ರವು ಸಾಲದೆಂದೂ ಭಗವಾನ್ ಆಚಾರ್ಯರು ವಿವೇಕಿಗಳಿಗೆ ತಿಳಿಯುವಂತೆ ಪ್ರತಿಪಾದಿಸಿದ್ದಾರೆ. ಹಾಗೆ ಯಥಾಶಕ್ತಿ ಸರ್ವ ಶಾಸ್ತ್ರಾಭ್ಯಾಸ ಮಾಡುವ ಕಾಲದಲ್ಲಿ ಆ ಜ್ಞಾನ ಪ್ರೇಮಿ ಅಧಿಕಾರಿಗಳು ಪ್ರಮಾಣ ಇರಲಿಕ್ಕೆ ಹೇಗೆ ತಾನೆ ಋಜುಗಳ ಪ್ರಭಾವವನ್ನೂ, ವಾದಿರಾಜಗುರುಗಳ ಋಜುತ್ವವನ್ನೂ ತಿಳಿಯದೇ ಇದ್ದಾರು? ಹಾಗೆಯೇ ನಿರ್ಣಯಾನುಕ್ತವಾದ ಅವಿದ್ಧೈಕಾದಶ್ಯನುಷ್ಠಾನ, ಜಯಂತ್ಯನುಷ್ಠಾನ, ಶ್ರೀರಂಗ, ವಿಠಲ,

| |
|---|
| ವೇಂಕಟೇಶಾದಿ ಸ್ವಾಮಿ ರೂಪಗಳ ಪೂಜ್ಯತ್ವ ಮುಂತಾದ ಪ್ರಮೇಯಗಳನ್ನು ತಿಳಿಯದೇ ಇದ್ದಾರು? ಅಂಥ ಶಾಸ್ತ್ರಾಭ್ಯಾಸವನ್ನಾದರೂ ಮೀಮಾಂಸಾಶಾಸ್ತ್ರ ಸಹಾಯದಿಂದ ಮಾಡಬೇಕೆಂದು I 42-46 ನಿರ್ಣಯ ಶ್ಲೋಕಗಳಲ್ಲಿ ವಿಹಿತವಾಗಿರುವುದರಿಂದ, ಬ್ರಹ್ಮಸೂತ್ರಗಳ ಸಹಾಯದಿಂದ ಭಾರತ ಪುರಾಣಾದಿಗಳ ಮಿಮಾಂಸಾ ಮಾಡುವಾಗ ಪ್ರಾಮಾಣ್ಯ ಸ್ವತಸ್ತ್ವ ಜ್ಞಾನಿಗಳಾದ ಆ ಪಂಡಿತರಿಗೆ ಆಖ್ಯಾನಾದಿ ಪ್ರಸಿದ್ಧ ವಾದಿರಾಜ ಋಜುತ್ವವು ಹೇಗೆ ತಿಳಿಯಲ್ಪಡದೇ ಹೋದೀತು? ಅವರು ಮನೆ ಬಿಟ್ಟು ಹೊರಗೆ ಹೋಗದೇ ಸೋದೆ ಮಠವೆಂದರೇನು ಎಂದೂ ತಿಳಿಯದೆ ಬದರೀ ಗುಹೆಯಲ್ಲಿರುತ್ತಾರೆಯೇ? ನಿರ್ಣಯಾಧಿಗಳಿಂದ ವೇದಾದಿಗಳೂ ತಿಳಿಯಲ್ಪಡಬೇಕೆಂದು ಪ್ರಥಮಾಧ್ಯಾಯದಲ್ಲೇ 60-75, 81-85 ಶ್ಲೋಕಗಳಲ್ಲಿ ನಿರೂಪಿತವಾಗಿದೆಯಷ್ಟೇ. |
| ಆದ್ದರಿಂದ ಪ್ರತಿಜ್ಞಾಹಾನಿ ಇಲ್ಲ. ಪೂರ್ವೋಕ್ತ ರೀತಿಯಿಂದ "ಸಹಕಾರಿ ಕಾರಣ ಸಹಿತವಾಗಿ ಸಮ್ಯಕ್ ಅಭ್ಯಸ್ತವಾದ ಈ ಗ್ರಂಥವರವು ಮೋಕ್ಷದಾಯಕವು" ಎಂದು ವಿವಕ್ಷಿತವಾಗಿದೆಯಾದ್ದರಿಂದ. ಹೇಗೆಂದರೆ ಶ್ರವಣ ಮನನ ಧ್ಯಾನಗಳಿಂದ ಮುಕ್ತಿಯಾಗುತ್ತೆ ಎಂದು ಶ್ರುತಿ ಸಿದ್ಧಾಂತವಿದೆ. ಹಾಗಿದ್ದರೂ ಗುರುಪ್ರಸಾದವಿಲ್ಲದೆ ಮುಕ್ತಿಯಾಗುವುದಿಲ್ಲವಾದ್ದರಿಂದ ಶ್ರುತಿಕೃತ ಪ್ರತಿಜ್ಞೆಗೆ ವೈಯ್ಯರ್ಥ್ಯ ಬಂತೆಂದು ಯಾವ ವಿದ್ವಾಂಸನೂ ಆಪಾದಿಸುವುದಿಲ್ಲ. ಸಹಕಾರಿಯನ್ನೂ ಕಾರ್ಯೋತ್ಪತ್ತಿಯಲ್ಲಿ ಪ್ರಯೋಜಕವಾಗಿ ಒಪ್ಪಿದ ಮಾತ್ರಕ್ಕೆ ಕಾರಣಗಳು ಅಕಾರಣವೆನ್ನಿಸುವುದಿಲ್ಲ. ನೋಡತಕ್ಕ ಕಣ್ಣಿಗೆ ಆ ಲೋಕ ಸಹಕಾರಿ ಇದ್ದ ಮಾತ್ರಕ್ಕೆ ಕರಣತ್ವ ಭಂಗವಿಲ್ಲ. ಹಾಗೆ ಅಲ್ಲಲ್ಲಿ ಹೇಳಿದ ಏಕದೇಶ ಜ್ಞಾನ ಮಾತ್ರದಿಂದ ಮುಕ್ತಿಯಾಗುವುದಿಲ್ಲವೆಂದು ಗೀತಾಭಾಷ್ಯ ವಚನವೂ ಇದೆಯಾದ್ದರಿಂದ ಗುರುಕುಲ ವಾಸಾದಿ ಸರ್ವ ಸಹಕಾರಿ ಸಹಿತ ನಿರ್ಣಯಾಭ್ಯಾಸವೇ ಮೋಕ್ಷಜನಕವು; ಆ ಸಹಕಾರಿಗಳಲ್ಲಿ ಈಗಿನ ಕಾಲದವರಿಗೆ ವಾದಿರಾಜ ಋಜುತ್ವದ ಜ್ಞಾನ ಪೂರ್ವಕವಾಗಿ ಅವರಲ್ಲಿ ಭಕ್ತಿಯೂ ಸೇರಿದೆಯೆಂದು ಒಪ್ಪಿದರೆ ಯಾವ ಬಾಧಕವೂ ಇಲ್ಲ. ಅದೇ ಆಚಾರ್ಯರ ವಾಕ್ಯತಾತ್ಪರ್ಯ.ತಥಾಚ ಅವರ ಪ್ರತಿಜ್ಞೆಗೆ ಭಂಗವಿಲ್ಲ. |
| ಹಾಗೆಯೇ ಆಚಾರ್ಯರ ಅವತಾರ ವೈಯರ್ಥ ಪ್ರಸಕ್ತಿಯೂ ಅಯುಕ್ತವೇ. ಅವರ ಗ್ರಂಥಗಳಿಗೆ ಟೀಕೆಗಳು ಅಪೇಕ್ಷಿತವಾಗಿ ಜಯತೀರ್ಥ ಗುರುಗಳ ಅವತಾರವನ್ನು ಕೋರಿದ್ದರಿಂದಾಗಲಿ, ಮುಂದೆ ಅವರ ಗ್ರಂಥ ಪ್ರಚಾರಕ್ಕಾಗಿ ವಿಷ್ಣುತೀರ್ಥರ ಅವತಾರವನ್ನು ಕೋರಿದ್ದರಿಂದಾಗಲಿ, ಇತರ ಮಹನೀಯರ ಸೇವೆಯನ್ನು ಸ್ವೀಕರಿಸಬೇಕಾಗಿ ಅವರ ಅವತಾರಗಳನ್ನು ಕೋರಿದ್ದರಿಂದಾಗಲಿ, ಅವರ ಅವತಾರದ ಉದ್ದೇಶಕ್ಕೆ ವೈಫಲ್ಯ ಪ್ರಾಪ್ತವಾಗುವುದಿಲ್ಲ. ಭಗವದಾಜ್ಞಾನುಸಾರವಾಗಿ XXXII 170-176 ನಿರ್ಣಯದಲ್ಲಿ ಹೇಳಿದಂತೆ ಶ್ರೀಮದಾಚಾರ್ಯರು ಸ್ವಜೀವನ ಕಾರ್ಯವನ್ನು ಪೂರ್ಣವಾಗಿ ಮಾಡಿ ಮುಗಿಸಿದ್ದಾರೆ. ಮನಃಶುದ್ಧ್ಯಾದಿಪ್ರದ ಸ್ವದರ್ಶನವೇನು, ಪ್ರವಚನಗಳೇನು, ಶಿಷ್ಯ ಪ್ರಶಿಷ್ಯಾದಿ ದ್ವಾರಾ ದ್ವೈತ ಸಂಪ್ರದಾಯ ಪ್ರತಿಷ್ಠೆಯೇನು, ಮುದ್ರಾಧಾರಣ, ಯೋಗ್ಯೂಪದೇಶಗಳಿಂದ ಜ್ಞಾನ ದಾನವೇನು ಇತ್ಯಾದಿಗಳನ್ನು ಮಾಡಿ ಸ್ವಾದರ್ಶನಾನಂತರವೂ ಪ್ರಾಪ್ತ ಕಾಲಾನುಗುಣವಾಗಿ ಟೀಕಾದಿಗಳನ್ನು ಮಾಡಿಸಿ, ಇನ್ನೂ ವಿಘ್ನ ಹೆಚ್ಚಿದಾಗ ಆಗ ಹುಟ್ಟಿದ ಕರ್ಮಪಾಕ ಯುಕ್ತರಾದ ಸ್ವಾಭಿಮನ್ಯ ಮುಕ್ತಿಯೋಗ್ಯರಿಗೆ |

| |
|---|
| ವಾದಿರಾಜ ಗುರ್ವನುಗ್ರಹ ಯೋಜನೆ ಮಾಡಿ, ಅದರಿಂದ ವಿಘ್ನಧ್ವಂಸ, ಸ್ವರೂಪಯೋಗ್ಯ ಗುರ್ವನುಗ್ರಹ ಪ್ರಾಪ್ತಿ, ಅಪರೋಕ್ಷಪ್ರದ ಶ್ರವಣ ಮನನಾದಿ ದ್ವಾರಾ ಸ್ವಪ್ರಸಾದವನ್ನೂ ಆವಿರ್ಭಾವ ಹೊಂದಿಸಿ ಭಗವದ್ದರ್ಶನ ಕೊಡೋಣವೇ ಮುಂತಾದ ಅನಂತೋಪಕಾರಿತ್ವವು ಪ್ರಮಿತವಾಗಿದೆಯಾದ್ದರಿಂದ ಅವರ ಅವತಾರಕ್ಕೆ ವೈಯರ್ಥ್ಯ ಇಲ್ಲ. "ಗ್ರಂಥಃ ಕೃತೋಽಯಂ ಜಗತಾಂ ಜನಿತ್ರಂ ಹರಿಂ ಗುರುಂ ಪ್ರೀಣಯತಾಽಮುನೈವ" ಎಂಬ ಹರ್ಷಪೂರ್ವಕ ಮಾತಿನಿಂದಲೇ ಅವರ ಜನ್ಮ ಸಾಫಲ್ಯತೆ ವ್ಯಕ್ತವಾಗಿದೆ. ಆದರೆ ದೊಡ್ಡವರನ್ನು ಸೇವಿಸದೆ ವಿವೇಕಹೀನರಾಗಿ ಯಾವ ದೊಡ್ಡ ಪದಾರ್ಥವನ್ನೂ ಗುರುತಿಸಿ ನಂಬಲಾರದೆ ದಾಸರು ಸುಳಾದಿ ಮಾಡಿದರೆಂಬಲ್ಲಿ, ಏನೂ ವ್ಯತ್ಯಾಸ ಆಗಿಲ್ಲವೆಂಬಲ್ಲಿ ಏನು ಪ್ರಮಾಣ ಎಂದು ಪ್ರಶ್ನೆ ಮಾಡಿ ಹಿಂಸೆ ಮಾಡುತ್ತಾ, ಈಚೆಗೆ ವಾದಿರಾಜ ಗುರುಮಹತ್ವವನ್ನು ಸಾವಿರ ಕಾರ್ಯಗಳಿಂದ ಪ್ರಸಕ್ತವಾದರೂ, ನೂರಾರು ಪ್ರಮಾಣಗಳಿಂದ ಶಿಷ್ಟ ವಿಜ್ಞಾನಿ ನಿಷ್ಕಾಮಿಗಳಿಂದ ಬೋಧಿತವಾದರೂ, ಆಂಗ್ಲಾದಿಗಳ ಸಂಗಸಂಸ್ಕಾರದಿಂದ ನಂಬದೇ, ವಿಚಾರಿಸಿ ವಿಮರ್ಶಿಸಿ ನಿರ್ಣಯ ತಿಳಿಯುವುದಕ್ಕೂ ಬೇಜಾರುಪಟ್ಟುಕೊಂಡು, ಉದಾಸೀನರಾಗಿರುವ, ಮಂದ ಭಾಗ್ಯರಾದ ನಮ್ಮಗಳ ಜನ್ಮವೇ ವ್ಯರ್ಥವೆಂದೂ, ಪ್ರಾಪ್ತ ಪರಿತ್ಯಾಗಿತ್ವ ದೋಷ ಹೇಗೆ ತಪ್ಪುತ್ತದೆಂದೂ ಚಿಂತಿಸಬೇಕಾಗಿದೆ. |
| **42. ಆಗಮ ವಿರುದ್ಧತ್ವ ವಿಚಾರ: ಪುಟ 22-23** |
| ಉಕ್ತಿ : |
| "ಯಾವುದು ಭಾರತದಲ್ಲಿ ಹೇಳಲ್ಪಟ್ಟಲ್ಲವೋ ಅದು ಇನ್ನು ಎಲ್ಲೂ ಇಲ್ಲ" ಎಂದಿರುವುದರಿಂದ ಭಾರತಾನುಕ್ತತ್ವವೂ, "ಅನುಕ್ತಂ ಪಂಚಭಿರ್ವೇದೈಃ ನವಸ್ತಸ್ತಿ ಕುತಶ್ಚನ" ಎಂದಿರುವುದರಿಂದ ಪಂಚ ವೇದಾನುಕ್ತತ್ವವೂ, ಅತ ಏವ ವಾದಿರಾಜ ಗುರುಗಳಿಗೆ ಅಶೇಷಾಗಮಗಳಲ್ಲಿ |
| ಅಪ್ರತಿಪಾದಿತತ್ವವೂ ಸಿದ್ಧಿಸುತ್ತೆ. ಲಾತವ್ಯ ನಾಮ ಋಜುಗಳಿಗೆ....... ಅವ್ಯವಹಿತ ಭಾವಿಕಲ್ಪದಲ್ಲಿ ವಾಯುಪದವಿ ಪ್ರಾಪ್ತಿಯು ಪ್ರಮಾಣವಿರುದ್ಧವೆಂದೂ ಹಿಂದೆ ನಿರೂಪಿತವಾಗಿದೆ" ಇತ್ಯಾದಿ, ಪ್ರತ್ಯುಕ್ತಿ: ಅ) ಆಗಮ ವಿರುದ್ಧತ್ವ ತೋರಿಸಬೇಕಾದ ಈ ಪ್ರಕರಣದಲ್ಲಿ "ಭಾರತದಲ್ಲಿ ಹೇಳಿಲ್ಲ, ಪಂಚವೇದದಲ್ಲಿ ಹೇಳಿಲ್ಲ" ವೆಂಬ ಈ ಅಸಿದ್ಧತ್ವ ನಿರೂಪಣೆಯು ಅಸಂಗತವು. ಆಗಮಾಸಿದ್ಧವಾಗಿದ್ದರೂ ಆಗಮ ವಿರುದ್ಧ ಇವು ಸಂಭವಿಸುವುದಿಲ್ಲ. ಅನುಮಾನ ಸಾಧಿತ ಆಗಮ ವಿರುದ್ಧತ್ವವು "ವಾಕ್ಯಮೇವಾಗಮಃ ಶುಭಂ' ಎಂದು ಆಚಾರ್ಯರಿಂದ ಬೃ.ಭಾ.ದಿಗಳಲ್ಲಿ ವಿವಕ್ಷಿತ ಆಗಮದ ವಿರೋಧವಿಲ್ಲ. "ಸ್ವಪಕ್ಷ ಆಗಮಶ್ಚೈವವಕ್ತವ್ಯ: ಪ್ರತಿವಾದಿನಾ" ಎಂದಪ ಆಚಾರ್ಯರು ಕಥಾಲಕ್ಷಣದಲ್ಲಿ ಅಪ್ಪಣೆ ಕೊಡಿಸಿದ್ದಾರೆ. ಅಂಥ ಋಜುತ್ವನಿಷೇಧಕ ಆಗಮವು ಹೇಳಿದರೆ ಆಗಮ ವಿರೋಧವಾಗುತ್ತೆ. |
| ಆ) ಅನುಕ್ತತ್ವರೂಪ ಈ ಶಂಕೆಗೆ ಹಿಂದಿನ ಪ್ರಕರಣದಲ್ಲೂ, 25, 26 ಪ್ರಕರಣಗಳಲ್ಲಿ ಉತ್ತರ ಕೊಟ್ಟಾಗಿದೆ. "ಯಾವುದು ಭಾರತದಲ್ಲಿ ಕಂಠತಃ ಆಗಲಿ, ಸಾಮಾನ್ಯತಃ ಆಗಲಿ, ಅಸ್ಪಷ್ಟತಃ ಸೂಚನಾ ರೂಪದಿಂದಾಗಲಿ, ಸಂಕ್ಷೇಪ ರೂಪದಿಂದಾಗಲಿ, ಅಥವಾ ಲಕ್ಷಣಯಾ ಭಾರತದಲ್ಲಿ ಪ್ರಮಾಣತ್ವೇನ ಸ್ವೀಕೃತ ಪಂಚರಾತ್ರಾಗಮಾದಿಗಳಲ್ಲಾಗಲಿ ಎಲ್ಲೂ ಹೇಳಲ್ಪಟ್ಟಲ್ಲವೋ, ಅಂಥ ಅತೀಂದ್ರಿಯವಸ್ತು ಇಲ್ಲವೇ ಇಲ್ಲ" ಎಂಬ ಅರ್ಥ ವಿವಕ್ಷಿತವಾಗಿದೆ. |

ಯಾವುದಾದರೂ ಒಂದು ರೂಪದಲ್ಲಿ ಭಾರತದಲ್ಲಿ ಅನುಕ್ತವಾದದ್ದು ಇಲ್ಲ. ಯಾವುದಾದರೂ ಒಂದು ರೂಪದಲ್ಲಿ ಪಂಚವೇದಾನುಕ್ತವಾದುದು ಇಲ್ಲ. ಯಾವುದಾದರೂ ಒಂದು ರೂಪದಲ್ಲಿ ಸಕಲ ಸಚ್ಛಾಸ್ತ್ರಾನುಕ್ತವಾದುದು ಇಲ್ಲ ಎಂದು ದ್ವೈತಸಿದ್ಧಾಂತ. ದೃಷ್ಟಾಂತ ಬೇಕೆಂದರೆ ಭಾರತದಲ್ಲಿ ರಾಮ ಕಥೆ ಎಲ್ಲಿದೆ ಎಂದರೆ ಅದು ಸಂಕ್ಷೇಪತಃ ವನಪರ್ವದಲ್ಲಿ ಹೇಳಲ್ಪಟ್ಟಿದೆ ಎಂದು ಶ್ರೀಮದಾಚಾರ್ಯರು ಹೇಳಿದ್ದಾರೆ: "ಉಕ್ತಾಚ ರಾಮಕಥಾಹ್ಯಸ್ಮಿನ್ ಮಾರ್ಕಂಡೇಯ ಸಮಾಖ್ಯಯಾ | ತಸ್ಮಾದ್ಯದ್ಭಾರತೇನೋಕ್ತಂ ತದ್ಧಿ ನೈವಾಸ್ತಿ ಕುತ್ರಚಿತ್" ಎಂದು ಹೇಳಿದ್ದಾರೆ. ಈ ರೀತಿಯಾಗಿ ಲಕ್ಷ್ಮೀ ಸರಸ್ವತೀ, ಋಜುಗಳು, ಶೇಷಗರುಡರು, ಇಂದ್ರಕಾಮಾದಿ ಸಮಸ್ತರ ವಿಚಾರವೂ ಸಂಕ್ಷೇಪ ರೂಪದಿಂದ ಎಲ್ಲೆಲ್ಲೋ ಬಂದೇ ಇದೆ ಎಂದು ನಂಬಬಹುದು. ಆದ್ದರಿಂದಲೇ ಭಾರತದಲ್ಲಿ ಲಕ್ಷ್ಮ್ಯವತಾರ, ಮಧ್ವಾವತಾರ, ವ್ಯಾಕರಣ ಭಾಷ್ಯಕಾರ ಶೇಷನ ಅವತಾರಾದಿಗಳು ಹೇಳಲ್ಪಟ್ಟಿಲ್ಲವೆಂದು ಕಂಡರೂ ರೂಪಾಂತರದಿಂದ ಎಂದರೆ ಭೀಮನ ಚರಿತ್ರೆ ವ್ಯಾಜದಿಂದ ಮಧ್ವಾವತಾರವೂ, ರುಕ್ಮಿಣೀ ಚರಿತ್ರೆ ಕಥನದಿಂದ ಲಕ್ಷ್ಮ್ಯವತಾರಗಳೂ, ಬಲರಾಮ ಚರಿತ್ರೆ ಹೇಳಿರುವುದರಿಂದ ಪತಂಜಲ್ಯಾದಿ ಶೇಷಾವತಾರಗಳೂ ನಿರೂಪಿತವಾಗಿವೆ ಎಂದೇ ಪಂಡಿತರು ತಿಳಿಯುತಾರೆ. ಆಗಮ ಪುರಾಣಗಳಲ್ಲಿ ಅಲ್ಲಲ್ಲಿ ವಿಸ್ತಾರ ನಿರೂಪಣೆ ಕಂಡಿದೆ. 'ಭೀಮ' ಪದಕ್ಕೆ ಪೂರ್ಣಜ್ಞಾನವುಳ್ಳವರು ಎಂದರ್ಥ. ಅಂಥ ಭೀಮನ ಕಥೆಯಿಂದ ಮಧ್ವಾಚಾರ್ಯರ ಸ್ವರೂಪಾದಿಗಳೂ ವಾದಿರಾಜಾದಿಗಳ ಸ್ವರೂಪಾದಿಗಳೂ ಸೂಚಿತವಾಗಿವೆ. "ಯಸ್ಯತ್ರೀಣ್ಯುದಿತಾನಿ" ಎಂಬ ನಿರ್ಣಯ ವಚನದಿಂದಲೂ ವಾದಿರಾಜಾದಿಗಳ ಮಹಿಮೆ ಸೂಚಿತವಾಗಿದೆ. ವಿಶೇಷತಃ ನಿರೂಪಣೆಯು ಋಕ್ಸಂಹಿತಾ ವಾಮನ ಪುರಾಣಾದಿಗಳಲ್ಲಿದೆ. ಭಾರತದಲ್ಲೆ ಆ ವೈದಿಕ ಗ್ರಂಥಗಳ ಪ್ರಾಮಾಣ್ಯ ಅಂಗೀಕೃತವಾಗಿವೆ. ಆದ್ದರಿಂದ ಅನುಕ್ತತ್ವ ಹೇತುವಿಗೆ ಅಸಿದ್ಧಿಯೇ ಬಂತು.

ಈಗ ಒಂದು ಪ್ರಶ್ನೆ ಪೂರ್ವಪಕ್ಷಿಗಳ ಮೇಲೇ ಬರುತ್ತೆ. ವಾದಿರಾಜ ಗುರುಗಳು ಋಜುಗಳೆಂದು ಯಾವ ಪ್ರಮಾಣದಲ್ಲೂ ಪ್ರಮಿತವಾಗದಿರುವಾಗ ಅನೃಜುತ್ವಕ್ಕೆ ಸರ್ವಾಗಮ ವಿರುದ್ಧತ್ವವು ಹೇಗೆ ಬರಲಿಲ್ಲ? ಏಕೆಂದರೆ ನಿರ್ಣಯಾನುಕ್ತಿ, ಭಾರತಾನುಕ್ತಿ, ಶಾಸ್ತ್ರಾನುಕ್ತಿ ಪರೀಕ್ಷೆಯು ಅನೃಜುತ್ವವೇ ಸುಳ್ಳೆಂದು ತೋರಿಸುತ್ತೆ. ಕೊನೆಯದಾಗಿ ಲಾತವ್ಯರಿಗೆ, ಮುಂದಿನ ಕಲ್ಪದಲ್ಲಿ ವಾಯುಪದವೀ ಬರುತ್ತೆಂಬುದು ವಾ.ಗು.ಚ.ಮುಂತಾದ ಗ್ರಂಥಗಳಲ್ಲಿದೆ. ಪ್ರಮಾಣವಿರೊಧ ಒಂದೂ ಇಲ್ಲ.

**43. ಆಗಮ ವಿರುದ್ಧತ್ವ ವಿಚಾರ : ಪುಟ 23-5**

ಉಕ್ತಿ :

"ವೃನ್ದಾವನಾಖ್ಯಾನದಿಂದಲೂ ಕೂಡ ಅದರ (ವಾದಿರಾಜ ಋಜುತ್ವದ) ಸಿದ್ಧಿಯಾಗುವುದಿಲ್ಲ. ಆ ಗ್ರಂಥಕ್ಕೆ ಅಪ್ರಾಮಾಣ್ಯ ಶಂಕಾ ಕಳಂಕವುಂಟಾಗಿದೆ" ಇತಿ.

ಪ್ರತ್ಯುಕ್ತಿ :

ಅ) ಸಪ್ತಮಾಧ್ಯಾಯದಲ್ಲಿ "ಅಪ್ರಾಮಾಣ್ಯ ಶಂಕಾಯುಕ್ತತ್ವ" ಹೇತುವಿಗೆ ಅಸಿದ್ಧಿ ತೋರಿಸಿ ಖಂಡನೆ ಮಾಡಲಾಗಿದೆ.

| |
|---|
| ಆ) ಕಿಂಚ ಆಖ್ಯಾನಕ್ಕೆ ಅಪ್ರಾಮಾಣ್ಯ ಶಂಕಾಯುಕ್ತತ್ವ ಸಾಧಿಸಿದರೆ ಋಜುತ್ವವಾದಕ್ಕೆ ಪ್ರಮಾಣಾಭಾವವನ್ನು ಆಪಾದಿಸಿದಂತೆ ಆಯಿತೇ ಹೊರತು ಆಗಮವಿರುದ್ಧತ್ವ ತೋರಿಸಿದ ಹಾಗೆ ಆಗಲಿಲ್ಲ. ಆದ್ದರಿಂದ ಈ ಪೂರ್ವಪಕ್ಷಿಗಳ ಉಕ್ತಿಯು ಅಸಂಗತವೇ. |
| ಇ) ಮತ್ತು ಈ ಆಪಾದನೆಯು ಪ್ರಾಮಾಣ್ಯ ಪರತಸ್ತ್ವವಾದಿಗಳ ರೀತಿಯಿಂದ ನ್ಯಾಯವೈಶೇಷಿಕರ ಮತವನ್ನನುಸರಿಸಿ ಮಾಡಿದ ಖಂಡನೆಯಾಗಿದೆ. "ಪ್ರತ್ಯಕ್ಷವಚ್ಚ ಪ್ರಾಮಾಣ್ಯಂ ಸ್ವತ ಏವಾಗಮಸ್ಯಹಿ" ಎಂದು ಹೇಳಿರುವ ಶ್ರೀಮಧ್ವಾಚಾರ್ಯರ ಸಿದ್ಧಾಂತಕ್ಕೆ ಇದು ವಿರುದ್ಧ ರೀತಿ ಎಂದು ಪುಟ 36ರಲ್ಲಿ ಹೇಳಲ್ಪಟ್ಟಿದೆ. ಆದ್ದರಿಂದ ವಿರೋಧ ತೋರಿಸಿ ವಾಕ್ಯದಲ್ಲಿ ಅಪ್ರಾಮಾಣ್ಯ ಶಂಕೆಯನ್ನು ಆಪಾದಿಸಬೇಕು. ಪುರುಷ ಕೃತತ್ವ ಮುಂತಾದವು ವಾಕ್ಯ ದೋಷಗಳಲ್ಲವೆಂದು ಹಿಂದೆ ಉಕ್ತವಾಗಿದೆ. ಪುರುಷಕೃತತ್ವ ಮುಂತಾದುವು ಅಪ್ರಾಮಾಣ್ಯ ಶಂಕಾಬೀಜಗಳಲ್ಲ. ಹಾಗೆ ವ್ಯಾಪ್ತಿ ಇಲ್ಲ. ಪುರುಷ ಕೃತತ್ವಾದಿಗಳು ದೋಷಗಳಾಗದಿದ್ದರೆ ಇನ್ನಾವುವು ದೋಷಗಳೆಂದರೆ ವಾಕ್ಯಕೆ ಅಪ್ರಾಮಾಣ್ಯ ಕಾರಣ ದೋಷಗಳೆಂದು ಅಬೋಧಕತ್ವ, ವಿರುದ್ಧಜ್ಞಾನಜನಕತ್ವ ಮುಂತಾದವು ಪ್ರಸಿದ್ಧವಾಗಿವೆ. ಆ ದೋಷಗಳು ವಾಕ್ಯದಲ್ಲಿದ್ದರೆ ಕಂಡು ಹಿಡಿಯಬೇಕು. ಅಂಥ ಪ್ರಮಾಣ ವಿರೋಧ ಕಾಣದೆ, ಆದ್ದರಿಂದಲೇ ದೋಷಗಳನ್ನು ವಾಕ್ಯದಲ್ಲಿ ಕಾಣದೆ, ಸುಮ್ಮಸುಮ್ಮನೆ ಆಖ್ಯಾನ ಪುಸ್ತಕ ಅಪ್ರಾಮಾಣವೆಂದು ಶಂಕಿಸಿದರೆ ನ್ಯಾಯವೈಶೇಷಿಕ ಮತವನ್ನು ಪ್ರವೇಶಿಸಿದಂತಾಗುತ್ತೆ. ಇದೇ ಈ ಪೂರ್ವಪಕ್ಷ ಗ್ರಂಥಕಾರರ ವಾದದ ದೋಷ: "ಋಜುತ್ವ ವಾದದಲ್ಲಿ ದೋಷವಿದೆ. ತಥಾಹಿ" ಎಂದು ದೊಡ್ಡದಾಗಿ ಪ್ರತಿಜ್ಞೆ ಮಾಡಿ, ಮುಂದೆ ಯಾವ ಪ್ರಮಾಣ ವಿರೋಧವನ್ನೂ ತೋರಿಸಿಲ್ಲ, ಆದರೂ ಆಖ್ಯಾನ ಅಪ್ರಮಾಣವೆಂದು ವಾದಿಸಿದ್ದಾರೆ. ಈ ಖಂಡನಾ ರೀತಿಯು ನ್ಯಾಯ ವೈಶೇಷಿಕರ ಮತದ ರೀತಿ ಎಂದು ಇಷ್ಟು ಹೇಳಿದ್ದು. |
| ಇದಕ್ಕೆ ಇನ್ನೂ ಉಪಪಾದನೆ ಬೇಕೆಂದರೆ ಗೀತಾಭಾಷ್ಯ IIನೇ ಅಧ್ಯಾಯದಲ್ಲಿದೆ. ಸರ್ವಜ್ಞಾಚಾರ್ಯರು ಹರಿಸರ್ವೋತ್ತಮತ್ವ ವಿಷಯದಲ್ಲಿ ಶ್ರುತಿ, ಸ್ಮೃತಿ, ಇತಿಹಾಸ, ಪುರಾಣ ವಚನಗಳನ್ನು ಉದಾಹರಿಸಿದರು. ಆಗ ಪ್ರತಿವಾದಿ ಹೇಳುತ್ತಾನೆ: "ಈ ವಾಕ್ಯಗಳೆಲ್ಲಾ ಶಂಕಾಕಳಂಕಿತವಾಗಿ ಅಪ್ರಮಾಣವೆನ್ನಿಸುವುವು. ಎಲ್ಲೂ ಕಾಣದ ಮಹಿಮೆಯನ್ನು ದೇವರಿಗೆ ಇವು ಒಪ್ಪುತ್ತವೆ. ಆದ್ದರಿಂದ ಈ ವಾಕ್ಯೋಕ್ತವಾದದೆಲ್ಲಾ ಸುಳ್ಳೇ" ಎಂದು. ಆಗ ಆಚಾರ್ಯರು ಉತ್ತರ ಕೊಟ್ಟಿದ್ದಾರೆ: "ನೀವು ಹೇಳುವುದು ಸರಿಯಲ್ಲ. ವಾಕ್ಯವೆಂದರೆ ಸ್ವತಃ ಪ್ರಮಾಣವು. ಅದು ಏನು ಪ್ರದಿಪಾದಿಸುತ್ತೆಯೋ ಅದು ಸತ್ಯವೇ. ಪ್ರಮಾಣಾಂತರ ವಿರೋಧವೂ ಇಲ್ಲದ ಮೇಲೆ ಹಾಗೆಯೇ ಸರಿ. ಪ್ರಮಾಣ ಸಿದ್ಧವಾಗಿದ್ದರೂ ವಾಕ್ಯದಲ್ಲಿ ಹೇಳಿದ್ದು ಅಪರೂಪ ವಿಷಯ, ಅನ್ಯತ್ರ ಕಂಡಿಲ್ಲ ಎಂಬ ಕಾರಣದಿಂದ ಪ್ರಮಾಣೋಕ್ತವಾದರೂ ಅದು ಅಸತ್ಯವೇ ಎಂದು ಹೇಳುವುದು ಯುಕ್ತವಲ್ಲ. ಪದಾರ್ಥಗಳು ವಿಚಿತ್ರವಾಗಿವೆ. ಒಂದು ಕಡೆ ಒಂದು ಮಹಿಮೆಯಿಲ್ಲವೆಂದು ಇನ್ನೊಂದು ಕಡೆಯೂ ಅದು ಇಲ್ಲವೆಂದು ಹೇಳಲಾಗುವುದಿಲ್ಲ. ವಾಕ್ಯಕ್ಕೆ ಸ್ವತಃ ಪ್ರಾಮಾಣ್ಯವನ್ನೇ ಒಪ್ಪುವುದಿಲ್ಲವೆನ್ನುವುದಾದರೆ ಪ್ರಮಾಣ ಹೇಳಿದರೂ ಅದಕ್ಕೆ ನಿರ್ದೋಷತ್ವ ಸಾಧಿಸಿ ಎಂದು ಕೇಳಬೇಕಾಗುತ್ತೆ. ಹೀಗೆ ಅತಿಪ್ರಸಂಗವಿದೆ. ಆದ್ದರಿಂದ ಆಗಮಗಳಿಗೆ ಅನ್ಯಗುಣಾದಿ ನಿರಪೇಕ್ಷವಾಗಿ ಸ್ವಾರ್ಥ |

ಬೋಧಕತ್ವ ಸಾಮರ್ಥ್ಯವಿದೆ. ಅಂಥ ಪ್ರಮಾಣವಾಕ್ಯ ನಾರಾಯಣ ಪರಾಃ ವೇದಾಃ ಎಂದಿದೆ. ಅದೇನೂ ವಿರುದ್ಧವಲ್ಲ" ಇತ್ಯಾದಿ.

ಕರ್ಮ ನಿರ್ಣಯದಲ್ಲೂ (ಪುಟ 253) "ಇವೇ ಮೊದಲಾದ ವಾಕ್ಯಗಳಿಗೆ ಸ್ವಾರ್ಥ ಬೋಧನದಲ್ಲಿ ಪ್ರಾಮಾಣ್ಯವಿಲ್ಲ ಎನ್ನ ಕೂಡದು. ಅವಿರೋಧವಿದೆ" ಎಂದಿದ್ದಾರೆ.

ಸುಧಾ II 1 ಅಧಿ. 2: "ಅಪ್ರಾಮಾಣ್ಯ ಪ್ರಯೋಜಕವಾದ ಪ್ರಮಾಣ ವಿರೋಧವು ಇಲ್ಲದಿದ್ದುದರಿಂದ ಶ್ರುತಿ ಸ್ಮೃತಿಗಳಿಗೆ ಅಪ್ರಾಮಾಣ್ಯ ಕೂಡುವುದಿಲ್ಲ ಎಂದು ಹೇಳಲಾಯಿತು...ಆದರೆ ಇದರ ಮೇಲೆ 'ಇದು ಅಯುಕ್ತವು ಅನುಮಾನ ವಿರುದ್ಧವಾದ್ದರಿಂದ' ಎಂದು ಆಶಂಕಿಸಿದರೆ ಹೇಳುತ್ತಾರೆ "ವಿರೋಧೋಪೀತಿ" ವಿರೋಧದಿಂದಲೇ ಬಾಧಿತವಾಗುತ್ತೆಂದು ಅಪ್ರಾಮಾಣ್ಯ ಪ್ರಯೋಜಕವೆಂದು ಹೇಳಿದ ವಿರೋಧವೂ ಅದೇನೇ - ಯಾವುದು ಪ್ರತ್ಯಕ್ಷದಿಂದ ಅಥವಾ ಆಗಮದಿಂದ ಪ್ರಾಪ್ತವಾಗುತ್ತೊ ಆ ವಿರೋಧವೇ; ಮತ್ತೆ ಅನುಮಾನ ವಿರೋಧವಲ್ಲ....ನಮ್ಮಿಂದ ಪ್ರತ್ಯಕ್ಷಾಗಮ ವಿರೋಧವೇ ಹಾಗೆ ವಿರೋಧವೆಂದು ಅಭಿಪ್ರೇತವಾಗಿದೆ. ಅನುಮಾನ ವಿರೋಧವಲ್ಲ" ಎಂದಿದೆ. ಋಜುತ್ವ ವಿಚಾರ ಗ್ರಂಥಕರ್ತರಾದರೋ ಪ್ರತ್ಯಕ್ಷಾಗಮ ವಿರೋಧವನ್ನು ತೋರಿಸದೇನೇ ಸುಮ್ಮ ಸುಮ್ಮನೇ ಅನುಮಾನ ಮಾತ್ರದಿಂದ ವೃನ್ದಾವನಾಖ್ಯಾನದ ವಾಕ್ಯಗಳನ್ನು ದೂಷಿಸಿದ್ದಾರೆ. ಇದೇ ಪ್ರಾಮಾಣ್ಯ ಪರತಸ್ತ್ವ ರೀತಿ.

ಸ್ವಾಪ್ನೋಪದೇಶವಾದ್ದರಿಂದ ಶಂಕಿಸುತ್ತೇವೆ ಎಂದರೆ, ಕೂಡದು. ಹಿಂದೆಯೇ ಬ್ರಹ್ಮಸೂತ್ರ ಭಾಷ್ಯ ಪ್ರಮಾಣ ಕೊಟ್ಟು ಉತ್ತರ ಕೊಟ್ಟಾಗಿದೆ. "ಸ್ವಪ್ನಲಬ್ದಸ್ಯ ಮಂತ್ರಸ್ಯ ಸಾಧ್ಯಾದೀನ್ನೈವ ಚಿಂತಯೇತ್" ಇತ್ಯಾದಿ ಋಜುತ್ವ ಚಂದ್ರೋದಯದಲ್ಲಿ ಉದಾಹರಿಸಲ್ಪಟ್ಟಿರುವ ಮಂತ್ರ ಮಹೋದಧಿ ವಚನದಿಂದ ಸ್ವಪ್ನೋಪದೇಶವಾದ ಮಾತ್ರಕ್ಕೆ ಅಪ್ರಾಮಾಣ್ಯ ಬರುವುದಿಲ್ಲ. "ಏವಮಷ್ಟೋತ್ತರ ಶತಂ ನಾಮ್ನಾಂ ನೃಹರಿ ರೂಪಿಣಃ II ನರಕೇಸರಿಣಾದತ್ತಂ ಸ್ವಪ್ ಶೇಷಾಯ ಧೀಮತೇ" ಎಂದು ಅಲ್ಲೇ ನರಸಿಂಹ ಪುರಾಣ ವಚನವೂ ಉದಾಹೃತವಾಗಿದೆ. ಅದರಿಂದಲು ಸ್ವಪ್ನೋಪದೇಶದಿಂದ ಪ್ರಾಪ್ತವಾದ ಮಾತ್ರಕ್ಕೆ ಮಂತ್ರಕ್ಕೆ ಅಪ್ರಾಮಾಣ್ಯ ಕಾರಣ ದೋಷ ಬರುತ್ತೆಂದು ಹೇಳಕೂಡದೆಂದು ಸಿದ್ಧವಾಗುತ್ತೆ. ಸ್ವಪ್ನದಲ್ಲಿ ಬ್ರಾಹ್ಮಣ ರಾಜಾದಿಗಳು ಹೇಳಿದ ಮಾತು ಸತ್ಯವಾಗುತ್ತೆಂದು ಸೂತ್ರ ಭಾಷ್ಯದಲ್ಲೇ ಇದೆ. ಕಿಂಚ ಪ್ರಬಲ ಪ್ರಮಾಣ ವಿರೋಧವನ್ನೇ ಪೂರ್ವಪಕ್ಷದವರು ತೋರಿಸಬೇಕು. ಅನುಮಾನ ಮಾತ್ರವನ್ನು ವಿರುದ್ಧವಾಗಿ ತಂದೊಡ್ಡಬಾರದು. "ಯುಕ್ತಿಯು ಪ್ರಬಲ ಪ್ರಮಾಣ ಸಹಾಯ ರಹಿತವಾಗಿದ್ದರೆ ದೋಷರೂಪವೆಂದೇ ಪರಿಗಣಿತವಾಗುತ್ತೆ" ಎಂದು ಛಾ. ಭಾಷ್ಯ (ಪುಟ 97) ವಚನವಿದೆ. ಪ್ರಮಾಣ ಸಿದ್ಧಾರ್ಥ ವಿಷಯದಲ್ಲಿ ತರ್ಕಕ್ಕೆ ಬಾಧಕತ್ವವೇ ಇಲ್ಲವೆಂಬ ತತ್ತ್ವೋದ್ಯೋತ ಟೀಕವಚನವೂ ಪುಟ 240 ರಲ್ಲಿ ಕೊಡಲ್ಪಟ್ಟಿದೆ.

ಆದ್ದರಿಂದ ಆಖ್ಯಾನ ವಿಷಯದಲ್ಲಿ ಅಪ್ರಾಮಾಣ್ಯ ಶಂಕೆಯು ನಿರ್ಮೂಲವೇ. ಹಾಗೆ ಪರತಸ್ತ್ವ ಪ್ರಕ್ರಿಯೆಯಲ್ಲಿ ಆಗ್ರಹ ಮಾಡಿದರೆ ಮನುಷ್ಯ ಮಾತ್ರ ಕೃತ ಪೂರ್ವಪಕ್ಷ ಗ್ರಂಥವು ಏತಕ್ಕೆ ಅಪ್ರಮಾಣವಾಗಬಾರದು ಎಂದು ಶಂಕೆ ಬರುತ್ತೆ. ಗ್ರಂಥಾಂತರ ಪ್ರಮಾಣ ವಾಕ್ಯ ಕೊಟ್ಟರೂ ಆ ವಾಕ್ಯವೂ ಮನುಷ್ಯ ರಚಿತವಾದ್ದರಿಂದ ಅಪ್ರಮಾಣವೇ ಆಗಲಿ ಎಂದು

ಶಂಕಿಸಬಹುದು. ಅವಕ್ಕೂ ಪುನಃ ಪ್ರಮಾಣಾಂತರವನ್ನು ಹೇಳಿದರೆ ಅದೂ ದೋಷಯುಕ್ತ ಎಂದು ಶಂಕಿಸಿದರೆ ಅನವಸ್ಥಾ `ದೋಷವೇ ಬರುತ್ತೆ. ಅಸಿದ್ಧ ಮೂಲಕತ್ವ ನಿಮಿತ್ತದಿಂದ ಈ ಅನವಸ್ಥೆಯು ದೋಷ ರೂಪವೇ. ಆದ್ದರಿಂದ ಕೇವಲ ಯುಕ್ತಿಯಿಂದ ಆಖ್ಯಾನಾದಿ ಪ್ರಮಾಣ ಗಂಥಗಳಲ್ಲಿ ದೋಷೋದ್ಭಾವನೆ ಮಾಡಿದರೆ ಪೂರ್ವಪಕ್ಷ ಗ್ರಂಥವೇ ಅಪ್ರಮಾಣವೆಂದು ಸಿದ್ಧವಾಗುತ್ತೆ.

ಕಿಂಚ ಆಖ್ಯಾನದ I 58 ಶ್ಲೋಕದಲ್ಲಿ "ವಾಗೀಶತೀರ್ಥ ಕರಕಮಲ ಸಂಜಾತರಾದ ವೃನ್ದಾವನಸ್ಥರೇ ಆದ ವಾದಿರಾಜಾಖ್ಯ ಯತಿಗಳಿಂದ ಬ್ರಾಹ್ಮಣನಿಗೆ ಸ್ವಪ್ನವಲ್ಲಿ ತೋರಿಸಿದ ರೂಪದಿಂದ ಈ ಪುಣ್ಯಕರವಾದ ವೃನ್ದಾವನಾಖ್ಯಾನವು ರಚಿತವಾಯಿತು. ಇದು ಪಠನ ಮಾಡುವವರಿಗೆ ಸಂಪತ್ತು ಗಳನ್ನು ಕೊಡತಕ್ಕದ್ದು" ಎಂದು ಹೇಳಿದೆ. ಹೀಗೆ ವಾದಿರಾಜರುಗಳಿಂದಲೇ ಕೃತವೆಂದು ಪ್ರಮಿತವಾಗಿರುವುದರಿಂದಲೂ ಆಖ್ಯಾನವು ಶ0ಕಾನರ್ಹವು. ಗುರುಗಳು ಋಜುದೇವತೆಗಳಾದ್ದರಿಂದಲೂ ಸ್ವಪ್ರೋಕವು ಅಸತ್ಯವಾಗುವುದಿಲ್ಲ. ವಾದಿರಾಜ ಗುರುಗಳು ಋಜುಗಳೆಂದು ಕಂಠತಃ III 5-7; VIII 52,91 ; XIV 90 ಇತ್ಯಾದಿ ಸ್ಥಗಳಗಳಲ್ಲಿ ಹೇಳಲ್ಪಟ್ಟಿದೆ.

**44. ಆಗಮ ವಿರೋಧ ವಿಚಾರ : ಪುಟ 23-6**

**ಉಕ್ತಿ:**

"ಹೇಗೆಂದರೆ ಆಗಮಗಳಿಗೆ ಅಪ್ರಾಮಾಣ್ಯ ಶಂಕಾ ನಿರಸನವು ಮೂರು ಪ್ರಕಾರ ಸಂಭವಿಸುತ್ತೆ. ಅಪೌರುಷೇಯತ್ವದಿಂದ, ಅಪೌರುಷೇಯಗೃಹೀತತ್ವದಿಂದ, ಪೂರ್ವೋಕ್ತ ಉಭಯಾನುಸಾರಿತ್ವದಿಂದಲೂ ಸಹ; ಹೀಗಿರುವಲ್ಲಿ ಆಖ್ಯಾನ ಗ್ರಂಥದ ಅಪ್ರಾಮಾಣ್ಯ ಶಂಕಾನಿರಸನ ಪ್ರಕಾರವೇ ಕಾಣುವುದಿಲ್ಲ. ವೇದಭಿನ್ನವಾದ್ದರಿಂದ; "ಇತಿಹಾಸ ಪುರಾಣಃ ಪಂಚಮೋ ವೇದಾನಾಂ ವೇದಃ" ಎಂದು ಇರುವಂತೆ ಅದನ್ನು ಮನ್ನಿಸುವ ವೇದ ವಚನವಿಲ್ಲದ್ದರಿಂದಲೂ ಪ್ರಥಮ ದ್ವಿತೀಯ ಪ್ರಕಾರಗಳು ವೃನ್ದಾವನಾಖ್ಯಾನಕ್ಕೆ ಕೂಡುವುದಿಲ್ಲ. ಶಾಸ್ತ್ರಾಸಿದ್ಧ ಋಜುತ್ವ ಪ್ರತಿಪಾದಕತ್ವ ಕಾರಣದಿಂದಲೇ ಮೂರನೆಯ ಪ್ರಕಾರವೂ ಕೂಡುವುದಿಲ್ಲ" ಇತಿ.

ಪ್ರತ್ಯುಕ್ತಿ : ಈ ಖಂಡನೆಗೆ ಪ್ರತಿಬಂದಿಯು ಸಿದ್ಧವಾಗಿದೆ. ಪೂರ್ವಪಕ್ಷ ಗ್ರಂಥವು ವೇದವಲ್ಲ; ವೇದ ಪರಿಗೃಹೀತವಲ್ಲ; ಶಾಸ್ತ್ರಾಸಿದ್ಧ ಅನೃಜುತ್ವವನ್ನು ಕಲ್ಪಿಸಿ ವಾದಿರಾಜರಲ್ಲಿ ಆರೋಪಿಸಿ ಪ್ರತಿಪಾದಿಸಿರುವುದರಿಂದ. ಹೀಗೆ ಮೂರು ಪ್ರಕಾರವೂ ಸಂಭವಿಸುವುದಿಲ್ಲವಾದ್ದರಿಂದ ಪೂರ್ವಪಕ್ಷ ಗ್ರಂಥವು ಅಪ್ರಮಾಣವೇ ಎಂದು ಹೇಳಬಹುದು. ವೇದ ಶಾಸ್ತ್ರಾವಿರುದ್ಧ ವಿಚಾರರೂಪವಾದ್ದರಿಂದ ಅದು ಪ್ರಮಾಣವನ್ನುವುದಾದರೆ, ವೃನ್ದಾವನಾಖ್ಯಾನವೂ ಅದೇ ಕಾರಣದಿಂದ ಪ್ರಮಾಣವೆಂದು ಸಮಾಧಾನ ಕೊಡಬಹುದು.

ಇಷ್ಟೇ ಅಲ್ಲ, ವೃನ್ದಾವನಾಖ್ಯಾನ ಗ್ರಂಥವು ವೇದವಲ್ಲದಿದ್ದರೂ, ವೇದ ಪರಿಗೃಹೀತತ್ವವೆಂಬ ಧರ್ಮವನ್ನು ಹೊಂದಿಯೇ ಇದೆ. ವೇದ ಪರಿಗ್ರಹವು ದ್ವಿವಿಧ: - ಸಾಕ್ಷಾದ್ಗ್ರಂಥದ ಹೆಸರನ್ನು ಹೇಳಿ ಅದನ್ನು ಪ್ರಮಾಣ ಎನ್ನುವುದು ಮೊದಲನೆಯ ವಿಧ; ಅದು ಭಾರತ ಸಾತ್ವಿಕ ಪುರಾಣಗಳಿಗಿದೆ. "ಯದ್ವೈ ಕಿಂಚನ ಮನುರವದತ್ತದ್ಭೇಷಜಂ" ಎಂದು ಸಾಮಾನ್ಯತಃ ವ್ಯಾಪ್ತ್ಯುಪನ್ಯಾಸ ರೀತಿಯಿಂದ ಪರಿಗ್ರಹವು ದ್ವಿತೀಯವಿಧ. ಇದಕ್ಕೆ ಇನ್ನೂ ದೃಷ್ಟಾಂತ:

'ಯದಾಕರ್ಮಸು ಕಾಮ್ಯೇಷು ಸ್ತ್ರಿಯಂ ಸ್ವಪ್ನಽ ಭಿಪಶ್ಯತಿ ॥ ಸಮೃದ್ಧಿಂ ತತ್ರ ಜಾನೀಯಾರ್ತಸ್ಮಿನ್ ಸ್ವಪ್ನ ನಿದರ್ಶನೇ" (ಛಾಂ, V 2-9) ಮತ್ತು "ಯದ್ವಾಪಿ ಬ್ರಾಹ್ಮಣೋ ಭ್ರೂಯಾದ್ದೇವತಾ ವೃಷಭೋಪಿವಾ . ಸ್ವಪ್ನಸ್ಥಮಥವಾರಾಜಾ ತತ್ತಥೈವ ಭವಿಷ್ಯತಿ ॥ ಇತ್ಯಾಚಕ್ಷತೇ ಚ ಸ್ವಪ್ನವಿದೋ ವ್ಯಾಸಾದಯಃ' (ಬ್ರ.ಸೂ.ಭಾ. III 2-4) ಈ ಪ್ರಮಾಣಗಳ ರೀತಿಯಿಂದ ಆಖ್ಯಾನ ಪ್ರಾಮಾಣ್ಯವು ಪರಿಗೃಹೀತವಾಗಿ ಸಿದ್ಧವಾಗುತ್ತೆ. "ಮನು" ಎಂಬ ಶ್ರೌತ ಪದಕ್ಕೆ 'ತೇ ವಾಯವೇ ಮನವೆಽಬಾಧಿತಾಯ' ಇತ್ಯಾದಿ ಪ್ರಮಾಣದಿಂದ ಪರಶುಕ್ಲ ತ್ರಯಸ್ಥ ಋಜುಗಳು ಮನುಪದ ವಾಚ್ಯವೆಂದು ಮುಖ್ಯಾರ್ಥ [ಮತಾ.ನಿ, 18-28 ರಲ್ಲೂ ಪರಶುಕ್ಲ ತ್ರಯರ ವರ್ಣನೆ ಇದೆ] ಯಾವುದು ಋಜುಗಳಿಂದ ಪ್ರೋಕ್ತವೋ ಅದು ಯಥಾರ್ಥವು ಎಂದು ಈ ವೇದದಲ್ಲಿ ವ್ಯಾಪ್ತಿದರ್ಶಿತವಾಗಿದೆ. ಪ್ರಕಾಶ ಸಂಹಿತೆಯಲ್ಲಿ ಇದಕ್ಕೆ ಉಪಬೃಂಹಣವಿದೆ. ಅಂಥ ಮನುಪದವಾಚ್ಯ ಋಜುಗಣಸ್ತ ವಾದಿರಾಜಗುರುಪ್ರೋಕ್ತವಾದ್ದರಿಂದ ಆಖ್ಯಾನವು ಪ್ರಮಾಣವು. ಸ್ವಾ.ವೃ.ಆ. I 58; III 5, 6, 7; VIII 52, 53, 97 ಇತ್ಯಾದಿ ವಾಕ್ಯಗಳಲ್ಲಿ ಹಾಗೇ ಹೇಳಲ್ಪಟ್ಟಿದೆ.

ವೇದಾನುಸಾರಿತ್ವ ಮತ್ತು ವೇದಪರಿಗೃಹೀತ ಭಾರತ ಪುರಾಣಾದ್ಯನುಸಾರಿತ್ವವಂಬ ಮೂರನೆಯ ರೀತಿಯೂ ಆಖ್ಯಾನದಲ್ಲಿ ಕಂಡಿದೆ. ಬಳಿತ್ಥಾ ಸೂಕ್ತಾದಿ ವೇದಾನುಸಾರಿಯಾಗಿ ಆಖ್ಯಾನವಿದೆ. ಋಕ್ಸಂಹಿತಾ, ಬ್ರಹ್ಮಾಂಡ, ಬ್ರಹ್ಮವೈವರ್ತ, ವಾಮನ, ಪಾದ್ಮ, ಸ್ಕಾಂದ, ಬೃಹನ್ನಾರದೀಯ ಪುರಾಣಾನುಸಾರಿಯಾಗಿಯೂ ಆಖ್ಯಾನವಿದೆ. "ಇತಿಹಾಸ ಪುರಾಣಾಭ್ಯಾಂ ವೇದಂ ಸಮುಪಬೃಂಹಯೇತ್' ಎಂಬ ನ್ಯಾಯದಿಂದ ಮತ್ತು ಮಂತ್ರಾದಿವದ್ವಾ ಅವಿರೋಧಃ' ಎಂಬ ನ್ಯಾಯದಿಂದ ಬಳಿತ್ಥಾಸೂಕ್ತವನ್ನು ವ್ಯಾಖ್ಯಾನ ಮಾಡಿದರೆ ಲಕ್ಷ್ಮೀನಾರಾಯಣರ ವಿಷಯದಲ್ಲೇ ಪ್ರಸಿದ್ಧ ಶ್ರುತಿಗಳನ್ನು ಬಿಟ್ಟು ವಾದಿರಾಜಾದಿ ಋಜು ಪ್ರತಿಪಾದಕವೆಂದು ಪಂಡಿತರು ತೋರಿಸುತ್ತಾರಾದ್ದರಿಂದ ಆ ಸೂಕ್ತಾರ್ಥ ಪ್ರತಿಪಾದಕತ್ವವೂ ಪ್ರಮಿತವಾಗುತ್ತೆ. ಬಳಿತ್ಥಾ ಸೂಕ್ತಕ್ಕೆ ವಾಯುಪರವೂ ಕೂಡ ಉಪಬೃಂಹಣ ಸಂಹಿತಾ ಪುರಾಣ ವಾಕ್ಯಗಳ ಬಲದಿಂದಲೇ ಸಿದ್ಧವಾಗಿದೆ. ವಾಯುದೇವರು ಆನಂದತೀರ್ಥ ಮುನಿಗಳಾಗಿ ಅವತರಿಸಿದರು ಎಂದು ಆ ಸೂಕ್ತದಲ್ಲಿ ಸ್ಪಷ್ಟವಾಗಿ ಹೇಳಿಲ್ಲ. ಯೋಗ ವ್ಯುತ್ಪತ್ತಿಯಿಂದಲೂ, ಸ್ಮೃತ್ಯನುಸಾರವಾಗಿಯೂ ಅರ್ಥಮಾಡಿದರೆ ಮಧ್ವಾವತಾರವು ಅಲ್ಲಿ ಹೇಳಲ್ಪಟ್ಟಿದೆ ಎನ್ನುವುದಾದರೆ, ವಾದಿರಾಜ ಗುರುಗಳ ವಿಷಯದಲ್ಲೂ ಹಾಗೆ ವ್ಯಾಖ್ಯಾನ ಮಾಡುವುದು ಯುಕ್ತವೇ ಆಗಿದೆ. ಈ ರೀತಿಯ ವೇದ ಪುರಾಣಾದ್ಯನುಸಾರಿತ್ವವೆಂಬ ಗುಣವು ಮನ್ವಾದಿ ಸ್ಮೃತಿಗಳಿಗೆ ಹೇಗೋ ಹಾಗೆ ಆಖ್ಯಾನ ಗ್ರಂಥಕ್ಕೂ ಸಂಭವಿಸುತ್ತೆ.

ಅಪ್ರಾಮಾಣ್ಯ ಶಂಕಾನಿರಸನದಲ್ಲಿ ಸಮರ್ಥವಾದ ನಾಲ್ಕನೆಯ ಪ್ರಕಾರವೂ ಇದೆ. ಅದು ತತ್ವನಿರ್ಣಯ, ಬ್ರಹ್ಮಸೂತ್ರ ಭಾಷ್ಯ, ತಾತ್ಪರ್ಯ ನಿರ್ಣಯಾನುವ್ಯಾಖ್ಯಾನಗಳಲ್ಲಿ ತೋರಿಸಲ್ಪಟ್ಟಿದೆ. "ಯೇಚಾನುಯಾಯಿನಸ್ತೇಷಾಂ ಸರ್ವೇತೇಚ ಸದಾಗಮಾಃ | ದುರಾಗಮಾಸ್ತದನ್ಯೇಯೇ........" ಎಂಬ ತತ್ವ ನಿರ್ಣಯ ವಾಕ್ಯದಿಂದಲೂ, "ಯಚ್ಚಾನುಕೂಲವೇತಸ್ಯ ತಚ್ಚ ಶಾಸ್ತ್ರಂ ಪ್ರಕೀರ್ತಿತಂ | ಅತೋ ಅನ್ಯೋಗ್ರಂಥ ವಿಸ್ತಾರಃ ನೈವ ಶಾಸ್ತ್ರಂ ಕುರ್ವತ್ಮತತ್ ॥" ಎಂಬ ಬ್ರ.ಸೂ.ಭಾಷ್ಯ ವಾಕ್ಯದಿಂದಲೂ, ವೇದಾದಿಗಳಲ್ಲಿ ಹೇಳಿದ್ದನ್ನು ಅನುಸರಿಸಿ ಅದನ್ನೇ ಸ್ಪಷ್ಟ ಪಡಿಸಿ ಬೋಧಿಸುವ ಅನುಸಾರಿ ಗ್ರಂಥಗಳು ಪ್ರಮಾಣ ಎಂದು ಸಿದ್ಧವಾಗಿದೆ. ಅದೇ

| |
|---|
| ವೇದಾದಿಗಳಿಗೆ ಅವಿರುದ್ಧ ಪ್ರಮೇಯ ಬೋಧಕ ಗ್ರಂಥಗಳೂ ವೇದಾನುಸಾರಿ ಗ್ರಂಥಗಳು. ಹೀಗೆ ಎರಡು ವಿಧ ವೇದಾನುಸಾರಿ ಗ್ರಂಥಗಳಿವೆ. ಮನುಸ್ಮೃತಿ ಮುಂತಾದವು ಮೊದಲನೇ ವಿಧದ ವೇದಾನುಸಾರಿ ಗ್ರಂಥಗಳು. ಅನುವ್ಯಾಖ್ಯಾನ, ಸುಧಾ ಚಂದ್ರಿಕಾ, ತರ್ಕತಾಂಡವಾದಿ ಶಿಷ್ಟ ಗ್ರಂಥಗಳು ಎರಡನೆಯ ವಿಧದ ವೇದಾನುಸಾರಿ ಗ್ರಂಥಗಳು. ಅಲ್ಲೇ ಬ್ರ.ಸೂ.ಭಾಷ್ಯದ ವಾಕ್ಯದ ಅರ್ಥ ಮಾಡುವಾಗ ಪುಟ 32- ಲ್ಲಿ ನಾರಾಯಣ ತಂತ್ರಿಗಳು ಕನ್ನಡದಲ್ಲಿ ವಿವರಿಸಿದ್ದಾರೆ: “ವಿಶೇಷಾಂಶ: ಋಗಾದಿಗಳಿಗೆ ಅವಿರುದ್ಧವಾದ ಅರ್ಥವನ್ನು ಪ್ರತಿಪಾದಿಸುವ ಮನುಸ್ಮೃತ್ಯಾದಿಗಳೂ ಪುರಾಣಾದಿಗಳೂ ಇವೆಲ್ಲವೂ ಶಾಸ್ತ್ರ ಎನ್ನಿಸುತ್ತವೆ. ಇಲ್ಲಿ ಪುರಾಣ ಪದದಿಂದ ರಾಜಸ, ತಾಮಸ ಪುರಾಣಗಳನ್ನು ಗ್ರಹಿಸಬೇಕು. ಇತರ ಸಾತ್ವಿಕ ಪುರಾಣಗಳು "ಇತಿಹಾಸ ಪುರಾಣಃ ಪಂಚಮೋ ವೇದಾನಾಂ ವೇದಃ” ಎಂಬ ವಾಕ್ಯದಿಂದಲೇ ಪರಿಗೃಹೀತವಾಗಿದೆ. ಆದಿ ಪದದಿಂದ ಸರ್ವಜ್ಞಾಚಾರ್ಯಾದಿ ಶಿಷ್ಟ ಕೃತ ಗ್ರಂಥಗಳನ್ನು ತೆಗೆದು ಕೊಳ್ಳಬೇಕು. |
| ಇದೇ ವಿಷಯವು ನಿರವಕಾಶವಾಗಿ ಸ್ಪಷ್ಟವಾಗಿ ಮ.ತಾ.ನಿ. I 30 ರಲ್ಲಿದೆ: “ಋಗಾದಿಗಳು ನಾಲ್ಕು, ಪಂಚರಾತ್ರ, ಭಾರತ, ಮೂಲರಾಮಾಯಣ, ಬ್ರಹ್ಮಸೂತ್ರಗಳು ಸ್ವತಃ ಪ್ರಮಾಣವೆನ್ನಿಸುವುವು. ಇವಕ್ಕೆ ಅವಿರುದ್ಧವಾದುದು ಯಾವುದೋ ಅದು ಕೂಡ ಪ್ರಮಾಣವೇ. ಅನ್ಯಥಾ ಇಲ್ಲ. ಇವಕ್ಕೆ ವಿರುದ್ಧ ವಾದುದು ಯಾವುದೋ ಅದು ಪ್ರಮಾಣವಲ್ಲವೇ ಅಲ್ಲ' ಎಂದಿದೆ. ಇದರ ವ್ಯಾಖ್ಯಾನವಾದ ವಾದಿರಾಜಕೃತ ಭಾವಪ್ರಕಾಶಿಕಾದಲ್ಲಿ ಇದಕ್ಕೆ ಅವಿರುದ್ಧವಾದುದು ಎನ್ನುವುದರಿಂದ ಏನು ಸಂಗೃಹೀತವಾಯಿತೆಂದು ಶಂಕಿಸಕೂಡದು. ಅವೈಷ್ಣವ ಪುರಾಣಾದಿಗಳಲ್ಲಿ ವಿದ್ಯಮಾನ ವೇದಾನುಕೂಲ ವಾಕ್ಯಗಳಿಗೂ ಮತ್ತು ಇದಕ್ಕೆ ಅನುಕೂಲವಾದ ಭಾಷ್ಯ ಅನುವ್ಯಾಖ್ಯಾನಾದಿ ಶಿಷ್ಟ ಕೃತ ಗ್ರಂಥಗಳಿಗೂ ಸಂಗ್ರಹ ಯೋಗ್ಯತ್ವ ಸೂಚನೆಗಾಗಿ ಸಾರ್ಥಕವಾಗಿದೆ” ಎಂದು ಇದೆ. ಆದ್ದರಿಂದ ವೇದಾದಿ ಪ್ರಮಾಣವಿರುದ್ಧತ್ವವೂ ಒಂದು ವಿಧವಾದ ವೇದಾನುಕೂಲತ್ವವೇ. |
| ಸ್ಪಷ್ಟತರ ನಿರ್ಣಾಯಕ ವಾಕ್ಯಗಳು "ನ ವಿಲಕ್ಷಣತ್ವಾಧಿಕರಣ'ದ ಅನುವ್ಯಾಖ್ಯಾನ ಸುಧೆಗಳಲ್ಲಿ ಇವೆ. ಆ ವಾಕ್ಯಗಳು ಮೂರನೇ ಅಧ್ಯಾಯದಲ್ಲಿ ಆಗಮ ಸ್ವರೂಪ ನಿರೂಪಣ ಪ್ರಸ್ತಾವದಲ್ಲಿ ಉದಾಹೃತವಾಗಿ ವಿವರಿಸಲ್ಪಟ್ಟಿವೆ. ತಥಾಚ ಮೂಲಶಾಸ್ತ್ರಾವಿರುದ್ಧವಾದ ವಿಷಯಗಳನ್ನು ಬೋಧಿಸುವ ಗ್ರಂಥಗಳೂ ಪ್ರಮಾಣಗಳು. ಹಾಗೆ ಮೂಲಶಾಸ್ತ್ರಕ್ಕೆ ಅವಿರುದ್ಧವಾಗಿರುವುದರಿಂದ ಸ್ವಾಪ್ನವೃನ್ದಾವನಾಖ್ಯಾನವೂ ಪ್ರಮಾಣವು. ಹೀಗೆ ದ್ವಿತೀಯ, ತೃತೀಯ ಮತ್ತು ನಾಲ್ಕನೆಯ ರೀತಿಗಳಿಂದ ಆಖ್ಯಾನವು ಅಪ್ರಾಮಾಣ್ಯ ಶಂಕೆಯನ್ನು ಪರಿಹರಿಸಿ ಸ್ವಪ್ರಾಮಾಣ್ಯವನ್ನು ಸ್ಪಷ್ಟ ಪಡಿಸಿಕೊಂಡಿದೆ. ಸಂವಾದಾದಿಗಳಿಂದ ಸುದೃಢ ಪ್ರಾಮಾಣ್ಯ ನಿಶ್ಚಯವನ್ನೂ ಹುಟ್ಟಿಸುತ್ತದೆ. |
| ಆದರೂ ಅಪ್ರಾಮಾಣ್ಯ ಶಂಕಾ ನಿವೃತ್ತಿಗಾಗಿ ಈ ನಾಲ್ಕನೆಯ ರೀತಿಯನ್ನು ಅನುಸರಿಸುವುದೇತಕ್ಕೆ ಎನ್ನ ಕೂಡದು. ಪ್ರಾಮಾಣ್ಯ ವ್ಯವಸ್ಥೆ ವಿಷಯದಲ್ಲಿ ಇದೇ ಉತ್ತಮ ರಾಜಮಾರ್ಗ. ಏಕೆಂದರೆ ವೇದಾದಿಗಳು ಪ್ರಮಾಣವಾದರೂ ಅವುಗಳ ವಿಷಯದಲ್ಲಿ ಸಂದೇಹ ಉಂಟಾಗುತ್ತೆ: a) “ಯಜಮಾನಃ ಪ್ರಸ್ತರಃ” (ಯಜಮಾನನು ದರ್ಭೆಮುಷ್ಟಿಯು) ಎಂಬ ವೇದವಾಕ್ಯವು ಪ್ರಮಾಣವಲ್ಲ, ಪ್ರತ್ಯಕ್ಷ ವಿರುದ್ಧಾರ್ಥ ಪ್ರತಿಪಾದಕವಾದ್ದರಿಂದ, ತಪ್ಪಾದ ಗಣಕನ ಲೆಖ್ಖದಂತೆ; |

b) ತತ್ವಮಸ್ಯಾದಿ ವೇದವಾಕ್ಯವು ಪ್ರಮಾಣವಲ್ಲ ; ಸಾಕ್ಷನುಭವ ವಿರುದ್ಧವಾದ್ದರಿಂದ, ಗಗನ ಕಲ್ಪಿತ ಎಂಬ ವಾದದಂತೆ; c) "ಆಪಃ ಅಬ್ರುವನ್" ಇತ್ಯಾದಿ ವೇದವಾಕ್ಯವು ಪ್ರಮಾಣವಲ್ಲ, ದೃಢ ಯುಕ್ತಿ ವಿರುದ್ಧವಾದ್ದರಿಂದ 'ಗಜ ಮಾತಾಡಿತು' ಇತ್ಯಾದಿ ಕಥೆಯ ಮಾತಿನಂತೆ; d) ಸರ್ವ ವೇದಗಳೂ ಅಪ್ರಮಾಣಗಳೇ ವೇದವಾದ್ದರಿಂದ, ಪೂರ್ವೋಕ್ತ ಬಾಧಿತ ವಾಕ್ಯದಂತೆ; e) ವೇದಗಳು ಪ್ರಮಾಣವಲ್ಲ. ಜಡವಾದ್ದರಿಂದ, ಜ್ಞಾನೇಚ್ಛಾದಿ ಉಪದೇಷ್ಟೃ ಗುಣಶೂನ್ಯವಾದ್ದರಿಂದ ಘಟದಂತೆ; f) "ಇತಿಹಾಸ ಪುರಾಣಃ ಪಂಚಮೋ ವೇದಾನಾಂ ವೇದಃ" ಎಂಬ ವಾಕ್ಯದಿಂದ "ತಾಮಸ ಪುರಾಣವೆಂದು ಅರ್ಥ ಮಾಡಿದರೆ ಲಿಂಗಮೂಲಾನ್ವೇಷಣ ಕಥಾದಿಗಳೂ ಸತ್ಯವಾಗಬೇಕಾದೀತು. ತಾಮಸ ಪುರಾಣಗಳಿಗೂ ಪ್ರಾಮಾಣ್ಯಾಪತ್ತಿ; g) "ಇತಿಹಾಸ ಪುರಾಣ" ಪದದಿಂದ ಸಾತ್ವಿಕ ಪುರಾಣ ಎಂದರ್ಥವಾದರೆ, ರಾಜಸ ತಾಮಸ ಪುರಾಣಗಳಲ್ಲಿರುವ ಮತ್ತು ಇತರ ಆಗಮಗಳಲ್ಲಿರುವ ವಿಷ್ಣೋತ್ಕರ್ಷ ಮುಂತಾದ ಯೊಗ್ಯಾರ್ಥ ಬೋಧಕ ವಾಕ್ಯಗಳಿಗೂ ಪ್ರಾಮಾಣ್ಯವಿಲ್ಲವೆನ್ನಬೇಕಾಗುತ್ತೆ; h) ಇತಿಹಾಸದಲ್ಲೇ ಇರುವ ಕೈಲಾಸಯಾತ್ರೆ, ಕೃಷ್ಣ ಮರಣ ಇತ್ಯಾದಿ ಬೋಧಕ ಬಾಧಿತ ಭಾಗಕ್ಕೂ ಪ್ರಾಮಾಣ್ಯ ಒಪ್ಪಿಕೊಳ್ಳಬೇಕಾಗುತ್ತೆ; i) ಸ್ಮೃತಿಗಳಲ್ಲೂ ಕೂಡ ವೇದಗಳನ್ನು ನೋಡಿ ಹೇಳಲ್ಪಟ್ಟಿ ವ ಸಂಧ್ಯಾದಿ ವಿಷಯಕ ಸಾತ್ವಿಕ ಸ್ಮೃತಿ ವಚನಗಳಿಗೆ ಪ್ರಾಮಾಣ್ಯ ಪ್ರಾಪ್ತವಾದರೂ "ಷೋಡಶ ಪ್ರಾಣಾಯಾಮವನ್ನು ಮಾಡಿ, ಎರಡಾವರ್ತಿ ಆಚಮನ ಮಾಡಿ" ಇತ್ಯಾದಿ ರೂಪವಾಗಿರುವ ಆ ವಸಿಷ್ಠ ಹಾರೀತಾದಿಗಳ ಅವಾಂತರ ಕರ್ಮವಿಷಯಕ ವ್ಯಾಖ್ಯಾನ ಭಾಗಕ್ಕೆ ಹೇಗೆ ಪ್ರಾಮಾಣ್ಯ ಹೇಳಬೇಕು? ಏಕೆಂದರೆ ಆ ವ್ಯಾಖ್ಯಾನಾರ್ಥಗಳು ವೇದದಲ್ಲಿಲ್ಲ; j) ತಾಮಸ ರಾಜಸ ಸ್ಮೃತಿಗಳೂ ಕೂಡ "ನಾವು ವೇದಾನುಸಾರಿಗಳು" ಎಂದು ಹೇಳಿಕೊಳ್ಳುವುದರಿಂದ ಅವಕ್ಕೆ ಅಪ್ರಾಮಾಣ್ಯ ವ್ಯವಸ್ಥೆ ಹೇಗೆ? k) ಅದಲ್ಲದೆ ಶಿಷ್ಟರಿಂದ ರಚಿತವಾದ ಋಗ್ಭಾಷ್ಯ, ಋಗ್ಭಾಷ್ಯಟೀಕಾ, ಅನುವ್ಯಾಖ್ಯಾನ, ಸುಧಾ, ಭಾಷ್ಯಟೀಕಾ, ತಾತ್ಪರ್ಯ ರ್ಣಯ, ವಾದಾವಳಿ, ತರ್ಕತಾಂಡವ ಮುಂತಾದ ಗ್ರಂಥಗಳಿಗೆ ಹೇಗೆ ಪ್ರಾಮಾಣ್ಯ ಒಪ್ಪಬೇಕು? ಏಕೆಂದರೆ ಇವುಗಳಲ್ಲಿ ಹೇಳಲ್ಪಟ್ಟಿದ್ದೆಲ್ಲವೂ ವೇದದಲ್ಲಿ ಕಾಣುವುದಿಲ್ಲ. "ಸ್ಫುಟಂ ವೇದೋಕ್ತಾಭಿಧಾಯಕತ್ವ"ವು ವೇದಾನುಸಾರಿತ್ವವು. ಅಂಥ ವೇದಾನುಸಾರಿತ್ವವು ಅವುಗಳಲ್ಲಿ ಹೇಗೆ ಸಾಧನೀಯವು? l) ಭಾರತಾದಿ ದೇಶಗಳಿಗೆ ಸಂಬಂಧಿಸಿದ ಕೆಲವು ದ್ವೀಪಗಳು ಅಲ್ಲಿನ ಜನರ ಸಮೇತ ಮುಳುಗಿಹೋಗಿವೆ. ಅಂಥ ಲೌಕಿಕ ನಷ್ಟ ದ್ವಾಪಾದಿ ವಿಷಯಕ ಪ್ರಾಚೀನ ಕಾಲೀನ ಭೂಗೋಳ, ಚರಿತ್ರ, ಶಿಲಾಶಾಸ ನಾದಿಗಳಿಗೆ ಹೇಗೆ ಪ್ರಾಮಾಣ್ಯ ಸಾಧಿಸಬೇಕು? ಲೌಕಿಕ ವಿಷಯ ವಾಕ್ಯಗಳಿಗೆ ಪ್ರಾಮಾಣ್ಯವೇ ಇಲ್ಲವೆಂದು ಅಂಗೀಕರಿಸಿದರೆ ಆಗಮತ್ವ ವ್ಯಾಘಾತ ಬರುತ್ತೆ. ಅಬೋಧಕತ್ವರಹಿತ ವಾಕ್ಯಗಳಿಗೆ ನಿಷ್ಕಾರಣವಾಗಿ ವಿಪರೀತ ಬೋಧಕತ್ವ ಆರೋಪಿಸುವುದು ಆಯುಕ್ತವಾದುದರಿಂದ, ಅವುಗಳಲ್ಲಿ ಪ್ರಾಮಾಣ್ಯ ಅಪ್ರಾಮಾಣ್ಯಾ ಭಾವಗಳು ಅನುಭವಸಿದ್ಧವೂ ಆದುದರಿಂದ ಅಂಥ ಲೌಕಿಕ ವಾಕ್ಯಗಳಿಗೂ ಪ್ರಾಮಾಣ್ಯ ಒಡಂಬಡಬೇಕು. ಅಂಥವುಗಳ ವಿಷಯದಲ್ಲಿ ಆಪ್ರಾಮಾಣ್ಯ ಶಂಕೆ ಬಂದರೆ ಹೇಗೆ ಪರಿಹರಿಸಬೇಕು? ಇತ್ಯಾದಿ ಪ್ರಶ್ನೆಗಳಿಗೆ ಉತ್ತರವಾಗಿ ಪ್ರಾಮಾಣ್ಯ ಶಂಕಾ ಪರಿಹಾರಕ್ಕಾಗಿ ಒಂದು ಪ್ರಯೋಜಕ ವಿಶೇಷವನ್ನು ಕಂಡುಹಿಡಿಯಬೇಕು.

ಅಂಥ ಪ್ರಯೋಜಕವಿದೆ. ಪೂರ್ವೋಕ್ತ ಎಲ್ಲಾ ಹನ್ನೆರಡು ಶಂಕೆಗಳನ್ನೂ ಇತರ ಸಂದೇಹಗಳನ್ನೂ ಚೆನ್ನಾಗಿ ಪರಿಹರಿಸುವ ಉತ್ತಮ ಪ್ರಯೋಜಕವು ಅನುವ್ಯಾಖ್ಯಾನದಲ್ಲಿ ಸ್ಪಷ್ಟವಾಗಿ ಹೇಳಲ್ಪಟ್ಟಿದೆ: "ಪೀಪೀಲಿಕಾ ಲಿಪಿಶ್ಚಾಪಿ ಪ್ರಮಾಣಮವಿರೋಧತಃ" (ಪಿಪೀಲಿಕಾ ಲಿಪಿಯೂ ಕೂಡ ಪ್ರಮಾಣ ವಿರೋಧವಿಲ್ಲದಿದ್ದರೆ ಪ್ರಮಾಣವೇ) ಇತ್ಯಾದಿ ನವಿಲಕ್ಷಣತ್ವಾಧಿ ಕರಣದ ವಾಕ್ಯಗಳಲ್ಲೂ, ಮ.ತಾ.ನಿ. I 30-32 ಶ್ಲೋಕಗಳಲ್ಲೂ ಈ ವಿಷಯವು ನಿಶ್ಚಿತವಾಗಿದೆ. ನಿರ್ಣಯದ I 32 ನೇ ಶ್ಲೋಕದ "ಅನುಕೂಲತಃ" ಎಂಬ ಪದಕ್ಕೆ ಅನುಕೂಲತ್ವಾತ್" ಎಂದೇ ವಾದಿರಾಜಿಯ ವ್ಯಾಖ್ಯಾನವಿದೆ. ಆದರೆ I 56-57 ಶ್ಲೋಕ ವ್ಯಾಖ್ಯಾನ ಸಮಯದಲ್ಲಿ "ಅನುಕೂಲತ್ವವೆಂದರೆ ಅವಿರುದ್ಧ" ವೆಂದೇ ಸೂಚಿತವಾಗಿದೆ.

ಕಿಂಚ ಅಪ್ರಾಮಾಣ್ಯಶಂಕಾ ನಿರಸನ ಪ್ರಕಾರಗಳು ಮೂರೇ ಎಂದು ಮಧ್ವಗುರುಗಳು ಎಲ್ಲೂ ತಮ್ಮ ಗ್ರಂಥಗಳಲ್ಲಿ ಪರಿಗಣಿಸಿ ಬರೆದಿಲ್ಲ. ಬಹು ಅಪ್ರಾಮಾಣ್ಯಶಂಕಾ ನಿವಾರಕ ಉಪಾಯಗಳೇ ಉಲ್ಲಿಖಿತವಾಗಿವೆ: ಆಪ್ತವಾಕ್ಯತ್ವ ನಿಮಿತ್ತದಿಂದ, ನಿಯಮವಾಗಿ ಉಕ್ತ ಫಲ ಪ್ರಾಪಕವಾದ್ದರಿಂದ, ಅನಾದಿಕಾಲ ಪರಿಗ್ರಹ ಸಿದ್ಧವಾದ್ದರಿಂದ ಶ್ರುತಿಗೆ ಪ್ರಾಮಾಣ್ಯ ಕಂಡಿದೆ ಎಂದಿದ್ದಾರೆ. ಶಿಷ್ಟ ವ್ಯಾಸಾದಿ ದೊಡ್ಡವರಿಂದ ಪರಿಗೃಹೀತವಾಗಿರುವುದರಿಂದ, ಸರ್ವಾಭಿಮತತತ್ವವಿದ್ದುದರಿಂದ, ಅದೋಷತ್ವ ನಿಮಿತ್ತದಿಂದ, ಅಪ್ರಾಮಾಣ್ಯ ಕಾರಣ ದೋಷ ಶೂನ್ಯತ್ವದಿಂದ, ಅಪ್ರತಿಪತ್ತಿ ವಿಪ್ರತಿಪತ್ತಿಗಳನ್ನು ಹುಟ್ಟಿಸದ ವಾಕ್ಯವಾಗಿರುವುದರಿಂದ, ಮಹಾಜನರಿಂದ ಆದೃತವಾಗಿರುವುದರಿಂದ ಇತ್ಯಾದಿ ಅನೇಕ ಉಪಾಯಗಳಿವೆ. ವಾದಿ ಪ್ರತಿವಾದ್ಯುಭಯ ವರ್ಗದಿಂದ ಸಂಪ್ರತಿಪನ್ನವಾದ್ದರಿಂದ ಎಂದೂ ಕೆಲವು ಲೌಕಿಕ ವಿವಾದಗಳಲ್ಲಿ ಅಂಗೀಕೃತವಾಗಿದೆ. ಬಹು ಸಂಖ್ಯಾಯುಕ್ತ ಜನತೆಯಿಂದ ಮಾನ್ಯವಾದ್ದರಿಂದ ಎಂದು ಬಾಹುಳ್ಯವೂ ಒಮ್ಮೊಮ್ಮೆ ಪ್ರಾಮಾಣ್ಯ ನಿಶ್ಚಾಯಕವಾಗಿ ಕಂಡಿದೆ. ಸ್ವತಃ ಪ್ರಮಾಣ ಶಾಸ್ತ್ರಾವಿರುದ್ಧತ್ವದಿಂದ, ಶಾಸ್ತ್ರಾನುಸಾರಿತ್ವ ಎಂದರೆ ಸ್ಫುಟವಾಗಿ ಶಾಸ್ತ್ರೋಕ್ತವನ್ನೇ ವಿಸ್ತಾರವಾಗಿ ಬೋಧಿಸುವುದರಿಂದ, ವೇದಾದಿಗಳಲ್ಲಿ ನಾಮ ನಿರ್ದೇಶ ಮಾಡಿ ಪ್ರಮಾಣವೆಂದು ಪರಿಗೃಹೀತವಾಗಿರುವುದರಿಂದ, [ದೃಷ್ಟಾಂತ "ವಾಲ್ಮೀಕಿ ರಾಮಾಯಣ" ವಿಷಯದಲ್ಲಿ] ಋಜುಗಣಸ್ಥರಿಂದ ಪ್ರೋಕ್ತವಾದ್ದರಿಂದ, ಬ್ರಹ್ಮವರ, ರುದ್ರವರ ಇತ್ಯಾದಿ ದೇವತಾವರ ಪೂರ್ವಕವಾಗಿ ಪ್ರಕಟಿತವಾದ್ದರಿಂದ, ಪಾಷಂಡ ಶಾಸ್ತ್ರಕ್ರಿಯಾ ಯೋಗಾಧಿ ನಾಶಕಶಕ್ತಿಯುಳ್ಳ ವಾಕ್ಯವಾದ್ದರಿಂದ, ಉಪಜೀವ್ಯ ಸರ್ವ ಪ್ರಮಾಣಾವಿರುದ್ಧತ್ವ ಕಂಡಿದ್ದರಿಂದ, ಇತ್ಯಾದಿ ರೂಪದಿಂದಲೂ ಅನೇಕ ಪ್ರಕಾರಗಳು ಪ್ರಮಿತವಾಗಿವೆ [ಪುಟ 38ರಲ್ಲಿ ಗೀತಾ ಭಾ., ಬೃ.ಭಾ. ವಾಕ್ಯಗಳು ಉದಾಹೃತವಾಗಿವೆ] ಇಷ್ಟು ಪ್ರಕಾರಗಳಿದ್ದರೂ ಇವೆಲ್ಲಾ ಅಪ್ರಾಮಾಣ್ಯಶಂಕಾ ನಿರಸನ ಕಾರ್ಯದಲ್ಲಿ ಸಮಸಾಮರ್ಥ್ಯ ಹೊಂದಿಲ್ಲ. 'ಉಪಜೀವ್ಯ ಸರ್ವ ಪ್ರಮಾಣವಿರುದ್ಧ ವಾಗಿರುವುದರಿಂದ' ಎಂಬ ಕಾರಣವೇ ಪ್ರಧಾನ ಕಾರಣವು. "ವಿರೋಧಾ ದರ್ಶನಾತ್ಮಸ್ಮಾದ್ವೇದಪ್ರಾಮಾಣ್ಯಮಿಷ್ಯತೇ" ಎಂದು ಅನುವ್ಯಾಖ್ಯಾನ ವಚನವೂ ಅದರ ಸುಧಾಟೀಕೆಯೂ ಈ ವಿಷಯದಲ್ಲಿ ಸಾಧಕವಾಗಿದೆ.

ಪ್ರಕೃತ ಆಖ್ಯಾನವು ಬಳಿತ್ಥಾ ಸೂಕ್ತ, ಋಕ್ಸಂಹಿತಾದಿಗಳು ತೋರಿಸಿದ ಅರ್ಥವನ್ನೇ ಹೊಗಳುತ್ತೆ. ಶಾಸ್ತ್ರಾಸಿದ್ಧ ಋಜುತ್ವ ಪ್ರತಿಪಾದಕತ್ವವು ಅದಕ್ಕಿಲ್ಲ. ಉಪಜೀವ್ಯ ಪ್ರಮಾಣಾವಿರುದ್ಧತ್ವವೆಂಬ ಪ್ರಧಾನ ಪ್ರಯೋಜಕವೂ ಅದಕ್ಕಿದೆ.

ಆದ್ದರಿಂದ ಅದರ ಪ್ರಾಮಾಣ್ಯ ವಿಷಯದಲ್ಲಿ ಯಾವ ಶಂಕೆಯನ್ನೂ ಮಾಡಬೇಕಾದ್ದಿಲ್ಲ. ಹಿಂದೆ ಹೇಳಿದಂತೆ "ಸ್ವತಃ ಪ್ರಮಾಣಾತ್........ಅವಿರೋಧಾತ್" ಎಂದು ಆಚಾರ್ಯರು ಪ್ರಾಮಾಣ್ಯಕ್ಕಾಗಿ ಪುನಃ ಪುನಃ ವಾದಿಸುತ್ತಾರೆ. ಅದರಂತೆ ನಾವೂ "ವೃನ್ದಾವನಾಖ್ಯಾನವು ಸ್ವತಃ ಪ್ರಮಾಣವು. ಅವಿರೋಧವೂ ಸಹ ಇರುವುದರಿಂದ" ಎಂದು ಹೇಳಬಹುದು. ಅಭ್ಯುಚ್ಚಯ ರೀತಿಯಿಂದ ವಿಚಾರಿಸಿದರೆ, ಬೇಕಾದಷ್ಟು ಇತರ ಸಾಧಕಗಳೂ ಇವೆ. ಅವನ್ನೆಲ್ಲಾ ಹಿಂದೆ ಹೇಳಿದ್ದರೂ ಈಗ ಪುನಃ ಸಂಗ್ರಹಿಸಿ ನಿರೂಪಿಸಿ ಈ ಪ್ರಕರಣವನ್ನು ಮುಗಿಸುತ್ತೇನೆ. ಅವು ಯಾವುವೆಂದರೆ- "ಅಪ್ರಾಮಾಣ್ಯಕಾರಣದೋಷಶೂನ್ಯತ್ವ, ನಿಯಮೇನ ಫಲೋಫಲಬ್ಧಿ, ಶಿಷ್ಟ ಪರಿಗೃಹೀತತ್ವಾತ್, ವೇದಾನುಸಾರಿ ತತ್ವಪ್ರತಿಪಾದಕತ್ವ, ಸಚ್ಛಾಸ್ತ್ರಕ್ಕೆ ವೇದ ಬ್ರಹ್ಮಸೂತ್ರ, ಪಂಚರಾತ್ರಾದಿಗಳ ಮಹಾ ತಾತ್ಪರ್ಯಕ್ಕೆ ಸಹ ಅವಿರೋಧಿಯಾಗಿರೋಣ, ಮೋಕ್ಷಹೇತುಭೂತ ಜ್ಞಾನಜನಕತ್ವ, ಪರಶುಕ್ಲ ಋಜು ಪ್ರೋಕ್ತತ್ವ, ಆನುಕೂಲ್ಯತ್ರಯೋಪೇತತ್ವ, ವಿಷಯಾದ್ಯಬಂಧ ಚತುಷ್ಟಯಯುಕ್ತತ್ವ, ದೇವಕಾರ್ಯ ನಿರ್ವಾಹಕ್ಕೋಸ್ಕರ ಪ್ರಚಾರ ಮಾಡಲ್ಪಟ್ಟಿರೋಣ, ದೇವಲೋಕದಲ್ಲಿ ದೇವತೆಗಳು, ದೇವಸ್ತ್ರೀಯರು ಮತ್ತು ದೇವರಿಂದಲೂ ಸನ್ಮಾನಿತರಾಗಿರೋಣ, ಪಾರಾಯಣ ಮಾಡುವವರಿಗೆ ಮನಃ ಶುದ್ಧ್ಯಾದಿ ಅಭೀಷ್ಟದಾಯಕತ್ವ, ಮಧ್ವಶಾಸ್ತ್ರದ ಉತ್ಕರ್ಷವನ್ನೇ ಪ್ರತಿಪಾದನೆ ಮಾಡೋಣ, ಇವೇ ಮುಂತಾದ ಅನೇಕ ಅಪ್ರಾಮಾಣ್ಯ ಶಂಕಾ ನಿವಾರಕ ಧರ್ಮಗಳು ಆಖ್ಯಾನದಲ್ಲಿ ತುಂಬಿ ತುಳುಕುತ್ತಿವೆ. XI 52 ರಲ್ಲಿ 'ಯೋನವಕ್ತೀ ಚ ಮತ್ಪದ್ಯಂ ತದರ್ಥಂ ವಾ ಮಾದಶ್ರಯೀ ॥ ತಸ್ಯಾಶುಭಂ ಭವತ್ಯೇವ ಪಶ್ಯಮೇ ತಪಸಃ ಫಲಂ' ॥ ಎಂದಿದೆ. ಮಾಧ್ವರಾಗಿ, ವಾದಿರಾಜಸ್ವಾಮಿಗಳು ಜ್ಞಾನಿಗಳು ದೊಡ್ಡವರು ಎಂದು ಸಹ ಒಪ್ಪಿಕೊಂಡು, ಕೆಲವರು ಈ ಗ್ರಂಥವನ್ನು ತಿರಸ್ಕರಿಸುತ್ತಾರೆ; ಅಂಥವರಿಗೆ ಉತ್ತಮಾವಜ್ಞೆಯಿಂದ ಅನಿಷ್ಟ ತಪ್ಪಿದ್ದಲ್ಲವೆಂದೂ, ಚಂದ್ರದರ್ಶನ ಗಣೇಶಚತುರ್ಥಿ ದಿನ ಮಾಡಿದಂತೆ, ಅದರ ತಿರಸ್ಕಾರ, ಅಪ್ರಾಮಾಣ್ಯ ಶಂಕೆ ದುಃಖಕ್ಕೆ ಸೂಚಕವೆಂದೂ ಈ ಪದ್ಯ ಸೂಚಿಸುತ್ತೆ. ಒಂದು ಗ್ರಂಥದ ಪ್ರಾಮಾಣ್ಯ ಸಾಧನೆಗೆ ಇನ್ನೇನು ತಾನೇ ಆಗಬೇಕು? ಹೀಗಿದ್ದರೂ ಮನುಷ್ಯ ಮಾತ್ರ ಕೃತವಾದದ್ದೆಂದು ಭ್ರಮಿಸಿ, ಸ್ವಪ್ನದ ಪದ್ಯಕ್ಕೆ ಎಷ್ಟು ಮಹತ್ವವಿರಬಹುದೆಂದು ಅದನ್ನು ಅನಾದರಿಸಿ, ಅಪ್ರಾಮಾಣ್ಯವನ್ನು ಆಪಾದಿಸಿದರೆ, ನೂತನ ಪುರುಷ ಮಾತ್ರನಿಂದ ರಚಿತವಾದ ಪೂರ್ವಪಕ್ಷ ಗ್ರಂಥವೇ ಏತಕ್ಕೆ ಅಪ್ರಮಾಣವಾಗಬಾರದು ಎಂಬ ಪ್ರತಿಬಂದೀ ರೂಪವಾದ ತರ್ಕಕ್ಕೆ ಪೂರ್ವಪಕ್ಷದವರು ಉತ್ತರ ಕೊಡಲು ಸಾಧ್ಯವಿಲ್ಲ. ಚಾತುರ್ಮಾಸ್ಯ ಕಲ್ಪ ವರಾಹ ಪುರಾಣ ಅಧ್ಯಾಯ 24 ರಲ್ಲೂ ಸ್ವಪ್ನದಲ್ಲಿ ಬ್ರಾಹ್ಮಣರು ಉಪದೇಶ ಮಾಡಿದರೆ ಸತ್ಯವಾಗುತ್ತೆ ಎಂದಿದೆ; 'ಪತ್ನಿ ಉವಾಚ ವದೇತ್ಸ್ವಪ್ನೇ ಬ್ರಾಹ್ಮಣೋ ದೇವತಾಥವಾ । ತತ್ತಥೈವೇತಿ ವಿಜ್ಞೇಯಂ ತಸ್ಮಾತ್ಪನ ಮಹಿಮಿಮಾಂ ॥8॥ ತತಃ ಖನಿತ್ರ ಮಾದಾಯ ಚಖಾನ ತಾರಣೋ ಮುನಿಃ ॥ ಧನ ಕುಂಭಂ ದದರ್ಶಾತ್ರ ದೃಷ್ಟ್ವಾ ಹೃಷ್ಟಮನಾ ಅಭೂತ್ ॥9॥" ದರಿದ್ರತೆಯಿಂದ ತಾರಣನು ಕಷ್ಟ ಪಡುತ್ತಿದ್ದಾಗ ಆತನಿಗೆ ಒಂದು ದಿನ ರಾತ್ರಿಯಲ್ಲಿ ಸ್ವಪ್ನದಲ್ಲಿ ವಿಪ್ರ ಕಾಣಿಸಿಕೊಂಡು ಒಂದು ಸ್ಥಳ ತೋರಿಸಿ, "ಅಲ್ಲಿ ಅಗಿ, ಚಿನ್ನ ಸಿಗುತ್ತೆ" ಎಂದು ಹೇಳಿದನು. ತಾರಣನು ಸ್ವಪ್ನದಿಂದ ಎಚ್ಚೆತ್ತು ಪತ್ನಿಗೆ ಹೇಳಲು, ಆ ಧರ್ಮಪತ್ನಿಯು 'ಸ್ವಪ್ನದಲ್ಲಿ ಬ್ರಾಹ್ಮಣರು ಹೇಳಿದ್ದು ಸತ್ಯವಾಗುತ್ತೆ, ಅಗಿಯಿರಿ" ಎಂದು

ಪ್ರೋತ್ಸಾಹಿಸಿದಳು. ತಾರಣನು ಭೂಮಿಯನ್ನು ಅಗೆದು ಚಿನ್ನದ ನಾಣ್ಯಗಳಿಂದ ತುಂಬಿದ ಕುಂಭವನ್ನು ನೋಡಿ, ಅದನ್ನು ಹೊಂದಿ ಸಂತೋಷಪಟ್ಟನು ಎಂದಿದೆ. ಆಖ್ಯಾನ ಗ್ರಂಥವೂ ಸಂಸಾರದಲ್ಲಿ ಅನೇಕ ದುಃಖಗಳಿಂದ ಕ್ಲೇಶಹೊಂದಿದ ವಿಷ್ಣು ಭಕ್ತರಿಗೆ ದ್ವೈತಶಾಸ್ತ್ರೋಕ್ತ ಪ್ರಮೇಯ ಬೋಧಿಸಿ, ಪಾಪ ಪರಿಹಾರ ಮಾಡಿ ಅಭೀಷ್ಟ ಪಾಪಕವಾದ ಸಾಧು ಗ್ರಂಥ. ಅದಕ್ಕೆ ಅಪ್ರಾಮಾಣ್ಯ ಹೇಳಿದರೆ ಆ ಅಪ್ರಾಮಾಣ್ಯ ವಿರೋಧಿಗಳ ಮಾತಿಗೇ ಬಂದು ಸ್ವಾತ್ಮಘಾತವಾಗುತ್ತ.

**45. ಆಗಮ ವಿರೊಧ ವಿಚಾರ: ಪುಟ 23-11**

**ಉಕ್ತಿ:**

"ಆಖ್ಯಾನ ಗ್ರಂಥಕ್ಕೆ ಅದೇ ಪ್ರಮಾಣವೆಂದೂ ಹೇಳಲಾಗುವುದಿಲ್ಲ. ಆತ್ಮಾಶ್ರಯತ್ವ ದೋಷ ಪ್ರಸಕ್ತವಾಗುತ್ತೆ"

**ಪ್ರತ್ಯುಕ್ತಿ :**

ವೇದ ಪ್ರಾಮಾಣ್ಯ ವಿಷಯದಲ್ಲಿ ತತ್ವನಿರ್ಣಯದಲ್ಲೂ ಸೂತ್ರ ಭಾಷ್ಯದಲ್ಲೂ "ವಾಚಾ ವಿರೂಪ ನಿತ್ಯಯಾ" ಎಂಬ ವೇದವಾಕ್ಯವೇ ಆಚಾರ್ಯರಿಂದ ಪ್ರಮಾಣವಾಗಿ ಹೇಳಲ್ಪಟ್ಟಿದೆ. ಹಾಗೆ ಉದಾಹರಿಸುವುದು ಸಾಧುವೆಂದೂ ಟೀಕಾಚಾರ್ಯರಿಂದ **[ಅಧ್ಯಾಯ 13 ರಲ್ಲಿ II 1-4 ತ.ಪ್ರ ವಾಕ್ಯಗಳು ಉದಾಹೃತವಾಗಿವೆ]** ಸಮರ್ಥಿತವಾಗಿದೆ. ಶ್ರೀಮದಾಚಾರ್ಯರ ಮತದಲ್ಲಿ "ಸ್ವಾಧ್ಯಾಯೋ ಅಧ್ಯೇತವ್ಯಃ" ಇತ್ಯಾದಿ ವೇದವಾಕ್ಯವು ಸ್ವವಿಷಯದಲ್ಲೂ ಸ್ವತಃ ಪ್ರಮಾಣವು. ಸೂರ್ಯನು ಸ್ವತಃ ಪ್ರಕಾಶರೂಪನು, ಅನ್ಯರನ್ನು ತನ್ನ ಪ್ರಕಾಶದಿಂದ ತೋರಿಸುವನು; ಹಾಗೆ ಸ್ವಸ್ವರೂಪವನ್ನೂ ತನ್ನ ಪ್ರಕಾಶದಿಂದ ತೋರಿಸುವನು. ಪ್ರಮಾಣವಿರೋಧ ಇಲ್ಲದ್ದರಿಂದ ಆತ್ಮಾಶ್ರಯತ್ವ ದೋಷವಿಲ್ಲ. ಪ್ರಮಾಣವಿರುದ್ಧ ಸ್ವಸ್ಕಂಧಾರೋಹಣಾದಿ ವಿಷಯಗಳಲ್ಲಿ ಅದು ಹೇಳಲ್ಪಡಬೇಕು. ಅಂಥ ಆತ್ಮಾಶ್ರಯತ್ವ ಇಲ್ಲಿ ಪ್ರಸಕ್ತವಾಗಿಲ್ಲ. ಇದರ ಮೇಲೆ ಆಗಮವು ಸರ್ವಾರ್ಥ ಪ್ರತಿಪಾದಕವು. ಅದು ತನ್ನ ವಿಷಯದಲ್ಲಿ ಏನನ್ನೂ ಪ್ರತಿಪಾದಿಸುವುದಿಲ್ಲವೆಂದು ಏತಕ್ಕೆ ಸಂಕೋಚ ಮಾಡಬೇಕು? ಸರ್ವಜ್ಞಾಚಾರ್ಯರೇ ತಮ್ಮ ವಾಕ್ಯ ಪ್ರಾಮಾಣ್ಯ ವಿಷಯದಲ್ಲಿ "ನಾಸ್ಮದುಕ್ತಿಸದೃಶಂ ಹಿತರೂಪಂ" ಎಂದು ಹೇಳಿಲ್ಲವೇನು? ಶ್ರೀಕೃಷ್ಣದೇವರೇ ತನ್ನಲ್ಲಿ ಅವತಾರ ಕಾಲದಲ್ಲಿ ದೇವಕೀದೇವಿಗೆ ಆಕೆಯ ಪೂರ್ವಜನ್ಮದ ವೃತ್ತಾಂತಾದಿಗಳನ್ನು ಹೇಳಿ "ಸತ್ಯಂ ಮೇವ್ಯಾಹೃತಂ ಸತಿ" ಎಂದರೆ ನನ್ನ ಮಾತು ಸುಳ್ಳಲ್ಲ, ಎಂದು ಹೇಳಿಲ್ಲವೇನು?

**46. ಆಗಮ ವಿರೋಧ ವಿಚಾರ : ಪುಟ 23-12**

**ಉಕ್ತಿ:**

"ವೃನ್ದಾವನಾಖ್ಯಾನದಿಂದಲೇ ಋಜುತ್ವ ಸಿದ್ಧಿಯನ್ನು ಅಭಿಲಷಿಸುವುದಾದರೆ, ಆಖ್ಯಾನ ಪ್ರಾಮಾಣ್ಯ ಸಿದ್ಧಿಯಾದರೆ ಗುರುರಾಜ ಋಜುತ್ವ ಸಿದ್ಧಿ, ಗುರುರಾಜ ಋಜುತ್ವ, ಸಿದ್ಧಿಯಾದರೆ ಆಖ್ಯಾನ ಪ್ರಾಮಾಣ್ಯ ಸಿದ್ಧಿ ಎಂದು ಅನ್ಯೋನ್ಯಾಶ್ರಯ ದೋಷವಿದೆ." - ಇತಿ.

ಪ್ರತ್ಯುಕ್ತಿ: ದ್ವೈತ ಸಿದ್ಧಾಂತದಲ್ಲಿ ವಾಕ್ಯ ಪ್ರಾಮಾಣ್ಯಕ್ಕೆ ಸ್ವತಸ್ತ್ವವಿದೆ. ಆದ್ದರಿಂದ 'ಆಖ್ಯಾನಕ್ಕೆ ಪ್ರಾಮಾಣ್ಯ ಸಿದ್ಧವಾದರೆ' ಎಂಬ ಆರಂಭವೇ ಅಶಾಸ್ತ್ರೀಯ, ಕರಣ ಪ್ರಾಮಾಣ್ಯಕ್ಕೆ ಉತ್ಪತ್ತಿಯಲ್ಲಿ ಸ್ವತಸ್ತ್ವವು ಅನುಭವ ಸಿದ್ಧವಾಗಿದೆ. ಬಾಧಕಾಭಾವವೆಂಬ ಸಹಕಾರಿ ಇದೆ. ಅದ್ವೈತಿಗಳಿಂದಲೂ ಕೂಡ ಪ್ರಾಮಾಣ್ಯಕ್ಕೆ ಸ್ವತಸ್ತ್ವವು ಅಂಗೀಕೃತವಾಗಿದೆ. ಅಂಥ ನಿಯಮದ ತ್ಯಾಗವು ಉಚಿತವಲ್ಲ. ಆದ್ದರಿಂದ ಆಖ್ಯಾನವು ಸ್ವಸ್ವಭಾವದಿಂದಲೇ ಪ್ರಮಾಣವಾಗಿದೆ. ಸ್ವಪ್ರಭಾವದಿಂದಲೇ ಋಜುತ್ವಾದಿ ಬೋಧಕವಾಗಿದೆ. "ಆಖ್ಯಾನಕ್ಕೆ ಬಾಧಕವಿಲ್ಲದಿದ್ದರೂ ಅಪ್ರಾಮಾಣ್ಯ ಒಪ್ಪಿಕೊಂಡರೆ ಋಜುತ್ವವು ಸುಳ್ಳಾಗುತ್ತೆ. ಋಜುತ್ವವು ಸುಳ್ಳೇ ಎಂದು ಸುಮ್ಮ ಸುಮ್ಮಗೆ ಒಪ್ಪಿಕೊಂಡರೆ ಆಖ್ಯಾನವು ಅಪ್ರಮಾಣವೆಂದು ಸಿದ್ಧಿಸುತ್ತೆ" ಎಂದು ವಾದಿಸಬಹುದಾದ್ದರಿಂದ ಪೂರ್ವಪಕ್ಷ ಗ್ರಂಥಕಾರರಿಗೇ ಅನ್ಯೋನ್ಯಾಶ್ರಯವು ದುರ್ವಾರವು.

ಇದಲ್ಲದೆ ವಾ.ಗು.ಚ. ಮುಂತಾದ ಸ್ವಭಿನ್ನ ಬಹುಕಾರಣಗಳಿಂದಲೂ ಆಖ್ಯಾನ ಪ್ರಾಮಾಣ್ಯವು ಪೂರ್ವ ಪ್ರಕರಣದಲ್ಲೇ ಉಪಪಾದಿತವಾಗಿದೆ. ಐತಿಹ್ಯ, ಜ್ಞಾನಿ ಕೀರ್ತನಾದಿ ಸಂವಾದ ಸಾಹಿತ್ಯವೂ ನಿರೂಪಿತವಾಗಿದೆ.

**47. ಆಗಮ ವಿರೋಧ ವಿಚಾರ : ಪುಟ 23-14**

**ಉಕ್ತಿ:**

"ನಿಶ್ಚಿತ ಆಪ್ತಿಮೂಲತ್ವದಿಂದ ಅಖಾನದ ಪ್ರಾಮಾಣ್ಯ ಸಾಧಿಸಲಾಗುವುದಿಲ್ಲ. ಆಪಿ ನಿಶ್ಚಯಕ್ಕೂ ಅಂತತಃ ವೇದಾನುಸರಣೆ ಇಲ್ಲದೆ ಶಕ್ಯವಾಗುವುದಿಲ್ಲ" ಇತಿ.

**ಪ್ರತ್ಯುಕ್ತಿ :**

ಆಪ್ತಿ ನಿಶ್ಚಯಾದಿ ಗುಣ ನಿರಪೇಕ್ಷವಾಗಿ ಆಖ್ಯಾನ ವಾಕ್ಯವು ಸ್ವತಃ ಪ್ರಮಾಣವು ಎಂದು ಮಧ್ವಸಿದ್ಧಾಂತವಿದೆ. "ಸತ್ಪ್ರಮಾಣಾವಿರೋಧ" ವಿದೆಯಾದ್ದರಿಂದ ಅನಾಪ್ತಿ ಮೂಲತ್ವಾದಿ ದೋಷಪ್ರಾಪ್ತಿ ಊಹಿಸಲಿಕ್ಕೇ ಅವಕಾಶವಿಲ್ಲ. "ದೋಷಜನ್ಯತ್ವಂ ಚ ಬಲವತ್ಪ್ರಮಾಣ ವಿರೋಧಾದೇವ ಜ್ಞಾಯತೇ" ಎಂದು ತತ್ವನಿರ್ಣಯ ಟೀಕಾವಾಕ್ಯವು ಪೂರ್ವದಲ್ಲೇ ತೋರಿಸಲ್ಪಟ್ಟಿದೆ. ಪ್ರಮಾಣ ವಿರೋಧ ಕಂಡರೇನೇ ದೋಷ ಪ್ರಸಕ್ತಿ ಚಿಂತಿಸಬೇಕೆಂದು ಅದರ ಅರ್ಥ.

ಕಿಂಚ "ಯಚ್ಚಾನುಕೂಲಮೇತಸ್ಯ ತಚ್ಚ ಶಾಸ್ತ್ರಂ ಪ್ರಕೀರ್ತಿತಂ" ಎಂಬ ಶಾಸ್ತ್ರೋಕ್ತ ನ್ಯಾಯದಿಂದಲೂ ಆಖ್ಯಾನವು ವೇದಾನುಸಾರಿ ಶಾಸ್ತ್ರವು. "ಯದ್ವೈಕಿಂಚನ ಮನುರವದತ್ತದ್ಭೇಷಜಂ" ಎಂದು ವೇದದಲ್ಲಿ ಹೊಗಳಲ್ಪಟ್ಟ ಪರಶುಕ್ಲ ಋಜುಗಳಿಂದ ಉಪದಿಷ್ಟವಾದ್ದರಿಂದಲೂ ಆಖ್ಯಾನವು ವೇದಾನುಸಾರಿ ಶಾಸ್ತ್ರವು. ಪುಟ 224 ತ.ನಿ.ಟೀಕೆಯಲ್ಲಿ "ನಚ ಮನ್ವಾದಿಷ್ವಾಶ್ವಾಸೋದೃಶ್ಯತೇ ಇತಿ ವಾಚ್ಯಂ । ಅಪೌರುಷೇಯವಾಕ್ಯ ಮೂಲನಿಶ್ಚಯೇನೈವ ತತ್ರಾಪ್ಯಾಶ್ವಾಸಾತ್" ಎಂದು ಮೂಲವೇದದ ಸಂಬಂಧ ತಿಳಿದಿದ್ದರಿಂದ ಮನುಸ್ಮೃತಿಗೆ ಪ್ರಾಮಾಣ್ಯ ಒಪ್ಪಿದ್ದಾರೆ. ಆಖ್ಯಾನಕ್ಕೂ ಹೀಗೆ ಬಹು ಪ್ರಕಾರವಾಗಿ ವೇದಮೂಲತ್ವ ತೋರಿಬರುತ್ತೆ, ಆಖ್ಯಾನೋಕ್ತ ವಿಷಯಗಳು ವೇದೋಕ್ತ ವಿಷ್ಣೋತ್ತಮತ್ವಾದಿಗಳು. ಆಖ್ಯಾನದ ಉಪದೇಶಕರು ವೇದದಲ್ಲಿ ಪರಶುಕ್ಲತ್ವ ನಿಮಿತ್ತದಿಂದ ಸ್ತುತರಾದ ಮುಖ್ಯತಃ ಮನುಶಬ್ದ ವಾಚ್ಯರಾದ ಋಜುದೇವತೆಗಳು. ವೇದಾದಿ ಮೂಲ ಪ್ರಮಾಣಾ ವಿರುದ್ಧತ್ವದಿಂದಲೂ, ಉಪಜೀವ್ಯವೇದ

ಋಕ್ಸಂಹಿತಾದಿ ಆಗಮಾವಿರುದ್ಧತ್ವದಿಂದಲೂ ಆಖ್ಯಾನವು ವೇದಾನುಸಾರಿ ನಿರ್ದೋಷ ಶಾಸ್ತ್ರವಾಗಿದೆ. ಅದರ ಆಪ್ತಿಮೂಲತ್ವ ನಿಶ್ಚಿತವಾಗದಿದ್ದರೂ ಪ್ರಾಮಾಣ್ಯಕ್ಕೆ ತೊಂದರೆ ಇಲ್ಲ.

ಕಿಂಚ "ಪ್ರಥಮೋ ಹನುಮನ್ನಾಮ ದ್ವಿತೀಯೋ ಭೀಮ ಏವ ಚ ಪೂರ್ಣಪ್ರಜ್ಞಸ್ತೃತಿಯಸ್ತು ಭಗವತ್ಕಾರ್ಯ ಸಾಧಕಃ; ಬಲಾದ್ಯಂ ಭೃಗುಣಾ ದೃಷ್ಟಂ ಪ್ರಾಣಾಗ್ನೇಃ ಸೂಕ್ತಮುಚ್ಯತೇ," ಇತ್ಯಾದಿ ಉಪಬೃಂಹಣಗಳ ಬಲದಿಂದ ಹೇಗೆ ಬಳಿತ್ಥಾಸೂಕ್ತವು ವಾಯುಪರವೆಂದು ಸ್ಪಷ್ಟಪಡಿಸಲ್ಪಟ್ಟಿದೆಯೋ, “ಸಹೋರೂಪಸ್ಯ ದೇವಸ್ಯ ಲಾತವ್ಯಸ್ಯ ಬಲಾತ್ಮಕಂ ॥ ಮೂಲ ರೂಪಂ ಜ್ಞಾನ ತತಂ ಜಗದ್ಭರಣಕಂ ಯತಃ” ಇತ್ಯಾದಿ ವಾ.ಗು.ಚ. ಋಜುತ್ವ ಚಂದ್ರೋದಯಾದ್ಯುದಾಹೃತ ಋಕ್ಸಂಹಿತಾ ಪ್ರಮಾಣಾನುಸಾರ ಶ್ರೀ ವಾದಿರಾಜಗುರು ಪರವೆಂದೂ ತೀರ್ಮಾನಿಸಲ್ಪಡಬಹುದು. ಮಧ್ವವಿಜಯವು ಬಳಿತ್ಥಾಸೂಕ್ತಾದಿ ವೇದಾದ್ಯನುಸಾರಿಯಾಗಿರುವಂತೆ ವೃನ್ದಾವನಾಖ್ಯಾನವೂ ಬಳಿತ್ತಾ ಸೂಕ್ತಾದ್ಯನುಸಾರಿ ಎಂದು ತಿಳಿಯಲ್ಪಡುತ್ತೆ. ಹೀಗೆ ವೇದದಲ್ಲಿ ಹೊಗಳಲ್ಪಟ್ಟ ಪರಶುಕ್ಲರಾದ ಋಜುಗಣಸ್ಥ ಪರಮಾಪ್ತ ಗುರುಗಳಿಂದ ಸ್ವಪ್ನದಲ್ಲಿ ವಿಪ್ರಾದಿಗಳ ಅನುಗ್ರಹಾರ್ಥವಾಗಿ ದೇವಾಜ್ಞೆಯಿಂದ ಉಪದಿಷ್ಟ ಗ್ರಂಥವಾದ್ದರಿಂದ ವೃನ್ದಾವನಾಖ್ಯಾನವು ಪರಮ ಪಾವನವೂ, ಪ್ರಾಮಾಣ್ಯೋಪೇತವೂ ಆಗಿದೆ. ಬೃ.ಭಾ. “ಪವಮಾನಾ ಇತಿ ಪ್ರೋಕ್ತಾಃ ಮುಖ್ಯ ವಾಯುತ್ವಯೋಗಿನಃ' ಎಂದು ಉಕ್ತವಾದ ಶಾಸ್ತ್ರದ ಪ್ರಮೇಯವೇ ಆಖ್ಯಾನದಲ್ಲಿ ಹೇಳಲ್ಪಡುತ್ತೆ. ಆಪ್ತಿ ನಿಶ್ಚಯವೂ ಆಖ್ಯಾನ ಕರ್ತೃ ವಿಷಯದಲ್ಲಿ ಸಾಧ್ಯವಾಗಿಯೇ ಇದೆ. ಆಪ್ತಿ ಘಟಕ ಗುಣಗಳು, ವಾದಿರಾಜ ಗುರುಗಳಲ್ಲಿ ಅವುಗಳ ಸದ್ಭಾವ, ಅವರೇ ಸ್ವಪ್ನದಲ್ಲಿ ಉಪದೇಶಕರು ಇತ್ಯಾದಿಗಳೆಲ್ಲಾ ಅಲ್ಲಲ್ಲಿ ಆಖ್ಯಾನದಲ್ಲಿ ಹೇಳಲ್ಪಟ್ಟಿವೆ. ಆಖ್ಯಾನ ಪ್ರಾಮಾಣ್ಯಕ್ಕೆ ಇನ್ನೇನು ಬೇಕು?

**48. ಆಗಮ ವಿರೋಧ ವಿಚಾರ : ಪುಟ 23-17**

**ಉಕ್ತಿ:**

"ವಿಪ್ರಾದಿಗಳಿಗೆ ಆಪ್ತತ್ವವು ಯಾವ ಆಗಮದಿಂದಲೂ ಸಿದ್ಧವಾಗುವುದಿಲ್ಲ” ಇತಿ.

**ಪ್ರತ್ಯುಕ್ತಿ :**

ಪ್ರಮಾಣ ವಿರೋಧಾಭಾವದಿಂದಲೇ ವಿಪ್ರಾದಿಗಳ ಮಾತಿನಲ್ಲಿ ದೋಷಾಭಾವವು ಸಿದ್ಧವಾಗುತ್ತೆ. ಉಪದೇಷ್ಟೃ ಸರ್ವಜ್ಞ ವಾದಿರಾಜ ಗುರುಗಳಲ್ಲಿ ದೋಷಾಭಾವ, ಅನುವಾದಕ ವಿಪ್ರನಲ್ಲಿ ದೋಷಾಭಾವ, ಲೇಖಕರಾದ ಶ್ರೀ ವೇದನಿಧಿತೀರ್ಥರಲ್ಲೂ, ರಾಮಚಂದ್ರ ಪಂಡಿತಾದಿಗಳಲ್ಲೂ ದೋಷಾಭಾವ, ಇತ್ತೀಚೆಗೆ ಗ್ರಂಥರಕ್ಷಕರಲ್ಲೂ ದೋಷಾಭಾವವೂ ಪ್ರಮಾಣ ವಿರೋಧಾಭಾವದಿಂದಲೇ ಸಿದ್ಧವಾಗಿದೆ. ಸ್ವತಃ ಪ್ರಮಾಣವಾಕ್ಯ ವಿಷಯದಲ್ಲಿ ಅಪ್ರಾಮಾಣ್ಯ ಶಂಕಾ ಕಾರಣ ದೋಷಾಭಾವ ಸಾಧನೆಯಲ್ಲಿ, ಪ್ರಮಾಣಾವಿರುದ್ಧ ಯುಕ್ತಿಯು ಚಿಂತಾಮಣಿಯು. ಶ್ರೀವೃನ್ದಾವನಾಚಾರ್ಯರು ಆಖ್ಯಾನದ ತೀಕ್ಷ್ಣ ಅಧ್ಯಯನ ಮಾಡಿ, ಅದರಲ್ಲಿ ಪ್ರತ್ಯಧ್ಯಾಯದಲ್ಲೂ ಪ್ರಕರಣ ಭೇದಗಳನ್ನು ನಿರೂಪಿಸಿ, ಅರ್ಥ ವಿಶೇಷಗಳನ್ನು ಕೆಲವು ವಾಕ್ಯಗಳಿಗೆ ಹೇಳಿಬಿಟ್ಟಿರುವುದರಿಂದ, ಅದಕ್ಕನುಸಾರವಾಗಿ ಶ್ರೀಮುಷ್ಣಾಚಾರ್ಯಾದಿಗಳಿಂದ ವ್ಯಾಖ್ಯಾನವೂ ಆಗಿ ಹೋಗಿರುವುದರಿಂದ, ಆಖ್ಯಾನ

ಪಾಠಗಳಲ್ಲಿ ಅಪಪಾಠಾದಿ ಶಂಕೆಗೂ ಹೆಚ್ಚು ಅವಕಾಶವಿಲ್ಲ. ಆಖ್ಯಾನ ಪ್ರಾಮಾಣ್ಯ ನಿಶ್ಚಯಕ್ಕೆ ವಿರೋಧಿ ಪ್ರಮಾಣ ಲೇಶವೂ ಇಲ್ಲ. "ವಾದಿರಾಜಾಖ್ಯಯತಿನಾ" ಇತ್ಯಾದಿ ಪುಟ 80ರಲ್ಲಿ ಪ್ರಕಟಿತ ಅಣುವೃನ್ದಾವನಾಖ್ಯಾನದ ಪದ್ಯದ್ವಯವು 1640 ಕ್ರಿಸ್ತಿಶಕದಲ್ಲಿಯೇ ಶಿಲಾಲಿಖಿತವಾಗಿ ಸರ್ವ ಕೃತಕತ್ವಾನಾಪ್ತಯಾದಿ ಶಂಕಾ ನಿವಾರಕವೂ ಆಗಿದೆ. ಆ ಶಿಲೆಯೂ ಅದ್ಯಾಪಿ ವೇದವೇದ್ಯರ ವೃನ್ದಾವನದ ಹತ್ತಿರ ಸ್ಥಾಪಿತವಾಗಿ ಪೂಜಿಸಲ್ಪಡುತ್ತಿದೆ. ಸ್ವಪ್ನದಲ್ಲಿ ಬೋಧಿಸುವವರ ಮಹತ್ವವು I 58, III 38-39 ಇತ್ಯಾದಿ ವಾಕ್ಯಗಳಲ್ಲ; ವಿಪ್ರನ ಮಹತ್ವವು III 81, 92, 100-101; IV 82-90; V65-67; VI 10-12; 30-36; 45-47; 84; VIII 66; X99-103; 118-125; 132, 155-156; ಇತ್ಯಾದಿ ವಾಕ್ಯಗಳಲ್ಲೂ ಸ್ಪಷ್ಟವಾಗಿವೆ. ವಾ.ಗು.ಚ. ಗ್ರಂಥ VII 16-18 ಶ್ಲೋಕಗಳಿಂದಲೂ ವಿಪ್ರಮಹಿಮೆ ತಿಳಿಯುತ್ತೆ. ಶ್ರೀ ವೇದನಿಧಿಗಳ ಮಹತ್ವವೂ ವಾ.ಗು.ಚ. VII 4-22 ಶ್ಲೋಕಗಳಲ್ಲಿ ವರ್ಣಿತವಾಗಿದೆ.

ಕಿಂಚ ಸ್ವತಃ ಪ್ರಾಮಾಣ್ಯ ನಿಮಿತ್ತದಿಂದಲೂ ಬಾಧಕಾಭಾವ ಎಂಬ ಸಹಕಾರಿ ಕಾರಣದಿಂದಲೂ ಆಖ್ಯಾನದ ಪ್ರಾಮಾಣ್ಯ ಸುನಿಶ್ಚಿತವಾದ ಮೇಲೆ ವಿಪ್ರಾದಿಗಳ ಆಪ್ತತ್ವ ಚಿಂತೆಯಿಂದ ಏನು ಪ್ರಯೋಜನ? ಧ್ವನಿ ವರ್ಧಕ ಯಂತ್ರವು ನಿರ್ದೋಷವಾಗಿದ್ದರೆ ಸಾಲದೇ? ಉಪದೇಶಕರ ವಾಕ್ಯ ಪ್ರಾಮಾಣ್ಯಕ್ಕೆ ಯಂತ್ರದ ಜ್ಞಾನಿತ್ಯವೂ ಬೇಕೇ ?

ಅಷ್ಟೇ ಅಲ್ಲ. ಅದ್ಭುತ ದೇವಶಕ್ತಿ ಉಳ್ಳವರು ವಾದಿರಾಜಗುರುಗಳು, ಅಭಿಮಾನ್ಯಧಿಕರಣ (II 1-7) ದಲ್ಲಿ ಹೇಳಲ್ಪಟ್ಟಿದೆ. "ಪೃಥಿವ್ಯಾದ್ಯಭಿಮಾನಿನ್ಯೋ ದೇವತಾಃ ಪ್ರಥಿತೌಜಸಃ। ಅಚಿಂತ್ಯಾಃ ಶಕ್ತಯಸ್ತಾಸಾಂ ದೃಶ್ಯಂತೇ ಮುನಿಭಿಶ್ಚತಾಃ ॥" ಎಂದಿದೆ. ವಿದ್ಯಾಧಿಕರಣಾನುವ್ಯಾಖ್ಯಾನದಲ್ಲೂ ಅಪರೋಕ್ಷ ಜ್ಞಾನಿಗಳ ಮಹಿಮೆಯು ವರ್ಣಿಸಲ್ಪಟ್ಟಿದೆ. ವಾದಿರಾಜ ಗುರುಗಳು ಜ್ಞಾನಿಗಳು, ಯೋಗಿಗಳು, ಎಂದು ಪೂರ್ವಪಕ್ಷ ಗ್ರಂಥಕಾರರೂ ಒಪ್ಪಿಬಿಟ್ಟದ್ದಾರೆ. ಆಖ್ಯಾನದಲ್ಲಿಯೇ ಗುರುರಾಜರ ಅದ್ಭುತ ಮಹಾತ್ಮ್ಯವು ಹೆಚ್ಚಾಗಿ ವರ್ಣಿತವಾಗಿರುವುದು ವ್ಯಕ್ತವಾಗಿದೆ. ಇಂಥ ಅಚಿಂತ್ಯಶಕ್ತಿ ಸಂಪನ್ನ ನಿರ್ದೋಷ ಗುರುಗಳಿಂದ ಏಡಮೂಕ ಭಕ್ತ ವಿಪ್ರನಿಗೆ ಬಹುಲೋಕೋಪಕಾರೇಚ್ಛೆಯಿಂದ ದೇವಕಾರ್ಯ ನಿರ್ವಾಹಕ ತನದಿಂದ ಉಪದಿಷ್ಟವಾದ್ದರಿಂದ ಈ ಆಖ್ಯಾನವು ಆನುಕೂಲ್ಯತ್ರಯವನ್ನು ಹೊಂದಿದೆ. ಸ್ವಪ್ನೋಪದೇಶವಾದರೂ ಸರ್ವಜ್ಞ ಬ್ರಾಹ್ಮಣ ಗುರುವಾಕ್ಯವಾದ್ದರಿಂದ ಯಥಾರ್ಥಜ್ಞಾನ ಜನಕವೇ. ಆಖ್ಯಾನವು ದೇವತೆಯ ಕಾರ್ಯವೆಂದು ನಂಬಿಕೆ ಜನರಿಗೆ ಬರಲೆಂದೇ ವಿದ್ಯೆ ಕಲಿಯದ ವಿಪ್ರನಿಗೆ ಗುರುರಾಜರು ಉಪದೇಶ ಮಾಡಿದ್ದು. (ಸ್ವಾ.ವೃ. ಆ X 99; 119.) ಆದ್ದರಿಂದ ವಿಪ್ರನ ಆಪ್ತಿಯು ಗ್ರಂಥ ಪ್ರಾಮಾಣ್ಯಕ್ಕೆ ಅನವಶ್ಯಕ. ವಿಪ್ರನಿಗೆ ಬೋಧಿಸಿದ ಗುರುರಾಜರು ಆಪ್ತರೂ, ಸಮರ್ಥರೂ ಆಗಿದ್ದಾರೆ. ವಿಪ್ರನ ಅಕುಶಲತೆ ಆಖ್ಯಾನ ಪ್ರಾಮಾಣ್ಯಕ್ಕೆ ಉಪಪಾದಕ.

**49. ಆಗಮ ವಿರೋಧ ವಿಚಾರ: ಪುಟ 24-1**

**ಉಕ್ತಿ:**

"ವೇದನಿಧಿ ವೃನ್ದಾವನಾಚಾರ್ಯಾದಿ ಮಹಾಜನ ಪರಿಗೃಹೀತತತ್ವದಿಂದಲೂ ಆಖ್ಯಾನಕ್ಕೆ ಉಪಾದೇಯತ್ವ ಸಂಭವಿಸುವುದಿಲ್ಲ. ರಾಘವೇಂದ್ರ ತೀರ್ಥಾದಿ ಉಭಯ ಸಂಪ್ರತಿಪನ್ನ ಮಹಾಜನ ಪರಿಗೃಹೀತತ್ವಾ ಶ್ರವಣವೇ ಸ್ಥಿತವಾಗಿರುವುದರಿಂದ" ಇತಿ.

| |
|---|
| ಪ್ರತ್ಯುಕ್ತಿ: |
| ಒಂದು ಗ್ರಂಥದ ಉಪಾದೇಯತ್ವ ವಿಷಯದಲ್ಲಿ ಸಂಪ್ರತಿಪನ್ನ ಸರ್ವಮಹಾಜನ ಪರಿಗೃಹೀತತ್ವವು ಕಾರಣವು ಎಂಬ ನಿಯಮವಿಲ್ಲ. ಹಾಗೆಯೇ ಒಬ್ಬರ ಪರಿಗೃಹೀತ್ವಾಶ್ರವಣವು ಅನುಪಾದೇಯತ್ವ ಪ್ರಯೋಜಕವಲ್ಲ. ಮಲಗಿರುವ ಜನರು ಜ್ಞಾನಾದಿ ರಹಿತರಾಗಿರುವುದರಿಂದ ಉಪಾದೇಯ ಗ್ರಂಥವಾದ ವೇದವನ್ನು ಪರಿಗ್ರಹಿಸುವುದಿಲ್ಲ. ಆದರೂ ವೇದಕ್ಕೆ ಸರ್ವಮಹಾಜನ ಪರಿಗ್ರಹಯೋಗ್ಯತ್ವವೆಂಬ ಗುಣವಿದೆ. ಹಾಗೆ ಆಖ್ಯಾನಕ್ಕೂ ಇವೆ. ಅಷ್ಟೇ ಪ್ರಾಮಾಣ್ಯ ವಿಶ್ವಾಸಕ್ಕೆ ಸಾಕು. |
| ಕಿಂಚ ಕೆಲವು ಮಹಾಜನ ಪರಿಗ್ರಹೀತತ್ವ ಮಾತ್ರದಿಂದ ಗೀತಾದಿ ಗ್ರಂಥಗಳು ಪ್ರಮಾಣಗಳು, ಉಪಾದೇಯಗಳು ಎಂದು ಸಿದ್ಧವಾಗಿವೆ. ಸರ್ವ ಮಹಾಜನ ಪರಿಗ್ರಹೀತತ್ವಕ್ಕೆ ಕಾರಣತ್ವ ಕಲ್ಪಿಸಿದರೆ ಕಲ್ಪನಾಗೌರವ ಅದೃಷ್ಟ ಕಲ್ಪನಾದಿ ದೋಷಗಳು ಬರುತ್ತವೆ. ಹಾಗೆ ಏಕಮಹಾಜನ ಪರಿ ಗ್ರಹೀತತ್ವಾಶ್ರವಣವನ್ನು ಹೇತು ಮಾಡಿ ಅಪ್ರಾಮಾಣ್ಯ ಸಾಧಿಸಿದರೆ ಆ ಹೇತುವು ಅನ್ಯಥಾ ಸಿದ್ಧವೂ ಅಪ್ರಯೋಜಕವೂ ಆಗುತ್ತೆ. ಆ ಒಬ್ಬ ಮಹಾಜನರು ಈ ಗ್ರಂಥ ಓದಿದರೋ ಇಲ್ಲವೋ ; ಅದರ ಪ್ರಸಕ್ತಿ ಅವರ ಮುಂದೆ ಬಂದಿತ್ತೋ ಇಲ್ಲವೋ, ಪ್ರಮಾಣವೆಂದೇ ತಿಳಿದಿದ್ದರೂ ಯಾತಕ್ಕೆ ಈ ವಿಷಯವನ್ನೆಲ್ಲಾ ಬರೆಯಬೇಕೆಂದು ಸುಮ್ಮಗಿದ್ದಿರಬಹುದು; ಅಥವಾ ಶ್ರೀರಾಯರು ಪ್ರಮಾಣ ಎಂದು ಹೇಳಿದ್ದರೂ ಆ ವಿಷಯ ನೂರಾರು ವರ್ಷಗಳಿಂದ ಪ್ರಚಾರಕ್ಕೆ ಬರದೆ ಈಗ ಅಶ್ರುತತತ್ವ ಸ್ಥಿತಿಯನ್ನು ಹೊಂದಿರಬಹುದು ಇತ್ಯಾದಿ ಸಂಶಯಗಳೇ ಬರುತ್ತವೆ. ಆದ್ದರಿಂದ ಸಂಪ್ರತಿಪನ್ನ ಒಬ್ಬ ಮಹಾಜನರಿಂದಾದರೂ ವ್ಯಕ್ತ ಅಪರಿಗ್ರಹ ಶ್ರುತವಾದರೆ ಆ ಗ್ರಂಥದಲ್ಲಿ ಪ್ರಾಮಾಣ್ಯನಿಶ್ಚಯವಾಗುವುದಿಲ್ಲವೆಂದು ನಿಯಮ ಇಟ್ಟು ಕೊಳ್ಳಬೇಕು. ಪ್ರಕೃತದಲ್ಲಿ ರಾಘವೇಂದ್ರ ಸ್ವಾಮಿಗಳಂಥ ಸಂಪ್ರತಿಪನ್ನ ಮಹಾಜನರು ಆಖ್ಯಾನವನ್ನು ತಿರಸ್ಕರಿಸಿದ್ದರೆ ಅದರಲ್ಲಿ ಪ್ರಾಮಾಣ್ಯ ಸಂಶಯವೇ ಬರುತ್ತಿತ್ತು, ಹಾಗೆ ಆಗಿಲ್ಲ. ಅವರ ಅನುಕ್ತಿಯಿಂದ ಅವರ ಅನಾಧರಣೆಯನ್ನೂ ಆ ಗ್ರಂಥದ ಅಪ್ರಾಮಾಣ್ಯವನ್ನೂ ಅನುಮಾನ ಮಾಡಬಾರದು. ಅನುಕ್ತಿಯು ಅಪ್ರಯೋಜಕ ಹೇತುವೆಂದು ನಾಲ್ಕನೆಯ ಅಧ್ಯಾಯದಲ್ಲೂ ಆರನೆಯ ಅಧ್ಯಾಯದಲ್ಲಿ ತೋರಿಸಿಯಾಗಿದೆ **[ಅನುಕಿಗೆ ಅಂಥ ಸಾಮರ್ಥ್ಯವಿಲ್ಲವೆಂದು ಗ್ರಂಥಕಾರರೇ 1970 ನವಂಬರ್ ತತ್ವವಾದದ ಪುಟ 20 ರಲ್ಲಿ ಉಪಪಾದಿಸಿ ತೋರಿಸಿದ್ದಾರೆ]** ಆದ್ದರಿಂದ ಅನುಕ್ತಿ, ಅಶ್ರವಣ, ಅನುಲ್ಲೇಖ ಇತ್ಯಾದಿ ಅಭಾವ ಧರ್ಮಗಳು ವಿಷಯಾಸತ್ವ ನಿರ್ಣಾಯಕವಲ್ಲ. |
| ಕಿಂಚ ಅನುಲ್ಲೇಖ ಮಾತ್ರವು ಸಿದ್ಧವಾಗಿದೆಯೇ ಹೊರತು ಅನುಕ್ತಿಯು ಸಿದ್ಧವಾಗಿಲ್ಲ. ಏಕಾಂತದಲ್ಲಿ ಶಿಷ್ಯರಿಗೆ ಶ್ರೀ ಗುರುರಾಘವೇಂದ್ರರು ಶ್ರೀ ವಾದಿರಾಜಗುರು ಋಜುತ್ವವನ್ನೇ ಹೇಳಿದ್ದಾರೆಂದು ಐತಿಹ್ಯವಿದೆ. ಜಂಖಂಡಿ ವಾದಿರಾಜಾಚಾರ್ಯರಿಗೆ ಅವರ ಕಾಲದ ಶ್ರೀ ರಾಘವೇಂದ್ರಸ್ವಾಮಿಗಳ ಮಠದ ಗುರುಗಳಾದ ಶ್ರೀಸುಪ್ರಜ್ಞೇಂದ್ರತೀರ್ಥರು 1885 ರಲ್ಲಿ ನಿರೂಪಕೊಟ್ಟು ಶ್ರೀರಾಘವೇಂದ್ರಸ್ವಾಮಿಗಳ ಕಾಲದಿಂದಲೂ ಗುರುರಾಜ ಋಜುತ್ವ ನಂಬಿಕೆ ತಮಗುಂಟೆಂದು ಸೂಚಿಸಿದರೆಂದು ಐತಿಹ್ಯವಿದೆ. ವ್ಯಾಸರಾಜರ ಪದವೂ ಈ ನಂಬಿಕೆಗೆ ಸ್ಮಾರಕವಾಗಿದೆ. "ಸಾಕ್ಷಿ ಹಯಾಸ್ಯೋಽತ್ರಹಿ' ಎಂದು ಹೇಳಿದ ಶ್ರೀ ರಾಘವೇಂದ್ರಸ್ವಾಮಿಗಳು ಪರೋಕ್ಷ ಪ್ರಿಯರಾದ |

ದೇವತೆಗಳಷ್ಟೆ. ಆದ್ದರಿಂದ ಸಮರ್ಥ ಶುದ್ಧ ಮನಸ್ಕತ್ವ ಹೇತುವಿನಿಂದ ಶ್ರೀ ರಾಘವೇಂದ್ರ ಸ್ವಾಮಿಗಳೂ ಆಖ್ಯಾನ ಪ್ರಾಮಾಣ್ಯ ಜ್ಞಾನವುಳ್ಳವರೇ, ವೇದನಿಧಿಗಳಂತೆ ಎಂದು ಅನುಮಾನ ಮಾಡಬಹುದು. ಶುದ್ಧ ಮನಸ್ಕರು ಯಥಾರ್ಥ ದರ್ಶಿಗಳು [ಹೀಗೆಯೇ ಮೈಸೂರಿನಲ್ಲಿ ಶ್ರೀ ಕೃಷ್ಣಮೂತಿಪುರಂ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಶ್ರೀ ರುಗ್ಮಿಣೀಶವಿಜಯ ಕಥೆಯನ್ನು 15-20 ದಿನಗಳು ಹೇಳಿ 7-6-1962 ಅಲ್ಲೇ ಮಂಗಳದ ದಿನ ಶ್ರೀಶ್ರೀವಿದ್ಯಾಪ್ರಸನ್ನ ತೀರ್ಥರು, ಶ್ರೀ ವ್ಯಾಸರಾಜ ಮಠಾಧೀಶ್ವರರು ಉಪನ್ಯಾಸ ಮಾಡುತ್ತಾ ಆ ಕಾವ್ಯಕಾರರನ್ನು ಎಷ್ಟು ದೊಡ್ಡವರೆಂದು ಹೇಳಿದರೂ ಸಾಲದು. ಅವರು ಋಜುಗಳೆಂದು ಜನರು ಹೇಳುವುದನ್ನು ನಂಬುವುದಿಲ್ಲವೆಂದು ಹೇಳಲಿಕ್ಕಾಗುವುದಿಲ್ಲ ಎಂಗು ಹೇಳಿದರು.] ಆದ್ದರಿಂದ ಶ್ರೀ ರಾಘವೇಂದ್ರ ಸ್ವಾಮಿಗಳವರಿಗೆ ಈ ಆಖ್ಯಾನ ಗ್ರಂಥದ ಪ್ರಾಮಾಣ್ಯವು ಸಮ್ಮತವೆಂದೇ ಕಲ್ಪಿಸುವುದು ಯುಕ್ತವು. ಅನ್ಯರಿಂದ ಉಕ್ತವಾಗಿದೆ ಎಂದೋ, ಲೇಖನಾರ್ಹ ಗೋಪ್ಯ ವಿಷಯ ಎಂದೂ, ಅಸ್ಪೃಷ್ಟ ಎಂದೋ, ಅವರು ಈ ವಿಷಯದಲ್ಲಿ ಬರೆದಿಲ್ಲವೆನ್ನಬಹುದು. ಅಶ್ರಾವಣವು ಅನ್ಯಥಾಸಿದ್ಧ.

ಅಥವಾ ದುರ್ಗಮಾರ್ಥವುಳ್ಳ ಆಖ್ಯಾನ ಗ್ರಂಥವು ಬಹುಕಾಲದವರೆಗೆ ಅಪ್ರಕಾಶಿತವಾಗಿಯೇ ಅಷ್ಟಮಠಗಳಲ್ಲಿತ್ತು. 1671 ವರ್ಷದಲ್ಲಿ ರಾಘವೇಂದ್ರ ಸ್ವಾಮಿಗಳು ವೃನ್ದಾವನಸ್ಥರಾದರು. ಆ ಕಾಲದಲ್ಲಿ ಈ ಆಖ್ಯಾನ ಗ್ರಂಥಕ್ಕೆ ವ್ಯಾಖ್ಯಾನವೇನೂ ಇರಲಿಲ್ಲ. ಹೆಚ್ಚು ಪ್ರಚಾರಕ್ಕೆ ಬರದೆ ಪಾರಾಯಣ ಪ್ರತಿಯಾಗಿ ಉಡುಪಿ ಮಠಗಳಲ್ಲೂ ಕೆಲವರು ವಿದ್ವಾಂಸರಲ್ಲೂ ಇತ್ತು. ವೃನ್ದಾವನಾಚಾರ್ಯರ ಕಾಲದಲ್ಲಿ ಅದಕ್ಕೆ ವ್ಯಾಖ್ಯಾನ 1860 ರಲ್ಲಿ ಶ್ರೀ ಮುಷ್ಣಾಚಾರ್ಯರು ಬರೆದರು. ಪ್ರಾಮಾಣ್ಯಬೋಧಿನೀ 1834 ರಲ್ಲಿ ಬರೆಯಲ್ಪಟ್ಟಿತು. ಶ್ರೀ ವೃನ್ದಾವನಾಚಾರ್ಯರು (ಶ್ರೀವಿಶ್ವಪ್ರಿಯತೀರ್ಥರು) ತಮ್ಮ ಸಂಚಾರ ಕಾಲದಲ್ಲಿ ಅಲ್ಲಲ್ಲಿ ಭಕ್ತರಿಗೆ ಆಖ್ಯಾನದ ಮಾಹಾತ್ಮ್ಯವನ್ನು ವಾದಿರಾಜರ ಮಹಿಮೆಯನ್ನೂ ಉಪದೇಶಿಸುತ್ತಿದ್ದರು ಎಂದು ಎರಡು ವಿಶ್ವಪ್ರಿಯ ವಿಲಾಸಗಳಿಂದಲೂ (1865 ಅಥವಾ 1870 ರ ಒಳಗೆ ವಿರಚಿಸಲ್ಪಟ್ಟವು) ತಿಳಿದು ಬರುತ್ತೆ, 1865 ರಲ್ಲಿ ಅವರು ವೃನ್ದಾವನ ಪ್ರವೇಶ ಮಾಡಿದ ನಂತರ ಜಂಖಂಡಿ ವಾದಿರಾಜಾಚಾರ್ಯರು (1827-1896) ತಮ್ಮ ಯಾತ್ರಾ ಸ್ಥಳಗಳಲ್ಲಿ ಪ್ರಸಿದ್ಧ ಪಡಿಸುತ್ತಿದ್ದರು. ಈ ಕಾಲದಿಂದ ಎಂದರೆ 1834 ರಿಂದ ಲೋಕಕ್ಕೆ ವೃನ್ದಾವನಾಖ್ಯಾನ ಗ್ರಂಥದ ಮಾಹಾತ್ಮ್ಯವು ಹೆಚ್ಚಾಗಿ ತಿಳಿದು ಬಂತು. ಅದುವರಿಗೂ ಬೂದಿ ಮುಚ್ಚಿದ ಕೆಂಡದಂತಿತ್ತು. ವಿಶೇಷವಾಗಿ 1925 ರಲ್ಲಿ ಬೆಳಗಾಂವಿಯಲ್ಲಿ ಗ್ರಂಥವು ಸಂಸ್ಕೃತಾಕ್ಷರದಲ್ಲಿ ಮುದ್ರಿತವಾದ ಮೇಲೆಯೇ ನೂತನ ಜನ್ಮವನ್ನು ಹೊಂದಿತೆಂದು ಹೇಳಬಹುದು. ಆದ್ದರಿಂದ 1623-71 ರವರಿಗೆ ಪೀಠಾರೂಢರಾಗಿದ್ದ ಶ್ರೀ ರಾಘವೇಂದ್ರ ಸ್ವಾಮಿಗಳವರಿಗೆ ಆ ಆಖ್ಯಾನ ಗ್ರಂಥವನ್ನು ಯಾರಾದರೂ ತೋರಿಸಿದ್ದರೆಂದು ನಿಶ್ಚಯಿಸುವುದೇ ಶಕ್ಯವಿಲ್ಲ. ಆದ್ದರಿಂದಲೇ ರಾಘವೇಂದ್ರ ಸ್ವಾಮಿಗಳವರಿಂದಲೂ ಇತರ ಜ್ಞಾನಿಗಳಿಂದಲೂ ಉತ್ತರ ದೇಶೀಯ ಪಂಡಿತರಿಂದಲೂ ಅಜ್ಞಾತಪ್ರಾಯವಾಗಿಯೇ, 1642 ರಲ್ಲಿ ಶಿಶುವಿನಂತೆ ಅವತರಿಸಿ ಪ್ರಕಾಶ ಹೊಂದದೆ ಅಷ್ಟಮಠೀಯ ಕೋಶಾಗಾರಗಳೆಂಬ ತೊಟ್ಟಿಲಿನಲ್ಲಿ ಗ್ರಂಥವು ಮಲಗಿತ್ತೆಂದೂ, ಶ್ರೀವೇದನಿಧಿಗಳಿಂದ ಪುನಃ ಪುನಃ ಬರೆಯಿಸಲ್ಪಟ್ಟು ಕೇವಲ ಪಾರಾಯಣಾದಿಗಳಿಂದ ಲಾಲಿತವಾಗಿತ್ತೆಂದೂ, ಊಹಿಸುವುದೇ ಯುಕ್ತವಾಗಿದೆ. ಅಂತೂ ತೀವ್ರ ಪ್ರಚಾರಕ್ಕೆ ಬಂದಿರಲಿಲ್ಲ.

ಅಪ್ರಸಿದ್ಧವಾಗಿದ್ದುದರಿಂದ ಕೆಲವು ಮಹಾಜನರಿಂದ ಅದರ ವಿಚಾರವಾಗಿ ಏನೂ ಚರ್ಚೆ ಆಗದೆ, ಹೆಚ್ಚಾಗಿ ಹೊರಬೀಳಲಿಲ್ಲವೆಂದು ಏತಕ್ಕೆ ತಿಳಿಯಬಾರದು ? ಹೀಗೆ "ಮಹಾಜನಗಳಿಂದ ನೋಡಲ್ಪಟ್ಟು ಅಪರಿಗೃಹೀತವಾದ್ದರಿಂದ" ಎಂಬ ಪೂರ್ವಪಕ್ಷದ ಹೇತುವಿಗೆ ಅಸಿದ್ಧಿಯನ್ನೇ ಹೇಳಬಹುದು. ಹಾಗಾದ ಮೇಲೆ ಗ್ರಂಥದ ಪ್ರಾಮಾಣ್ಯ ನಿಶ್ಚಯಕ್ಕೆ ಯಾವ ವಿರೋಧವೂ ಇಲ್ಲ.

**50. ಆಗಮ ವಿರೋಧ ವಿಚಾರ : ಪುಟ 24-2**

**ಉಕ್ತಿ :**

"ಸತ್ಯವೀರಾದಿ ಪ್ರಭೃತಿಗಳಿಂದ ಸಂತ್ಯಾಗ ದರ್ಶನವಾಗಿರುವುದರಿಂದಲೂ ಆಖ್ಯಾನಕ್ಕೆ ಪ್ರಾಮಾಣ್ಯ ಕೊಡುವುದಿಲ್ಲ" ಇತಿ.

**ಪ್ರತ್ಯುಕಿ:**

ಬಹು ಪ್ರಮಾಣ ವಿರುದ್ಧವಾದ ಕೇವಲಾನುಮಾನಗಳು ತತ್ವನಿರ್ಣಯದಲ್ಲಿ ಸಾಕ್ಷಾದಾಚಾರ್ಯರಿಂದಲೇ "ಯಚ್ಚ ಪ್ರಮಾಣ ದೃಷ್ಟಾನಾಮಪಿ ಪದಾರ್ಥಾನಾಂ ಮಿಥ್ಯಾತ್ವ ಕಲ್ಪನಂ ತಚ್ಚ ಪ್ರಮಾಣವಿರುದ್ಧತ್ವಾದೇವ ಪ್ರಕಾಶತಸ್ಕರತ್ವಂ। ನಹಿ ಪ್ರಮಾಣ ದೃಷ್ಟಸ್ಯ ತರ್ಕಬಾಧ್ಯತ್ವಂ। ಪ್ರತ್ಯಕ್ಷಾದಿ ವಿರುದ್ಧಾನಾಂ ತರ್ಕಾಭಾಸತ್ವನಿಯಮಾತ್। ಅತೋನ ತರ್ಕಮಾತ್ರತ ಏವ ದೃಷ್ಟಸ್ಯ ಭ್ರಾಂತಿತ್ವಂ ಕಲ್ಪಮ್ ॥" ಇತ್ಯಾದಿ ವಾಕ್ಯಗಳಿಂದ ಖಂಡಿಸಲ್ಪಟ್ಟಿದೆ. **"ಅನುಮಾನಾನಾಂ ಕಾಲಾತ್ಯಯೂಪದಿಷ್ಟತ್ವಾತ್........ನಹಿ ಹರಿಣ ಶಾವಾಭಾವಮವೇಕ್ಷ್ಯ, ಪಂಚಾನನೋ ವನಮವಗಾಹತೇ ಇತಿ"** ಎಂದು ತತ್ವೋದ್ಯೋತ ಟೀಕೆಯಲ್ಲೂ ಜಯತೀರ್ಥರಿಂದ ಖಂಡಿಸಲ್ಪಟ್ಟಿದೆ. ಬಹುಪ್ರಮಾಣವಿರುದ್ಧತ್ವಾತ್ ನಿತರಾಮಾಭಾಸತ್ವಂ ಎಂದೇ ಅವರ ಆಖ್ಯಾನ ಖಂಡನ ಕಾರ್ಯವನ್ನು ವರ್ಣಿಸಬೇಕಾಗಿದೆ.

"ದೃಷ್ಟಂ ಚ ಅಶ್ವತ್ಥಾಮ ಯುಧಿಷ್ಠಿರಾದಿ ಯೋಗಿನಾಂ ತಾದೃಶಾ ಜ್ಞಾನಾದಿ ಭಾರತಾದೌ" ಎಂದು ಪೂರ್ವಪಕ್ಷ ಗ್ರಂಥಕಾರರೇ ಪುಟ 5ರಲ್ಲಿ ಹೇಳಿದ್ದಾರೆ. ಹೀಗಿರುವಲ್ಲಿ ಪೀಠಾರೂಢರಾಗಿ, ಅಧಿಕಾರದಲ್ಲಿದ್ದು, ವೈಯುಕ್ತಿಕ ದ್ವೇಷಹೊಂದಿದ್ದ, ಆ ಸ್ವಾಮಿಗಳವರು ಅಕ್ಷಾಂತ ಮನಸ್ಕರಾದರೆಂದೂ, ಅದರಿಂದ ಈ ಖಂಡನಕಾರ್ಯದಲ್ಲಿ ಪ್ರವೃತ್ತರಾದರೆಂದೂ, ಪೂರ್ವಿಕರು ಹೇಳಿರುವುದನ್ನು ನಂಬಲು ಕಷ್ಟವೇನು? ಪುಟ 56, 77ರಲ್ಲಿ ಆ ವಾದದ ವಿಷಯ ಬೇಕಾದಷ್ಟು ಹೇಳಲಾಗಿದೆ.

ವಸ್ತುತಃ ಶ್ರೀ ಸತ್ಯವೀರತೀರ್ಥರ ಸಂತ್ಯಾಗವು ಮನಃಪೂರ್ವಕವಾದದ್ದಲ್ಲ, ಬಾಹ್ಯ ವಿಡಂಬನೆ ಮಾತ್ರವೆಂದೂ ಐತಿಹ್ಯವಿದೆ. ಮಠಾಧಿಪತ್ಯ ಬರುವ ಮುಂಚೆ ಅವರೂ ಕೂಡ ವಾದಿರಾಜ ಗುರುಗಳಲ್ಲಿ ಭಕ್ತರೇ ಆಗಿದ್ದರೆಂದು ನಾನು ಕೇಳಿದ್ದೇನೆ. ಶ್ರೀ ಶ್ರೀ ಪ್ರದ್ಯುಮ್ನತೀರ್ಥರಿಗೂ ನನಗೂ ಆ ಐತಿಹ್ಯವಲ್ಲಿ ನಂಬಿಕೆ ಇದೆ. ಹ.ಭ.ವಿ. Vol. I ರಲ್ಲೂ ಪುಟ 190 ಹಾಗೆಯೇ ಇದೆ. ಸಂತ್ಯಾಗ ಹೇತುವು ಅಸಿದ್ಧವೂ ಆಯಿತು. ಅವರ ಮನೋಭಾವ ಸರಿಯಾಗಿದ್ದರೂ ಅವರು ಹೇಳಿದ್ದು ಬಹು ಪ್ರಮಾಣಗಳಿಗೆ ವಿರುದ್ಧವು ಎಂದು ವಿಷಾದದಿಂದ ಹೇಳಬೇಕಾಗಿದೆ. ಅವರ ಪತ್ರಿಕಾದಿಗಳಲ್ಲಿ ಅವರು

ಯಾವ ಆಗಮ ಪ್ರಮಾಣವನ್ನೂ ಕೊಟ್ಟಿಲ್ಲ. ಸಾವಕಾಶ ಲಿಂಗಗಳಿಂದ ಆಖ್ಯಾನವು ನಂಬಿಕೆಗೆ ಅನರ್ಹವೆಂದು ಆಪಾದಿಸಿದ್ದಾರೆ. ಅದೆಲ್ಲಾ "ಪರತಸ್ತ್ವ" ರೀತಿ, 'ನ ವಾಕ್ಯ ದೂಷಣಂ ತರ್ಕಾತ್' ಎಂದಿದೆ. ಇಲ್ಲಿಗೆ ಆ ವಿಷಯ ಸಾಕು.

**51. ಆಗಮ ವಿರೋಧ ವಿಚಾರ : ಪುಟ 24-3**

**ಉಕ್ತಿ :**

"ಆಖ್ಯಾನ ಗ್ರಂಥಕ್ಕೆ ವಾದಿರಾಜ ಕೃತತ್ವ ನಿಶ್ಚಯವೂ ಕೂಡುವುದಿಲ್ಲ. ಮಧ್ವಶಿಷ್ಯರ ಮಧ್ಯದಲ್ಲಿಯೇ ವಿವಾದ ದರ್ಶನವಾಗಿದೆಯಾದ್ದರಿಂದ" ಇತಿ

**ಪ್ರತ್ಯುಕಿ :**

ಆಖ್ಯಾನ, ವಾ.ಗು.ಚ, ಮುಂತಾದ ಗ್ರಂಥ ಓದಿದವರಿಗೆ ಮತ್ತು ಚರಿತ್ರ ಶೋಧಕರಿಗೂ ಶೈಲೀ ವಿಮರ್ಶಕರಿಗೂ ವೃನ್ದಾವನಾಖ್ಯಾನ ಗ್ರಂಥವು ವಾದಿರಾಜ ಗುರುಕೃತವೆಂದೇ ನಿಶ್ಚಯವಾಗುತ್ತೆ. ಆಖ್ಯಾನದ I 58 ಶ್ಲೋಕದಲ್ಲಿ ಮತ್ತು ನೂರಾರು ಕಡೆ ಅಲ್ಲಲ್ಲಿ ವಾಕ್ಯ ಸಂದರ್ಭಗಳಲ್ಲಿ "ನಾನೇ ಈ ಗ್ರಂಥಕರ್ತಾ" ಎಂದು ವಾದಿರಾಜ ಗುರುಗಳ ಸ್ವಂತ ಮಾತೇ ಇದೆ. ಅನ್ಯಥಾ ತಿಳಿಯುವವರಿಗೆ XVIII 36 ಮುಂತಾದ ವಾಕ್ಯಗಳಲ್ಲಿ ಅನರ್ಥವೂ ಶ್ರುತವಾಗಿದೆ. ವಾ.ಗು.ಚ. ಗ್ರಂಥದ VII 18 ಶ್ಲೋಕದಲ್ಲಿ "ಮಂತ್ರ ತುಲ್ಯಂ ಮಹಾಗ್ರಂಥಂ ರಚಯಾಮಾಸ ವಾದಿರಾಟ್" ಎಂದು ಹೇಳಲ್ಪಟ್ಟಿದೆ. ಎರಡು ವಿಶ್ವಪ್ರಿಯವಿಲಾಸಗಳೂ ಈ ಪ್ರಮೇಯಕ್ಕೇ ಸಹಾಯಕವಾಗಿವೆ.

ಯುಕ್ತಿಯೂ ಇದೆ. ಅಂಥ ಪ್ರಮೇಯ ಭರಿತ ಮಂತ್ರಾತ್ಮಕ ಬಹು ಸಹಸ್ರ ಶ್ಲೋಕಗಳನ್ನು ಆ ಕಾಲದಲ್ಲಿ ರಚಿಸುವುದಕ್ಕೆ ಸಮರ್ಥರಾದವರು ಇನ್ನಾರೂ ಇರಲಿಲ್ಲ. ಅಶ್ರುತ ಪೂರ್ವವಾದ ಆ ಪ್ರಮೇಯಗಳನ್ನು ಯಾರು ತಾನೇ ಆಗಿನವರು ಊಹಿಸಿದ್ದಾರು? ಆ ಪದ್ಯಗಳೊ ನಾನಾ ವೃತ್ತ ಬದ್ಧಗಳು, ಭವಿಷ್ಯ ಸೂಚಕಗಳು, ಮಂತ್ರರೂಪವಾಗಿ ಅಭೀಷ್ಟ ಪ್ರದಗಳು, ಸಂಖ್ಯೆ ಮಾಡಿದರೆ ಎರಡು ಸಹಸ್ರಕ್ಕೂ ಮೀರಿದ ಶ್ಲೋಕಗಳು, ಪ್ರತ್ಯಕ್ಷ ಜೀವನ ಕಾಲದಲ್ಲಿನ ವಾದಿರಾಜ ಗುರುಗಳ ಇತರ ಗ್ರಂಥಸ್ಥ ಶೈಲೀಸ್ಮಾರಕಗಳು. ಹಾಗೇ ಡಾಕ್ಟರ್ ಶರ್ಮರ ಅಭಿಪ್ರಾಯ; ನನ್ನ ಅಭಿಪ್ರಾಯವೂ ಅದೇನೇ. ಶ್ರೀಮನ್ಮಧ್ವಾಚಾರ್ಯಕೃತ ಭಾಷ್ಯಾದಿ ಗ್ರಂಥಗಳಲ್ಲಿ ಏನಾದರೂ ಕರ್ತೃ ಸಂಶಯವು ಹುಟ್ಟಿದರೂ ಆಗಲೂ ಈ ಯುಕ್ತಿಯನ್ನೇ ನಾವು ಅನುಸಂಧಾನ ಮಾಡಬೇಕು; ಏನೆಂದರೆ ಆ ವಿಷಯಗಳು ಅವರಿಂದ ಭಿನ್ನರಾದ ಯಾರಿಂದಲೂ ಆಕಾಲದಲ್ಲಿ ಜ್ಞಾತವಾಗಿರಲಿಲ್ಲವೆಂದು ತ್ರಿವಿಕ್ರಮ ಪಂಡಿತಾಚಾರ್ಯಾದಿಗಳೇ ಒಪ್ಪಿದ್ದಾರೆ. ಹಾಗೆಯೇ ವಿಚಾರಮಾಡಿ, ಆಖ್ಯಾನಕರ್ತರು, ಯುಕ್ತಿಮಲ್ಲಿಕಾ, ಸರಸಭಾರತೀವಿಲಾಸ, ಸ್ತೋತ್ರರತ್ನಮಾಲೆಯ ಸ್ತೋತ್ರಗಳು ಇವೆಲ್ಲರ ಕರ್ತರೂ ಒಬ್ಬರೇ ಎಂದು ನಿಶ್ಚಯಿಸಬಹುದು. "ಕೊಹ್ಯನ್ಯಃಪುಂಡರೀಕಾಕ್ಷಾನ್ಮಹಾಭಾರತಕೃದ್ಭವೇತ್' ಎಂದು ಹೇಳಿರುವಂತೆ ಈ ವಿಷಯದಲ್ಲಿ "ಕೋಹ್ಯನ್ಯಃ ಆಖ್ಯಾನಕರ್ತಾವಿನಾ ವಾದಿರಾಜ ಗುರೂನ್" ಎಂಬ ಯುಕ್ತಿ ವಿನ್ಯಾಸವು ಸಫಲವಂದೇ ನನಗೆ ತೋರುತ್ತೆ. ಇದರ ಮೇಲೆ ಅನ್ಯಕೃತವಂಬಲ್ಲಿ ಯಾವ ಪ್ರಮಾಣವೂ ಇಲ್ಲ. ಸೋದೆ ಮಠದಲ್ಲಿ ಅಂಥ ಜನರು ಆಗ ಇರಲಿಲ್ಲವಾದ್ದರಿಂದಲೂ ಅನ್ಯಕೃತವೆಂದರೆ ಪ್ರತ್ಯಕ್ಷ ವಿರೋಧವೇ ಬರುತ್ತೆ. ಆದ್ದರಿಂದ ಶಿಲಾಸ್ಥ ವೇದನಿಧಿಗಳ

ವಾಕ್ಯದಂತೆ, ಆಖ್ಯಾನ । 58 ರಲ್ಲೂ ಹೇಳಿದಂತೆ ನಂಬುವುದರಲ್ಲಿ ಯಾವ ಬಾಧಕವೂ ಇಲ್ಲವಾದ್ದರಿಂದ ಅವರೇ ಕರ್ತರೆಂದು ನಿಶ್ಚಯಿಸಬಹುದು. ಶ್ರೀವೇದನಿಧಿಗಳ ನಿಷ್ಕ್ರಾಪಟ್ಯಕ್ಕೆ ರಾಮಚಂದ್ರಪಂಡಿತರ ಸಾಕ್ಷವಿದೆ; ಶ್ರೀವೇದನಿಧಿರಾಕರ್ಣ್ಯ ಲೇಖಯಾಮಾಸಮತ್ಕರಾತ್[ಶ್ರೀವೇದನಿಧಿಗಳು 1645 ರ ಸುಮಾರಿನಲ್ಲಿ ವೃಂದಾವನಸ್ಥರಾದರೆಂದು ನಾನು ಊಹಿಸಿದ್ದೇನೆ. ಅವರ ಇತರ ಕಾರ್ಯಗಳೇನಾದರೂ ಚರಿತ್ರೆಯಿಂದ ಸಿದ್ಧವಾದರೆ ಅವರೂ ಅವರ ಗುರುಗಳಂತೆ ಯೋಗಿಗಳಾದ್ದರಿಂದ ಇನ್ನೂ ಹೆಚ್ಚು ಕಾಲ ಜೀವಿಸಿದ್ದರೂ ಇರಬಹುದು] ಎಂದು ವಾ.ಗು.ಚ. ಇದೆ.

ಕಿಂಚ ಈ ಕರ್ತೃನಿಶ್ಚಯ ಕಲಹದಿಂದೇನು? ಪ್ರಾಮಾಣ್ಯ ಸ್ವತಸ್ತ್ವವು ದ್ವೈತ ಸಿದ್ಧಾಂತದಲ್ಲಿ ಅಂಗೀಕೃತವಾಗಿದೆಯಾದ್ದರಿಂದ ಗ್ರಂಥವು ವಾದಿರಾಜ ಗುರುಪ್ರಣೀತವಾದರೂ ಆಗಲಿ, ಅಪ್ರಣೀತವಾದರೂ ಆಗಲಿ ಪ್ರಾಜ್ಞಪ್ರಣೀತವಾಗಿರಲಿ, ಅಥವಾ ಅನಾಪ್ತ ಪ್ರಣೀತವಾಗಿರಲಿ, ಪ್ರಾಮಾಣ್ಯಕ್ಕೆ ಧಕ್ಕೆ ಇಲ್ಲದ ಮೇಲೆ ಅದನ್ನು ತಿರಸ್ಕರಿಸುವುದು ಹೇಗೆ? ಇತರ ಪ್ರಮಾಣಾವಿರುದ್ಧವಾಗಿರುವುದರಿಂದಲೇ ಅದು ನಿರ್ದೋಷವು ಮತ್ತು ಪ್ರಮಾಣವು ಎಂದು ಸಿದ್ಧವಾಗುವಾಗ ಅದರ ಕರ್ತೃನಿಶ್ಚಯದಿಂದಾಗುವ ವಿಶೇಷವೇನು?

ಮಾಧ್ವರಲ್ಲೇ ಇದರ ವಿಷಯದಲ್ಲಿ ಕಲಹವು ಬಂದಿದೆಯಲ್ಲಾ ಎಂದರೆ ಅದು ಈ ಅದ್ಭುತ ಗ್ರಂಥಕ್ಕೆ ಒಂದು ಭೂಷಣವೇ ಆಗಿದೆ. ಸರ್ವಾಭೀಷ್ಟಪ್ರದ ಮಂತ್ರ ಗ್ರಂಥವಾದ್ದರಿಂದ ಅಪಕ್ವಾಧಿಕಾರಿಗಳಿಗೂ ಪುಣ್ಯಹೀನರಿಗೂ, ದುಃಖ ಭೋಕ್ತವ್ಯ ಅಧಿಕವಾಗುಳ್ಳವರಿಗೂ ಸ್ವಪ್ರಾಮಾಣ್ಯ ವಿಷಯದಲ್ಲಿ ಮತ್ತು ಸ್ವರಚಕ ವಿಷಯದಲ್ಲಿ ಸಂಶಯವೇ ಹುಟ್ಟುತ್ತೆಂದು ಗ್ರಂಥವೇ ಪುನಃ ಪುನಃ ನಿರೂಪಿಸಿದೆ. ಮಾಧ್ವರಲ್ಲೇ ಪ್ರಾಮಾಣ್ಯ ವಿವಾದ ಬಂದರೆ ಆ ಆಖ್ಯಾನರೇಕ ಪ್ರಮೇಯು ಸತ್ಯತೆಗೆ ನಿದರ್ಶನವಾಯಿತು. ನಿದರ್ಶನ ಪರ್ವದಲ್ಲಿ ವಿಶ್ವಾಸ ಮಾಡಿದವರಿಗೆ ಫಲಪ್ರಾಪ್ತಿ, "ನಸ್ಯಾಗ್ವಾಽವಿಶ್ವಾಸತಃ", ಅವಿಶ್ವಾಸಿ ಪಾರಾಯಣಾದಿ ಕರ್ತರಿಗೆ ಅನಿಯತ ಫಲಪ್ರಾಪ್ತಿ ಎಂದು ಬಹು ದೃಷ್ಟಾಂತ ಕೊಡಲ್ಪಟ್ಟಿದೆ. ದೊಡ್ಡ ಅಧಿಕಾರಿಯೂ, ಗುರುರಾಜರ ಭಕ್ತನೂ ಆದ 'ಶೇಷ'ನಾಮಕನೂ ಕೂಡ ಪ್ರಾಮಾಣ್ಯ ಶಂಕೆಯಿಂದ ಕೆಟ್ಟ ಜನ್ಮ ಹೊಂದಿ ಪುನಃ ಪ್ರಾಮಾಣ್ಯ ನಿಶ್ಚಯ ಮಾಡಿಕೊಂಡು ರಾಜಮಂತ್ರಿತ್ವಾದಿ ಫಲವನ್ನೂ ಜ್ಞಾನವನ್ನೂ ಹೊಂದಿದನೆಂದು ಇದೆ. ಅಂಥ ಸಫಲ ಭವಿಷ್ಯ ಸೂಚನೆಯು, ಗ್ರಂಥ ಪ್ರಾಮಾಣ್ಯಾಧಿಕ್ಯಕ್ಕೆ ಸಾಧಕ. ದೃಷ್ಟಾಂತ ಬೇಕೆಂದರೆ:-ವೈದಿಕರ ಮಧ್ಯದಲ್ಲೇ ಕೆಲವರು ವೇದ ಪ್ರಾಮಾಣ್ಯದಲ್ಲಿ ಸಂಶಯ ಹೊಂದಿ ಅಗಮ್ಯ ದೇಶಕ್ಕೂ ಹೋಗಿ ಅಸ್ಪೃಶ್ಯ ಸ್ಪರ್ಶಿಸಿ ಅಭಕ್ಷ ಭಕ್ಷಿಸಿ ದುರಾಚಾರಿಗಳಾಗಿ ಹೋಗುತ್ತಾರೆ[ಕೃಷ್ಣಾಷ್ಟಮಿ ವೃತ ಕಥಾ ನೋಡಿ. (Kumb. EdS.)] ಹೂಣಾದಿ ಮೈತ್ರೀ ಪ್ರಭಾವದಿಂದ ಶೂದ್ರಾದಿಗಳಿಗೂ ವೇದಾರ್ಥ ಹೇಳಿ ಕೊಡುತ್ತಾರೆ. 'ಸಂಸರ್ಗಜಾ ದೋಷ ಗುಣಾಭವಂತಿ' ಎಂದು ಗಾದೆ ಇದೆ. ಅಂಥ ನಾಸ್ತಿಕ ಸಂಗ ಪ್ರಭಾವವು ಕಲಿಗ್ರಸ್ತ [ಚಾತುರ್ಮಾಸ್ಯ ಕಲ್ಪ.ಅ. 27-ಶ್ಲೋಕ 62-66]ಜನಸ್ವಭಾವ ವರ್ಣನಾವಸರದಲ್ಲಿ ಪುರಾಣಗಳಲ್ಲಿ, ಭಾರತದಲ್ಲೂ ಬಹು ರೀತಿಯಲ್ಲಿ ಹೇಳಲ್ಪಟ್ಟಿದೆ. ಕೆಲವು ವೈದಿಕರು ಹೀಗೆ ಕೆಟ್ಟು ಹೋದುದರಿಂದ ವೇದ ಪ್ರಾಮಾಣ್ಯ ನಿಶ್ಚಯವು

ಇತರ ಯೋಗ್ಯ ವೈದಿಕರಿಗೆ ಸುದೃಢವಾಗುತ್ತೆ. ವೇದೋಕ್ತವಾದುದಕ್ಕೆ ಪ್ರತ್ಯಕ್ಷ ಸಂವಾದವೂ ದೊರೆತಂತಾಯಿತು. ಪ್ರಕೃತ ಸ್ವಾಪ್ನವೃನ್ದಾವನಾಖ್ಯಾನ ವಿಷಯದಲ್ಲೂ ಹೀಗೇ ತಿಳಿಯಬೇಕು.

ಇನ್ನೊಂದು ವಿಷಯವೇನೆಂದರೆ - ಇಂಥ ವಿವಾದವು ವಿಶೇಷವಾಗಿ ವೃನ್ದಾವನಾಚಾರ್ಯರ ಕೊನೆಗಾಲದಲ್ಲಿ ಉತ್ಪನ್ನವಾಗಿ ಅನಂತರ ಜಂಖಂಡಿ ಆಚಾರ್ಯರ ಕಾಲದಲ್ಲಿ ವಿಜೃಂಭಿಸಿತು. ಅಂಥ ವಿವಾದ ಬಂದ ಮಾತ್ರಕ್ಕೆ ಸ್ವತಃ ಪ್ರಮಾಣ ಗ್ರಂಥದ ಪ್ರಾಮಾಣ್ಯಕ್ಕೆ ಏನು ಹಾನಿಯಾಗುತ್ತೆ? ದುರ್ಯೋಧನನ ಹನನ ಸಾಧುತ್ವ ವಿಷಯದಲ್ಲೇ ಸಜ್ಜನರ ಮಧ್ಯದಲ್ಲಿ ದೊಡ್ಡ ವಿವಾದ ಉಂಟಾಗಿ ಹೋಯಿತು. ಮ.ತಾ.ನಿ. XXVIII 83-116ರಲ್ಲಿ ವರ್ಣಿತವಾಗಿದೆ. ಬಲರಾಮ, ಅಶ್ವತ್ಥಾಮ, ಕೃತವರ್ಮಾದಿಗಳು ಭೀಮನು ಧರ್ಮಯುದ್ಧ ಮಾಡಲಿಲ್ಲವೆಂದು ಘೋಷಿಸಿಬಿಟ್ಟರು. ಯುಧಿಷ್ಠಿರನಿಗೂ ಸಂಶಯ ಹುಟ್ಟಿಹೋಯಿತು. ಆದರೆ ವಿವಾದ ಉಂಟಾದ ಮಾತ್ರಕ್ಕೆ ತತ್ವವು ಅತತ್ವವಾಗುವುದಿಲ್ಲ. ಪ್ರತಿಪತ್ತಿದೌಸ್ಥ್ಯವು ತಪ್ಪಿದ್ದಲ್ಲ ಎಂಬುದೇನೋ ನಿಜ. ಪ್ರಾಮಾಣ್ಯ ನಿರ್ಣಯವನ್ನು ಮಾಡಿಕೊಳ್ಳುವುದು ಕಷ್ಟವಾಗುತ್ತೆ. ಶ್ರದ್ಧಾಳುಗಳು ಸತ್ಸಂಗ ಹೊಂದಿ ಮೀಮಾಂಸಾ ಶಾಸ್ತ್ರೋಕ್ತರೀತಿಯಿಂದ ಬಲಾಬಲ ವಿಚಾರ ಮಾಡಿ ಆಖ್ಯಾನವು ನಿರ್ದುಷ್ಟ ಪ್ರಮಾಣವೆಂದು ನಿಶ್ಚಯಿಸಿಕೊಂಡು ಸಂದೇಹ ಕಳೆದುಕೊಳ್ಳಬೇಕು. ವಿವಾದ ಬಂದ ಮಾತ್ರಕ್ಕೆ ಪ್ರಾಮಾಣ್ಯ ಹೋಗಿಬಿಡುವುದಿಲ್ಲ. ಯಾವುದು ಪ್ರಾಮಾಣ್ಯನಾಶಕವೆಂದರೆ ವೇದಾದಿ ಪ್ರಬಲ ಪ್ರಮಾಣವಿರೋಧ. ಅದು ಪ್ರಕೃತದಲ್ಲಿ ಇಲ್ಲ. ಆದ್ದರಿಂದ ಪೂರ್ವಪಕ್ಷಿಗಳು ವಿಪ್ರ, ವೇದನಿಧಿ ಮುಂತಾದ ಜನರ ವಿಷಯಕವಾಗಿ ಮಾಡಿರುವ ಚರ್ಚೆ ಎಲ್ಲವೂ ಅರಣ್ಯರೋದನೆಯೇ. ಅದು ವೃನ್ದಾವನಾಖ್ಯಾನದ ಪ್ರಾಮಾಣ್ಯವನ್ನು ಅಲ್ಲಾಡಿಸಲೂ ಆಗದು. ಏಕೆಂದರೆ ಮೂಲ ಪ್ರಾಮಾಣ್ಯ ವಿರೋಧವಿಲ್ಲದಿದ್ದರೆ ಕರ್ತೃ ಪ್ರಸಿದ್ಧಿ ರಹಿತ ಗ್ರಂಥಕ್ಕೂ ಸುಳ್ಳು ಹೆಸರಿನ ಕರ್ತನ ಗ್ರಂಥಕ್ಕೂ ಪ್ರಾಮಾಣ್ಯ ಕಂಡಿದೆ.

**52. ಆಗಮ ವಿರೋಧ ವಿಚಾರ: ಪುಟ 24-4**

ಉಕ್ತಿ:

"ಹೀಗಾದರೆ ಭಾಷ್ಯಾದಿಗಳಿಗೂ ಮಧ್ವಾದಿ ಕೃತತ್ವಾ ನಿಶ್ಚಯವು ಉಂಟಾದೀತೆನ್ನಕೂಡದು. ವಿಪ್ರತಿಪತ್ತಿ ಇಲ್ಲದಿರುವುದರಿಂದ ಮತ್ತು ಸ್ವಪ್ನದ್ರಷ್ಟೃತ್ವ ರೂಪ ಉಪಾಧಿರಾಹಿತ್ಯದಿಂದಲೂ ಅವುಗಳ ವಿಷಯದಲ್ಲಿ ಕರ್ತೃ ನಿಶ್ಚಯವಾಗುತ್ತೆ" ಇತಿ.

ಪ್ರತ್ಯುಕ್ತಿ:

ನಿಜ. ಭಾಷ್ಯಾದಿಗಳು ಜೀವಂತರಿಂದ ಪ್ರತ್ಯಕ್ಷತಃ ಶಿಷ್ಯರೆದುರಿಗೆ ರಚಿತವಾದ್ದರಿಂದ ಕರ್ತೃವಿವಾದವಿಲ್ಲ. ಆಖ್ಯಾನದಂಥ ಅದ್ಭುತ ಕಾರ್ಯವು ಚಿಂತಾ ಅತೀತವಾದ್ದರಿಂದ ದೂರಸ್ಥರಿಗೆ ಸಂಶಯ ಹುಟ್ಟುತ್ತೆ ಎಂಬಲ್ಲಿ ಆಶ್ಚರ್ಯವೇನು? "ವಾದಿರಾಜ ಋಜುತ್ವ ವಿಚಾರ" ನಾಮಕ ಪೂರ್ವಪಕ್ಷ ಗ್ರಂಥದಲ್ಲೇ ಬಹು ವಾಕ್ಯಗಳು ಅನ್ಯಕೃತವೆಂದು ಸಂಶಯ ಹುಟ್ಟುತ್ತೆ. ಹಾಗಿರುವಲ್ಲಿ ಸ್ವಾಪ್ನ ವಾಕ್ಯಗಳ ವಿಷಯದಲ್ಲಿ ಕರ್ತೃ ಸಂಶಯವು ಹುಟ್ಟುತ್ತೆ ಎಂದು ಏನು ಹೇಳಬೇಕು? ಕರ್ತೃ ಸಂಶಯವು ಬಂದ ಮಾತ್ರಕ್ಕೆ ಗ್ರಂಥ ಪ್ರಾಮಾಣ್ಯಕ್ಕೆ ಏನು ಹಾನಿಯಾಯಿತು?

ಮೀಮಾಂಸಾಶಾಸ್ತ್ರ ಕುಶಲರಾದ ಗುರುರಾಜ ಭಕ್ತರು ಆಖ್ಯಾನ ತಾತ್ಪರ್ಯವನ್ನು ವ್ಯಾಖ್ಯಾನ ಉಪದೇಶಗಳಿಂದ ತಿಳಿದು, ಅದರ ಭಾಷಾರೀತಿ, ಪ್ರಮೇಯಗಳ ಪ್ರಮಾಣಾವಿರುದ್ಧತ್ವ, ಸಮೀಪವರ್ತಿಜನ ಸ್ವಭಾವ, ಸಂವಾದಿ ಐತಿಹ್ಯ ಗ್ರಂಥಾದಿಗಳನ್ನೂ ನೋಡಿ, ಆಖ್ಯಾನವು ವಾದಿರಾಜ ನಿಕೃತ ವೇದಾದಿ ಸಚ್ಛಾಸ್ತ್ರಾನುಸಾರಿ ಗ್ರಂಥವೆಂದೇ ನಿಶ್ಚಯಿಸುತ್ತಾರೆ. ವೃನ್ದಾವನಾಖ್ಯಾನವು ವಿಷ್ಣು ವೈಷ್ಣವ ಚರಿತ್ರಭರಿತವೂ ಪರಮ ಪವಿತ್ರವೂ ಆದ ಪರಮ ಪ್ರಾಮಾಣಿಕ, ಲೋಕೋಪಕಾರಿ ಗ್ರಂಥವೆಂದೂ ತಿಳಿಯುತ್ತಾರೆ. ವಿರೋಧಿ ಪ್ರಮಾಣವಿಲ್ಲ. ನಿರ್ಣಾಯಕಗಳಿವೆ. ಏಕೆ ನಿಶ್ಚಯ ಹುಟ್ಟುವುದಿಲ್ಲ? ದುರಾಗ್ರಹವೆಂಬ ಪ್ರತಿಬಂಧಕ ದೋಷವಿಲ್ಲದಿದ್ದರಾಯಿತು. ಅಂಥ ದೋಷಹೀನರಷ್ಟೇ ಅಧಿಕಾರಿಗಳು.

**53 ಆಗಮ ವಿರೋಧ ವಿಚಾರ : ಪುಟ 24-6**

**ಉಕ್ತಿ:**

“ನಮ್ಮಿಂದ ಸ್ವಪ್ನಸತ್ಯತ್ವವು ಶಂಕಿಸಲ್ಪಡುವುದಿಲ್ಲ. ಮತ್ತೇನೆಂದರೆ ವಿಪ್ರನಿಗೆ ಅಂಥ ಸ್ವಪ್ನ ಆಯಿತೇ ಎಂಬಲ್ಲಿ ನಮಗೆ ಸಂದೇಹ. ಅದಕ್ಕೆ ನಿರ್ಣಾಯಕ ಪ್ರಮಾಣವಿಲ್ಲ. ಏಕೆಂದರೆ ಅದು ಅತೀಂದ್ರಿಯ ವಿಷಯ. ಆಗಮಗಳು ಈ ವಿಷಯದಲ್ಲಿಲ್ಲ. ಆಪ್ತಿ ನಿಶ್ಚಯವು ದುಃಶಕ, ವಿಪ್ರತಿಪತ್ತಿಯೂ ಇದೆ. ವಿಸ್ತಾರವಾಗಿ ಈ ವಿಷಯ ಅನ್ಯತ್ರ” ಇತಿ.

**ಪ್ರತ್ಯುಕ್ತಿ :**

ಈ ಪ್ರಶ್ನೆಯು 'ಪರತಸ್ತ್ವ' ರೀತಿಯಿಂದ ಕೇಳಲ್ಪಟ್ಟಿದೆ. ಹೀಗೆಯೇ ಮಧ್ವಾಚಾರ್ಯರಿಂದ ಉದಾಹೃತ ಪ್ರಮಾಣಗಳು ಕಲ್ಪಿತವೆಂದೂ, ತನಗೆ ತಾನೇ ವಾಯುತ್ವವನ್ನು ಆರೋಪಿಸಿಕೊಂಡಿದ್ದಾರೆಂದೂ ಅಪ್ಪಯ್ಯದೀಕ್ಷಿತರು ಹೇಳಿದರು. ಅವರ ವಾದವೂ ಪರತಸ್ತ್ವ ರೀತಿಯದೇ. ಏಕೆಂದರೆ ಇಬ್ಬರೂ ವಿರೋಧಿ ಪ್ರಮಾಣವನ್ನು ಉದಾಹರಿಸಿಲ್ಲ. “ಭಕ್ತಿ ಪಾಶೈರ್ದೃಢಂ ಬಧ್ವಾ ಚಣಕಾದೀನ್ ಸಮರ್ಪಯನ್ ಸ್ವಯಂ ವಹತ್ಯಯಂ ನಿತ್ಯಮಶ್ವಾಸ್ಯಂ ವಾದಿ ರಾಡಹೊ” ಎಂದು ವೃ.ರ.ಸಂ. । 40 ದಲ್ಲಿ ಅವರನ್ನು ನೋಡಿದ ಕವಿಯು ಅದ್ಭುತವನ್ನು ಹೇಳಿದ್ದಾನೆ. ಪೂರ್ವಪಕ್ಷದವರೂ ವಾದಿರಾಜ ಗುರುಗಳು ಅಪರೋಕ್ಷ ಯೊಗಿಗಳೆಂದು ಒಪ್ಪಿದ್ದಾರೆ. “ವಾದಿರಾಜಖ್ಯಯತಿನಾ ಬ್ರಾಹ್ಮಣ ಸ್ವಾಪ್ನಮೂರ್ತಿನಾ । ಕೃತಂ ವೃನ್ದಾವನಾಖ್ಯಾನಂ ಪಠತಾಂ ಸಂಪದಾಂ ಪದಮ್” ಎಂದು ಅಣುವೃನ್ದಾವನಾಖ್ಯಾನವು ಶಿಲಾಸ್ಥವಾಗಿದೆ. ಆದ್ದರಿಂದ ಸಂದೇಹ ಹುಟ್ಟಲು ಅವಕಾಶವೇ ಇಲ್ಲ. ಸ್ವಪ್ನವು ಅತೀಂದ್ರಿಯವಾದ್ದರಿಂದ ಪ್ರಮಾಣ ಶ್ಲೋಕದಲ್ಲೂ ಸಂದೇಹ ಬರುತ್ತೆ ಎಂದರೆ ಪ್ರಮಾಣಾಂತರ ಕೊಟ್ಟರೂ ಸಂದೇಹ ಪಡಬಹುದು. ಪುನಃ ಪ್ರಮಾಣಾಂತರ ಕೊಟ್ಟರೂ ಸಂದೇಹ ಪಡಬಹುದು. ಹೀಗೆ ಅನವಸ್ಥೆ ಬರುತ್ತೆ. ಅತೀಂದ್ರಿಯ ವಿಷಯವಾದರೂ “ನನ್ನ ತಂದೆಯ ಮಗನು ನಾನು” ಎಂದು ಎಲ್ಲರೂ ತಿಳಿದಿರುತ್ತಾರೆ. ಅವಕ್ಕೆಲ್ಲಾ ಆಗಮಪ್ರಮಾಣ ಬೇಕಾದರೆ ಪಿತೃಪುತ್ರಭಾವ ನಿಶ್ಚಯವೇ ಅಯುಕ್ತವಾದೀತು. “ಬಾಧಕವಿದ್ದರೆ ಕೇಳಬಹುದು, ಇಲ್ಲದಿದ್ದರೆ ನಿಶ್ಚಯವು ಸರಿಯೇ' ಎಂದರೆ, ಈಗಲೂ ಹಾಗೆಯೇ. ವಿಪ್ರನಿಗೆ ಸ್ವಪ್ನವಾಯಿತೆಂದು ಹೇಳುವ ವೇದನಿಧಿಗಳ ವಾಕ್ಯಕ್ಕೂ ಆಖ್ಯಾನ ವಾಕ್ಯಗಳಿಗೂ ಪ್ರಮಾಣ ವಿರೋಧ ಕಂಡಿಲ್ಲ.

| |
|---|
| ಅತೀಂದ್ರಿಯ ವಿಷಯವಾದ ಮಾತ್ರಕ್ಕೆ ಸಂದೇಹ ಹುಟ್ಟಿಬಿಡುವುದಿಲ್ಲ. ಬೀಜದಿಂದ ಅಂಕುರಗಳು ಜಮೀನುಗಳಲ್ಲಿ ಹುಟ್ಟುವುದು ಕಾಣುತ್ತೆ. ಆ ಕಾರ್ಯಕಾರಣಭಾವ ಅತೀಂದ್ರಿಯವಾದರೂ ನಿಶ್ಚಯ ಜ್ಞಾನವು ಹುಟ್ಟುತಲೇ ಇವೆ. ವೃಥಾ ಪ್ರಶ್ನೆ ಮಾಡುವ ಸ್ವಭಾವದವರಿಗೆ ಏಕೈಕ ಪ್ರಮಾಣವಿರುವ ಪ್ರಮೇಯ ವಿಷಯಗಳಲ್ಲಿ ನಿಶ್ಚಯಜ್ಞಾನವು ಹುಟ್ಟವುದೇ ಇಲ್ಲ ಎಂದು ಹೇಳಬೇಕಾಗುತ್ತೆ. ಆದರೆ ಅದೆಲ್ಲಾ ಅನುಭವ ವಿರುದ್ಧ. ಅದು ಮಾಧ್ವಸಂಪ್ರದಾಯವಲ್ಲ. ಸ್ವತಸ್ತ್ವವಾದಿಗಳ ರೀತಿಯೂ ಅಲ್ಲ. ವಾಕ್ಯ ಪ್ರಾಮಾಣ್ಯವು ಸ್ವತಃ ಸ್ವಾಭಾವಿಕವಾದದ್ದು. ಬೇರೆ ರುಜುವಾತುಕೊಡ ಬೇಕಾಗಿಲ್ಲ. ಸ್ವಾಪ್ನವನ್ನು ಹೇಳುತ್ತೇನೆಂಬ ವಿಪ್ರವಾಕ್ಯವು ಪ್ರಮಾಣವು. |
| ಸ್ವಾಪ್ನ ಶ್ಲೋಕವೇ ಉಲ್ಲೇಖಿತವಾಗಿದೆ ಎಂಬ ವೇದನಿಧಿ ರಾಮಚಂದ್ರ ಪಂಡಿತರ ವಾಕ್ಯಗಳೂ ಪ್ರಮಾಣ. "ವೇದನಿಧ್ಯಾಖ್ಯಯತಿನಾ ವಾದಿರಾಜೇನ ಚೋದಿತಂ ಸ್ವಾಪ್ನಂ ವೃನ್ದಾವನಾಖ್ಯಾನಂ ಲಿಖಿತಂ ಪ್ರೀತಯೇ ಗುರೋಃ" ಎಂದು ಅಣುವೃನ್ದಾವನಾಖ್ಯಾನ. "ಶ್ರೀವೇದನಿಧಿರಾಕರ್ಣ್ಯ ಲೇಖಯಾಮಾಸ ಮತ್ಕರಾತ್" ಎಂದು **VII 19** ವಾ.ಗು.ಚ, ವಾಕ್ಯವು. ವಾ.ಗು.ಚ. **VII 17-22** ಅಷ್ಟೂ ಪ್ರಮಾಣವೇ. ಇವಕ್ಕೆ ಬಾಧಕ ಕಂಡಿಲ್ಲ. ಪ್ರಾಜ್ಞರೂ, ಸಿದ್ಧರೂ, ಯೋಗಿಗಳೂ ಆದ ವೇದನಿಧಿ ಮುನಿಗಳಿಂದ ಪ್ರಾಮಾಣ್ಯವು ನಿಶ್ಚಿತವಾಗಿದೆ. ಅವರ ಶಿಷ್ಯ ರಾಮಚಂದ್ರ ಪಂಡಿತರಿಂದಲೂ ಪ್ರಾಮಾಣ್ಯ ನಿಶ್ಚಿತವಾಗಿದೆ. ಆದ್ದರಿಂದ ಸ್ವಪ್ನ ಆಯಿತೇ ಎಂಬ ಸಂಶಯವು ಹುಟ್ಟುವುದಿಲ್ಲ. ಆ ಪ್ರಶ್ನೆ ಅನುಚಿತವು. ಆಗಮಾಭಾವ ಅಸಿದ್ಧ ವೇ. ಆಖ್ಯಾನದಲ್ಲಿ ಅನೇಕ ಸ್ಪಷ್ಟ ವಾಕ್ಯಗಳಿವೆ. **(X 21, XI 1).** ಪ್ರಾಮಾಣ್ಯಕ್ಕೆ ಆಪ್ತಿ ಬೇಕಿಲ್ಲ. ಆದರೂ ಅದು ಇದೆ. ಮಾಮಾಂಸಾ ಶಾಸ್ತ್ರ ಕೋವಿದರಾದ ಶ್ರೀವೇದನಿಧಿ ಮತ್ತು ಅವರ ಶಿಷ್ಯರೂ ವಿಮರ್ಶಕರು. |
| ಚಾರಿತ್ರಕವಾಗಿಯೂ ಕ್ರಿಸ್ತಾಬ್ದ **1870** ರವರಿಗೂ ಯಾರೂ ಇಂಥ ಪ್ರಶ್ನೆ ಮಾಡಿರಲಿಲ್ಲ. ತದನಂತರ ವೇದದಲ್ಲೂ, ಮಧ್ವಶಾಸ್ತ್ರದಲ್ಲೂ, ಆಖ್ಯಾನದಲ್ಲೂ ವಿಪ್ರತಿಪತ್ತಿಗಳು ಉದಯಿಸಿ, ಪತ್ರಿಕೆಗಳೂ ಗ್ರಂಥಾಭಾಸಗಳೂ ಹೆಚ್ಚಾಗಿ ಪ್ರಕಟವಾದವು. ಅಷ್ಟರಿಂದಲೇ ಸ್ವತಃ ಪ್ರಾಮಾಣ್ಯ ಮರ್ಯಾದೆಯಿಂದ ಲಬ್ದವಾದ ಆಖ್ಯಾನ ಪ್ರಾಮಾಣ್ಯವು ಹೋಗಿಬಿಡುವುದಿಲ್ಲ. ಏಕೆಂದರೆ ಯಾವ ಪುಸ್ತಕದಲ್ಲೂ ಆಖ್ಯಾನ ವಿಷಯದಲ್ಲಿ ವಿರೋಧಿ ಆಗಮ ವಾಕ್ಯವು ಉದಾಹರಿಸಲ್ಪಟ್ಟಿಲ್ಲ. ಸ್ವಾ.ವೃಂ.ಆ. ದಲ್ಲೇ ಹೇಳಲ್ಪಟ್ಟಿದೆ: "ಅಸಂಭಾವನಯಾ ತಸ್ಮಾದ್ವೈಭವಂ ನ ಪರಾಹತಂ" **XVI 93** (ಜನರು ಶಂಕೆ ಮಾಡಿದ್ದರಿಂದ ನನ್ನ ವೃನ್ದಾವನದ ವೈಭವವು ಸುಳ್ಳೆನಿಸುವುದಿಲ್ಲ ಎಂದರ್ಥ) ಹೀಗಿರುವುದರಿಂದ ವಿರೊಧಿ ಆಗಮವನ್ನು ಕಾಣದೆ, ಮಾಧ್ವ ಮೀಮಾಂಸಾ ರೀತಿಯನ್ನು ಅತಿಕ್ರಮಿಸಿ ಅನ್ಯ ಪಕ್ಷದ ನಿರ್ದುಷ್ಟ ಪ್ರಮಾಣಗಳನ್ನು ವೃಥಾಶಂಕೆಯಿಂದ ಅಪಹಾಸ ಮಾಡುತ್ತಾ, ಗ್ರಂಥ ಬರೆದು ಜನರ ಮನಸ್ಸಿನಲ್ಲಿ ಸಂಶಯ ಮಾತ್ರವನ್ನು ಹುಟ್ಟಿಸುವ ಲೇಖಕನು ಮಾಧ್ವ ಪಂಡಿತ ಸಭೆಯಲ್ಲಿ ವಿವೇಕಿ ಎಂದು ಹೇಗೆ ಪರಿಗಣಿಸಲ್ಪಡುವನು? |
| **54. ಆಗಮ ವಿರೊಧ ವಿಚಾರ : ಪುಟ 24-9** |
| **ಉಕ್ತಿ:** |

| |
|---|
| “ವಿಸ್ತರವು ಈ ವಿಷಯದಲ್ಲಿ” ಎಂದು ಹೇಳಿ ಆ ಪುಟದ ಪಾದಭಾಗದಲ್ಲಿ (foot note) “ನಮ್ಮಿಂದ ಬರೆಯಲ್ಪಟ್ಟ ಮಧ್ವ ಸಿದ್ಧಾಂತದ ವಿಶ್ವಕೋಶ” ಎಂದು ಹೇಳಿದ್ದಾರೆ. |
| **ಪ್ರತ್ಯುಕ್ತಿ :** |
| ಆ ಗ್ರಂಥದಲ್ಲೂ ಕೂಡ ಆಗಮವಿಲ್ಲದೆ ಅನ್ವೃಜುತ್ವ ನಿಶ್ಚಯ ಮಾಡಿದ್ದರೆ, ಬಾಧಕವನ್ನು ತೋರಿಸದೆ ಪರೋಕ್ತ ಖಂಡನೆ ನಡೆಸಿದ್ದರೆ, ಯಾರೂ ನೋಡದಿದ್ದರೂ ಪ್ರತ್ಯಕ್ಷ ಸಿದ್ಧತ್ವ ನಿಶ್ಚಯಿಸಿದ್ದರೆ, ಶುಷ್ಕಾನುಮಾನಗಳಿಂದ ಪರೋಕ್ತಾಗಮ ತಿರಸ್ಕಾರ ಮಾಡಿದ್ದರೆ, ಪ್ರಮಾಣರಹಿತ ಶಬ್ದಾ ಡಂಬರದಿಂದಲೇ ಸ್ವಕಪೋಲ ಕಲ್ಪಿತ ಸಿದ್ಧಾಂತಗಳನ್ನು ಮಂಡಿಸಿದ್ದರೆ, ಗ್ರಂಥವು ತಾಮಸವಾಗಿ ಸಜ್ಜನರಿಗೆ ವಿಪರೀತ ಬುದ್ಧಿದಾಯಕವಾಗುತ್ತೆ. ಆದ್ದರಿಂದ ಈ ಋಜುತ್ವ ವಿಚಾರ ನಾಮಕ ಗ್ರಂಥದಲ್ಲಿ ನಾವು ತೋರಿಸಿರುವ ದೋಷಗಳೆಲ್ಲವನ್ನೂ ಬಿಟ್ಟು ಆ ಗ್ರಂಥದಲ್ಲಿ ಪ್ರಮಾಣಕೊಟ್ಟು ವಿಚಾರ ಮಾಡಿದ ನಿಶ್ಚಯಗಳನ್ನು ತುಂಬಿ, ವಿದ್ವಜ್ಜನ ಪರಿಶೀಲನಾ ನಂತರವೇ ಅದನ್ನು ಪ್ರಕಟಿಸಲಿ, ಅನ್ಯಥಾ ಬೇಡ ಎಂದು ಲೋಕಕ್ಷೇಮಕ್ಕೋಸ್ಕರ ನಾವು ವಿಜ್ಞಾಪಿಸುತ್ತೇವೆ. |
| **55. ಆಗಮ ವಿರೋಧ ವಿಚಾರ : ಪುಟ 24-12** |
| **ಉಕ್ತಿ:** |
| "ತದೇವಂ=ಪೂರ್ವೋಕ್ತ ರೀತಿಯಲ್ಲಿ ಪ್ರಮಾಣರಹಿತವಾದ್ದರಿಂದ, ಪ್ರಮಾಣವಿರುದ್ಧವಾದ್ದರಿಂದ, ತದುಭಯಬಾಧಕ ಪ್ರಮಾಣಗಳ ಅನುಪಲಂಭದಿಂದಲೂ ವಾದಿರಾಜ ಋಜುತ್ವಕ್ಕೆ ಅನುಪಾದೇಯತ್ವವೇ ಇಷ್ಟರಿಂದ ಸಿದ್ಧವಾಯಿತು” ಇತಿ. |
| **ಪ್ರತ್ಯುಕ್ತಿ :** |
| ಇದು ಅಸತ್ಯವೇ. ಆದರೆ ಈ ಮಾತುಗಳೆಲ್ಲಾ ವಾದಿರಾಜಾನ್ವೃಜುತ್ವಕ್ಕೇ ಲಗ್ನವಾಗುತ್ತೆ. ಅದೆಲ್ಲಾ ಹಿಂದೆ ತೋರಿಸಿಯಾಗಿದೆ. ಋಜುತ್ವ ಪಕ್ಷಕ್ಕೆ ಪ್ರಮಾಣಗಳು ಇವೆ. ಪ್ರಮಾಣ ವಿರೋಧ ಒಂದೂ ಇಲ್ಲ. ಹಯಗ್ರೀವ ಪ್ರಸಾದ ರೂಪ ಫಲವೂ ಇದೆ. ಆಖ್ಯಾನಾದಿ ಗ್ರಂಥ ಪಾರಾಯಣ ಮಾಡುವ ವಾಚಕರೇ ಈ ವಿಷಯದಲ್ಲಿ ಸಾಕ್ಷಿಗಳು. |
| **56. ಪುಟ 24-15 ಉಕ್ತಿ:** |
| “ನಾವು ಋಜುತ್ವ ಸಾಧಕ ಪಕ್ಷದಲ್ಲಾಗಲೀ, ನಿಷೇಧHಕ್ಷದಲ್ಲಾಗಲೀ, ಎರಡರ ಪೈಕಿ ಯಾವ ಒಂದೂ ಪಕ್ಷದಲ್ಲಾಗಲೀ, ಆಗ್ರಹವುಳ್ಳವರಲ್ಲ. ಕೇವಲ ಪ್ರಮಾಣ ಶರಣರು” ಇತಿ. |
| **ಪ್ರತ್ಯುಕ್ತಿ :** |
| ಇದು ಕೇವಲ ಸುಳ್ಳೇ. ಹಿಂದಿನ 24-12 ರ ಉಕ್ತಿಯಲ್ಲಿ ವಾದಿರಾಜಾನ್ವೃಜುತ್ವವು ಸಿದ್ಧವೆಂದು ಪ್ರಮಾಣಹೀನ ನಿಗಮನದಿಂದ ಋಜುತ್ವ ಖಂಡನ ಪಕ್ಷದಲ್ಲಿ ಅವರಿಗಿರುವ ಅಭಿಮಾನವು ಸ್ಪಷ್ಟವಾಗಿ ವ್ಯಕ್ತವಾಗಿದೆ. ಈರುಳ್ಳಿ ವಾಸನೆಯು ಏನು ಮಾಡಿದರೆ ತಾನೇ ಹೋದೀತು? ತಥಾಚ ಸ್ವಕ್ರಿಯಾ ವಿರೋಧವು ಬಂತು. ಅನ್ವೃಜುತ್ವ ವಿಷಯದಲ್ಲಿ ಪ್ರತ್ಯಕ್ಷವು ಅಪ್ರವೃತ್ತವಾದರೂ ಪ್ರತ್ಯಕ್ಷ ಪ್ರಮಾಣ ಸಾಧಿಸಲು ಭಯಂಕರ 'ಅನುಕ್ತಿ' ಯುಕ್ತಿಯಿಂದ ಯತ್ನ |

ಮಾಡಿದ್ದಾರೆ. ಆಗಮಸಹಾಯವಿಲ್ಲದ್ದರಿಂದ ಅನುಮಾನಗಳೇ ಇಲ್ಲದಿದ್ದರೂ ಶುಷ್ಕಾನುಮಾನ ಸರಣಿಯನ್ನೇ ಎಳೆದಿದ್ದಾರೆ. ಆಗಮವೇ ಇಲ್ಲದಿದ್ದರೂ ಅನೃಜತ್ವವು ಸಿದ್ಧ ಎಂದು ಬರೆದಿದ್ದಾರೆ. ಪರೋಕ್ತಾಗಮಗಳನ್ನು ನೈಯಾಯಿಕ ವಾದಿಗಳ ಪ್ರಾಮಾಣ್ಯ ಪರತಸ್ತ್ವ ಪ್ರಕ್ರಿಯೆಯಿಂದ ಖಂಡಿಸಿ, ಆದೇ ಆಗಮ ವಿರೋಧ ಎಂದಿದ್ದಾರೆ. ಸ್ವಾ.ವೃಂ. ಆಖ್ಯಾನ ವಿಷಯದಲ್ಲಾದರೋ "ಅಸ್ಯಾಂ ಮಮಕೃತೌ ಯಸ್ಯ ವಿಶ್ವಾಸೋ ನಾಸ್ತಿ ದುರ್ಮತೇಃ | ತಸ್ಮಿನ್ನಾಶಾಸ್ಯ ತಾನಸ್ಯಾದ್ವ್ಯಾಸಸ್ಯೈವಾಜ್ಞಯಾ ಹರೇಃ" ಎಂದು ಸ್ಪಷ್ಟ ಶಾಸನವಾಕ್ಯವೇ ಇದ್ದರೂ ಕೂಡ ಅದನ್ನು ಉಲ್ಲಂಘಿಸಿ, ಅದರ ಪ್ರಾಮಾಣ್ಯಕ್ಕೆ ಬಾಧಕ ಕಾಣದಿದ್ದರೂ ಅದರ ಕರ್ತೃವಿಷಯದಲ್ಲಿ, ವಿಪ್ರವಿಷಯದಲ್ಲಿ, ಸಂಪಾದಕರಾದ ವೇದನಿಧಿಗಳ ವಿಷಯದಲ್ಲಿಯೂ ಪ್ರಶ್ನೆ ಮಾಡಿದ್ದಾರೆ. ಸ್ವಪ್ನ ಆಯಿತೆಂದು ಸಾಧಿಸುವುದೇ ಶಕ್ಯವಲ್ಲ, ಅತೀಂದ್ರಿಯವಾದ್ದರಿಂದ ಎಂದು ಕೂಡ ಉಪನ್ಯಾಸ ಮಾಡಿದ್ದಾರೆ. ಇವೆಲ್ಲಾ ಆಗ್ರಹ ಕಾರ್ಯವಲ್ಲದಿದ್ದರೆ ಇನ್ನಾವುದು ಆಗ್ರಹ ಕಾರ್ಯ? ಅವರೇ ವರ್ಣಿಸಲಿ. ಪ್ರಮಾಣವಿಲ್ಲದೆ ವೈಷ್ಣವ ಪರಮತ ಖಂಡನೆ ಮಾಡುವುದು ಪ್ರಮಾಣ ಶರಣರ ರೀತಿಯಲ್ಲ. ಪ್ರಮಾಣ ಶರಣರು ಆಂಗ್ಲ, ವೈಶೇಷಿಕರ ರೀತಿಯಿಂದ ಪ್ರಶ್ನೆ ಮಾಡಿ, ಜ್ಞಾನಿ ಸಂಪ್ರದಾಯಾದಿ ಆಗಮ ಕಟ್ಟಡಗಳನ್ನು ಉರುಳಿಸಲು ಯತ್ನ ಮಾಡುವುದಿಲ್ಲ. ಬಾಧಕ ಪ್ರಮಾಣ ಸಿಕ್ಕಿದರೇನೆ ಪ್ರಶ್ನೆ ಆಕ್ಷೇಪಗಳನ್ನು ಮಾಡುತ್ತಾರೆ. ಅನ್ಯಥಾ ಪ್ರಮಾಣ ಘಾತಕತ್ವ ಬರುತ್ತೆಂದು ಭೀತರಾಗುತ್ತಾರೆ. "ತದ್ಭಕ್ತದ್ವೇಷಃ ತದ್ದ್ವೇಷ ಏವ" ಗೀ.ಭಾ. VI; "ಶುಭೇಚ್ಛಾರಹಿತಾನಾಂ ಚ ದ್ವೇಷಿಣಾಂ ಚ ರಮಾಪತೌ। ನಾಸ್ತಿಕಾನಾಂ ಚ ವೈ ಪುಂಸಾಂ ಸದಾಮುಕ್ತಿರ್ನ ಜಾಯತೇ" | ಭಾಗ.ತಾ. ಇತ್ಯಾದಿ ಪ್ರಮಾಣಾರ್ಥಗಳನ್ನು ಮನ್ನಿಸುತ್ತಾರೆ.

ಕಿಂಚ ಅನ್ಯತರ ಪಕ್ಷ ಪರಿಗ್ರಹ ಶೂನ್ಯತ್ವವು ಗುಣವಲ್ಲ. ಧೃತರಾಷ್ಟ್ರ ಪುತ್ರ ಯುಯುತ್ಸುವು ಕುರು ಪಾಂಡವರ ಯುದ್ಧಾರಂಭದಲ್ಲಿ ಹೀಗೆ ಹೇಳಲಿಲ್ಲ. ಆತನು ಧರ್ಮಹೀನ ಕೌರವ ಪಕ್ಷವನ್ನು ತ್ಯಜಿಸಿ ಪಾಂಡವ ಪಕ್ಷವನ್ನು ಸೇರಿದನು. ಹೀಗೆ ಋಜುತ್ವ ಅನೃಜುತ್ವಗಳೆಂಬ ಪರಸ್ಪರ ವಿರುದ್ಧ ಪಕ್ಷಗಳ ಮಧ್ಯದಲ್ಲಿ ಒಂದು ಪಕ್ಷವೇ ಶ್ರೇಷ್ಠವು, ಸಾಧುವು. ಇನ್ನೊಂದು ಅಸಾಧುವು, ತ್ಯಾಜ್ಯವು. ವಸ್ತುವಿಕಲ್ಪವು ಅಪ್ರಾಮಾಣಿಕವು ಎಂದರೆ ಒಂದೇ ಪಕ್ಷವು ಸಾಧುವೂ ಹೌದು ಅಸಾಧುವೂ ಹೌದು ಎನ್ನಕೂಡದು. ಆದ್ದರಿಂದ ಉಭಯ ಪಕ್ಷಗಳಲ್ಲೂ ಆಗ್ರಹವಿಲ್ಲದೆ ಬಹಿರ್ಭಾವತನದಿಂದಿದ್ದು ಗ್ರಂಥದಲ್ಲಿ ಚರ್ಚೆಮಾಡುವುದು ಪ್ರಮಾಣಶರಣರ ರೀತಿಯಲ್ಲ. ಯಾವ ಪಕ್ಷದಲ್ಲಿ ಪ್ರಮಾಣ ಬಾಹುಳ್ಯವಿದೆಯೋ ಆ ಪಕ್ಷವು ಗ್ರಹಿಸಲ್ಪಡಲೇಬೇಕು. ನಾವು ಈ ಗ್ರಂಥದಲ್ಲಿ ಅದನ್ನು ತೋರಿಸಿದ್ದೇವೆ. "ನ ಚ ಜ್ಞಾನ ವಿಪರ್ಯಾಸಾದನ್ಯನ್ನಾಶಕರಂ ಕ್ವಚಿತ್" ಎಂದು ಆಚಾರ್ಯರ ಮಾತೇ ಇದೆ. ವಿಪರೀತ ಜ್ಞಾನದ ದೆಸೆಯಿಂದ ಹೆಚ್ಚು ನಾಶಕರವಾದದ್ದು ಬೇರೊಂದಿಲ್ಲ ಎಂದರ್ಥ.

**57. ಪುಟ 24-16**

**ಉಕ್ತಿ:**

| |
|---|
| “ಆದ್ದರಿಂದ ಸುಪೂರ್ಣಪ್ರಜ್ಞಮತಾನುಯಾಯಿಗಳೂ, ದೇವಾಂಶ ಸಂಭೂತ ಶ್ರೀಮದ್ವಾದಿರಾಜ ಪೂಜ್ಯಚರಣರಲ್ಲಿ ಬದ್ಧಾಧರವುಳ್ಳವರೂ ಆದ ಸನ್ಮನಸ್ಕ ಸುಜನರು ನನ್ನಲ್ಲಿ ಕರುಣೆಯನ್ನು ಮಾಡಲಿ (ನಿಜ ತತ್ವ ತಿಳಿಸಲಿ) ಇತಿ ಎಲ್ಲವೂ ಆತಿ ಮಂಗಳವು.” |
| ಪ್ರತ್ಯುಕ್ತಿ: |
| ಈ ಉಪಸಂಹಾರೋಕ್ತಿಯಲ್ಲಿ ಗ್ರಂಥಕಾರರು ಪ್ರಮಾಣವನ್ನು ತೋರಿಸದೆ ವಾದಿರಾಜ ಗುರುಗಳು ದೇವಾಂಶ ಸಂಭೂತರೆಂದು ಅಂಗೀಕರಿಸಿದ್ದಾರೆ. ಹಾಗಿದ್ದ ಮೇಲೆ ಪ್ರಮಾಣ ಸುಂಪ್ಲವಯುಕ್ತ ಋಜುತ್ವದ ಅಂಗೀಕಾರದಲ್ಲಿ ಕ್ಲೇಶವೇನು? ಗ್ರಂಥ ಕರ್ತೃತ್ವದಿಂದ ದೇವಾಂಗತ್ವವನ್ನು ಅನುಮಾನ ಮಾಡುತ್ತೇನೆ ಎಂದು ಹೇಳಲಾಗುವುದಿಲ್ಲ. ಹಾಗೆ ವ್ಯಾಪ್ತಿ ಇಲ್ಲ. ಆ ಹೇತು ಅಪ್ರಯೋಜಕ. ಹಾಗೆ ಅನುಮಾನ ಮಾಡುವುದಾದರೆ ಶ್ರೀಹಯವದನ ಸ್ವಾಮಿಯಿಂದ ನೈವೇದ್ಯ ಕಾಲದಲ್ಲಿ ಪ್ರತಿದಿನವೂ ಅಲಿಂಗಿತರಾದರಿಂದ ಋಜುಗಳೇ ಎಂದು ಅನುಮಾನ ಮಾಡಬಾರದೇ? ಭಾವಿ ರುದ್ರರೆಂದ್ರ ಖ್ಯಾತನಾದ ಭೂತನಾಥನಿಂದ ಸರ್ವದಾ ಸೇವಿತರಾದ್ದರಿಂದ ಋಜುವೇ ಎಂದು ಹೇಳಲಾಗುವುದಿಲ್ಲವೇ ? |
| ಅಲ್ಲದೆ ಗುರುರಾಜ ಭಕ್ತರು ಇಂಥ ಗ್ರಂಥ ರಚಿಸಿದವರಲ್ಲಿ ಏಕೆ ಕರುಣೆಯನ್ನು ತೋರಿಸಿ ಗುರುರಾಜರ ಸ್ವರೂಪ ಇವರಿಗೆ ಬೋಧಿಸಬೇಕು? ಇದು ತತ್ವಜ್ಞಾನ ಪ್ರಾಪ್ತಿಗೆ ಶಾಸ್ತ್ರೋಕ್ತ ಉಪಾಯವಲ್ಲವಲ್ಲಾ! “ತದ್ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವಯಾ” ಇತ್ಯಾದಿ ಪ್ರಮಾಣಾನುಸಾರ ತತ್ವ ಬುಭುತ್ಸು ಅಜ್ಞಾನಿಗಳು ಗರುಸೇವೆಯನ್ನು ಮಾಡಿ ಸದ್ಗುರೂಪದೇಶದಿಂದ ತತ್ವವನ್ನು ತಿಳಿಯಬೇಕು. ಅದನ್ನು ಬಿಟ್ಟು, ಗುರೂಪಸಕ್ತಿ ಭೀರುವಾಗಿ, ಪೂರ್ವಿಕರು ಒಪ್ಪಿರುವ ಪ್ರಮಾಣಾಪಲಾಪ ಮಾಡಿ ಅಸಂಗತ ಪ್ರಶ್ನೆಗಳಿಂದ ಮತ್ತು ಉಪಪಾದನೆಗಳಿಂದಲೂ ಅವರನ್ನು ಉದ್ವಿಗ್ನರನ್ನಾಗಿ ಮಾಡಿ “ಸ್ವಲ್ಪ ಕೃಪೆ ಮಾಡಿ, ನಾನು ಹೇಳಿದ್ದು ಸರಿಯಾಗಿಲ್ಲದಿದ್ದರೆ ಬೇರೆ ತತ್ವಯಾವುದು ತೋರಿಸಿ” ಎಂದು ಛಲ ಪ್ರಾರ್ಥನೆಯನ್ನು ಮಾಡಬಾರದು. ಅವರು ಹೇಗೂ ಕೋಪಗೊಂಡು ಪ್ರತಿಘೋಷಣೆ ಮತ್ತು ಉಪನ್ಯಾಸಾದಿಗಳಿಂದ ಪತ್ರಿಕೆಗಳನ್ನೂ ಸಮಾಜ ಸಂಘಗಳನ್ನೂ ತುಂಬಿಬಿಡುತ್ತಾರೆ; ಆಗ ತತ್ವವು ತಾನಾಗಿ ಹೊರಬೀಳುವುದು ಎಂದು ನಿರೀಕ್ಷಿಸುವುದು ಸಿದ್ಧಿಪ್ರಾಪಕ ವಿದ್ಯಾಲಾಭ ಮಾರ್ಗವಲ್ಲ. ಸರಿಯಾದ ಮಾರ್ಗವು ಯಾವುದೆಂದರೆ ಗುರುಪಾದಗಳಲ್ಲಿ ವಿನಯ ಪೂರ್ವಕವಾಗಿ ಅಪ್ಪಣೆ ಪಡೆದು ಎಲ್ಲಾ ವಿಧವಾದ ಪೂರ್ವಪಕ್ಷಗಳನ್ನು[ಗುರು ಸಮಕ್ಷಮದಲ್ಲಿ ಆಜ್ಞಾನಿ ಶಿಷ್ಯನು ಜ್ಞಾನಾರ್ಜನೆಗಾಗಿ ನಾಸ್ತಿಕ್ಯ ವಾದವನ್ನು ಅವಲಂಬಸಿ ಪ್ರಶ್ನೆಗಳನ್ನು ಮಾಡಿದರೂ ಅಧಿಕಾರಿಯು ದೋಷದಿಂದ ಲಿಪ್ತನಾಗುವುದಿಲ್ಲ. ಭಾಗ.ತಾ. XI 10-35 "ಶಿಷ್ಯೋಪಿ ಪೂರ್ವಪಕ್ಷಸ್ಥಃ ತದೇವಾತ್ಮಮತಂ ಭೃವನ್ । ನೈವದುಷ್ಯತ್ಯಸತ್ಯೇನ ಸ್ಥಿರತ್ವಾರ್ಥಂ ಹಿ ತದ್ವಚಃ ।” ಇತಿ ವಿಕ್ಷೇಪೇ ಎಂದಿದೆ. (ಶಿಷ್ಯನು ಪೂರ್ವಪಕ್ಷ ಅವಲಂಬಿಸಿ ಅದೇ ನನ್ನ ಮತ ಎಂದು ಉಪಪಾದಿಸಿದರೂ ಪಾಪವನು ಹೊಂದುವುದಿಲ್ಲ. ಏಕೆಂದರೆ ಗುರುಗಳ ಉತ್ತರದಿಂದ ಯಥಾರ್ಥಜ್ಞಾನ ಸ್ಥಿರ ಮಾಡಿಕೊಳ್ಳಲು ಹಾಗೆ ಕೇಳಿದ್ದು.) ಗೀ.ಭಾ. II ರಲ್ಲೂ "ಜಾನಂತಿ ಪೂರ್ವರಾಜಾನಃ ದೇವರ್ಷಯಸ್ತಥೈವ ಚ । ತಥಾಪಿ ಧರ್ಮಾನ್ ಪೃಚ್ಛಂತಿ |

ವಾರ್ತಾಯೈ ಗುಹ್ಯವಿತ್ತಯೇ" ಎಂದಿದೆ. ನಿರ್ಣಯದಲ್ಲೂ XXI 254-5; XXX 138 ಮುಂತಾದ ವಾಕ್ಯಗಳಲ್ಲಿ ಪ್ರಶ್ನೆ ಅನುಮತವಾಗಿದೆ; ತತ್ವಜ್ಞಾನಪ್ರದ ವಾದೋಪಯೋಗಿಯಾದ್ದರಿಂದ] ಮಾಡಿ ಅವರಿಂದ ಪ್ರಮಾಣ ಪೂರ್ವಕವಾಗಿ ಉತ್ತರವನ್ನು ಹೊಂದುವುದು.

ಪ್ರಕೃತದಲ್ಲಿ ಗ್ರಂಥಕಾರರು ಛಲ ರೀತಿಯನ್ನು ಅವಲಂಬಿಸಿದ್ದರಿಂದ "ತತ್ಪ್ರಮಾಣಸ್ಯ ನಿಂದಾ" ಎಂಬ ದೋಷಕ್ಕೆ ಗುರಿಯಾದಂತಾಯಿತು. 'ಗುಣಾನಾಮಲ್ಪತಾಜ್ಞಾನಂ' ಎಂಬ ದ್ವೇಷವನ್ನೂ ಪ್ರಕಟಿಸಿಕೊಂಡಂತಾಯಿತು. ಇಂಥ ಕಾರ್ಯಕರ್ತರಲ್ಲಿ ಅಧಾರ್ಮಿಕತ್ವವೇ ಇವೆ ಎಂದು ನಿಶ್ಚಿತವಾಗುತ್ತೆ. ಇಂಥವರನ್ನು ಹೇಗೆ ಕಾಣಬೇಕೆಂಬಲ್ಲಿ ಪ್ರಮಾಣವಿದೆ: "ಮಾತಾವಾ ಜನಕೋವಾಪಿ ಭ್ರಾತಾವಾ ತನಯೋಽಪಿವಾ | ಅಧರ್ಮಂ ಕುರುತೇಯಸ್ತು ಸ ಏವ ರಿಪುರಚ್ಯುತೇ || ಯಸ್ತ್ವಧರ್ಮೇಷು ನಿರತಃ ಸರ್ವಲೋಕ ವಿರೋಧಕೃತ್ | ತಂ ರಿಪುಂ ಪರಮಂ ವಿದ್ಯಾಚ್ಛಾಸ್ತ್ರಾಣಾಂ ಏವ ನಿರ್ಣಯಃ || ಸಗರಃ ಪುತ್ರ ನಾಶೇಽಪಿ ನ ಶುಶೋಚ ಮುನೀಶ್ವರ || ದುರ್ವೃತ್ತ ನಿಧನಂ ಯಸ್ಮಾತ್ಸತ್ತಾಮುತ್ಸಾಹ ಕಾರಣಂ ||" ಎಂದು ನಾರದ ಪುರಾಣ, ಎರಡನೇ ಅಧ್ಯಾಯದಲ್ಲಿದೆ. (ತಾಯಿಯಾಗಲಿ, ತಂದೆಯಾಗಲಿ, ಸಹೋದರನಾಗಲಿ, ಮಗನಾಗಲಿ ಅಧರ್ಮ ಮಾಡಿದವನು ಶತ್ರುವೆನ್ನಿಸುತ್ತಾನೆ. ಅಧರ್ಮಕರ್ತನೂ, ಸರ್ವ ಲೋಕಕ್ಕೂ ವಿರೋಧಿಕಾರಿಯೂ ಆದವನು, ಲೋಕಕ್ಕೆ ದೊಡ್ಡ ಶತ್ರುವೆಂದು ತಿಳಿಯಲ್ಪಡಬೇಕು. ಇದೇ ಶಾಸ್ತ್ರಗಳ ನಿರ್ಣಯ. ಸಗರನು ಪುತ್ರ ನಾಶವಾಗಿದ್ದರೂ ಶೋಕ ಹೊಂದಲಿಲ್ಲ. ಏಕೆಂದರೆ ದುಷ್ಕರ್ಮಿಗಳ ನಿಧನವು ಸಾಧು ಸಂತರಿಗೆ ಉತ್ಸಾಹಕ್ಕೆ ಕಾರಣವಾಗುತ್ತೆ.) ಹೀಗಿರುವುದರಿಂದ ಧರ್ಮ ವಿರೋಧಿಗಳು ಸ್ವಯಂ ಕುರುಡರು, ತಮ್ಮ ಸಂಗಡಿಗರನ್ನೂ ಅನುಯಾಯಿಗಳನ್ನೂ ಇಂಥ ಕೆಟ್ಟ ಗ್ರಂಥಗಳನ್ನು ಬರೆದು ಪಾಪವೆಂಬ ದೊಡ್ಡ ಹಳ್ಳದಲ್ಲಿ ಕೆಡವುತ್ತಾರೆ. ಅಂಥ ಮೀಮಾಂಸಾ ರೀತಿಯನ್ನತಿಕ್ರಮಿಸಿದ ಉಗ್ರಕರ್ಮಕರ್ತರಿಗೂ, ವಿಷ್ಣುಭಕ್ತರ ಮಹಿಮೆಯನ್ನು ಕಮ್ಮಿ ಮಾಡಿ ವ್ಯತ್ಯಾಸವಾಗಿ ಪ್ರತಿಪಾದಿಸುವವರಿಗೂ ಕರುಣಾ ಪಾತ್ರತ್ವವು ಎಲ್ಲಿಂದ ಬಂತು? ನಿರ್ಣಯ ಲ್ಲೇ ಪ್ರಮಾಣವಿದೆ: "ಕ್ಷಮಾ ಸರ್ವತ್ರ ಧರ್ಮೋ ನ, ಪಾಪ ಹೇತುಶ್ಚ ದುರ್ಜನೇ" (ಸರ್ವರ ವಿಷಯದಲ್ಲೂ ಕ್ಷಮಿಸುವುದು ಧರ್ಮವಲ್ಲ. ದುರ್ಜನರನ್ನು ಕ್ಷಮಿಸುವುದು ಪಾಪಹೇತುವೇ ಆಗುತ್ತೆ. ಅದು ವೇದಾಭಿಮಾನಿ ದೇವತೆಯ ಮಾತು.

**58. ಪುಟ 25-1**

**ಉಕ್ತಿ :**

"ಗುರುರಾಜ ಭಕ್ತರು ಈ ಪ್ರಬಂಧವನ್ನು ಯಥಾವತ್=ಪ್ರಾಮಾಣಿಕ ರೀತಿಯಲ್ಲಿ ವಿಮರ್ಶೆಮಾಡಿ ಅದು ಸರಿಯಾಗಿದೆ ಎಂಬ ಸಮ್ಮತಿದಾನದಿಂದಲೋ, ಗುರುರಾಜ ಋಜುತ್ವಕ್ಕೆ ಪ್ರಮಾಣಯುಕ್ತತ್ವ ಮತ್ತು ಪ್ರಮಾಣಾವಿರುದ್ಧತ್ವವಿದೆಯೆಂದು ನಿರೂಪಿಸಿ ಅನೃಜುತ್ವಕ್ಕೆ ಬಾಧಕ ಪ್ರದರ್ಶನದಿಂದಲಾಗಲೀ ನನ್ನಲ್ಲಿ ಕರುಣೆSಯನ್ನು ತೋರಿಸಲಿ". ಹೀಗೆ ಗ್ರಂಥಕಾರರ ಉಪಸಂಹಾರ ವಚನವಿದೆ.

**ಪ್ರತ್ಯುಕ್ತಿ:**

ನಿಜ ಹೀಗೆ ಗ್ರಂಥಕರ್ತರು ಪ್ರಾರ್ಥಿಸಿದ್ದಾರೆ. "ಧರ್ಮೋ ಭವತ್ಯಽಧರ್ಮೇಪಿ ಕೃತೋಭಕ್ತೈಸ್ತವಾಚ್ಯುತ" I 109 ಕ್ವಚಿತ್ಪಾಪಂ ಪುಣ್ಯಾನಾಂ ವೃದ್ಧಯೇ ಭವತಿಸ್ಫುಟಂ" XXI-356; ಎಂದು ನಿರ್ಣಯ ಪ್ರಮಾಣಗಳಿವೆ. ಹಾಗೆಯೇ XXIV 75-76 ನಿರ್ಣಯದಲ್ಲಿ "ಯೇ ಯೇ ತದಾ ಕೇಶವ ಸಂಯಮಾಯ ನ್ಯಮಂತ್ರಯಂಸ್ತೇ ವಿಬುಧ ಪ್ರತಿಪಾಃ ॥ ಕರ್ಣಃ ಸುರಾಂಷೋಪಿ ಸುಯೋಧನಾರ್ಥೇನ್ಯಮಂತ್ರಯದ್ಭಾವತೋ ನೈವ ದುಷ್ಟಃ| ಅತೋಗತಿಶ್ಚಾಸ್ಯ ಸುಶೋಭನಾಭೂದ್ಯೇತ್ರಾನುಕೂಲಾಃ ಪರಮಸ್ಯ ತೇ ಶುಭಾಃ" ಎಂದು ಕೂಡ ವಚನವಿದೆ. ಇವೆಲ್ಲವುಗಳ ತಾತ್ಪರ್ಯವನ್ನು ಪರ್ಯಾಲೋಚಿಸಿ ನನ್ನ ಗುರುಗಳಾದ ಶ್ರೀ ಶ್ರೀ ಪ್ರದ್ಯುಮ್ನತೀರ್ಥ ಶ್ರೀಪಾದಂಗಳವರು ತಮಗೆ ಅಂಚೆ ಮೂಲಕ ಕರ್ತೃನಾಮಯುಕ್ತ ಮುಖಪತ್ರವನ್ನು ಹರಿದು ಹಾಕಿ, ಕೊನೆಯಲ್ಲಿ ಕರ್ತೃನಾಮದಮೇಲೆ ಶಾಯಿಬಳಿದಿದ್ದ, ತಮಗೆ ಪ್ರಾಪ್ತವಾದ, ಈ ಪೂರ್ವಪಕ್ಷಗ್ರಂಥದ ಪ್ರತಿಯನ್ನು ನನ್ನ ಕೈಯಲ್ಲಿ ಹಾಕಿ 'ವಿಮರ್ಶೆಮಾಡಿ ಈ ಗ್ರಂಥ ಖಂಡನೆಯನ್ನು ಮಾಡು' ಎಂದು ಆಜ್ಞಾಪಿಸಿದರು. 'ಪ್ರಮಾಣಗಳನ್ನು ಕೊಟ್ಟು ಸಿದ್ಧಾಂತವನ್ನು ಬರಿ' ಎಂದರು. 'ಸಾಧವೋ ದೀನ ವತ್ಸಲಾಃ' 'ಏತಾವತ್ಸಾಧುಲಕ್ಷಣಂ' ಎಂಬ ನ್ಯಾಯದಂತೆ ದಯೆತೋರಿಸಿದ ಅವರು ಪೂರ್ವಪಕ್ಷದ ಗ್ರಂಥಕಾರರ ಆಗ್ರಹಾದಿಗಳನ್ನು ಉಪೇಕ್ಷೆ ಮಾಡಿ ಅವರ ಪ್ರಾರ್ಥನೆ ನೋಡಿ ಅವರಲ್ಲಿ ಭಾವಶುದ್ಧಿ ಇರಬಹುದೆಂದು ಅನುಮಾನ ಮಾಡಿ ಸರಳಭಾವದಿಂದ ಅವರಿಂದ ಪ್ರಾರ್ಥಿತವಾದದ್ದನ್ನೆಲ್ಲಾ ಮಾಡಿಸಿದ್ದಾರೆ. ಅನೃಜುತ್ವ ವಿಷಯದಲ್ಲಿ ಪ್ರಮಾಣಾಭಾವವನ್ನೂ ಪ್ರಮಾಣವಿರುದ್ದತ್ವವನೂ ಬರೆಯಿಸಿದ್ದಾರೆ. ಋಜುತ್ವ ವಿಷಯದಲ್ಲಿ ಎಂಟು ಪ್ರಮಾಣಗಳನ್ನು ಉದಾಹರಣೆ ಮಾಡಿಸಿ ಶ್ರೀಮದಾಚಾರ್ಯರಿಗೆ ಸಮ್ಮತವಾದ ವಿಚಾರಮಾರ್ಗವನ್ನು ವೈಷ್ಣವಜನರ ಉಪಕಾರಕ್ಕೋಸ್ಕರ ಉಪಪಾದನೆ ಮಾಡಿಸಿದ್ದಾರೆ. ಹೆಚ್ಚು ಹೇಳಬೇಕಾದುದೇನು? ತಾ. 21-6-70 ರಲ್ಲೂ ಪುನಃ ತಾ. 10-8-70 ರಲ್ಲೂ ಏರ್ಪಡಿಸಿದ್ದ ವಾದಕ್ಕೆ ಪೂರ್ವಪಕ್ಷ ಗ್ರಂಥಕಾರರೇ ಬಂದು ಚರ್ಚೆ ಮಾಡಿ ಸಂವಾದವನ್ನು ಕೊಟ್ಟು ಪ್ರಾಮಾಣ್ಯ ಸ್ವತಸ್ತ್ವ ವಿಚಾರಮಾರ್ಗಕ್ಕೆ ಬಂದಿದ್ದಾರೆ. ನಂತರ ಸೋದಾಪುರೀ ಮಠದಲ್ಲಿ ನವರಾತ್ರೋತ್ಸವ ಕಾಲದಲ್ಲಿ ನನ್ನ ಪೂಜ್ಯ ಗುರುವರರು ಶ್ರೀ ಶ್ರೀ 108 ಶ್ರೀ ಶ್ರೀ ವಿಶ್ವೋತ್ತಮತೀರ್ಥ ಶ್ರೀಮಚ್ಚರಣರೂ, ಗುರುರಾಜ ಋಜುತ್ವದಲ್ಲಿ ನಿಶ್ಚಿತಜ್ಞಾನವುಳ್ಳ ಗೃಹಸ್ಥ ಶ್ರೇಷ್ಟರಾದ ಶ್ರೀ. ಜಿ. ಜಿ. ಪೌರಾಣಿಕ, ಧಾರವಾಡ, ಶ್ರೀ ಬಿ. ಪಿ. ನಾರಾಯಣಮೂರ್ತಿ, ತುಮಕೂರು, ಮುಂತಾದವರೂ ಉತ್ಕಂಠಿತ ಹರ್ಷ ವಿಶೇಷದಿಂದ ಸಂಸ್ಕೃತ ಗ್ರಂಥವನ್ನು ಶ್ರವಣ ಮಾಡಿ ಸಂತೋಷಪಟ್ಟು ಪ್ರತಿಪ್ರಕರಣಸ್ಥ ಪೂರ್ವಪಕ್ಷೀಯ ಗ್ರಂಥ ದೂಷಣಗಳನ್ನು ತೋರಿಸಿ ವಿಸ್ತಾರವಾಗಿ ಉಪಪಾದಿಸಬೇಕೆಂದೂ ಅನುಮತಿಯನ್ನು ಕೊಟ್ಟರು. ನಂತರ ಹದಿನಾಲ್ಕನೆಯ ಅಧ್ಯಾಯ ರಚಿಸಿ ಆ ಕಾರ್ಯವೂ ಮಾಡಲ್ಪಟ್ಟು 12-11-70ರಲ್ಲಿ ಸಂಪೂರ್ಣವಾದ ಸಂಸ್ಕೃತ ಗ್ರಂಥವು ಶ್ರೀ ವಾದಿರಾಜ ಗುರ್ವಂತರ್ಗತ ಶ್ರೀಲಕ್ಷ್ಮೀಹಯವದನ ದೇವರಿಗೆ ಸಮರ್ಪಿತವಾಗಿದೆ. ಈ 14ನೆಯ ಅಧ್ಯಾಯವನ್ನು ಅವಕಾಶವಿಲ್ಲದ್ದರಿಂದ ಶ್ರವಣ ಮಾಡಿಲ್ಲವಾದರೂ, ಪೂರ್ವಪಕ್ಷ ಗ್ರಂಥಕಾರರು ಸೌಹಾರ್ದದಿಂದ ವಿಚಾರ ವಿನಿಮಯವನ್ನು ಮಾಡಿದವರಾಗಿ 26-11-1970 ರ ತಮ್ಮ ಪತ್ರದಲ್ಲಿ ಗುರುರಾಜ ಋಜುತ್ವದಲ್ಲೇ ತಮ್ಮ ದೀಕ್ಷೆಯು ಬಂದು ಹೋಗಿರುವುದಾಗಿಯೂ ಅದೇ ಸಿದ್ಧಾಂತವೆಂದು ನಂಬಿಕೆ ಹುಟ್ಟಿ ಹೋಯಿತೆಂದೂ ಅಂಗೀಕರಿಸಿ "ನನ್ನ

ಸಂಶಯ ಸಂಪೂರ್ಣವಾಗಿ ಬಿಟ್ಟುಹೋಗಿದ್ದು ಈ ದಿನ ಬೆಳಿಗ್ಗೆ, ಅಂತಯೇ ನಾನಿಂದು ಕೃತಾರ್ಥ" ಎಂದು ಬರೆದೂ ಸಹ ನಮ್ಮೆಲ್ಲರಿಗೂ ಸಂತೋಷಪಡಿಸಿಬಿಟ್ಟರು. ಅವರೇ ಒಂದು 'ಸಂವಾದ' ಗ್ರಂಥವನ್ನು ಬರೆಯುತ್ತಾರೆಂಬ ನಿರೀಕ್ಷೆಯೂ ಉಂಟಾಯಿತು.

ಈಚೆಗೆ ಅವರಿವರಿಗೆ ಬರೆದಿರುವ ಅವರ ಪತ್ರಗಳಿಂದ ಅವರ ನಿಶ್ಚಯವು ಸ್ವಲ್ಪ ಸಡಿಲವಾಗಿರುವಂತೆ ಕಾಣುತ್ತೆ. ಅವರು ಸಂವಾದ ಬರೆದಿಲ್ಲ. ಪುನಃ ಚರ್ಚೆಗೂ ಬಂದಿಲ್ಲ. ನಮ್ಮಿಬ್ಬರ ವಿಚಾರರೀತಿ ವಾದಕಥೆಯಾದ್ದರಿಂದ ಈ ಕೊನೆಯ ಅಧ್ಯಾಯವನ್ನು ಅವರಿಂದ ಓದಿಸಿ ಅವರ ಮನಸ್ಸಿನಲ್ಲಿ ಇನ್ನೇನಾದರೂ ಸಂಶಯ ಹುಟ್ಟಿದ್ದರೆ ಅದನ್ನು ಪರಿಹರಿಸಬೇಕೆಂದಿದ್ದೇನೆ. "ನಿಂದ್ಯೋ ದಂಡ್ಯೋಽ ಥವಾಭವೇತ್' ಎಂದು ಭಗವತ್ಪಾದರ ವಾಕ್ಯವಿರುವುದರಿಂದ ಅವರು ಹೇಳಿದ್ದು ಸರಿಯಾದರೆ ನಾನೇ ಒಪ್ಪಬೇಕು; ಅನ್ಯಥಾ ಕಥಾ ಮರ್ಯಾದೆ ಮೀರಿದ ವಾದಿಗೆ ದೊಷವಿದೆಯಾದ್ದರಿಂದ ಶ್ರೀಹರಿವಾಯುಗಳು ವಾದಪೂರ್ತಿಗೂ ಅವಕಾಶ ಕೊಡುವರೆಂದು ನಂಬಿ ಪ್ರಾರ್ಥಿಸುತ್ತಿದ್ದೇನೆ. ಪ್ರಕೃತ ಸಂಸ್ಕೃತ ಗ್ರಂಥವು ಎಷ್ಟು ಸುಲಭವಾದರೂ ಜನತೆಗೆ ಗೊತ್ತಾಗುವುದಿಲ್ಲವಾದ್ದರಿಂದ ಸುಹೃಜನರ ಇಚ್ಛೆಯಂತೆ ಭಾಷಾಂತರ ಮಾಡಲಾಗಿ ಈ ರೀತಿ ವಿಸ್ತೃತವಾಗಿ ಶ್ರೀಮದ್ವಾದಿರಾಜ ಋಜುತ್ವ ಸಿದ್ಧಾಂತವು ಪ್ರಸಿದ್ಧವಾಗಿದೆ. ಇವನ್ನು ನೋಡಿ ಪೂರ್ವಪಕ್ಷಿಯೂ ಅಂಗೀಕರಿಸಿ, ನಿರ್ವೇದನ, ತಪಃ, ಪಶ್ಚಾತ್ತಾಪಗಳಿಂದ ಸುದಗ್ಧಾನೃಜುತ್ವ ಶಂಕಾ ಕಳಂಕಿತಾಂತಃಕರಣರಾಗಿ ಮೂಸೆಯಲ್ಲಿ ಕರಗಿಸಿದ ಚಿನ್ನದಂತೆ ನಿರ್ಮಲ ಭಾವವನ್ನೂ ಹೊಂದಿ ಶ್ರೀ ವಾದಿರಾಜ ಗುರುವರ ಚರಣದಲ್ಲಿ ಶರಣು ಹೊಂದಲಿ, ಅವರೂ ಕೂಡ ಲೋಕೋಪಕಾರಕ್ಕೋಸ್ಕರ ಎಲ್ಲಾ ಪೂರ್ವಪಕ್ಷಗಳನ್ನೂ ಸಂಗ್ರಹಿಸಿ ಏಕತ್ರ ಪ್ರಕರಣವಾಗಿ ಪ್ರಕಟಿಸಿದ್ದರಿಂದ ಸಿದ್ಧಾಂತವನ್ನು ಸ್ಥಿರವಾಗಿ ತಿಳಿಯಲು ಕಾರಣವಾಯಿತಾದ್ದರಿಂದ ಧರ್ಮವೃದ್ಧಿಯನ್ನೇ ಹೊಂದಲೆಂದೂ ಕೋರಲಾಗಿದೆ. ಹಾಗಿಲ್ಲದೆ ಮನೋದೋಷ ಪೂರ್ವಕವಾಗಿ ಪೂರ್ವಪಕ್ಷ ಗ್ರಂಥ ರಚಿಸಿದ್ದರೆ III 4-12 ಸೂತ್ರ ಭಾಷ್ಯದಲ್ಲಿ "ಗುರುಭಕ್ತಿವಿಹೀನಸ್ಯ" ಇತ್ಯಾದಿ ಪ್ರಮಾಣವಾಕ್ಯದಲ್ಲಿ ಹೇಳಿದಂತೆ ಶಾಸ್ತ್ರೋಕ್ತ ಪ್ರತ್ಯವಾಯವು**[ಸ್ವಾ.ವೃಂ.ಆಖ್ಯಾನಸ್ಥ XXI ಶ್ಲೋಕ 96-105 ಇವುಗಳ ವ್ಯಾಖ್ಯಾನವನ್ನು ನೋಡಬಹುದು]** ಅಪರಿಹಾರ್ಯವು. ಇನ್ನು ಹೆಚ್ಚು ಬೆಳೆಸುವುದು ಏತಕ್ಕೆ?

ಹೀಗೆ ವಾದಿರಾಜ ಗುರುರಾಜರ ವಿಷಯದಲ್ಲಿ ಚರ್ಚಿಸಿ ಅವರ ಋಜುತ್ವವು ಅನಂತ ವೇದಾದಿ ಸತ್ಪ್ರಮಾಣಗಳಿಂದ ಸಿದ್ಧವಾಗುತ್ತೆಂದು ನಿರೂಪಿಸಲ್ಪಟ್ಟಿದೆ. ಪ್ರತ್ಯಕ್ಷ ಪ್ರತಿಮಾದರ್ಶನ ಮಾಡಿದರೆ ಉಲ್ಲಾಸದಿಂದ ಮನಃಪಂಕಜವು ಅರಳಿ ಹೋಗುತ್ತೆ. ಆಖ್ಯಾನ ಪಾಠಕರಿಗೆ ಪಾರಾಯಣದ ಆನಂದ ಜೊತೆಗೆ ಅಭೀಷ್ಟಪ್ರಾಪ್ತಿರೂಪ ಫಲೋಪಲಬ್ಧಿಯಿಂದ ಆಖ್ಯಾನೋಕ್ತ ಭವಿಷ್ಯಗಳ ಸತ್ಯತ್ತ ಮನಸ್ಸಿಗೆ ಬರುವುದರಿಂದಲೂ, ಸುದೃಢತಮ ನಿಶ್ಚಯವೇ ಹುಟ್ಟಿ ಸಜ್ಜನ ಹೃದಯ ಮಂದಿರದಲ್ಲಿ, ವಿಶೇಷತಃ ಪಕ್ವಾಧಿಕಾರಿಗಳಾದ ಸದ್ವೈಷ್ಣವರ ಮನೋದರ್ಪಣಗಳಲ್ಲಿ ನಿಶ್ಚಲವಾಗಿ ಶೋಭಿಸುತ್ತದೆ. ಯಾವುದು? ಶ್ರೀ ವಾದಿರಾಜ ಗುರುಸಾರ್ವಭೌಮರ ಋಜುಗಣಸ್ಥತ್ವವು. ಹೀಗೆ ಸರ್ವವೂ ಸುಮಂಗಲವಾಗಿದೆ.

ಇಲ್ಲಿಗೆ ಹದಿನಾಲ್ಕನೆಯ ಅಧ್ಯಾಯವು ಮುಗಿಯಿತು.

## ಅರ್ಪಣೆ

ಈ ಗ್ರಂಥವು ಮುಗಿಯಿತು.

ಶ್ರೀ ವಾದಿರಾಜ ಗುರ್ವಂತರ್ಗತ ಶ್ರೀಮದ್ಧನುಮದ್ಭೀಮಮಧ್ವಾಂತರ್ಗತ ರಾಮಕೃಷ್ಣ ವೇದವ್ಯಾಸಾತ್ಮಕ ಶ್ರೀ ಗುರುರಾಜ ಪ್ರತಿಷ್ಠಿತ ಶ್ರೀ ತ್ರಿವಿಕ್ರಮಾಭಿನ್ನ ಶ್ರೀಲಕ್ಷ್ಮೀಹಯವದನಾತ್ಮಕ ಮಾಸನಿಯಾಮಕ ಶ್ರೀಧರಾತ್ಮಕ ಕೃಷ್ಣಾಷ್ಟಮೀ ಏಕಾದಶೀ ನಾಥ ಶ್ರೀ ಗೋವಿಂದಾತ್ಮಕ ಪದ್ಮಾಸಹಿತ ಶ್ರೀ ವೇದವ್ಯಾಸಃ ಪ್ರೀಯತಾಂ ॥ ಶ್ರೀ ಕೃಷ್ಣಾರ್ಪಣಮಸ್ತು ॥

ನಮೋ ನಮೋ ನಮೋ ನಮೋ ಸುಚಾರುಹಾಸ ತೇ ನಮಃ ॥

ಪುನರ್ನಮಾಮಿ ತೇ ವ್ಯಾಸರೂಪಿಣೇ ಸಚ್ಚಿದಾತ್ಮನೇ ॥

॥ ಶ್ರೀರಸ್ತು ॥ ಶ್ರೀಕೃಷ್ಣಾರ್ಪಣಮಸ್ತು ॥

ಹೆಚ್. ಸುಬ್ಬರಾವ್

## ಆಧಾರ ಗ್ರಂಥಗಳ ಪಟ್ಟಿ:

ಇನ್ನು 'ಋಜುತ್ವ ಸಾಧಕ ಗ್ರಂಥಗಳು' ಎಂದು ಪೂರ್ವಪಕ್ಷ ಗ್ರಂಥಕಾರರು ಗ್ರಂಥದ ಕೊನೆಯಲ್ಲಿ ಈ ಪಟ್ಟಿ ಕೊಟ್ಟಿದ್ದಾರೆ:

1. ಪ್ರಾಮಾಣ್ಯ ಪ್ರಬೋಧಿನೀ.
2. ಋಜುತ್ವ ಮಂಡನಂ.
3. ವೃಂದಾವನಾಖ್ಯಾನ ಪ್ರಾಮಾಣ್ಯದರ್ಪಣಂ.
4. ಶ್ರೀಮುಷ್ಣಾಚಾರ್ಯಕೃತ ವೃಂದಾವನಾಖ್ಯಾನ ವ್ಯಾಖ್ಯಾನಂ.
5. ಋಜುತ್ವ ಚಂದ್ರೋದಯ.
6. ವಾದಿರಾಜ ಋಜುತ್ವ ಪ್ರಕಾಶಿಕಾ.

ಆದರೆ ಉದ್ದೇಶಪೂರ್ವಕವಾಗಿ ಗ್ರಂಥಕಾರರು ಕೆಲವು ದೋಷಯುಕ್ತ ಗ್ರಂಥಗಳನ್ನು ಪರಿತ್ಯಾಗ ಮಾಡಿರುತ್ತಾರೆ. ಉದಾಹರಣೆ:

1. ಮಾರ್ತಿಕ ಗರ್ವ ನಿರ್ವಾಪಣ ಮುಂತಾದ ಕೃತಿಗಳು. 1885 ಜನವರಿ
2. ಅಬ್ಜಾರಣ್ಯ ಮಹಾತ್ಮ್ಯೇ 4-5 ನೆಯ ಅಧ್ಯಾಯ ಮುಂತಾದ ಕೃತಕ ಗ್ರಂಥ.

ಅಸಹಿಷ್ಣುಗಳು ಗ್ರಂಥ ಬರೆಯಿಸಿದ್ದಾರೆಂದು ತಿಳಿದೀತೆಂದು ಈ ಅಪ್ರಾಮಾಣಿಕ ಗ್ರಂಥಗಳ ಹೆಸರನ್ನು ಸೂಚಿಸಿಲ್ಲ. ಆದರೆ ಅವುಗಳನ್ನು ಉಪಜೀವಿಸಿಕೊಂಡು ಅವುಗಳ ಸರಣಿಯಲ್ಲಿ ಋಜುತ್ವ ವಿಚಾರ ಬರೆದಿದ್ದಾರೆ.

ಇವರು ಉದ್ದೇಶಪೂರ್ವಕವಾಗಿ ಪರಿತ್ಯಜಿಸಿರುವ ಸಾಧು ಗ್ರಂಥಗಳು ಯಾವುವೆಂದರೆ :

| |
|---|
| 1. ವಾದಿರಾಜಗುರುವರ ಚರಿತಾಮೃತ. |
| 2. ವಿಶ್ವಪ್ರಿಯವಿಲಾಸ - ಸೇತುಮಾಧವಾಚಾರ್ಯಕೃತ, |
| 3. ವಿಶ್ವಪ್ರಿಯ ಲೀಲಾ ವಿಲಾಸ - ಕೊಚ್ಚಿರಂಗಪ್ಪಾಚಾರ್ಯಕೃತ |
| 4. ವೇದವೇದ್ಯರ ಸಂಪ್ರದಾಯದ ಐತಿಹ್ಯ - ಮಠದ ಪರಾಕುಗಳು ಇತ್ಯಾದಿ |
| 5. ವೇದನಿಧಿಗಳು ಮಾಡಿರುವ ಶಿಲಾಶಾಸನ. |
| 6. ಗೌಡಗೆರೆ ವಾಸುದೇವಾಚಾರ್ಯರ ಗುರುಸ್ತವನ. |
| 7. ಜಂಖಂಡಿ ಆಚಾರ್ಯರ ಕೃತಿಗಳು. |
| 8. ವೃಂದಾವನಾಚಾರ್ಯಕೃತ ಪ್ರಕರಣ ವಿಭಾಗಾದಿ ಕೃತಿಗಳು. |
| 9. ವಾದಿರಾಜ ಗುರುವರ ಕೀರ್ತನಮಂಜರೀ - ಮುಖ್ಯವ್ಯಾಸತೀರ್ಥರ ಪದ್ಯ. |
| 10. ಕೊಚ್ಚಿ ರಂಗಪ್ಪಾಚಾರ್ಯಕೃತ ವಾದಿರಾಜ ಗುರ್ವಷ್ಟಕ. |
| 11. ಜಗನ್ನಾಥದಾಸರ 'ವಾದಿರಾಜ' ಕೀರ್ತನೆಗಳು, ಈ ಮೇಲ್ಕಂಡ ಪ್ರಮಾಣ ಗ್ರಂಥಗಳನ್ನು ಖಂಡಿಸುವುದು ಅಸಾಧ್ಯವಾದ್ದರಿಂದ ಅವುಗಳ ಹೆಸರನ್ನೇ ಎತ್ತದೆ ತಮ್ಮ ಗ್ರಂಥ ಬರೆದಿದ್ದಾರೆ. |
| 12. ವಾದಿರಾಜ ಗುಣರತ್ನಮಾಲಾ ಎಂಬ ಗ್ರಂಥವನ್ನು ನಿರ್ದೇಶನ ಮಾಡಿ ಸ್ಥಾಲೀಪುಲಾಕ ನ್ಯಾಯ ಬಳಸಿ ಅದರಲ್ಲಿ ಒಂದು ವಿಷಯ ತಪ್ಪೆಂದು ಸಾಧಿಸಲು ಯತ್ನಿಸಿ ಎಲ್ಲವೂ ತಪ್ಪೆಂದು ತೀರ್ಮಾನಿಸಿದ್ದಾರೆ. ಆ ನ್ಯಾಯವನ್ನು ಗ್ರಂಥ ವಿಮರ್ಶೆಯಲ್ಲಿ ಉಪಯೋಗಿಸಬಾರದು. ಆ ಗ್ರಂಥವೂ ಇವರ ಖಂಡನೆಗೆ ಅಸಾಧ್ಯವೇ. ನಮ್ಮ ಗ್ರಂಥದಲ್ಲಿ ಮೇಲ್ಕಂಡ ಎಲ್ಲಾ ಇಪ್ಪತ್ತು ಗ್ರಂಥಗಳಿಗೂ ನಮೂದನೆ ಇದೆ. |
| **ಉಪಯುಕ್ತ ಇತರ ಗ್ರಂಥಗಳು:** |
| 21. ಬ್ರಹ್ಮಸೂತ್ರ ಭಾಷ್ಯ (ಮಾಧ್ವ) : ಬ್ರ.ಸೂ.ಭಾ. |
| 22. ಗೀತಾ ಭಾಷ್ಯ (ಮಾಧ್ವ) : ಗೀ.ಭಾ. |
| 23. ಅನುವ್ಯಾಖ್ಯಾನ: ಅನು. |
| 24. ಮಹಾಭಾರತ ತಾತ್ಪರ್ಯನಿರ್ಣಯ': ಮ.ತಾ.ನಿ. |
| 25. ತಾತ್ಪರ್ಯ ನಿರ್ಣಯ ಭಾವಪ್ರಕಾಶಿಕೆ - ವಾದಿರಾಜಕೃತ : ಭಾ.ಪ್ರ. |
| 26. ಬೃಹದಾರಣ್ಯಕ ಉಪನಿಷದ್ಭಾಷ್ಯ : ಬೃ.ಭಾ. |
| 27. `ಛಾಂದೋಗ್ಯ ಉಪನಿಷದ್ಭಾಷ್ಯ : ಛಾಂ.ಭಾ. |
| 28. ಶ್ರೀ ಕೃಷ್ಣಾಮೃತ ಮಹರ್ಣವ: ಕೃ.ಮ. |
| 29. ಶ್ರೀಮನ್ನ್ಯಾಯಸುಧಾ: ನ್ಯಾ.ಸು. |
| 30. ಶ್ರೀಮದ್ಭಾಗವತ ತಾತ್ಪರ್ಯ ರ್ಣಯ : ಭಾಗ.ತಾ. |

31. ಭಾಗವತಸಾರೋದ್ಧಾರ.

32. ಹರಿಭಕ್ತವಿಜಯ ನವಮಪುಷ್ಪಭಾಗ । : ಹ.ಭ.ವಿ. ।

33. ತತ್ವಪ್ರಕಾಶಿಕಾ : ತ.ಪ್ರ.

34, ತಂತ್ರಸಾರ.

35. ಸ್ವಾಪ್ನವೃಂದಾವನಾಖ್ಯಾನ : ಸ್ವಾ.ವೃಂ.ಆ.

36. ಕಥಾಲಕ್ಷಣಸಟೀಕಾ

37. ತತ್ವಪ್ರದೀಪಿಕಾ : ತ.ದೀ.

38. ವಿಷ್ಣುತತ್ವವಿನಿರ್ಣಯಟೀಕಾ: ವಿ.ತ.ನಿ.

39. ತತ್ವನಿರ್ಣಯಮೂಲ: ತ.ನಿ.

40. ಸಾನ್ಯಾಯರತ್ನಾವಳೀ.

41. ಪ್ರಮಾಣಪದ್ಧತಿ,

42. ತೈತ್ತರೀಯ ಉಪನಿಷದ್ಭಾಷ್ಯ.

43. ಸ್ತೋತ್ರ ಮಹೋದಧಿಯಲ್ಲಿರುವ ವೃತ್ತರತ್ನ ಸಂಗ್ರಹ: ವೃ.ರ.

44. ಶ್ರೀ ವೇದವೇದ್ಯಕೃತ ತಂತ್ರಸಾರ ಟೀಕಾ

45. ತತ್ವೋದ್ಯೋತ (ಸಟಿಕಾ).

46. ಕರ್ಮನಿರ್ಣಯ (ಸಟೀಕಾ).

47. ವಾದಿರಾಜ ಗುರುವರ ಚರಿತ್ರೆ - ಶ್ರೀನಿವಾಸಭಟ್ಟ ವಿರಚಿತ 1940. ಉಡುಪಿ,

48. ಶ್ರೀಹರಿಭಜನ ಪದ್ಧತಿ.

49. ವಿಜಯದಾಸರ ಸುಳಾದಿಗಳು - ಉಡುಪಿ Edition Part II.

50. ಕರ್ಣಾಟಕ ಭಕ್ತವಿಜಯ-ಬೇಲೂರು ಕೇಶವದಾಸ ವಿರಚಿತ

51. ದಾಸರಪದ ಸಂಗ್ರಹಭಾಗ II ಪುಟ 113. ಶ್ರೀಮನ್ಮಧ್ವ ಸಿದ್ಧಾಂತ ಗ್ರಂ. ಉಡುಪಿ,

52. ಜಂಖಂಡಿ ವಾದಿರಾಜಾಚಾರ್ಯರ ಸಂಸ್ಕೃತ ಕೃತಿಗಳು : ಋಜುತ್ವ ವಿರೋಧಿ ಕಪೋಲ ಚಪೇಟಿಕಾ.

53. ಜಂಖಂಡಿ ಆಚಾರ್ಯರ ಇಂಗ್ಲಿಷ್ ಕೃತಿ (Printed in 1911) :

54. ಮಾಧ್ವವಾಙ್ಮಯ ತಪಸ್ವಿಗಳು.

55. Annual ReportS of South Indian Epigraphy 1952-Page 232 ध्वजस्थम्भ Pillar waS Set up by Sri Vedanidhi Tirtharu in 1572 Salivahana Saka 1640 A.D.quoted on Page 80; 108.

56. ಪರಿಮಳ

| |
|---|
| 57, ಅಣುವೃಂದಾವನಾಖ್ಯಾನ ಶಿಲಾಶಾಸನ - 1640. |
| 58. ಸಂವೃತ್ತಿಕಾರಿ ಮತ್ತು ಗಜಾಂಕುಶ Printed in 1885. |
| 59. ಸರಸಭಾರತೀವಿಲಾಸ, |
| 60. A HiStory of Dwaita School of Vendanta and itS Literature by Dr. B. N. K. SharmaVol II P. 211. |
| 61. ಸುಮಧ್ವವಿಜಯ ಮೂಲ. |
| 62. ಮಧ್ವವಿಜಯ ಭಾವಪ್ರಕಾಶಿಕಾ. |
| 63. ಸುಮಧ್ವವಿಜಯ - ವಿಶ್ವಪತಿ ವ್ಯಾಖ್ಯಾನ |
| 64. ಸುಮಧ್ವವಿಜಯ ಛಲಾರೀಯ ವ್ಯಾಖ್ಯಾನ. |
| 65. ಸತ್ತತ್ವರತ್ನಮಾಲಾ |
| 66. ಶ್ರೀ ಸತ್ಯ ವೀರರ ಋಜುತ್ವ ವಿರೋಧಿ ಪತ್ರಿಕೆ (1888 Nov.) |
| 67. ಸುಂವೃತಿಕಾರಿ ಗರ್ವನಿರ್ವಾಹಣ. (1886) |
| 68. ಮಧ್ವಕಥೋಜ್ಜೀವನ. 1886. |
| 69. ವಾದಿರಾಜ ಋಜುತ್ವ ವಿಚಾರ - 1969 ಕೃಷ್ಣ ಜಯಂತಿ, |
| 70. ಶ್ರೀಮದ್ಭಾಗವತಂ. |
| 71. ಸುಧಾಕರ 'ಗುರುಗುಣ ರತ್ನಾವಳೀ - ಜಂಖಂಡಿ ಆಚಾರ್ಯರ ಚರಿತ್ರೆ |
| 72. ಗಣೇಶವ್ರತ ಕಥಾ- (ಕುಂಭಕೋಣಂ ). |
| 73. ಹರಿವಂಶ. |
| 74. ಮಹಾಭಾರತ. |
| 75. ವಾಲ್ಮೀಕಿ ರಾಮಾಯಣ. |
| 76. ಬ್ರಹ್ಮಸೂತ್ರ ಭಾಷ್ಯ (ಕನ್ನಡ) Udipi Edn. |
| 77 ಪ್ರಕಾಶಸಂಹಿತಾ. |
| 78. ಅದ್ವೈತ ಭಾಷ್ಯ (ಬ್ರಹ್ಮಸೂತ್ರ) ಭಾಮತೀ. |
| 79. ಪ್ರಮಾಣಲಕ್ಷಣ. |
| 80. ತತ್ವಸಾರ, |
| 81. ಪಟ್ಪ್ರಶ್ನೋಪನಿಷತ್. |
| 82. ಭವಿಷ್ಯೋತ್ತರ ಪುರಾಣ ವೆಂಕಟೇಶ ಮಾಹಾತ್ಮ್ಯ. |
| 83. ಲಕ್ಷಾಲಂಕಾರ. |

| |
|---|
| 84. ಶ್ರೀಮದಾಖ್ಯಾನಾರ್ಥ ಪ್ರದರ್ಶಿಕ ಪ್ರಸಿದ್ಧ ಪತ್ರಿಕಾ, |
| 85. ಋಗ್ಭಾಷ್ಯ, |
| 86. ಯುಕ್ತಿಮಲ್ಲಿಕಾ. |
| 87. ದ್ವಾದಶಸ್ತೋತ್ರ. |
| 88. ಪಾದ್ಮ ಉತ್ತರ ಖಂಡ - (ಗೀತಾಮಾಹಾತ್ಮ್ಯ). |
| 89. ಸ್ವಾಪ್ನ ವೃಂದಾವನಾಖ್ಯಾನ - ಕನ್ನಡ ತಾತ್ಪರ್ಯ ಸಹಿತ - ಭಾಗ 1 |
| 90. ಶ್ರೀ ವಾದಿರಾಜ ಗುರುಗಳ ಭೂಗೋಳ ವರ್ಣನೆ |
| 91. ಶ್ರೀ ವಾದಿರಾಜ ಗುರುಗಳ ಏಕಾದಶೀ ನಿರ್ಣಯ. |
| 92, ಶ್ರೀವಾದಿರಾಜ ಗುರುಗಳ ತೀರ್ಥ ಪ್ರಬಂಧ. |
| 93. ಉಡುಪಿ ಮಾಹಾತ್ಮ್ಯ ನಾರಾಯಣತಂತ್ರಿಗಳು ರಚಿಸಿದ್ದು 1965. |
| 94. An Appeal-1969-By CitizenS of Bangalore. |
| 95. ಗುರುರಾಜರ ಮಾಹಾತ್ಮ್ಯಗಳು (A MS, work unprinted). |
| 96. ವಾಮನ ಪುರಾಣ. |
| 97. ಹರಿಕಥಾಮೃತಸಾರ. |
| 98. ಪ್ರಮೇಯ ಮುಕ್ತಾವಳಿ. |
| 99. ತತ್ವಪ್ರಕಾಶಿಕಾ ಗುರ್ವರ್ಥದೀಪಿಕಾ. ತ.ಪ್ರ.ಗು.ದೀ. |
| 100. ಸ್ಕಾಂದ ಪುರಾಣ, |
| 101. ವಾದಿರಾಜ ಋಜುತ್ವ ಸಾಧನೆ. (ಹಸ್ತಲಿಖಿತ ಪ್ರತಿ). |
| 102. ಬ್ರಹ್ಮವೈವರ್ತ |
| 103. ಉಡುಪಿ ಮಾಹಾತ್ಮ್ಯ (Printed) ಸಹ್ಯಾದ್ರಿಖಂಡ. |
| 104. ದೇವಪೂಜಾ ಪದ್ಧತಿ. |
| 105. ಸುಧಾ ಗುರ್ವರ್ಥ ದೀಪಿಕಾ, (ಸುಧಾ.ಗು.ದೀ.) |
| 106. ನಯಚಂದ್ರಿಕೆ . |
| 107. ರುಕ್ಮಿಣೀಶ ವಿಜಯ. |
| 108. ಶ್ರೀಮದ್ರತ್ನಾಕರತೀರ್ಥರ ವ್ಯಾಖ್ಯಾನ. |
| 109. ಮಂತ್ರಮಹೋದಧಿ, |
| 110. ಚಾತುರ್ಮಾಸ್ಯ ಕಲ್ಪ- ವರಾಹ ಪುರಾಣಾಂತರ್ಗತ. |

| |
|---|
| 111. 1970 November ತತ್ವವಾದ, ಜನವರಿ 1970 ಪರ್ಯಾಯ ವಿಶೇಷ ಸಂಚಿಕೆ. |
| 112. A Critique of Madhwa critiCiSm of Shankaraite PhiloSophy by Dr. Narain, M.A.,Ph.D. |
| 113. ಕೃಷ್ಣಾಷ್ಟಮೀ ವ್ರತ ಕಥಾ. |
| 114. ಭಗವದ್ಗೀತಾ |
| 115. ನಾರದ ಪುರಾಣ, |
| 116. ವಿಷ್ಣು ರಹಸ್ಯ. |
| 117. ಸ್ವಾಪ್ನವೃಂದಾವನಾಖ್ಯಾನ - ಕನ್ನಡ ತಾತ್ಪರ್ಯ ಸಹಿತ-ಭಾಗ 2 ಗುರುಗೋವಿಂದ ವಿಠಲ ದಾಸರಿಂದ ರಚಿತ. |
| 118. ಶ್ರೀರಾಘವೇಂದ್ರ ವಿಜಯ (MadraS Edn.) |
| 119. ಧರ್ಮಸಿಂಧು ನಿರ್ಣಯಸಿಂಧು ವ್ಯಾಖ್ಯಾನಾದಿ ಅದ್ವೈತಿಗಳ ಗ್ರಂಥಗಳು, ಅವನ್ನೊಳಗೊಂಡ ಪತ್ರಿಕೆಗಳು ಸಹ. |
| 120. ವರಲಕ್ಷ್ಮಿ ವ್ರತ ಕಥಾ. |
| 121. (ಅವತಾರಿಕೆಯಲ್ಲಿ ವಿಮರ್ಶಿಸಿರುವ) ಋಜುತ್ವ ಪ್ರಮಾಣ ಸಂಗ್ರಹ |
| 122. (ಅವತಾರಿಕೆಯಲ್ಲಿ ವಿಮರ್ಶಿಸಿರುವ) ಶ್ರೀಮದ್ವೃಂದವನಾಖ್ಯಾನ ಪ್ರಾಮಾಣ್ಯ ಸುದರ್ಪಣ, |
| 123. (ಅವತಾರಿಕೆಯಲ್ಲಿ ವಿಮರ್ಶಿಸಿರುವ) ಋಜುತ್ವ ಸುದರ್ಪಣ. |
| 124. (ಅವತಾರಿಕೆಯಲ್ಲಿ ವಿಮರ್ಶಿಸಿರುವ) ಸಮ ಪೂಜಾವಿಕಲ್ಪ ಪಂಚಕ ಖಂಡನ ದೂಷಣಂ |
| 125. (ಅವತಾರಿಕೆಯಲ್ಲಿ ವಿಮರ್ಶಿಸಿರುವ) ಸಮ ಪೂಜಾವಿಕಲ್ಪ ಪಂಚಕ ಖಂಡನೆ. |
| 126. (ಅವತಾರಿಕೆಯಲ್ಲಿ ವಿಮರ್ಶಿಸಿರುವ) ಸಮ ಪೂಜಾವಿಕಲ್ಪ ಪಂಚಕ ಖಂಡನ ಖಂಡನಂ, |
| 127 (ಅವತಾರಿಕೆಯಲ್ಲಿ ವಿಮರ್ಶಿಸಿರುವ) ವಾದಿರಾಜ ಋಜುತ್ವ ಮಲ್ಲಿಕಾ. |
| 128. ಕೀರ್ತನ ಮಂಜರೀ - ಶ್ರೀ ವಿಶ್ವೇಂದ್ರತೀರ್ಥ ಶ್ರೀಪಾದ ವಿರಚಿತ |